UNIVERSAL LIBRARY
OU_202197
UNIVERSAL LIBRARY

**OSMANIA UNIVERSITY LIBRARY**

Call No. K 294.2 Accession No.

Author R 11V

Title [illegible]

This book should be returned on or before the date last marked below.

ಕನ್ನಡ

# ಉಪನಿಷತ್ಪ್ರಕಾಶ

(ಉಪನಿಷತ್ತುಗಳ ಕನ್ನಡ ಅನುವಾದ)

ಈಶ, ಕೇನ, ಕಠ, ಮಾಂಡೂಕ್ಯ, ಪ್ರಶ್ನ, ಮುಂಡಕ,
ಐತರೇಯ, ತೈತ್ತಿರೀಯ ಉಪನಿಷತ್ತುಗಳ ಸರಳ
ಕನ್ನಡ ಭಾಷಾಂತರ

卐

ಅನುವಾದಕ :
ರಂಗನಾಥ ರಾಮಚಂದ್ರ ದಿವಾಕರ

( ಆವೃತ್ತಿ ೪ )

೧೯೪೫

ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ

# ಅರ್ಪಣ

ಯತ್ಕರೋಮಿ ಯದಶ್ನಾಮಿ ಯಜ್ಜುಹೋಮಿ ದದಾಮಿ ಯತ್ ।
ಯತ್ತಪಸ್ಯಾಮಿ ದೇವೇಶ ತತ್ಕರೋಮಿ ತ್ವದರ್ಪಣಮ್ ॥

—ಶ್ರೀಕೃಷ್ಣದಾಸ


ಪ್ರಕಾಶಕರು :
ಶ್ರೀ. ಬೋಧರಾವ ರಾ. ದಿವಾಕರ,
ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ.

ಮುದ್ರಕರು :
ಶ್ರೀ. ಹಣಮಂತ ರಾ. ಮೋಹರೆ,
ಸಂಯುಕ್ತ ಕರ್ನಾಟಕ ಪ್ರೆಸ್, ಹುಬ್ಬಳ್ಳಿ.

# ಮುನ್ನುಡಿ

ಮೊಟ್ಟಮೊದಲು ಉಪನಿಷತ್‌ಪ್ರಕಾಶ ಭಾಗ ಒಂದು ಮತ್ತು ಎರಡು ಎಂದು ಈಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಐತರೇಯ, ಪ್ರಶ್ನ ಮತ್ತು ತೈತ್ತಿರೀಯ ಈ ಎಂಟು ಉಪನಿಷತ್ತುಗಳ ಕನ್ನಡ ಅನುವಾದವನ್ನು ೧೯೩೫ ರಲ್ಲಿ ಗ್ರಂಥಕರ್ತರು ಪ್ರತ್ಯೇಕವಾಗಿ ಪ್ರಕಟಗೊಳಿಸಿದರು. ಈಗ ಒಂದನೆ ಭಾಗದ ೪ ನೆ ಆವೃತ್ತಿ ಎರಡನೆ ಭಾಗದ ೩ ನೆ ಆವೃತ್ತಿ ಇವೆರಡೂ ಕೂಡಿ ಒಂದೇ ಪುಸ್ತಕವಾಗಿ ಪ್ರಕಟವಾಗುತ್ತಲಿದೆ. ಇದು ವಾಚಕರಿಗೆ ಅನುಕೂಲವಾಗುವದೆಂದು ಆಶಿಸಲಾಗಿದೆ.

ಉಪನಿಷತ್ತುಗಳ ಮಹತ್ವವನ್ನು ಇಲ್ಲವೆ ಉಪನಿಷತ್ ಪ್ರಕಾಶದ ಲೋಕಪ್ರಿಯತೆಯನ್ನು ಇಲ್ಲಿ ಹೇಳುತ್ತ ಕೂಡುವ ಕಾರಣವಿಲ್ಲ. ಉಪನಿಷತ್ತುಗಳು ಆರ್ಯರ ಅತ್ಯಂತ ಪ್ರಾಚೀನ ಕೃತಿಗಳು. ಆದರೂ ಅವುಗಳಲ್ಲಿ ಒಂದು ಬಗೆಯ ನಾವಿನ್ಯ, ಪ್ರತಿಭೆ ಇದೆ. ಅವುಗಳಲ್ಲಿ ಪ್ರತಿಪಾದಿತವಾದ ವಿಷಯಗಳಿಗೆ ಮುಪ್ಪೆಂಬುದು ಇಲ್ಲ. ತಂಪು ಸುಳಿಗಾಳಿ, ಸ್ವಚ್ಛ ನೀರಿನ ಝುರಿ, ಪಾರಿಜಾತ ಪರಿಮಳ ಇವುಗಳಲ್ಲಿ ಇದ್ದ ಮನೋಹರತೆ, ಹೊಸತನ, ಉತ್ಸಾಹ ಉಪನಿಷತ್ ಮಂತ್ರಗಳಲ್ಲಿ ಕಂಡುಬರುವದು. ಆದುದರಿಂದ ವಿಚಾರವಂತರಿಗೆ ಅವು ಯಾವಾಗಲೂ ಹೊಸ ಹುರುಪನ್ನು ಕೊಡದೆ ಇರಲಾರವು.

ಈ ಎಂಟು ಉಪನಿಷತ್ತುಗಳ ಕನ್ನಡ ಅನುವಾದವಾದ ಉಪನಿಷತ್ ಪ್ರಕಾಶವು ನಾಲ್ಕನೆಯ ಆವೃತ್ತಿಯನ್ನು ಕಂಡಿದೆ ಎಂದಬಳಿಕ ಅದರ ಲೋಕಪ್ರಿಯತೆಯು ಸ್ಪಷ್ಟವಿದೆ. ಈ ಆವೃತ್ತಿಯು ಕೂಡ ಮೊದಲಿನಂತೆ ಎಲ್ಲರಿಗೂ ಉಪಯುಕ್ತವೂ ಪ್ರಿಯವೂ ಆಗುವದೆಂದು ನಂಬಿದ್ದೇವೆ.

ಈ ಮುನ್ನುಡಿಯೊಡನೆ ಈ ಮೊದಲಿನ ಸಂಸ್ಕರಣದೊಂದಿಗೆ ಪ್ರಕಟವಾದ ಮುನ್ನುಡಿ ಮುಂತಾದವುಗಳನ್ನು ಕೊಟ್ಟಿದೆ. ಹೀಗೆ ಮಾಡುವ ರೂಢಿಯುಂಟು. ಪುಸ್ತಕದ ಇತಿಹಾಸದ ದೃಷ್ಟಿಯಿಂದ ಅವುಗಳಿಗೆ ಮಹತ್ವವಿದೆ. ಇಷ್ಟೆ.

ಇದೇ ಗ್ರಂಥಕರ್ತರ ಬೃಹದಾರಣ್ಯಕ ಛಾಂದೋಗ್ಯ ಉಪನಿಷತ್ತುಗಳು ಸಿದ್ಧವಿರುವವು. ಅವುಗಳ ಪ್ರಕಟನೆ ಮಾಡುವ ಪ್ರಯತ್ನವು ಬೇಗನೆ ಮಾಡಲಾಗುವದು. ಅವು ಕೂಡ ಇವುಗಳಷ್ಟೆ ಪ್ರಿಯವಾಗಬಹುದೆಂಬ ಆಶೆ ಇದೆ.

ವೈಶಾಖ ೧೮೬೬

—ಪ್ರಕಾಶಕರು

# ಓದುಗರಿಗೆ

ಯಾವ ಜಾತಿಯವನೇ ಇರಲಿ, ಪಂಥದವನೇ ಇರಲಿ, ಸ್ತ್ರೀ ಇರಲಿ, ಪುರುಷನಿರಲಿ, ಪ್ರತಿಯೊಬ್ಬ ಕರ್ನಾಟಕಸ್ಥನು ಮುಮುಕ್ಷುವು, ಅಂದರೆ ಇದೆಲ್ಲ ಸೃಷ್ಟಿಯು ಪರಮಾತ್ಮನ ಲೀಲೆ ಎಂಬ ಸತ್ಯವನ್ನರಿತುಕೊಂಡು ದುಃಖರಹಿತವಾಗಿ ಪರಮಾತ್ಮನ ಪ್ರೇರಣೆಯಿಂದ 'ಮುಕ್ತ ಕರ್ಮ' ಮಾಡುವ ಇಚ್ಛೆಯುಳ್ಳವನೆಂದು ತಿಳಿದು ಈ ಉಪನಿಷತ್ ಪ್ರಕಾಶದ ೧ ನೇ ಭಾಗವನ್ನು ಪ್ರಕಟಿಸಿದ್ದಾಯ್ತು. ಈಗ ೨ ನೇ ಭಾಗದ ಪುನರ್ಮುದ್ರಣವನ್ನು ಪ್ರಕಟಿಸುತ್ತಲಿದ್ದೇನೆ. ಇನ್ನು ಮುಖ್ಯ ಉಪನಿಷತ್ತುಗಳಲ್ಲಿ ಛಾಂದೋಗ್ಯ ಹಾಗೂ ಬೃಹದಾರಣ್ಯಕವೆಂಬ ಎರಡು ದೊಡ್ಡ ಉಪನಿಷತ್ತುಗಳು ಉಳಿದವು. ಅವುಗಳನ್ನು ಕನ್ನಡಿಸುವ ಕೆಲಸವು ಅರ್ಧಮರ್ಧವಾಗಿದೆ. ಆದರೆ ಅವುಗಳು ಒಂದೊಂದು ಈ ಆಕಾರದ ೧೬೦ ಪುಟ ತುಂಬುವಷ್ಟು ದೊಡ್ಡವಿರುವವು. ಆದುದರಿಂದ ಸದ್ಯಕ್ಕೆ ಆ ಕೆಲಸವನ್ನು ಕೈಕೊಂಡಿಲ್ಲ. ಈಗ ೮ ಉಪನಿಷತ್ತುಗಳನ್ನು ಪ್ರಕಟಿಸಿರುವೆನು. ಅವುಗಳಿಗೊಂದು ವಿಸ್ತೃತ ಪ್ರಸ್ತಾವನೆಯನ್ನಾದರೂ ೨ ನೇ ಭಾಗದಲ್ಲಿ ಜೋಡಿಸಿರುವೆನು. ಈ ಅಮೂಲ್ಯವಾದ ನರಜನ್ಮವನ್ನು ಅಜ್ಞಾನದಲ್ಲಿ ಕಳೆಯದೆ ಎಲ್ಲ ಜಿಜ್ಞಾಸುಗಳೂ ತಮ್ಮ ತಮ್ಮ ಪರಿಯಿಂದ ಈ ಜ್ಞಾನಮಾರ್ಗವನ್ನರಿತುಕೊಂಡು ಪರಮಾತ್ಮನ ಲೀಲಾವಿಹಾರದಲ್ಲಿ ಅಲಿಪ್ತವಿದ್ದು ಅವನು ಪ್ರೇರಿಸಿದ ತೇಜಸ್ವಿಯಾದ ಕರ್ಮಗಳನ್ನು ಮಾಡುತ್ತ ಆನಂದಭಾಗಿಗಳಾಗಬೇಕೆಂದು ಕರ್ನಾಟಕಸ್ಥರಿಗೆ ನನ್ನ ನಮ್ರವಾದ ಬಿನ್ನಹವು. ಓಂ ಶಾಂತಿ.

ಪೌಷ ಶುದ್ಧ ೧೫

—ಗ್ರಂಥಕರ್ತ

# ದ್ವಿತೀಯ ಸಂಸ್ಕರಣದ

# ಮುನ್ನುಡಿ

**ಉಪನಿಷತ್ಪ್ರಕಾಶದ** ೧ನೇ ಭಾಗದ ದ್ವಿತೀಯ ಸಂಸ್ಕರಣವನ್ನು ಹೊರಡಿಸಿ ೨-೩ ತಿಂಗಳುಗಳಾಗುವಷ್ಟರಲ್ಲಿಯೆ ೨ನೇ ಭಾಗದ ದ್ವಿತೀಯ ಸಂಸ್ಕರಣವನ್ನು ಪ್ರಕಟಿಸುವ ಪ್ರಸಂಗವು ಬಂದಿರುವುದು ಒಳ್ಳೇ ಶುಭ ಚಿನ್ಹವೆ. ವೇದಾಂತಗ್ರಂಥಗಳು ಪ್ರಕಟವಾದ ವರ್ಷಾರುತಿಂಗಳುಗಳಲ್ಲಿಯೆ ದ್ವಿತೀಯ ಸಂಸ್ಕರಣವನ್ನು ಹೊಂದುವದು ಕನ್ನಡ ಗ್ರಂಥಪ್ರಕಾಶನದ ಇತಿಹಾಸದಲ್ಲಿ ವಿರಲವೆಂದೆ ಹೇಳಬಹುದು. ಈ ಉಪನಿಷತ್ಪ್ರಕಾಶಗಳ ವಿಷಯದಲ್ಲಿ ಅಂಥ ಪ್ರಸಂಗವು ಬಂದುದು ಅವುಗಳ ಲೋಕಪ್ರಿಯತೆಯನ್ನೂ ಕನ್ನಡಿಗರ ಅಭಿರುಚಿಯನ್ನೂ ನನ್ನ ಮೇಲಿನ ಅವರ ಪ್ರೇಮ ವಿಶ್ವಾಸಗಳನ್ನೂ ವ್ಯಕ್ತಮಾಡುತ್ತದೆ. ದ್ವಿತೀಯ ಸಂಸ್ಕರಣದಲ್ಲಿ ನಾನು ಕೆಲವು ಮಾರ್ಪಾಟುಗಳನ್ನು ಮಾಡಿ ಅರ್ಥವನ್ನು ಹೆಚ್ಚು ಸ್ಪಷ್ಟಮಾಡಲಿಕ್ಕೆ ಯತ್ನಿಸಿದ್ದೇನೆ. ಅವಕಾಶ ದೊರೆತಿದ್ದರೆ ಇನ್ನೂ ಕೆಲವು ಮಾರ್ಪಾಟುಗಳನ್ನು ಮಾಡಬಹುದಾಗಿತ್ತು. ಆದರೆ ಅವಶ್ಯವಾದ ರಾಜಕೀಯ ಮತ್ತು ಬೇರೆ ಚಳವಳಿಗಳಲ್ಲಿ ತೊಡಗಿದ್ದರಿಂದ ನನ್ನ ಮನಸಿನ ಸಂಪೂರ್ಣ ತೃಪ್ತಿಯಾಗುವಂತೆ ಈ ಆವೃತ್ತಿಯನ್ನು ಸುಧಾರಿಸುವದಾಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳಬೇಕಾಗಿದೆ. ಇದನ್ನು ವಾಚಕರು ಕ್ಷಮಿಸಬಹುದೆಂದು ಆಶೆ.

**ಉಪನಿಷತ್ಪ್ರಕಾಶದ** ೧ನೇ ೨ನೇ ಭಾಗಗಳನ್ನೂ **ಗೀತೆಯ ಗುಟ್ಟನ್ನೂ** ಪ್ರಕಟಿಸಿದ ಮೇಲೆ ಪ್ರೊ. ರಾನಡೇಯವರ ಅದ್ವಿತೀಯ ಇಂಗ್ಲೀಷ ಗ್ರಂಥವನ್ನು '**ಉಪನಿಷದ್ರಹಸ್ಯ**' ವೆಂಬದಾಗಿ ಕನ್ನಡದಲ್ಲಿ ಪ್ರಕಟಿಸುವಾಗ '**ಅಧ್ಯಾತ್ಮ ಕಾರ್ಯಾಲಯ**' ವೆಂಬ ಹೆಸರನ್ನಿಟ್ಟು ಇನ್ನೂ ಅನೇಕ ಅಧ್ಯಾತ್ಮಗ್ರಂಥಗಳನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂದು ಮನಸಿನಲ್ಲಿ ಹೊಳೆಯಿತು. ಆ ಪ್ರಕಾರ ಈಗ ಈ ದ್ವಿತೀಯ ಸಂಸ್ಕರಣವನ್ನು ಆ ಅಧ್ಯಾತ್ಮ ಕಾರ್ಯಾಲಯದಿಂದಲೇ ಪ್ರಕಟಿಸುತ್ತಿರುವೆನು. ಇನ್ನೂ ಛಾಂದೋಗ್ಯ, ಬೃಹದಾರಣ್ಯಕ, ಕೌಷೀತಕಿ, ಶ್ವೇತಾಶ್ವತರ, ಮೈತ್ರಿ, ಮುಂತಾದ ಉಪನಿಷತ್ತುಗಳನ್ನೂ ಬೇರೆ ಬೇರೆ ಅಧ್ಯಾತ್ಮ ಗ್ರಂಥಗಳನ್ನೂ

ಯೋಗಗ್ರಂಥಗಳನ್ನೂ ಪ್ರಕಟಿಸಿ ಕನ್ನಡಿಗರ ಸೇವೆ ಮಾಡಬೇಕೆಂದು ಮನಸಿನಲ್ಲಿದೆ. ಆದರೆ ಅದಕ್ಕೆ ಕಾಲಾವಧಿ ಮತ್ತು ಶಾಂತ ವಾತಾವರಣ ಹಾಗೂ ದ್ರವ್ಯ ಇವು ಅವಶ್ಯ. ಇವುಗಳಿಲ್ಲದೆ ಆ ಕಾರ್ಯವನ್ನು ಮಾಡುವದು ಅಸಾಧ್ಯವು. ಈ ಕಾರ್ಯಾಲಯದಿಂದ ಈಗ ಪ್ರಕಟವಾದ ಮತ್ತು ಮುಂದೆ ಪ್ರಕಟವಾಗುವ ಎಲ್ಲ ಗ್ರಂಥಗಳನ್ನು ಕೊಳ್ಳಲೊಪ್ಪುವ ೭-೮ ನೂರು ಸ್ಥಿರ ಚಂದಾದಾರರಾಗುವವರೆಗೆ ಈ ಗ್ರಂಥಗಳನ್ನು ಅಚ್ಚು ಹಾಕಲಿಕ್ಕೆ ಅವಶ್ಯವಿದ್ದ ದ್ರವ್ಯವು ಕೈಸೇರದು. ಪರಮಾತ್ಮನ ಇಚ್ಛೆ ಇದ್ದರೆ ಅನುಕೂಲ ಕಾಲವೂ ದ್ರವ್ಯ ಸಹಾಯವೂ ಒದಗುವವೆಂದು ನನ್ನ ಭರವಸೆ.

ಅಷ್ಟರಲ್ಲಿಯೆ ಇದುವರೆಗೆ ಸಹಾಯ ಮಾಡಿದ ಮಹನೀಯರಲ್ಲದೆ ಈಗ ನಡೆದ ಕಾರ್ಯಕ್ಕಾಗಿ ಶ್ರೀ. ದತ್ತಾತ್ರೇಯ ನಾಟಕ ಮಂಡಲಿಯ ಉದಾರ ಒಡೆಯರಾದ ಗರುಡ ಸದಾಶಿವರಾಯರು ಯೋಗ್ಯ ಕಾಲಕ್ಕೆ ಮಾಡಿದ ಸಹಾಯವು ಬಹಳೇ ಉಪಯುಕ್ತವಾಯಿತೆಂದು ಇಲ್ಲಿ ಹೇಳದೇ ಇರಲಾರೆನು. ಈ ಆವೃತ್ತಿಯ ಖರಡುಗಳನ್ನು ತಿದ್ದುವದರಲ್ಲಿ ಶ್ರಮಪಟ್ಟು ಸಹಾಯ ಮಾಡಿದ ನನ್ನ ಸಹಕಾರಿಗಳಾದ ಮಿರಜಿಯವರ ಮತ್ತು ಆದಷ್ಟು ಅಂದವಾಗಿ ಅಚ್ಚು ಹಾಕಿಕೊಟ್ಟ ಕರ್ನಾಟಕ ಪ್ರಿಂಟಿಂಗ ವರ್ಕ್ಸಿನ ಒಡೆಯರ ಆಭಾರಗಳನ್ನು ಇಲ್ಲಿ ಮನ್ನಿಸಲೇಬೇಕಾಗಿದೆ.

ಇದುವರೆಗೆ ಆಶ್ರಯ ಕೊಟ್ಟಂತೆ ಇದಕ್ಕಾದರೂ ಆಶ್ರಯ ಕೊಟ್ಟು ಕರ್ನಾಟಕದವರು ಈ ಸೇವೆಯನ್ನು ಸ್ವೀಕರಿಸುವರೆಂದು ನಂಬಿದ,

ಪೌಷ್ಯ ಶುದ್ಧ ೧೮೫೦
ಧಾರವಾಡ

ರಂಗನಾಥ ರಾಮಚಂದ್ರ ದಿವಾಕರ

## ತೃತೀಯ ಸಂಸ್ಕರಣದ

# ಮುನ್ನುಡಿ

ಉಪನಿಷತ್ತುಗಳ ಕನ್ನಡ ಅನುವಾದವೆ ನನ್ನ ಮೊದಲನೆಯ ಕನ್ನಡ ಕೃತಿಯು. ಈಶ, ಕೇನ, ಕಠ, ಮಾಂಡೂಕ್ಯ, ಪ್ರಶ್ನ ಈ ಉಪನಿಷತ್ತುಗಳನ್ನು ಕನ್ನಡಿಸಿ ಅವುಗಳನ್ನು 'ಉಪನಿಷತ್ಪ್ರಕಾಶ' ಎಂಬ ಹೆಸರಿನಿಂದ ೧೯೩೫ರಲ್ಲಿ ಮೊದಲು ಪ್ರಕಟಿಸಿದೆನು. ಮೊದಲನೆ ಆವೃತ್ತಿಯು ಬೇಗನೆ ಮಾರಿ ಹೋಗಿ ೧೯೫೭ರಲ್ಲಿ ಅದರ ಎರಡನೆ ಆವೃತ್ತಿಯು ಅಚ್ಚಾಯಿತು. ಅದಾದರೂ ಈಗ ಮಾರಿಹೋಗಿದೆ. ಆದುದರಿಂದ ಈಗ ಹೊಸ ರೀತಿಯಿಂದ ಅಚ್ಚು ಹಾಕಿಸಿ ಎಲ್ಲಕ್ಕೂ ಮಹತ್ವದ ಉಪನಿಷತ್ತುಗಳ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಡುವ ಉದ್ದೇಶದಿಂದ ಈ ಉಪಕ್ರಮವನ್ನು ಪ್ರಾರಂಭಿಸಿದ್ದೇನೆ.

ನನ್ನ ದೃಷ್ಟಿಯಿಂದ ಈಶಾವಾಸ್ಯವು ಎಲ್ಲಕ್ಕೂ ಮಹತ್ವದ ಉಪನಿಷತ್ತು ಇದೆ. ಮಾಂಡೂಕ್ಯೋಪನಿಷತ್ತು ಎಲ್ಲಕ್ಕೂ ಹೆಚ್ಚಿನದೆಂದು ಹೇಳುವ ರೂಢಿಯುಂಟು. ಕೇವಲ ಆತ್ಮಸ್ವರೂಪದ ವರ್ಣನೆಯ ದೃಷ್ಟಿಯಿಂದ, ನಮ್ಮಲ್ಲಿರುವ ಚೈತನ್ಯದ ಪೃಥಕ್ಕರಣದ ದೃಷ್ಟಿಯಿಂದ, ಅದು ಎಲ್ಲಕ್ಕೂ ಮಹತ್ವದ್ದೆಂದು ನಾನಾದರೂ ಒಪ್ಪುತ್ತೇನೆ. ಆದರೆ ನಮ್ಮ ತತ್ವಜ್ಞಾನ, ಕರ್ಮಾಚರಣೆಯ ಉದ್ದೇಶ, ಭಕ್ತಿಯ ಬೀಜ, ಯೋಗ ಮಾರ್ಗದ ತಿರುಳು ಈ ಎಲ್ಲ ದೃಷ್ಟಿಯಿಂದ ನೋಡಿದರೆ ಈಶಾವಾಸ್ಯೋಪನಿಷತ್ತು ಎಲ್ಲ ಉಪನಿಷತ್ತುಗಳ ಅಗ್ರಸ್ಥಾನದಲ್ಲಿ ಮೆರೆಯಲು ಯೋಗ್ಯವಿರುವದೆಂಬಲ್ಲಿ ಸಂಶಯವಿಲ್ಲ. ಈ ಉಪನಿಷತ್ತಿನ ಅಭ್ಯಾಸವನ್ನು ಹೆಚ್ಚೆಚ್ಚು ಮಾಡುತ್ತಹೋದಂತೆ ಅದರಲ್ಲಿಯ ಗಂಭೀರತರವಾದ ಅರ್ಥವು ಹೆಚ್ಚೆಚ್ಚು ಹೊಳೆಯುತ್ತ ಹೋಗುವದು. ಈ ಕಾರಣಗಳ ಮೂಲಕವೆ ಯೋಗಿಶ್ರೇಷ್ಠರಾದ ಬಾಬು ಅರವಿಂದ ಘೋಷರು ಈ ಉಪನಿಷತ್ತಿಗೆ ಎಲ್ಲಕ್ಕೂ ಹೆಚ್ಚು ಮಹತ್ವ ಕೊಟ್ಟಿದ್ದಾರೆ ಹಾಗೂ ಈ ಉಪನಿಷತ್ತನ್ನು ಕುರಿತು ಪ್ರತ್ಯೇಕವಾದ ವಿಶೇಷ ಟೀಕೆ-ಟಿಪ್ಪಣಿ ಬರೆದಿದ್ದಾರೆ.

ಇನ್ನು ಈಗಿನ ಕಾಲದಲ್ಲಿ ಆ ಹಳೆಯ ವೇದೋಪನಿಷತ್ತುಗಳನ್ನೂ ಪುರಾಣಪುಣ್ಯಕಥೆಗಳನ್ನೂ ಕೊಂಡು ಮಾಡುವದೇನಿದೆ, ಎಂದು ಹಲವರು

ಅನ್ನಬಹುದು. ಮಾರ್ಕ್ಸ, ಲೆನಿನ್, ಹಿಟ್ಲರ, ಗಾಂಧಿ ಇವರ ಕಾಲವಿದು. ಈಗ ಆ ಸಾವಿರಾರು ವರ್ಷಗಳ ಹಿಂದಿನ ಈಶಾವಾಸ್ಯದ ಮಂತ್ರಗಳನ್ನೇನು ಮಾಡಬೇಕು, ಎಂದು ಕೆಲವರು ಕೇಳಬಹುದು. ಒಂದು ರೀತಿಯಿಂದ ಇದು ನಿಜ. ಆದರೆ ವಿಚಾರದ ಮೂಲವೆಲ್ಲಿದೆ, ಎಲ್ಲ ತತ್ತ್ವಜ್ಞಾನಗಳ ಆದಿ ಯಾವುದು, ಎಂಬುದನ್ನು ನೋಡಿ ಎಲ್ಲವನ್ನೂ ಚನ್ನಾಗಿ ತಿಳಿದುಕೊಳ್ಳಲಿಚ್ಛಿಸುವವರು ಹೀಗೆ ಎಂದೂ ಅನ್ನಲಾರರು. ಈಚೆಗೆ ಮಹಾತ್ಮಾ ಗಾಂಧಿಯವರು ಕೂಡ ತಮ್ಮ ಪ್ರಾರ್ಥನೆಯನ್ನು 'ಈಶಾವಾಸ್ಯಮಿದಂ' ಎಂಬ ಈ ಉಪನಿಷತ್ತಿನ ಪ್ರಥಮ ಮಂತ್ರದಿಂದಲೆ ಪ್ರಾರಂಭಿಸುತ್ತಿರುವರು. ಕಾರ್ಲ ಮಾರ್ಕ್ಸನ ಸಾಮ್ಯವಾದವು ಈ ಉಪನಿಷತ್ತಿನಲ್ಲಿಯ 'ತೇನ ತ್ಯಕ್ತೇನ ಭುಂಜೀಥಾಃ' ಎಂಬ ತತ್ತ್ವದಾಚೆಗೆ ಹೋಗಲರಿಯದು. ಬ್ರಹ್ಮಸಮಾಜದ ಮುಖ್ಯ ಪುರಸ್ಕರ್ತರಲ್ಲಿ ಒಬ್ಬರಾದ ಮಹರ್ಷಿ ದೇವೇಂದ್ರನಾಥ ಠಾಕೂರರು ಗಾಳಿಯಿಂದ ಹಾರುತ್ತ ಹೊರಟ ಈಶಾವಾಸ್ಯೋಪನಿಷತ್ತಿನಲ್ಲಿಯ ಒಂದು ಪುಟ ಓದಿ ಹೊಸ ಸ್ಫೂರ್ತಿಯನ್ನು ಹೊಂದಿದರು. ತಾತ್ಪರ್ಯವೇನಂದರೆ ಇದರಲ್ಲಿ ಅಗಾಧವಾದ ಜ್ಞಾನವು ತುಂಬಿತುಳುಕುತ್ತಿದೆ. ಅದನ್ನು ನಾವು ಅರಿತು ಕೊಳ್ಳಲೇಬೇಕು.

ಇದಲ್ಲದೆ ನಾವು ಈ ಕಾಲದಲ್ಲಿ ಏನೇ ಮಾಡಬಯಸಿದರೂ ನಮ್ಮ ಪೂರ್ವಪರಂಪರೆ ನಮ್ಮ ಮೂಲ ವಿಚಾರಧನ ಇವುಗಳನ್ನು ಲಕ್ಷದಲ್ಲಿಟ್ಟು-ಕೊಂಡೇ ಹೆಜ್ಜೆ ಇಡುವದು ಉತ್ತಮ. ಆ ದೃಷ್ಟಿಯಿಂದ ಈ ಚಿಕ್ಕ ಉಪ-ನಿಷತ್ತಿನ ಕಡೆಗೆ ನಾವು ನೋಡಬೇಕಾಗಿದೆ.

ಈ ಆವೃತ್ತಿಯಲ್ಲಿ ನಾನು ಹಲವು ಹೆಚ್ಚುಕಡಿಮೆಗಳನ್ನು ಮಾಡಿರು-ವೆನಲ್ಲದೆ ಹಿನ್ನುಡಿಯಲ್ಲಿ ಹೊಸ ರೀತಿಯಿಂದ ಈ ಉಪನಿಷತ್ತಿನ ಮಹತ್ತ್ವವನ್ನು ತೋರ್ಪಡಿಸಿದ್ದೇನೆ. ವಾಚಕರು ಎಂದಿನಂತೆ ಮನ್ನಿಸಬೇಕೆಂದು ನನ್ನ ನಮ್ರವಾದ ಬಿನ್ನಹ.

ಹುಬ್ಬಳ್ಳಿ
೨೮–೬–೪೯

ರಂ. ರಾ. ದಿವಾಕರ

# ಅನುಕ್ರಮಣಿಕೆ


ಮುನ್ನುಡಿಗಳು

ಓದುಗರಿಗೆರಡು ಮಾತು . . . ಒಂದು – ಇಪ್ಪತ್ತೈದು

ಉಪನಿಷತ್ಪ್ರಕಾಶದ ಪ್ರಸ್ತಾವನೆ . . . . ೧ – ೪೮

೧ ಈಶೋಪನಿಷತ್ತು . . . . . ೧

೨ ಕೇನೋಪನಿಷತ್ತು . . . . . ೨೨

೩ ಕಠೋಪನಿಷತ್ತು . . . . . ೩೫

೪ ಮಾಂಡೂಕ್ಯೋಪನಿಷತ್ತು . . . . . ೭೨

೫ ಪ್ರಶ್ನೋಪನಿಷತ್ತು . . . . . ೮೫

೬ ಮುಂಡಕೋಪನಿಷತ್ತು . . . . . ೧೧೧

೭ ಐತರೇಯೋಪನಿಷತ್ತು . . . . . ೧೩೨

೮ ತೈತ್ತಿರೀಯೋಪನಿಷತ್ತು . . . . . ೧೪೭

# ಓದುಗರಿಗೆರಡು ಮಾತು

ಅನೇಕ ಪೌರ್ವಾತ್ಯ ಪಾಶ್ಚಾತ್ಯ ಪಂಡಿತರು ಈವರೆಗೆ ಉಪನಿಷತ್ತುಗಳನ್ನು ಕುರಿತು ವಿವಿಧ ಗ್ರಂಥಗಳನ್ನು ಬರೆದಿರುವರು. ಅವು ಮಾನವಕಾಲದ ಅತ್ಯಂತ ಪ್ರಾಚೀನ ತತ್ತ್ವಗ್ರಂಥಗಳಾದುದರಿಂದ ಅವುಗಳ ಬಗ್ಗೆ ಚರ್ಚೆ, ವ್ಯಾಖ್ಯೆ, ಟೀಕೆ, ಪ್ರತಿಟೀಕೆ, ವಾದವಿವಾದ ಬೇಕಾದಷ್ಟು ಆಗುತ್ತ ಬಂದಿವೆ. ಶೋಪೆನಹೋರನಂಥ ತತ್ತ್ವಜ್ಞರು, ಡಾಯಸೆನನಂಥ ಟೀಕಾಕಾರರು, ಮ್ಯಾಕಡೊನಲ್ಲನಂಥ ಪಂಡಿತರು, ಪೌರ್ವಾತ್ಯಜ್ಞಾನದ ಅಭ್ಯಾಸಿಗಳಾದ ಮ್ಯಾಕ್ಸ ಮುಲರನಂಥವರು, ಗುಣಗ್ರಹಣಪೂರ್ವಕವಾಗಿ ಈ ಮೊದಲೇ ಸಾಕಷ್ಟು ಬರೆದಿದ್ದಾರೆ. ಈಚೆಗೆ ಹಿಂದುಸ್ಥಾನದಲ್ಲಿ ಪಂಡಿತಮನ್ನಣೆಸಿಸಿದ ಪ್ರೊ. ದಾಸಗುಪ್ತರು, ಪ್ರೊ. ರಾನಡೆಯವರು, ಸರ್ವಪಲ್ಲಿ ರಾಧಾಕೃಷ್ಣನ್ನರು ವಿಶೇಷ ರೀತಿಯಿಂದ ಉಪನಿಷತ್ತುಗಳನ್ನು ಪರಿಶೀಲಿಸಿ ಅವುಗಳಲ್ಲಿಯ ತತ್ತ್ವವಿಚಾರಗಳನ್ನು ಪಾಶ್ಚಾತ್ಯರು ತಿಳಿಕೊಳ್ಳುವ ರೀತಿಯಲ್ಲಿ ವಿಶದಪಡಿಸಿರುವರು. ಆಧುನಿಕ ಋಷಿಗಳೆನಿಸಿದ ಕವೀಂದ್ರ ರವೀಂದ್ರರು, ಮಹರ್ಷಿ ಅರವಿಂದರು, ಮುಂತಾದವರು ಉಪನಿಷತ್ತುಗಳನ್ನು ಪೂರ್ಣ ಅರಗಿಸಿಕೊಂಡವರೆನಿಸುವರು. ಅವರು ಕೂಡ ಪಾಶ್ಚಾತ್ಯರಿಗೆ ಸುಲಭವಾಗಿ ತಿಳಿಯುವ ಪರಿಭಾಷೆಯಲ್ಲಿ ಮತ್ತು ಆಕರ್ಷಕವಾಗಿ ಉಪನಿಷತ್ತುಗಳ ವಿವೇಚನವನ್ನು ಮಾಡಿರುವರು. ಈ ಮೇಲಿನವರು ಬರೆದ ಗ್ರಂಥಗಳೆಲ್ಲ ಆಂಗ್ಲ ಭಾಷೆಯಲ್ಲಿ ಉಪಲಬ್ಧವಿರುವವು. ಇವಲ್ಲದೆ ಶಂಕರ, ರಾಮಾನುಜ, ಮಧ್ವ, ಮುಂತಾದ ಆಚಾರ್ಯರು ಮೂಲಸಂಸ್ಕೃತದಲ್ಲಿ ಬರೆದ ಪಾಂಡಿತ್ಯಪೂರ್ಣ ಟೀಕೆ ಟಿಪ್ಪಣೆಗಳಂತೂ ಇದ್ದೇ ಇವೆ. ಈ ರೀತಿ ಈಹೊತ್ತು ಉಪನಿಷತ್ತುಗಳ ಅಭ್ಯಾಸ ಮಾಡುವ ಇಚ್ಛೆಯುಳ್ಳವರಿಗೆ ವರ್ಷಾನುವರ್ಷ ಸಾಕಾಗುವಷ್ಟು ಉಪನಿಷತ್ ವಾಙ್ಮಯವು ಸಿದ್ಧವಾಗಿರುವದು.

ಆ ಮಹಾಗ್ರಂಥಸಂಗ್ರಹವನ್ನು ಹೆಚ್ಚಿಸುವ ಉದ್ದೇಶವು ನನ್ನದಿಲ್ಲ. ಅಥವಾ ಈ ಚಿಕ್ಕ ಪ್ರಸ್ತಾವನೆಯಲ್ಲಿ ಆ ಪಂಡಿತರ ಗ್ರಂಥಗಳಿಂದ ಎತ್ತಿ ಬರೆಯುವ ಉದ್ದೇಶವೂ ನನ್ನದಿಲ್ಲ. ಅದಕ್ಕೂ ನನ್ನ ಉದ್ದೇಶವು ಬಹಳ ಸಾದಾ

ಇರುವದು. ನನ್ನ ಕೆಲಸವು ಅತಿ ಹಗುರು ಇರುವದು. ಉಪನಿಷತ್ತುಗಳ ಅಭ್ಯಾಸವನ್ನು ಅತ್ಯಂತ ಹಗುರು ಮಾಡಿಬಿಡುವದೆ ನನ್ನ ಪ್ರಯತ್ನವು. ವಾದ-ವಿವಾದಗಳಲ್ಲಿ ರುಚಿಗೊಳ್ಳದ, ಪಕ್ಷೋಪಪಕ್ಷಗಳಲ್ಲಿ ತೊಡಗಲಿಚ್ಛಿಸದ ಸಾಮಾನ್ಯ ವಾಚಕರಿಗಾಗಿ ನಾನು ಇಲ್ಲಿ ಬರೆಯುತಿರುವೆನು. ಮೂಲ ಸಂಸ್ಕೃತ ಉಪನಿಷತ್ತುಗಳ ಹಾಗೂ ಅವುಗಳ ಮೇಲಿನ ಟೀಕೋಪಟೀಕೆಗಳ ಅಭ್ಯಾಸವನ್ನು ಎಲ್ಲರೂ ಮಾಡಲು ಪೂರ್ಣ ಸ್ವತಂತ್ರರು. ಇಷ್ಟೇ ಅಲ್ಲ, ಅದು ಅತ್ಯಂತ ಇಷ್ಟವಾದುದು. ಹಾಗೆ ಅಭ್ಯಾಸ ಮಾಡಲಿಚ್ಛಿಸುವವರಿಗೆಲ್ಲ ನಾನು ಹಾರ್ದಿಕ ಆಮಂತ್ರಣವನ್ನು ಕೊಡುವೆನು. ಆದರೆ ಮೂಲ ಗ್ರಂಥ ಅಥವಾ ಅದರ ಭಾಷಾಂತರ ಇವುಗಳನ್ನು ಕೈಯಲ್ಲಿ ಕೊಳ್ಳುವ ಮೊದಲು ಸಹ ಇಲ್ಲಿ ಬರೆಯಲಾದ ನಾಲ್ಕು ಮಾತುಗಳು ಎಲ್ಲರಿಗೂ ಬಹಳ ಉಪಯುಕ್ತವೆನಿಸ-ಬಲ್ಲವು. ವೇದಾಂತದ ಸುಂದರ ವಿಚಾರೋಪವನದಲ್ಲಿ ಸೇರುವ ಮೊದಲು ಈ ಚಿಕ್ಕ ಪ್ರಸ್ತಾವನೆಯತ್ತ ದೃಷ್ಟಿಕ್ಷೇಪ ಮಾಡಿದರೆ ಆ ಉಪವನದ ಸೌಂದರ್ಯವು ಇನ್ನೂ ಹೆಚ್ಚು ಮನೋಹರವೆನಿಸುವದು.

ಉಪನಿಷತ್ತುಗಳು ಸಾಹಿತ್ಯವೆಂದು ಬರೆಯಲಾದ ಗ್ರಂಥಗಳಲ್ಲ. ಆ ಕಾಲದ ಜೀವನಚಿತ್ರವೆಂದು ಅವು ಬರೆಯಲ್ಪಟ್ಟಿಲ್ಲ. ಅಥವಾ ಮ್ಯಾಥ್ಯೂ ಅರ್‌ನೋಲ್ಡರು ಹೇಳಿದಂತೆ ಅವು 'ಜೀವನದ ಟೀಕಾರೂಪವಾಗಿಯೂ' ಇಲ್ಲ. ಮುಖ್ಯವಾಗಿ ಅವು ಅಧ್ಯಾತ್ಮ ಜೀವನದ ಗ್ರಂಥಗಳು. ಅಧ್ಯಾತ್ಮಜ್ಞಾನವೆ ಅವುಗಳ ಮುಖ್ಯ ವಿಷಯವು. ಜಡ ಜಗತ್ತಿನ ಬಗ್ಗೆ ಅವುಗಳಲ್ಲಿ ವಿಶೇಷ ಉಲ್ಲೇಖವಿಲ್ಲ. ಆತ್ಯಂತಿಕ ಸತ್ಯದ ಶೋಧವೆ ಅವುಗಳ ಮೂಲ ಉದ್ದೇಶವು. ಆ ಉದ್ದೇಶದಿಂದ ತಾವು ಮಾಡಿದ ಶೋಧಗಳನ್ನು ಋಷಿಗಳು ಮಾರ್ಗದರ್ಶನಾರ್ಥವಾಗಿ ಈ ಗ್ರಂಥಗಳಲ್ಲಿ ಬರೆದಿಟ್ಟಿರುವರು. ಆಯಾಕಾಲದ ವರ್ಣನೆ, ಪ್ರತಿಬಿಂಬ ಇವು ಉಪನಿಷತ್ತುಗಳಲ್ಲಿ ಇದ್ದರೂ ಅವೆಲ್ಲ ಕೇವಲ ಪ್ರಾಸಂಗಿಕವಿರುವವು. ಆದರೂ ಅವುಗಳನ್ನು ತಿಳಿದುಕೊಂಡರೆ ಉಪನಿಷತ್ತುಗಳ ಅಭ್ಯಾಸಕ್ಕೆ ಹೆಚ್ಚು ಅನು-ಕೂಲವಾಗಬಲ್ಲದು.

ಉಪನಿಷತ್ಕಾಲದ ಸಮಾಜವು ವಿಶೇಷ ತೊಡಕುಳ್ಳದ್ದಿರಲಿಲ್ಲ ಎಂಬುದು ಸ್ವಲ್ಪ ಅಭ್ಯಾಸದಿಂದ ಕೂಡಲೆ ಗೊತ್ತಾಗುವದು. ಸಮಾಜದ ಆರ್ಥಿಕ ವ್ಯವ-ಹಾರಾದಿಗಳು ಹೆಚ್ಚು ಬೆಳೆಯುತ್ತ ಹೋದಂತೆ ಸಮಾಜದಲ್ಲಿ ಹೆಚ್ಚೆಚ್ಚು ತೊಡಕುಗಳುಂಟಾಗುವವು. ಮೇಲಾಗಿ ಉಪನಿಷತ್ತುಗಳಲ್ಲಿ ಕಂಡುಬರುವ ಸಮಾಜಚಿತ್ರವು ಆಗಿನ ಇಡೀ ಸಮಾಜದ ಚಿತ್ರವೆಂದು ಹೇಳಲಾಗುವದಿಲ್ಲ.

ಆದರೆ ತತ್ತ್ವವಿಚಾರದಲ್ಲಿ ನಿಮಗ್ನವಾದ ಗುಂಪುಗಳ ರೇಖಾಚಿತ್ರವು ಉಪನಿಷತ್ತುಗಳಲ್ಲಿರುವದು. ಅಧ್ಯಾತ್ಮವಿಚಾರದಲ್ಲಿ ರುಚಿ ಇದ್ದವರ ಸಂಖ್ಯೆ ಯಾವಾಗಲೂ ಕಡಿಮೆ ಎಂಬ ಮಾತು ನಿಜ. ಆದರೆ ಅಂಥವರ ವರ್ಚಸ್ಸು ಸಮಾಜದ ಮೇಲೆ ಸಾಮಾನ್ಯವಾಗಿ ಹೆಚ್ಚು ಇರುವದೆಂಬುದು ನಾವು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ. ಉಪನಿಷತ್ತುಗಳಲ್ಲಿ ಅರಸರು, ಕ್ಷತ್ರಿಯ ವೀರರು, ಹಲವು ಬ್ರಾಹ್ಮಣರು, ಪುರೋಹಿತರು ನಮಗೆ ಕಂಡುಬರುವದು. ಸ್ತ್ರೀಯರ ಸಂಖ್ಯೆ ತೀರ ಕಡಿಮೆ ಇದ್ದರೂ ಇದ್ದ ಹಲವರು ಆ ಪುರಾತನ ಕಾಲದಲ್ಲಿ ಸಹ ತಾತ್ತ್ವಿಕ ವಾದವಿವಾದದಲ್ಲಿ ಒಳ್ಳೆ ಸಾಹಸದಿಂದ ಭಾಗವಹಿಸುತಿರುವದನ್ನು ಕಂಡರೆ ಮನಸಿಗೆ ಸಮಾಧಾನವಾಗುವದು. ಉಪನಿಷತ್ತುಗಳಲ್ಲಿ ಸಾಕಷ್ಟು ತರುಣರು, ಬ್ರಹ್ಮಚಾರಿಗಳು, ಒಟುಗಳು ಕಂಡುಬರುವರು. ಆ ಮೂಲಕ ಒಂದು ಬಗೆಯ ಉತ್ಸಾಹದ ವಾತಾವರಣವು ಅಲ್ಲಿ ದೃಗ್ಗೋಚರವಾಗುವದು. ಜನಸಾಮಾನ್ಯರು ನಮಗೆ ಅಲ್ಲಿ ಕಂಡುಬರುವದಿಲ್ಲ. ಒಕ್ಕಲಿಗರು, ಕೈಕೆಲಸ ಮಾಡುವವರು ಮುಂತಾದವರು ಅತಿ ವಿರಳ.

ಆಶ್ರಮಗಳು, ಗುರುಕುಲಗಳು, ಯಜ್ಞಮಂಡಪಗಳು, ಅರಸರ ಓಲಗಗಳು ಇವೇ ಉಪನಿಷತ್ತುಗಳಲ್ಲಿ ಬಹಳ ಕಡೆಗೆ ಉಕ್ತವಾಗಿವೆ. ಈಗೀಗ ಗುರುಕುಲಗಳಾಗಲಿ, ಯಜ್ಞಗಳಾಗಲಿ ನಮಗೆ ಹಿಂದುಸ್ಥಾನದಲ್ಲಿ ಕಂಡುಬರುವದಿಲ್ಲ. ಅರಸರ ಓಲಗಗಳೇನೋ ಬೇಕಾದಷ್ಟು ಇವೆ. ಆದರೆ ತತ್ತ್ವವಿಚಾರಗಳಲ್ಲಿ ಪ್ರೀತಿ ಇಟ್ಟು ಪಂಡಿತರ ಸಭೆಗಳನ್ನು ನೇರಿಸುವ ಜನಕನಂಥ ಅರಸರು ವಿರಳವೆಂದೇ ಹೇಳಬಹುದು. ಆಶ್ರಮಗಳು ಮಾತ್ರ ಒಂದಿಲ್ಲೊಂದು ರೂಪದಿಂದ ಹಿಂದುಸ್ಥಾನದಲ್ಲಿ ಸಮಾಜದಿಂದ ದೂರವಿದ್ದು ಸಮಾಜಕ್ಕೆ ಮಾರ್ಗದರ್ಶನಮಾಡುವ ಕಾರ್ಯವನ್ನು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಮಾಡುತ್ತಲೆ ಬಂದಿವೆ.

ಉಪನಿಷತ್ಕಾಲದಲ್ಲಿ ಆಶ್ರಮಗಳು ಬಹುಶಃ ಪಟ್ಟಣಗಳಿಂದ ಇಲ್ಲವೆ ದೊಡ್ಡ ಹಳ್ಳಿಗಳಿಂದ ಸ್ವಲ್ಪ ದೂರವೆ ಇರುತಿದ್ದವು. ಒಂದು ಆಶ್ರಮವೆಂದರೊಂದು ಸ್ವತಂತ್ರ ಜೀವನಕೇಂದ್ರದಂತೆ ವಿರಾಜಿಸುತಿತ್ತು. ನಿಸರ್ಗಸುಂದರವಾದ ಸ್ಥಾನವನ್ನು ಹುಡುಕಿ ಆಶ್ರಮವನ್ನು ಕಟ್ಟುತಿದ್ದರು. ಅಲ್ಲಿಯ ಕಟ್ಟಡಗಳು ನಾವಾ ಇದ್ದು ಸುತ್ತಲು ದೊರಕುವ ಕಟ್ಟಿಗೆ, ಎಲೆ, ಜದುರು, ಮುಂತಾದವುಗಳಿಂದಲೆ ಕಟ್ಟಲಾಗುತಿದ್ದವು. ಆದುದರಿಂದಲೆ ಆಶ್ರಮಗಳಲ್ಲಿ ಪರ್ಣಕುಟಿಗಳೇ (ಪರ್ಣ—ಎಲೆ, ಕುಟಿ—ಗುಡಿಸಲು) ಹೆಚ್ಚಾಗಿರುತಿದ್ದವು. ವಾಡಿಕೆಯಾಗಿ ನದಿಯ ದಂಡೆ, ಸರೋವರದ ಬದಿ, ಗುಡ್ಡದ ಅಡಿ, ತೋಪುಗಳ ಮಧ್ಯ,

ತಪ್ಪಲು ಇವುಗಳನ್ನು ನೋಡಿ ಆರಿಸಿ ಋಷಿಮುನಿಗಳು ಆಶ್ರಮಗಳನ್ನು ಕಟ್ಟು ತಿದ್ದರು.

ಆಧ್ಯಾತ್ಮಿಕ ಜೀವನವನ್ನು ಕಳೆಯಲಿಚ್ಛಿಸುವವರು, ತಪವನ್ನಾಚರಿಸುವವರು, ಯಜ್ಞಯಾಗಾದಿಗಳನ್ನು ನಡೆಸುವವರು, ತ್ಯಾಗಜೀವನವನ್ನು ಕಳೆಯುವವರು ಸಾಮಾನ್ಯವಾಗಿ ಆಶ್ರಮಗಳಲ್ಲಿರುತಿದ್ದರು. ವಾಡಿಕೆಯಾಗಿ ಆಧ್ಯಾತ್ಮಿಕ ಜೀವನ ದೊಡನೆ ಬಡತನ, ಸಾದಾತನ, ತ್ಯಾಗ, ನಿಷ್ಕಾಮ ಕರ್ಮ, ಅನಾಸಕ್ತ ದೃಷ್ಟಿ ಇವು ಸಂಬದ್ಧವಿರುವವು. ಆದುದರಿಂದ ಆಶ್ರಮವಾಸಿಗಳು ಶುದ್ಧ ಹಾಗೂ ಸಾದಾ ವಾತಾವರಣದಲ್ಲಿ ಇರಲೆತ್ನಿಸುತಿದ್ದರು, ತಾವಿರುವ ವಾತಾವರಣವನ್ನೆಲ್ಲ ಅವರು ಶುದ್ಧ ಆಚಾರ-ವಿಚಾರಗಳಿಂದ ತುಂಬಿಬಿಡುತಿದ್ದರು. ಇತರರ ಬಗ್ಗೆ ಅವರಲ್ಲಿ ಹಿಂಸಾವಿಚಾರಗಳ ಸೋಂಕು ಸಹ ಇರುತಿರಲಿಲ್ಲ. ಇಷ್ಟೇ ಅಲ್ಲ, ಅವರು ಅಖಿಲವಿಶ್ವದಲ್ಲಿಯ ಪ್ರತಿಯೊಬ್ಬರ ಶುಭಚಿಂತನದಲ್ಲಿಯೆ ಕಾಲಕಳೆಯುತಿದ್ದರು. ಕಲ್ಯಾಣಚಿಂತನದಲ್ಲಿ, ಕಲ್ಯಾಣ ಕಾರ್ಯದಲ್ಲಿ ಅವರು ತಮ್ಮ ಜೀವನದ ಸರ್ವಸ್ವ ವಿರುವದೆಂದು ತಿಳಿಯುತಿದ್ದರು. ವೇದಾಭ್ಯಾಸ, ಕಲಾಭ್ಯಾಸ, ಅವುಗಳ ಅಧ್ಯಾ-ಪನ, ಯಜ್ಞತಪಗಳ ಆಚರಣ, ಧ್ಯಾನ, ಅಧ್ಯಾತ್ಮಸಾಧನ, ಅಧ್ಯಾತ್ಮಪ್ರಯೋಗ, ಸತ್ಯಕ್ಷಮೆ ಮುಂತಾದ ಶ್ರೇಷ್ಠ ಸದ್ಗುಣಗಳ ಆಚಾರ, ಸತ್ಕರ್ಮ ಮುಂತಾದವು ಗಳು ಎಲ್ಲ ಆಶ್ರಮಗಳಲ್ಲಿ ನಡೆಯುತಿದ್ದವು. ಆಶ್ರಮವಾಸಿಗಳೆಲ್ಲ ಸನ್ಯಾಸಿಗಳು ಇಲ್ಲವೆ ಸರ್ವಸ್ವವನ್ನು ತ್ಯಾಗಮಾಡಿದವರೇ ಇರುತಿದ್ದರೆಂತಲ್ಲ. ಅನೇಕ ಸಾರೆ ಮಹಾ ಋಷಿಗಳು ತಮ್ಮ ಹೆಂಡಿರುಮಕ್ಕಳೊಡನೆ ಅದೇರೀತಿ ತಮ್ಮೊಡನೆ ಇರಲಿಚ್ಛಿಸುವ ಇತರರೊಡನೆ ಆಶ್ರಮಗಳಲ್ಲಿ ವಾಸಿಸುತ್ತಿದ್ದರು. ಅಧ್ಯಾತ್ಮ ಶಕ್ತಿಯನ್ನು ಸುತ್ತಲು ಬೀರುವ ಕೇಂದ್ರದಂತೆ ಆಶ್ರಮಗಳು ಕಂಗೊಳಿಸುತಿ ದ್ದವು. ಸತ್ಯಶೋಧಕರಿಗೆಲ್ಲ ಅದೊಂದು ಆಕರ್ಷಕ ಕೇಂದ್ರದಂತೆ, ವಿಚಾರ ವಿನಿಮಯದ ಸ್ಥಾನದಂತೆ ಇರುತಿತ್ತು. ವ್ಯಕ್ತಿ-ವ್ಯಕ್ತಿಗಳು ಭಿನ್ನವಿರುವಂತೆ ಅವರವರ ಶಕ್ತಿ ವರ್ಚಸ್ಸುಗಳಿಗೆ ಅನುಸರಿಸಿ ಆಶ್ರಮಗಳು ಆ ಮಟ್ಟಿಗೆ ಭಿನ್ನ ವಿರುತಿದ್ದವು. ಬಹುಶಃ ಇಂಥ ಆಶ್ರಮಗಳಲ್ಲಿ ತತ್ವಚರ್ಚೆ ಬಳಿತಾಗಿ ನಡೆಯು ತಿತ್ತು. ಆ ಚರ್ಚೆಗಳಿಗೆ ಆರಣ್ಯಕ ಎಂಬ ಹೆಸರು. ಅರಣ್ಯಗಳಲ್ಲಿ ಆ ಮಾತು ನಡೆ ಯುತಿದ್ದುದರಿಂದ ಅವುಗಳಿಗೆ ಆರಣ್ಯಕ ಎಂಬ ಹೆಸರಾಯ್ತು.

ಆಶ್ರಮಗಳು ಋಷಿಮುನಿಗಳ ಮತ್ತು ತಪಸ್ವಿಗಳ ವಾಸಸ್ಥಾನಗಳಾಗಿ ದ್ದವು. ಸೂರ್ಯನಿಂದ ಸುತ್ತಲೂ ಬೆಳಕು ಹಬ್ಬುವಂತೆ ಈ ಆಶ್ರಮಗಳಿಂದ ಅಧ್ಯಾತ್ಮಜ್ಞಾನವು, ಅಧ್ಯಾತ್ಮವರ್ಚಸ್ಸು ಸುತ್ತಲು ಹಬ್ಬುತಿತ್ತು.

ಗುರುಕುಲಗಳು ವಿಶಿಷ್ಟ ಪ್ರಕಾರದ ಶಿಕ್ಷಣಸಂಸ್ಥೆಗಳಾಗಿದ್ದವು. ವಿದ್ಯಾರ್ಥಿಗಳು ಬಾಲ್ಯದಿಂದ ತಮ್ಮ ಗುರುಗಳ ಮನೆಗಳಲ್ಲಿಯೆ ವಾಸಮಾಡಿಕೊಂಡಿದ್ದು ಗುರುಗೃಹಕ್ಕೆ ಸೇವೆ ಸಲ್ಲಿಸುತ್ತ ಗುರುಗಳ ಸಹವಾಸದಲ್ಲಿಯೆ ಇದ್ದು ವಿದ್ಯೆಯನ್ನು ಸಂಪಾದಿಸುತಿದ್ದರು. ಗುರುಗಳು ಆಯಾ ವಿದ್ಯಾರ್ಥಿಗಳನ್ನು ಮನೆ ಮಕ್ಕಳಂತೆ ನೋಡುತ್ತಿದ್ದರು. ಗುರುಗಳಿಗೆ ವಿದ್ಯಾರ್ಥಿಗಳಿಂದ ಶುಲ್ಕದ ಅಪೇಕ್ಷೆ ಇರುತಿರಲಿಲ್ಲ. ವಿದ್ಯಾರ್ಥಿಗಳು ತಮಗೆ ಇಷ್ಟವಿದ್ದಂತೆ ಶಕ್ತ್ಯಾನುಸಾರವಾಗಿ ವಿದ್ಯಾರ್ಜನದ ನಂತರ ಅಥವಾ ತನ್ಮಧ್ಯೆ ಗುರುದಕ್ಷಿಣೆಯನ್ನು ಸಲ್ಲಿಸುತಿದ್ದರು. ಆದರೆ ಯಾವದೇ ಬಗೆಯ ಒತ್ತಾಯ ಇಲ್ಲವೆ ಶುಲ್ಕನಿರ್ಬಂಧ ಇಲ್ಲದೆ ಇದ್ದದರಿಂದ ಒಡವರಲ್ಲಿ ಬಡವರು ಸಹ ವಿದ್ಯಾರ್ಜನೆ ಮಾಡಲು ಅನುಕೂಲವಾಗುತಿತ್ತು. ಈಗಲೂ ಈ ಪರಂಪರೆ ಹಲವು ಸ್ಥಳಗಳಲ್ಲಿ ನಡೆಯುತಿದೆ. ಉದಾಹರಣಾರ್ಥವಾಗಿ ಈಗ್ಯೂ ಅನೇಕ ವಿದ್ವಾಂಸರು ಈ ರೀತಿ ವಿದ್ಯಾದಾನ ಮಾಡುತಿರುವದು ನಮಗೆ ಕುಳಿತಲ್ಲಿ ಕಂಡುಬರುವದು. ಈ ರೀತಿ ಹಲವು ಸ್ಥಳಗಳಲ್ಲಿಯಾದರೂ ಈ ಶ್ರೇಷ್ಠವಾದ ಪರಂಪರೆ ನಡೆಯುತಿದೆ. ಈ ಗುರುಕುಲಗಳಲ್ಲಿ ನಿಯಮಿತವಾದ ಪಾಠಪ್ರವಚನಗಳ ಮುಖಾಂತರ ವಿದ್ಯಾದಾನವು ನಡೆಯುತಿತ್ತು. ಎಲ್ಲರೂ 'ಸ್ವಾಧ್ಯಾಯ'ವನ್ನು ಅಂದರೆ ತಮಗೆ ಒಪ್ಪಿಸಲಾದ ವೇದಭಾಗದ ಅಭ್ಯಾಸವನ್ನು ಮಾಡಿಯೇ ತೀರತಕ್ಕದ್ದೆಂಬ ನಿರ್ಬಂಧವಿತ್ತು. ಇತರ ಅಭ್ಯಾಸಾದಿಗಳೂ ಸ್ವಾಧ್ಯಾಯದೊಡನೆ ನಡೆಯತಕ್ಕವುಗಳು.

ಬಾಲಕನು ಎಂಟು ವರುಷದವನಾದೊಡನೆ ಅವನ ಉಪನಯನಮಾಡುವ ಪರಿಪಾಠವಿತ್ತು. ಉಪನಯನ ಈ ಶಬ್ದದ ಅರ್ಥವು ಕೂಡ 'ಗುರುವಿನ ಬಳಿ ಕಳಿಸೋಣ'. ಸಾಮಾನ್ಯವಾಗಿ ಎಂಟರಿಂದ ಹನ್ನೆರಡು ವರುಷದ ಬಾಲಕರನ್ನು ಗುರುಕುಲಕ್ಕೆ ಕಳಿಸುವ ಪರಿಪಾಠವಿತ್ತು. ಅಲ್ಲಿ ಹೋಗಿ ಸಾಧಾರಣ ಹನ್ನೆರಡು ವರುಷ ವಿದ್ಯಾಭ್ಯಾಸ ಮಾಡುತ್ತ ವಿದ್ಯಾರ್ಥಿಗಳು ಇರುತಿದ್ದರು. ಅದೇ ಬ್ರಹ್ಮಚರ್ಯದ ಕಾಲ ಅಥವಾ ಅಧ್ಯಾತ್ಮವಿದ್ಯೆಯ ಸಾಧನೆಯನ್ನು ಪ್ರಾರಂಭಿಸುವ ಕಾಲ. ಚಿಕ್ಕ ಮಕ್ಕಳು ಹಾಗೂ ಪಾಲಕರು ವಿದ್ಯೆಯನ್ನು ಕುರಿತು ಬಹಳ ಆತುರರಿರುತಿದ್ದರೆಂಬದು ಹಲವು ಕಥೆಗಳಿಂದ ವ್ಯಕ್ತವಾಗುವದು. ವಿದ್ಯಾರ್ಥಿಗಳು ಅಭ್ಯಾಸ ತೀರಿಸಿಕೊಂಡು ತಮ್ಮ ತಮ್ಮ ಮನೆಗೆ ಹೋಗುವ ಕಾಲಕ್ಕೆ ಅವರಿಗೆ ಸರಿಯಾದ ಉಪದೇಶವು ಕೊಡಲಾಗುತಿತ್ತು. ಅದೇ ಸಮಾವರ್ತನವಿಧಿಯು.

ಆ ಕಾಲದ ವಿದ್ಯಾಭ್ಯಾಸಕ್ಷೇತ್ರವು ಬೇಕಾದಷ್ಟು ವಿಶಾಲವಾಗಿತ್ತು ಎಂದು

ಹೇಳಬಹುದು. ಸನತ್‌ಕುಮಾರ ಮುನಿಗಳು ನೀನು ಯಾವ ಯಾವ ವಿದ್ಯೆಗಳನ್ನು ಕಲಿತಿರುವಿ, ಎಂದು ನಾರದರನ್ನು ಕೇಳಲಾಗಿ ಅವರು ಜ್ಯೋತಿಷ, ಸರ್ಪವಿದ್ಯೆ ಮುಂತಾದ ಅನೇಕ ವಿದ್ಯೆಗಳ ಹೆಸರುಗಳನ್ನು ಹೇಳಿದರು. ಅಲ್ಲಿ ಉಕ್ತವಾದ ವಿದ್ಯೆಗಳು ಒಟ್ಟು ಹದಿನಾರು. ಅವೆಲ್ಲ ಅಪರಾವಿದ್ಯೆಗಳು. ಪರಾವಿದ್ಯೆಗೆ ಅಥವಾ ಅಧ್ಯಾತ್ಮಕ್ಕೆ ಎಲ್ಲಕ್ಕೂ ಹೆಚ್ಚಿನ ಮಹತ್ವವಿತ್ತು. ಉಪನಿಷತ್ತುಗಳು ಪರಾವಿದ್ಯೆಯನ್ನಷ್ಟೆ ಬೋಧಿಸುವವು. ಆತ್ಮನ ಜ್ಞಾನ, ಅಂತರ್ಯಾಮಿಯ ಗುರುತು, ಆಧ್ಯಾತ್ಮಿಕ ಜೀವನ, ನಿರಂತರ ಶಾಂತಿ ಹಾಗೂ ಅಮೃತತ್ವವನ್ನು ದೊರಕಿಸಿಕೊಡುವ ಶ್ರೇಯೋಮಾರ್ಗ ಇವೇ ಉಪನಿಷತ್ತಿನ ವಿಷಯಗಳು.

ಉಪನಿಷತ್ಕಾಲದಲ್ಲಿಯ ಅರಸರು ಒಡ್ಡೋಲಗಗಳನ್ನು ಎಂದಿನಂತೆ ನೆರೆಯಿಸುತ್ತಿದ್ದರು. ಅವುಗಳಲ್ಲಿ ವೈಶಿಷ್ಟ್ಯವೇನೂ ಇರಲಿಲ್ಲ. ಈ ಕಾಲದ ರಾಜಾಮಹಾರಾಜರು ನೆರೆಯಿಸುವ ದರಬಾರಗಳಂತೆ ಅವಾದರೂ ಇದ್ದವು. ಬಹುಶಃ ಈಗಿನಷ್ಟು ಜನರ ಒಯ್ಯಾರ ಅಥವಾ ವೈಭವಾಡಂಬರ ಆ ಕಾಲದಲ್ಲಿರಲಿಲ್ಲ. ಒಮ್ಮೊಮ್ಮೆ ಆ ಓಲಗಗಳಲ್ಲಿ ತತ್ವಚರ್ಚೆ ನಡೆಯುತ್ತಿತ್ತು. ಜನಕ, ಅಜಾತಶತ್ರು ಮುಂತಾದ ಅರಸರು ಅಂಥ ಚರ್ಚೆಗಳ ಬಗ್ಗೆ ವಿಶೇಷ ಉತ್ಸಾಹವನ್ನು ತಾಳಿದ್ದರು. ಆಕರ್ಷಕ ಪಾರಿತೋಷಕಗಳನ್ನೂ ಬಹುಮಾನಗಳನ್ನೂ ಕೊಡಮಾಡಿ ಅವರಂಥ ಅರಸರು ಈ ಬಗೆಯ ಚರ್ಚೆಗಳನ್ನು ಉತ್ತೇಜಿಸುತ್ತಿದ್ದರು.

ಯಜ್ಞಯಾಗಾದಿಗಳಿಗೆ ಉಪನಿಷತ್ತುಗಳು ಯಾವದೇ ಉತ್ತೇಜನವನ್ನು ಕೊಡುವದಿಲ್ಲ. ಇಷ್ಟೇ ಅಲ್ಲ, ಅವುಗಳನ್ನು ಅವು ಹೀನಗೈಯುವವು. ತೂತುಬಿದ್ದ ನಾವೆಗಳಂತೆ ಅವು ನಮ್ಮನ್ನು ಭವಸಾಗರದಾಚೆಗೆ ಒಯ್ಯಲು ಅಸಮರ್ಥವೆಂದು ಉಪನಿಷತ್ಕಾರರು ಅವುಗಳನ್ನು ಹೀಯಾಳಿಸುವರು. ಅವು ನಮ್ಮನ್ನು ಸ್ವರ್ಗದ ವರೆಗೆ ಒಯ್ಯಬಲ್ಲವು. ಆದರೆ ಅಲ್ಲಿ ನಾವು ಕೆಲಕಾಲ ಮಾತ್ರ ಇದ್ದು ಕೆಳಗೆ ಈ ಲೋಕಕ್ಕೆ ಬರಬೇಕಾಗುವದು. ಅವುಗಳ ಮಹತ್ವವು ಕಡಿಮೆಯಾಗಿ ಯಜ್ಞಗಳು ಕಳೆಗುಂದಿದ್ದರೂ ಉಪನಿಷತ್ಕಾಲದಲ್ಲಿ ಅನೇಕರು ಅವುಗಳನ್ನು ಮಾಡುತ್ತಿದ್ದರೆಂಬಲ್ಲಿ ಸಂಶಯವಿಲ್ಲ. ಆ ಸಂಧಿಸಾಧಿಸಿ ತತ್ವವಿಷಯಕ ಚರ್ಚೆ ಬೇಕಾದಷ್ಟು ನಡೆಯುತ್ತಿತ್ತು. ಸದ್ಯಕ್ಕೆ ಯಜ್ಞಗಳು ವಿರಳ. ಸಾಮಾನ್ಯ ಬ್ರಾಹ್ಮಣನಿಗೆ ಅವುಗಳ ಪ್ರಕ್ರಿಯೆ ಗೊತ್ತಿಲ್ಲ. ಅದೇ ರೀತಿ ಅವುಗಳ ಅರ್ಥವೂ ಗೊತ್ತಿಲ್ಲ. ಎಷ್ಟೋ ಯಜ್ಞಗಳ ಸಂಕೋಚಮಾಡಲಾಗಿದೆ ಮತ್ತು ಕೇವಲ ನಾಲ್ಕು ತುತ್ತು ಅನ್ನದ ಆಹುತಿಕೊಡುವ ರೂಪದಿಂದ ಅವು ಉಳಿದಿವೆ. ಪುರಾತನ ಕಾಲದಲ್ಲಿ ಯಜ್ಞವೆಂದರೊಂದು ದೊಡ್ಡ ಸಂಸ್ಥೆ ಮತ್ತು ಮಹತ್ವದ ಹಾಗೂ ಅರ್ಥಪೂರ್ಣ

ಆಚಾರವಾಗಿತ್ತು. ಅನೇಕ ಯಜ್ಞಗಳು ರೂಢಿಯಲ್ಲಿದ್ದವು. ಬೇರೆ ಬೇರೆ ಯಜ್ಞಗಳ ದೇವತೆಗಳು, ಫಲಗಳು, ಪ್ರಕ್ರಿಯೆಗಳು ಬೇರೆ ಬೇರೆ ಇದ್ದವು. ಈ ವಿವಿಧ ಯಜ್ಞಗಳಲ್ಲಿ ಪ್ರತ್ಯೇಕವಾದ ವೇದಮಂತ್ರಗಳ ಉಪಯೋಗವನ್ನು ಬೇರೆ ಬೇರೆ ಪುರೋಹಿತರು ಮಾಡುತಿದ್ದರು. ಉದಾಹರಣಾರ್ಥವಾಗಿ, ಹೋತೃಗಳು ಋಗ್ವೇದವನ್ನು, ಉದ್ಗಾತೃಗಳು ಸಾಮವೇದವನ್ನು, ಅಧ್ವರ್ಯುಗಳು ಯಜು-ರ್ವೇದವನ್ನು, ಬ್ರಹ್ಮನು ಅಥವಾ ಮುಖ್ಯ ಪುರೋಹಿತನು ಅಥರ್ವವನ್ನು ಉಪ-ಯೋಗಿಸುತಿದ್ದನು. ಬ್ರಹ್ಮನೆ ಮೇಲ್ವಿಚಾರಕನಾಗಿ ಕೆಲಸಮಾಡುತಿದ್ದನು. ಅಗ್ನಿಯ ಮುಖಾಂತರ ಯಾವದೊಂದು ವಿಶಿಷ್ಟ ದೇವತೆಗೆ ಅಥವಾ ದೇವತೆಗಳಿಗೆ ಆಹುತಿಗಳನ್ನರ್ಪಿಸುವದೆ ಪ್ರತಿಯೊಂದು ಯಜ್ಞದಲ್ಲಿಯ ಮುಖ್ಯ ಕರ್ಮವು. ಇದರಿಂದ ಸಂತುಷ್ಟರಾಗಿ ಆಯಾ ದೇವತೆಗಳು ವಿಶಿಷ್ಟ ಫಲಗಳನ್ನು ಯಜಮಾನನಿಗೆ ದಯಪಾಲಿಸುತಿದ್ದರೆಂಬ ಭಾವನೆ ರೂಢವಿತ್ತು. ಯಜ್ಞಶಾಲೆ ಕಟ್ಟುವದು, ಯಜ್ಞಕುಂಡ ನಿರ್ಮಾಣ, ಕಟ್ಟಿಗೆ ತುಂಡುಗಳನ್ನು ತಿಕ್ಕಿ ಬೆಂಕಿಮಾಡುವದು, ವಿಶಿಷ್ಟ ಮಂತ್ರೋಚ್ಚಾರಣಪೂರ್ವಕವಾಗಿ ಆಹುತಿಗಳನ್ನು ಕೊಡುವದು ಇತ್ಯಾದಿ ಸಂಗತಿಗಳು ವಿಶಿಷ್ಟ ಶಿಕ್ಷಣವಿಲ್ಲದೆ ಮಾಡಬರಲಾರವು. ಹೀಗಾದುದರಿಂದಲೆ ಪುರೋಹಿತರ ಒಂದು ಪ್ರತ್ಯೇಕ ವರ್ಗವು ನಿರ್ಮಾಣವಾಯಿತು ಮತ್ತು ಯಜಮಾನನೆಂದರೆ ಕೇವಲ 'ಮಮ' ಎಂಬುವವನಾಗಿ ಉಳಿತನು. ಹಣ ಮತ್ತು ಉಪಕರಣಗಳನ್ನು ಮಾತ್ರ ಯಜಮಾನನೆ ಸಲ್ಲಿಸುತಿದ್ದನು. ಯಾಕಂದರೆ ಅವನೇ ಯಜ್ಞಫಲದ ಅನುಭೋಗ ಮಾಡುವವನು. ಉಪನಿಷತ್ತುಗಳು ಯಜ್ಞಾದಿಕರ್ಮಕಾಂಡದ ಮಹತ್ವವನ್ನು ಅಲ್ಲಗಳೆದು ತಪಸ್ಸು, ಧ್ಯಾನ, ಜ್ಞಾನ, ಬ್ರಹ್ಮಚರ್ಯ ಇವುಗಳನ್ನು ಮೇಲಿನ ಮಟ್ಟಕ್ಕೇರಿಸಿದವು.

ಉಪನಿಷತ್ತುಗಳು ಇಡೀ ಕರ್ಮಕಾಂಡದವಿರುದ್ಧವೆ ಹೋರಾಟವನ್ನು ಹೂಡಿದವು. ಕರ್ಮಮಾರ್ಗವು ಉಪಕಾರಕವಿಲ್ಲ ಎಂಬ ಬಗ್ಗೆ ಜನಮನದಲ್ಲಿ ಒಂದು ಬಗೆಯ ತೀವ್ರವಾದ ಅಸಂತೋಷವು ಪಸರಿಸಿತ್ತು. ಆ ಮಾರ್ಗದಲ್ಲಿಯ ಆಕರ್ಷಣಸಾಮರ್ಥ್ಯವು ಅಳಿದುಹೋಗಿತ್ತು ಅದು ಕೇವಲ ಯಾಂತ್ರಿಕ ಮತ್ತು ಅರ್ಥಹೀನವಾಗಿ ಪರಿಣಮಿಸಿತ್ತು. ಆ ಮಾರ್ಗದಿಂದ ಫಲನಿಷ್ಪತ್ತಿಯಿಲ್ಲ ಎಂಬ ನೈರಾಶ್ಯವು ಎತ್ತೆತ್ತಲೂ ಪಸರಿಸಿತ್ತು ಮತ್ತು ಹೊಸ ಮಾರ್ಗದ ಶೋಧವು ನಡೆದಿತ್ತು. ಕರ್ಮಮಾರ್ಗವನ್ನು ಬಿಟ್ಟುಬಿಡುವ ಬಗ್ಗೆ ಉಪನಿಷತ್ಕಾರರು ಆತುರರಿದ್ದಷ್ಟೆ ಅವರು ಕೇವಲ ಬೌದ್ಧಿಕ ಪ್ರಯತ್ನಗಳಿಂದ ಸತ್ಯವು ಸಿಗದು ಎಂಬ ಬಗ್ಗೆ ಮನವರಿತವರಿದ್ದರು. ಸ್ವಚಿತ್ತದಲ್ಲಿ ಆಳವಾಗಿ ಹೋಗಬೇಕೆಂದು

ಅವರ ಮತ. ಆತ್ಮಸ್ಫೂರ್ತಿಯ ಮಾರ್ಗವನ್ನನುಸರಿಸಿ ನಿಜಾತ್ಮನನ್ನು ಕಂಡು ನಮ್ಮೆಲ್ಲರಿಗಾಗಿ ಅವರು ಆತ್ಮವಿದ್ಯೆಯನ್ನು ಪ್ರಚಾರಪಡಿಸಿದರು. ಇಂದ್ರಿಯ ಸುಖವಾಗಲಿ, ಬುದ್ಧಿಯಿಂದ ತಿಳಿಯತಕ್ಕ ಸತ್ಯದಿಂದ ಆಗುವ ಸುಖವಾಗಲಿ, ಇವುಗಳಿಗಿಂತ ಸಹಸ್ರಾರು ಪಾಲು ಹೆಚ್ಚಿನ ಸಮಾಧಾನವು ಈ ಅಧ್ಯಾತ್ಮ ಮಾರ್ಗದಿಂದ ಜನರಿಗೆ ಪ್ರಾಪ್ತವಾಗತೊಡಗಿತು. ಯಾವುದೆ ಕಾಮನೆಯಿಂದ ಪೀಡಿತನಾಗದೆ ಇರುವ ಬ್ರಹ್ಮಜ್ಞಾನಿಯು ಅನ್ನಮಯಾದಿ ಪಂಚಕೋಶಗಳನ್ನು ದಾಟಿ ಆತ್ಯಂತಿಕ ಆನಂದವನ್ನನುಭವಿಸುವನು ಮತ್ತು 'ನಾನು ಒಬ್ಬನೇ ಒಬ್ಬನು, ಆತ್ಮಾನಂದವನ್ನನುಭವಿಸುತಿರುವೆನು' ಎಂದು ಲೀಲಾಭಾವದಿಂದ ಹಾಡುತ್ತ ಚಲ್ಲಾಟವಾಡುವನು ಎಂದು ಒಬ್ಬ ಉಪನಿಷತ್ಕಾರರು ವರ್ಣಿಸಿರುವರು. ಈ ಅನುಭಾವಮಾರ್ಗದಿಂದ ಸಾಗುತಿರುವಾಗ ಹಲವು ಋಷಿಗಳು ಆನಂದಾತಿಶಯದ ಶಿಖರವನ್ನು ಮುಟ್ಟಿದರು. ಅಲ್ಲಿ ಏಕ ಅನೇಕ, ಸದಸತ್ ಮುಂತಾದವುಗಳ ಸುಳಿವಿಲ್ಲ. ಅಲ್ಲಿ ಆನಂದವು ಸ್ವಯಂಭುವಾಗಿ ತಾನೇತಾನಾಗಿ ಆತ್ಮಕ್ರೀಡೆಯಲ್ಲಿ ರತವಿರುವುದು. ಆ ಸ್ಥಿತಿಯಲ್ಲಿ ಎಚ್ಚರೆಂಬುದು ಇರುವುದೋ ಇಲ್ಲವೋ ಇದನ್ನು ಹೇಳುವುದೆ ಕಠಿಣ.

ಮೇಲೆ ಕಾಣಿಸಿದ ಪರಿಸ್ಥಿತಿಯಲ್ಲಿ ಉಪನಿಷತ್ತುಗಳ ಉದಯವಾಯಿತು. ಶೋಧಕಬುದ್ಧಿ ಹಾಗೂ ಸತತ ಪ್ರಯತ್ನ ಇವು ಉಪನಿಷತ್ತುಗಳ ವಿಶೇಷವಿರುವವು. ಅವುಗಳಲ್ಲಿಯ ಸತ್ಯವು ಒಂದು ನಿರ್ಜೀವ ಕಟ್ಟುನಿಟ್ಟಾದ ಮೂರ್ತಿಯಾಗಿ ನಿಲ್ಲುವುದಿಲ್ಲ. ಅವುಗಳಲ್ಲಿ ಪ್ರತಿಭೆಯ ಲಕ್ಷಣವಾದ ನಿತ್ಯನವೀನತೆ, ಹೊಸತನ ಕಂಡುಬರುವುದು. ಇಷ್ಟು ಕಾಲವು ಗತಿಸಿಹೋದರೂ ಅವು ಮುಪ್ಪಾಗಿಲ್ಲ. ಈಗ ಕನಿಷ್ಠ ೨೫ ನೂರು ವರುಷಗಳಾದರೂ ಕಳೆದುಹೋದವು. ಉಪನಿಷತ್ತುಗಳಲ್ಲಿಯ ಒಂದು ಬಗೆಯ ಪರಿಮಳವು ಓದುಗರನ್ನು ಸುತ್ತಿ ಈಗಲೂ ಅವರಿಗೆ ಆಲ್ಹಾದದಾಯಿಯಾಗುತ್ತದೆ.

ಉಪನಿಷತ್ತುಗಳ ವಿಷಯ, ಹಿಂದುಸ್ಥಾನದ ತತ್ವಜ್ಞಾನದಲ್ಲಿ ಅವುಗಳ ಸ್ಥಾನ, ಮುಂತಾದ ಮಾತುಗಳತ್ತ ಲಕ್ಷ್ಯಗೊಡುವ ಮುಂಚೆ ಅವುಗಳ ಹೆಸರು, ಸಂಖ್ಯೆ, ಕಾಲ, ಅವು ಯಾವ ಗ್ರಂಥದ ಭಾಗಗಳು ಮುಂತಾದ ಸಂಗತಿಗಳನ್ನು ಸ್ವಲ್ಪ ನೋಡುವ.

ಮೂಲ ಉಪನಿಷತ್ತುಗಳು ಸಂಸ್ಕೃತದಲ್ಲಿರುವವು. ವೇದಗಳ ಭಾಷೆ ಬಹಳ ಹಳತವು. ಹಾಗೆ ಇವುಗಳ ಭಾಷೆ ಇಲ್ಲ. ಹಲವು ಭಾಗಗಳನ್ನು ಬಿಟ್ಟರೆ ಇತರ ಭಾಗಗಳನ್ನು ಸ್ವಲ್ಪ ಸಂಸ್ಕೃತ ತಿಳಿದವರು ಓದಿ ಅರ್ಥಮಾಡಿಕೊಳ್ಳಬಹುದು.

ಸಂಸ್ಕೃತವು ಒಳ್ಳೆ ಸಮೃದ್ಧ ಭಾಷೆ, ಒಂದೇ ಶಬ್ದಕ್ಕೆ ಬಹ್ವರ್ಥಗಳನ್ನು ಕಲ್ಪಿಸುವ ಸಾಮರ್ಥ್ಯ ಆ ಭಾಷೆಯಲ್ಲಿ ಬಹಳ ಬೆಳೆದು ಬಂದಿದೆ. ಒಂದೇ ಶಬ್ದಕ್ಕೆ ಅಷ್ಟೇ ಸಮಂಜಸವಾದ ಎರಡು ಮೂರು ಅರ್ಥಗಳು ಸಂಸ್ಕೃತದಲ್ಲಿ ಬೇಕಾದಷ್ಟು ಉಂಟು. 'ಉಪನಿಷತ್' ಎಂಬ ಶಬ್ದಕ್ಕೆ ಎರಡರ್ಥಗಳು ಇರುವವು. 'ಸಮೀಪ ಕೂಡುವದು' ಎಂದು ಅದರ ಶಬ್ದಾರ್ಥವಿರುವದು. ಅದೇ ರೀತಿ 'ಪೂರ್ಣ ನಾಶ ಮಾಡುವದು' ಎಂದೂ ಅದರ ಅರ್ಥವಿರುವದು. 'ಅಜ್ಞಾನವನ್ನು ನಾಶಗೊಳಿಸುವ ಜ್ಞಾನವಿಶೇಷ' ಎಂದು ಅದರ ಧ್ವನ್ಯರ್ಥ ಹಾಗೂ ರೂಢಾರ್ಥವಿರುವದು. ಮೇಲೆ ಕಾಣಿಸಿದ ಎರಡೂ ಅರ್ಥಗಳು ಯೋಗ್ಯವೆಂದೇ ಹೇಳಬಹುದು. ಸಮೀಪ ಕುಳಿತಾಗ ಶಿಷ್ಯನಿಗೆ ಪ್ರೀತಿಯಿಂದ ಹೇಳಿದ ಜ್ಞಾನ ಎಂದು ಒಂದು ಅರ್ಥವಿದ್ದರೆ ವಿಷಯಗಳ ಬಂಧನವನ್ನು ನಷ್ಟಪಡಿಸುವ ಜ್ಞಾನ ಎಂದು ಎರಡನೆಯ ಅರ್ಥವಾಗುವದು. ಯಾಜ್ಞವಲ್ಕ್ಯನು ಮೈತ್ರೇಯಿಗೆ ಮಾಡಿದ ಉಪದೇಶಕ್ಕೆ ಈ ಎರಡೂ ಅರ್ಥಗಳು ಒಳ್ಳೆ ಉತ್ತಮ ರೀತಿಯಿಂದ ಅನ್ವಯಿಸುವವು. ಆ ಉಪದೇಶವು ನಿಜವಾದ ಉಪನಿಷತ್ ಎನ್ನಬಹುದು. ಧನಸಂಪತ್ತು ಮತ್ತು ವೈಷಯಿಕ ಜೀವನವನ್ನು ನಿರಾಕರಿಸಿ ಮೈತ್ರೇಯಿಯು ಆತ್ಮಜ್ಞಾನವನ್ನು ಇಚ್ಛಿಸುವಳು. ಇದರಿಂದ ಆಕೆಯ ಗಂಡನಲ್ಲಿ ಹೆಚ್ಚಿನ ಪ್ರೀತಿ ಹುಟ್ಟುವದು. ಅವನು ಆಕೆಯನ್ನು ಸಮೀಪ ಕರೆಯಿಸಿ ಕುಳ್ಳಿರಿಸಿಕೊಂಡು ಆಕೆಗೆ ಅನುಭಾವಯುಕ್ತವಾದ ಆತ್ಮಜ್ಞಾನವನ್ನುಪದೇಶಿಸುವನು. ಆಕೆಯ ಅಜ್ಞಾನವನ್ನು ಪರಿಹರಿಸಿ ಆಕೆಗೆ ಅಮೃತತ್ವದ ಮಾರ್ಗವನ್ನು ತೋರುವನು.

ಉಪನಿಷತ್ತುಗಳ ಸಂಖ್ಯೆಯನ್ನು ಕುರಿತು ಪಂಡಿತರಲ್ಲಿ ಒಮ್ಮತವಿಲ್ಲ. ೧೫೦ ಇರುವವೆಂದು ಹಲವರು, ೧೦೮ ಎಂದು ಅನ್ನರು. ಮುಕ್ತಿಕೋಪನಿಷತ್ತು ೧೦೮ ಉಪನಿಷತ್ತುಗಳ ಉಲ್ಲೇಖ ಮಾಡುವದು. ಈಗ ಸದ್ಯಕ್ಕೆ ೧೦೮ ಉಪಲಬ್ಧವಿರುವವು. ಕ್ರಿ. ಶ. ೧೬೫೬ರಲ್ಲಿ ೫೦ ಉಪನಿಷತ್ತುಗಳ ಒಂದು ಸಂಗ್ರಹದಿಂದ ಹಲವು ಉಪನಿಷತ್ತುಗಳು ಇರಾಣೀ ಭಾಷೆಯಲ್ಲಿ ಅನುವಾದಿಸಲಾದವು. ಆದರೆ ಆ ಸಂಗ್ರಹವು ಈಗ ಉಪಲಬ್ಧವಿಲ್ಲ. ಆದುದರಿಂದ ಆ ಸಂಗ್ರಹದಲ್ಲಿ ಯಾವ ಯಾವ ಉಪನಿಷತ್ತುಗಳಿದ್ದವೆಂಬದು ಗೊತ್ತಾಗುವದಿಲ್ಲ. ೧೪ ಮಾತ್ರ ವೈದಿಕ ಉಪನಿಷತ್ತುಗಳೆಂದು ಶಂಕರಾಚಾರ್ಯರು ಒಪ್ಪುವರು. ಇತರ ಆಚಾರ್ಯರು ಹತ್ತು ಉಪನಿಷತ್ತುಗಳನ್ನು ಮನ್ನಿಸುವರು. ಯಥಾರ್ಥವಾಗಿ ನೋಡಿದರೆ ಈಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಐತರೇಯ, ತೈತ್ತಿರೀಯ, ಪ್ರಶ್ನ, ಛಾಂದೋಗ್ಯ, ಬೃಹದಾರಣ್ಯಕ, ಈ

ಹತ್ತನ್ನು ನಾವು ಅಭ್ಯಸಿಸಿದರೆ ಇತರ ಉಪನಿಷತ್ತುಗಳಲ್ಲಿ ನಮಗೆ ಹೊಸ-ತೇನೂ ವಿಶೇಷ ಕಂಡುಬರುವದಿಲ್ಲ. ಅಲ್ಪ ಸ್ವಲ್ಪ ಮೌಲಿಕ ವಿಚಾರಗಳುಳ್ಳ ಸುಂದರ ಶೈಲಿಯ ಇನ್ನೊಂದೇ ಒಂದು ಉಪನಿಷತ್ತೆಂದರೆ ಶ್ವೇತಾಶ್ವತರವು. ಇತರ ಉಪನಿಷತ್ತುಗಳೆಲ್ಲ ಈಚೆಗಿನವು ಹಾಗೂ ಹೆಚ್ಚಿನ ವಿಚಾರಗಳಿಲ್ಲದವು ಎಂದು ಸದ್ಯಕ್ಕೆ ಬದಿಗೆ ಸರಿಸಿಡಬಹುದು.

ಈ ಹತ್ತರಲ್ಲಿಯ ಹಲವು ಹೆಸರುಗಳು ಕುತೂಹಲವನ್ನುಂಟುಮಾಡುವವು. ಎಲ್ಲ ಹೆಸರುಗಳ ವ್ಯುತ್ಪತ್ತಿಯನ್ನು ಹೇಳುವದು ಅಸಾಧ್ಯ. ಈಶ, ಕೇನ, ಇವು ಆಯಾ ಶಬ್ದದಿಂದ ಪ್ರಾರಂಭಿಸುವವು. ಕಠವು ಯಜುರ್ವೇದದಲ್ಲಿಯ ಆ ಹೆಸರಿನ ಬ್ರಾಹ್ಮಣದಲ್ಲಿ ಇರುವದು. ಮುಂಡಕ ಅಂದರೆ ಕೆಲಸಿಗನ ಕತ್ತಿ ಅಥವಾ ಕತ್ತಿಯಿಂದ ಬೋಳಿಸಿದ ತಲೆ ಅಂದರೆ ಸನ್ಯಾಸಿ ಎಂದರ್ಥ. ಸನ್ಯಾಸಾಶ್ರಮವನ್ನು ಸ್ವೀಕರಿಸಲನುವಾದವನ ಸಲುವಾಗಿ ಈ ಉಪನಿಷತ್ತು ಇರುವದೆಂದು ಹೇಳಬಹುದು. ಮಂಡೂಕ ಋಷಿಯು ರಚಿಸಿದುದರಿಂದ ಮಾಂಡೂಕ್ಯ ಉಪನಿಷತ್ತೆಂಬ ಹೆಸರಾಯಿತು. ಪ್ರಶ್ನೋತ್ತರಗಳಿದ್ದ ಉಪನಿಷತ್ತು ಪ್ರಶ್ನೋಪನಿಷತ್ತೆನಿಸಿತು. ಮಹಿದಾಸ ಐತರೇಯ ಋಷಿಯು ರಚಿಸಿದ ಉಪನಿಷತ್ತು ಐತರೇಯೋಪನಿಷತ್ತೆನಿಸುವದು ಸ್ವಾಭಾವಿಕ. 'ತೈತ್ತಿರೀಯ' ಎಂಬ ಹೆಸರಿನ ಕಥೆ ಸ್ವಲ್ಪ ಚಮತ್ಕಾರಪೂರ್ಣವಿರುವದು. ಯಾಜ್ಞವಲ್ಕ್ಯ ಋಷಿಯು ತನ್ನ ಶಿಷ್ಯನ ಮೇಲೆ ಒಮ್ಮೆ ಯಾವದೋ ಕಾರಣದಿಂದ ಕೋಪಗೊಂಡನು. ಆಗ ತಾನು ಕೊಟ್ಟ ಜ್ಞಾನವನ್ನೆಲ್ಲ ಆತನು ಮರಳಿ ಬೇಡಿದನು. ಶಿಷ್ಯನು ಎಲ್ಲ ಜ್ಞಾನವನ್ನು ಕಾರಿ ಹೊರಚೆಲ್ಲಿದನು. ಸುತ್ತಲಿದ್ದ ಹಲವು ಋಷಿಗಳು ತಿತ್ತಿರಿ ಪಕ್ಷಿಯ ರೂಪ ಧರಿಸಿ ಆ ಕಾರಿಕೆಯನ್ನು ತಿಂದುಬಿಟ್ಟರು. ಅದೇ ತೈತ್ತಿರೀಯ ಉಪನಿಷತ್ತು! ಛಾಂದೋಗ್ಯದ ಉಪಪತ್ತಿ ಅಷ್ಟು ಸ್ಪಷ್ಟವಿಲ್ಲ. ಬೃಹದಾರಣ್ಯಕವೆಂದರೆ ಅರಣ್ಯದಲ್ಲಿ ರಚಿಸಲಾದ ದೊಡ್ಡ ಕಥೆ.

ಮೇಲೆ ಕಾಣಿಸಿದ ಹತ್ತು ಅಥವಾ ಹನ್ನೊಂದು ಉಪನಿಷತ್ತುಗಳು ಒಂದೇ ಕಾಲಕ್ಕೆ ಅಥವಾ ಅವಧಿಯಲ್ಲಿ ರಚಿಸಿದವುಗಳಲ್ಲ. ತೀರ ಹಳೆಯ ಉಪನಿಷತ್ತುಗಳ ಕಾಲದಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲದಿದ್ದರೂ ಎಲ್ಲವೂ ಬುದ್ಧಪೂರ್ವವಿರುವವೆಂದು ಸಾಮಾನ್ಯಮತವಿರುವದು. ಅರ್ಥಾತ್ ಅವು ಕ್ರಿ. ಪೂ. ೫೦೦ ವರುಷಗಳಾಚೆಗಿನವು. ಅವೆಲ್ಲ ಋಗ್ವೇದ ಸೂಕ್ತಗಳೀಚೆಗಿನವೆಂಬಲ್ಲಿ ಸಂಶಯವಿಲ್ಲ. ಕ್ರಿ. ಪೂ. ೫೦೦ ಮತ್ತು ೧೫೦೦ ಈ ಅವಧಿಗಳ ನಡುವಿನ ಕಾಲದಲ್ಲಿ

ಬಹುಶಃ ಈ ಎಲ್ಲ ಉಪನಿಷತ್ತುಗಳು ಬರೆಯಲಾದವೆಂಬುದು ಸಾಮಾನ್ಯ ವಾಚಕರಿಗೆ ಗೊತ್ತಾದರೆ ಸಾಕು.

ಉಪನಿಷತ್ತುಗಳು ಸಾಹಿತ್ಯವೆಂದು ಬರೆದ ಗ್ರಂಥಗಳಲ್ಲ. ಬರೆಯಬೇಕೆಂದು ಬುದ್ಧಿಪುರಃಸರವಾಗಿ ಬರೆಯಲಾದ ಗ್ರಂಥಗಳೂ ಅವಲ್ಲ. ಒಬ್ಬನೇ ಬರೆದವುಗಳೂ ಅಲ್ಲ. ಬಾಯಿಂದ ಸಾರಲಾದ ಮಾತುಗಳ ಲೇಖನವದು. ಬಾಯಿಂದ ಬಾಯಿಗೆ ಆ ಮಾತುಗಳು ವರ್ಷಾನುವರುಷ ಪರಂಪರೆಯಿಂದ ಹೇಳಲಾಗುತ್ತಿರಲಿಕ್ಕೆ ಸಾಕು. ಮುಂದೆ ಕಾಲಾಂತರದಿಂದ ಅವು ಗ್ರಂಥಸ್ಥವಾದವು. ಅವುಗಳನ್ನು ಶಿಷ್ಯರು ಅಥವಾ ಕೇಳಿದವರು ಅಬದ್ಧ ಮಾಡಿರಲಿಕ್ಕೆಬೇಕು. ಆಶ್ರಮವಾಸಿಗಳಾಗಲಿ ಇತರರಾಗಲಿ ಬೇರೆ ಬೇರೆ ಕಾಲಕ್ಕೆ ತಮತಮಗೆ ಯೋಗ್ಯವೆನಿಸಿದಾಗ ಅವುಗಳನ್ನು ಬರೆದಿಟ್ಟಿರಬಹುದು. ಈ ಯಾವದೆ ರೀತಿಯಿಂದ ಸದ್ಯಕ್ಕೆ ಉಪಲಬ್ಧವಿದ್ದ ರೂಪದಲ್ಲಿ ಅವು ನಮ್ಮ ತನಕ ಬಂದುಮುಟ್ಟಿವೆ. ಅವುಗಳ ಈ ಇತಿಹಾಸವೆ ಶೈಲಿ ಮತ್ತು ಭಾಷೆಯ ವಿವಿಧತೆ, ವಿವಿಧ ರೂಪ, ಪುನರುಚ್ಚಾರ, ಪರಿಭಾಷೆ ಮುಂತಾದವುಗಳ ಕಾರಣವು. ಅಲ್ಲಲ್ಲಿ ಸ್ಫೂರ್ತಿ, ಭಾವೋನ್ಮಾದ, ವಕ್ತೃತ್ವ ಇವು ಸ್ಪಷ್ಟವಾಗಿ ಒಡೆದುಕಾಣುವವು. ಹಲವು ಕಡೆಗೆ ರುಕ್ಷತೆಯೂ ಕಂಡುಬರುವದು. ಉಪನಿಷತ್ತುಗಳಲ್ಲಿ ಸಂವಾದರೂಪವೆ ವಿಶೇಷವಾಗಿರುವದು. ಆದರೆ ಅವುಗಳಲ್ಲಿ ಯಾಂತ್ರಿಕ ಪ್ರಶ್ನೋತ್ತರಗಳಾಗಲಿ, ಕೃತ್ರಿಮತೆಯಾಗಲಿ, ಗೂಡ್ಡು ತರ್ಕವಾಗಲಿ ಇಲ್ಲ. ಕೇವಲ ಒಂದು ಕೃತ್ರಿಮ ಅಚ್ಚೊತ್ತಿದಂತೆ ಅವುಗಳಲ್ಲಿ ಯಾವ ಭಾಗವೂ ಇಲ್ಲ. ಎಲ್ಲವುಗಳಲ್ಲಿ ಒಂದು ಹೊಸತನ, ಒಂದು ಜೀವಂತತನ, ಒಂದು ನಿಜವಾದ ಸತ್ಯಶೋಧಕ ಬುದ್ಧಿ ಇವು ಎದ್ದುಕಾಣುವವು. ಮೊದಲೇ ನಿಶ್ಚಯಿಸಲಾದ ಅಥವಾ ಗೃಹೀತವಾದ ಮಾತುಗಳ ಪ್ರತಿಪಾದನೆಗಾಗಿ ಆ ಪ್ರಶ್ನೋತ್ತರಗಳು ಬರೆಯಲಾಗಿಲ್ಲ.

ಉಪನಿಷತ್ತುಗಳು ನಾಲ್ಕು ವೇದಗಳ ಕೊನೆಯ ಭಾಗಗಳು. ವೇದಗಳಲ್ಲಿ ಋಗ್ವೇದವೆ ಪ್ರಾಚೀನವು. ಹಲವು ಪಂಡಿತರು ಅವು ೫೦೦೦ ವರುಷಗಳಾಚೆಗಿನವೆಂದು ಹೇಳುವರು. ಋಗ್ವೇದದಲ್ಲಿಯ ಎಲ್ಲಕ್ಕೂ ಹಳೆಯ ಸೂಕ್ತಗಳಲ್ಲಿ ಯಾವದೆ ಮೂರು ಸಾವಿರ ವರುಷಗಳೀಚೆಗಿನದು ಎಂದು ಹೇಳುವ ಧೈರ್ಯವು ಒಬ್ಬ ಪಂಡಿತನಿಗೂ ಇಲ್ಲ. ಆ ಕಾಲದಲ್ಲಿ ಹಿಂದುಸ್ತಾನದಲ್ಲಿ ಲಿಪಿ ಮತ್ತು ಬರಹ ಇರಲಿಲ್ಲ. ಆದುದರಿಂದ ವೇದಗಳೆಲ್ಲ ಬಾಯಿಂದ ಬಾಯಿಗೆ ಈ ಪರಂಪರೆಯಿಂದಲೆ ಸಂರಕ್ಷಿಸಲ್ಪಟ್ಟವು. ಪರಂಪರಾಪ್ರೇಮ ಮತ್ತು ಸ್ಮರಣಶಕ್ತಿ ಇವುಗಳ ಮೂಲಕವೆ ಇದು ಸಾಧ್ಯವಾಯಿತು ಎಂದು ಹೇಳಬಹುದು. ಸರಿಯಾಗಿ,

ದೋಷರಹಿತ ಉಚ್ಚಾರ ಮಾಡುವದೆ ಒಂದು ವಿದ್ಯೆಯಾಗಿ ಅದಕ್ಕೆ ವೇದಾಂಗವೆನ್ನಿಸಿಕೊಳ್ಳುವಷ್ಟು ಮಹತ್ವ ಉಂಟಾಯಿತು. ಋಗ್ವೇದ, ಯಜುರ್ವೇದ, ಸಾಮವೇದ, ಮತ್ತು ಅಥರ್ವವೇದ ಹೀಗೆ ಒಟ್ಟು ನಾಲ್ಕು ವೇದಗಳು. ಅವುಗಳ ವಿಷಯ ಮುಂತಾದವುಗಳ ಚರ್ಚೆಮಾಡುವದು ಇಲ್ಲಿ ಪ್ರಸ್ತುತವಿಲ್ಲ. ಆದರೆ ವೇದಗಳಲ್ಲಿ ಉಪನಿಷತ್ತುಗಳ ಸ್ಥಾನ, ಹಿಂದೂ ತತ್ವಗ್ರಂಥಗಳಲ್ಲಿ ಅವುಗಳಿಗಿದ್ದ ಮಹತ್ವ, ಇತ್ಯಾದಿ ಸಂಗತಿಗಳು ತಿಳಿಯಬೇಕಾದರೆ ವೇದೋಪನಿಷತ್ತುಗಳ ನಡುವಿನ ಪರಸ್ಪರ ಸಂಬಂಧವು ತಿಳಿಯುವದವಶ್ಯವು.

ವೇದಗಳು ಹಿಂದುಗಳ ಮೂಲ ಪವಿತ್ರ ಗ್ರಂಥಗಳು. ಅವು ಅಬಾಧಿತ ಪ್ರಮಾಣ ಗ್ರಂಥಗಳು. ವೇದಗಳು ಪ್ರಮಾಣ ಗ್ರಂಥಗಳಲ್ಲ ಎಂದು ಅನ್ನುವವನು ನಾಸ್ತಿಕನೆನಿಸುವನು. ಮೊಟ್ಟಮೊದಲು ಬ್ರಹ್ಮನ ಮನೋಮಂಡಲದಲ್ಲಿ ವೇದಗಳು ಹುಟ್ಟಿದವೆಂದು ಶ್ರದ್ಧಾಯುಕ್ತ ಹಿಂದುಗಳ ನಂಬಿಕೆ. ವೇದಾನುಸಾರವಾಗಿ ಮುಂದೆ ಬ್ರಹ್ಮನು ಸೃಷ್ಟಿಯನ್ನು ಸೃಜಿಸಿದನು. ಮುಂದೆ ಮರೀಚಿ, ಅತ್ರಿ, ಅಂಗಿರಸಾದಿ ದ್ರಷ್ಟಾರರಿಗೆ ವೇದಗಳು ಪ್ರತೀತವಾದವು. ಅವರು ಮಾನವರಿಗೆ ವೇದಗಳನ್ನು ಕೊಟ್ಟರು. ಕೃಷ್ಣದ್ವೈಪಾಯನನು ಅವುಗಳನ್ನು ನಾಲ್ಕು ಎಂದು ವಿಭಾಗಿಸಿ ಪೈಲಕ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಇವರಿಗೆ ಕಲಿಸಿದನು. ಅವರು ಮತ್ತೆ ತಮ್ಮ ಮಕ್ಕಳಿಗೆ ಹಾಗೂ ಶಿಷ್ಯರಿಗೆ ಕಲಿಸಿದರು. ವಿಷ್ಣುಪುರಾಣದ ಹೇಳಿಕೆಯಂತೆ ಋಗ್ವೇದದಲ್ಲಿ ಇಪ್ಪತ್ತೊಂದು ಶಾಖೆಗಳು, ಯಜುರ್ವೇದದಲ್ಲಿ ನೂರೊಂಬತ್ತು, ಸಾಮವೇದದಲ್ಲಿ ಸಾವಿರ, ಮತ್ತು ಅಥರ್ವವೇದದಲ್ಲಿ ಐವತ್ತು ಶಾಖೆಗಳಿದ್ದವು. ಆದರೆ ಅವುಗಳಲ್ಲಿ ನೂರಕ್ಕೆ ತೊಂಬತ್ತು ಶಾಖೆಗಳು ಲುಪ್ತವಾಗಿ ಹೋಗಿರುವವು.

ಪರಂಪರಾಗತ ಕಲ್ಪನೆ ಏನೇ ಇರಲಿ, ಧರ್ಮಸ್ಫೂರ್ತಿಯಿಂದ ಯುಕ್ತರಾದ ಯೋಗಸ್ಥ ಕವಿಗಳು ವೇದಗಳನ್ನು ರಚಿಸಿದರೆಂದು ಧಾರಾಳವಾಗಿ ಹೇಳಬಹುದು. ಆ ಗುಣವೆ ಅವುಗಳನ್ನು ಈ ವರೆಗೆ ಬಾಳಿಸಿತು. ಹದಿನಾಲ್ಕನೆ ಶತಮಾನದಲ್ಲಿ ಆಗಿಹೋದ ವೇದಭಾಷ್ಯಕಾರನಾದ ಸಾಯಣಾಚಾರ್ಯನು ವೇದಗಳ ವ್ಯಾಖ್ಯೆಯನ್ನು ಈ ಕೆಳಗಿನಂತೆ ಮಾಡಿರುವನು: ಇಷ್ಟಪ್ರಾಪ್ತಿ ಮತ್ತು ಅನಿಷ್ಟಪರಿಹಾರ ಈ ಬಗ್ಗೆ ಅಲೌಕಿಕ ಅಥವಾ ದೈವೀ ಉಪಾಯಗಳನ್ನು ಹೇಳಬಲ್ಲ ಗ್ರಂಥ. ಸ್ವಾಮಿ ವಿವೇಕಾನಂದರು ವೇದಗಳೆಂದರೆ ಜ್ಞಾನದ ಹೊತ್ತಿಗೆಗಳು ಎಂದು ಬಹಳ ಸಮಂಜಸವಾಗಿ ಹೇಳಿ ಜ್ಞಾನವುಳ್ಳ ಪ್ರತಿಯೊಂದು ಗ್ರಂಥವು ವೇದವೆ ಎಂದು ಅಂದಿದ್ದಾರೆ.

ಇನ್ನು ವೇದೋಪನಿಷತ್ತುಗಳ ಸಂಬಂಧವನ್ನು ನೋಡುವ. ವೇದ ಮತ್ತು ಉಪನಿಷತ್ತು ಇವು ಬೇರೆ ಬೇರೆ ಎಂದು ಅನ್ನುವದು ಒಂದು ತಪ್ಪೇ ಸೈ. ಉಪನಿಷತ್ತುಗಳು ನಿಜವಾಗಿ ವೇದಭಾಗಗಳೆ. ನಾಲ್ಕು ವೇದಗಳ ಕೆಲವೊಂದು ಅಂತಿಮ ಭಾಗಗಳಲ್ಲಿಯೆ ದಶೋಪನಿಷತ್ತುಗಳು ಇರುವವು. ಆದುದರಿಂದಲೆ ಅವುಗಳಿಗೆ ವೇದಾಂತ ಎಂಬ ಹೆಸರಾಯಿತು. ಅವುಗಳಲ್ಲಿ ಪ್ರತಿಪಾದಿಸಲಾದ ತತ್ವಜ್ಞಾನಕ್ಕೂ ವೇದಾಂತ ಎಂಬ ಹೆಸರೇ ಬಿದ್ದಿದೆ. ವೇದಗಳ ಕೊನೆಯ ಭಾಗದಲ್ಲಿ ಹೇಳಲಾದ್ದರಿಂದ ಅದಕ್ಕೆ ಆ ಹೆಸರು ಬಂದಿದೆ. ವೇದದ ಇತರ ಭಾಗಗಳಲ್ಲಿ ಮುಖ್ಯವಾಗಿ ಕರ್ಮಮಾರ್ಗವನ್ನು ಪ್ರತಿಪಾದಿಸುತಿದ್ದರೆ ಅಂತ್ಯ-ಭಾಗವು ಜ್ಞಾನವನ್ನು ಸಾರುವದು ಎಂದು ತಿಳಿಯಲಾಗಿದೆ.

ವೇದಗಳಲ್ಲಿ ಎರಡು ಬಗೆಯ ರಚನೆ ಕಂಡುಬರುವದು, ಸಂಹಿತಾಭಾಗ ಮತ್ತು ಬ್ರಾಹ್ಮಣಭಾಗ. ಸಂಹಿತೆ ಎಂದರೆ ಯಜ್ಞಯಾಗಾದಿ ಕರ್ಮಗಳ ಸಮಯದಲ್ಲಿ ಹೇಳತಕ್ಕ ಸೂಕ್ತಮಂತ್ರಾದಿಗಳು. ಬ್ರಾಹ್ಮಣವೆಂದರೆ ಯಜ್ಞಾದಿಗಳನ್ನು ಹೇಗೆ ಮಾಡಬೇಕು, ಅವುಗಳ ಇತಿಹಾಸ ಅಥವಾ ಇತರ ಇತಿಹಾಸ, ಭಾಷ್ಯ, ಟೀಕೆ ಇತ್ಯಾದಿ ಇದ್ದ ಭಾಗ. ಕೆಲವೊಂದು ಸ್ಥಳದಲ್ಲಿ ಬ್ರಾಹ್ಮಣಗಳಲ್ಲಿ ಉಪನಿಷತ್ತುಗಳು ಇರುವವು. ಹಲವು ಬ್ರಾಹ್ಮಣ ಭಾಗಗಳಲ್ಲಿ ಆರಣ್ಯಕಗಳು ಅಂದರೆ ಅರಣ್ಯದಲ್ಲಿ ಹೇಳಲಾದ ಮಾತುಗಳು ಇರುವವು. ಹಲವು ಉಪ-ನಿಷತ್ತುಗಳು ಆರಣ್ಯಕಗಳ ಭಾಗಗಳಿರುವವು. ಮುಖ್ಯವಾದ ದಶೋಪನಿಷತ್ತುಗಳು ಕೆಳಗಿನಂತೆ ಆಯಾ ವೇದಗಳಿಗೆ ಸಂಬಂಧಿಸಿರುವವು :

| | | |
|---|---|---|
| ಈಶ | — | ಯಜುರ್ವೇದ |
| ಕೇನ | — | ಸಾಮವೇದ |
| ಕಠ | — | ಯಜುರ್ವೇದ |
| ಮುಂಡಕ | — | ಅಥರ್ವವೇದ |
| ಮಾಂಡುಕ್ಯ | — | ,, ,, |
| ಪ್ರಶ್ನ | — | ,, ,, |
| ಐತರೇಯ | — | ಋಗ್ವೇದ |
| ತೈತ್ತಿರೀಯ | — | ಯಜುರ್ವೇದ |
| ಛಾಂದೋಗ್ಯ | — | ಸಾಮವೇದ |
| ಬೃಹದಾರಣ್ಯಕ | — | ಯಜುರ್ವೇದ |

ಇನ್ನು ಉಪನಿಷತ್ತುಗಳಲ್ಲಿಯ ವಿಷಯದತ್ತ ನೋಡುವ. ಇಲ್ಲಿ ಎಲ್ಲ ವಿಷಯುಗಳ ಪರಿಶೀಲನೆ ಮಾಡುವದು ಅಸಾಧ್ಯ. ಆ ಬಗ್ಗೆ ಕುತೂಹಲವುಳ್ಳವರು 'ಉಪನಿಷತ್ ರಹಸ್ಯ'ವೆಂಬ ಗ್ರಂಥವನ್ನು ಓದುವದು ಅವಶ್ಯವು. ಇಲ್ಲಿ ಆ ಬಗ್ಗೆ ಸ್ಥೂಲಮಾನದಿಂದ ಬರೆದು ಉಪನಿಷತ್ಕಾರರ ಮುಖ್ಯ ಧೋರಣ ಅಥವಾ ಒಲವು ಏನು ಎಂಬುದನ್ನು ಮಾತ್ರ ಹೇಳಬಹುದು.

ಉಪನಿಷತ್ತುಗಳೇನೂ ತರ್ಕಬದ್ಧವಾದ ತಾತ್ವಿಕಗ್ರಂಥಗಳಲ್ಲ. ಅವು ಒಂದೇ ಕಾಲಕ್ಕೆ ಅಥವಾ ಒಬ್ಬನಿಂದ ಬರೆಯಲಾದ ಗ್ರಂಥಗಳೂ ಅಲ್ಲ. ಅವುಗಳನ್ನು ಸುಸಂಗತವಾಗಿ ಸಂಬಂಧಿಸಲು ಆದ ಪ್ರಯತ್ನಗಳು ನಂತರ. ಆದುದರಿಂದಲೆ ಅಲ್ಲಲ್ಲಿ ಅಷ್ಟಷ್ಟಕ್ಕೆ ವಿಷಯಗಳು ಬಿಡಲ್ಪಟ್ಟಂತೆ, ಹಲವೆಡೆಗೆ ಪರಸ್ಪರ ವಿರೋಧಿಯಾಗಿರುವಂತೆ ಕಾಣುತ್ತವೆ. ಸಾಮಾನ್ಯ ವಾಚಕರು ಯಾವದೊಂದು ಪೂರ್ವಗ್ರಹಗಳನ್ನು ಇಟ್ಟುಕೊಳ್ಳದೆ ಪ್ರತಿಯೊಂದು ಉಪನಿಷತ್ತನ್ನು ಪ್ರತ್ಯೇಕವಾಗಿ ಓದಿ ಅರ್ಥಮಾಡಿಕೊಳ್ಳುವದೆ ಉತ್ತಮ ಮಾರ್ಗ. ಇವುಗಳಲ್ಲಿ ದ್ವೈತವಿದೆ, ಅದ್ವೈತವಿದೆ ಇತ್ಯಾದಿ ಗ್ರಹಿಕೆಗಳು ಅಷ್ಟೊಂದು ಉಪಕಾರಕವಲ್ಲ. ನಾವು ಓದುತ್ತ ಚಿಂತಿಸುತ್ತ ಧ್ಯಾನಿಸುತ್ತ ಹೋದಂತೆ ನಮ್ಮ ಮನಸಿನಲ್ಲಿ ಯಾವ ತತ್ವವಿಚಾರವು ಒಡಮೂಡಿ ನಮ್ಮನ್ನು ಮನಗಾಣಿಸಿ ತಣಿಸುವದೊ ಅದೇ ಯೋಗ್ಯವೆಂದು ಸ್ವೀಕರಿಸುವದು ಸಾಧುವಾದುದು. ಉಪನಿಷತ್ತುಗಳ ಅಭ್ಯಾಸವನ್ನು ಈ ರೀತಿ ಮಾಡುವದೆ ಉತ್ತಮ ಪಕ್ಷ.

ತತ್ವವಿಚಾರ ಮತ್ತು ಆಧ್ಯಾತ್ಮಿಕ ಜೀವನ ಇವೇ ಉಪನಿಷತ್ತುಗಳ ಮುಖ್ಯ ವಿಷಯ. ಆನುಷಂಗಿಕವಾಗಿ ಇತರ ವಿಷಯಗಳನ್ನು ಸಹ ಅವು ಚರ್ಚಿಸುವವು. ಆದರೆ ಅವೆಲ್ಲ ಗೌಣವಾದವುಗಳು. ಸೃಷ್ಟಿಕ್ರಮ, ಮಾನಸಶಾಸ್ತ್ರ, ಯಜ್ಞಯಾಗಾದಿ, ಪುನರ್ಜನ್ಮ, ನೀತಿನಿರ್ಬಂಧ ಇತ್ಯಾದಿಗಳನ್ನು ಕುರಿತು ಅಲ್ಲಲ್ಲಿ ಉಲ್ಲೇಖವಿರುವದು. ಆದರೆ ಜನನ ಮರಣದಾಚೆಗಿನ ಅಮೃತತ್ವವನ್ನು ಸಂಪಾದಿಸಬಲ್ಲ ಅಧ್ಯಾತ್ಮಜ್ಞಾನ ಮತ್ತು ಆಧ್ಯಾತ್ಮಿಕ ಸಾಧನೆ ಇವುಗಳನ್ನೆ ಉಪನಿಷತ್ತುಗಳು ಒಲಗೊಂಡು ಹೇಳುವವು. ಇತರ ವಿಷಯುಗಳೆಂದರೆ ಉಪನಿಷತ್ಕಾರರಿಗೆ ಕ್ಷುದ್ರ. ಸತ್ಯವೆ ನೈತಿಕ ಜೀವನದ ತಳಹದಿ ಎಂದು ಅವರು ನಂಬುವರು. ಸತ್ಯವೆ ಜಯಿಸುವದು ಅದಕ್ಕೆ ಸೋಲೆಂಬುದಿಲ್ಲ ಎಂಬುದು ಅವರ ದೃಢ ಭಾವನೆ. ಪಂಚ ಮಹಾಪಾತಕಗಳನ್ನು ಅವರು ಗಟ್ಟಿಯಾಗಿ ತೆಗಳುವರು. ಗರ್ವ, ದುರಭಿಮಾನ, ಮುಂತಾದವುಗಳನ್ನು ಹೀಯಾಳಿಸಿ ಅವರು ನಮ್ರತೆಯನ್ನು ಎತ್ತಿಹಿಡಿಯುವರು. ಕೆಳಗೆ ಕಾಣಿಸಿದ ನಾಲ್ಕು ಮಾತು

ಗಳನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಉಪನಿಷದಭ್ಯಾಸಕ್ಕೆ ಹೆಚ್ಚು ಅನುಕೂಲ ವಾಗುವದು.

ಅಜ್ಞಾನ ಮತ್ತು ಕರ್ಮಬಂಧನದಿಂದ ಜೀವಾತ್ಮನನ್ನು ಮುಕ್ತಮಾಡಿ ಅಧ್ಯಾತ್ಮ ಜ್ಞಾನದ ಮುಖಾಂತರ ಅನಂತಾನಂದದತ್ತ ಮತ್ತು ಅಮೃತತ್ವದತ್ತ ಒಯ್ಯುವ ಕೆಲಸದಲ್ಲಿ ಉಪನಿಷತ್ತುಗಳು ಮಗ್ನವಾದುದು ಕಂಡುಬರುವದು. ಈ ಮಧ್ಯಬಿಂದುವಿನ ಸುತ್ತಲೂ ಎಲ್ಲ ಉಪನಿಷತ್ತುಗಳ ಉಲುಹು ಇರುವದು. ಇಂದ್ರಿಯನಿಷ್ಠವಾದ ಪ್ರೇಯೋಜೀವನವನ್ನು ಅಲ್ಲಗಳೆದು ಆತ್ಮನಿಷ್ಠವಾದ ಶ್ರೇಯೋಜೀವನದತ್ತ ಉಪನಿಷತ್ತುಗಳು ನಮ್ಮನ್ನು ಕರೆಯುವವು. ಇಂದ್ರಿಯ ಜೀವನವನ್ನು ಹತ್ತಿಕ್ಕಿಬಿಡಲು ಅಥವಾ ದುರ್ಲಕ್ಷಿಸಿ ಬಿಡಲು ಅವು ನಮಗೆ ಹೇಳುವದಿಲ್ಲ. ಆದರೆ ಅವುಗಳನ್ನು ದಾಟಿ ಹೋಗಲು ನಮಗೆ ಸಹಾಯ ಮಾಡುವವು. ತಪಸ್ವಿಗಳ ತ್ಯಾಗಮೂಲಕವಲ್ಲ, ಆದರೆ ಯೋಗಿಗಳ ಅನಾ-ಸಕ್ತಿಯ ಮೂಲಕ ಇಂದ್ರಿಯಾತೀತವಾಗಲು ನಮಗೆ ಅವು ಕಲಿಸುವವು. ಬುದ್ಧಿವಾದ, ತರ್ಕ ಇವುಗಳಿಗಿಂತ ಅನುಭಾವ, ಸ್ಫೂರ್ತಿಜ್ಞಾನ ಇವುಗಳನ್ನು ನಂಬಲು ಹೇಳುವವು. ಸರ್ವವ್ಯಾಪಿಯಾದ ಏಕಾತ್ಮನೊಡನೆ ತನ್ಮಯವಾಗಿ ನಡೆದಾಡಿದ ಆತ್ಮಜೀವನದ ಅನುಭವದಿಂದ ಋಷಿಗಳು ಮಾತಾಡುವರು. ಈ ಮೂಲ ತತ್ವವನ್ನನುಸರಿಸಿಯೆ ಅವರು ನಮಗೆ ಸಾಧನಾಮಾರ್ಗವನ್ನು ಹೇಳುವರು. ಸ್ವಚ್ಛ ಹಗುರಾದ ಅನ್ನಾಹಾರದಿಂದ ಶರೀರಪೋಷಣ, ಮನಸಿನ ಶುದ್ಧೀಕರಣ, ಸಂಯಮ, ಅನಾಸಕ್ತಿ, ಸದ್ಗುಣ ಮತ್ತು ಸದಾಚಾರಿ ಜೀವನ, ಏಕಾಗ್ರತೆ, ಪರಮಾತ್ಮಧ್ಯಾನ, ಕೊನೆಗೆ ಸಂಪೂರ್ಣ ಆತ್ಮಾರ್ಪಣ, ಈ ಮೂಲಕ ಜೀವನ್ಮುಕ್ತಿ ಹಾಗೂ ವಿದೇಹಮುಕ್ತಿ, ಇದೇ ಉಪನಿಷನ್ಮಾರ್ಗವು.

ಮೇಲೆ ಕಾಣಿಸಿದ ವಿಚಾರಗಳ ಪ್ರಭಾವಿ ಪ್ರವಾಹವೆ ಉಪನಿಷತ್ತುಗಳಲ್ಲಿ ಎಲ್ಲೆಲ್ಲಿಯೂ ಕಂಡುಬರುವದು. ಇನ್ನು ಕರ್ಮ, ಜ್ಞಾನ, ಪುನರ್ಜನ್ಮ ಇತ್ಯಾದಿಗಳ ಬಗ್ಗೆ ಉಪನಿಷತ್ತಿನಲ್ಲಿ ಬಂದ ವಿಚಾರಗಳನ್ನು ಕುರಿತು ಎರಡು ಮಾತು-ಗಳನ್ನು ಹೇಳಬಹುದು.

ಪ್ರಾಜ್ಞನೂ ಅಲ್ಲದ ಅಪ್ರಾಜ್ಞನೂ ಅಲ್ಲದ ಅನಂತಶಕ್ತಿ ಅನಂತಗುಣ ಸತ್ ಎಂಬುದೆ ಉಪನಿಷತ್ತಿನಲ್ಲಿ ಮೂಲ ವಸ್ತು ಎಂದು ಉಕ್ತವಾಗಿರುವದು. ಅದರ ಸಂಕಲ್ಪಶಕ್ತಿಯೂ ಅನಂತವು. ಅದು ಏಕಮೇವವಿರುವದು. ಆದುದರಿಂದ ಅದು ಅಪ್ರಾಜ್ಞವು. ಪ್ರಜ್ಞೆ ಹುಟ್ಟಬೇಕಾದರೆ ಎರಡು ವಸ್ತುಗಳು ಅವಶ್ಯ. ಅದರ ಸಂಕಲ್ಪಮಾತ್ರದಿಂದ ಪ್ರಕೃತಿ ಪುರುಷರ ನಿರ್ಮಿತಿ. ತನ್ಮೂಲಕ

ವಿವಿಧ ಸೃಷ್ಟಿಯ ನಿರ್ಮಾಣ. ಸೃಷ್ಟಿನಿರ್ಮಾಣದ ತರುವಾಯವೆ ಪ್ರಜ್ಞೆಗೆ ಎಡೆ. ಪ್ರಕೃತಿ ಪುರುಷರು ಸ್ವಯಂಭುವಲ್ಲ. ಅವು ಮೂಲ ವಸ್ತುವಿನ ರೂಪಮಾತ್ರ ಗಳು. ಇತರ ಎಲ್ಲ ವಸ್ತುಗಳು ನಾಮರೂಪಗಳು. ನಾವು ಬೇರೆ ಅಥವಾ ಪ್ರತ್ಯೇಕವಿರುವೆವು ಎಂಬ ಭಾವ, ಅಲ್ಪತ್ವದ ಅರಿವು, ಇಂದ್ರಿಯಜೀವನದಲ್ಲಿ ತನ್ಮಯತೆ, ಅಹಂಭಾವ, ವಿಷಯಾಸಕ್ತಿ, ಇವೆಲ್ಲ ನಮ್ಮ ಅಜ್ಞಾನದ ಫಲಗಳು. ಆ ಅಜ್ಞಾನವೆ ನಮ್ಮನ್ನು ಆಧ್ಯಾತ್ಮಿಕ ಸಮರಸ ಜೀವನದಿಂದ ದೂರ ಇಡು ವದು, ಏಕಾತ್ಮತ್ವದ ಅನುಭವದಿಂದ ನಮ್ಮನ್ನು ವಂಚಿಸುವದು. ಇಲ್ಲಿ ಬಹು ವಾಗೂ ನಾನಾ ನೋಡುವವನ ಬಾಳು ಹಾಳು ಎಂದು ಋಷಿಗಳು ಸಾರುವರು.

ಸೃಷ್ಟಿಯ ಮೂಲ ಕಾರಣವೂ ಸರ್ವವ್ಯಾಪಿಯೂ ಆಕಾಶದಂತೆ ಎಲ್ಲ ಕಡೆಗೂ ಇರುವಂತಹದೂ ದೇಶಕಾಲಗಳಾಚೆಗಿನದೂ ಆದ ಆತ್ಮವು ಒಂದೇ ಒಂದು. ಅದೇ ಪೂಜನೀಯವು. ಅದೇ ದೇವರು, ಅವನೇ ಪುರುಷೋತ್ತ-ಮನು. ಇತರ ದೇವತೆಗಳೆಲ್ಲ ಶಕ್ತಿವಿಶೇಷಗಳು. ಇಂದ್ರಿಯಾತೀತವೂ ಮನ ಸಿಗೆ ಕೂಡ ಸಿಲುಕದ್ದೂ ಬ್ರಹ್ಮವು. ಜನಸಾಮಾನ್ಯರು ದೇವರೆಂದು ಪೂಜಿ ಸುವ ಶಕ್ತಿಗಳು ನಿಜಬ್ರಹ್ಮವಸ್ತುವಲ್ಲ.

ಈ ಜಡ ಶರೀರವು ನಷ್ಟವಾದ ಬಳಿಕ ಸಹ ಜೀವಾತ್ಮನು ಉಳಿಯುವನು ಎಂದು ಉಪನಿಷತ್ಕಾರರ ಭಾವನೆ. ಆ ಬಗ್ಗೆ ಅವರು ಯಾವ ಪ್ರಮಾಣ ಗಳನ್ನೂ ಕೊಡುವದಿಲ್ಲ. ನಚಿಕೇತನು ಯಮನನ್ನು ಆ ಪ್ರಶ್ನೆ ಕೇಳಲು ಅದು ದೇವದೇವತೆಗಳಿಗೆ ಸಹ ಅರಿಯದ ಗೂಢವೆಂದು ಯಮನು ಉತ್ತರ ಕೊಟ್ಟನು. ಆದರೆ ಜೀವಾತ್ಮನು ಮುಂದೆ ಉಳಿಯುವನು ಎಂದು ಯಮನು ಪ್ರತಿಪಾದಿ ಸಿರುವನು. ಜೀವಾತ್ಮನು ತನ್ನ ಕರ್ಮಾನುಸಾರವಾಗಿ ವಿವಿಧ ಯೋನಿಗಳಲ್ಲಿ ಹುಟ್ಟುವನೆಂದು ಉಲ್ಲೇಖವಿರುವದು. ಐತರೇಯದಲ್ಲಿ ಸಂತತಿಯೆ ಆಯಾ ಜೀವಾತ್ಮನ ಪುನರ್ಜನ್ಮ ಎಂಬ ಉಲ್ಲೇಖವಿರುವದು. ಆದರೆ ಎರಡನೆ ಅನೇಕ ಕಡೆಗೆ ಪ್ರತ್ಯಕ್ಷ ಪುನರ್ಜನ್ಮದ ಉಲ್ಲೇಖವಿರುವದರಿಂದ ಐತರೇಯದಲ್ಲಿ ಹೇಳ-ಲಾದುದೆ ಒಂದು ಪುನರ್ಜನ್ಮ ಎಂದು ಅನ್ನಲು ಆಸ್ಪದವಿಲ್ಲ.

ಈ ರೀತಿ ಪುನರ್ಜನ್ಮವೆಂಬುದು ಉಪನಿಷತ್ತಿನಲ್ಲಿ ಒಂದು ಗೃಹೀತ ಸಂಗತಿ. ಇದಲ್ಲದೆ ಜೀವಾತ್ಮನ ಭವಿಷ್ಯದ ಬಗ್ಗೆ ಇನ್ನೂ ಹಲವು ವಿಚಾರಗಳು ಉಪ-ನಿಷತ್ತುಗಳಲ್ಲಿರುವವು. ಸ್ವರ್ಗ ಮತ್ತು ಅಮೃತತ್ವ ಇವುಗಳಲ್ಲಿ ಸ್ಪಷ್ಟವಾದ ಭೇದವು ಇದೆ ಎಂದು ಉಪನಿಷತ್ತು ಹೇಳುವದು. ಸ್ವರ್ಗವು ಕೆಲಕಾಲ ಮಾತ್ರ ಅಂದರೆ ಈ ಲೋಕದಲ್ಲಿ ಸಂಗ್ರಹಿಸಿದ ಪುಣ್ಯಾಂಶವು ತೀರುವ ವರೆಗೆ

ಮಾತ್ರ ಸಿಕ್ಕತಕ್ಕ ಲೋಕವು. ಸ್ವರ್ಗದಲ್ಲಿ ಯಾರೂ ಕೊನೆಯವರೆಗೆ ಇರಲಾರರು. ಆದರೆ ಅಮೃತತ್ವವೆಂಬುದು ಜನನ ಮರಣಗಳಾಚೆಗಿನದು. ಮುಕ್ತ ಜೀವವು ಈ ಲೋಕಕ್ಕೂ ಬರುವದಿಲ್ಲ ಸ್ವರ್ಗಕ್ಕೂ ಹೋಗುವದಿಲ್ಲ. ಅಮೃತ ಪರಮಾತ್ಮನೊಡನೆ ಅದು ಒಂದಾಗಿ ಹೋಗುವದು. ಅಮೃತತ್ವವೆಂಬುದೆ ವಾಂಛನೀಯವು, ಸ್ಪೃಹಣೀಯವು. ಸ್ವರ್ಗ, ಸ್ವರ್ಗಭೋಗ ಇವು ಉಪನಿಷತ್ಕಾರರ ದೃಷ್ಟಿಯಿಂದ ತುಚ್ಛವಾದವುಗಳು. ಅವುಗಳ ಬೆನ್ನು ಹತ್ತುವದು ಸಮಂಜಸವಲ್ಲ, ಜಾಣತನದ ಲಕ್ಷಣವಲ್ಲ ಎಂದು ಅವರ ಅಭಿಪ್ರಾಯ.

ಜೀವಾತ್ಮನ ವೃತ್ತಿ ಮತ್ತು ಕರ್ಮಾಕರ್ಮಗಳಿಗನುಸರಿಸಿ ದೇಹಪಾತದ ನಂತರ ಅವನು ಮೂ-ಬಗೆಯ ಗತಿಗಳಲ್ಲಿ ಒಂದನ್ನು ಹೊಂದಬಲ್ಲನು. ಧರ್ಮಾಧರ್ಮ, ಪುಣ್ಯಾಪುಣ್ಯಾದಿಗಳನ್ನು ಲೆಕ್ಕಿಸದೆ ಕೇವಲ ಒಂದು ಪ್ರಾಣಿಯಂತೆ ಯಾವನೊಬ್ಬ ಜೀವಾತ್ಮನು ಜೀವನಕಾಲದಲ್ಲಿ ನಡಕೊಂಡಿದ್ದರೆ ಅವನು ಮರಣಪಶ್ಚಾತ್ ಮನುಷ್ಯಯೋನಿಯಲ್ಲಿ ಅಥವಾ ತಿರ್ಯಗ್ಯೋನಿಗಳಲ್ಲಿ ಹುಟ್ಟುವನು. ಅವನು ಅತ್ತ ಸ್ವರ್ಗಕ್ಕೂ ಹೋಗನು, ಅಮೃತತ್ವದ ಮಾತಂತೂ ದೂರೇ ಉಳಿಯಿತು. ಯಾವನೊಬ್ಬನು ಧಾರ್ಮಿಕ ರೀತಿಯಿಂದ ನಡಕೊಂಡು ಪುಣ್ಯಸಂಚಯ ಮಾಡಿದ್ದರೆ ಆ ಪುಣ್ಯವು ತೀರುವವರೆಗೆ ಅವನು ಸ್ವರ್ಗದಲ್ಲಿ ಇದ್ದು ಮುಂದೆ ಪುನಃ ನರಜನ್ಮವನ್ನು ತಾಳುವನು. ಯಾವ ಆತ್ಮನು ಬ್ರಹ್ಮಚರ್ಯದಿಂದಿದ್ದು, ಆತ್ಮಸಾಧನವನ್ನು ಮಾಡುತ್ತ ಬಂದಿರುವನೊ, ಪ್ರೇಯೋಮಾರ್ಗವನ್ನು ತ್ಯಜಿಸಿ ಶ್ರೇಯೋಮಾರ್ಗದಿಂದ ನಡೆಯುತ್ತ ಬಂದಿರುವನೊ, ಅನಾಸಕ್ತ ರೀತಿಯಿಂದ ಜೀವಿಸುತ್ತ ಇರುವನೊ ಅವನು ಇಲ್ಲಿಯೂ ಹುಟ್ಟುವದಿಲ್ಲ, ಸ್ವರ್ಗಕ್ಕೂ ಹೋಗುವದಿಲ್ಲ. ಆದರೆ ಅವನು ಅಮೃತನಾಗುವನು. ಆ ಆತ್ಮನೆ ಆತ್ಮಜ್ಞಾನಿಯಾಗಿ ಆತ್ಯಂತಿಕ ಶಾಂತಿಯನ್ನು ಪಡೆಯುವನು. ಇತರರಿಗೆ ಆ ಸ್ಥಾನವು ದೊರಕದು.

ಸ್ವರ್ಗ, ಅಮೃತತ್ವ ಇವುಗಳ ನಡುವೆ ಸ್ಪಷ್ಟವಾದ ಭೇದವನ್ನು ಉಪನಿಷತ್ಕಾರರು ಮಾಡುವಂತೆ ಕರ್ಮಜ್ಞಾನಗಳ ನಡುವಿನ ಭೇದವನ್ನೂ ಅವರು ತಿಳಿಯಾಗಿ ಹೇಳುವರು. ಬಂಧಕವಿರುವದು ಕರ್ಮದ ಸ್ವಭಾವವು. ಯಾಕಂದರೆ ಕ್ರಿಯೆಯೊಡನೆ ಪ್ರತಿಕ್ರಿಯೆ ಕಟ್ಟಿಟ್ಟಂತೆ. ಆದುದರಿಂದ ಕರ್ಮಯುಕ್ತ ಜೀವನದಿಂದ ಮುಕ್ತಿ ದೊರಕದು. ಜ್ಞಾನವೆ ಮುಕ್ತಿಸಾಧನವು ಎಂಬುದು ಉಪನಿಷತ್ಕಾರರ ಸಾಮಾನ್ಯ ಸಿದ್ಧಾಂತವು. ಸತ್ಕರ್ಮಗಳು ನಮ್ಮನ್ನು ಸ್ವರ್ಗದತ್ತ ಒಯ್ಯುವವು. ಆದರೆ ಕರ್ಮಗಳು ಎಷ್ಟೇ ಒಳ್ಳೆಯವಿದ್ದರೂ ಜನ್ಮಮರಣ

ಚಕ್ರವನ್ನು ತಪ್ಪಿಸಿ ಅವು ನಮಗೆ ಅಮೃತತ್ವವನ್ನು ದಯಪಾಲಿಸ-ಲಾರವು. ಹೀಗಿದ್ದರೂ ಕರ್ಮವೆಂಬುದು ಅಪರಿಹಾರ್ಯವೆಂಬುದನ್ನು ಉಪನಿಷತ್ಕಾರರು ಅರಿತಿದ್ದರು. ನಮ್ಮ ನಿಷ್ಕ್ರಿಯತೆ ಸಹ ಒಂದು ಕರ್ಮವೇ ಎನಿಸುವದು. ಜೀವನ ಎಂಬುದೂ ಒಂದು ಕರ್ಮವಿರುವದು, ಸಾವು ಸಹ ಒಂದು ಕರ್ಮವೆ. ಈ ರೀತಿ ಜೀವನವು ಒಂದು ಅನಂತಕ್ರಿಯಾಮಾಲೆ. ಇಂಥ ತೊಡಕಿನೊಳಗಿಂದ ಕೂಡ ಋಷಿಗಳು ಒಂದು ಮಾರ್ಗವನ್ನು ಹುಡುಕಿದರು. ಅದು ಮುಂದೆ ಗೀತೆಯಲ್ಲಿ ಪೂರ್ಣತ್ವವನ್ನು ಹೊಂದಿತು. ಫಲದ ಬಗ್ಗೆ ಅನಾಸಕ್ತಿಯೆ ಆ ಮಾರ್ಗ. ಫಲಕಾಮನೆ ಇಲ್ಲದೆ, ಅನಾಸಕ್ತ ವೃತ್ತಿಯಿಂದ ನಾವು ಕರ್ಮಗಳನ್ನಾಚರಿಸಿದರೆ ಕರ್ಮವು ಬಂಧನಕಾರಿಯಾಗಲಾರದು. ಕರ್ಮದ ಪ್ರತಿಕ್ರಿಯೆಗಳನ್ನು ನಾವು ಅನಾಸಕ್ತಿಯಿಂದ ನಿರ್ಮೂಲಗೊಳಿಸಬಲ್ಲೆವು. ಮುಂದೆ ಕ್ರಿಯೆ ಪ್ರತಿಕ್ರಿಯೆ ಇವೆರಡನ್ನೂ ನಾವು ಸಾಕ್ಷಿಯಾಗಿ ನೋಡುತ್ತ ಕೂಡಬಹುದು. ಈ ದೃಷ್ಟಿಯಿಂದಲೆ, ಮನೋಗತವಾದ ಕಾಮನೆಗಳಿಂದ ಮುಕ್ತನಿದ್ದ ಜ್ಞಾನಿ ಅಕ್ಷಯ ಆನಂದವನ್ನನುಭವಿಸುವನೆಂದು ಉಪನಿಷತ್ಕಾರರು ಹೇಳುವರು.

ಇನ್ನು ಜ್ಞಾನವೆಂದರೇನು? ಅಧ್ಯಾತ್ಮ ಜ್ಞಾನವೆ, ಪ್ರತ್ಯಕ್ಷ ಕೃತಿಯಲ್ಲಿ ಆಚರಿಸಲಾದ ಅಧ್ಯಾತ್ಮ ಜ್ಞಾನವೆ ನಿಜವಾದ ಜ್ಞಾನವು. ಕೇವಲ ಬೌದ್ಧಿಕ ಜ್ಞಾನವು ಮಹತ್ವದ್ದಲ್ಲ. ಆತ್ಮನು ಹಾಗೆ ಇರುವನು ಹೀಗೆ ಇರುವನು ಎಂಬ ಕಾಲ್ಪನಿಕ ಜ್ಞಾನವೂ ನಿಜ ಜ್ಞಾನವಲ್ಲ. ಅನುಭಾವ, ಸ್ಫೂರ್ತಿಜ್ಞಾನ, ತನ್ಮ-ಯತೆಯ ಮೂಲಕ ಉಂಟಾದ ಜ್ಞಾನ ಇದೇ ಉಪನಿಷತ್ತಿನ ದೃಷ್ಟಿಯಿಂದ ಉಪಯುಕ್ತವು. ಬುದ್ಧಿ ಎಂಬುದು ನಮ್ಮ ಶಕ್ತಿಗಳಲ್ಲಿ ಒಂದು. ಅದು ಅಷ್ಟು ಪ್ರಬಲವಾದುದೂ ಅಲ್ಲ. ಬೌದ್ಧಿಕ ಜ್ಞಾನವೆಂದರೆ ಮಿದುಳಿನಲ್ಲಿ ಉಂಟಾದ ಒಂದು ತರಂಗ ಮಾತ್ರ. ಅದರಿಂದ ಜೀವನ ಪರಿವರ್ತನವಾಗಲಾರದು. ಜಗತ್ತು ಈಶಾವಾಸ್ಯವಿರುವದು, ಪರಮಾತ್ಮನು ಜಗದ್ವ್ಯಾಪಿಯು ಎಂದು ಬುದ್ಧಿಯಿಂದ ನಾವು ತಿಳಿದರೆ ಅದಕ್ಕೆ ವಿಶೇಷ ಮಹತ್ವವಿಲ್ಲ. ಹೀಗಿರುವದರಿಂದಲೆ ನಮ್ಮ ಮೇಧಾಶಕ್ತಿಯಿಂದ ಪರಮಾತ್ಮಜ್ಞಾನವಾಗಲಾರದು ಎಂದು ಅವರು ಹೇಳುವರು. ಮನದರಿಕೆ, ಭಾವದರಿಕೆ, ಆ ಅರಿಕೆಯೊಡನೆ ನಮ್ಮ ಶರೀರ ಪ್ರಾಣಗಳ ತಾಳಮೇಳ ಇವೆಲ್ಲ ಕೂಡಿ ಉಪನಿಷತ್ತಿನಲ್ಲಿ ಅಭಿಪ್ರೇತವಾದ ಜ್ಞಾನವೆನಿಸುವದು. ಅದು ಸ್ಫುರಣಾತ್ಮಕವಿದ್ದರೆ ಮಾತ್ರ ಆ ಸಾಮರ್ಥ್ಯವು ಅದರಲ್ಲಿ ಬರಬಲ್ಲದು. ಆತ್ಮದ ಏಕತ್ವವನ್ನು ನಾವು ಕ್ಷಣಕ್ಷಣಕ್ಕೂ ಅನುಭವಿಸಿದರೆ ಅದು ನಿಜವಾದ ಅಧ್ಯಾತ್ಮ ಜ್ಞಾನವು. ನಿಜಜ್ಞಾನವು ಹೊಳೆದ ಹೊರತು ಕಾಯಾ

ವಾಚಾಮನಗಳಲ್ಲಿ ಏಕರೂಪತೆ ಬರುವದು ಕಠಿಣ. ಎಲ್ಲೆಲ್ಲಿಯೂ ಏಕಾತ್ಮನನ್ನೆ ಕಾಣುವ ಜ್ಞಾನಿಗೆ ದುಃಖವೆಲ್ಲಿಯದು, ಶೋಕವೆಲ್ಲಿಯದು ಎಂದು ಉಪನಿಷತ್ಕಾರರು ಕೇಳುವರು. ಅದು ಅಧ್ಯಾತ್ಮ ಜೀವನದ ಪರಮಾವಧಿಯು.

ಈ ಬಗೆಯ ಸ್ಫೂರ್ತ ಜ್ಞಾನವುಂಟಾಗಲು ಮಾಡತಕ್ಕ ಸಾಧನವಾವುದು? ಅದಕ್ಕೆ ಯೋಗ, ಯೋಗಪಥ, ಸಾಧನೆ, ಬ್ರಹ್ಮಚರ್ಯ ಎಂಬ ಹೆಸರು. ಸುತ್ತಲು ಪರಮಾತ್ಮನು ತಿಂತಿಣಿಯಾಗಿ ತುಂಬಿರುವನು. ಈ ಚಿಕ್ಕ ದೇಹದಲ್ಲಿ ಅಹಂಭಾವಪೂರ್ಣ ಚಟುವಟಿಕೆಗಳಲ್ಲಿ ತೊಡಗಿದ ಜೀವಾತ್ಮನಿರುವನು. ಈ ಅಹಂಕವಚವನ್ನು ಯೋಗದಿಂದ ಒಡೆದು ಜೀವವು ಅನಂತ ವಿಶ್ವಾತ್ಮನಲ್ಲಿ ಒಡಗೂಡಬಲ್ಲದು. ಸಾಮಾನ್ಯತಃ ಇಂದ್ರಿಯಗಳು ಹಾಗೂ ಅವುಗಳ ವಿಷಯಗಳು ಇವುಗಳಲ್ಲಿಯೆ ನಾವು ತೊಡಗಿರುತ್ತೇವೆ, ಅವುಗಳಲ್ಲಿ ಆಸಕ್ತರಾಗಿರುತ್ತೇವೆ. ಆದರಾಚೆ ನಮ್ಮ ದೃಷ್ಟಿ ಹರಿಯುವದಿಲ್ಲ. ಈ ಪ್ರೇಯ ಮಾರ್ಗವನ್ನು ಬಿಟ್ಟು ಶ್ರೇಯ ಮಾರ್ಗವನ್ನು ಹಿಡಿಯಿರೆಂದು ಉಪನಿಷತ್ತು ಹೇಳುವದು. ಹೊರಗಿನ ವಸ್ತುಗಳತ್ತ ಹರಿಯುವ ನಿಮ್ಮ ಚಿತ್ಛಕ್ತಿಗಳನ್ನು ಎಳೆದುಕೊಂಡು ಒಳಗಿನ ಆತ್ಮನತ್ತ ಹರಿಯಗೊಡಬೇಕು ಅಂದರೆ ಪ್ರತ್ಯಗಾತ್ಮನ ದರ್ಶನವಾಗುವದು. ಇದೇ ಯೋಗದ ಮುಖ್ಯ ಬೀಜಮಂತ್ರವು. ಆತ್ಮನನ್ನು ಅರಿತುಕೊಳ್ಳುವ ಈ ಪ್ರಯತ್ನದಲ್ಲಿ ನಾವು ತೊಡಗಿದೆವೆಂದರೆ ಒಂದಿಲ್ಲೊಂದು ದಿನ ನಮಗೆ ಆತ್ಮದರ್ಶನವಾಗುವದು, ಯಾಕಂದರೆ ಆ ಆತ್ಮನು ಅಲ್ಲಿಯೇ ಇರುವನು. ಈ ಯೋಗವೆಂಬುದು ಕಾಣಲಿಕ್ಕೆ ಸುಲಭ ಕಂಡರೂ ಅಷ್ಟು ಸುಲಭವಿಲ್ಲ. ಪೂರ್ಣ ಸಂಯಮೀ ಜೀವನದ ಹೊರತು ಇದು ಸಾಧ್ಯವಿಲ್ಲ. ನಾವು ನಿಜವಾದ ಯೋಗಿಗಳಾಗಬೇಕಾದರೆ ನಮ್ಮ ಜೀವನ ಸರ್ವಸ್ವವನ್ನು ನಾವು ಪರಿವರ್ತಿಸಲಿಕ್ಕೆ ಬೇಕು. ಎಷ್ಟೇ ಕಠಿಣವಿದ್ದರೂ ಇದೊಂದೇ ಮಾರ್ಗವಿರುವದು. ಇದನ್ನೆ ಬೆರಳುದೋರಿ ಉಪನಿಷತ್ತು ನಮ್ಮ ಮುಂದೆ ಇಡುವದು. ಇದು ಕತ್ತಿಯ ಮೊನೆಯ ಮೇಲೆ ನಡೆದಂತೆ ಕಠಿಣವು. ಇದೇ ಪರಮಾತ್ಮನತ್ತ ನಮ್ಮನ್ನು ಒಯ್ಯಬಲ್ಲದು.

ಹಿಂದೀ ತತ್ವಜ್ಞಾನದಲ್ಲಿ ಉಪನಿಷತ್ತುಗಳ ಸ್ಥಾನವಾವುದು ಇದನ್ನು ಇನ್ನು ನೋಡುವ. ಉಪನಿಷತ್ತುಗಳನ್ನು ಬಿಟ್ಟು ಹಿಂದೀ ತತ್ವಜ್ಞಾನದ ವಿಚಾರವನ್ನು ಮಾಡುವುದೆಂದರೆ ಮೂಗನ್ನು ಬಿಟ್ಟು ಮುಖ ನೋಡಿದಂತೆ. ವೇದಗಳು ಅತ್ಯಂತ ತೇಜಃಪುಂಜ ಗ್ರಂಥಗಳೆಂಬುದೇನೋ ನಿಜ. ಆದರೆ ಉಪನಿಷತ್ತುಗಳು ಅವಕ್ಕೂ ಮಹತ್ವವುಳ್ಳವುಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಹಿಂದೀ ತತ್ವಜ್ಞಾನ ಮತ್ತು ಉಪನಿಷತ್ತುಗಳು ಇವು ಏಕಜೀವವಿರುವವೆಂದು ಅಂದರೂ ತಪ್ಪಲ್ಲ. ಸತ್ಯ ನಿತ್ಯ ಆತ್ಮನನ್ನು ಕುರಿತು ಉಪನಿಷತ್ತು ಬೋಧ ಮಾಡುವ್ರದರಿಂದ ಅವುಗಳ ಮಹತ್ವವು ಇತರ ವೇದಭಾಗಗಳಿಗಿಂತ ಹೆಚ್ಚು ಇರುವದು. ಆದುದರಿಂದಲೆ ಅವು ಹಳೆಯವೆನಿಸುವದಿಲ್ಲ. ಕರ್ಮಕಾಂಡವು ಹಳೆಯದಾಗಿ ಹಾಳಾಗಿ ಹೋದರೂ ಜ್ಞಾನಕಾಂಡದ ಹೊಸತನವು ಇನ್ನೂ ಮಾಸಿಲ್ಲ ಮಸಳಿಸಿಲ್ಲ. ಅವುಗಳ ಜ್ಞಾನವು ದೇಶದೇಶಾಂತರಗಳಿಗೆ ಹಬ್ಬಿದಂತೆ ಅವುಗಳ ಪರಿಮಳವು ಮತ್ತಷ್ಟು ಸುಗಂಧದಿಂದ ತುಂಬುತಿದೆ.

ಹಿಂದೀ ತತ್ವಗ್ರಂಥಗಳಲ್ಲಿ ಉಪನಿಷತ್ತುಗಳು ಎಲ್ಲಕ್ಕೂ ಪ್ರಾಚೀನವಾದವು ಗಳು. ಅವುಗಳನ್ನಭ್ಯಸಿಸದೆ ಗತಿಯಿಲ್ಲ. ಭಾರತೀಯ ತತ್ವಜ್ಞಾನಕ್ಕೆ ಅವು ಬೀಜಭೂತವಾಗಿರುವವು. ಸಾಂಖ್ಯಯೋಗಾದಿ ತತ್ವಜ್ಞಾನಗಳ ತವರೂರು ಉಪನಿಷತ್ತಿನಲ್ಲಿಯೆ ಇರುವದು. ಮುಂದೆ ಕವಲೊಡೆದು ಪ್ರತ್ಯೇಕ ದರ್ಶನ ಗಳೆನಿಸಿಕೊಂಡ ಎಷ್ಟೊ ತತ್ವಜ್ಞಾನಗಳು ಉಪನಿಷತ್ತಿನಿಂದಲೆ ಹೊರಹೊರಟ ವೆಂದು ಸಾಧಾರವಾಗಿ ಸಿದ್ಧಮಾಡಬಹುದು. ಈ ವಿಷಯದಲ್ಲಿ ರುಚಿಯುಳ್ಳ ವರು 'ಉಪನಿಷದ್ರಹಸ್ಯ' ಎಂಬ ಗ್ರಂಥವನ್ನು ನೋಡಬೇಕು.

ಇದಲ್ಲದೆ ಪುರಾತನಕಾಲದಿಂದ ಉಪನಿಷತ್ತುಗಳು ಭಾರತೀಯ ತತ್ವ-ಜ್ಞಾನದ ಪ್ರಮಾಣಗ್ರಂಥಗಳೆಂದು ಮನ್ನಿಸಲಾಗಿವೆ. 'ಪ್ರಸ್ಥಾನತ್ರಯಿ' ಯಲ್ಲಿ ಅವುಗಳಿಗೆ ಮೊಟ್ಟಮೊದಲಿನ ಸ್ಥಾನವಿದೆ. ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಇವು ಇನ್ನೆರಡು ಆ ತ್ರಯಿಯೊಳಗಿನ ಪ್ರಮಾಣಗ್ರಂಥಗಳು. ಇವೆರಡರಲ್ಲಿ ಬ್ರಹ್ಮಸೂತ್ರಗಳು ಉಪನಿಷತ್ತುಗಳ ತತ್ವಜ್ಞಾನವನ್ನೆ ಏಕಸೂತ್ರ ತೆಯ ದೃಷ್ಟಿಯಿಂದ ವಿಮರ್ಶಿಸಿ ಭಾಷ್ಯರೂಪದಿಂದ ಹೇಳುವ ಸೂತ್ರಗ್ರಂಥ ಗಳು. ಗೀತೆಯಂತೂ ಉಪನಿಷದ್ರೂಪಿ ಆಕಳುಗಳ ಹಾಲು ಇದ್ದಂತೆ. ಇದ ನ್ನೆಲ್ಲ ನೋಡಲಾಗಿ ಉಪನಿಷತ್ತುಗಳ ಮಹತ್ವವು ತಾನಾಗಿ ಹೊಳೆಯುವದು. ಆಚಾರ್ಯತ್ರಯರು ಈ ಪ್ರಸ್ಥಾನತ್ರಯಿಯ ಮೇಲೆ ಭಾಷ್ಯಗ್ರಂಥಗಳನ್ನು ಬರೆದು ಒಂದು ಪರಂಪರೆಯನ್ನು ಪ್ರಸ್ಥಾಪಿಸಿದ್ದರಿಂದ ಭಾರತೀಯ ತತ್ವ-ಜ್ಞಾನವನ್ನು ಬಲ್ಲೆನೆಂದು ಹೇಳಬಯಸುವ ಯಾವದೇ ಪಂಡಿತನು ಅಥವಾ ವಿದ್ವಾಂಸನು ಉಪನಿಷತ್ತುಗಳನ್ನು ದುರ್ಲಕ್ಷಿಸಲಾರನು.

ಭಾರತೀಯ ತತ್ವಜ್ಞಾನದಲ್ಲಿ ಉಪನಿಷತ್ತುಗಳು ಹಾಸು ಹೊಕ್ಕಿನಂತೆ ಸೇರಿಕೊಂಡಿವೆ ಎಂದು ಹೇಳಬಹುದು. ಅನೇಕ ಉಪನಿಷದ್ವಾಕ್ಯಗಳು ಇದ್ದ ಕ್ಕಿದ್ದ ಹಾಗೆ ಇತರ ತತ್ವಗ್ರಂಥಗಳಲ್ಲಿ ಉದ್ಧೃತವಾದುದು ಕಂಡು ಬರುವದು.

ಅನೇಕ ವಾಕ್ಯಗಳು ಅಥವಾ ಶಬ್ದಗಳು ಭಾರತೀಯ ತತ್ವಜ್ಞಾನದ ಪರಿಭಾಷೆಯಲ್ಲಿ ಒಂದಾಗಿ ಹೋಗಿವೆ. 'ಸರ್ವಂ ಖಲ್ವಿದಂ ಬ್ರಹ್ಮ', 'ತತ್ವಮಸಿ', 'ಸತ್ಯಂ ಜ್ಞಾನಮನಂತಂ ಬ್ರಹ್ಮ', ಮುಂತಾದವುಗಳು ಭಾರತೀಯ ತತ್ವಜ್ಞಾನದ ಯಾವದೇ ಪರ್ಯಾಯವನ್ನು ಇಲ್ಲವೆ ಶಾಖೋಪಶಾಖೆಯನ್ನು ನೋಡಿದರೂ ಅಲ್ಲಿ ಕಂಡುಬರುವವು. 'ಅವಿದ್ಯಾ', 'ಪಂಚಕೋಶ', 'ಶ್ರೇಯಸ್ ಪ್ರೇಯಸ್', 'ಯೋಗಸಿಧಿ', 'ಅಮೃತತ್ವ' ಮುಂತಾದ ಶಬ್ದಗಳೂ ಕಲ್ಪನೆಗಳೂ ತತ್ವಜ್ಞಾನ ವಾಙ್ಮಯದಲ್ಲಿ ಅಲ್ಲಲ್ಲಿ ದೃಗ್ಗೋಚರವಾಗುವವು. ಹಲವು ಸುಂದರವಾದ ಉಪಮಾರೂಪಕಾರಿಗಳ ಕಥೆಯೂ ಹೀಗೆಯೆ ಇರುವದು. ದೇಹವೆ ರಥ, ಆತ್ಮನೆ ಸಾರಥಿ, ಇಂದ್ರಿಯಗಳು ಕುದುರೆಗಳು ಎಂಬ ರೂಪಕ, ನೀರಿನಿಂದ ಅಲಿಪ್ತವಿರುವ ಕಮಲ, ಸಮುದ್ರಕ್ಕೆ ಹೋಗಿ ಕೂಡಿ ನಿರ್ನಾಮವಾಗುವ ನದಿಗಳು ಮುಂತಾದ ರೂಪಕಗಳು ಸಂಸ್ಕೃತ ಪ್ರಾಕೃತ ತತ್ವಜ್ಞಾನ ವಾಙ್ಮಯದಲ್ಲಿ ಬೇಕಾದಷ್ಟು ರೂಢವಾಗಿರುವವು. ಈ ರೀತಿ ಉಪನಿಷತ್ತುಗಳು ಕೇವಲ ಕಾಲದೃಷ್ಟಿಯಿಂದ ಮೊದಲು ಆದವೆಂದಲ್ಲ, ಮಹತ್ವದಲ್ಲಿಯೂ ಅವು ಪ್ರಥಮ ಸ್ಥಾನವನ್ನು ಹೊಂದಿವೆ. ಆಂತರಿಕ ತಾಳಮೇಳ ಮತ್ತು ಶಾಂತಿಸಮಾಧಾನ, ಐಕ್ಯ ಮತ್ತು ಸಮರಸತೆ, ದಿವ್ಯಜ್ಞಾನ ಮತ್ತು ಅಮೃತತ್ವ ಇವುಗಳ ಬಗ್ಗೆ ಮಾನವೀ ಹೃದಯದಲ್ಲಿ ಹಸಿವು ಇರುವವರೆಗೆ ಉಪನಿಷತ್ತುಗಳು ಕತ್ತಲೆಯಲ್ಲಿಯ ಕೈದೀಪದಂತೆ ಪ್ರಕಾಶದಾಯಿಯಾಗುವವು. ಉಪನಿಷದೃಷಿಗಳ 'ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ, ಅಸತೋ ಮಾ ಸದ್ಗಮಯ', ಎಂಬ ಮಹಾ ಪ್ರಾರ್ಥನೆಯು ದಶದಿಕ್ಕುಗಳಲ್ಲಿ ಪ್ರತಿಯೊಬ್ಬನ ಅಂತಃಕರಣದಿಂದ ಹೊರಹೊಮ್ಮಿ ಗಗನಕ್ಕೇರುವದು.

ಉಪನಿಷತ್ತುಗಳು ಒಳ್ಳೆ ಮೌಲಿಕ ತತ್ವಗ್ರಂಥಗಳಿರುವವಲ್ಲದೆ ಅವುಗಳಲ್ಲಿ ಸುಂದರ ವಾಙ್ಮಯ ಭಾಗಗಳೂ ಇರುವವು. ಕಠ, ಮುಂಡಕ, ತೈತ್ತಿರೀಯ, ಬೃಹದಾರಣ್ಯಕಗಳಲ್ಲಿರುವ ಹಲವು ಪರಿಚ್ಛೇದಗಳು ಸಾಹಿತ್ಯ ದೃಷ್ಟಿಯಿಂದ ಉಚ್ಚ ತರಗತಿಯವಿರುವವು. ಯಮದೇವರು ನಚಿಕೇತನನ್ನು ಪ್ರಲೋಭಿಸುವ ಸಂದರ್ಭದಲ್ಲಿ ಆಡಿದ ಮಾತುಗಳು, ದೇಹವನ್ನು ರಥಕ್ಕೆ ಹೋಲಿಸಿ ನುಡಿದ ಉಕ್ತಿಗಳು, ಗುರುಗಳು ಸಮಾವರ್ತನ ಕಾಲದಲ್ಲಿ ಶಿಷ್ಯರಿಗೆ ಕೊಟ್ಟ ವಕ್ತೃತ್ವಪೂರ್ಣ ಉಪದೇಶ, ಮುಂತಾದವುಗಳು ವಾಙ್ಮಯದೃಷ್ಟಿಯಿಂದ ಪ್ರೌಢವಿರುವವು. ಉಪನಿಷತ್ತಿನ ಹಲವು ಭಾಗಗಳು ಗಡುಸಾಗಿಯೂ ಹಳೆತರದ

ಭಾಷೆಯಿಂದ ಕೂಡಿದವೂ ಇರುವವು. ಆದರೆ ಮೇಲೆ ಕಾಣಿಸಿದಂಥ ಸುಂದರ ಲಾಲಿತ್ಯಪೂರ್ಣ ಭಾಗಗಳು ಅಲ್ಲಲ್ಲಿ ಇರುವುದರಿಂದ ಉಪನಿಷತ್ತುಗಳ ಅಭ್ಯಾಸದ ಕಾಲಕ್ಕೆ ವಾಚಕರಿಗೆ ಸಾಹಿತ್ಯಾನಂದವೂ ಸ್ವಲ್ಪ ಮಟ್ಟಿಗೆ ದೊರೆಯುವದು. ಮುಂದೆ ಬಂದ ಹಲವು ಲೇಖಕರು ಉಪನಿಷತ್ತಿನಲ್ಲಿಯ ಸುಂದರ ಭಾಗಗಳನ್ನಾಗಲಿ, ವಾಕ್ಯವಿಶೇಷಗಳನ್ನಾಗಲಿ ಎತ್ತಿ ತಮ್ಮ ತಮ್ಮ ಲೇಖನಗಳಲ್ಲಿ ಸೇರಿಸಿಕೊಂಡಿರುವರು. ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ಗ್ರಂಥಗಳಲ್ಲಿ ಒಂದಾದ ಗೀತೆ ಕೂಡ ಉಪನಿಷತ್ತುಗಳಲ್ಲಿಯ ಹಲವೊಂದು ಸುಂದರ ವಾಕ್ಯಗಳನ್ನು ಇಲ್ಲವೆ ವಾಕ್ಯಖಂಡಗಳನ್ನು ಎತ್ತಿ ಸೇರಿಸಿಕೊಂಡಿರುವದು.

ಇನ್ನು ಉಪನಿಷತ್ತುಗಳ ವಿರುದ್ಧ ಹಲವರು ಎತ್ತಿದ ಆಕ್ಷೇಪಗಳನ್ನು ಕುರಿತು ಎರಡು ಮಾತುಗಳನ್ನು ವಿಮರ್ಶಿಸಿ ಈ ಪ್ರಸ್ತಾವನೆಯನ್ನು ಮುಗಿಸುವೆನು. ಅನೇಕ ವಿದ್ವಾಂಸರು ಮತ್ತು ತತ್ವಜ್ಞರು ಉಪನಿಷತ್ತತ್ವಜ್ಞಾನವನ್ನು ಗುಣಗ್ರಹಣಪೂರ್ವಕ ಹೊಗಳಾಡಿದ್ದರೆ ಹಲವರು ತೆಗಳಿದ್ದೂ ಉಂಟು. ಆ ಎಲ್ಲ ಆಕ್ಷೇಪಗಳಿಗೆ ಇಲ್ಲಿ ಉತ್ತರ ಕೊಡುವದು ಅಸಾಧ್ಯವು. ಆದರೆ ಒಂದೆರಡು ಗಂಭೀರ ಆಕ್ಷೇಪಗಳನ್ನು ನಿರಾಕರಿಸುವದು ಅತ್ಯವಶ್ಯವು. ಉಪನಿಷತ್ತುಗಳಲ್ಲಿ ನಿರಾಶಾವಾದವು ಮತ್ತು ಲೋಕಾಂತರತ್ವವು ತುಂಬಿದೆ ಎಂಬುದೊಂದು ದೊಡ್ಡ ಆರೋಪವು ಉಪನಿಷತ್ತುಗಳ ಮೇಲೆ ಮೇಲಿಂದ ಮೇಲೆ ಎಸೆಯಲಾಗುವದು. ಉಪನಿಷತ್ತುಗಳಲ್ಲಿ ಸುಬದ್ಧವಾದ ತತ್ವಜ್ಞಾನವೆಂಬುದಿಲ್ಲೇ ಇಲ್ಲ, ಕೇವಲ ಹಲವು ಸ್ಫೂರ್ತ ವಚನಗಳಿವೆ, ಎಂಬುದು ಎರಡನೆ ಆಕ್ಷೇಪ.

ವಿಮರ್ಶಿಸಿ ನೋಡಿದರೆ ಇವೆರಡೂ ಅರೆಸತ್ಯಗಳೆಂದೂ ಅವುಗಳಿಂದ ಉಪನಿಷತ್ತುಗಳಿಗೆ ಯಾವ ಕುಂದೂ ಉಂಟಾಗಿಲ್ಲವೆಂದೂ ತಿಳಿದುಬರುವದು. ಉಪನಿಷತ್ತುಗಳು ಯಾವ ಕಾಲದಲ್ಲಿ ಮತ್ತು ಪರಿಸ್ಥಿತಿಯಲ್ಲಿ ರಚಿಸಲಾದವೆಂಬದನ್ನು ಮೊದಲು ನೋಡುವ. ಯಜ್ಞಪ್ರಧಾನವಾದ ಕರ್ಮಕಾಂಡದ ಸುಗ್ಗಿ ಮುಗಿದು ಅವುಗಳಿಂದ ಆತ್ಯಂತಿಕ ಸಮಾಧಾನವು ದೊರಕದು ಎಂಬ ಭಾವನೆ ಜನರಲ್ಲಿ ಬರಲಾರಂಭಿಸಿತ್ತು. ಆಂತರಿಕ ಶಾಂತಿಯ ಸಲುವಾಗಿ ಜನರು ಹಾತೊರೆಯುತಿದ್ದರು. ಬಾಹ್ಯ ಸೃಷ್ಟಿಯು ಎಷ್ಟೇ ಸಮೃದ್ಧವೂ ಭೋಗವಸ್ತುಗಳಿಂದ ತುಂಬಿದ್ದೂ ಇದ್ದರೂ ಅದು ಆತ್ಮಾನಂದವನ್ನು ಕೊಡಲೀಯದು ಎಂಬುದು ಹೊಳೆಯಲಾರಂಭಿಸಿತ್ತು. ಇಂಥ ಸಂಧಿಗೆ 'ವಿತ್ತದಿಂದ ಮನುಷ್ಯನಿಗೆ ಸಮಾಧಾನವಾಗದು' ಎಂಬ ಆತ್ಯಂತಿಕ ಸತ್ಯವನ್ನು ಉಪನಿಷತ್ತು

ಸಾರಿತು. ಪರಾವಿದ್ಯೆಯೆ ಮನಃಶಾಂತಿಯನ್ನು ಸಲ್ಲಿಸಬಹುದು, ಎಂಬುದು ಉಪನಿಷತ್ತುಗಳ ಸಂದೇಶವು.

ಈ ಪ್ರಕಾರವಾಗಿ ಉಪನಿಷತ್ತುಗಳು ಮನುಷ್ಯನ ಮನಸನ್ನು ಯಜ್ಞ-ಯಾಗಾದಿ ಕರ್ಮಕಾಂಡದಿಂದ ಧ್ಯಾನ ಸಮಾಧಿಗಳತ್ತ, ವಿಷಯಾಸಕ್ತ ಇಂದ್ರಿಯಗಳಿಂದ ಆತ್ಮಸಂಯಮದತ್ತ, ಭೌತಿಕ ಸಂಪತ್ತಿನಿಂದ ಆಧ್ಯಾತ್ಮಿಕ ಶಾಂತಿಯತ್ತ, ಬಾಹ್ಯ ಸೃಷ್ಟಿಯಿಂದ ಆಂತರಿಕ ಚೈತನ್ಯದತ್ತ, ಎಳೆಯತೊಡಗಿದವು. ಹೀಗೆ ಮಾಡುವಾಗ ಸ್ವಾಭಾವಿಕವಾಗಿಯೆ ಅವು ಆಧ್ಯಾತ್ಮಿಕ ಜೀವನವನ್ನು ಹೆಚ್ಚು ಎತ್ತಿ ಹಿಡಿದಿರುವವು. ಇದೇ ಉಪನಿಷತ್ತುಗಳ ಲೋಕಾಂತರತ್ವವು. ಇದೇ ಒಂದು ದೋಷವೆಂದು ಯಾರಾದರೂ ಭಾವಿಸುತಿದ್ದರೆ ಉಪನಿಷತ್ತುಗಳು ಆ ದೋಷವನ್ನು ಸಂತೋಷದಿಂದ ಒಪ್ಪುವವು! ಆದರೆ ಈ ನಮ್ಮ ಜೀವನವನ್ನು ಕುಗ್ಗಿಸಿ ಮುಗ್ಗಿಸಿ ಹೀಯಾಳಿಸಿ ಜಡುವಂತೆ ನಮ್ಮನ್ನು ಉಪನಿಷತ್ತುಗಳು ಪ್ರೇರೇಪಿಸುವವೊ ಈ ಲೋಕವನ್ನು ತಿರಸ್ಕರಿಸಿ ಕಾಲ್ಪನಿಕ ಲೋಕಾಂತರದ ಆಕಾಂಕ್ಷೆಗಳಿಂದ ನಮ್ಮ ಮನಸನ್ನು ತುಂಬುವವೊ ಹೇಗೆ ಎಂಬುದು ಮುಖ್ಯ ಪ್ರಶ್ನೆ. ಅವು ಹಾಗೆ ಎಂದೂ ಹೇಳಿಲ್ಲ ಎಂದು ಕಂಠೋಕ್ತವಾಗಿ ಸಾರಬಲ್ಲೆವು. ಇಷ್ಟೇ ಅಲ್ಲ, ಯೋಗ್ಯ ಕಾಲಕ್ಕೆ ಉತ್ಸಾಹಪೂರ್ಣವಾದ ಹಾಗೂ ದೇಹಮನಗಳ ಆರೋಗ್ಯಕೆಡದ ಭೌತಿಕ ಜೀವನವನ್ನು ಉಪನಿಷತ್ಕಾರರು ಹೊಗಳಿರುವರು. ಎಲ್ಲವೂ ಪರಮಾರ್ಥ ಸಾಧನರೂಪವಾಗಿರಬೇಕೆಂಬುದಿಷ್ಟೇ ಅವರ ಹಟವು. ಬ್ರಹ್ಮಜ್ಞಾನಿಗಳಲ್ಲಿ ಎಲ್ಲಕ್ಕೂ ಶ್ರೇಷ್ಠರಾರು? ಈ ಪ್ರಶ್ನೆಗೆ ಉತ್ತರ ಕೊಡುವಾಗ ಮುಂಡಕೋಪ-ನಿಷತ್ತು ಹೇಳುವುದೇನಂದರೆ, ಆತ್ಮಕ್ರೀಡನೂ ಆತ್ಮರತನೂ ಇದ್ದು ಯಾವನು ಕ್ರಿಯಾವಂತನೊ ಅವನೆ ಬ್ರಹ್ಮವಾದಿಗಳಲ್ಲಿ ಎಲ್ಲಕ್ಕೂ ಶ್ರೇಷ್ಠನು. ಕ್ರಿಯಾಶೀಲನಾಗಿ ಒಂದು ನೂರು ವರುಷ ಬಾಳಲಿಚ್ಛಿಸು ಎಂದು ಈಶಾ-ವಾಸ್ಯವು ಹೇಳುವದು. ಕೇನದ ಶಾಂತಿಮಂತ್ರವು ಅನ್ನುವದೇನಂದರೆ, ಪರ-ಸ್ಪರರನ್ನು ರಕ್ಷಿಸುವಾ, ಕೂಡಿ ಭೋಗಿಸುವಾ, ಕೂಡಿ ವೀರಕರ್ಮಗಳನ್ನು ಮಾಡುವಾ, ತೇಜಸ್ವಿ ಗುರುವಿನ ಮೂಲಕ ವಿದ್ಯೆ ಕಲಿಯುವಾ. ಕೈಕಾಲು ಇಂದ್ರಿಯಾದಿಗಳನ್ನು ಗಟ್ಟಿಮುಟ್ಟಿಯಾಗಿಟ್ಟುಕೊಂಡು ಚನ್ನಾಗಿ ಉತ್ಸಾಹದಿಂದ ಜೀವಿಸುವ ಎಂದು ಮುಂಡಕದ ಶಾಂತಿಮಂತ್ರವು ಹೇಳುವದು. ಇದು ನಿರಾಶಾವಾದವೂ ಅಲ್ಲ ಅಥವಾ ಲೋಕಾಂತರವಾದವೂ ಅಲ್ಲ. ಇಲ್ಲಿಯೆ ಇಹಲೋಕದಲ್ಲಿಯೆ ಉತ್ಸಾಹಪೂರ್ಣ ಜೀವನವನ್ನು ಕಳೆಯಬೇಕು. ಆದರೆ

ಅದು ಪರಮಾರ್ಥಕ್ಕೆ ಪೋಷಕವಾಗಬೇಕು, ಆತ್ಮತಾರಕವಾಗಬೇಕು ಆತ್ಮ ಮಾರಕವಾಗಬಾರದು ಎಂದು ಉಪನಿಷತ್ಕಾರರು ಹೇಳುವರು.

ವಿಷಯಾಸಕ್ತಿಯನ್ನು ಉಪನಿಷತ್ಕಾರರು ಹೀನಾಯಿಸುವರು, ಹೀಯಾಳಿಸುವರು ಎಂಬುದು ನಿಜ. ಆದರೆ ಹೀಗೆ ಅವರು ಮಾಡುವ ಕಾರಣವೇನೆಂಬುದನ್ನು ನಿರೀಕ್ಷಿಸಿದರೆ ಆತ್ಮಜೀವನ ಮತ್ತು ಅನಾಸಕ್ತಿ ಶ್ರೇಷ್ಠ ಎಂದು ಅವರ ಅನುಭವವು. ಆದುದರಿಂದ ವಿಷಯ ಕಾಮನೆಗಳಿಗೆ ಬಲಿಬೀಳದೆ ಆತ್ಮಾನಂದದ ಶೋಧ ಮಾಡಿರೆಂದು ಅವರ ಹೇಳುವಿಕೆ. ಇದು ನಿರಾಶಾವಾದವಲ್ಲ. ಯಾವ ಅನ್ನಮಯ ಪ್ರಾಣಮಯ ಕೋಶಗಳಲ್ಲಿ ನಾವು ತೊಡಗಿಕೊಂಡಿರುವೆವೊ ದಾಸರಾಗಿ ವಿವಶರಾಗಿರುವೆವೊ ಆ ಸ್ಥಿತಿಯನ್ನು ಒದಲು ಮಾಡಿ ಅವುಗಳಾಚೆಗೆ ಹೋಗಿ ನಾವು ಇಂದ್ರಿಯಗಳ ಸಮ್ರಾಟರಾಗಬೇಕೆಂಬುದೆ ಅವರ ಆಕಾಂಕ್ಷೆ. ನಚಿಕೇತನು ಕುಣಿಯುವ ಅಪ್ಸರೆಗಳನ್ನು ನಿರಾಕರಿಸಿ ಆತ್ಮಜ್ಞಾನವನ್ನು ಬೇಡಿದನು. ಇದು ನಿರಾಶಾವಾದವೊ, ಲೋಕಾಂತರತ್ವವೊ, ಅಥವಾ ಶ್ರೇಷ್ಠತರ ಜೀವನದ ಹಸಿವೊ? ಮೈತ್ರೇಯಿಯ ಕಥೆಯಾದರೂ ಅದೇ. ಇಂಥ ವೃತ್ತಿಗೆ ನಿರಾಶಾವಾದ ಎಂದು ಹೇಳುವವರ ತಲೆ ಕೆಟ್ಟಿರಲಿಕ್ಕೆ ಸಾಕು. ಮನಃಶಾಂತಿ, ಅಂತಃಶಾಂತಿ ಕೇವಲ ಬಾಹ್ಯ ವಸ್ತುಗಳಿಂದ, ಭೋಗಗಳಿಂದ ಸಿಗದು, ಅದು ಜ್ಞಾನದಿಂದ, ಅನುಭಾವದಿಂದ, ಸಂಯಮದಿಂದ, ಸತ್ಯದರ್ಶನದಿಂದ ದೊರೆಯಬಲ್ಲದು ಎಂದು ಹೇಳುವದೆ ಉಪನಿಷತ್ಕಾರರ ಉದ್ದೇಶವು.

ಉಪನಿಷತ್ತುಗಳು ಪರಮಾತ್ಮನ ನಕಾರಾತ್ಮಕ ವರ್ಣನೆ ಮಾಡುವವು, ಆದರಿಂದ ಸ್ಪಷ್ಟ ಕಲ್ಪನೆಯಾಗದು ಎಂದು ಹಲವರು ಹೇಳುವರು. ಅಂತರ್ ದೃಷ್ಟಿಯಿಂದ ಸಾಕ್ಷಾತ್ ಕಂಡ ಸತ್ಯವನ್ನು ಶಬ್ದದಿಂದ ವರ್ಣಿಸುವದು ಅಸಾಧ್ಯವಾಗಿ ಅನೇಕ ಸಾರೆ ಋಷಿಗಳು ಆ ವಸ್ತುವನ್ನು 'ಅಸತ್' ಎಂದು 'ನೇತಿ ನೇತಿ' ಎಂದು ವರ್ಣಿಸಿದ್ದು ನಿಜ. ಆದರೆ ಅವುಗಳ ಅರ್ಥವು ಸ್ಪಷ್ಟವಿದೆ. ಕಾಣುವ ಕೇಳುವ ಅಥವಾ ಇಂದ್ರಿಯಗೋಚರವಾದ ಯಾವದೆ ವಸ್ತುವಿನಂತೆ ಇರದೆ ಇರುವ ವಸ್ತುವನ್ನು ಅವರು ಈ ಶಬ್ದಗಳಿಂದ ಸಂಬೋಧಿಸಿರುವರು. ಇಂದ್ರಿಯಾದಿಗಳು ಅಥವಾ ಮನಸು ಸಹ ಆ ಸತ್ಯವನ್ನು ಮುಟ್ಟಲಾರವು ಎಂದು ಇದರ ತಾತ್ಪರ್ಯವಿರುವದು. ಆದರೆ ಉಪನಿಷತ್ತುಗಳು ಅಷ್ಟಕ್ಕೆ ನಿಂತಿಲ್ಲ. ಕೇವಲ ನಕಾರಾತ್ಮಕ ಭಾಷೆ ಉಪಯೋಗಿಸಿ ಅವು ವಿರಮಿಸಿಲ್ಲ. ಸುಂದರವಾದ ನೂರಾರು ಬೇರೆ ಶಬ್ದಗಳಿಂದ ಪರಮಾತ್ಮ ವಸ್ತು

ವನ್ನು ಅವು ವರ್ಣಿಸಿವೆ. ಅತ್ತ ನಾವು ಲಕ್ಷ್ಯಗೊಡುವದು ಅವಶ್ಯಕ. ಅದು ಸಚ್ಚಿದಾನಂದ ಸ್ವರೂಪವು, ಶಾಂತವು, ಶುಭವು, ಸುಂದರವು, ತೇಜಸ್ವಿಯು, ಸರ್ವವ್ಯಾಪಿಯು, ನಿಷ್ಪಾಪವು, ಹುಟ್ಟು ಸಾವುಗಳಿಲ್ಲದ್ದು, ಅನಂತಶಕ್ತಿಯು ಎಂಬುದಾಗಿ ಅದರ ವರ್ಣನೆ ಉಪನಿಷತ್ತುಗಳಲ್ಲಿರುವದು. ಇದು ನಕಾರಾತ್ಮಕ ವರ್ಣನೆ ಎನ್ನಬಹುದೆ?

ಉಪನಿಷತ್ತುಗಳು ಒಂದು ಸುಬದ್ಧ ಮತ್ತು ತರ್ಕಶುದ್ಧವಾದ ತತ್ವಜ್ಞಾನವನ್ನು ಪ್ರತಿಪಾದಿಸುವದಿಲ್ಲ ಎಂಬುದು ತಕ್ಕಮಟ್ಟಿಗೆ ನಿಜವು. ಯಾಕಂದರೆ ಆ ಕಾರ್ಯವನ್ನು ಮಾಡಲು ಅವು ಹೊರಟಿಲ್ಲ. ಅವು ಅನುಭಾವ ಗ್ರಂಥಗಳು. ಆದ ಸ್ಫೂರ್ತ ಅನುಭವವನ್ನು ಸಾರಿ ಋಷಿಗಳು ವಿರಮಿಸಿರುವರು. ತತ್ವ-ಜ್ಞಾನವನ್ನು ಸುಸಂಗತವಾಗಿ ಕಟ್ಟುವ ಕೆಲಸವನ್ನು ಅವರು ಇತರರಿಗೆ ಬಿಟ್ಟುಕೊಟ್ಟರು. ತತ್ವಜ್ಞಾನದ ಅಡಿಗಲ್ಲಾವುದು ಎಂದು ವಿಚಾರ ಮಾಡಿದರೆ ಇಂಥ ಸ್ಫೂರ್ತ ಜ್ಞಾನವೆ ಅಥವಾ ಶುದ್ಧ ಅಂತರಂಗದಲ್ಲಿ ಒಡಮೂಡಿದ ಅನುಭಾವವೆ ಅಂಥ ಅಡಿಗಲ್ಲು ಎಂದು ಒಪ್ಪಬೇಕಾಗುವದು. ಯಾವದೇ ತತ್ವಜ್ಞಾನವು ಉಳಿದು ಬಾಳಿ ಬೆಳೆಯಬೇಕಾದರೆ ಅನುಭವದ ಒರೆಗಲ್ಲಿಗೆ ಅದು ಸರಿಹೋಗಲಿಕ್ಕೆ ಬೇಕು. ಅನುಭಾವವು ತತ್ವಜ್ಞಾನಕ್ಕೆ ಬೀಜಭೂತವಾಗಿರುವದು ಎಂಬ ಮಾತನ್ನು ಸರ್ವಪಲ್ಲಿ ರಾಧಾಕೃಷ್ಣನ್‌ರು ತಮ್ಮ 'ರೇನ ಆಫ್ ರಿಲಿಜನ್ ಇನ್ ಕಾಂಟೆಂಪರರಿ ಫಿಲಾಸಫಿ' ಎಂಬ ಗ್ರಂಥದಲ್ಲಿ ಚನ್ನಾಗಿ ವಿವರಿಸಿದ್ದಾರೆ. ಆ ಮಾತು ನಿಜವಿದ್ದುದಾದರೆ ಮೇಲಿನ ಆರೋಪದಲ್ಲಿ ಏನೂ ಅರ್ಥವಿಲ್ಲ ಎಂದು ಹೇಳಬೇಕಾಗುವದು.

ಈ ಪ್ರಕಾರವಾಗಿ ಇಹವನ್ನು ತುಚ್ಛಿಸದೆ ಪರವನ್ನು ಪಡೆಯುವ ಮಾರ್ಗವನ್ನು ಸ್ಫೂರ್ತ ಜ್ಞಾನದ ಮುಖಾಂತರ ಆಧ್ಯಾತ್ಮಿಕ ಜೀವನದ ಮೂಲಕ ಅನುಸರಿಸಬೇಕೆಂದು ಉಪನಿಷತ್ತುಗಳು ಹೇಳುವವು. ಆದುದರಿಂದ ಅವುಗಳ ಅಭ್ಯಾಸವನ್ನು ಚನ್ನಾಗಿ ತಿಳುವಳಿಕೆಯಿಂದ ಮಾಡಿದರೆ ಅತ್ಯಂತ ಉಪಕಾರಕವಾಗುವಲ್ಲಿ ತಿಲಮಾತ್ರ ಸಂಶಯವಿಲ್ಲ.

ಓಂ ತತ್ಸತ್

# ಉಪನಿಷತ್ಪ್ರಕಾಶದ ಪ್ರಸ್ತಾವನೆ

**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯೋ ಮೈತ್ರೇಯ್ಯಾತ್ಮನೋ ವಾ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಮ್ ।** —ಬೃಹದಾರಣ್ಯಕ

ಆತ್ಮನನ್ನು ನೋಡತಕ್ಕುದು, ಕೇಳತಕ್ಕುದು, ಮನನಮಾಡತಕ್ಕುದು, ಆತ್ಮನ ನಿದಿಧ್ಯಾಸಮಾಡತಕ್ಕುದು; ಹೇ ಮೈತ್ರೇಯಿ, ಆತ್ಮನ ದರ್ಶನದಿಂದ, ಶ್ರವಣದಿಂದ, ಮನನದಿಂದ, ನಿಶ್ಚಿತ ಜ್ಞಾನದಿಂದ, ಇದೆಲ್ಲವೂ ತಿಳಿಯುವುದು.

**ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।** —ಕೇನ

ಈ ಜನ್ಮದಲ್ಲಿಯೆ ಈ ಜ್ಞಾನವನ್ನು ತಿಳಿದುಕೊಳ್ಳದಿದ್ದರೆ ನಾವು ದೊಡ್ಡ ಕುತ್ತಿಗೆ ಒಳಗಾಗುವೆವು.

**ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ । ನೇತರೇಷಾಮ್ ।** —ಕಠ

ಆತ್ಮಸ್ಥ ಪುರುಷೋತ್ತಮನನ್ನು ಅರಿತುಕೊಳ್ಳುವ ಧೀರರಿಗೆ ಮಾತ್ರ ಶಾಶ್ವತ ಸುಖವು; ಉಳಿದವರಿಗಿಲ್ಲ.

## ವೇದಾಂತ ಶಾಸ್ತ್ರವು

ವೇದಾಂತವೆಂಬುದೊಂದು ಶಾಸ್ತ್ರ. ಮನುಷ್ಯನಿಗೆ ಹಿರಿದಾದ ಹಿಗ್ಗನ್ನು, ಪೂರ್ಣ ಆನಂದವನ್ನು ಕೈಗೂಡಿಸಿ ಕೊಡುವದೆ ಇದರ ಗುರಿ. ಅನುಭಾವಿಗಳು ನಡೆದ ದಾರಿಯೆ ಇದರ ದಾರಿ. ಆ ಗುರಿಯ ಹಾಗೂ ಆ ದಾರಿಯ ಹೊಳವು ದೋರುವುದೆ ಈ ಚಿಕ್ಕ ಪ್ರಸ್ತಾವನೆಯ ಉದ್ದೇಶ.

ವೇದಾಂತಶಾಸ್ತ್ರ, ಅಥವಾ ಅಧ್ಯಾತ್ಮಶಾಸ್ತ್ರ, ಎಂಬ ಶಬ್ದಗಳನ್ನು ಕೇಳಿದೊಡನೆ ನಮ್ಮಲ್ಲಿ ಎಷ್ಟೋ ಜನರು ಬೆಚ್ಚಿ ಬೀಳುತ್ತಾರೆ. ದೆವ್ವ ಭೂತಗಳು ಮೋಡಿಕಾರನ ಮಂತ್ರಗಳನ್ನು ಕೇಳಿ ಅಥವಾ ಅವನು ಹಾಕಿದ ಹೊಗೆಯನ್ನು ನೋಡಿ ಓಡಿ ಹೋಗುವಂತೆ ನಮ್ಮ ಎಷ್ಟೋ ಬಾಂಧವರು ಈ ವೇದಾಂತಶಾಸ್ತ್ರದ ಹೆಸರು ಕೇಳಿ ಓಡಿ ಹೋಗುತ್ತಾರೆ. ಹಿಂದುಸ್ತಾನದಲ್ಲಿ, ಈ ಆರ್ಯಾವರ್ತದಲ್ಲಿ ಈ ಹಾಡು ಉಂಟಾಗುವದು ತೀರ ಕೀಳ್ಮೆಯ ಲಕ್ಷಣವೇ ಸರಿ. ವಿಶೇಷತಃ ಕರ್ನಾಟಕದಂಥ ಧರ್ಮಭೂಮಿಯಲ್ಲಿ ಹೀಗಾಗುವದು ಮತ್ತಿಷ್ಟು ಅಧೋಗತಿಯ ನಿದರ್ಶಕವು. ಇತಿಹಾಸದ ಕಡೆಗೆ ನೋಡಿದರೆ ಈ ಭಾರತಭೂಮಿಯು ಅಧ್ಯಾತ್ಮಶಾಸ್ತ್ರದ ಜನ್ಮಭೂಮಿಯು. ಅಧ್ಯಾತ್ಮಶಾಸ್ತ್ರದ ಉಗಮವು ಇಲ್ಲಿಯೆ ಆಯ್ತು. ಅನೇಕ ಋಷಿಮುನಿಗಳು ಆ ಶಾಸ್ತ್ರದ ಸಣ್ಣ ದೊಡ್ಡ ಪ್ರಯೋಗಗಳನ್ನು ಮಾಡಿ ಸಿದ್ಧಾಂತಗಳನ್ನು ಸ್ಥಿರಪಡಿಸಿದ ಪುಣ್ಯ ಭೂಮಿಯಾದರೂ ಇದೇ. ಅದು ಪರಿಣತಾವಸ್ಥೆಗಾದರೂ ಇಲ್ಲಿಯೆ ಮುಟ್ಟಿತು. ಅದರ ಮೃದುಮಧುರ ಫಲಗಳನ್ನು ನಮ್ಮ ಪೂರ್ವಜರು ಸವಿಸವಿದು ತಣಿದರು. ಈಗ್ಲೂ ನಮ್ಮಲ್ಲಿ ಎಷ್ಟೋ ಜನರು ಆ ಸವಿಯನ್ನುಂಡು ಸಂತೃಪ್ತರಾದವರಿರುವರು. ಆದರೆ ನಮಗೆ ಆ ಕಣ್ಣುಗಳಿಲ್ಲದ್ದರಿಂದ ಅವರು ಕಾಣದಂತಾಗಿದ್ದಾರೆ!

## ಆರ್ಯ ಸಂಸ್ಕೃತಿಯೂ ಮಿಕ್ಕ ಸಂಸ್ಕೃತಿಗಳೂ

ವೈದಿಕ ಆರ್ಯ ಸಂಸ್ಕೃತಿ ಹಾಗೂ ವೇದಾಂತಗಳ ಇತಿಹಾಸದ ಕಡೆಗೆ ನೋಡಿದರೆ ಅವು ಎಷ್ಟು ಪ್ರಾಚೀನ ಹಾಗೂ ಎಷ್ಟು ಪರಿಪೂರ್ಣವಿರುವವೆಂಬುದರ ಯಥಾರ್ಥ ಕಲ್ಪನೆಯು ನಮಗೆ ಆಗುವದು. ಜಗತ್ತಿನಲ್ಲಿರುವ ಗ್ರಂಥಗಳಲ್ಲಿ ವೇದಗಳೆ ಅತ್ಯಂತ ಪ್ರಾಚೀನ. ಇಜಿಪ್ತ ಅಥವಾ ಮಿಸರ, ಬ್ಯಾಬಿಲೋನ, ಅಸೀರಿಯಾ, ಮೀಡಿಯಾ, ಗ್ರೀಸ, ರೋಮ ಮುಂತಾದ ರಾಷ್ಟ್ರಗಳು ಒಂದಾನೊಂದು ಕಾಲಕ್ಕೆ ಒಳ್ಳೆ ಘನತೆಗೇರಿದ್ದುವು. ಅಲ್ಲದೆ ಅವು ಆಯಾ ಕಾಲದ ಅತ್ಯಂತ ಉಚ್ಚ ಸಂಸ್ಕೃತಿಯನ್ನೂ ಪಡೆದಿದ್ದುವು. ಆದರೆ ಆ ಎಲ್ಲ ರಾಷ್ಟ್ರಗಳೂ ಆ ದೇಶಗಳೂ ಅವುಗಳ ಸಂಸ್ಕೃತಿಗಳೂ ಹೇಳಹೆಸರಿಲ್ಲದಾಗಿವೆ. ಅವುಗಳ ಅಂದು--ಇಂದಿನ ಸ್ಥಿತಿಯಲ್ಲಿ ಎಷ್ಟು ಭೇದ! ಅಂದಿನ ಸಂಸ್ಕೃತಿ ಬೇರೆ, ಇಂದಿನ ಸಂಸ್ಕೃತಿ ಬೇರೆ; ಅಂದಿನ ರೀತಿನೀತಿ ಬೇರೆ, ಇಂದಿನ ರೀತಿನೀತಿ ಬೇರೆ! ಗ್ರೀಸ, ರೋಮಗಳನ್ನು ಬಿಡು ಮಿಕ್ಕವುಗಳ

ನಡೆನುಡಿ ಧರ್ಮಗಳೆಲ್ಲ ಬದಲಾಗಿ ಅವುಗಳ ಪೂರ್ವರೂಪವು ಔಷಧಕ್ಕೆ ಸಹ ದೊರೆಯದಂತಾಗಿದೆ. ಗ್ರೀಸ ರೋಮಗಳು ಸಹ ತಮ್ಮ ಧರ್ಮವನ್ನು ಬಿಟ್ಟು ಕ್ರಿಸ್ತೀಧರ್ಮವನ್ನು ಕೈಕೊಂಡಿವೆ. ಆದರಿಂದ ಅವುಗಳ ಸಂಸ್ಕೃತಿಯಾದರೂ ಬಹಳ ಬದಲಾಗಿದೆ. ಇದೇ ಮೇರೆಗೆ ವೈದಿಕ ಆರ್ಯಸಂಸ್ಕೃತಿಯಷ್ಟು ಸನಾತನವಿಲ್ಲದಿದ್ದರೂ ಅತಿ ಪ್ರಾಚೀನವಿದ್ದ ಮಿಸರ ಮುಂತಾದ ದೇಶಗಳ ಸಂಸ್ಕೃತಿಯೂ ನಷ್ಟವಾಗಿ ಹೋಗಿದೆ. ಇಂದು ಮಿಸರ, ಬ್ಯಾಬಿಲೋನ ಮುಂತಾದ ದೇಶಗಳಲ್ಲಿ ಪ್ರಾಚೀನ ಕಾಲದಲ್ಲಿ ಯಾವ ಬಗೆಯ ಜನರು ಇರುತ್ತಿದ್ದರೆಂಬದನ್ನು ಕೇವಲ ಇತಿಹಾಸಕಾರರ ವರ್ಣನದಿಂದಲೂ ಕಲ್ಪನಾಶಕ್ತಿಯಿಂದಲೂ ತಿಳಿದುಕೊಳ್ಳಬೇಕಾಗಿದೆ. ವೈದಿಕ ಆರ್ಯಸಂಸ್ಕೃತಿಯ ಮಾತು ಹಾಗಿಲ್ಲ. ಆ ಪ್ರಾಚೀನ ಕಾಲದಲ್ಲಿ 'ಏಕಮೇವಾದ್ವಿತೀಯ' ಪರಮಾತ್ಮನ ಅನೇಕ ದಿವ್ಯರೂಪಗಳಾದ ಆದಿತ್ಯ, ಇಂದ್ರ, ವರುಣ, ಮರುತ್, ಅಶ್ವಿನೀಕುಮಾರರು, ಉಷಸ್ ಮುಂತಾದ ದೇವತೆಗಳನ್ನು ಸ್ತವಿಸುತ್ತ ಸಪ್ತಸಿಂಧುಗಳ ದಂಡೆಯ ಮೇಲೆ ಆಶ್ರಮವಾಸಿಗಳೂ ಜಟಾಧಾರಿಗಳೂ ಬ್ರಹ್ಮವರ್ಚಸ್ಸಿನಿಂದ ತೇಜಸ್ವಿಯಾದವರೂ ಇರುತ್ತಿರುವಂತೆ ಈಗ್ಯೂ ಹಿಂದುಸ್ಥಾನದಲ್ಲಿ ಅದೇ ಸಂಸ್ಕೃತಿಯ ಮೂರ್ತಿಗಳಾದ ಎಷ್ಟೋ ಜನರು ಸಂಧ್ಯಾಸಮಯದಲ್ಲಿ 'ಅರ್ಘ್ಯಪ್ರದಾನ' ಮಾಡುತ್ತಿರುವವರು ಕಂಡು ಬರುವರು. ವಸಿಷ್ಠ ವಿಶ್ವಾಮಿತ್ರರು ಯಾವ ಮಂತ್ರಗಳನ್ನು ಪಠಿಸಿ ಈ ವಾತಾವರಣವನ್ನು ಪವಿತ್ರ ಮಾಡುತ್ತಿದ್ದರೊ ಅವೇ ಮಂತ್ರಗಳನ್ನು ಈಗ ನಮ್ಮಲ್ಲಿಯ ಬಟುಗಳು ಪಠನಮಾಡುತ್ತಿರುವರು. ಯಾವ ಉಪನಿಷತ್ತುಗಳಲ್ಲಿಯ ಬ್ರಹ್ಮಜ್ಞಾನದಿಂದ ಋಷಿಮುನಿಗಳು ತಮ್ಮ ಆತ್ಯಂತಿಕ ಧ್ಯೇಯವನ್ನು ಸಾಧಿಸಿ ಕೃತಾರ್ಥರಾದರೊ ಅದೇ ಬ್ರಹ್ಮವಿದ್ಯೆಯನ್ನು ಪಡೆದು ಅಮೃತವನ್ನುಂಡು ಅದನ್ನು ಉಪದೇಶರೂಪದಿಂದ ಶಿಷ್ಯವೃಂದಕ್ಕೆ ಉಣಿಸುವ ಸಾಧುಸಜ್ಜನರು ಈಗ್ಯೂ ಅನೇಕರಿರುವರು. ಹಿಂದುಸ್ಥಾನದ ಸಾಮಾನ್ಯ ಸ್ಥಿತಿಯು ಅತ್ಯಂತ ಶೋಚನೀಯವೂ ಕರುಣಾಸ್ಪದವೂ ಆಗಿದ್ದರೂ ಇಲ್ಲಿಯ ಪೂರ್ವಸಂಸ್ಕೃತಿಯು ಜೀವದಿಂದಿರುವದೆನ್ನುವಷ್ಟು ನರರತ್ನಗಳು ಇಲ್ಲಿ ಇವೆ; ಇದು ನಿಜವಾಗಿ ಒಳ್ಳೇ ಸಮಾಧಾನದ ಸಂಗತಿ. ಈ ರೀತಿ ಅಖಂಡವಾಗಿ ತಡೆ ಇಲ್ಲದೇ ನಮ್ಮ ಸಂಸ್ಕೃತಿಯು ಇದುವರೆಗೆ ಜೀವದಿಂದಿರುವದು. ಸರ್ವಭಕ್ಷಕ ಕಾಲನ ದವಡೆಯಲ್ಲಿ ಸಿಕ್ಕು ಮಿಕ್ಕ ಸಂಸ್ಕೃತಿಗಳು ಚೂರುಚೂರಾದವು ಅಥವಾ ಅಬ್ಬುಜಬ್ಬಾಗಿ ಹೇಗಾದರೂ ಜೀವ ಉಳಿಸಿಕೊಂಡು ಹೊರಬಿದ್ದು ಒಂದು ತರದ ರೋಗಗ್ರಸ್ತ

ಜೀವನವನ್ನು ಕಳೆಯುತ್ತಿರುವವು. ಒಂದು ದೊಡ್ಡ ಮನೆತನದಲ್ಲಿ ಮನೆತನಕ್ಕೆ ಹಿರಿಯಳಾದ ಮುದುಕೆಯು ಬದುಕಿದ್ದು ಕಿರಿಯರೆಲ್ಲರೂ ಅವಳ ಮುಂದೆ ಪಟ-ಪಟ ಸತ್ತು ಹೋದಂತೆ ಈ ಭೂಗೋಲದ ಮೇಲಿನ ಮಾನವೀ ಕುಟುಂಬದಲ್ಲಿ ಭರತಭೂಮಾತೆಯು ಮಾತ್ರ ಮುಪ್ಪಾದರೂ ಜೀವದಿಂದಿರುವಳು. ಮಿಕ್ಕ ರಾಷ್ಟ್ರಗಳೆಲ್ಲ ಹಾಳಾಗಿ ಹೋಗಿರುವವು. ಹೀಗೆ ಪರಿಸ್ಥಿತಿಯು ಇರುವದು.

ಇಷ್ಟೇ ಅಲ್ಲ. ಈ ವಿಶೇಷ ಸಂಗತಿಯನ್ನು ಕಂಡುಹಿಡಿದು ಪಾಶ್ಚಾತ್ಯ ಪಂಡಿತರೂ ತತ್ವಜ್ಞರೂ ಇಲ್ಲಿಯ ಗ್ರಂಥಮಹೋದಧಿಯನ್ನು ಮಥಿಸಿ ಇದರಲ್ಲಿಯ ಅತ್ಯುತ್ತಮ ರತ್ನಗಳನ್ನು ಹುಡುಕಿ ತೆಗೆದು ಅವುಗಳನ್ನು ಉಪಯೋಗಿಸತೊಡಗಿದ್ದಾರೆ. ಉತ್ತಮ ಕಾಗದ, ನಾಲ್ಕು ಚಿತ್ರಗಳು, ಒಳ್ಳೇ ಅಚ್ಚು, ಇವಿಷ್ಟು ಆದರಾಯ್ತು; ಆ ಪೂರ್ವದ ಪುಸ್ತಕಗಳನ್ನೆ ಹೊಸವೆಂದು ನಟಿಸಿ ಅವುಗಳನ್ನು ನಮ್ಮಲ್ಲಿಯ ಮರುಳರ ಕೈಯಲ್ಲಿ ತಂದುಕೊಡುತ್ತಿದ್ದಾರೆ. ಪ್ರಾಣಾಯಾಮವೆಂದರೆ ನಮ್ಮ ಜನರಿಗೆ ತಿಳಿಯದಂತಾಗಿದೆ. ಆದರೆ The science of deep breathing ಎಂದೊಡನೆ ೨ ರೂಪಾಯಿ ಕೊಟ್ಟು ನಾವು ಸಾಹೇಬರ ಪುಸ್ತಕಗಳನ್ನು ಕೊಳ್ಳಲೆಳಸುತ್ತೇವೆ! ನಮ್ಮಲ್ಲಿಯ ಬಹುಸಂಖ್ಯಾಕರು ಆ ದಿವ್ಯ ಗ್ರಂಥಗಳ ಹಾಗೂ ಆ ದಿವ್ಯ ವಿದ್ಯೆಯ ಗಂಧವಿಲ್ಲದೆ ಎರಡನೆಯವರ ಕಡೆಗೆ ಬಾಯಿ ತೆರೆದು ಬೆರಗಾಗಿ ಕುಳಿತಿರುವರು. ಹೀಗಿರುವದರಿಂದಲೇ ನಾವು ಈ ಹೀನ ದೀನ ಅವಸ್ಥೆಯಲ್ಲಿರುವವು. ಗತಿಗೇಡಿಗಳಾಗಿ, ತೊತ್ತುಗಳಾಗಿ ಕೊಳೆಯುತ್ತಿರುವೆವು. ನಮ್ಮ ಪೂರ್ವದ ಬಲ, ತೇಜಸ್ಸು, ಚಾರಿತ್ರ್ಯ, ಬುದ್ಧಿವಂತಿಕೆ ಮುಂತಾದವುಗಳನ್ನು ಕಳಕೊಂಡು ಅತ್ಯಂತ ಹೀನ ಹಾಗು ಪಶುತುಲ್ಯವಾದ ಜೀವನಕ್ಕೆ ಳಿಸಿರುವೆವು.

## ವೇದಾಂತದ ದುರುಪಯೋಗವು

ಸಾಕು, ಇದುವರೆಗೆ ಈ ನಮ್ಮ ದಿವ್ಯ ಗ್ರಂಥಗಳ ಕಡೆಗೂ ನಮ್ಮ ಸಂಸ್ಕೃತಿಯ ಕಡೆಗೂ ದುರ್ಲಕ್ಷ್ಯ ಮಾಡಿದ್ದು ಸಾಕು, ಎಂದು ನಾವು ಇನ್ನು ಟೊಂಕ-ಕಟ್ಟಿ ಏಳಲಿಕ್ಕೆಬೇಕು. ಮಳೆಯ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡುವ ಮೂರ್ಖತನವನ್ನು ನಾವು ಬಿಟ್ಟುಬಿಡಲಿಕ್ಕೆಬೇಕು. ನಮ್ಮ ಗ್ರಂಥಗಳು ಹಾಗೂ ನಮ್ಮ ಸಂಸ್ಕೃತಿ ಇವುಗಳ ತಿರುಳನ್ನು ತಿಳಿದುಕೊಂಡು ನಮ್ಮ ಪೂರ್ವಜರ ದಿವ್ಯಜೀವನದ ರಹಸ್ಯವನ್ನರಿತುಕೊಳ್ಳಲಿಕ್ಕೆಬೇಕು. ಈ ರೀತಿಯಿಂದ ನೋಡಲಾಗಿ ವೇದೋಪನಿಷತ್ತುಗಳೆ ನಮ್ಮಲ್ಲಿಯ ಎಲ್ಲಕ್ಕೂ ಶ್ರೇಷ್ಠ

ವಾದ ಶಾಸ್ತ್ರವು. ಆ ಗ್ರಂಥಗಳು ಅಷ್ಟೊಂದು ಮಹತ್ವವುಳ್ಳವುಗಳಿರುವದರಿಂದಲೆ ಅವುಗಳನ್ನು 'ಅಪೌರುಷೇಯ'ವೆಂದು ನಮ್ಮ ಪೂರ್ವಜರು ಭಾವಿಸಿದರು. ವೇದಾಂತಶಾಸ್ತ್ರವು ಅಥವಾ ಅಧ್ಯಾತ್ಮಶಾಸ್ತ್ರವು ಅಷ್ಟು ಮಹತ್ವದ್ದೆಂದೆ ಅದಕ್ಕೆ ಎಲ್ಲ ಶಾಸ್ತ್ರಗಳಲ್ಲಿ ಶ್ರೇಷ್ಠ ಸ್ಥಾನವು ದೊರಕಿತು. ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯೆ ನಾನು, ಎಂದು ಭಗವಂತನು ಭಗವದ್ಗೀತೆಯಲ್ಲಿ ಹೇಳಿರುವನು. ಇದು ಗುಟ್ಟಿನ ಮಾತು ಎಂದು ಅದೇ ಗೀತೆಯಲ್ಲಿ ಉಲ್ಲೇಖಿಸಿರುವದು. ಇದು 'ಪರಾವಿದ್ಯೆ' ಎಂದು ಉಪನಿಷತ್ತುಗಳು ಹೇಳುವವು. ಇದುವೆ 'ರಾಜವಿದ್ಯೆಯು' 'ರಾಜಗುಹ್ಯವು,' ವನ್ಯಮೃಗಗಳಲ್ಲಿ ಮೃಗರಾಜನಿರುವಂತೆ ಶಾಸ್ತ್ರಸಂಘದಲ್ಲಿ ವೇದಾಂತಕೇಸರಿಯು. ಇದರ ಗುಡುಗಿನ ಮುಂದೆ ಮಿಕ್ಕ ಶಾಸ್ತ್ರಗಳ ಚೀರಾಟವಡಗಿಹೋಗುವದು. ಇಂತಹದನ್ನು ನಾವು ಈಗ ಬಿಟ್ಟಿರುವೆವು. ಇಂತಹದನ್ನು ನಾವು ಈಗ ಹೀಯಾಳಿಸುತ್ತಿರುವೆವು. ಅದರಿಂದ ನಮಗೇನು ಲಾಭವು, ಅದರಿಂದ ಹೊಟ್ಟೆತುಂಬುವದೆ ಎಂದು ಮುಂತಾಗಿ ಹರಟುತ್ತ ನಮ್ಮ ತಿಳಿಗೇಡಿತನವನ್ನು ನಾವೇ ಹೊರಗೆಡಹುತ್ತಿರುವೆವು. ಇದರಿಂದ ನಮ್ಮ ಕಾಲಮೇಲೆ ನಾವೇ ಕಲ್ಲು ಚಲ್ಲುತ್ತಿರುವೆವಷ್ಟೇ. ಅದರಿಂದ ಆ ಶಾಸ್ತ್ರಕ್ಕೆ ಅಥವಾ ಅದರ ಯೋಗ್ಯತೆಗೆ ಯಾವ ಕುಂದೂ ಇಲ್ಲ.

ಸಾಕು ಬಿಡಿ, ನಿಮ್ಮ ವೇದಾಂತ; ಇದರಿಂದಲೆ ನಮ್ಮ ರಾಷ್ಟ್ರವು ಹಾಳಾಯ್ತು; ಹತ್ತೀ ಬುಟ್ಟೀ ಇಟ್ಟುಕೊಂಡು ಬತ್ತೀ ಮಾಡುವ ವಿಧವೆಯರ ಮುಂದೆ ನಿಮ್ಮ ವೇದಾಂತವನ್ನು ಹೇಳಿರಿ, ನಮಗಿದು ಬೇಡ; ನಮಗೆ ಬೇಕಾದುದು ವ್ಯವಹಾರ; ಅದೇನಾದರೂ ನಿಮ್ಮಲ್ಲಿದ್ದರೆ ಹೇಳಿರಿ, ಎಂದು ಕೆಲವರು ಎದುರಿಸುವರು. ಆದರೆ ಇವರು ಹೀಗೆ ಕೇಳುವುದರಲ್ಲಿ ಏನೂ ಹುರುಳಿಲ್ಲ. ನಾವು ಹಾಳಾದುದು ವೇದಾಂತ ಹಿಡಿದುದರಿಂದಲ್ಲ; ಅದನ್ನು ಬಿಟ್ಟುದರಿಂದ. ವೇದಾಂತದ ನಿಜವಾದ ಅರ್ಥವನ್ನು ತಿಳಿದುಕೊಂಡು ಅದರಂತೆ ನಡೆದುದರಿಂದಲ್ಲ; ಅದರ ಅಪಾರ್ಥಮಾಡಿ ಅಡ್ಡಹಾದಿ ಹಿಡಿದುದರಿಂದ. ಒಂದು ಗುಡಿಯೊಳಗಿನ ದೇವದೇವನನ್ನು ಇಷ್ಟದೇವತೆಯೆಂದು ಉಪಾಸನೆ ಮಾಡಿ ಶುದ್ಧಚಿತ್ತರಾಗಿ, ಶಾಂತಮನಸ್ಕರಾಗಿ ಮೋಕ್ಷದ ಮೆಟ್ಟಲುಗಳನ್ನು ಹತ್ತುವವರೂ ಇರುವರು. ಅದೇ ಗುಡಿಯಲ್ಲಿ ಕೇವಲ ಡಂಭಾಚಾರದ ಡೊಂಬರಾಟಮಾಡಿ ಗಂಟೀಬಡೆಯುತ್ತ ಭಾವಿಕ ಭಕ್ತರ ಹಣವನ್ನು ಸೆಳೆಯುವ ಸಾಧನವೆಂದು ಅದೇ ಮೂರ್ತಿಯ ದುರುಪಯೋಗ ಮಾಡುವ ಹಲವು ಪೂಜಾರರೂ ಇರುವರು. ರತ್ನಪರೀಕ್ಷಕನಲ್ಲದೆ ಮಂಗವೇನು ಬಲ್ಲುದು ಮಾಣಿಕದ ಬೆಲೆಯ?

ಭಾವುಕ ರಸಿಕನಲ್ಲದೆ ಕತ್ತೆಯೇನು ಬಲ್ಲುದು ಕಸ್ತೂರಿಯ ಸವಿಯು? ಗ್ರಂಥ ಅಥವಾ ತತ್ವ ಇಲ್ಲವೆ ಶಾಸ್ತ್ರಗಳ ಮಾತಾದರೂ ಹೀಗೆಯೆ. ಯಾವ ತತ್ವವನ್ನು ತಕ್ಕೊಂಡರೂ ಸಾತ್ವಿಕ, ರಾಜಸ, ತಾಮಸ ಜೀವಿಗಳು ಅದನ್ನು ತಮ್ಮ ತಮ್ಮ ಪರಿಯಿಂದ ತಮ್ಮ ತಮ್ಮ ಯೋಗ್ಯತೆಯ ಪ್ರಕಾರ ಉಪಯೋಗಿಸುವರು. ಅದಕ್ಕೆ ತತ್ವವೇನು ಮಾಡೀತು, ಶಾಸ್ತ್ರವೇನು ಮಾಡೀತು?

ಮುಗಿಲಿಗೆ ಮುಟ್ಟಿದ ಅಂದಿನ ನಮ್ಮ ನಡಗಂದ ಬೆಡಗೆಲ್ಲಿ! ಇಂದಿನ ಈ ಕೀಳ್ಮೆಯ ಕೊಳಚೆಯೆಲ್ಲಿ! ಇದಕ್ಕೆ ಕಾರಣವಾವುದು? ವೇದಾಂತಶಾಸ್ತ್ರದ ದುರುಪಯೋಗದ ಹೊರ್ತು ಮತ್ತಿನ್ನಾವ ಕಾರಣವು? ನಮ್ಮಲ್ಲಿಯ ತಾಮಸ ವೃತ್ತಿಯು ಮಿತಿಮೀರಿ ಬೆಳೆಯಿತು. ದೇವನನ್ನು ಬಿಟ್ಟು ದೆವ್ವಿನ ಬೆಂಬತ್ತಿದೆವು. ಶಾಂತಿಯೆಂದರೆ ಸುಮ್ಮನೆ ಹೆಣದಂತೆ ಕುಕ್ಕರಿಸಿರುವುದೆಂದು ಭಾವಿಸಿದೆವು. ವೈರಾಗ್ಯವೆಂದರೆ ನಪ್ಪನ್ನ ಸೊಟ್ಟ ಮೋರೆ ಮಾಡಿಕೊಂಡು ಬಿದ್ದಿರುವುದೆಂದು ಗ್ರಹಿಸಿದೆವು. ನಿಜವಾದ ಅಹಿಂಸಾವೃತ್ತಿಯು ಮಾಯವಾಗಿ ಷಂಢತನವು ಮುಂದೆ ಬಂದಿತು. ಧರ್ಮತತ್ವಗಳ ಲೋಪವಾಗಿ ಪೊಳ್ಳು ಧರ್ಮಾಚಾರಗಳಿಗೆ ಇಲ್ಲದ ಮಹತ್ವವು ಕೊಡಲ್ಪಟ್ಟಿತು. ವರ್ಣಾಶ್ರಮದ ಸಯುಕ್ತಿಕ ಸಮಾಜಪದ್ಧತಿಯು ನಷ್ಟವಾಗಿ ಜಾತಿ ಉಪಜಾತಿ ಪ್ರತಿಜಾತಿಗಳ ಬಂಡು ಬೆಳೆಯಿತು. ಒಗೆಬಗೆಯ ಅಸಹ್ಯ ಹಾಗೂ ದೇಶಘಾತಕವಾದ ದುಷ್ಟ ನಷ್ಟ ರೂಢಿಗಳೂ ಮೂರ್ಖ ತಿಳಿವಳಿಕೆಗಳೂ ಜನತೆಯ ಸ್ವಾತಂತ್ರ್ಯ, ಸಾಹಸ, ತೇಜ ಮುಂತಾದವುಗಳನ್ನು ಹೀರಿ ಅದನ್ನು ನಿಃಸತ್ವ, ನಿರ್ಬಲವನ್ನಾಗಿ ಮಾಡಿಬಿಟ್ಟವು. ಆದರೆ ಇದೆಲ್ಲ ನಮ್ಮ ತಾಮಸವೃತ್ತಿಯ ಪರಿಣಾಮವು; ಇದರಲ್ಲಿ ವೇದಾಂತಶಾಸ್ತ್ರದ ತಪ್ಪಿಲ್ಲ. ಅದು ಒಂದೇ ಸಮನಾಗಿ ದಿವ್ಯ ಜ್ಯೋತಿಯಂತೆ ಚಿನ್ಮಂಡಲದಲ್ಲಿ ಬೆಳಗುತ್ತಿರುವದು. ನಮ್ಮ ಮಲಿನತ್ವದ ಮೂಲಕ ಆ ಬೆಳಕನ್ನು ನಿಚ್ಚಳವಾಗಿ ಬಿಂಬಿಸಿಕೊಂಬ ಬಲವು ನಮ್ಮಲ್ಲಿಲ್ಲದಿದ್ದರೆ ಅದು ನಮ್ಮ ತಪ್ಪಲ್ಲದೆ ಆ ಜ್ಯೋತಿಯ ತಪ್ಪಲ್ಲ. ನಾವು ನಮ್ಮ ಮನವೆಂಬ ಕನ್ನಡಿಯ ಮೇಲಿನ ಕಸವನ್ನು ಝಾಡಿಸಿ ಅದನ್ನು ಆ ಜ್ಯೋತಿಯ ಮುಂದೆ ಹಿಡಿದರೆ ಸ್ವಚ್ಛವಾಗಿ ಅದರ ಬೆಳಕು ಬಿದ್ದೇಬೀಳುವುದು. ಇದು ತ್ರಿಕಾಲಾಬಾಧಿತ ಸತ್ಯವು.

## ವೇದಾಂತವೂ ವ್ಯವಹಾರವೂ

ವೇದಾಂತಕ್ಕೂ ವ್ಯವಹಾರಕ್ಕೂ ಎಳ್ಳಷ್ಟೂ ಸಂಬಂಧವಿಲ್ಲವೆಂದು ಕೆಲವರ ಕಲ್ಪನೆ. ವ್ಯವಹಾರ ಬೇಡಾದವರು ವೇದಾಂತಕ್ಕೆ ಕೈಹಾಕಬೇಕು,

ಎರಡೂ ಸಾಧಿಸುವದು ಶಕ್ಯವಿಲ್ಲ, ಅವು ಒಂದಕ್ಕೊಂದು ವಿರುದ್ಧವಿರುವವು, ಎಂದು ಅವರ ಹೇಳಿಕೆ. ವೇದಾಂತಶಾಸ್ತ್ರದ ತಿರುಳನ್ನು ತಿಳಿದುಕೊಳ್ಳದೆ ಇದ್ದುದು ಅಥವಾ ಅದರ ವಿಪರೀತಾರ್ಥವನ್ನು ಮಾಡಿಕೊಂಡಿರುವುದೆ ಈ ಬಗೆಯ ಕಲ್ಪನೆಗಳಿಗೆ ಕಾರಣವು. ಆದರೆ ಪೂರ್ಣ ಜ್ಞಾನಿಗಳು ಎಂದೂ ಯಾವಾಗಲೂ ವ್ಯವಹಾರ ವೇದಾಂತಗಳನ್ನು ವಿಂಗಡಿಸಿ ಹೇಳಿಲ್ಲ. ಆರ್ಯ ಋಷಿಗಳ ತತ್ವಜ್ಞಾನದ ವೈಶಿಷ್ಟ್ಯವು ಈ ಮಾತಿನಲ್ಲಿಯೆ ಇದೆ. ಅವರು ತಾವು ಕಂಡುಕೊಂಡ ತತ್ವಗಳನ್ನು ಕೇವಲ ತಮ್ಮ ಮನಸ್ಸಿನಲ್ಲಿಟ್ಟುಕೊಂಡಿರಲಿಲ್ಲ ಅಥವಾ ಗ್ರಂಥಗಳಲ್ಲಿ ಪ್ರತಿಪಾದಿಸಿ ಸುಮ್ಮನಿರಲಿಲ್ಲ. ಇಲ್ಲವೆ ವಾದವಿವಾದಗಳನ್ನು ಮಾಡಿ ತಣ್ಣಗೆ ಕುಳ್ಳಿರಲಿಲ್ಲ; ಅವನ್ನು ನಿತ್ಯದ ವ್ಯವಹಾರದಲ್ಲಿ ತಂದೇ ಬಿಡುತ್ತಿದ್ದರು. ಕುರಿತು ಕಾಣುತ್ತಿದ್ದರು, ಕಂಡುದನು ಆಡುತ್ತಿದ್ದರು, ಆಡಿ ಅದನ್ನು ಮಾಡುತ್ತಿದ್ದರು. ಆದುದರಿಂದಲೇ ಸತ್ಯ ಮತ್ತು ಋತ ಎಂಬ ಎರಡು ಸ್ಪಷ್ಟವಾದ ಬೇರೆ ಬೇರೆ ಶಬ್ದಪ್ರಯೋಗಗಳು ನಮ್ಮ ವೈದಿಕ ವಾಙ್ಮಯದಲ್ಲಿ ಕಂಡುಬರುವವು. 'ಸತ್ಯ'ವೆಂದರೆ ಸತ್ತತ್ವವು, 'ಋತ'ವೆಂದರೆ ಸತ್ಯಕ್ಕನುಸರಿಸಿರುವ ನಡೆನುಡಿ, ಆಚಾರವಿಚಾರ. ವೇದಾಂತದ ಬೆನ್ನು ಹತ್ತಿದ ಕೂಡಲೆ ವ್ಯವಹಾರ ಬಿಡುವ ಕೆಟ್ಟ ಚಟವು ನಮಗೆ ಇತ್ತಿತ್ತಲಾಗಿ ಅಂದರೆ ನಮ್ಮ ಅಧೋಗತಿಯ ಕಾಲದಲ್ಲಿ ನಮ್ಮ ತಾಮಸಿಕ ವೃತ್ತಿಯ ಮೂಲಕ ಅಂಟಿಕೊಂಡಿದೆ. ನಿಜವಾಗಿ ನೋಡಿದರೆ ವ್ಯವಹಾರವೇದಾಂತಗಳು ವಿರೋಧಿಗಳಲ್ಲ. ಇನ್ನು ಕೆಲವು ವೇದಾಂತಿಗಳು ವ್ಯವಹಾರವನ್ನು ಬಿಟ್ಟು ಬಿಡುತ್ತಿರಬಹುದು. ಆದರೆ ಕೆಲವು ವೇದಾಂತಿಗಳಲ್ಲದವರು ಸಹ ವ್ಯವಹಾರವನ್ನು ಬಿಡುತ್ತಾರೆ. ವ್ಯವಹಾರ ಬಿಟ್ಟವರೆಲ್ಲ ಇಲ್ಲವೆ ವ್ಯವಹಾರ ಬಿಟ್ಟವರಷ್ಟೇ ಜನರು ವೇದಾಂತಿಗಳಿರುವದಿಲ್ಲ. ವ್ಯವಹಾರದಲ್ಲಿರುವ ಎಷ್ಟೋ ಜನರೂ ವೇದಾಂತಿಗಳಿರುತ್ತಾರೆ. ಹೀಗಿರುವದರಿಂದ ವ್ಯವಹಾರ ಬಿಡುವದು ಅಥವಾ ವ್ಯವಹಾರದಲ್ಲಿರುವದು ಇದೊಂದು ಸ್ವತಂತ್ರ ವಿಷಯವೆ ಹೊರತು ವೇದಾಂತಿಗಳು ವ್ಯವಹಾರವನ್ನು ಬಿಟ್ಟೇ ತೀರಬೇಕು, ಅಥವಾ ಮಾಡಿಯೆ ತೀರಬೇಕು ಎಂಬ ಯಾವ ಹಟವನ್ನೂ ಅಧ್ಯಾತ್ಮಶಾಸ್ತ್ರವು ಹಿಡಿಯುವದಿಲ್ಲ. ಕೆಲವು ವೇದಾಂತಿಗಳು ವ್ಯವಹಾರವನ್ನು ಮಾಡಬಹುದು. ಕೆಲವರು ಮಾಡಲಿಕ್ಕಿಲ್ಲ. ಎಲ್ಲ ವೇದಾಂತಿಗಳು ವ್ಯವಹಾರವನ್ನು ಮಾಡಲಿಕ್ಕೇಬೇಕು, ಎಂದೆನ್ನುವದೂ ತಪ್ಪು. ಎಲ್ಲ ವೇದಾಂತಿಗಳು ವ್ಯವಹಾರವನ್ನು ಬಿಡಲಿಕ್ಕೇಬೇಕು, ಎಂದೆನ್ನುವದಾದರೂ ಅಷ್ಟೇ ತಪ್ಪು. ವೇದಾಂತಿಗಳು ವ್ಯವಹಾರ ಮಾಡುವದು ಅಥವಾ

ಮಾಡದಿರುವದು ಆಯಾ ದೇಶ, ಕಾಲ, ಪರಿಸ್ಥಿತಿಯನ್ನೂ ಆಯಾ ಕಾಲದ ಲೋಕಸಂಗ್ರಹದ ಅವಶ್ಯಕತೆಯನ್ನೂ ಆಯಾ ಕಾಲದಲ್ಲಿ ಸತ್ಪಥಕ್ಕೆ ಜನರನ್ನು ಯಾವ ಬಗೆಯಿಂದ ಹಚ್ಚಬೇಕು ಎಂಬುದನ್ನೂ ಅವಲಂಬಿಸಿದೆ. ಆದುದರಿಂದಲೆ ಬೇರೆ ಬೇರೆ ಕಾಲದಲ್ಲಿ ಆಯಾ ಕಾಲದ ವೇದಾಂತಿಗಳು ನೆಲಮುಗಿಲುಗಳನ್ನು ಅಲುಗಾಡಿಸುವಂತಹ ಆಂದೋಲನಗಳನ್ನು ಮಾಡಿದರು, ಜನಸಾಮಾನ್ಯರಲ್ಲಿ ವಿಲಕ್ಷಣವಾದ ಜಾಗೃತಿಯನ್ನುಂಟುಮಾಡುವಂತಹ ಅಥವಾ ರಾಜ್ಯಾದಿಗಳನ್ನು ಸ್ಥಾಪಿಸುವಂತಹ ಮಹಾ ಕಾರ್ಯಗಳನ್ನೂ ಮಾಡಿದರು, ಇಲ್ಲವೆ ಸ್ವೇಚ್ಛೆಯಿಂದ ಅರಣ್ಯವಾಸಿಗಳಾಗಿ ಸ್ವಾನಂದಸಾಮ್ರಾಜ್ಯದಲ್ಲಿ ವಿಹಾರವನ್ನು ಮಾಡಿದರು.

ನಮ್ಮ ಪುರಾಣೇತಿಹಾಸಗಳ ಕಡೆಗೆ ನೋಡಿದರೆ ಇದೇ ನೋಟವು ನಮ್ಮ ಕಣ್ಣಿಗೆ ಬೀಳುವದು. ಜನಕ, ವಿದುರ, ಶ್ರೀಕೃಷ್ಣ, ಭೀಷ್ಮ, ಈ ಪುರಾಣಕಾಲದ ಉದಾಹರಣೆಗಳನ್ನು ನೋಡಿದರೆ ವೇದಾಂತಿಗಳು ವ್ಯವಹಾರವನ್ನು ಬಿಡಬೇಕಾಗುವದು ಅಥವಾ ವೇದಾಂತಕ್ಕೂ ವ್ಯವಹಾರಕ್ಕೂ ವಿರೋಧವಿರುವದು ಎಂಬ ವಿಧಾನಗಳು ಕುಗ್ಗಿ ಮುಗ್ಗಿ ಹೋಗುತ್ತವೆ. ಯಾಕಂದರೆ ಇವರಲ್ಲಿ ಶ್ರೀಕೃಷ್ಣ ಹಾಗೂ ಭೀಷ್ಮ ಇವರು ಮಾಡಿದಷ್ಟು ಹಿರಿಗೆಲಸಗಳನ್ನೂ ವ್ಯವಹಾರವನ್ನೂ ಇನ್ನಾರೂ ಮಾಡಿರಲಿಕ್ಕಿಲ್ಲ, ಇವರಷ್ಟು ಪ್ರೌಢ ವೇದಾಂತಿಗಳೂ ಬೇರೆ ಯಾರೂ ಇದ್ದಿಲ್ಲ. ಇತಿಹಾಸಕಾಲದಲ್ಲಿ ಕರ್ನಾಟಕದಲ್ಲಿಯೆ ಆಗಿಹೋದ ವಿದ್ಯಾರಣ್ಯ ಮಹಾಮುನಿಗಳ ಜೀವಿತದ ಕಡೆಗೆ ನೋಡಿದರೆ ನಮಗೇನು ಕಾಣುವದು? ಭಾರತೇತಿಹಾಸಮಂಡಲದಲ್ಲಿ ಕರ್ನಾಟಕದ ಕೀರ್ತಿಧ್ವಜವು ಕಡೆತನಕ ಕದಲದೇ ಸ್ಥಿರವಾಗಿ ನಿಲ್ಲಲಿಕ್ಕೆ ಅವರೇ ಕಾರಣರಲ್ಲವೆ? ಇನ್ನು ಇತ್ತೀಚೆಗಿನ ಉದಾಹರಣೆಯೆಂದರೆ ಲೋಕಮಾನ್ಯ ತಿಲಕರದು, ಮಹಾತ್ಮಾ ಗಾಂಧೀಯವರದು; ಇಬ್ಬರೂ ಒಳ್ಳೇ ವೇದಾಂತಿಗಳು, ಒಳ್ಳೇ ಹಿರಿದಾದ ಸಾಧಕರು. ಆದರೂ ಅಗಾಧವಾದ ವ್ಯವಹಾರಕ್ಷಮ ಕರ್ಮಯೋಗಿಗಳು. ಇಂತಿವು ವೇದಾಂತಿಗಳಿದ್ದು ವ್ಯವಹಾರ ಬಿಡದೇ ಇದ್ದವರ ಉದಾಹರಣೆಗಳಾದವು. ವೇದಾಂತಿಗಳು ವ್ಯವಹಾರವನ್ನು ಬಿಡುವದು ಅವಶ್ಯವಿಲ್ಲವೆಂದು ಇದರ ಮೇಲಿಂದ ಸಹಜವೆ ತಿಳಿಯುವಂತಿದೆ. ಇನ್ನು ವೇದಾಂತಿಗಳಿದ್ದು ವ್ಯವಹಾರವನ್ನು ಬಿಟ್ಟ ಉದಾಹರಣೆಗಳಾದರೂ ಎಷ್ಟೋ ಇರುವವು. ಆದರೆ ಅವುಗಳನ್ನು ಇಲ್ಲಿ ಕೊಡುವ ಕಾರಣವಿಲ್ಲ. ಯಾಕಂದರೆ ವ್ಯವಹಾರಕ್ಕೂ ವೇದಾಂತಕ್ಕೂ ವಿರೋಧವಿಲ್ಲವೆಂಬುದನ್ನು ತೋರಿಸುವದೆ ಇಲ್ಲಿ ನಮ್ಮ ಮುಖ್ಯ ಉದ್ದೇಶ.

ಮೇಲ್ಕಾಣಿಸಿದ ಮಹಾಮಹಿಮರು ಸ್ವತಃ ತಾವು ಉತ್ತಮವಾದ ವ್ಯವಹಾರವನ್ನು ಆಚರಿಸಿ ತೋರಿಸಿದ್ದಲ್ಲದೆ ಆ ಪ್ರಕಾರವಾಗಿ ಅಲ್ಲಲ್ಲಿ ತಮ್ಮ ಅಮೋಘ ವಾಣಿಯಿಂದ ನುಡಿದು ತೋರಿಸಿದ್ದಾರೆ. ಅವೆಲ್ಲವುಗಳನ್ನು ಇಲ್ಲಿ ಕಾಣಿಸುವ ಕಾರಣವಿಲ್ಲದಿದ್ದರೂ ಶ್ರೀಮದ್ವಿದ್ಯಾರಣ್ಯ ಸ್ವಾಮಿಗಳ ಒಂದು ವಿಶೇಷ ಮಹತ್ವದ ಉಕ್ತಿಯನ್ನು ಇಲ್ಲಿ ಉದಾಹರಿಸದೆ ಇರಲಾರೆನು. ಅವರು 'ಪಂಚದಶೀ' ಎಂಬ ತಮ್ಮ ವೇದಾಂತ ಗ್ರಂಥದ ಒಂದು ಶ್ಲೋಕದಲ್ಲಿ ವೇದಾಂತಿಗಳಿಗೆ ವ್ಯವಹಾರವು ವಿರೋಧಕವಲ್ಲವೆಂಬುದನ್ನು ಹೇಳಿದ್ದಾರೆ. 'ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿ ಲೌಕಿಕಂ' ರಾಜ್ಯಸ್ಥಾಪನೆ, ರಾಜ್ಯಕಾರ್ಯಾದಿ ಲೌಕಿಕ ವ್ಯವಹಾರಗಳನ್ನು ಉತ್ತಮ ರೀತಿಯಿಂದ ಮಾಡಲಿಕ್ಕೆ ಜ್ಞಾನಿಯು ಸಮರ್ಥನು, ಎಂದು ಅವರು ಹೇಳಿರುವರು. ಅವರ ನಡೆನುಡಿಗಳಲ್ಲಿಯ ಈ ಸಾಮರಸ್ಯವು ಬಹಳ ಮನೋವೇಧಕವಿರುವದೆಂಬಲ್ಲಿ ಯಾವ ಸಂಶಯವೂ ಇಲ್ಲ.

ವೇದಾಂತಕ್ಕೂ ವ್ಯವಹಾರಕ್ಕೂ ಏನೂ ಸಂಬಂಧವಿಲ್ಲವೆಂಬ ಕಲ್ಪನೆಯು ಜನಸಾಮಾನ್ಯರಲ್ಲಿ ರೂಢವಾಗಲಿಕ್ಕೆ ಕೆಲವು ಕಾರಣಗಳಾದರೂ ಆಗಿರುವವು. ಅವುಗಳಲ್ಲಿ ಮುಖ್ಯ ಕಾರಣವೆಂದರೆ, ವೇದಾಂತದ ಬಗ್ಗೆ ಇದ್ದ ನಮ್ಮ ತಪ್ಪು ತಿಳಿವಳಿಕೆಯು. ವೇದಾಂತದ ಯಥಾರ್ಥ ಕಲ್ಪನೆಯು ಈಗ ಅಡಗಿ ಹೋದುದರಿಂದ ಅದಕ್ಕೆ ಏನೋ ಒಂದು ಸಂಕುಚಿತ ಹಾಗೂ ಅನರ್ಥಕಾರಿಯಾದ ಅರ್ಥವು ಅಂಟಿಕೊಂಡಿದೆ. ಆ ಅರ್ಥವನ್ನು ಹೋಗಲಾಡಿಸಿ ವೇದಾಂತದ ನಿಜವಾದ ಅರ್ಥವೇನೆಂಬದನ್ನು ನಾವು ನೋಡಲಿಕ್ಕೆ ಬೇಕು. ಅಂದರೆ ಸಹಜವಾಗಿಯೆ ವೇದಾಂತ ಮತ್ತು ವ್ಯವಹಾರಗಳಿಗೆ ವಿರೋಧವಿರುವದೆಂಬ ಕಲ್ಪನೆಯು ಅಳಿದುಹೋಗುವದು. ವೇದಾಂತದ ನಿಜವಾದ ಅರ್ಥವನ್ನು ತಿಳಿದುಕೊಂಡರೆ ಅದು ಎಷ್ಟು ವ್ಯಾಪಕ ಹಾಗೂ ಗಹನವಾದ ಶಾಸ್ತ್ರವಿರುವದೆಂಬದನ್ನು ನಾವು ಮನಗಾಣುವೆವು. ಇದಲ್ಲದೆ ಶಾಂತ ಮನಸ್ಸಿನಿಂದ ವಿಚಾರ ಮಾಡಿದರೆ ಈ ಶಾಸ್ತ್ರವು ಜಡವಾದಿಗಳನ್ನು ಸಹ ತಲೆದೂಗಿಸುವಂತಹದಿರುವದೆಂದು ಕಂಡುಬರುವದು.

## ವೇದಾಂತವೆಂಬುದು ಒಂದು ಶಾಸ್ತ್ರವು

ಈ ಗುಹ್ಯತಮವಾದ ಶಾಸ್ತ್ರಕ್ಕೆ ವೇದಾಂತಶಾಸ್ತ್ರ, ಅಧ್ಯಾತ್ಮಶಾಸ್ತ್ರ, ಅಥವಾ ಮೋಕ್ಷಶಾಸ್ತ್ರ ಎಂಬ ಹೆಸರುಗಳನ್ನು ಕೊಡಬಹುದು. ಇದೊಂದು

'ಶಾಸ್ತ್ರ' (Science) ವಿರುವದೆಂಬ ಮಾತನ್ನು ನಾವು ಮೊದಲು ನೆನಪಿನಲ್ಲಿಡಲಿಕ್ಕೆಬೇಕು. ಇದೊಂದು ಯಾರೋ, ಹೇಗೋ ಹೇಳಿಟ್ಟ ಮಾತಲ್ಲ. ಇದು ಮಿಕ್ಕ ಶಾಸ್ತ್ರಗಳಂತೆ ಸಪ್ರಮಾಣ ಸಿದ್ಧಾಂತಗಳ ಅಡಿಗಲ್ಲುಗಳ ಮೇಲೆ ರಚಿಸಿದ ಶಾಸ್ತ್ರವು. ಇದಾದರೂ ನಿಯಮಬದ್ಧವು, ಕ್ರಮಬದ್ಧವು. ಪ್ರಯೋಗಗಳಿಂದ ಸಿದ್ಧಮಾಡಲಿಕ್ಕೆ ಬರುವಂತಹದು. ಮಿಕ್ಕ ಶಾಸ್ತ್ರಗಳ ಪರಿಶೋಧಕರಿರುವಂತೆ ಈ ಶಾಸ್ತ್ರಕ್ಕೂ ಪರಿಶೋಧಕರಿರುವರು. ಅವರು ಸ್ವತಃ ತಮ್ಮ ಅನುಭವದಿಂದ ರಚಿಸಿದ ಶಾಸ್ತ್ರವಿದು. ಆಯಾ ಶಾಸ್ತ್ರಗಳ ಪ್ರಮಾಣಗ್ರಂಥಗಳನ್ನೋದಿ ಆಯಾ ಪ್ರಯೋಗಗಳನ್ನು ಮಾಡಿ ನೋಡಿ ಆಯಾ ಸಿದ್ಧಾಂತಗಳನ್ನು ಖಂಡಿಸದೆ ಯಾವದೇ ಶಾಸ್ತ್ರಕ್ಕೆ ಸುಳ್ಳೆನ್ನುವದು ಅಥವಾ ಭ್ರಾಮಕವೆನ್ನುವದು ಹೇಗೆ ಅಸಮಂಜಸವೊ ಹಾಗೆಯೆ ಈ ಶಾಸ್ತ್ರವನ್ನಾದರೂ ತಿಳಿದುಕೊಳ್ಳದೆ ಇದಕ್ಕೆ ಹೆಸರಿಡುವದು ತಪ್ಪು. ಇದೊಂದು ಶುದ್ಧ, ಸಿದ್ಧ, ಶಾಸ್ತ್ರವು. ಇದು ಚೊಕ್ಕ ಚಿನ್ನವು. ಈ ಚಿನ್ನವನ್ನು ಶ್ರುತಿ ಅಥವಾ ಋಷಿಮುನಿಗಳ ಉಕ್ತಿಗಳಾದ ವೇದೋಪನಿಷತ್ ಗೀತಾದಿ ಗ್ರಂಥಗಳಲ್ಲಿ ಮೊದಲು ಅರಿಯಬೇಕು. ಅದನ್ನು ಮುಂದೆ ಯುಕ್ತಿ ಅಥವಾ ತರ್ಕದ ಒರೆಗಲ್ಲಿನ ಮೇಲೆ ತಿಕ್ಕಿ ಪರೀಕ್ಷಿಸಬೇಕು. ಕೊನೆಗೆ ಅನುಭೂತಿಯ ಅಗ್ನಿಯಲ್ಲಿ ಅಟ್ಟಿಸಿ ಶೋಧಿಸಬೇಕು. ಅಂದರೆ ಈಗ ಮಸಳಿಸಿದ ಇದರ ಮಿಂಚು ತೋರ್ಪಟ್ಟು ನಮ್ಮನ್ನು ತನ್ನ ತಿಳಿ ಬೆಳಗಿನಿಂದ ಹಿಗ್ಗಿಸದೆ ಇರದು.

ವೇದಾಂತ, ಅಧ್ಯಾತ್ಮ, ಅಥವಾ ಮೋಕ್ಷಶಾಸ್ತ್ರವೆಂದು ನಾವು ಈ ಶಾಸ್ತ್ರಕ್ಕೆ ಮೂರು ಹೆಸರುಗಳನ್ನು ಕಲ್ಪಿಸಿರುವೆವು. ಬೇರೆ ಬೇರೆ ವ್ಯುತ್ಪತ್ತಿಗಳ ಮೂಲಕ ಈ ಮೂರು ಬೇರೆ ಬೇರೆ ಹೆಸರುಗಳು ಆ ಶಾಸ್ತ್ರಕ್ಕೆ ಬಂದಿರುವವು. ವೇದಗಳ ಅಂತಿಮ ಭಾಗದಲ್ಲಿ ವಿಶೇಷ ಪ್ರಾಮುಖ್ಯದಿಂದ ಈ ಶಾಸ್ತ್ರವು ಹೇಳಲ್ಪಟ್ಟಿರುವದರಿಂದ ಈ ಶಾಸ್ತ್ರಕ್ಕೆ ವೇದಾಂತವೆನ್ನುವ ಪರಿಪಾಠವುಂಟು. ಆತ್ಮನ ಸಂಬಂಧದಿಂದ ಅಥವಾ ಆತ್ಮನ—ಅಂದರೆ ದೇಹೇಂದ್ರಿಯಾದಿಗಳ ವಿಷಯವಾಗಿ ಅಲ್ಲ, ಆದರೆ ಅದರಾಚೆಗಿರುವ ಆತ್ಮನ—ವಿಷಯವಾಗಿ ಈ ಶಾಸ್ತ್ರದಲ್ಲಿ ವಿವೇಚನವಿದ್ದುದರಿಂದ ಇದು ಅಧ್ಯಾತ್ಮಶಾಸ್ತ್ರವು. ಇದು ಮೋಕ್ಷದಾಯಿಯಾದ-ದರಿಂದ ಮೋಕ್ಷಶಾಸ್ತ್ರವು. ಅದು ಯಾವ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದೊ ಅವುಗಳ ಮೇಲಿಂದ ವೇದಾಂತಶಾಸ್ತ್ರವೆಂದೂ ಯಾತರ ವಿಷಯಕ್ಕೆ ಹೇಳಲ್ಪಟ್ಟಿರುವದೊ ಅದರ ಮೇಲಿಂದ ಅಧ್ಯಾತ್ಮಶಾಸ್ತ್ರವೆಂದೂ ಯಾವ ಫಲವನ್ನು ಕೊಡುವಂತಹದಿರುವದೊ ಅದರ ಮೇಲಿಂದ

ಮೋಕ್ಷಶಾಸ್ತ್ರವೆಂದೂ ಬೇರೆ ಬೇರೆ ಹೆಸರುಗಳು ಬಂದಿರುವವು. ಹೆಸರು ಯಾವದೇ ಇದ್ದರೂ ಆ ಶಾಸ್ತ್ರದ ಗುಟ್ಟು ಒಂದೇಯಿದೆ.

## ಮುಕ್ತಿಯ ಕಲ್ಪನೆ

ವೇದಾಂತದ ಬಗ್ಗೆ ತಪ್ಪು ತಿಳಿವಳಿಕೆಯಾಗಲಿಕ್ಕೆ ಕೆಲಮಟ್ಟಿಗೆ ಮೋಕ್ಷದ ಕಲ್ಪನೆಯು ಚನ್ನಾಗಿ ತಿಳಿಯದಿರುವದೂ ಒಂದು ಪ್ರಬಲವಾದ ಕಾರಣ ವಾಗಿದೆ. ಮೋಕ್ಷವೆಂದರೊಂದು ಯಾವ ಕಾಲಕ್ಕೊ ಯಾವ ಲೋಕ ದಲ್ಲಿಯೊ ಸಿಗತಕ್ಕ ವಸ್ತುವೆಂದು ಸಾಮಾನ್ಯ ವ್ಯಾವಹಾರಿಕರ ಕಲ್ಪನೆಯು. ಜೀವದಿಂದಿರುವ ವರೆಗಂತೂ ನಮಗೂ ಮೋಕ್ಷಕ್ಕೂ ಸಂಬಂಧವೆ ಇಲ್ಲ, ಸತ್ತ ಮೇಲೆ ಸಿಗತಕ್ಕ ವಸ್ತುವಿಗೆ ಈಗಿನಿಂದ ಚಡಪಡಿಸುವದೇಕೆ, ಅದು ಸಿಗಲಿಲ್ಲವೆಂದು ತಲ್ಲಣಿಸುವದೇಕೆ, ಮುಂತಾದ ಮುಕ್ತಾಫಲಗಳು ಕೆಲವರ ಬಾಯಿಂದ ಹೊರಬೀಳುವವು. ವೇದಾಂತವು ಆ ಮೋಕ್ಷವನ್ನು ಕೊಡತಕ್ಕ ಶಾಸ್ತ್ರವು, ಅಂದಮೇಲೆ ಆದರಿಂದ ಈ ಲೋಕದ ವ್ಯವಹಾರದಲ್ಲಿ ತೊಡಗಿರುವ ನಮಗೇನು ಪ್ರಯೋಜನ, ಎಂದು ಕೆಲವರು ನುಡಿಯುವರು. ನೀವು ಹೇಳುವ ಮೋಕ್ಷದ ಅವಶ್ಯಕತೆಯೆ ನಮಗಿಲ್ಲದ್ದರಿಂದ ಆ ಮೋಕ್ಷ ಶಾಸ್ತ್ರವಾಗಲಿ ಆ ವೇದಾಂತಶಾಸ್ತ್ರವಾಗಲಿ ನಮಗೇಕೆ, ಎಂದು ಜನರು ಅನ್ನುವದು ಸಹಜವು. ಮೋಕ್ಷವೆಂಬುದು ಎಲ್ಲಿಂದಲೊ ಹೊರಗಿನಿಂದ ಸಿಗತಕ್ಕ ಒಂದು ವಸ್ತು ಎಂಬ ಕಲ್ಪನೆಯಾದುದರಿಂದ ಈ ಅನರ್ಥವು ಉಂಟಾಗಿದೆ. ಆದರೆ ಮೋಕ್ಷದ ಯಥಾರ್ಥ ಕಲ್ಪನೆಯನ್ನು ನಾವು ತಿಳಿದು ಕೊಂಡರೆ ನಾವೆಲ್ಲರೂ ಮೋಕ್ಷಾರ್ಥಿಗಳು, ಮುಮುಕ್ಷುಗಳು ಇರುವೆವೆಂಬದು ಗೊತ್ತಾಗುವದು ಹಾಗೂ ಈ ಮೋಕ್ಷಶಾಸ್ತ್ರವು ಎಲ್ಲರ ಸಲುವಾಗಿಯೂ ಅವಶ್ಯಕವಾದ ಶಾಸ್ತ್ರವೆಂದು ಮನವರಿಕೆಯಾಗುವದು.

ಈ ಬಗ್ಗೆ ಶ್ರೀಕೃಷ್ಣದಾಸನ ಉಕ್ತಿಯ ಕೊನೆಯ ಎರಡು ಚರಣಗಳ ಕಡೆಗೆ ನೋಡುವ.

**ಜೀವನ್ಮುಕ್ತಿರ್ಮುಕ್ತಿರೇಕಾ ಮತಾ ಸಾ ।**
**ನಿತ್ಯಾನಂದಾ ಸ್ಥಿತಿರ್ಯಾ ಪರಾ ಸಾ ॥**

ಇದರ ತಾತ್ಪರ್ಯವೇನಂದರೆ, ಜೀವನ್ಮುಕ್ತಿಯೆ ಒಂದು ಮುಕ್ತಿಯು ಹಾಗೂ ನಿತ್ಯಾನಂದ ಸ್ಥಿತಿಯೆ ಎಲ್ಲಕ್ಕೂ ಶ್ರೇಷ್ಠವಾದ ಗತಿಯು. ಇದರ

ಮೇಲಿಂದ ಮುಕ್ತಿಯೆಂದರೆ ಹೊರಗಿನಿಂದ ಬರುವ ವಸ್ತುವೂ ಅಲ್ಲ, ಯಾರಾದರೂ ಕೊಡುವ ವಸ್ತುವೂ ಅಲ್ಲ. ಸತ್ತಮೇಲೆ ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಹೋದಮೇಲೆಯೆ ಸಿಗತಕ್ಕ ವಸ್ತುವೆಂದೂ ಇದರ ಅರ್ಥವಲ್ಲ. ಆದರೆ ಅದೊಂದು ಚಿದವಸ್ಥೆಯು. ಚಿತ್ತದ ನಿತ್ಯಾನಂದ ಸ್ಥಿತಿಯೆ ಎಲ್ಲಕ್ಕೂ ಶ್ರೇಷ್ಠವಾದ ಗತಿಯು, ಅದೇ ಮೋಕ್ಷವು. ಈ ತರದ ಚಿತ್ತದ ಸ್ಥಿತಿಯು ಸತ್ತಮೇಲೆ ದೊರೆಯಬೇಕೆಂದು ನಿರ್ಬಂಧವಿರುವದೆ ? ಇಲ್ಲ. ಜೀವದಿಂದಿರುವಾಗ ಈ ಸ್ಥಿತಿಯು ಪ್ರಾಪ್ತವಾದರೇನೆ ಅದು ನಿಜವಾದ ಮುಕ್ತಿಯು. ಯಾಕಂದರೆ ಯಾವುದು ಜೀವದಿಂದಿರುವಾಗ ದೊರೆಯದೆ ಹೋಗುವದೊ ಅದು ಸತ್ತಬಳಿಕ ಎಲ್ಲಿಂದ ದೊರೆಯಬೇಕು ? ಇಂದ್ರಿಯ ಮನಾದಿಗಳಾಚೆಗಿರುವ ಆತ್ಮನಲ್ಲಿ ಆನಂದದ ಸತತ, ಸ್ವತಂತ್ರ, ಸ್ವಯಂಸ್ಫುರಣವೆ ಎಲ್ಲಕ್ಕೂ ಶ್ರೇಷ್ಠವಾದ ಅವಸ್ಥೆಯು, ಹಾಗೂ ದೇಹವಿರುವಾಗ ಸಹ ಈ ಅವಸ್ಥೆಯು ಪ್ರಾಪ್ತವಾಗುವದೆ ಮುಕ್ತಿ, ಜೀವನ್ಮುಕ್ತಿ ಅಥವಾ ಮೋಕ್ಷವೆನಿಸುವದು.

ಶಾಸ್ತ್ರದಲ್ಲಿ ಮುಕ್ತಿಯ ನಾಲ್ಕು ಭೇದಗಳು ಮೊದಲಿನಿಂದಲೆ ಮಾಡಲ್ಪಟ್ಟಿವೆ. ಸಾರೂಪ್ಯ, ಸಾಲೋಕ್ಯ, ಸಾಮೀಪ್ಯ, ಸಾಯುಜ್ಯ, ಇವು ನಾಲ್ಕುಬಗೆಯ ಮುಕ್ತಿಗಳು. ಈ ಶರೀರವು ಬಿದ್ದು ಹೋದಮೇಲೆ ಯಾವನಿಗೆ ಯಾವ ಮುಕ್ತಿಯು ದೊರೆಯುವದು ಇದರ ವಿಚಾರ ಮಾಡುವದು ಸದ್ಯಕ್ಕೆ ಅವಶ್ಯವಿಲ್ಲ. ಮುಕ್ತಿಯ ಹಾಗೂ ಮನುಷ್ಯನ ಆತ್ಯಂತಿಕ ಶ್ರೇಷ್ಠ ಅವಸ್ಥೆಯ ಮೇಲಿನ ವರ್ಣನೆಯು ಸಾಕಷ್ಟು ಸ್ಪಷ್ಟವಿರುವದು. ಈ ವರ್ಣನೆಯಂತೆ ನೋಡಿದರೆ ನಿತ್ಯಾನಂದ ಸ್ಥಿತಿಯೆ ಪರಮಗತಿಯೆಂದೆನಿಸುವದು. ಇನ್ನು ವ್ಯವಹಾರದಲ್ಲಿ ತೊಡಗಿದವರು ಈ ತರದ ಮೋಕ್ಷವು ಸಹ ತಮಗೆ ಬೇಡವೆಂದು ಹೇಳುವರೆ ? ಮೋಕ್ಷದ ವಿಪರೀತ ಕಲ್ಪನೆ ಮಾಡಿಕೊಂಡುದರಿಂದ ಅವರು ತಮಗೆ ಆ ಮೋಕ್ಷವೂ ಬೇಡ, ಆ ಶಾಸ್ತ್ರವೂ ಬೇಡ, ಎಂದು ಹೇಳುತ್ತಿರುವರು. ಆದರೆ ನಿತ್ಯಾನಂದ ಸ್ಥಿತಿಯೆ ಮೋಕ್ಷವು ಹಾಗೂ ಈ ಜೀವನದಲ್ಲಿಯೆ ಅದನ್ನು ದೊರಕಿಸಬಹುದು, ಎಂಬ ಪ್ರಮೇಯವನ್ನು ಅವರ ಮುಂದಿಟ್ಟರೆ, ಅವರು, " ಹೀಗಿದ್ದರೆ ನಮಗೆ ಈ ಮೋಕ್ಷವೂ ಬೇಕು. ಈ ಮೋಕ್ಷಶಾಸ್ತ್ರವೂ ಬೇಕು " ಎಂದು ಮುಂದೆ ಬರುವರೆಂಬಲ್ಲಿ ಯಾವ ಸಂಶಯವೂ ಇಲ್ಲ !

ಸಾಂಸಾರಿಕರಾಗಲಿ ವ್ಯಾವಹಾರಿಕರಾಗಲಿ ತಮಗೆ ಮೋಕ್ಷವು ಬೇಕಾಗಿಲ್ಲ ಅಥವಾ ತಮಗೆ ಅಧ್ಯಾತ್ಮಶಾಸ್ತ್ರದ ಗೊಡವೆ ಬೇಡ ಎಂದು ಹೇಳುವಾಗ

ಮೋಕ್ಷ ಹಾಗೂ ಮೋಕ್ಷಶಾಸ್ತ್ರ ಇವೆರಡೂ ಈ ಲೋಕಕ್ಕೆ ಸಂಬಂಧಿಸಿದ ವುಗಳಲ್ಲ ಹಾಗೂ ಸದ್ಯಕ್ಕೆ ಅವು ದೊರೆಯದಿರುವದರಿಂದ ತಮಗೆ ಏನೂ ಹಾನಿಯಿಲ್ಲ ಹಾಗೂ ಅವು ಸಾಮಾನ್ಯ ಜನರಿಗೆ ದೊರಕುವದು ಅಶಕ್ಯವು ಎಂಬ ಕಲ್ಪನೆಗಳು ಅವರ ಮನಸಿನಲ್ಲಿರುತ್ತವೆ. ಆದರೆ ಮೋಕ್ಷದ ಬಗ್ಗೆ ಈ ತರದ ಕಲ್ಪನೆಗಳನ್ನು ಮಾಡಿಕೊಂಡು ಕೂಡುವದು ತಪ್ಪು. ಯಾಕಂದರೆ ಹಾಗೆ ಇದ್ದದ್ದಾದರೆ ಧರ್ಮಸ್ಥಾಪಕರು ಹಾಗೂ ಧರ್ಮೋದ್ಧಾರಕರು ಧರ್ಮವು ಮೋಕ್ಷದಾಯಕವು ಎಂದು ಹೇಳಿ ಧರ್ಮದ ಉಪದೇಶವನ್ನು ಸಾಮಾನ್ಯ ಜನರಿಗೆ ಮಾಡುತ್ತಿದ್ದಿಲ್ಲ. ಸರ್ವರಿಗೆ ಸಾಮಾನ್ಯವಾದ ಧ್ಯೇಯದ ಸಾಧನೆಗಾಗಿಯೆ ಧರ್ಮವೂ ಧರ್ಮೋದ್ಧಾರಕರೂ ಪ್ರವೃತ್ತರಾಗಿರುವರು. ಅಖಿಲ ಮಾನವಕೋಟಿಗೆ ಮೋಕ್ಷವೆ, ಅಂದರೆ ನಿತ್ಯಾನಂದ ಸ್ಥಿತಿಯೆ ಸರ್ವ ಸಾಮಾನ್ಯ ಧ್ಯೇಯವು. ಮೋಕ್ಷವೆಂದ ಕೂಡಲೆ ಸತ್ತ ಮೇಲೆ ಯಾವದೋ ಒಂದು ಸ್ಥಳದಲ್ಲಿ ಸುಖವನ್ನನುಭವಿಸುವದು ಎಂದು ತಿಳಿಯದೆ ಇಲ್ಲಿಯೆ ಇಹಲೋಕದಲ್ಲಿಯೆ ಆತ್ಯಂತಿಕ ಸುಖವನ್ನು ಅನುಭವಿಸುವುದು ಎಂದು ತಿಳಿದರೆ ಮೋಕ್ಷವು ಎಲ್ಲರ ಸಾಮಾನ್ಯ ಧ್ಯೇಯವು, ಮೋಕ್ಷವು ಎಲ್ಲರಿಗೂ ಬೇಕಾದ ವಸ್ತುವು, ಎಂಬದು ಸ್ಪಷ್ಟವಾಗುತ್ತದೆ. ಮರಣಾನಂತರ ಆತ್ಮನ ಮುಕ್ತಸ್ಥಿತಿಗೆ ಸಹ ಮೋಕ್ಷವೆಂಬುದೆ ಹೆಸರು. ಆದರೆ ಮೋಕ್ಷವೆಂದರೆ ಅಷ್ಟೇ ಅಲ್ಲ. ಇಹಲೋಕದೊಳಗಿನ ನಿತ್ಯಾನಂದ ಸ್ಥಿತಿಯು ಸಹ ಮೋಕ್ಷದ ಕಲ್ಪನೆ ಯಲ್ಲಿ ಒಳಗೊಂಡಿರುವದೆಂದು ನಾವು ಯಾವಾಗಲೂ ಲಕ್ಷದಲ್ಲಿಡಬೇಕು.

## ನಮ್ಮ ಧ್ಯೇಯವೇನು ?

ಇನ್ನು ನಿತ್ಯಾನಂದ ಸ್ಥಿತಿಯೆ ಎಲ್ಲ ಜನಸಾಮಾನ್ಯರ ಧ್ಯೇಯವಿರುವದೊ ಹೇಗೆ ಇದನ್ನು ನೋಡುವ. ಕೀಟಾದಿ ಬ್ರಹ್ಮಪರ್ಯಂತ ಎಲ್ಲರೂ ಹಗಲಿರುಳು ಒಂದಿಲ್ಲೊಂದು ಬಗೆಯ ಕರ್ಮದಲ್ಲಿ ನಿರಂತರ ನಿರತರಿದ್ದುದನ್ನು ನಾವು ನೋಡುವೆವು. ಈ ಚಟುವಟಿಕೆಯ, ಈ ಕರ್ಮದ, ಈ ಅಹೋರಾತ್ರ ದುಡಿತದ ಅರ್ಥವೇನು ? ಈ ಭೂತಮಾತ್ರಗಳು ಈ ತರದ ಚಟುವಟಿಕೆಯಲ್ಲಿ ಯಾಕೆ ಕಾಲ ಕಳೆಯುತ್ತಿರುವವು ಇದನ್ನು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಇವೆಲ್ಲ ಸುಖದ ಸಲುವಾಗಿ ಈ ಕರ್ಮದಲ್ಲಿ ತೊಡಗಿರುವವೆಂಬುದು ನಿಚ್ಚಳ ವಾಗಿ ಕಣ್ಣಿಗೆ ಕಾಣುತ್ತದೆ. ದುಃಖನಿವಾರಣೆ ಹಾಗೂ ಸುಖಸಂಪಾದನೆ ಇವೇ ಎಲ್ಲ ಪ್ರಾಣಿಮಾತ್ರಗಳ ಕರ್ಮದ ಉದ್ದೇಶವು. ದುಃಖನಿವಾರಣೆ

ಯೆಂದರೂ ಅದು ಪರ್ಯಾಯದಿಂದ ಸುಖಸಂಪಾದನೆಯ ಮಾರ್ಗವೆ. ಸುಖೇಚ್ಛೆಯೆ ಎಲ್ಲ ಕರ್ಮದ ಆದಿಬೀಜವು. ಆದರೆ ಯಾವ ಸುಖದ ಸಲುವಾಗಿ ಸರ್ವಜೀವಗಳು ಹೆಣಗುತ್ತಿರುವವೋ ಆ ಸುಖವು ಈ ಜೀವಗಳಿಗೆ ದೊರಕುತ್ತಿರುವದೇ ? ಆ ಸುಖವು ಸ್ಥಿರವಾಗಿರುವದೇ ? ಈ ಪ್ರಶ್ನೆಗಳಿಗೆ ಇಲ್ಲವೆಂದೆ ಉತ್ತರ ಕೊಡಬೇಕಾಗುತ್ತದೆ. ಯಾಕಂದರೆ ನಾವು ಜಗತ್ತಿನಲ್ಲಿ ಏನು ನೋಡುತ್ತಿರುವೆವು ? ಅನಂತ ಪ್ರಾಣಿಗಳು ಅನಂತ ಪ್ರಕಾರದಿಂದ ಸುಖದ ಬೆನ್ನುಹತ್ತಿ ಪ್ರಯತ್ನಪಡುತ್ತಿರುವವು. ಆದರೆ ಆ ಸುಖವು ಅಸ್ಥಿರವು, ಕ್ಷಣಭಂಗುರವು, ದುಃಖಮಿಶ್ರಿತವು ಹೀಗೆ ಇರುವದು. ಆದುದರಿಂದ ಈ ಸುಖದಿಂದ ಯಾವ ಪ್ರಾಣಿಯೂ ಸಮಾಧಾನಪಡದೆ ಪುನಃ ಸುಖವನ್ನು ಬೆನ್ನಟ್ಟುತ್ತಿರುವನು. ಅದು ಕೈಗೆ ಸಿಕ್ಕದೆ ಬಿಸಿಲ್ಗುದುರೆಯು ಬೇಸಿಗೆಯೊಳಗೆ ಬೈಲಲ್ಲಿ ಅಡ್ಡಾಡುವ ಎರಳೆಗಳನ್ನು ಓಡಿಸಿ ಓಡಿಸಿ ದಣಿಸಿ ಅವುಗಳನ್ನು ಪೀಡಿಸುವಂತೆ ಈ ಸಂಸಾರಸುಖವು ಪ್ರಾಣಿಮಾತ್ರರನ್ನು ದಣಿಸಿ ದಣಿಸಿ ಕಂಗೆಡಿಸುತ್ತಿರುವದು. ಹೀಗಾಗುವ ಕಾರಣವೇನು ? ಇದನ್ನು ಹೇಗೆ ತಪ್ಪಿಸಬೇಕು ?

ಹೀಗಾಗುವ ಕಾರಣವೇನಂದರೆ ನಮಗೆ ನಿಜವಾಗಿ ಬೇಕಾದದ್ದೊಂದು ವಸ್ತುವು, ನಾವು ಬೆನ್ನುಹತ್ತಿದ್ದು ಬೇರೊಂದು ವಸ್ತುವು. ಬಿಂಬವನ್ನು ಬಿಟ್ಟು ನಾವು ಪ್ರತಿಬಿಂಬದ ಬೆನ್ನುಹತ್ತಿರುವೆವು. ಹಾಲಿನ ಹಸಿವನ್ನು ನಾವು ನೀರಿನಿಂದ ಹೋಗಲಾಡಿಸುವ ಹಂಬಲದಲ್ಲಿರುವೆವು. ನಮಗೆ ಬೇಕಾದದ್ದು ಸ್ಥಿರಸುಖವು, ನಿತ್ಯಸುಖವು, ಅಚಲಶಾಂತಿಯು, ನಾವು ಬೆನ್ನುಹತ್ತಿದ್ದು ಅಸ್ಥಿರ, ಅನಿತ್ಯ, ಚಂಚಲ ಸುಖವು. ನಮಗೆ ಬೇಕಾದದ್ದು ದುಃಖದ ಸೋಂಕಿಲ್ಲದ ನಿತ್ಯಾನಂದವು; ನಾವು ಈಗ ಬೆನ್ನುಹತ್ತಿದ್ದು ದುಃಖಮಿಶ್ರಿತ ಅಥವಾ ದುಃಖಪರಿಣಾಮಿಯಾದ ಅನಿತ್ಯ ಆನಂದವು. ಆತ್ಮಾನಂದದ ಕಡೆಗೆ ನಮ್ಮ ಅಂತರಾತ್ಮನು ಎಳಸುತ್ತಿರುವನು. ಅವನನ್ನು ನಾವು ವಿಷಯಾನಂದದಿಂದ ತೃಪ್ತಿಬಡಿಸಬೇಕೆನ್ನುವೆವು. ನಿತ್ಯನಿರಂತರ ಆತ್ಮಸುಖದೆಡೆಗೆ ಹೋಗಲಿಚ್ಛಿಸುವ ನಮ್ಮ ಶಕ್ತಿಗಳನ್ನು ಇಂದ್ರಿಯಸುಖದಲ್ಲಿ ತೊಡಗಿಸಿ ಅವುಗಳನ್ನು ನಾವು ಬಳಲಿಸುತ್ತಿರುವೆವು. ಈ ಮೂಲಕವೆ ಎಲ್ಲಿ ನೋಡಿದಲ್ಲಿ ಅಶಾಂತಿ, ಅಸಮಾಧಾನ, ಅಸಂತೋಷ ಇವುಗಳ ಹಾವಳಿಯೆ ಹಾವಳಿ. ಅಡ್ಡದಾರಿಗೆ ಬಿದ್ದುದರಿಂದ ನಮ್ಮ ಸ್ಥಿತಿಯು ಹೀಗಾಗಿರುವದು.

ನೀವು ಹೇಳುವದು ನಮಗೆ ಸಮ್ಮತವಿಲ್ಲ, ನಮಗೆ ಬೇಕಾದದ್ದು ಇಂದ್ರಿಯಸುಖವೆ ಎಂದು ಯಾರಾದರೂ ನುಡಿದರೆ ಅವರಿಗೆ ಒಂದೇ ಪ್ರಶ್ನೆಯು;

ಅದೇನಂದರೆ; ಇಂದ್ರಿಯಸುಖವೆ ನಿಮಗೆ ಬೇಕಾಗಿದ್ದಾದರೆ, ಅದೇ ನಿಮ್ಮ ನಿಜವಾದ ಗುರಿಯಾಗಿದ್ದರೆ ಇಂದ್ರಿಯಸುಖಗಳು ದೊರೆತರೆ ನೀವು ಪೂರ್ಣ ಸಂತೃಪ್ತರಾಗಲಿಕ್ಕೆಬೇಕು. ಯಾವದೆ ಇಂದ್ರಿಯಸುಖದಿಂದ ಹೀಗೆ ಸಂಪೂರ್ಣ ಶಾಂತಿ ದೊರೆಯುತ್ತಿರುವದೆ? ಅನುಭವಿಕರು ಹೇಳಲಿ. ಸುಖಗಳನ್ನುಂಡುಂಡು ಆಗಿನ ಮಟ್ಟಿಗೆ ಇಂದ್ರಿಯಗಳು ತಣಿಯುತ್ತವೆ, ಕೊನೆಗೆ ದಣಿದು ಶಿಥಿಲ ವಾಗುತ್ತವೆ, ಆಯಾ ವಿಷಯಗಳು ಕಾಲಕಾಲಕ್ಕೆ ದೊರೆಯದೆ ಇದ್ದರೆ ಒಮ್ಮೆಲೆ ದುಃಖದಲ್ಲಿ ಮುಳುಗುತ್ತವೆ. ಅಥವಾ ಆಯಾ ವಿಷಯಗಳು ಯೋಗ್ಯ ತರಗತಿಯವಿಲ್ಲದಿದ್ದರೆ ಪ್ರಾಣಿಗೆ ದುಃಖವು ಆಗುತ್ತದೆ. ಹೀಗೆ ಒಂದಿಲ್ಲೊಂದು ಬಗೆಯಿಂದ ವಿಷಯಸುಖವು ದುಃಖಮೂಲವೂ ಪರಾವ ಲಂಬಿಯೂ ಇರುವದು. ಆದರೆ ಆತ್ಮಸುಖದ ಮಾತು ಹಾಗಿಲ್ಲ. ಅದು ನಿತ್ಯವು, ದುಃಖರಹಿತವು, ನಿಜವಾದ ಆನಂದವನ್ನು ಕೊಡುವಂತಹದು ಇರುವದು.

## ವಿಷಯಸುಖವೂ ಆತ್ಮಸುಖವೂ

ನಿತ್ಯಾನಂದ ಅಥವಾ ಆತ್ಮಸುಖ ಹಾಗೂ ಅನಿತ್ಯಾನಂದ ಅಥವಾ ವಿಷಯ ಸುಖ ಇವುಗಳಲ್ಲಿಯ ಭೇದವನ್ನು ಚನ್ನಾಗಿ ವಿಮರ್ಶಿಸುವ. ವಿಷಯ ಸುಖದಿಂದ ನಮಗೆ ಸ್ಥಿರವಾದ ಸಂತೋಷವುಂಟಾಗುವದಿಲ್ಲವೆಂಬದು ಅನುಭವದ ಸಂಗತಿಯು. ಇದರ ಕಾರಣವೇನಂದರೆ ಅದರಲ್ಲಿ ಕುಂದು ಕೊರತೆಗಳು ತುಂಬಿತುಳುಕುತ್ತಿರುವವು, ವಿಷಯಸುಖದಿಂದ ಸಂತೃಪ್ತಿಯು ಉಂಟಾಗುವದು ಅಶಕ್ಯವು. ಅದರಿಂದ ಆಶಾಪಾಶವು ಮಾತ್ರ ಹೆಚ್ಚು ಹೆಚ್ಚು ಬಿಗಿಯಾಗಬಲ್ಲದು. ವಿಷಯಸುಖದ ಬೆನ್ನುಬಿದ್ದಷ್ಟು ನಾವು ಪರತಂತ್ರರಾಗುವೆವು. ಇದನ್ನು ಚನ್ನಾಗಿ ಪರೀಕ್ಷಿಸಿ ಹೋಲಿಸಿ ನೋಡ ಬೇಕಾಗಿದ್ದರೆ ಒಂದೆಡೆಗೆ ಆತ್ಮಸುಖ ಇನ್ನೊಂದೆಡೆಗೆ ಇಂದ್ರಿಯಸುಖ ಇವುಗಳನ್ನಿಟ್ಟು ತರ್ಕದ ತಕ್ಕಡಿಯಲ್ಲಿ ಹಾಕಿ ತೂಗಬೇಕು, ಅನುಭವದ ಬೆಳಕಿನಲ್ಲಿ ನೋಡಬೇಕು. ಅಂದರೆ ಎರಡೂ ಬಗೆಯ ಸುಖಗಳ ಯೋಗ್ಯ ಬೆಲೆಯು ನಮಗೆ ತಿಳಿಯುವದು. ಮೊದಲು ಆತ್ಮಸುಖವೆಂದರೇನು ಹಾಗೂ ಇಂದ್ರಿಯಸುಖವೆಂದರೇನು ಇದನ್ನು ತಿಳಿದುಕೊಂಡು ಆಮೇಲೆ ಅವುಗಳನ್ನು ಹೋಲಿಸಿ ನೋಡುವ. ಇದುವರೆಗೆ ಆತ್ಮಸುಖ ಹಾಗೂ ಇಂದ್ರಿಯಸುಖ ಇವುಗಳ ಒಂದೆರಡು ಲಕ್ಷಣಗಳನ್ನು ಮಾತ್ರ ನೋಡಿದೆವು.

ಆದರೆ ಇವುಗಳ ಸಂಪೂರ್ಣ ವಿಮರ್ಶೆಯನ್ನಾಗಲಿ ವ್ಯಾಖ್ಯೆಯನ್ನಾಗಲಿ ಮಾಡಲಿಲ್ಲ. ಅವೆರಡನ್ನೂ ಹೋಲಿಸುವದಕ್ಕೂ ಪೂರ್ವದಲ್ಲಿ ಆ ವಿಮರ್ಶೆಯನ್ನು ಮಾಡುವದು ಅತ್ಯವಶ್ಯವಿದೆ.

ಇಂದ್ರಿಯಗಳು, ಬುದ್ಧಿ, ಅಥವಾ ಭಾವನೆಯ ದ್ವಾರಾ ಆಗುವ ಸುಖವೆ ವಿಷಯಸುಖವೆನಿಸುವದು. ಇಂದ್ರಿಯಗಳ ಇಲ್ಲವೆ ವಿಷಯಗಳ ಸಂಬಂಧವಿಲ್ಲದೆ ತನ್ನಷ್ಟಕ್ಕೆ ತಾನೆ ಜ್ಞಾನರೂಪಿಯಾದ ಆತ್ಮನಲ್ಲಿ ಸ್ವಯಂಸ್ಫೂರ್ತಿಯಿಂದ ಸ್ಫುರಿಸುವ ಆನಂದವೇ ಆತ್ಮಾನಂದವು. ಪ್ರಾಣಿಗೆ ಕಿವಿ, ಕಣ್ಣು, ನಾಲಿಗೆ, ಮೂಗು, ಮೈ, ಇವೈದು ಇಂದ್ರಿಯಗಳಿರುವವು, ಸೃಷ್ಟಿಯಲ್ಲಿ ಇವುಗಳಿಗನುವಾಗುವಂಥ ಶಬ್ದ, ರೂಪ, ರಸ, ಗಂಧ, ಸ್ಪರ್ಶ ಇವೈದು ವಿಷಯಗಳಿರುವವು. ಅನುಕ್ರಮದಿಂದ ಆಯಾ ವಿಷಯಗಳು ಅನುಕೂಲ ರೀತಿಯಿಂದ ಆಯಾ ಇಂದ್ರಿಯಗಳ ಬಳಿಗೆ ಬಂದವೆಂದರೆ ಆ ಸಂಬಂಧದ ಮೂಲಕ ಜೀವಕ್ಕೆ ಒಂದು ಬಗೆಯ ಆನಂದವಾಗುತ್ತದೆ. ಇದೇ ಪ್ರಕಾರ ಬುದ್ಧಿಗಮ್ಯ ವಿಷಯದ ಅನುಕೂಲ ಸಂಬಂಧದಿಂದಲೂ ಭಾವನಾಗಮ್ಯ ವಿಷಯದ ಅನುಕೂಲ ಸಂಬಂಧದಿಂದಲೂ ಬುದ್ಧಿದ್ವಾರಾ ಹಾಗೂ ಭಾವನಾ ದ್ವಾರಾ ಸುಖವಾಗುತ್ತದೆ. ಉದಾಹರಣೆಗೆ, ಇಂಪಾದ ಗಾಯನವನ್ನು ಕೇಳಿದರೆ, ಸುಂದರ ರೂಪವನ್ನು ನೋಡಿದರೆ, ಸವಿ ಪದಾರ್ಥದ ರುಚಿ ನೋಡಿದರೆ, ಸುಗಂಧವನ್ನು ಮೂಸಿದರೆ, ಮೃದುವಸ್ತುವಿಗೆ ಸ್ಪರ್ಶ ಮಾಡಿದರೆ ಅನುಕ್ರಮವಾಗಿ ಕಿವಿ ಕಣ್ಣು ನಾಲಿಗೆ ಮೂಗು ಮೈ ಇವುಗಳ ದ್ವಾರಾ ಸುಖವಾಗುತ್ತದೆ. ಈ ಐದೂ ಉದಾಹರಣೆಗಳಲ್ಲಿ ಆಯಾ ವಿಷಯಗಳಿಗೂ ಇಂದ್ರಿಯಗಳಿಗೂ ಸಂಬಂಧವು ಒದಗಿತು. ಅದು ಅನುಕೂಲ ಸಂಬಂಧವಿದ್ದಿತು. ಆದುದರಿಂದ ಸುಖವಾಯಿತು. ಅದೇ ಪ್ರತಿಕೂಲ ಸಂಬಂಧವಿದ್ದರೆ ಸುಖವಾಗುವದಿಲ್ಲವೆಂಬುದು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ. ಹೇಗಂದರೆ ಕರ್ಕಶ ಧ್ವನಿಯನ್ನು ಕೇಳಿದರೆ, ವಿದ್ರೂಪವನ್ನು ನೋಡಿದರೆ, ಹೊಲಸು ನಾತನ್ನು ಮೂಸಿದರೆ, ಕಹಿ ಪದಾರ್ಥವನ್ನುಂಡರೆ, ಕಠಿಣ ವಸ್ತುವನ್ನು ಮುಟ್ಟಿದರೆ ದುಃಖವೆ ಆಗುವದು ಹೊರ್ತು ಸುಖವು ಆಗದು. ಇದೇ ರೀತಿಯಲ್ಲಿ ಗಣಿತದಂಥ ಬುದ್ಧಿಗಮ್ಯ ವಿಷಯದ ಅನುಕೂಲ ಸಂಬಂಧದಿಂದ ಸುಖವಾಗುವದು ಹಾಗೂ ಪ್ರೇಮ ಮುಂತಾದ ಭಾವನೆಗಳ ಅನುಕೂಲ ಸಂಬಂಧದಿಂದ ಸುಖವಾಗುವದು. ಇವೆಲ್ಲವೂ ವಿಷಯಸುಖಗಳೆನ್ನಬಹುದು. ಆತ್ಮಸುಖಕ್ಕೆ ಈ ಇಂದ್ರಿಯವಿಷಯಗಳ ಅಥವಾ ಅವುಗಳ ಪರಸ್ಪರ ಅನು

ಕೂಲ ಸಂಬಂಧಗಳ ಅವಶ್ಯಕತೆಯೆ ಇಲ್ಲ. ತನ್ನ ಸ್ವರೂಪದ ಅರಿವಿನಿಂದ ತನ್ನಷ್ಟಕ್ಕೆ ತಾನೇ ಸಹಜವಿದ್ದ ಆನಂದವು ಸ್ಫುರಿಸುವದೆ ಆತ್ಮಾನಂದವೆನಿಸಿಸುವದು. ಅದಕ್ಕೆ ಹೆಚ್ಚು ಕಡಿಮೆಯ ಅಂಜಿಕೆಯಿಲ್ಲ, ತಾರತಮ್ಯದ ಹೆದರಿಕೆಯಿಲ್ಲ, ಅನುಕೂಲ ಪ್ರತಿಕೂಲ ಸಂಬಂಧವೆಂಬ ಬೆದರಿಕೆಯಿಲ್ಲ. ಹೀಗೆ ಆತ್ಮಸುಖ ಮತ್ತು ವಿಷಯಸುಖ ಎಂಬ ಎರಡು ತರದ ಸುಖಗಳು. ಇವುಗಳಿಗೆಯೆ ಯಮರಾಜನು ಕಠೋಪನಿಷತ್ತಿನಲ್ಲಿ ಶ್ರೇಯಸ್ ಮತ್ತು ಪ್ರೇಯಸ್ ಎಂದು ಹೆಸರುಗಳನ್ನು ಕೊಟ್ಟು ಪ್ರೇಯಸ್ಸಿನ ಬೆನ್ನುಹತ್ತುವವನು ಹಾಳಾಗುವನು, ಶ್ರೇಯಸ್ಸನ್ನು ಸಂಪಾದಿಸುವವನು ಅಮೃತತ್ವವನ್ನು ಪಡೆಯುವನೆಂದು ಹೇಳಿರುವನು. ಇದುವರೆಗೆ ಆತ್ಮಸುಖ ಹಾಗೂ ವಿಷಯಸುಖ ಇವುಗಳ ವಿಶಿಷ್ಟ ಲಕ್ಷಣಗಳನ್ನು ಹೇಳಿದ್ದರೂ ಇದರಿಂದ ಆತ್ಮಸುಖವೆ ಶ್ರೇಷ್ಠವು ಅದನ್ನೆ ಬೆನ್ನಟ್ಟಿ ಸಾಧ್ಯಮಾಡಿಕೊಳ್ಳಬೇಕು ಎಂದು ಸಿದ್ಧಮಾಡಿದಂತಾಗಿಲ್ಲ. ವಿಷಯಸುಖವು ಯಾವ ಬಗೆಯಿಂದ ಹೀನತರದ್ದು ಹಾಗೂ ಆತ್ಮಸುಖವು ಯಾವ ಬಗೆಯಿಂದ ಶ್ರೇಷ್ಠವಾದದ್ದು. ಇದನ್ನು ಸಿದ್ಧಮಾಡದೆ ಈ ವಿಷಯದ ನಿರ್ಣಯವಾಗಲರಿಯದು. ಆದುದರಿಂದ ಒಂದೆಡೆಗೆ ಯಾವದಾದರೊಂದು ವಿಷಯಸುಖ ಇನ್ನೊಂದೆಡೆಗೆ ಆತ್ಮಸುಖ ಹೀಗೆ ಹೋಲಿಸಿ ನೋಡಿದಲ್ಲಿ ಪರಸ್ಪರ ಸುಖಗಳಲ್ಲಿದ್ದ ಮಹದಂತರವೂ ಅವುಗಳಲ್ಲಿಯ ಶ್ರೇಷ್ಠ ಕನಿಷ್ಠತ್ವದ ತಾರತಮ್ಯವೂ ಸ್ಪಷ್ಟವಾಗುವದು. ಹೀಗೆ ಹೋಲಿಸಿ ನೋಡುವದರಲ್ಲಿ ಒಂದು ಮಾತು ಬಿಗಿಯಾಗಿರುವದು. ಅದಾವದೆಂದರೆ ವಿಷಯಸುಖವು ಎಲ್ಲರಿಗೂ ಅರಿತ ಮಾತು, ಆದರೆ ಆತ್ಮಸುಖವು ಬಹು ತುಸು ಜನರ ಅನುಭವದ ಮಾತು. ಹೀಗಿದ್ದರೂ ಅನುಭಾವಿಗಳು ತಮ್ಮ ಆತ್ಮಾನುಭವದ ವರ್ಣನೆಯನ್ನು ಅಲ್ಲಲ್ಲಿ ಮಾಡಿರುವರು. ಅದನ್ನೆ ನಾವು ಪ್ರಮಾಣವಾಗಿಟ್ಟುಕೊಂಡು ನಡೆಯತಕ್ಕದ್ದು. ನಾವು ಸ್ವತಃ ಹೋಗಿ ಬದ್ರಿಕೇದಾರವನ್ನು ನೋಡದೆ ಇದ್ದರೂ ಅಲ್ಲಿಗೆ ಹೋಗಿ ಬಂದವರ ವರ್ಣನೆಗಳನ್ನು ನಾವು ಪ್ರಮಾಣವೆಂದು ತಿಳಿಯುವಂತೆ ಈ ಮಾತಿನಲ್ಲಿಯೂ ಅನುಭಾವಿಗಳು ಹೇಳಿದ್ದೆ ಪ್ರಮಾಣವು.

## ಆತ್ಮಸುಖದ ಶ್ರೇಷ್ಠತೆ

ವಿಷಯಸುಖಗಳಲ್ಲಿ ದಿನದ ಅನುಭವದ ಭೋಜನಸುಖವನ್ನೆ ನೋಡುವ. ಅದರೊಡನೆ ಆತ್ಮಸುಖವನ್ನು ಹೋಲಿಸುವ. ಚನ್ನಾಗಿ ಹಸಿವೆಯಾದಾಗ ಪಂಚಪಕ್ವಾನ್ನದ ಊಟವು ದೊರೆತರೆ ಮನುಷ್ಯನಿಗೆ ಒಂದು ಬಗೆಯ ಅತಿ-

ಶಯು ಆನಂದವಾಗುವದು. ಇನ್ನು ಆ ಆನಂದಕ್ಕೂ ಆತ್ಮಾನಂದಕ್ಕೂ ಎಷ್ಟು ಬಗೆಯ ಭೇದವಿರುವದೆಂಬದನ್ನು ಪರೀಕ್ಷಿಸಬೇಕಾಗಿದೆ. ಭೋಜನದ ಆನಂದವಾಗಬೇಕಾದರೆ ಭೋಜನವೆಂಬ ಅನ್ಯ ವಸ್ತುವನ್ನು ಅವಲಂಬಿಸಬೇಕಾಗುತ್ತದೆ. ಅರ್ಥಾತ್ ಈ ಆನಂದವು ಪರಾವಲಂಬಿಯಾಯ್ತು. ನಾನಾ ವಸ್ತುಗಳು ದೊರೆತು ಅವುಗಳ ಯೋಗ್ಯ ರುಚಿಕಟ್ಟಾದ ಕೂಟವಾಗಿ ಅದರ ಅಡಿಗೆಯಾಗಿ ಅದು ಬಾಯಲ್ಲಿ ಬಿದ್ದ ಮೇಲೆ ನಾಲಿಗೆಯ ಮೇಲಿರುವವರೆಗೆ ಈ ಆನಂದವು. ಆತ್ಮಸುಖವು ಅನ್ಯ ಯಾವ ವಸ್ತುವನ್ನೂ ಅವಲಂಬಿಸಿಲ್ಲ. ಅದು ಕೇವಲ ತನ್ನಲ್ಲಿ ತಾನೇ ಸ್ಫುರಿಸುವದರಿಂದ ಅನ್ಯವಸ್ತುಗಳ ಅಥವಾ ಅನ್ಯಸಂಘಾತಗಳ ಅಪೇಕ್ಷೆಯು ಅದಕಿಲ್ಲ. ಒಮ್ಮೆ ಉಂಡರೆ ಈ ಭೋಜನಾನಂದವು ಕೊನೆಯವರೆಗೂ ಇರುವದಿಲ್ಲ. ಆದರೆ ಪುನಃ ಹಸಿವೆ ಪುನಃ ಭೋಜನ, ಹೀಗೆ ಈ ಚಕ್ರವು ಅವ್ಯಾಹತವಾಗಿ ನಡೆಯತಕ್ಕದ್ದೆ. ನಾಲಿಗೆಯ ಸಂಪೂರ್ಣ ತೃಪ್ತಿಯು ಒಮ್ಮೆ ಆಯ್ತು, ಇನ್ನು ಅದರ ಕಡೆಗೆ ನೋಡಲಿಕ್ಕೆ ಬೇಡ ಎಂಬುವಂತೆ ಪರಿಸ್ಥಿತಿಯು ಎಂದೂ ಉಂಟಾಗುವದಿಲ್ಲ. ಅಂದಮೇಲೆ ಈ ಆನಂದದಲ್ಲಿ ಸಂಪೂರ್ಣ ಸಂತೃಪ್ತಿಯು ಇಲ್ಲವೆ ಇಲ್ಲ. ಇದಲ್ಲದೆ ಆಗ ಉಂಟಾದ ಅಲ್ಪ ತೃಪ್ತಿಯು ಸಹ ಕ್ಷಣಿಕವು. ಆದುದರಿಂದಲೆ ಈ ಆನಂದವು ಸಾಂತವೆನ್ನಬಹುದು. ಆತ್ಮಸುಖದ ಸಂಗತಿಯು ಹೀಗಿಲ್ಲ. ಅದು ಒಮ್ಮೆ ಆಯಿತೆಂದರೆ ಸಂಪೂರ್ಣ ಸಂತೃಪ್ತಿಯಾಗಿ ಮನುಷ್ಯನು ಅದರಲ್ಲಿಯೆ ನೆಲೆಸುವನು. ಅದು ನಿರಂತರವು. ಹೃದಯಾಕಾಶದಲ್ಲಿ ಹೃದಯದ ಸ್ಫುರಣದಂತೆ ಸ್ಫುರಿಸುವದು. ಭೋಜನಾನಂದವು ತೃಪ್ತಿಪಡಿಸಿದರೂ ಒಂದೇ ಇಂದ್ರಿಯವನ್ನು ತೃಪ್ತಿಪಡಿಸಬಲ್ಲದು. ಮಿಕ್ಕ ಇಂದ್ರಿಯಗಳ ಹಸಿವು ಅದರಿಂದ ಹಿಂಗುವದು ಶಕ್ಯವಿಲ್ಲ. ಅರ್ಥಾತ್ ಈ ಭೋಜನಸುಖವು ನಮ್ಮ ವಿಶಾಲ ಚಿತ್ತದ ಒಂದಂಶವನ್ನು ಮಾತ್ರ ತಣಿಸುವದೆನ್ನಬಹುದು. ಆದರೆ ಆತ್ಮಸುಖದ ಮಾತು ಹಾಗಿಲ್ಲ. ಆತ್ಮಸುಖವಾದವನಿಗೆ ಯಾವ ಇಂದ್ರಿಯಸುಖಗಳ ಅಭಿಲಾಷೆಯೂ ಉಳಿಯುವದಿಲ್ಲ. ಅವನ ಸಂಪೂರ್ಣ ಚಿತ್ತವು ಆನಂದಮಯವಾಗಿ ಹೋಗುವದರಿಂದ ಅವನು ಆನಂದಸ್ವರೂಪನೆ ಆಗಿ ಬಿಡುವನು. ಎಷ್ಟೇ ಭೋಜನಸುಖವಾದರೂ ಅದು ಸ್ವಲ್ಪ ದುಃಖಮಿಶ್ರಿತವಿರುವದೆಂದೆ ಹೇಳಬಹುದು. ಯಾಕಂದರೆ ತಿನ್ನುವದರಲ್ಲಿ ಹೆಚ್ಚಾದೀತೊ ಕಡಿಮೆಯಾದೀತೊ ಎಂಬ ಭಯವು ನಿರಂತರವೂ ಇದ್ದೇ ಇರುತ್ತದೆ. ಆದುದರಿಂದ ಅದು ಸಂಪೂರ್ಣ ದುಃಖರಹಿತವೆಂದು ಹೇಳಲಿಕ್ಕಾಗದು. ಆತ್ಮಸುಖ

ದಲ್ಲಿ ಯಾವ ಭಯವೂ ಇಲ್ಲ. "ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ", ಬ್ರಹ್ಮನ ಆನಂದವನ್ನರಿತವನು ಎಲ್ಲ ಭಯ ಭೀತಿಗಳನ್ನು ಮೀರಿರುತ್ತಾನೆಂದು ಉಪನಿಷತ್ತಿನಲ್ಲಿ ವರ್ಣನೆ ಇರುವದು. ನಾವು ಭೋಜನಾನಂದವನ್ನು ಸವಿಯುವಾಗ ಸ್ವಲ್ಪಿಲ್ಲ ಸ್ವಲ್ಪ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಹಿಂಸೆ ಮಾಡುವ ಸಂಭವವಿರುವದು. 'ಯದೃಚ್ಛಾಲಾಭಸಂತುಷ್ಟ' ರಿರುವವರು ನಮ್ಮಲ್ಲಿ ಎಷ್ಟು ಜನರು? ತೀರ ಸ್ವಲ್ಪ. ನಾವು ಅನ್ನ ಸಂಪಾದನೆ ಮಾಡುವ ಸದ್ಯದ ಪದ್ಧತಿಯಲ್ಲಿಯೆ ಹಿಂಸೆಯು ಒಳಗೊಂಡಿದೆ. ಆದರೆ ಆತ್ಮಸುಖದಲ್ಲಿ ಹಿಂಸೆಯ ಸೋಂಕಿಲ್ಲ, ಅದು ಶುದ್ಧ ಪವಿತ್ರ ಹಿಂಸಾರಹಿತ ನಿಷ್ಪಾಪ ಸುಖವಿರುವದು. ಚಿಕ್ಕ ಮಗುವಿನ ಆನಂದದಂತೆ ಅದು ನಿರ್ಮಲವೂ ಮಧುರವೂ ಇರುವದು. ಬೇಕಾದಂಥ ಪಂಚಪಕ್ವಾನ್ನದ ಊಟದಿಂದ ಆಗುವ ಆನಂದವನ್ನು ಸಹ ಆತ್ಮಸುಖದೊಡನೆ ಹೋಲಿಸುವದಸಾಧ್ಯವು. ಯಾಕಂದರೆ ತೈತ್ತಿರೀಯೋಪನಿಷತ್ತಿನಲ್ಲಿ ಮಾನುಷ ಆನಂದವನ್ನು ಬ್ರಹ್ಮಾನಂದದ ಕೂಡ ಹೋಲಿಸುವಾಗ ಬ್ರಹ್ಮಾನಂದವು ಮಾನುಷಾನಂದದ ೧೦೦೦೦,೦೦೦೦,-೦೦೦೦,೦೦೦೦,೦೦೦೦ ಇಷ್ಟು ಪಟ್ಟು ಇರುವದೆಂದು ವರ್ಣಿಸಿದ್ದಾರೆ! ಇದರ ಮೇಲಿಂದ ಇಂದ್ರಿಯಸುಖವು ಎಷ್ಟು ಅಲ್ಪಪರಿಮಾಣದ್ದು, ಎಂಬುದರ ಕಲ್ಪನೆಯಾಗುವದು. ಇದಲ್ಲದೆ ಭೋಜನಾನಂದವು ಸಂಪೂರ್ಣ ಜ್ಞಾನ ಮೂಲಕವಿರುವದಿಲ್ಲ. ತಾನೊಂದು ವ್ಯಕ್ತಿ, ತನಗೆ ಹಸಿವಾಗಿರುವದು, ತಾನು ಪಂಚಪಕ್ವಾನ್ನದ ಊಟಮಾಡುತ್ತಿರುವನು, ಇಷ್ಟೇ ಅರಿವು ಹಾಗೂ ಅಹಂ-ಕಾರವು ಇದ್ದುದರಿಂದ ತಾನು ಅದರಿಂದ ಆನಂದಪಡುತ್ತಿರುವನು ಎಂಬ ಕಲ್ಪನೆಯು ಉಣ್ಣುವವನಿಗಾಗುತ್ತದೆ. ಆದರೆ ಆತ್ಮಸುಖದ ಮಾತು ಬೇರೆ. ಅದು ಪೂರ್ಣ ಜ್ಞಾನವಿಲ್ಲದೆ ಆಗದು. ತಾನು ಯಾರು, ಈ ಜಗತ್ತಂದರೇನು, ಇದರ ಚಾಲಕರು ಯಾರು ಮುಂತಾದ ತತ್ವಜ್ಞಾನವು ಅವನಿಗೆ ಹೊಳೆದು ಸಂಪೂರ್ಣ ಜ್ಞಾನದ ಮೂಲಕ ಅಹಂಕಾರರಹಿತವಾದ ಆತ್ಮಸುಖವು ಜ್ಞಾನಿಗೆ ಆಗುವದು. ಆದುದರಿಂದ ಇಂದ್ರಿಯಸುಖವು ಪೂರ್ಣ ಜ್ಞಾನಮೂಲಕವಿರುವ ದಿಲ್ಲೆಂದೂ ಆತ್ಮಸುಖವು ಸಂಪೂರ್ಣ ಜ್ಞಾನಮೂಲಕವಿರುವದೆಂದೂ ಹೇಳ ಬಹುದು. ಈಗ ಉದಾಹರಣೆಗಾಗಿ ನಾನು ಭೋಜನಾನಂದವನ್ನಷ್ಟೆ ಆತ್ಮ ಸುಖದ ಕೂಡ ಹೋಲಿಸಲಿಕ್ಕೆ ತೆಗೆದುಕೊಂಡಿದ್ದೆನು. ಆದರೆ ಯಿಕ್ಕ ಯಾವದೇ ವಿಷಯಾನಂದವನ್ನು ಆತ್ಮಾನಂದದೊಡನೆ ಹೋಲಿಸಿ ನೋಡಿ ದರೂ ಇದೇ ರೀತಿಯಾಗಿ ಆತ್ಮಸುಖವೆ ಶ್ರೇಷ್ಠವೆಂಬುದನ್ನು ಸಿದ್ಧಮಾಡಿ ತೋರಿಸಬಹುದು.

ಮೇಲೆ ವಿವೇಚಿಸಿದ ವಿಷಯವನ್ನ ನಿಚ್ಚಳವಾಗಿ ಈ ಕೆಳಗಿನಂತೆ ಬರೆದು ತೋರಿಸಬಹುದು:—

| **ವಿಷಯಸುಖವು** | **ಆತ್ಮಸುಖವು** |
| --- | --- |
| ಪರತಂತ್ರವು. | ಸ್ವತಂತ್ರವು. |
| ಸಾಪೇಕ್ಷ. | ನಿರಪೇಕ್ಷ. |
| ಆಶಾಪೂರ್ಣವು. | ಆಶಾರಹಿತವು. |
| ಕ್ಷಣಿಕವು. | ನಿತ್ಯವು. |
| ಸಾಂತವು. | ಅನಂತವು. |
| ಅಲ್ಪತೃಪ್ತಿಕರವು. | ಸಂಪೂರ್ಣ ತೃಪ್ತಿಕರವು. |
| ಏಕಾಂಗಿಯು. | ಸರ್ವಾಂಗೀಣವು. |
| ಚಿದಂಶವ್ಯಾಪಕವು. | ಸರ್ವಚಿತ್ತವ್ಯಾಪಕವು. |
| ದುಃಖಮಿಶ್ರಿತ. | ದುಃಖವಿರಹಿತ. |
| ಹಿಂಸಾಯುಕ್ತವು. | ಹಿಂಸಾರಹಿತವು. |
| ಅಲ್ಪಪರಿಮಾಣವುಳ್ಳದ್ದು. | ಪರಿಮಾಣಾತೀತವು. |
| ಅಲ್ಪಜ್ಞಾನ ಮೂಲಕವು. | ಪೂರ್ಣಜ್ಞಾನಮೂಲಕವು. |

ಈ ಕೋಷ್ಟಕಗಳನ್ನು ಹೋಲಿಸಿ ನೋಡಿದರೆ ಆತ್ಮಸುಖ ಹಾಗೂ ಇಂದ್ರಿಯಸುಖ ಇವುಗಳಲ್ಲಿರುವ ಭೂವ್ಯಾಕಾಶದಷ್ಟಿದ್ದ ಅಂತರವೂ ಭೇದವೂ ಒಡೆದು ಕಾಣಿಸುವದು. ಇದರ ಮೇಲಿಂದ ನೋಡಲಾಗಿ ನಾವು ಆತ್ಮಸುಖವನ್ನೆ ಬೆನ್ನಟ್ಟಿ ಅದನ್ನು ಕೈವಶ ಮಾಡಿಕೊಳ್ಳಬೇಕಲ್ಲದೆ ಅದರ ನೆಳಲಿನಂತಿದ್ದ ವಿಷಯಸುಖದ ಬೆನ್ನು ಹತ್ತಿ ಪಶ್ಚಾತ್ತಾಪಪಡಬಾರದು ಎಂಬುದು ಎಲ್ಲರಿಗೂ ಚನ್ನಾಗಿ ತಿಳಿಯುವದು. ಯಾಕಂದರೆ ನಾವು ನಿಜವಾಗಿ ಹುಡುಕುತ್ತಿರುವದು ನಿತ್ಯಾನಂದವು. ಅದನ್ನು ಬಿಟ್ಟು ತತ್ಕಾಲಕ್ಕೆ ಪ್ರಬಲವಿದ್ದ ಇಂದ್ರಿಯಗಳ ಎಳತಕ್ಕೆ ಸಿಕ್ಕುಬಿದ್ದು ನಾವು ವಿಷಯಸುಖದ ಮಾಟಕ್ಕೆ ಮರುಳಾದರೆ ನಮಗೆ ಅಕ್ಷಯಸುಖವೂ ಶಾಂತಿಯೂ ಎಂದಿಗೂ ದೊರಕವು, ನಮ್ಮ ಆತ್ಮವು ಎಂದಿಗೂ ತಣಿಯದು.

ಇನ್ನು ಈ ಮೇಲ್ಕಾಣಿಸಿದ ಆನಂದದ ಮೀಮಾಂಸೆಯ ಬಗ್ಗೆ ಎರಡು ಪ್ರಶ್ನೆಗಳುಂಟಾಗಬಹುದು. ಆತ್ಮಸುಖದ ಈ ವರ್ಣನೆಯು ಯಥಾರ್ಥವೊ

ಕೇವಲ ಆಕಾಶಕಮಲದಂತೆ ಕಾಲ್ಪನಿಕವೊ? ಆತ್ಮಸುಖವೆಂಬ ವಸ್ತುವು ಇರುವದೊ ಇಲ್ಲವೊ? ಇದೊಂದು. ಆತ್ಮಸುಖವನ್ನೂ ಇಂದ್ರಿಯಸುಖವನ್ನೂ ಹೋಲಿಸುವದು ಯೋಗ್ಯವೊ ಯುಕ್ತವೊ? ಎಂಬುದಿನ್ನೊಂದು. ಈ ಎರಡು ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಡದೆ ಈ ವಿಷಯದ ಚರ್ಚೆಯು ಎಂದಿಗೂ ಸಂಪೂರ್ಣವಾಗಲಾರದು.

ಆತ್ಮಸುಖದ ಅಸ್ತಿತ್ವದ ವಿಷಯವು ಬಹಳವಾಗಿ ಅನುಭವದ ಮಾತಾಗಿದೆ. ಆತ್ಮದ ಅಸ್ತಿತ್ವವನ್ನು ಹೇಗೆ ಕೇವಲ ತರ್ಕದಿಂದ ಸಿದ್ಧಮಾಡುವದು ಕಠಿಣವೊ ಹಾಗೆಯೆ ಆತ್ಮಸುಖದ ಅಸ್ತಿತ್ವವನ್ನಾದರೂ ಕೇವಲ ತರ್ಕದಿಂದ ಸಿದ್ಧಮಾಡುವದು ಜಗಿ; ಕೇವಲ ತರ್ಕದಿಂದ ಅದನ್ನು ತಿಳಿದುಕೊಳ್ಳುವದೂ ಗಡಚು. ಅದು ಸಕ್ಕರೆಯ ಸವಿಯಂತೆ, ಅನುಭವದಿಂದ ತಿಳಿಯುವದೆ ಸಾಧ್ಯವು. ಸುಖವಾಗಲಿ ಆತ್ಮಸುಖವಾಗಲಿ ಅಕೋ ನೋಡಿ, ಎಂದು ಕೈಬೆರಳಿನಿಂದ ತೋರಿಸಲಿಕ್ಕೆ ಬರುವ ವಸ್ತುವಲ್ಲ. ಇಂತಹದೊಂದು ಸುಖವು ಇರುವದು ಸಾಧ್ಯವು, ಶಕ್ಯವು, ಇದರ ಅಸ್ತಿತ್ವವು ಅಸಂಭವನೀಯವಲ್ಲ ಎಂಬುದನ್ನು ನಿಶ್ಚಿತವಾಗಿ ತಿಳಿದುಕೊಳ್ಳುವದು ಅನುಭವದಿಂದಲೆ ಸಾಧ್ಯವು. ನಾವು ಸಾಮಾನ್ಯರು ಯಾವಾಗಲೂ ಅನ್ನಮಯ, ಪ್ರಾಣಮಯ, ಅಥವಾ ಮನೋಮಯ ಕೋಶಗಳಲ್ಲಿಯೆ ತೊಳಲಾಡುತ್ತಿರುವದರಿಂದ ಇವುಗಳಾಚೆಗಿರುವ ವಿಜ್ಞಾನ ಅಥವಾ ಶುದ್ಧ ಬುದ್ಧಿ ಮತ್ತು ಆನಂದಕೋಶ ಇವುಗಳವರೆಗೆ ನಾವು ಮುಟ್ಟುವದು ಕ್ವಚಿತ. ಆದರೆ ಯಾರು ಭಕ್ತಿರಸದ ಆಸ್ವಾದವನ್ನು ಸ್ವಲ್ಪಿಲ್ಲ ಸ್ವಲ್ಪ ಕಂಡು ಉಂಡಿರುವರೊ ಅಥವಾ ಸಾಧುಸಜ್ಜನರ ಸಂಗತಿಯಲ್ಲಿ ಕೆಲ ಹೊತ್ತನ್ನಾದರೂ ಕಳೆದಿರುವರೊ ಅವರಿಗೆ ಆತ್ಮಸುಖದ ಅಸ್ತಿತ್ವದ ಬಗ್ಗೆ ಎಂದೂ ಸಂಶಯವು ಬರಲಾರದು. ಯಾಕಂದರೆ ಭಕ್ತನು ಅನನ್ಯ ಭಕ್ತಿಯಿಂದ ಇಷ್ಟದೇವತೆಯ ಚರಣಸ್ಮರಣದಲ್ಲಿ ತಲ್ಲೀನನಾದಾಗ ಆತ್ಮಸುಖದ ಲವಲೇಶವನ್ನಾದರೂ ಅನುಭವಿಸುತ್ತಾನೆ. ಅದೇ ಪ್ರಕಾರ ನಿಜವಾದ ಸಾಧುಸಜ್ಜನರು ಸಚ್ಚಿದಾನಂದ ಪರಮಾತ್ಮನ ಧ್ಯಾನ ಮಾಡುವಾಗ ಧ್ಯಾನಮಗ್ನಸ್ಥಿತಿಯಲ್ಲಿ ಈ ಆತ್ಮಸುಖವನ್ನೆ ಅನುಭವಿಸುತ್ತಿರುತ್ತಾರೆ. ಈ ರೀತಿಯಾಗಿ ಶ್ರುತಿ ಅಥವಾ ವೇದಾಂತ ಗ್ರಂಥಗಳಲ್ಲಿ ಮಾಡಿದ ವರ್ಣನೆಗಳು ಅಥವಾ ಇದ್ದ ಆಪ್ತವಚನಗಳು ಅಥವಾ ಪ್ರತ್ಯಕ್ಷ ಅನುಭವ ಇವೇ ಈ ವಿಷಯದಲ್ಲಿ ಪ್ರಮಾಣಗಳು. ಇವುಗಳ ಮೇಲಿಂದ ಇಂತಹದೊಂದು ಸ್ವತಂತ್ರ, ಸ್ವಯಂಭು, ಸ್ವಭಾವಸಿದ್ಧ, ಆನಂದವು ಇರುವದು ಎಂಬುದು ಸಹಜವಾಗಿ ಸಿದ್ಧವಾಗುತ್ತದೆ. ಇಂತಹ ಆನಂದವು

ಇರಲು ಸಾಧ್ಯವು ಎಂಬದು ತರ್ಕದಿಂದ ಸಿದ್ಧವಾಗುತ್ತದೆ. ಅಧ್ಯಾತ್ಮಸಾಧನೆಯನ್ನಾರಂಭಿಸಲಿಕ್ಕೆ ಇಷ್ಟು ಸಾಕಿದೆ. ಅಂದಮೇಲೆ ಆತ್ಮಸುಖವನ್ನು ಪಡೆಯಲು ನಾವು ಯತ್ನಿಸಬೇಕು, ಎಂದು ನಿಶ್ಚಯಮಾಡಿ ಅಧ್ಯಾತ್ಮಮಾರ್ಗದಿಂದ ಹೋಗಿ ಸಾಧನಮಾಡಲಿಕ್ಕೆ ಏನೂ ಚಿಂತೆಯಿಲ್ಲ. ಸಾಧನ ಮಾಡಿಮಾಡಿದಂತೆ ಆ ಅಮೃತದ ಅನುಭವವು ಬಂದು ಶ್ರದ್ಧೆಯು ಹೆಚ್ಚುತ್ತ ಹೋಗುವದೆಂಬಲ್ಲಿ ಯಾವ ಸಂಶಯವೂ ಇಲ್ಲ.

## ಆತ್ಮಸುಖದೊಡನೆ ವಿಷಯಸುಖದ ಹೋಲಿಕೆ

ಇನ್ನು ಆತ್ಮಸುಖವನ್ನೂ ವಿಷಯಸುಖವನ್ನೂ ಹೋಲಿಸುವದು ಯೋಗ್ಯವೊ ಎಂಬದು ಎರಡನೆ ಪ್ರಶ್ನೆಯು. ವಿಷಯಸುಖ ಹಾಗೂ ಆತ್ಮಸುಖ ಇವು ಪರಿಮಾಣದಲ್ಲಿ ಮಾತ್ರ ಹೆಚ್ಚು ಕಡಿಮೆ ಇರುವವು, ಆದರೆ ಅವುಗಳ ಜಾತಿಯು, ಕೋಟಿಯು ಒಂದೇ ಎಂದು ಕೆಲವರು; ಆತ್ಮಸುಖಕ್ಕೂ ವಿಷಯಸುಖಕ್ಕೂ ಹೋಲಿಸುವದೆ ತಪ್ಪು, ಏಕಂದರೆ ಅವುಗಳ ಜಾತಿಯೆ ಬೇರೆ ಎಂದು ಅನ್ಯರು ಹೇಳುವದುಂಟು. ಆದರೆ ತಾತ್ವಿಕ ದೃಷ್ಟಿಯಿಂದ ನೋಡಿದರೆ ಆನಂದವೆಂಬುದು ಎಲ್ಲಿ ಹೋದರೂ ಒಂದೇ ತರಹದ್ದು, ಒಂದೇ ಜಾತಿಯದು, ಒಂದೇ ಕೋಟಿಗೆ ಸೇರಿದ್ದು. ಪೂರ್ಣ, ಅಪೂರ್ಣ, ದುಃಖಮಿಶ್ರಿತ, ದುಃಖವಿರಹಿತ ಮುಂತಾದ ಭೇದಗಳು ಅದರಲ್ಲಿ ಆಗಬಹುದು. ಒಮ್ಮೊಮ್ಮೆ ಅವುಗಳಲ್ಲಿಯ ಹೆಚ್ಚುಕಡಿಮೆಯ ಪ್ರಮಾಣವು ಅಪರಿಮಿತ ಇರುವದರಿಂದ ವಿಷಯಾನಂದ ಹಾಗೂ ಆತ್ಮಾನಂದಗಳು ಬೇರೆ ಜಾತಿಯವೆ ಎಂದು ಅನ್ನುವ ಪ್ರಸಂಗವು ಬರಬಹುದು. ವ್ಯವಹಾರಿಕ ದೃಷ್ಟಿಯಿಂದ ಈ ತರಪ ಭೇದವನ್ನು ಕಲ್ಪಿಸುವದು ಒಮ್ಮೊಮ್ಮೆ ಅವಶ್ಯವಿದ್ದರೂ ತತ್ವತಃ ಚಿತ್ ಎಂಬದು ಎಲ್ಲೆಲ್ಲಿಯೂ ಒಂದೇ ಇರುವಂತೆ ಆನಂದವಾದರೂ ಒಂದೇ ಒಂದು ಇರುವದು. ವಿಷಯಸುಖ ಹಾಗೂ ಆತ್ಮಸುಖ ಇವು ಆ ಒಂದೇ ಒಂದು ಆನಂದದ ಎರಡು ಮುಖಗಳು. ಆತ್ಮನು ತನ್ನ ನಿಜಸ್ವರೂಪವನ್ನು ಮರೆತು ತಾನು ಜಡದಿಂದ ಬದ್ಧನಾದವನೆಂಬ ಭಾವದಿಂದ ಅನ್ನಮಯಾದಿ ಕೋಶಗಳಲ್ಲಿ ವಿಹರಿಸತೊಡಗಿದಾಗ ವಿಷಯಸುಖಾದಿಗಳನ್ನು ಅನುಭವಿಸುವನು. ಅದೇ ತನ್ನ ನಿಚ್ಚಳವಾದ ಸ್ವರೂಪವನ್ನರಿತು ಚಿನ್ಮಯ ಸ್ಥಿತಿಯಲ್ಲಿರಲಾರಂಭಿಸಿದನೆಂದರೆ ಆತ್ಮಾನಂದದಲ್ಲಿ ಮಗ್ನನಾಗುವನು. ಈ ಎರಡು ಸೀಮೆಗಳ ನಡುವೆ ನಾನಾ ತರಗತಿಗಳೂ ನಾನಾ ಅವಸ್ಥೆಗಳೂ ಇರುವವು ಹಾಗೂ

ಆಯಾ ಅವಸ್ಥೆಗಳಿಗೆ ಸ್ವಾಭಾವಿಕವಾದ ಸುಖದುಃಖಗಳು ಆತ್ಮನಿಗೆ ಆಯಾ ಅವಸ್ಥೆಗಳಲ್ಲಿ ಅನುಭವಕ್ಕೆ ಬರುವವು. ಹೀಗಿರುವದರಿಂದ ಆ ಆನಂದಗಳು ಬೇರೆಬೇರೆಯಲ್ಲ. ಅವೆರಡೂ ಬೇರೆ ಭೂಮಿಕೆಯಲ್ಲಿ ಬೇರೆ ಅವಸ್ಥೆಯಲ್ಲಿ ಆಗುವವೆಂಬ ಮಾತು ನಿಜವು. ಆಯಾ ಅವಸ್ಥೆಯ ಪೂರ್ಣಾಪೂರ್ಣತೆ, ಇಷ್ಟಾನಿಷ್ಟತೆ, ಶ್ರೇಷ್ಠಕನಿಷ್ಠತೆಯಂತೆ ಆಯಾ ಆನಂದಗಳು ಬೇರೆಯಾಗುತ್ತವಾದರೂ ತತ್ವತಃ ಅವು ಬೇರೆಯಲ್ಲ.

ಆತ್ಮಸುಖ ಹಾಗೂ ವಿಷಯಸುಖಗಳೆರಡೂ ತೀರ ಭಿನ್ನಕೋಟಿಯ ವಸ್ತುಗಳಾದುದರಿಂದ ಅವುಗಳನ್ನು ಹೋಲಿಸಬಾರದೆಂದು ಹೇಳುವವರು ಒಂದು ಮಹತ್ವದ ಸಂಗತಿಯನ್ನು ಮರೆಯುತ್ತಾರೆ. ಅದಾವದೆಂದರೆ, ಆತ್ಮಸುಖವನ್ನನುಭವಿಸಿದವರು ಆತ್ಮಸುಖವೆಂದರೇನು ಇದರ ಸುದ್ದಿ ಸಹ ಇಲ್ಲದವನಿಗೆ ಆ ಆತ್ಮಸುಖದ ರುಚಿಯನ್ನು ಹೇಗೆ ತಿಳಿಸಬೇಕು? ಅದನ್ನು ತಿಳಿಸುವದಂತೂ ಅವಶ್ಯವು. ಅದನ್ನು ತಿಳಿಸದೆ ಇದ್ದ ಪಕ್ಷದಲ್ಲಿ ವಿಷಯಸುಖದಲ್ಲಿಯೆ ರಮಮಾಣರಾದವರು ಕೊನೆಯ ವರೆಗೆ ಅದರಲ್ಲಿಯೆ ಕೊಳೆತು ಮುಂಗಾಣದೆ ಹೋಗುವರು. ಅದನ್ನು ತಿಳಿಸಬೇಕಾದರೆ ಯಾವ ಸುಖವನ್ನು ಅವನು ಬಲ್ಲನೊ ಅದರೊಡನೆ ಹೋಲಿಸಿದರೆ ಮಾತ್ರ ಅವನಿಗೆ ಆತ್ಮಸುಖದ ಕಿಂಚಿತ್ ಕಲ್ಪನೆಯಾದರೂ ಆಗುವದು. ಗೊತ್ತಿದ್ದ ವಸ್ತುವಿನ ಜ್ಞಾನವಿಸ್ತಾರದಿಂದಲೆ ಗೊತ್ತಿಲ್ಲದ ವಸ್ತುವಿನ ಜ್ಞಾನವನ್ನು ಮಾಡಿಕೊಡಬೇಕಾಗುತ್ತದೆ. ಇಲ್ಲಿ ಮುಂದಿಟ್ಟ ದೀಪದಂತೆ ಆ ಸೂರ್ಯನೂ ಅಗ್ನಿಮಯನು, ಉಷ್ಣತೆಯುಳ್ಳವನು, ಬೆಳಕುಕೊಡುವವನು ಎಂದು ಹೇಳಬೇಕಾಗುತ್ತದೆ. ಸಮುದ್ರದ ನೀರಿನ ರುಚಿಯ ಕಲ್ಪನೆಯನ್ನು ಕೊಡಬೇಕಾದರೆ ಸಿಹಿ ನೀರಿನಲ್ಲಿ ಉಪ್ಪಿನ ಹಳ್ಳು ಒಗೆದು ಆ ನೀರಿನ ರುಚಿಯನ್ನು ತೋರಿಸಬೇಕಾಗುತ್ತದೆ. ಇಲ್ಲಿಯಾದರೂ ಹಾಗೆಯೆ ಮಾಡುವದು ಅವಶ್ಯವು. ವಿಷಯಸುಖದಿಂದಲೆ ಆತ್ಮಸುಖದ ಕಲ್ಪನೆ ತಂದುಕೊಡಬೇಕಾಗುವದು.

ಇದನ್ನು ತಿಳಿದುಕೊಂಡು ಈ ಆನಂದವಿಷಯಕ ಚರ್ಚೆಯನ್ನು ಮಾಡುವ ಸಮಯದಲ್ಲಿ ಆತ್ಮಾನಂದ ಸ್ಥಿತಿಯನ್ನು ವರ್ಣಿಸುವಾಗ ಬೃಹದಾರಣ್ಯಕೋಪನಿಷತ್ತಿನಲ್ಲಿ ಋಷಿಗಳು ಅಂದದ್ದೇನಂದರೆ, "ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತಃ ನ ಬಾಹ್ಯಂ ಕಿಂಚನ ವೇದ, ನಾಂತರಂ, ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ, ನಾಂತರಂ, ತದ್ವಾ ಅಸ್ಯ ಏತದಾಪ್ತಕಾಮಮ್ ಆತ್ಮಕಾಮಂ

ಅಕಾಮಂ ರೂಪಮ್". ಬೃಹದಾರಣ್ಯಕದಲ್ಲಿ ೪ನೇ ಅಧ್ಯಾಯದ ೩ನೇ ಶ್ಲೋಕದಲ್ಲಿ ಈ ವರ್ಣನೆಯು ಇರುವದು. "ಗಂಡಸು ತನ್ನ ಸಲವಿನ ಒಲವಿನ ಇನಿಯಳೊಡಗೂಡಿರುವಾಗ ಒಳಹೊರಗಿನ ಯಾವ ವಿಷಯದ ಎಚ್ಚರವೂ ಆತನಿಗೆ ಉಳಿಯುವದಿಲ್ಲ. ಪ್ರಾಜ್ಞ ಆತ್ಮನ ಕೂಡ ಅಂದರೆ ಪರಮಾತ್ಮನ ಕೂಡ ಬೆರೆತ ಪುರುಷನ ಸ್ಥಿತಿಯು ಹೀಗೆಯೆ ಆಗುವದು. ಇದು ಆಪ್ತಕಾಮ ಅಂದರೆ ತೃಪ್ತಿಯಾಗುವಂತೆ ಎಲ್ಲ ಕಾಮನೆಗಳನ್ನು ದೊರಕಿಸಿದ, ಆತ್ಮಕಾಮ ಅಂದರೆ ಆತ್ಮನನ್ನೆ ದೊರಕಿಸಲು ಇಚ್ಛಿಸುವ ಹಾಗೂ ಅಕಾಮ ಅಂದರೆ ಕಾಮನಾರಹಿತ ಪುರುಷನ ಸ್ಥಿತಿಯು". ಹೀಗೆ ಈ ಮೇಲಣ ಶ್ಲೋಕದ ಅರ್ಥವಿರುವದು. ಇದೇ ರೀತಿಯಾಗಿ ಆತ್ಮಾನಂದವನ್ನು ರತಿಸುಖಕ್ಕೆ ಹೋಲಿಸಿ ಆ ತೆರದ ಸುಖವು ನಿರಂತರವೂ ನಿರಾಲಂಬವೂ ಆಗಿರುವದೆ ಆತ್ಮಸುಖದ ಚರಮ ಸೀಮೆ ಎಂದು ಎಷ್ಟೋ ವೇದಾಂತಗ್ರಂಥಗಳಲ್ಲಿ ವರ್ಣನೆಯು ಇರುವದು.

ವಿಷಯಸುಖವೂ ಆತ್ಮಸುಖವೂ ತೀರ ಭಿನ್ನ ಭಿನ್ನ ವಸ್ತುಗಳು, ಅವುಗಳಲ್ಲಿ ಒಂದನ್ನು ಮತ್ತೊಂದಕ್ಕೆ ಹೋಲಿಸುವದೆಂದರೆ ಓರ್ವ ಕುಲೀನ ಪತಿವ್ರತೆಗೂ ಹೊಲಸೂಳೆಗೂ ಹೋಲಿಸುವಷ್ಟೆ ಅನುಚಿತವು ಎಂದು ಕೆಲವರು ತಿಳಿಯುತ್ತಾರೆ! ಆದರೆ ಹಾಗೆ ತಿಳಿದುಕೊಂಡು ಪವಿತ್ರತೆಯ ಸೋಗು ಹಾಕಿಕೊಳ್ಳುವದರಲ್ಲಿ ಏನೂ ಅರ್ಥವಿಲ್ಲ. ಆತ್ಮಾನಂದವೆಂಬ ಸ್ಥಿತಿಯ ಅರಿವನ್ನು ಸಾಮಾನ್ಯ ಜನರಿಗೆ ಮಾಡಿಕೊಡಬೇಕಾದರೆ ಉಪನಿಷತ್ಕಾರರಗೂ ಮುಂದೆ ಆದ ಎಷ್ಟೋ ವೇದಾಂತಿಗಳಿಗೂ ರತಿಸುಖದಷ್ಟು ಯೋಗ್ಯ ಉಪಮೆಯು ಎಲ್ಲಿಯೂ ಕಾಣಲಿಲ್ಲ. ಅವರು ಇದು ಪವಿತ್ರವು ಇದು ಅಪವಿತ್ರವು ಎಂಬ ಕಲ್ಪನೆಯನ್ನು ಮನಸಿಗೆ ತರದೆ ಆತ್ಮಾನಂದದ ವಿಷಯವು ಜನರಿಗೆ ಏನು ಮಾಡಿದರೆ ತಿಳಿದೀತು ಎಂಬುದನ್ನೆ ಲಕ್ಷಿಸಿ ಈ ಹೋಲಿಕೆಯನ್ನು ಕೊಟ್ಟಿದ್ದಾರೆ. ಇನ್ನು ಆತ್ಮಾನಂದವು ಸಕ್ಕರೆಯನ್ನು ಸವಿಯುವದರಿಂದ ಆಗುವ ಆನಂದದಂತಿರುವದು, ಅಥವಾ ಒಂದು ಸುಂದರ ರೂಪವನ್ನು ಕಣ್ತಣಿವಂತೆ ನೋಡುವದರಿಂದ ಆಗುವ ಆನಂದದಂತಿರುವದು ಎಂದು ಅವರು ವರ್ಣಿಸಬಹುದಾಗಿತ್ತು. ಆದರೆ ವಿಷಯಸುಖಗಳಲ್ಲಿ ರತಿಸುಖವು ಎಲ್ಲಕ್ಕೂ ಹೆಚ್ಚಿನದಾದುದರಿಂದ ವೇದಾಂತಿಗಳು ಸಾಮಾನ್ಯರಿಗೆ ಆತ್ಮಾನಂದದ ಕಲ್ಪನೆಯನ್ನು ತಂದುಕೊಡಬೇಕಾದರೆ ಆ ಆನಂದವನ್ನೆ ಮಾದರಿಗಾಗಿ ಇಟ್ಟುಕೊಂಡಿದ್ದಾರೆ. ಮಿಕ್ಕ ವಿಷಯಸುಖಗಳಲ್ಲಿ ಎಲ್ಲ ಇಂದ್ರಿಯಗಳನ್ನೂ ಒಮ್ಮೆಲೆ ಸಂತೋಷಪಡಿಸುವ ಸಾಮರ್ಥ್ಯ

ವಿಲ್ಲ. ಆದರೆ ಸಮರತಿಯಲ್ಲಿ ಸಮರಸವಾದಾಗ ಪಂಚಾವಯವಗಳು ಸಂತುಷ್ಟವಾಗುವವಲ್ಲದೆ ಒಂದು ಬಗೆಯ ಪ್ರಾಣೈಕ್ಯ ಜೀವೈಕ್ಯ ಮುಂತಾದವುಗಳ ಅನಿರ್ವಚನೀಯವಾದ ಸುಖದ ಅನುಭವವೂ ಆಗುವದು. ಉಪಸ್ಥವು ಆನಂದ ಸ್ಥಾನವೆಂದು ಉಪನಿಷತ್ತಿನಲ್ಲಿ ಉಲ್ಲೇಖಿಸಿರುವದಾದರೂ ಇದರ ಸಲುವಾಗಿಯೆ. ಆದುದರಿಂದಲೆ ವೇದಾಂತಿಗಳು ಈ ಭೌತಿಕ ರತಿಸುಖದ ಕಲ್ಪನೆಯೆಂಬ ನಿಚ್ಚಣಿಕೆಯ ಸಹಾಯದಿಂದ ಸಾಮಾನ್ಯ ಸಂಸಾರೀ ಜನರಿಗೆ ಆತ್ಮಸುಖದ ದರ್ಶನವನ್ನು ಮಾಡಿಸಲಿಕ್ಕೆ ಹವಣಿಸಿದ್ದಾರೆ. ಇನ್ನು ಮೂಢರು ಅರ್ಥದ ಅನರ್ಥ ಮಾಡಿಕೊಂಡು, ಹಾಗಾದರೆ ರತಿಸುಖದಲ್ಲಿ ತೊಡಗಿದವರು ಆತ್ಮಸುಖವನ್ನೆ ಅನುಭವಿಸುತ್ತಿರುವರು ಎಂದು ಭ್ರಮಗೊಳ್ಳುವ ಸಂಭವವಿದೆ! ಆದರೆ ಇಂಥ ಮೂಢರು ಕೊನೆಯವರೆಗೆ ಇದ್ದೇ ಇರುವರು. ಆತ್ಮಸುಖವು ರತಿಸುಖದಂತೆಯೆ ಇರುವದೆಂಬುದನ್ನು ಮಾತ್ರ ಈ ಮೂಢರು ನೆನಪಿನಲ್ಲಿಡುತ್ತಾರೆ. ಆದರೆ ರತಿಕಾಲಕ್ಕಾಗುವ ಕ್ಷಣಿಕ ಸುಖವು ನಿರಂತರ ಹಾಗೂ ನಿರಾಲಂಬವಾಗಿರದಿದ್ದರೆ ಅದು ಆತ್ಮಸುಖವೆನಿಸಲಾರದೆಂಬುದನ್ನು ಅವರು ಮರೆತುಬಿಡುತ್ತಾರೆ. ಯಾವದೇ ಉಪಮೆಯನ್ನಾಗಲಿ ಉದಾಹರಣೆಯನ್ನಾಗಲಿ ಕೊಡುವಾಗ ಕವಿಯು ಯಾವ ಉದ್ದೇಶದಿಂದ ಅದನ್ನು ಕೊಟ್ಟಿರುವನೆಂಬುದನ್ನು ತಿಳಿದುಕೊಳ್ಳುವಷ್ಟು ಬುದ್ಧಿಯೂ ತಾರತಮ್ಯವೂ ಇವರಲ್ಲಿ ಇಲ್ಲದ ಮೇಲೆ ಅದಕ್ಕೆ ಮಾಡುವದೇನಿದೆ? ಪರಮಾತ್ಮನ ಕರುಣೆಯಾದಾಗಲೆ ಇಂಥವರ ಉದ್ಧಾರವು!

ನಿಜವಾಗಿ ನೋಡಿದರೆ ಆತ್ಮಸುಖಕ್ಕೂ ವಿಷಯಸುಖಕ್ಕೂ ಬಿಂಬಪ್ರತಿಬಿಂಬದಂತೆ ಅಥವಾ ಛಾಯಾತಪದಂತೆ ಅಂದರೆ ಒಂದು ವಸ್ತು ಹಾಗೂ ಅದರ ಪಡಿನೆಳಲುಗಳಂತೆ ಸಂಬಂಧವಿರುವದು. ಆತ್ಮಸುಖವು ಬಿಂಬರೂಪವು, ವಿಷಯಸುಖವು ಪ್ರತಿಬಿಂಬರೂಪವು. ಸೂರ್ಯಬಿಂಬವು ಶುದ್ಧ, ಸ್ವಸ್ಥ, ಸ್ವಯಂಪ್ರಕಾಶ, ಸ್ವಯಂಭು, ತೇಜಸ್ವಿ ಇರುವದು. ಆದರೆ ಅದರ ಪ್ರತಿಬಿಂಬವು ಯಾವ ಪದಾರ್ಥದಲ್ಲಿ ಅದು ಬೀಳುವದೊ ಅದರ ಸ್ವಚ್ಛತೆ ಅಸ್ವಚ್ಛತೆ ಮುಂತಾದವುಗಳ ಮೇಲೆ ಅವಲಂಬಿಸಿರುವದು. ಸೂರ್ಯಬಿಂಬವು ಅಲ್ಲಾಡುವ ನೀರಿನಲ್ಲಿ ಚಂಚಲವಾಗಿ, ಕೆಸರಿನಲ್ಲಿ ಮಖಾಳವಾಗಿ, ರಾವುಗನ್ನಡಿಯಲ್ಲಿ ಸೊಟ್ಟಾಗಿ, ಕನ್ನಡಿಯಲ್ಲಿ ಸ್ಪಷ್ಟವಾಗಿ, ಭಿನ್ನ ಪದಾರ್ಥಗಳಲ್ಲಿ ಭಿನ್ನ ಭಿನ್ನ ರೀತಿ ಕಾಣಿಸುವದು. ಅದೇ ಬಗೆಯಾಗಿ ಆನಂದ ಸ್ವರೂಪ ಆತ್ಮನಲ್ಲಿದ್ದ ಸಹಜ, ಸ್ವಾಭಾವಿಕ, ಸ್ವತಂತ್ರ, ನಿತ್ಯ, ದುಃಖಲೇಶರಹಿತ, ಪೂರ್ಣ, ಜ್ಞಾನ

ಮೂಲಕ ಆನಂದವು ಆಯಾವಸ್ತುಗಳನ್ನು ಉಪಭೋಗಿಸುವಾಗ ವಿಕೃತ, ಅಪೂರ್ಣ, ದುಃಖಮಿಶ್ರಿತ, ಪರತಂತ್ರ, ಅನಿತ್ಯವಾಗಿ ಅನುಭವಕ್ಕೆ ಬರುವದು. ಸೃಷ್ಟಿಕರ್ತನಾದ ಪರಮಾತ್ಮನು ಆನಂದಸ್ವರೂಪನಿರುವದರಿಂದ ಸೃಷ್ಟಿಯ ಉತ್ಪತ್ತಿಯಾದರೂ ಆನಂದ ಮೂಲಕವೆ ಇರುವದು. ಆದುದರಿಂದಲೆ ಉಪನಿಷತ್ಕಾರರು "ಆನಂದಾತ್ ಹಿ ಏವ ಖಲ್ವಿಮಾನಿ ಭೂತಾನಿ ಜಾಯಂತೇ ಆನಂದೇನ ಜಾತಾನಿ ಜೀವಂತಿ ಆನಂದೇ ಪ್ರಯಂತಿ ಅಭಿಸಂವಿಶಂತಿ," ಅಂದರೆ ಆನಂದದಿಂದಲೆ ಭೂತಮಾತ್ರಗಳ ಹುಟ್ಟು, ಆನಂದದಲ್ಲಿಯೆ ಹುಟ್ಟಿದ ಭೂತಗಳ ಇರವು, ಆನಂದದ ಕಡೆಗೆಯೆ ಅವುಗಳ ಪ್ರಯಾಣ, ಹಾಗೂ ಕೊನೆಗೆ ಆನಂದದಲ್ಲಿಯೆ ಅವುಗಳ ಲಯ, ಹೀಗೆ ಋಷಿಗಳು ಆನಂದದ ವ್ಯಾಪಕತೆಯನ್ನು ತೈತ್ತಿರಿಯೋಪನಿಷತ್ತಿನ ಭೃಗುವಲ್ಲಿಯಲ್ಲಿ ಬಣ್ಣಿಸಿದ್ದಾರೆ.

## ಆತ್ಮಸುಖವೆ ಎಲ್ಲರ ಗುರಿಯು

ಇಂಥ ಈ ಅತ್ಯಂತ ವ್ಯಾಪಕವಾದ ಎಲ್ಲೆಲ್ಲಿಯೂ ತುಂಬಿದ ಆತ್ಮಸುಖವೆ ಎಲ್ಲರ ಗುರಿಯಾಗಿರುವದು. ಅದನ್ನು ದೊರಕಿಸುವ ಯತ್ನದಲ್ಲಿಯೆ ಪ್ರಾಣಿಗಳು ತೊಡಗಿರುವವು. ಕೇವಲ ವಿಷಯಸುಖವೆ ವ್ಯವಹಾರಿಕರ ಗುರಿಯಾಗಿದ್ದಾದರೆ ವಿಷಯಸುಖದಿಂದ ಅವರು ಸಂತೋಷಪಡಬಹುದಾಗಿತ್ತು. ಆದರೆ ಹಾಗೆ ಎಂದೂ ಆಗುವದಿಲ್ಲ. ಒಂದು ವಿಷಯಸುಖವಾದ ಕೂಡಲೆ ಇನ್ನೊಂದು, ಅದಾದಕೂಡಲೆ ಬೇರೊಂದು, ಹೀಗೆ ಮನಃಪ್ರವೃತ್ತಿ ಇರುವದು. ಆತ್ಮಸುಖದ ಹಸಿವೆ ಈ ಪ್ರವೃತ್ತಿಯ ಮೂಲವು. ಈ ಯಾವ ವಿಷಯಸುಖದಿಂದಲೂ ಮನಸು ಪೂರ್ಣ ತಣಿಯುವದಿಲ್ಲ. ಏಕೆಂದರೆ ಅದಕ್ಕೆ ಬೇಕಾದದ್ದು ನಿತ್ಯ ಸತ್ಯ ಸುಖವು, ಬಿಂಬರೂಪವಾದ ಆತ್ಮಾನಂದವು. ಆ ಹಸಿವು ಪ್ರತಿಬಿಂಬರೂಪವಾದ ವಿಷಯಸುಖದಿಂದ ಹಿಂಗೀತೆ? ಆದುದರಿಂದ ಯಾವ ಸುಖವು ದೊರೆತರೆ ಮಿಕ್ಕ ಎಲ್ಲ ಸುಖಗಳು ದೊರೆತಂತಾಗುವವೊ ಆ ಸುಖವನ್ನೆ ಕೈವಶಮಾಡಿಕೊಳ್ಳಲೆತ್ನಿಸುವದು ವ್ಯವಹಾರಿಕರ ಹಾಗೂ ವೇದಾಂತಿಗಳ ಕರ್ತವ್ಯವಿರುವದು. ವೇದಾಂತಿಗಳೆಂದರೊಂದು ಬೇರೆ ಜಾತಿಯವರಲ್ಲ! ಆತ್ಮಸುಖವೆ ನಮ್ಮೆಲ್ಲರ ನಿಜವಾದ ಗುರಿ ಎಂಬ ಸತ್ಯವನ್ನು ತಿಳಿದು ಅದನ್ನು ದೊರಕಿಸುವ ಯತ್ನದಲ್ಲಿರುವ ವ್ಯವಹಾರಿಕರೆ ವೇದಾಂತಿಗಳು. ಎಲ್ಲರೂ ಯಾವ ಆತ್ಮಸುಖವನ್ನು ಈ ಅನಿತ್ಯ ವಿಷಯಸುಖದಲ್ಲಿ ಹುಡುಕುತ್ತಿರುವರೊ, ಅದು ಬಾಹ್ಯವಸ್ತುಗಳಲ್ಲಿ ದೊರೆಯದು, ಅದನ್ನು ನಿತ್ಯವಾದ ಆತ್ಮವಸ್ತುವಿನಲ್ಲಿಯೆ ಅನುಭವಿಸಬೇಕೆನ್ನುವ

ವ್ಯವಹಾರಿಕರೆ ಆಧ್ಯಾತ್ಮವಾದಿಗಳು. ನಿತ್ಯಾನಂದವೆ ತಮ್ಮ ಅಂತಿಮ ಧ್ಯೇಯವೆಂಬುದನ್ನು ಅರಿತು ಅದನ್ನು ಪಡೆಯಲೆಳಸುವ ವ್ಯವಹಾರಿಕರೆ ಮೋಕ್ಷವಾದಿಗಳು. ಆ ನಿತ್ಯಾನಂದವೃತ್ತಿಯು ತಮ್ಮಲ್ಲಿ ಬಿಂಬಿಸಿ ಸ್ಥಿರವಾಗಬೇಕೆಂದು ಹಗಲಿರುಳು ಹೆಣಗುವವರೆ ವೇದಾಂತಿಗಳೆನಿಸುವರು. ವೇದಾಂತಿಗಳು ಸನ್ಯಾಸಿಗಳಿರಬೇಕೆಂಬ ನಿಯಮವಿಲ್ಲ, ಅವರು ವ್ಯವಹಾರವನ್ನು ಬಿಡಬೇಕೆಂಬ ನಿಯಮವೂ ಇಲ್ಲ. ಅವರು ಸಂಸಾರಿಗಳೆ ಅಥವಾ ವ್ಯವಹಾರಿಕರೆ ಇರಬೇಕೆಂಬ ನಿಯಮವೂ ಇಲ್ಲ. ವೇದಾಂತಿಯು ಇಂದ್ರಿಯಸುಖಗಳನ್ನು ಅಥವಾ ವಿಷಯಭೋಗಗಳನ್ನು ಬಿಟ್ಟುಬಿಡಬೇಕೆಂದೂ ನಿಯಮವಿಲ್ಲ. ಅವನು ಅವುಗಳನ್ನು ಭೋಗಿಸಲೇಬೇಕೆಂಬ ನಿರ್ಬಂಧವೂ ಇಲ್ಲ. ವ್ಯವಹಾರ ಮಾಡುವದು ಅಥವಾ ಬಿಡುವದು, ತ್ಯಾಗಿಯಾಗುವದು ಅಥವಾ ಆಗದಿರುವದು, ವಿಷಯಸುಖಗಳನ್ನು ಸಭೋಗಿಸುವದು ಅಥವಾ ತ್ಯಜಿಸುವದು ಇವು ಯಾವವೂ ವೇದಾಂತದ ಗೊತ್ತುಗುರಿಗಳಲ್ಲ. ಇವೆಲ್ಲ ದ್ವಂದ್ವಗಳೆಂದೆನಿಸುವವು. ಏನು ಮಾಡುತ್ತಿದ್ದರೂ ಯಾವ ಸ್ಥಿತಿಯಲ್ಲಿದ್ದರೂ "ನಾನು ಸತ್ಯ ನಿತ್ಯ ಚಿನ್ಮಯ ಆತ್ಮನು" ಎಂಬ ಅರಿವಿನ ಆನಂದದಲ್ಲಿ ಅವಿರತವಾಗಿ ಇರುವದೆ ವೇದಾಂತದ ಗುರಿಯು. ಇಂಥ ಸ್ಥಿತಿಯನ್ನು, ಈ ಅವಸ್ಥೆಯನ್ನು, ಈ ವೃತ್ತಿಯನ್ನು ಸತ್ಯಜ್ಞಾನದ ಅಡಿಗಲ್ಲಿನ ಮೇಲೆ ನಿಲ್ಲಿಸಿ ಸ್ವಭಾವಸಿದ್ಧ ಆನಂದದ ಸಿಂಹಾಸನದ ಮೇಲೆ ಆರೂಢವಾಗುವದೆ ವೇದಾಂತದ ಮಹತ್ವಾಕಾಂಕ್ಷೆಯು. ಆ ಸ್ಥಿತಿಯಲ್ಲಿ ಪರಮಾತ್ಮ ಪ್ರೇರಣೆಯಿಂದ ವಿಹರಿಸುತ್ತಿರುವದೆ ವೇದಾಂತಿಯ ಗುರಿಯು. ಇಂಥ ಸ್ಥಿತಿಯು ಪ್ರಾಪ್ತವಾಯಿತೆಂದರೆ ಮನಸ್ಸು ಎಲ್ಲಿದ್ದರೂ ಯಾವ ವ್ಯಾಪಾರದಲ್ಲಿ ತೊಡಗಿದ್ದರೂ ಅದಕ್ಕೆ ಅಚ್ಚಳಿಯದ ಶಾಂತಿಸುಖವಿರುತ್ತದೆ. "ಯತ್ರ ಯತ್ರ ಮನೋ ಯಾತಿ ತತ್ರ ತತ್ರ ಸಮಾಧಯಃ" ಎಂಬ ಸಿದ್ಧಾವಸ್ಥೆಯನ್ನು ಮುಟ್ಟಿದ ಮಾನವನೆ ವೇದಾಂತದ ಧ್ಯೇಯವನ್ನು ಸಾಧಿಸಿದನೆನ್ನಬೇಕು.

## ಗುರಿ ಒಂದೇ, ದಾರಿಗಳು ಬೇರೆ

ವೇದಾಂತದಲ್ಲಿ, ಅಧ್ಯಾತ್ಮಶಾಸ್ತ್ರದಲ್ಲಿ ಜ್ಞಾನಪೂರ್ವಕ ಈ ನಿತ್ಯಾನಂದ ವೃತ್ತಿಯನ್ನು ಸಾಧಿಸುವದೆ ಮುಖ್ಯ ಧ್ಯೇಯವು. ಈ ತರಹದ ಜೀವನ್ಮುಕ್ತಾವಸ್ಥೆಯನ್ನು, ನಿತ್ಯಾನಂದ ಸ್ಥಿತಿಯನ್ನು ಯಾವ ಬಗೆಯಿಂದ ಯಾವ ಸಾಧನಗಳಿಂದ ದೊರಕಿಸಬೇಕು, ಇದರ ಬಗ್ಗೆ ವೇದಾಂತವು ಯಾವ ಹಟವನ್ನೂ ಹಿಡಿಯುವದಿಲ್ಲ. ನೀವು ತ್ಯಾಗದಿಂದಲೆ ಇದನ್ನು ಸಾಧಿಸಬೇಕು ಅಥವಾ ವ್ಯವ

ಹಾರ ಮಾಡುತ್ತಿರುವಾಗಲೆ ಸಾಧಿಸಬೇಕು ಎಂದು ವೇದಾಂತವು ಹೇಳುವದಿಲ್ಲ. ವೇದಾಂತವು ಎಷ್ಟೋ ಹಾದಿಗಳನ್ನು ಹೇಳುವದು. ಭಿನ್ನಭಿನ್ನ ಜನರಿಗೆ ಭಿನ್ನ ಭಿನ್ನ ಅಧಿಕಾರಾನುಸಾರವಾಗಿ ಬೇರೆ ಬೇರೆ ಮಾರ್ಗಗಳು ಯೋಗ್ಯವೆನಿಸುವವು. ಪ್ರತಿಯೊಂದು ಜೀವವು ತನ್ನ ಸ್ವಭಾವದಂತೆಯೂ ಸ್ವಧರ್ಮದಂತೆಯೂ ಸಾಧನಗಳನ್ನಾರಿಸಿ ಆ ಮಾರ್ಗದಿಂದ ಸಾಗಿ "ಸ್ವರಾಜ್ಯ" ಪದವಿಯನ್ನು ಗಳಿಸುವದು. ಎಲ್ಲರೂ ಒಂದೇ ಮಾರ್ಗದಿಂದ ಹೋಗಬೇಕು ಎಂದು ನಿರ್ಬಂಧವಿಲ್ಲ. ಯಾವನಲ್ಲಿ ಕ್ರಿಯಾಶಕ್ತಿಯ ಪ್ರಾಬಲ್ಯವಿರುವದೋ ಅವನಿಗೆ ರಾಜಯೋಗದಿಂದ ಈ ವೃತ್ತಿಯನ್ನು ಪಡೆದುಕೊ ಎಂದು ಹೇಳುವದು ಅಸಮಂಜಸವು. ಅವನಿಗೆ ಕರ್ಮಯೋಗವೆ ಉಚಿತವಾದ ಮಾರ್ಗವು. ಮೃದುಭಾವಗಳಿಂದ ವಿಹ್ವಲವಾಗುವಂಥ ಮನಸ್ಸುಳ್ಳವನಿಗೆ ಭಕ್ತಿಯೋಗವೆ ಸುಲಭ ದಾರಿಯು. ಇದನ್ನೆಲ್ಲವನ್ನರಿತು ವೇದಾಂತವು ಸಾಧನ ಅಥವಾ ಮಾರ್ಗಗಳ ಬಗ್ಗೆ ಯಾವದೆ ಒಂದೇಬಗೆಯ ನಿರ್ಬಂಧವನ್ನಿಡದೆ ಮೇಲ್ಕಾಣಿಸಿದಂತೆ ನಿತ್ಯಾನಂದ ವೃತ್ತಿಯನ್ನು ಸ್ವೀಕರಿಸುವ ಯಾವದೆ ಮಾರ್ಗದಿಂದ ಸಾಗಿರಿ ಎಂದು ಸಾಧಕರಿಗೆ ಬೋಧಿಸುವದು. ಸಾಂಪ್ರದಾಯಾಭಿಮಾನದಿಂದ ಅಥವಾ ಸಂಕುಚಿತ ದೃಷ್ಟಿಯ ಮೂಲಕ ಇದೇ ಮಾರ್ಗವು ಯೋಗ್ಯವು ಅಥವಾ ಶ್ರೇಷ್ಠವೆಂದು ಕೆಲವರು ಹೇಳುತ್ತಿದ್ದರೂ ವೇದಾಂತವು ತನ್ನ ಅತ್ಯಂತ ವಿಸ್ತೃತ ವಿಶಾಲವಾದ ಮೋಕ್ಷಮಾರ್ಗದಲ್ಲಿ ಎಲ್ಲ ಪಂಥದವರಿಗೂ ತಡೆಯಿಲ್ಲದೆ ಸಾಗಲಿಕ್ಕೆ ಅನುವು ಮಾಡಿಕೊಟ್ಟಿರುವದು. ಬರಲಿ, ಎಲ್ಲರೂ ಬರಲಿ. ಸನ್ಯಾಸಯೋಗಿ ಬರಲಿ, ಬುದ್ಧಿಯೋಗಿಯು ಬರಲಿ, ಕರ್ಮಯೋಗಿಯು ಬರಲಿ, ವ್ಯವಹಾರಿಕನು ಬರಲಿ, ಭಕ್ತಿಯೋಗಿಯು ಬರಲಿ, ಭೋಗಿಯೂ ಬರಲಿ, ಯೋಗಿಯೂ ಬರಲಿ. ಮನುಷ್ಯನಿಗೆ ಚಿರ, ಸ್ಥಿರ, ಶುದ್ಧ, ಬುದ್ಧ, ನಿತ್ಯ, ಸತ್ಯ ಆನಂದವು ಯಾವ ಮಾರ್ಗದಿಂದ ದೊರಕುವದೊ ಆ ಮಾರ್ಗದಿಂದ ಅವನು ಬರಲಿ, ಎಂದು ಈ ವೇದಾಂತಮಾತೆಯು ತನ್ನ ಅಜ್ಞ ಬಾಲಕರನ್ನು ತನ್ನೆಡೆಗೆ ಕರೆಯುತ್ತಿರುವಳು.

ಮೇಲ್ಕಾಣಿಸಿದ ಎಲ್ಲ ವಿಚಾರಗಳನ್ನು ಮನಸಿನಲ್ಲಿ ತಂದರೆ ವೇದಾಂತಕ್ಕೂ ವ್ಯವಹಾರಕ್ಕೂ ಯಾವ ವಿರೋಧವೂ ಇಲ್ಲವೆಂಬುದು ಸ್ಪಷ್ಟವಾಗುವದು. ಯಾಕಂದರೆ ವ್ಯವಹಾರಿಕರ ಧ್ಯೇಯವನ್ನೆ, ನಿತ್ಯಾನಂದವನ್ನೆ ಹೇಗೆ ದೊರಕಿಸಬೇಕು, ನಿತ್ಯಾನಂದವೆಂದರೇನು ಮುಂತಾದ ವಿಷಯವನ್ನು ವಿಮರ್ಶಿಸುವ ಶಾಸ್ತ್ರವೆ ವೇದಾಂತಶಾಸ್ತ್ರವು. ಕತ್ತಲೆಯಲ್ಲಿ ಕೈಯಾಡಿಸುವವರಂತೆ ವಿಷಯಭೋಗಗಳಲ್ಲಿ ಆನಂದವು ದೊರೆಯಬಹುದೆಂಬ ಭ್ರಮೆಯಿಂದ ವ್ಯವಹಾರಿಕ

ರೆಲ್ಲರೂ ಯಾವ ಆತ್ಯಂತಿಕ ಸುಖವನ್ನು ಹುಡುಕುತ್ತಿರುವರೊ ಅದನ್ನೆ ಜ್ಞಾನದ ಬೆಳಕಿನಿಂದ, ಸಾಧನಗಳ ಪ್ರಯತ್ನದಿಂದ ಹೇಗೆ ಕೈವಶಮಾಡಿಕೊಳ್ಳಬೇಕು ಎಂಬುದನ್ನು ಸಪ್ರಮಾಣವಾಗಿ ತೋರಿಸಿಕೊಡುವ ಶಾಸ್ತ್ರವೆ ಅಧ್ಯಾತ್ಮ ಶಾಸ್ತ್ರವು. ಆ ಸುಖವು "ಸುಖಮಾತ್ಯಂತಿಕಂ ಯತ್ತತ್ ಬುದ್ಧಿಗ್ರಾಹ್ಯ ಮತೀಂದ್ರಿಯಂ," "ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ," "ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ," ಈ ಪ್ರಕಾರದ್ದಿರುವದು. ಅದು ಆತ್ಯಂತಿಕವು, ಅತೀಂದ್ರಿಯವು, ಕೇವಲ ಬುದ್ಧಿಗ್ರಾಹ್ಯವು, ಅದು ದೊರೆತಿತೆಂದರೆ ಮಿಕ್ಕ ಯಾವ ಲಾಭವೂ ಅದಕ್ಕೆ ಹೆಚ್ಚಿನದಲ್ಲವೆಂದು ಮನುಷ್ಯನು ಅನುಭವಪೂರ್ವಕ ಹೇಳಬಹುದು. ಆ ಸ್ಥಿತಿಗೆ ಮುಟ್ಟಿದವನು ಬೇಕಾದಂಥ ದುಃಖದಿಂದ ಪೀಡಿತನಾಗಿದ್ದರೂ ಅಚಲನಿರುವನು. ಈ ಸುಖವು "ಯತ್ತದಗ್ರೇ ವಿಷಮಿವ ಪರಿಣಾಮೇ ಅಮೃತೋಪಮಮ್" ಕಷ್ಟಸಾಧ್ಯವಿದ್ದರೂ ಕೊನೆಯಲ್ಲಿ ಅಮೃತೋಪಮವಿರುವದು, ಇದರಲ್ಲಿ ಯಾವ ಸಂಶಯವೂ ಇಲ್ಲವೆಂದು ಅನುಭಾವಿಗಳೂ ಋಷಿಮುನಿಗಳೂ ಭಕ್ತರೂ ಭಾವಿಕರೂ ಶರಣರೂ ದಾಸರೂ ಹೇಳುತ್ತ ಬಂದಿರುವರು.

## ವೇದಗಳು

ಇನ್ನು ವೇದಗಳು, ಉಪನಿಷತ್ತುಗಳು, ಅವುಗಳಲ್ಲಿಯ ತತ್ವಜ್ಞಾನ, ಮುಂತಾದ ವಿಷಯಗಳನ್ನು ವಿಚಾರಿಸುವ. ವೇದವೇ ನಮ್ಮ ವೇದಾಂತದ, ನಮ್ಮ ಧರ್ಮದ, ನಮ್ಮ ಸಂಸ್ಕೃತಿಯ, ನಮ್ಮ ಅಖಿಲ ಜೀವನದ ಮೂಲಾ-ಧಾರವು. ಸದ್ಯಕ್ಕೆ ನಮ್ಮ ಅಜ್ಞಾನ ಹಾಗೂ ಅನಾಸ್ಥೆಗಳ ಮೂಲಕ ನಾವು ವೇದಗ್ರಂಥಗಳೆಂದರೇನೆಂಬುದನ್ನು ಸಹ ಮರೆತುಬಿಟ್ಟಿದ್ದರೂ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಹಿಂದುಸ್ತಾನದಲ್ಲಿ ಸದ್ಯಕ್ಕೆ ಪ್ರಚಲಿತವಿರುವ ಧರ್ಮಕರ್ಮಗಳ ಬೀಜವು ವೇದೋಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಕಂಡುಬರುವದೆಂಬದು ಸರ್ವವಿದಿತವು. ವೇದೋಪನಿಷತ್ತುಗಳು "ಶ್ರುತಿ" ಗ್ರಂಥಗಳೆಂದೆನಿಸುತ್ತವೆ. ಅವುಗಳು ಅಪೌರುಷೇಯವೆಂದು ಹೇಳುವ ಪರಿಪಾಠವುಂಟು. "ಶ್ರುತಿ" ಅಂದರೆ ಕೇಳಿದ್ದು. ಬಾಹ್ಯ ಕಿವಿಯಿಂದ ಕೇಳಿದ್ದಲ್ಲ, ಆದರೆ ಅಂತರಿಂದ್ರಿಯದಿಂದ ಕೇಳಿದ್ದು, ಎಂದು ಇಲ್ಲಿ ಅದರ ಅರ್ಥವು. ಸತ್ಯಾನ್ವೇಷಿಗಳಾದ ಋಷಿಮುನಿಗಳು ಶುದ್ಧ, ನಿಶ್ಚಲಮನಸ್ಕರಾಗಿ ಅತ್ಯಂತ ಉತ್ಕಟತೆಯಿಂದ ಪರಮಾತ್ಮ

ಚಿಂತನದಲ್ಲಿ ನಿಮಗ್ನರಾದಾಗ ಅಂತರ್ಯಾಮಿಯು ಜಾಗೃತನಾಗಿ ಪರಮಾತ್ಮ ಪ್ರೇರಣೆಯಿಂದ ನುಡಿಸಿದ ದಿವ್ಯವಾಣಿಯೆ ಶ್ರುತಿಯೆಂದೆನಿಸುವದು. ಇಂಥ ಸಮಯದಲ್ಲಿ ಆಯಾ ಋಷಿಗಳು ಪರಮಾತ್ಮನ ಜ್ಞಾನಸ್ಫುರಣದ ಕೇವಲ ವಾಹನಗಳೆನ್ನಬಹುದು. ಅವರು ಈ ವಿಷಯದಲ್ಲಿ ಕರ್ತೃಗಳಲ್ಲ, ಆದರೆ ಪರಮಾತ್ಮನ ಕೈಯಲ್ಲಿ ನಿಮಿತ್ತಮಾತ್ರರು. ಅವರು ಮಂತ್ರಗಳನ್ನು ಕೇಳಿ, ಹೇಳಿದವರು; ಸ್ವತಃ ಅವುಗಳನ್ನು ರಚಿಸಿದವರಲ್ಲ. ಅವರು ಮಂತ್ರದ್ರಷ್ಟರು. ಮಂತ್ರವನ್ನು ನೋಡಿ ನುಡಿದವರು. ಸ್ವತಃ ಮಂತ್ರವನ್ನು ಮಾಡಿದವರಲ್ಲ.

ವೇದಗಳು ಪೌರುಷೇಯವೊ ಅಪೌರುಷೇಯವೊ ಎಂಬುದೊಂದು ದೊಡ್ಡ ವಾದವೇ ಇದೆ. ಪೌರುಷೇಯವೆಂದರೆ "ಪುರುಷಕೃತ" ವೆಂದು ಅರ್ಥವು. ಅಪೌರುಷೇಯವೆಂದರೆ ಶಬ್ದರೂಪದಿಂದ ಅನಾದಿಯಾಗಿದ್ದುದು. ನೈಯ್ಯಾಯಿಕರಿಗೂ ಮೀಮಾಂಸಕರಿಗೂ ಇದ್ದ ಈ ವಾದದಲ್ಲಿ ನಾನು ಈಗ ಸೇರಲಿಚ್ಛಿಸುವದಿಲ್ಲ. "ಪೌರುಷೇಯ" ಅಂದರೆ ದೇವಕೃತವೆಂದು ನೈಯ್ಯಾಯಿಕರು ಹೇಳುವರು, ಶಬ್ದವು ಅನಾದಿಯೆಂದು ವಾದಿಸುವ ಮೀಮಾಂಸಕರು ವೇದಗಳು "ಅಪೌರುಷೇಯ," ಅಂದರೆ ಮನುಷ್ಯಕೃತವೂ ಅಲ್ಲ ಅಥವಾ ಪರಮಾತ್ಮಕೃತವೂ ಅಲ್ಲ. ಅನಾದಿಯಾಗಿರುವವೆಂದು ಹೇಳುವರು. ಆದರೆ ವೇದಗಳು ಪುರುಷಕೃತವಲ್ಲ, ದೇವಕೃತವಲ್ಲ, ಪುರುಷೋತ್ತಮನ ಪ್ರೇರಣೆಯಿಂದ ಋಷಿಮುನಿಗಳ ಮನೋಭೂಮಿಕೆಯಲ್ಲಿ ಮೂಡಿದ ಮಾತುಗಳವು ಎಂದು ನಾವು ಹೇಳಬಹುದು.

ಹೀಗೆ ಪರಮಾತ್ಮಪ್ರೇರಣೆಯಿಂದ ರಚಿಸಲ್ಪಟ್ಟ ಗ್ರಂಥಗಳಿಗೆ ಪಾಶ್ಚಾತ್ಯರ ಮಾನಸಪುತ್ರರಾದ ಕೆಲವು ಸುಶಿಕ್ಷಿತ ಆಧುನಿಕರು ನಾನಾ ಬಗೆಯ ಹೆಸರುಗಳನ್ನಿಟ್ಟು ಅವುಗಳನ್ನು ಹೀಯಾಳಿಸುತ್ತಾರೆ. ವೇದಗಳೆಂದರೆ (ಉಪನಿಷತ್ತುಗಳನ್ನುಳಿದು) ಮಾನವ ಜಾತಿಯ ತೊದಲ್ನುಡಿಗಳೆಂದು ಕೆಲವರು; ಕೇವಲ ನಿಸರ್ಗದೇವತೆಗಳ ಅವಾಸ್ತವ ಪ್ರಶಂಸೆ ಎಂದು ಅನ್ನರು; ಧನ, ಶಕ್ತಿ, ಸಮೃದ್ಧಿ, ಜಯ ಇವುಗಳ ಬೆನ್ನುಹತ್ತಿದ ಕವಿಗಳ ಕಾವ್ಯಗಳೆಂದು ಮತ್ತೆ ಕೆಲವರು ಹೇಳುತ್ತಾರೆ. ವೇದಗಳನ್ನು ರಚಿಸಿದ ಕವಿಗಳಿಗೆ ಉಚ್ಚ ಕಲ್ಪನೆ, ದಿವ್ಯ ಭಾವನೆ, ಆತ್ಮಜ್ಞಾನಗಳು ಇದ್ದಿಲ್ಲವೆಂದು ಇವರ ವಿಧಾನವು. ಆದರೆ ವೇದಗಳ ಬಗ್ಗೆ ಈ ತರದ ವಿಚಾರಗಳನ್ನು ವ್ಯಕ್ತಮಾಡುವದೆಂದರೆ ಕೇವಲ ತಮ್ಮ ಅಜ್ಞಾನವನ್ನು ಅಗಸೀಬಾಗಲಿಗೆ ಕಟ್ಟಿದಂತೆಯೆ ಸರಿ! ಮಾನವ ಜಾತಿಯು ಅಜ್ಞ ಸ್ಥಿತಿಯಿಂದ ಪ್ರಗತಿ ಹೊಂದುತ್ತ ಬಂದು ಈಗಿನ ಸ್ಥಿತಿಗೆ ಮುಟ್ಟಿರುವದೆಂಬ-

ದನ್ನು ಒಪ್ಪಿದರೂ ವೇದಕಾಲದಲ್ಲಿ ನಮ್ಮ ಆರ್ಯರು ಉಚ್ಚ ಅಧ್ಯಾತ್ಮತತ್ವ ಜ್ಞಾನವಿಹೀನರಿದ್ದರೆಂದು ಹೇಳುವದು ಬಹಳೇ ತಪ್ಪು. ಯಾಕಂದರೆ ವೇದ ಗ್ರಂಥಗಳನ್ನು ಯಾವ ಪೂರ್ವಗ್ರಹವೂ ಇಲ್ಲದೆ ಚನ್ನಾಗಿ ಅಭ್ಯಸಿಸುವವನಿಗೆ ಆ ಗ್ರಂಥಗಳಲ್ಲಿಯ ಶ್ರೇಷ್ಠ ವಿಚಾರಸರಣಿಯೂ ತತ್ವವಿಚಾರಗಳೂ ಒಮ್ಮೆಲೆ ಹೊಳೆಯುವವು. ಅನೇಕ ಪಾಶ್ಚಾತ್ಯಪಂಡಿತರು ವೇದಾರ್ಥದ ಸಲುವಾಗಿ ಮಾಡಿದ ಯತ್ನವು ಬಹಳೇ ಪ್ರಶಂಸನೀಯವೆಂಬುದು ನಿಜವು. ಅವರು ಆ ಗ್ರಂಥಗಳ ಅಭ್ಯಾಸಮಾಡಿ ಅವುಗಳಲ್ಲಿಯ ಕ್ಲಿಷ್ಟಶಬ್ದಗಳು, ಶಬ್ದಕೋಶ, ವ್ಯಾಕರಣ, ಛಂದಸ್ಸು ಮುಂತಾದವುಗಳನ್ನು ಕುರಿತು ಪರಿಶ್ರಮಪೂರ್ವಕ ಮಾಡಿದ ಪ್ರಯತ್ನದ ಬಗ್ಗೆ ನಾವು ಹಿಂದುಗಳು ಅವರಿಗೆ ಯಾವಾಗಲೂ ಋಣಿಯಾಗಿರುವೆವು. ಆದರೆ ಎಲ್ಲ ಸುಧಾರಣೆಯೆಂಬುದು ಈ ಶತಮಾನದಲ್ಲಿಯೆ ಹೆಚ್ಚಿರುವದು, ಪಾಶ್ಚಾತ್ಯ ರಾಷ್ಟ್ರಗಳೆ ಸುಧಾರಣೆಯ ತವರೂರು, ಮುಂತಾದ ಅವರ ಕೆಲವು ಕಲ್ಪನೆಗಳ ಮೂಲಕ ಆ ಗ್ರಂಥಗಳ ತಿರುಳು ತಿಳಿಯದೆ ಹುರುಳು ಹೊಳೆಯದೆ ಅವರು ಕಷ್ಟಪಟ್ಟಿರುವರು. ವೇದಕಾಲದ ಆರ್ಯರು ಅತ್ಯಂತ ಉಚ್ಚ ತತ್ವಗಳನ್ನು ಬಲ್ಲವರಿದ್ದರು. ಅವರು ಕೇವಲ ನಿಸರ್ಗದೇವತೆಗಳ ಉಪಾಸಕ ರಿದ್ದಿಲ್ಲ, ಏಕಮೇವಾದ್ವಿತೀಯ ಪರಮಾತ್ಮನ ನಿಚ್ಚಳವಾದ ಕಲ್ಪನೆಯು ಅವರಿಗಿತ್ತು, ಎಂಬುದನ್ನು ಸಿದ್ಧಮಾಡಲಿಕ್ಕೆ ಹೊರಗಿನ ಪುರಾವೆಯು ಏನೂ ಬೇಕಾಗಿಲ್ಲ. ಋಗ್ವೇದದಲ್ಲಿಯ ಕೆಲವು ಋಚೆಗಳನ್ನು ಓದಿದರೆ ಇದು ಒಮ್ಮೆಲೆ ಒಡೆದು ಕಾಣುವದು. " ಏಕಂ ಸದ್ವಿಪ್ರಾ ಬಹುಧಾ ವದಂತಿ, " ( ಋ. ೧, ೧೬೪, ೪೬.) " ಯಃ ಪ್ರಾಣತೋ ನಿಮಿಷತೋ ಮಹಿತ್ವೈಕ ಇದ್ರಾಜಾ ಜಗತೋ ಬಭೂವ ಯ ಈಶೆ ಅಸ್ಯ ದ್ವಿಪದಃ ಚತುಷ್ಪದಃ " ( ಋ. ೧೦, ೧೨೧, ೩. ) " ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್, " ( ಋ. ೧೦, ೯೦, ೨. ) ಈ ಮುಂತಾದ ಮಂತ್ರಗಳ ಮೇಲಿಂದ ಒಬ್ಬನೇ ದೇವರು, ಅವನೇ ಈ ವಿಶ್ವದ ಕರ್ತನು ಹಾಗೂ ಚಾಲಕನು ಎಂಬ ಕಲ್ಪನೆಯು ಅವರಿಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇದಲ್ಲದೆ ಸ್ಲೆಗೆಲ್, ರೆ. ಬ್ರಾಯಿಸ, ರೆ. ವಾರ್ಡ, ಚಾರ್ಲ್ಸ ಕೋಲಮನ್, ಕೋಲಬ್ರುಕ್, ಕೌಂಟ ಜಾರ್ಸ್ಟ್ರಜರ್ನಾ ಮುಂತಾದ ವೇದಾಭ್ಯಾಸಿಗಳು "ಏಕ ದೇವತೆ" ಯ ಕಲ್ಪನೆಯು ವೇದಗಳಲ್ಲಿ ಮೂಲ-ವಿರುವದೆಂದು ತಮ್ಮ ತಮ್ಮ ಗಂಥಗಳಲ್ಲಿ ಒಪ್ಪಿಗೆಯನ್ನಿತ್ತಿದ್ದಾರೆ. ಇನ್ನು ತತ್ವ ಜ್ಞಾನದ ವಿಷಯವಾಗಿ ಋಗ್ವೇದದ "ನಾಸದೀಯ" ಸೂಕ್ತವನ್ನು (ಮಂಡಲ ೧೦, ಸೂಕ್ತ ೧೨೯) ನೋಡಿದರೆ ಸಾಕು. ಋಷಿಗಳ ತತ್ವಜಿಜ್ಞಾಸೆಯು

ವಿಚಾರಶಕ್ತಿಯು ಮೇರೆಯನ್ನು ದಾಟಿ ಹೇಗೆ ಹೊರಸೂಸುತ್ತಿತ್ತೆಂಬುದು ಅಲ್ಲಿ ಕಂಡುಬರುವದು.

ವೇದಗಳೆಂದರೆ ಕೇವಲ ನಿಸರ್ಗದೇವತೆಗಳನ್ನು ಹೊಗಳುವ ಕಾವ್ಯಗಳಲ್ಲ, ಎಂಬುದಕ್ಕೆ ಇನ್ನೂ ಪ್ರಮಾಣಗಳಿವೆ. ಅವು ಬರಿಯ ಕಾವ್ಯಗಳಿದ್ದು ಜನರ ತತ್ವಜಿಜ್ಞಾಸೆಯನ್ನು ತೃಪ್ತಿಬಡಿಸುವ ಸಾಮರ್ಥ್ಯವು ಅವುಗಳಲ್ಲಿಲ್ಲದೆ ಹೋಗಿದ್ದರೆ "ವೇದ" ಅಂದರೆ ಜ್ಞಾನ ಅಥವಾ "ಶ್ರುತಿ" ಅಂದರೆ ಪರಮಾತ್ಮನಿಂದ ಕೇಳಿದ್ದು, ಎಂಬ ಪ್ರೌಢವಾದ ಹೆಸರು ಅವುಗಳಿಗೆ ಕೊಡಲ್ಪಡುತ್ತಿರಲಿಲ್ಲ. ಅವು ಅಪೌರುಷೇಯವೆಂಬ ಅಥವಾ ದೇವಕೃತವೆಂಬ ವಾದವನ್ನೂ ಯಾರೂ ಬೆಳೆಸುತ್ತಿರಲಿಲ್ಲ. ಇದಲ್ಲದೆ ಉಪನಿಷತ್ತುಗಳಂಥ ತತ್ವಪ್ರಚುರ ಗ್ರಂಥಗಳು ವೇದಗಳ ಭಾಗಗಳಾಗಿರುವವಲ್ಲದೆ ವೇದಪರಂಪರೆಯನ್ನು ಹಿಡಿದುಕೊಂಡೆ ಅವು ರಚಿಸಲ್ಪಟ್ಟಿರುವವೆಂದು ಅವುಗಳಲ್ಲಿ ಸ್ಪಷ್ಟವಾದ ಉಲ್ಲೇಖವಿರುವದು. "ತದೇತತ್ ಋಚಾಭ್ಯುಕ್ತಮ್," "ತದೇಷ ಶ್ಲೋಕಃ" ಎಂದು ಋಷಿಗಳು ಮೇಲಿಂದ ಮೇಲೆ ಉಪನಿಷತ್ತುಗಳಲ್ಲಿ ವೇದವಾಕ್ಯಗಳನ್ನು ಉದಹರಿಸಿರುತ್ತಾರೆ. "ತ್ರಿಶಂಕೋರ್ವೇದಾನುವಚನಮ್" ಎಂಬ ಸ್ಪಷ್ಟವಾಕ್ಯಗಳಾದರೂ ಈ ಸಂಗತಿಗೆ ಸಾಕ್ಷಿಯಾಗಿರುವವು. ವೇದಗಳು ಮೊದಲು ಆ ಮೇಲೆ ಉಪನಿಷತ್ತುಗಳು ರಚಿಸಲ್ಪಟ್ಟವೆಂಬಲ್ಲಿ ಯಾವ ಸಂಶಯವೂ ಇಲ್ಲ. ವೇದಪರಂಪರೆಯನ್ನು ಬಿಡದೆ ಉಪನಿಷತ್ತುಗಳೆಂಬ ತತ್ವಗ್ರಂಥಗಳು ರಚಿಸಲ್ಪಟ್ಟಿವೆ. ಅಂದಮೇಲೆ ಉಪನಿಷತ್ತುಗಳಲ್ಲಿಯ ತತ್ವಗಳ ಬೀಜಗಳು ವೇದಗಳಲ್ಲಿರದೆ ಹೋಗಿದ್ದರೆ ಉಪನಿಷತ್ಕಾರರು ಎಂದಿಗೂ ಆ ಪರಂಪರೆಯನ್ನು ಒಪ್ಪುತ್ತಿದ್ದಿಲ್ಲ. ಎಲ್ಲ ಸುಧಾರಣೆಯಾಗಲಿ ಎಲ್ಲ ಉಚ್ಚಕಲ್ಪನೆಗಳಾಗಲಿ ತಾತ್ವಿಕ ವಿಚಾರಗಳಾಗಲಿ ಈ ಜಗೆಗೆ ಹುಟ್ಟಿರುವವೆಂದು ತಿಳಿಯುವದು ಅಸಮಂಜಸವು. ಯಾಕಂದರೆ ಎಷ್ಟೋ ಸಂಸ್ಕೃತಿಗಳು ಈ ಭೂಗೋಲದ ಮೇಲೆ ವಾಸಮಾಡಿ ಲಯಹೊಂದಿವೆಯೆಂದು ಕೆಲವು ಪಂಡಿತರೆ ಈಗ ಶೋಧಮಾಡಿದ್ದಾರೆ. ಆದರೆ ಸುದೈವದಿಂದ ಆರ್ಯಸಂಸ್ಕೃತಿಯು ಮಾತ್ರ ಪುರಾತನವಿದ್ದು ನಷ್ಟವಾಗದೆ ಉಳಿದಿದೆ. ಇದೇನೂ ಅಂಥ ಇಂಥ ಮಾತಲ್ಲ.

ನಾನು ಮಾಡಿದ ವಿಧಾನಗಳು ಸತ್ಯವಿದ್ದರೆ ವೇದಗಳ ಅರ್ಥವನ್ನು ಹಚ್ಚುವ ಪಾಶ್ಚಾತ್ಯಪಂಡಿತರ ಪದ್ಧತಿಯು ತಪ್ಪಿರಲಿಕ್ಕೆ ಸಾಕು. ನಿಜವಾಗಿ ನೋಡಿದರೆ ವೇದಗಳ ಅರ್ಥವು ಬಹಳ ಗೂಢವಿರುವದು. ಅವುಗಳಲ್ಲಿ ನಿಸರ್ಗದೇವತೆಗಳ ಪ್ರಶಂಸೆ ಇಲ್ಲವೆಂದು ಯಾರೂ ಹೇಳಲಾರರು. ಆದರೆ ಆ ದೇವತೆಗಳ

ಪ್ರಶಂಸೆಯೆಂದರೆಯೆ ವೇದಗಳು ಎಂದು ತಿಳಿದರೆ ನಮ್ಮದು ತಪ್ಪಾಗುವದು. ಋಷಿಗಳು ದಿವ್ಯದೃಷ್ಟಿಯುಳ್ಳವರಾದುದರಿಂದ ನಿಸರ್ಗದೇವತೆಗಳನ್ನೆ ಅವರು ತಮ್ಮ ಅಧ್ಯಾತ್ಮ ಧ್ಯೇಯಸಾಧನಕ್ಕಾಗಿ ಉಪಯೋಗಿಸುತ್ತಿದ್ದರು. ಒಂದೇ ಒಂದು ಉದಾಹರಣೆಯನ್ನು ಕೊಟ್ಟರೆ ಈ ವಿಧಾನವು ಸ್ಪಷ್ಟವಾಗುವದು. ಸೂರ್ಯದೇವತೆಯ ಪ್ರಾರ್ಥನೆಯ ಕಡೆಗೆ ನೋಡುವ. ಋಷಿಗಳು ಸೂರ್ಯನ ಪೂಜೆಮಾಡುವದು ನಿಜವು. ಆದರೆ ಅವರಿಗೆ ಸೂರ್ಯನೆಂದರೆ ಕೇವಲ ನಿಸರ್ಗದೇವತೆಯಾಗಿರಲಿಲ್ಲ. ಈ ಆಕಾಶದಲ್ಲಿ ಭೂಲೋಕದ ಪ್ರಾಣನಂತೆ ಸಂಚರಿಸುವ ಸೂರ್ಯನನ್ನು ಅವರು ಒಂದು ಪ್ರತೀಕವೆಂದು ಪೂಜಿಸುತ್ತಿದ್ದರು. ಯಾತರ ಪ್ರತೀಕವೆಂದು? ಮನೋಭೂಮಿಕೆಯಲ್ಲಿ ಬುದ್ಧಿಶಕ್ತಿಯ ಪ್ರತೀಕವೆಂದೂ ಅದಕ್ಕೂ ಆಚೆಗೆ ಹೋಗಿ ಆತ್ಮಭೂಮಿಕೆಯಲ್ಲಿಯ ಪರಮಾತ್ಮ ಪ್ರತೀಕವೆಂದೂ ಅವರು ಸೂರ್ಯನನ್ನು ಅರ್ಚಿಸುತ್ತಿದ್ದರು. ಅಲ್ಲಲ್ಲಿರುವ ಸೂರ್ಯದೇವತೆಯ ವರ್ಣನೆಗಳನ್ನು ಕೇವಲ ಭೌತಿಕ ದೃಷ್ಟಿಯಿಂದ ನೋಡಿದರೆ ಅವು ಎಂದಿಗೂ ಸಮಂಜಸ ಕಾಣಲಾರವು. ಆದರೆ ಋಷಿಗಳು ಬಾಹ್ಯೇಂದ್ರಿಯಕ್ಕೆ ಗೋಚರವಾಗುವ ಆ ಸೂರ್ಯನನ್ನು ಅದೇ ಕಾಲಕ್ಕೆ ಮನ, ಆತ್ಮ, ಎಂಬ ಮತ್ತೆರಡು ಭೂಮಿಕೆಯಿಂದ ನೋಡುತ್ತಿದ್ದರೆಂಬುದನ್ನು ಲಕ್ಷಿಸಿದರೆ ನಮಗೆ ಎಲ್ಲ ತತ್ವವು ನಿಚ್ಚಳವಾಗಿ ಹೊಳೆಯುವದು. ಬರಬರುತ್ತ ಈ ಅಧ್ಯಾತ್ಮದೃಷ್ಟಿಯು ಅಳಿಯಿತು, ಋಗ್ವೇದಾದಿಗಳಲ್ಲಿ ಗೂಢವಾಗಿದ್ದ, ರೂಪಕಾದಿಗಳ ಸಹಾಯದಿಂದ ಹೇಳಿದ ತತ್ವಜ್ಞಾನವನ್ನು ಸ್ಪಷ್ಟ ಭಾಷೆಯಲ್ಲಿ ಹೇಳುವ ಪ್ರಸಂಗವು ಬಂದಿತು. ಆಗ್ಗೆ ಉಪನಿಷತ್ತುಗಳ ಅವತಾರವಾಯ್ತು. ವೇದ ಹಾಗೂ ಉಪನಿಷತ್ತುಗಳ ಸಂಬಂಧವು ಈ ಪ್ರಕಾರದ್ದಿರುವದೆಂದು ಹೇಳಬಹುದು.

## ಉಪನಿಷತ್ತುಗಳು

ಉಪನಿಷತ್ತುಗಳು ನಿಜವಾಗಿ ವೇದಭಾಗಗಳೇ. ಅವಾದರೂ ಶ್ರುತಿಗಳೆಂದೆನಿಸುವವು. ಉದಾಹರಣಾರ್ಥವಾಗಿ ಐತರೇಯೋಪನಿಷತ್ತು, ಕೇನೋಪನಿಷತ್ತು ಇವು ಅನುಕ್ರಮವಾಗಿ ಋಗ್ವೇದ ಮತ್ತು ಸಾಮವೇದಾಂತರ್ಗತವಿರುವವು. ಆದರೆ ವಿಷಯಭಿನ್ನತೆಯ ಮೂಲಕ ಇವುಗಳ ಅಭ್ಯಾಸವನ್ನು ಬೇರೆ ಬೇರೆಯಾಗಿ ಮಾಡುವ ಪರಿಪಾಠವಿರುವದು. ಉಪನಿಷತ್ತುಗಳು ದೈವೀ ಸ್ಫುರಣದಿಂದ ನಿರ್ಮಿತವಾದ ಗ್ರಂಥಗಳೆಂಬಲ್ಲಿ ಯಾವ

ಸಂಶಯವೂ ಇಲ್ಲ. ಬ್ರಾಹ್ಮಣ, ಆರಣ್ಯಕ, ಸೂಕ್ತ ಮುಂತಾದ ವೇದಭಾಗಗಳು ಯಜ್ಞಾತ್ಮಕ, ಕಥಾತ್ಮಕ, ಪ್ರಾರ್ಥನಾತ್ಮಕವಿರುವವು. ಉಪನಿಷತ್ತುಗಳು ಜ್ಞಾನಾತ್ಮಕವಿರುವವು. ಬ್ರಹ್ಮಜ್ಞಾನವೆ ಇವುಗಳ ಮುಖ್ಯ ವಿಷಯವು. ಉಪನಿಷತ್ತುಗಳ ಅಭ್ಯಾಸವನ್ನು ಭಾಷೆ, ಆ ಕಾಲದ ಸಮಾಜಸ್ಥಿತಿ, ಕಾವ್ಯ, ಮುಂತಾದ ಅನೇಕ ರೀತಿಯಿಂದ ಮಾಡಲಿಕ್ಕೆ ಬಂದರೂ ಅವೆಲ್ಲ ಗೌಣ-ವಿಷಯಗಳೆ. ಯಾಕೆಂದರೆ ಎಲ್ಲಕ್ಕೂ ಹೆಚ್ಚಿನ ವಿದ್ಯೆಯಾದ ಬ್ರಹ್ಮವಿದ್ಯೆಯನ್ನು ಕಲಿಸುವದೆ ಉಪನಿಷತ್ತುಗಳ ಮುಖ್ಯ ಉದ್ದೇಶವು. ನಾವಾದರೂ ಈಗ ಉಪನಿಷತ್ತುಗಳ ಕಡೆಗೆ ಮುಖ್ಯತಃ ಅದೇ ದೃಷ್ಟಿಯಿಂದ ನೋಡುವೆವು.

ಭಾರತೇತಿಹಾಸದಲ್ಲಿ ಉಪನಿಷತ್ಕಾಲವು ಎಲ್ಲಕ್ಕೂ ಅತ್ಯಂತ ಪ್ರೌಢವೂ ದಿವ್ಯವೂ ತೇಜೋಮಯವೂ ಇರುವದೆಂಬಲ್ಲಿ ಯಾವ ಸಂಶಯವೂ ಇಲ್ಲ. ಆ ಕಾಲದಲ್ಲಿ ಯಾವ ತಡೆಯೂ ಇಲ್ಲವೆ ಅನ್ಯ ಯಾವದೆ ಕ್ಷುದ್ರ ವಿಷಯಗಳ ಎಚ್ಚರವಿಲ್ಲದೆ ಸಮಾಜದಲ್ಲಿಯ ಎಲ್ಲ ಚಿಕ್ಕದೊಡ್ಡವರು, ಸ್ತ್ರೀ-ಪುರುಷರು, ಬ್ರಾಹ್ಮಣ-ಕ್ಷತ್ರಿಯ ಮುಂತಾದ ಎಲ್ಲ ಬಗೆಯವರು ಆತ್ಮಜ್ಞಾನದ, ಬ್ರಹ್ಮಜ್ಞಾನದ ಹಂಬಲವನ್ನು ಹಿಡಿದು ಬಗೆಬಗೆಯಿಂದ ಆ ಸತ್ಯವನ್ನು ತಿಳಿದುಕೊಂಡು ಧನ್ಯರಾಗಲಿಕ್ಕೆ ಹವಣಿಸುತ್ತಿದ್ದರೆಂದು ತೋರುತ್ತದೆ. ನಚಿಕೇತನಂಥ ಆರೇ ವರ್ಷದ ಮಗುವು ಜ್ಞಾನಪಿಪಾಸೆಯ ಮೂಲಕ ಯಮದೇವರ ಕಡೆಗೆ ಸಹ ಹೋಗಲಿಕ್ಕೆ ಸಿದ್ಧನಾದನು. ತಂದೆಯ ಗೋತ್ರವು ಗೊತ್ತಿಲ್ಲದ ಸತ್ಯಕಾಮನು ಬ್ರಹ್ಮಜ್ಞಾನಾರ್ಥವಾಗಿ ಋಷಿಮುನಿಗಳ ಕಡೆಗೆ ಹೋಗಿ ನಾಚಿಕೆ ಬಿಟ್ಟು ಪರಿಚಾರಿಕೆಯಾದ ತನ್ನ ತಾಯಿಯ ಹೆಸರು ಹೇಳಿ ಜ್ಞಾನವನ್ನು ಪಡೆದನು. ಬಂಡಿಯ ಕೆಳಗೆ ಮೈಕೆರೆಯುತ್ತ ಕುಳಿತುಕೊಂಡ ರೈಕ್ವನ ಕಡೆಗೆ ಓರ್ವ ದೊಡ್ಡ ಅರಸನು ನಿರಭಿಮಾನದಿಂದ ಹೋಗಿ ಜ್ಞಾನವನ್ನು ಸಂಪಾದಿಸಿದನು. ಅನೇಕ ಬ್ರಾಹ್ಮಣಶ್ರೇಷ್ಠರು ಕ್ಷತ್ರಿಯ ಅರಸರ ಪಾದಕ್ಕೆರಗಿ ಶ್ರೇಷ್ಠವಾದ ಮಹಾಜ್ಞಾನವನ್ನು ದೊರಕಿಸಿದರು. ಎಲ್ಲ ವೃಥಾಭಿಮಾನವನ್ನು ಬದಿಗಿರಿಸಿ, ಗಾರ್ಗಿಯು ಬ್ರಾಹ್ಮಣಸಭೆಯಲ್ಲಿ ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬ ಹವಣಿಕೆಯಿಂದ ವಾದವಿವಾದಕ್ಕೆ ನಿಂತಳು. ಮೈತ್ರೇಯಿಯು ಹಟ ಹಿಡಿದು ತನ್ನ ಗಂಡನಿಂದ ತತ್ವಜ್ಞಾನವನ್ನರಿತುಕೊಂಡಳು. ಇಂತಹ ತತ್ವಜಿಜ್ಞಾಸೆ, ತಪಃಸ್ವಾಧ್ಯಾಯಗಳು ವಿಶೇಷವಾಗಿದ್ದ ಕಾಲವದು.

ಒಂದು ಸಮಯದಲ್ಲಿ ಇಡೀ ಭರತಖಂಡದ ಜನಾಂಗವು ಏಕಾಗ್ರವಾಗಿ ಆತ್ಯಂತಿಕ ಸತ್ಯವನ್ನು ಹುಡುಕುವಲ್ಲಿ ಮೈಮರೆತಿತ್ತೆಂದು ಹೇಳಬಹುದು.

ಉಪನಿಷತ್ತುಗಳು ಆ ಕಾಲದಲ್ಲಿ ಪ್ರಕಟವಾದ ಗ್ರಂಥಗಳು. ಶ್ರೇಷ್ಠವಾ
ಯೋಗಸ್ಥಿತಿಯಲ್ಲಿರುವಾಗ ಶುದ್ಧ ಚೈತನ್ಯದ ಪ್ರಕಾಶದಿಂದ ಹೊಳೆದ ಸ
ಗಳನ್ನು ಋಷಿಗಳು ಅತ್ಯಂತ ಸರಲ, ಸುಲಭ, ಶುದ್ಧ, ಭಾಷೆಯಲ್ಲಿ ಬರೆದ
ಗ್ರಂಥಗಳೆ ಉಪನಿಷತ್ತುಗಳೆನಿಸುವವು. ಉಪನಿಷತ್ತುಗಳಲ್ಲಿ ಎಲ್ಲಿ ನೋಡಿದ
ಬ್ರಹ್ಮಜಿಜ್ಞಾಸೆ, ಬ್ರಹ್ಮಚಿಕಿತ್ಸೆ, ಬ್ರಹ್ಮಮೀಮಾಂಸೆಯೆ ಕಂಡುಬರುವ
ಒಮ್ಮೆ ಸಂವಾದಾತ್ಮಕ, ಒಮ್ಮೆ ಸಿದ್ಧಾಂತಾತ್ಮಕ, ಒಮ್ಮೆ ವಿರೋಧಾಭಾ
ತ್ಮಕ, ಒಮ್ಮೆ ಕಥಾತ್ಮಕ ಹೀಗೆ ಅನೇಕ ರೀತಿಯಿಂದ ಆತ್ಮಜ್ಞಾನವ
ಬೋಧಿಸುವ ಈ ಉಪನಿಷತ್ತುಗಳಲ್ಲಿ ಕಾವ್ಯವೂ ತುಂಬಿ ತುಳುಕುತ್ತಿರುವ
ಆದುದರಿಂದ ಅದರಲ್ಲಿಯ ಹಲಕೆಲವು ವಾಕ್ಯಗಳು ಒಮ್ಮೆ ಕಿವಿಗೆ ಬಿದ್ದವೆಂ
ಹೃದಯದಲ್ಲಿ ಅಚ್ಚೊತ್ತಿದಂತೆ ಆಗಿ ನೆಲೆಗೊಳ್ಳುವವು; ತತ್ವಜ್ಞಾನ, ಆತ್ಮ
ಅನುಭವ, ಸ್ಫೂರ್ತಿಯುಕ್ತ ಕಾವ್ಯ ಇವೆಲ್ಲವುಗಳ ಹೃದಯಂಗಮವಾ
ಸಮ್ಮೇಲನವು ಎಲ್ಲಿಯಾದರೂ ಇದ್ದರೆ ಅದು ಈ ಉಪನಿಷತ್ತುಗಳಲ್ಲಿ. ಸ್ವಾ
ಭವದ ತಳಹದಿಯ ಮೇಲೆ ನಿಂತು ಆತ್ಮವಿಶ್ವಾಸದಿಂದ ಇದೇ ಸತ್ಯವೆಂ
ಹೇಳುವ ಋಷಿಗಳು ಈ ಉಪನಿಷತ್ತುಗಳನ್ನು ರಚಿಸಿರುವರು. ಅನಂತಶ
ಪರಮಾತ್ಮನ ದಿವ್ಯದರ್ಶನದಿಂದ ಹಿಗ್ಗಿ ಹಿಗ್ಗಿ ಋಷಿಗಳು ಆತ್ಮಾನಂದ
ಲೋಲಾಡುವಾಗ ಶಬ್ದಸೃಷ್ಟಿಯ ಸಮ್ರಾಟರಂತೆ ಲೀಲೆಯಿಂದ ನುಡಿದ ದಿ
ವಾಣಿಯೆ ಉಪನಿಷತ್ತುಗಳಾಗಿ ರೂಪಿಸಿದವು. ಆದುದರಿಂದ ಅವುಗ
ಸತ್ಯದ ಸ್ವಯಂಪ್ರಕಾಶವೂ ಸಾಕ್ಷಾತ್ಕಾರದ ಸ್ಪಷ್ಟ ಚಿತ್ರವೂ ಅಂತಃಸ್ಫೂ
ದಿಂದ ಉಕ್ಕುವ ಆನಂದವೂ ಕವಿಪ್ರತಿಭೆಯೂ ಏಕಕಾಲಕ್ಕೆ ಕಂಗೊಳಿಸುವ

ಉಪನಿಷತ್ತುಗಳು ಆರ್ಯಸಂಸ್ಕೃತಿಯ, ಆರ್ಯತತ್ವಜ್ಞಾನದ ಆದಿ
ಗ್ರಂಥಗಳು. ಮುಂದೆ ಹಿಂದುಸ್ಥಾನದಲ್ಲಿ ಅಥವಾ ಈ ಜಗತ್ತಿನಲ್ಲಿ ಹುಟ್ಟಿ
ಎಲ್ಲ ತತ್ವಜ್ಞಾನಗಳ ಬೀಜಗಳು ಅವುಗಳಲ್ಲಿ ಸಂಕ್ಷೇಪದಿಂದ ಕಂಡುಬರುವ
ಎಲ್ಲ ಧರ್ಮಗಳ ಬೀಜಗಳು ಈ ಗ್ರಂಥಗಳಲ್ಲಿ ಸೂಕ್ಷ್ಮವಾಗಿ ಬಂದಿಲ್ಲ
ದೆಡೆಗೆ ಕಂಡೇ ಕಾಣುವವು. ಆದುದರಿಂದ ನಮ್ಮ ತತ್ವಜ್ಞಾನವು ತಿಳಿ
ಲಿಕ್ಕಂತೂ ಸರಿಯೆ, ಜಗತ್ತಿನಲ್ಲಿಯ ಅನ್ಯ ತತ್ವಜ್ಞಾನಗಳು ತಿಳಿಯಬೇಕಾ
ಸಹ ಈ ಗ್ರಂಥಗಳ ಅಭ್ಯಾಸವು ಅತ್ಯವಶ್ಯವದೆ. ಇವುಗಳನ್ನು ಒಮ್ಮೆ ಓದಿ
ಜಗತ್ತಿನಲ್ಲಿಯ ಎಲ್ಲ ತತ್ವಜ್ಞಾನಗಳೂ ಈ ಗ್ರಂಥಗಳಿಂದಲೆ ಹೊರಟಿರಬೇಕೆ
ಅನುಮಾನವು ಹೊರಡುವಂತಿದೆ. ಆದರೆ ಮಿಕ್ಕ ದೇಶಗಳಲ್ಲಿಯ ತತ್ವಜ್ಞಾನಕ
ಈ ಗ್ರಂಥಗಳಲ್ಲಿಯ ತತ್ವಜ್ಞಾನಕ್ಕೂ ಒಂದು ಮಹತ್ವದ ಭೇದವಿದೆ. ಅದ

ದೆಂದರೆ ಆತ್ಮಾನುಭವದ ಹೊರ್ತು ಋಷಿಗಳು ಒಂದು ಅಕ್ಷರವನ್ನು ಸಹ ಮಾತಾಡುವದಿಲ್ಲ ಹಾಗೂ ಆ ಅನುಭಾವದ ದಾರಿಯನ್ನಾದರೂ ಸ್ಪಷ್ಟವಾಗಿ ಈ ಗ್ರಂಥಗಳಲ್ಲಿ ಅವರು ವಿವರಿಸಿ ಹೇಳಿದ್ದಾರೆ. ಗುರುಗಳ ಅಡಿಯಲ್ಲಿ ಕುಳಿತು ಯಾವ ಜ್ಞಾನವನ್ನು ಕೇಳುವದರಿಂದ ಎಲ್ಲ ಮಾನಸಿಕ ಸಂತಾಪವು ಮಾಯವಾಗುವದೊ ಆ ಜ್ಞಾನವೆ 'ಉಪನಿಷತ್ತು' ಎಂದು ಈ ಶಬ್ದದ ವ್ಯುತ್ಪತ್ತ್ಯರ್ಥ ವಿರುವದು. 'ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಂ' ಬ್ರಹ್ಮವಿದ್ಯೆ ಮತ್ತು ಅದನ್ನು ಕಲಿಯುವ ಸಾಧನವಾದ ಯೋಗವಿಧಿ ಇವೆರಡೂ ಅಲ್ಲಿ ಹೇಳಲ್ಪಟ್ಟಿವೆ; ಎಂದು ಕಠೋಪನಿಷತ್ತಿನಲ್ಲಿ ಸ್ಪಷ್ಟವಾದ ಉಲ್ಲೇಖವಿರುವದು.

ಆತ್ಯಂತಿಕ ಸತ್ಯವು ಯಾವದು, ನಾನು ಅಂದರೆ ಯಾರು, ಈ ಜಗತ್ತೆಂದರೇನು, ಇದರ ಕರ್ತನಾರು, ಜೀವ, ಜಗತ್, ಈಶ್ವರ ಇವರ ಸಂಬಂಧವೇನು, ಮನುಷ್ಯನ ಆತ್ಯಂತಿಕ ಧ್ಯೇಯವೇನು, ಆತ್ಮನು ಯಾರು, ಅವನನ್ನು ಹೇಗೆ ಅರಿಯಬೇಕು, ಮೋಕ್ಷವೆಂದರೇನು, ಅದನ್ನು ದೊರಕಿಸುವದು ಹೇಗೆ, ಇವೇ ಮುಂತಾದವು ಉಪನಿಷತ್ತುಗಳ ವಿಷಯಗಳು. ಇದೇ ಬ್ರಹ್ಮವಿದ್ಯೆ. ಇದೇ ಅಧ್ಯಾತ್ಮಶಾಸ್ತ್ರವು. ಆತ್ಯಂತಿಕ ಸತ್ಯಕ್ಕೆಯೆ 'ಬ್ರಹ್ಮ'ವೆಂಬ ಹೆಸರು. 'ಅಧೀಹಿ ಭಗವೋ ಬ್ರಹ್ಮೇತಿ' ಎಂದು ಶಿಷ್ಯನು ಗುರುಗಳನ್ನು ಕೇಳಿಕೊಳ್ಳುವನು. ಅದನ್ನು ಗುರುವು ನಾನಾ ಬಗೆಯಿಂದ ನಾನಾ ಉದಾಹರಣೆಗಳನ್ನು ಕೊಟ್ಟು ಶಿಷ್ಯನಿಗೆ ತಿಳಿಸಿ ಹೇಳುವನು. ಈ ಬಗೆಯ ವಿದ್ಯೆಯೆ ಉಪನಿಷತ್ತುಗಳಲ್ಲಿರುವದು.

ಇನ್ನು ಉಪನಿಷತ್ತುಗಳು ಎಷ್ಟಿರುವವು ಹಾಗೂ ಅವುಗಳಲ್ಲಿ ಹೆಚ್ಚು ಮಹತ್ವವುಳ್ಳವುಗಳು ಯಾವವು ಇದನ್ನು ನೋಡುವದು ಅವಶ್ಯ. ಸದ್ಯಕ್ಕೆ ಉಪಲಬ್ಧವಿದ್ದ ಉಪನಿಷತ್ತುಗಳ ಸಂಖ್ಯೆಯ ಬಗ್ಗೆ ಭಿನ್ನ ಮತಗಳಿರುವವು. ಕೆಲವರು ೧೫೦ ಎಂದು, ಕೆಲವರು ೧೦೮ ಎಂದು ಹೇಳುವರು. ಆದರೆ ಈ ವಿಷಯವನ್ನು ನಿಶ್ಚಯಿಸುತ್ತ ಕೂಡುವದು ನಮ್ಮ ಕೆಲಸವಲ್ಲ. ಅವುಗಳಲ್ಲಿ ಬಹುಶಃ ೧೦೦ಕ್ಕೆ ೯೦ರಷ್ಟು ತೀರ ಇತ್ತೀಚಿನವು. ಮುಖ್ಯ ಉಪನಿಷತ್ತುಗಳು ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಇವೇ ಹತ್ತು. ಇನ್ನು ಕೆಲವರು ಶ್ವೇತಾಶ್ವತರ ಮತ್ತು ಕೌಷೀತಕೀ ಎಂಬವುಗಳನ್ನು ಈ ಹತ್ತರ ಕೂಡ ಸೇರಿಸುತ್ತಾರೆ. ಇನ್ನೂ ಕೆಲವರು ಈ ಹನ್ನೆರಡರ ಕೂಡ ಮೈತ್ರ್ಯುಪನಿಷತ್ತೆಂಬದನ್ನೂ ಕೂಡಿಸಿ ೧೩ ಉಪನಿಷತ್ತುಗಳು ಮುಖ್ಯವಾದವುಗಳೆಂದು ಹೇಳುತ್ತಾರೆ. ಇವೇ.

ಎಲ್ಲಕ್ಕೂ ಪುರಾತನವೆಂದೂ ಎಲ್ಲಕ್ಕೂ ಶ್ರೇಷ್ಠವಾದವುಗಳೆಂದೂ ಬಹುಜನ ಪಂಡಿತರ ಮತವು.

## ಉಪನಿಷತ್ತುಗಳಲ್ಲಿಯ ವಿಷಯ

ಈ ಉಪನಿಷತ್ತುಗಳಲ್ಲಿ ಯಾವ ತರದ ತತ್ವಜ್ಞಾನವಿರುವದು, ದ್ವೈತವೊ, ಅದ್ವೈತವೊ, ವಿಶಿಷ್ಟಾದ್ವೈತವೊ, ದ್ವೈತಾದ್ವೈತವೊ, ಶಕ್ತಿ ವಿಶಿಷ್ಟಾದ್ವೈತವೊ ಅಥವಾ ಇನ್ನಾವದಾದರೊಂದೊ, ಈ ಉಪನಿಷತ್ತುಗಳ ಮುಖ್ಯ ಸಾರವೇನು, ಅಧ್ಯಾತ್ಮ ಶಾಸ್ತ್ರದ ಯಾವ ಪ್ರಮೇಯಗಳು ಇವುಗಳಲ್ಲಿ ಸಿದ್ಧಾಂತರೂಪವಾಗಿ ಹೇಳಲ್ಪಟ್ಟಿವೆ, ಅವು ಪ್ರವೃತ್ತಿಪರವಿರುವವೊ ನಿವೃತ್ತಿಪರವಿರುವವೊ ಮುಂತಾದ ವಿಷಯಗಳು ನಮ್ಮ ದೃಷ್ಟಿಯಿಂದ ವಿಚಾರಣೀಯವಾಗಿರುವವು. ಸ್ವಾತ್ಮಾನುಭವ ಮೂಲಕ ಸಾಕ್ಷಾತ್ಕಾರಪೂರ್ವಕ, ತತ್ವಪ್ರತಿಪಾದನವೆ ಉಪನಿಷತ್ತುಗಳ ಮುಖ್ಯ ಕಾರ್ಯವು.

ದಶೋಪನಿಷತ್ತುಗಳಲ್ಲಿ ಯಾವ ಬಗೆಯ ತತ್ವವಿಚಾರಗಳು ಬಂದಿರುವವು ಎಂಬದನ್ನು ಸಂಕ್ಷೇಪವಾಗಿ ಇಲ್ಲಿ ಹೇಳುವದೆ ನಮ್ಮ ಉದ್ದೇಶವದೆ. ನಿಜವಾಗಿ ನೋಡಿದರೆ ಮೇಲೆ ಹೇಳಿದ ಎಲ್ಲ ತತ್ವಜ್ಞಾನಗಳಿಗೂ ಉಪನಿಷತ್ ಗ್ರಂಥಗಳಲ್ಲಿ ಆಧಾರಗಳು ದೊರೆಯುತ್ತವೆ. ಮಹಾಭಾರತದಲ್ಲಿಲ್ಲದ್ದು ಜಗತ್ತಿನಲ್ಲಿಲ್ಲವೆಂದು ಹೇಗೆ ಅನ್ನುವರೊ ಹಾಗೆ ತತ್ವಜ್ಞಾನ ವಿಷಯದಲ್ಲಿ ಉಪನಿಷತ್ತುಗಳಲ್ಲಿಲ್ಲದ್ದು ಮತ್ತೆಲ್ಲಿಯೂ ಇಲ್ಲವೆಂದು ಹೇಳಬಹುದು. ಉಪನಿಷತ್ತುಗಳಲ್ಲಿಯ ವಿಶಿಷ್ಟ ಉಕ್ತಿಗಳನ್ನವಲಂಬಿಸಿ ಅವುಗಳಿಗೆಯೆ ಮಹತ್ವಕೊಟ್ಟು ಮೇಲ್ಕಾಣಿಸಿದ ತತ್ವಜ್ಞಾನಗಳಲ್ಲಿಯ ಯಾವದಾದರೊಂದನ್ನು ಪ್ರತಿಪಾದಿಸಿ ಉಪನಿಷತ್ತಿನಲ್ಲಿ ಮುಖ್ಯವಾಗಿ ಅದೇ ಹೇಳಲ್ಪಟ್ಟಿದೆ ಎಂದು ವಿಧಾನ ಮಾಡಬಹುದು. ಯಾಕಂದರೆ ತಮತಮಗೆ ಪ್ರತೀತವಾದಂತೆ ಋಷಿಗಳು ಸತ್ಯವನ್ನು ವರ್ಣಿಸಿರುವರು. ಹಾಗೆ ವರ್ಣಿಸುವಾಗ ಕೆಲವೆಡೆಗೆ ಪೂರ್ಣ ಸತ್ಯ, ಕೆಲವೆಡೆಗೆ ಅರ್ಧ ಸತ್ಯ ಹೀಗೆ ವರ್ಣನೆಗಳು ಬಂದಿರುವವು. ಆದುದರಿಂದ ಉಪನಿಷತ್ತುಗಳಲ್ಲಿ ಏನು ಹೇಳಿದೆ ಎಂಬ ಬಗ್ಗೆ ಮತಭೇದವಿರುವದು ಅನಿವಾರ್ಯವು. ಶ್ರೀಮತ್ ಬಾದರಾಯಣರು ಬ್ರಹ್ಮಸೂತ್ರಗಳಲ್ಲಿ ಉಪನಿಷತ್ತುಗಳ ಸಮನ್ವಯವನ್ನು ಮಾಡಲೆತ್ನಿಸಿದರು. ಆದರೆ ಮುಂದೆ ಆದ ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ಶ್ರೀಮದಾನಂದತೀರ್ಥ, ಶ್ರೀ ವಲ್ಲಭಾಚಾರ್ಯ, ಶ್ರೀ ದಯಾನಂದ ಸರಸ್ವತೀ ಮುಂತಾದವರು ಉಪನಿಷತ್ತುಗಳಲ್ಲಿಯೂ

ಬ್ರಹ್ಮಸೂತ್ರಗಳಲ್ಲಿಯೂ ಗೀತೆಯಲ್ಲಿಯೂ ಇದೇ ತತ್ತ್ವವು ಪ್ರತಿಪಾದಿಸಲ್ಪಟ್ಟಿದೆ ಎಂದು ಒಂದೊಂದು ಬೇರೆ ಬೇರೆ ಸಾಂಪ್ರದಾಯವನ್ನು ಸ್ಥಾಪಿಸಿದರು. ಇವುಗಳಲ್ಲಿ ಯಾವದು ಸತ್ಯವು, ಯಾವದು ಹೆಚ್ಚು ಶ್ರೇಯಸ್ಕರವು,ಉಪನಿಷತ್ತುಗಳಲ್ಲಿ ಯಾವದು ಹೇಳಲ್ಪಟ್ಟಿರುವದು ಇದನ್ನು ನಿಶ್ಚಯಿಸುವ ಅಧಿಕಾರವು ನಮ್ಮಂಥವರದಲ್ಲ, ಆ ಚರ್ಚೆಯನ್ನು ಇಲ್ಲಿ ಮಾಡಲು ಅನುವೂ ಇಲ್ಲ. ಆದರೆ ಉಪನಿಷತ್ತುಗಳ ಅಭ್ಯಾಸದಿಂದ ನನ್ನ ಮನಸ್ಸಿಗೆ ಪ್ರತೀತವಾದ ಕೆಲವು ತತ್ತ್ವಗಳನ್ನು ಇಲ್ಲಿ ವಿವರಿಸಿ ಅವು ಸಾಂಪ್ರದಾಯಿಕ ತತ್ತ್ವಜ್ಞಾನಗಳಲ್ಲಿ ಯಾವುದನ್ನು ಹೋಲುವವೆಂಬದನ್ನು ನಿಶ್ಚಯಿಸುವ ಭಾರವನ್ನು ವಾಚಕರ ಮೇಲೆಯೆ ಹಾಕುತ್ತೇನೆ.

ತತ್ತ್ವಜ್ಞಾನವೆಂದರೆ ಆತ್ಯಂತಿಕ ಸತ್ಯದ ಜ್ಞಾನವು. ಈ ಚರಾಚರ ವಿಶ್ವದ ಮೂಲವೇನು ಇದು ತತ್ತ್ವಜ್ಞಾನದಲ್ಲಿಯ ಮುಖ್ಯ ಪ್ರಶ್ನೆಯು. ಆ ಮೇಲೆ ಆ ಮೂಲದ್ದೂ ಈ ವಿಶ್ವದ್ದೂ ಏನು ಸಂಬಂಧವು, 'ಅಹಂ' ಗುಣವಿಶಿಷ್ಟ ಜೀವನದೂ ಈ ವಿಶ್ವದ್ದೂ ಆ ಮೂಲವಸ್ತುವಿನದೂ ಏನು ಸಂಬಂಧವು, ಅಥವಾ ಜೀವ ಜಗತ್ ಹಾಗೂ ಈಶ್ವರ ಇವರ ಪರಸ್ಪರ ಸಂಬಂಧಗಳೇನು, ಈ ಪ್ರಶ್ನೆಗಳಿಗೆ ಸಮಾಧಾನಕಾರಕವಾದ ಉತ್ತರಗಳನ್ನು ಕೊಡುವದು ತತ್ತ್ವ-ಜ್ಞಾನದ ಕರ್ತವ್ಯವು. ಆ ಮೂಲ ವಸ್ತುವಿನ ಶೋಧಮಾಡಿ ಅದರ ಸ್ವರೂಪವನ್ನು ನಿಶ್ಚಯಿಸಿ ಅದನ್ನು ಬುದ್ಧಿಯಿಂದ ತಿಳಿದುಕೊಳ್ಳುವದಲ್ಲದೆ ಆ ಸತ್ಯ-ಜ್ಞಾನದಲ್ಲಿ ನಿರಂತರವೂ ಹೇಗೆ ಇರಬೇಕು ಎಂಬದನ್ನು ಉಪನಿಷತ್ಕಾರರು ಅನುಭವಪೂರ್ವಕವಾಗಿ ಹೇಳಿದ್ದಾರೆ. ಆದುದರಿಂದ ಉಪನಿಷತ್ತಿನಲ್ಲಿ ಸತ್ಯ-ವಸ್ತು, ಅದರ ಸ್ವರೂಪ ಅದರಲ್ಲಿ ನೆಲೆಗೊಂಡು ಸ್ಥಿರವಾಗುವ ಸಾಧನಮಾರ್ಗ ಇಷ್ಟು ವಿಷಯಗಳು ಬಂದಿವೆ.

## ಕೆಲವು ಸಿದ್ಧಾಂತಗಳು

ಮೂಲ ವಸ್ತುವು ಒಂದೇ ಒಂದು. ಅದು ಏಕಮೇವಾದ್ವಿತೀಯವು. ಅದಕ್ಕೆ ಉಪನಿಷತ್ತುಗಳಲ್ಲಿ ಸತ್, ಅಸತ್, ಆತ್ಮಾ, ಬ್ರಹ್ಮ, ಪರವಸ್ತು, ಪುರುಷ ಎಂಬ ಅನೇಕ ಹೆಸರುಗಳು ಇರುವವು. ಆದರೂ ಬ್ರಹ್ಮ ಅಥವಾ ಆತ್ಮಾ ಎಂಬ ಹೆಸರು ಬಳಸಿದುದೆ ಹೆಚ್ಚು. ಆತ್ಮನ, ಪರಮಾತ್ಮನ ಸಾಮಾನ್ಯ ಸ್ವರೂಪವು ಅನೇಕ ರೀತಿಯಿಂದ ವರ್ಣಿಸಲ್ಪಟ್ಟಿದೆ. ಅವನು ಇಂದ್ರಿಯ ಮನಬುದ್ಧಿಗಳಾಚೆಗಿರುವನು, ಸರ್ವವ್ಯಾಪಿಯು, ಸತ್ಯನು, ನಿತ್ಯನು, ಅನಂತನು,

ಅವನು ಕಿರಿಯದರಲ್ಲಿ ಕಿರಿಯು, ಹಿರಿಯದರಲ್ಲಿ ಹಿರಿಯು, ಅವನು ಅವ್ಯಕ್ತದ ಆಚೆಗಿರುವ ಪುರುಷನು, ಸರ್ವಭೂತಗಳ ಅಂತರ್ಯಾಮದಲ್ಲಿರುವವನು, ಅವನು ಜ್ಞಾನಮಯನು, ಅಚಿಂತ್ಯನು, ಆನಂದರೂಪನು, ಸರ್ವಕರ್ತೃವಿದ್ದು ಪಾಪ ಪುಣ್ಯಾತೀತನು, ತ್ರಿಗುಣಾತೀತನು ಮುಂತಾದ ವರ್ಣನೆಗಳು ಅಲ್ಲಲ್ಲಿ ಬಂದಿವೆ. ಹೀಗೆ ವರ್ಣನೆಗಳು ಕೊಡಲ್ಪಟ್ಟಿದ್ದರೂ ಪರಮಾತ್ಮ ವಸ್ತುವು ಅವರ್ಣನೀಯ ವೆಂದೆ ಹೇಳಬೇಕಾಗಿದೆ. ಯಾಕಂದರೆ ಪರಮಾತ್ಮಸ್ವರೂಪವು ಕೇವಲ ಸಾಕ್ಷಾತ್ಕಾರದಿಂದ ಗೊತ್ತಾಗುವದೆ ಹೊರ್ತು ಶಬ್ದಸೃಷ್ಟಿಯಿಂದ ತಿಳಿಯ-ತಕ್ಕ ವಸ್ತುವಲ್ಲ. ಆದರೆ ಹೀಗೆ ಮೂಲ ಒಂದಿದ್ದುದು ಹಲವಾಗಿ ಹೇಗೆ ಪರಿಣಮಿಸಿತು, ಎಂಬದು ಅಧ್ಯಾತ್ಮಶಾಸ್ತ್ರದಲ್ಲಿ ಎಲ್ಲಕ್ಕೂ ತೊಡಕಿನ ಪ್ರಶ್ನೆಯು. ಆತನು ಅಂದರೆ ಆತ್ಮನು ವಿಶ್ವದ ಉತ್ಪತ್ತಿಯನ್ನು ಮಾಡುವಾಗ 'ತಪನನ್ನಾಚರಿಸಿದನು' 'ಇಚ್ಛಿಸಿದನು' 'ವಿಚಾರ ಮಾಡಿದನು' 'ತಾನು ಅನೇಕವಾಗಿ ಪರಿಣಮಿಸಬೇಕೆಂದು ಸಂಕಲ್ಪ ಮಾಡಿದನು' ಎಂದು ಉಪ-ನಿಷತ್ತುಗಳಲ್ಲಿ ವರ್ಣನೆಗಳು ಬಂದಿರುವವು. ಪರಮಾತ್ಮನು ತನ್ನ ಸಂಕಲ್ಪ-ಶಕ್ತಿಯಿಂದ ತನ್ನಲ್ಲಿ ತಾನೇ ಅನೇಕತ್ವವನ್ನು ಉತ್ಪನ್ನ ಮಾಡಿದನೆಂದು ಇದರ ಅರ್ಥವು. ಈ ಸೃಷ್ಟಿಯ ಉತ್ಪತ್ತಿಕ್ರಮವು ಬೇರೆ ಬೇರೆ ಉಪನಿಷತ್ತುಗಳಲ್ಲಿ ಸ್ವಲ್ಪ ಭಿನ್ನಭಿನ್ನವಾಗಿ ಕೊಡಲ್ಪಟ್ಟಿದೆ. ಆದರೆ ಪರಮಾತ್ಮನಿಂದಲೆ ಅಖಿಲ ವಿಶ್ವವು ನಿರ್ಮಾಣವಾಯಿತೆಂದು ಸ್ಪಷ್ಟವಾದ ಉಲ್ಲೇಖವಿರುವದು. ವಿಶ್ವವನ್ನು ಈ ಪ್ರಕಾರ ನಿರ್ಮಿಸಿ ತಾನು ಅಂಶರೂಪ ಜೀವನಾಗಿ ಪ್ರಾಣಿಶರೀರದಲ್ಲಿ ಪ್ರವೇಶ ಮಾಡಿದನು, ಎಂದು ಐತರೇಯಾದಿ ಉಪನಿಷತ್ತುಗಳಲ್ಲಿ ಉಲ್ಲೇಖ ವಿರುವದು. ಜೀವನು ತನ್ನ ನಿಜಸ್ವರೂಪವನ್ನು ಮರೆತು ದುಃಖಭಾಗಿಯಾಗು ತ್ತಾನೆ ಆದರೆ ಸರ್ವಕರ್ತೃವಾದ ಪರಮಾತ್ಮನ ಅಂಶನೇ ನಾನು ಎಂಬರಿವು ಹುಟ್ಟಿತೆಂದರೆ ಅವನು ಪುಣ್ಯಪಾಪಗಳನ್ನು ದಾಟಿ ನಿರಂಜನನಾಗಿ ಪರಮ ಸಾಮ್ಯಪದವಿಯನ್ನು ಪಡೆಯುತ್ತಾನೆಂದು ಮುಂಡಕೋಪನಿಷತ್ತಿನಲ್ಲಿ ಹೇಳ ಲ್ಪಟ್ಟಿರುವದು. ಈ ಮೇಲಿನ ವಿವೇಚನದ ಮೇಲಿಂದ ಜೀವ, ಜಗತ್, ಈಶ್ವರ ಈ ತ್ರಿಪುಟಿಯು ಪರಸ್ಪರ ಸಂಬಂಧವು ಸ್ಪಷ್ಟವಾಗುವದು. ಅದು ಹೇಗಂದರೆ, ಆತ್ಯಂತಿಕ ಸತ್ಯವಾದ ಪರಮಾತ್ಮನೇ ಸರ್ವಶಕ್ತಿವಂತನೂ ಸರ್ವಕರ್ತೃವೂ ಇರುವನು. ಅವನು ಸ್ವಸಂಕಲ್ಪದಿಂದ ತನ್ನಲ್ಲಿ ತಾನೇ ಈ ವಿಶ್ವವನ್ನು ನಿರ್ಮಿ ಸುವನು. ತಾನು ಚೈತನ್ಯಾಂಶನಾಗಿ ಭೋಕ್ತೃವೆಂದು ಜೀವರೂಪದಿಂದ ಪ್ರಾಣಿ ಶರೀರಗಳಲ್ಲಿ ಪ್ರವೇಶಿಸುವನು. ಅಲ್ಲಿ ನಿಂತು ತಾನು ಪೂರ್ಣಾಂಶ

ಶಕ್ತಿಯಿಂದ ನಿರ್ಮಿಸಿದ ವಿಷಯ-ವಿಶ್ವವನ್ನು ಅಂಶಭೂತ ಜೀವರೂಪದಿಂದ ಇಂದ್ರಿಯಗಳ ಮುಖಾಂತರವಾಗಿ ಭೋಗಿಸುವನು.

ಮೇಲ್ಕಾಣಿಸಿದ ವಿಷಯವನ್ನೆ ಇನ್ನೊಂದು ಬಗೆಯಿಂದ ಹೇಳಬಹುದು. ಏನಿದ್ದುದೆಲ್ಲ ಆದುದೆಲ್ಲ ಆಗುವುದೆಲ್ಲ ಚಿನ್ಮಯ ಆತ್ಮನು. ಅವನು 'ಸತ್' ಅಂದರೆ ಯಾವಾಗಲೂ ಇರತಕ್ಕವನು, ಮತ್ತು ಆನಂದಮಯನು. ನಿತ್ಯಾನಂದವೆ ಅವನ ಸಹಜಸ್ಥಿತಿಯು. ಅವನು ಅನಂತಗುಣನೂ ಅನಂತಶಕ್ತಿಯೂ ಇರುವನು. ಆತ್ಮನು ಅನಂತಶಕ್ತಿ ಇರುವದರಿಂದ ಸ್ವಸಂಕಲ್ಪದಿಂದ ತನ್ನ ಚಿಚ್ಛಕ್ತಿಯ ಪ್ರಸರಣದಿಂದ ಈ ವಿಶ್ವವನ್ನು ನಿರ್ಮಿಸಿದನು. ಸಂಕಲ್ಪ ಮಾಡುವದೆಂದರೆ ಚಿಚ್ಛಕ್ತಿಯ ಪ್ರಸರಣವು. ಅನಂತ ಆನಂದಮಯ ಚಿತ್ತದಲ್ಲಿ ಸಂಕಲ್ಪದ ಉದಯವಾದ ಕೂಡಲೆ ಚಿಚ್ಛಕ್ತಿಯು ಸಂಕಲ್ಪಿತ ರೂಪಗಳನ್ನು ಧರಿಸುವದು. ಅನಿರ್ಬಂಧವಿದ್ದ ಶಕ್ತಿಗೆ ನಿರ್ಬಂಧಗಳುಂಟಾಗುವವು. ಹಾಗೆ ಈ ವಿಶ್ವದ ಉತ್ಪತ್ತಿಯೆಂದರೆ ಚಿಚ್ಛಕ್ತಿಯ ಪ್ರಸರಣವು ಹಾಗೂ ಪರಿವರ್ತನವು. ಈ ದೃಷ್ಟಿಯಿಂದ ನೋಡಿದರೆ ವಿಶ್ವದಲ್ಲಿಯ ಪ್ರತಿಯೊಂದು ವಸ್ತುವು ಚಿತ್ತದ ಒಂದು ರೂಪವು. 'ಏಕೋಽಹಂ ಬಹು ಸ್ಯಾಮ' ಎಂಬ ಸಂಕಲ್ಪವಾದ ಕೂಡಲೇ ಈ ವಿವಿಧ ವಿಶ್ವವು ಪರಿಣಮಿಸಿತು. ಹೀಗೆ ಪರಿಣಮಿಸುವ ಶಕ್ತಿಯು ಆ ಅನಂತಶಕ್ತಿ ಚಿದಾನಂದಮಯ ಆತ್ಮನಲ್ಲಿರುವದು. ತಾನೇ ಈ ಸೃಷ್ಟಿಯನ್ನು ನಿರ್ಮಿಸಿ ಜೀವನಾಗಿ ಪ್ರಾಣಿಗಳಲ್ಲಿ ವಿದೃತಿ-ಬ್ರಹ್ಮರಂಧ್ರ-ದ್ವಾರದಿಂದ ಸೇರಿದ ನೆಂದು ಐತರೇಯದಲ್ಲಿ ವರ್ಣಿಸಿರುವದು. ಈ ಪ್ರಕಾರ ಚಿದಾತ್ಮನು ತಾನೇ ತನ್ನ ಸಂಕಲ್ಪದಿಂದ ತನ್ನಲ್ಲಿಯ ವಿಶ್ವವನ್ನೂ ಪಂಚಮಹಾಭೂತಗಳನ್ನೂ ಅಹಂಕಾರಾದಿಗಳನ್ನೂ ಸೃಜಿಸಿದನು. ತಾನೇ ಅಂಶಭೂತನಾಗಿ ಎಲ್ಲ ಭೂತಗಳ ಅಂತರದಲ್ಲಿ ಸೇರಿ ಸತತವೂ ಅಲ್ಲಿ ವಾಸಿಸುತ್ತಿರುವನು. ಇದೆಲ್ಲ ಪರಮಾತ್ಮನ ಲೀಲೆಯು. ಜೀವನು ಆ ಲೀಲೆಯಲ್ಲಿಯ ಒಂದು ಚಿದಂಶವು. ತನ್ನ ನಿಜ ಸ್ವರೂಪವಾದ ಆತ್ಮತತ್ವವನ್ನು ತಿಳಿದನೆಂದರೆ ಜೀವನು ದುಃಖಾತೀತನಾಗಿ ಪರಮಾತ್ಮನ ಈ ಲೀಲಾ ಸೃಷ್ಟಿಯಲ್ಲಿ ಅವನ ಪ್ರೇರಣೆಯಿಂದ 'ನಾಹಂ ಕರ್ತಾ ಹರಿಃ ಕರ್ತಾ' ಎಂಬ ಭಾವನೆಯಿಂದ ವಿಹರಿಸುವನು.

## ದುಃಖದ ಮೂಲವು

ಇನ್ನು ಪೂರ್ಣ ಸಚ್ಚಿದಾನಂದ ಸ್ವರೂಪಿಯಾದ ಪರಮಾತ್ಮನು ಈ ಅಪೂರ್ಣ ಹಾಗೂ ದುಃಖಪೂರ್ಣ ವಿಶ್ವವನ್ನು ಹೇಗೆ ಮತ್ತು ಯಾಕೆ

ನಿರ್ಮಿಸಿದನು ಎಂಬುದು ದೊಡ್ಡ ಪ್ರಶ್ನೆಯು. ತನ್ನ ಚಿತ್ತದ ಹಾಗೂ ಚಿತ್ತವ್ಯಾಪಾರಗಳ ಸೂಕ್ಷ್ಮ ನಿರೀಕ್ಷಣ ಮಾಡದೆ ಇದ್ದ ಮನುಷ್ಯನಿಗೆ ಈ ವಿಷಯವು ತಿಳಿಯುವದು ಕಠಿಣ. ವಿಚಾರಪೂರ್ವಕ ತನ್ನ ಚಿದವಸ್ಥೆಗಳನ್ನು ಪರೀಕ್ಷಿಸಿ ನೋಡಿದವನು ಹಾಗೂ ಸಮಾಧಿಸ್ಥಿತಿಯೆಂದರೇನು ಇದನ್ನರಿತವನು ಈ ವಿಷಯವನ್ನು ತೀವ್ರವೇ ತಿಳಿದುಕೊಳ್ಳುವನು; ಯಾಕಂದರೆ ಈ ಜ್ಞಾನದ ಪ್ರಯೋಗಶಾಲೆಯು ನಮ್ಮ ಚಿತ್ತದಲ್ಲಿಯೆ ಇರುವದು. ನಮ್ಮ ಚಿತ್ತದಲ್ಲಿ ನಡೆದ ಚಲನವಲನಗಳ ಮೇಲಿಂದಲೆ ನಾವು ಈ ವಿಷಯಗಳನ್ನು ನಿಶ್ಚಯಿಸಬೇಕಾಗುವದು. ಇದನ್ನು ಬಿಟ್ಟರೆ ಬೇರೊಂದು ಸಾಧನವೆ ಇಲ್ಲ. ನಮ್ಮ ಚಿದವಸ್ಥೆಗಳ ಜ್ಞಾನದ ಮೇಲಿಂದಲೆ ಚಿನ್ಮಯ ಪರಮಾತ್ಮನ ಜ್ಞಾನವು ನಮಗೆ ಆಗಬೇಕು. ಆ ದೃಷ್ಟಿಯಿಂದ ಪರಮಾತ್ಮನು ಈ ವಿಶ್ವವನ್ನು ಯಾಕೆ ನಿರ್ಮಿಸಿದನು ಎಂಬುದಕ್ಕೆ ಒಂದೇ ಉತ್ತರವು. ಅದೇನಂದರೆ, ತನ್ನ ಲೀಲೆಗಾಗಿ ತನ್ನಾಟಕ್ಕಾಗಿ ಓರ್ವ ಸ್ಫೂರ್ತಿಗೊಂಡ ಕವಿಯು ಆನಂದಪರವಶನಾಗಿ ಹೇಗೆ ಕಾವ್ಯವನ್ನು ಬರೆಯುವನೊ ಹಿಗ್ಗಿನಿಂದ ಮೈತುಂಬಿದ ಗಾಯಕನು ಹೇಗೆ ಗಾನವನ್ನಾರಂಭಿಸುವನೊ ಹಾಗೆ ಈ ವಿಶ್ವವು ಪರಮಾತ್ಮನ ಚಿದಾನಂದದ ಲಹರಿಯಂತಿರುವದು. ಇನ್ನು ಪೂರ್ಣನಿದ್ದವನು ಅಪೂರ್ಣನು ಹೇಗೆ ಆದನು, ಆನಂದಪೂರ್ಣನಿದ್ದವನು ವಿಶ್ವದಲ್ಲಿ ದುಃಖವನ್ನು ಹೇಗೆ ನಿರ್ಮಿಸಿದನು ಎಂಬ ಪ್ರಶ್ನೆಯು. ಪರಮಾತ್ಮನು ಅಪೂರ್ಣನೂ ಆಗಿಲ್ಲ, ದುಃಖಿಯೂ ಆಗಿಲ್ಲ. ಅವನು ಅನಂತನಿರುವದರಿಂದ ಎಷ್ಟೋ ವಿಶ್ವಗಳು ಅವನಿಂದ ಅವನಲ್ಲಿ ನಿರ್ಮಾಣವಾದರೂ ಅವನು ಪೂರ್ಣನೇ ಇರುವನು. ಆನಂದಸ್ವರೂಪನಿರುವದರಿಂದ ಅವನು ದುಃಖಿಯಾಗದೆ ಸುಖರೂಪನೆ ಇರುವನು. ಹಾಗಾದರೆ ಜೀವಾತ್ಮನಿಗೆ ಅಪೂರ್ಣತ್ವದ ಹಾಗೂ ದುಃಖದ ಪ್ರತೀತಿ ಏಕೆ? ಆ ಪ್ರತೀತಿಯು ಎಲ್ಲಿಂದ ಬಂದಿತು?

ಪರಮಾತ್ಮನು ಸೃಷ್ಟಿಯನ್ನು ಸೃಜಿಸಬೇಕು ಎಂಬ ಸಂಕಲ್ಪ ಮಾಡಿದ ಕೂಡಲೆ ಸಂಕಲ್ಪಿತ ವಸ್ತುಗಳು ನಿರ್ಮಾಣವಾಗುವವು. ಆ ಸಂಕಲ್ಪಿತ ವಸ್ತುಗಳಲ್ಲಿ ಜೀವನಿಗೆ ಅಪೂರ್ಣತ್ವವು ಪ್ರತೀತವಾಗುವದು ಸಹಜವು. ಇದಕ್ಕೆ ದೃಷ್ಟಾಂತ: ಗಾಯನದ ವಿಷಯವನ್ನು ಕುರಿತು ನೋಡಿದರೆ ನಾದವೆಂಬುವದೊಂದು ಪೂರ್ಣ ವಸ್ತು, ಆದರೆ ಗಾಯನವನ್ನಾರಂಭಿಸಿದ ಕೂಡಲೆ ಅದಕ್ಕೆ ತಾಳವನ್ನು ಅಂದರೆ ಸೀಮೆಯನ್ನು, ಮರ್ಯಾದೆಯನ್ನು, ಅಪೂರ್ಣತ್ವವನ್ನು ಕಲ್ಪಿಸಲೇಬೇಕಾಗುವದು, ಅದರ ಹೊರ್ತು ಗಾಯನದ ಉತ್ಪತ್ತಿಯು

ಅಶಕ್ಯವು. ಆದರೆ ಗಾಯನದಲ್ಲಿ ತತ್ವತಃ ಅಪೂರ್ಣತ್ವವಿಲ್ಲೇ ಇಲ್ಲ. ಯಾಕಂದರೆ ನಾವು ವಿಶಿಷ್ಟ ದೃಷ್ಟಿಯಿಂದ ನೋಡಿದರೆ ಅಪೂರ್ಣತ್ವವು ಪ್ರತೀತವಾಗು ವದೆ ಹೊರ್ತು, ಒಟ್ಟು ಇದು ನಾದವೆಂಬ ದೃಷ್ಟಿಯಿಂದ ನೋಡಿದರೆ ಅದರಲ್ಲಿ ಅಪೂರ್ಣತ್ವವೇನೂ ಇಲ್ಲ. ಪೂರ್ಣತ್ವದ ಪೂರಾ ಅಭಾವರೂಪವಾದ ಅಪೂರ್ಣತ್ವವೆಂಬ ವಸ್ತುವೆ ವಿಶ್ವದಲ್ಲಿಲ್ಲ. ಅಪೂರ್ಣತ್ವವೆಂದರೆ ಸಾಪೇಕ್ಷ ಪೂರ್ಣತ್ವ ಎಂಬ ಅರ್ಥವು.

ಇದೇ ರೀತಿಯಾಗಿ ಸುಖಾಭಾವರೂಪವಾದ ದುಃಖವೆಂಬ ವಸ್ತುವು ಇಲ್ಲೇ ಇಲ್ಲ. ದುಃಖವೆಂದರೆ ಅಪೂರ್ಣ ಸುಖವೆಂದು ಅರ್ಥವು. ಇದಾದರೂ ಜೀವನಿಗೆ ಏಕೆ ಅನುಭವಕ್ಕೆ ಬರುವದು? ನಮ್ಮ ಚಿತ್ತವು ಯಾವದಾದ-ರೊಂದು ವಿಷಯದಲ್ಲಿ ಏಕಾಗ್ರವಾಯಿತೆಂದರೆ ಆ ಕಾಲದ ಪೂರ್ತಿ ಅದು ಆ ವಿಷಯದಲ್ಲಿ ತನ್ಮಯವಾಗಿ ತನ್ನ ಮಿಕ್ಕ ಭಾಗವನ್ನು ಮರೆಯುವದು. ಇದಕ್ಕೆ ದೃಷ್ಟಾಂತವೇನಂದರೆ, ನಾನು ಗಣಿತ, ಇತಿಹಾಸ, ಕಾವ್ಯ ಮುಂತಾ ದವುಗಳನ್ನು ಬಲ್ಲವನಾಗಿದ್ದರೂ ಗಣಿತದಲ್ಲಿ ನಿಮಗ್ನನಾದೆನೆಂದರೆ ಮಿಕ್ಕದ್ದ ನ್ನೆಲ್ಲ ಮರೆತು ನನ್ನ ನಿಜಸ್ವರೂಪವನ್ನು ಸಹ ಮರೆಯುವೆನು. ನಾನು ಗಣಿತ-ಮಯನಾಗುವೆನು. ಹಾಗೆ ಪರಮಾತ್ಮನ ಚಿದಂಶವು ಜೀವವಾದಾಗ ಈ ಲೋಕದ ಅನುಭವಗಳಲ್ಲಿಯೆ ನಿಮಗ್ನವಾಗಿ ತನ್ನ ಆನಂದಮಯ ಸ್ವರೂಪ ವನ್ನು ಮರೆತುಬಿಡುವದು. ಆನಂದಮಯ ಆತ್ಮನ ನಾನಾ ಅನುಭವಗಳನ್ನು ಪಡೆಯುವ ಉದ್ದೇಶದಿಂದಲೂ ಆ ಅನುಭವಗಳ ಆನಂದಾಸ್ವಾದವನ್ನು ಪಡೆಯುವದರ ಸಲುವಾಗಿಯೂ ಈ ಪಂಚಭೂತಾತ್ಮಕ ಶರೀರದಲ್ಲಿ ಜನ್ಮ ತಾಳುವನು. ಹೀಗೆ ಜನ್ಮ ತಾಳಿದಾಗ ತನ್ನ ನಿಜಸ್ವರೂಪವನ್ನೂ ತಾನು ಯಾವ ಅನಂತ ಪರಮಾತ್ಮನ ಅಂಶನಿರುವನೋ ಅವನ ಅರಿವನ್ನೂ ಮರೆತು ಬಿಡುವನು. ಅದರಿಂದ ದೇಹೇಂದ್ರಿಯ ವಿಶಿಷ್ಟ, ಅಹಂಕಾರಿಯಾದ, ಜೀವ-ನಾದ ನಾನು ದುಃಖದಲ್ಲಿರುವೆನು ಎಂಬ ಪ್ರತೀತಿಯಾಗುವದು. ಆದರೆ ನಿಜ ವಾಗಿ ಅಂತರ್ಯಾಮಿಗೆ ಯಾವ ದುಃಖವೂ ಇಲ್ಲ. ಹೃದಯಗುಹೆಯಲ್ಲಿರುವ ಅವನು ತನ್ನ ಆನಂದಸ್ವರೂಪದಲ್ಲಿಯೆ ನಿಮಗ್ನನಿದ್ದು ದುಃಖಿಸುತ್ತಿರುವ ಈ ತನ್ನ ಚಿದಂಶವನ್ನು ನೋಡಿ ನಗುತ್ತಿರುವನು! ಇದಕ್ಕೆ ದೃಷ್ಟಾಂತವೇನಂದರೆ, ನಾನು ರಾಮನಾಗಿ ನಾಟಕದಲ್ಲಿ ನಟಿಸತೊಡಗಿದೆನೆಂದರೆ ಸೀತಾ ವಿರಹವಾದ ಕೂಡಲೆ ನಾನು ದುಃಖಿಸಲಾರಂಭಿಸುತ್ತೇನೆ. ಆದರೆ ಆ ಕಾಲಕ್ಕೆ ದುಃಖ-ನಿಮಗ್ನನಾಗಿ ಪರವಶನಾದರೂ ನನ್ನರಿವು ಕೆಲಹೊತ್ತಿನ ವರೆಗೆ ಅಳಿದಿದ್ದರೂ

ನಾನು ಯಾರು ಎಂಬ ಎಚ್ಚರವು ಬಂದ ಕೂಡಲೆ ರಾಮನ ಭೂಮಿಕೆಯಲ್ಲಿ ಆಗುತ್ತಿರುವ ದುಃಖವನ್ನು ಸಹ ನಾನು ಆನಂದದಿಂದ ಉಪಭೋಗಿಸುತ್ತೇನೆ. ಹಾಗೆ ಪರಮಾತ್ಮನ ಸಂಕಲ್ಪದಿಂದ ಮನುಷ್ಯಪ್ರಾಣಿಗಳಲ್ಲಿ ಯಾವನೊಬ್ಬನಾಗಿ ಹುಟ್ಟಿ, ನಾನು ಯಾರು ಎಂಬದನ್ನು ನನ್ನಲ್ಲಿಯ ಚಿದಂಶವು ಈಗ ಮರೆತಿದ್ದರೂ ನನ್ನಲ್ಲಿಯ ಅಂತರ್ಯಾಮಿಯು ಯಾವಾಗಲೂ ದುಃಖರಹಿತನೂ ಪಾಪಪುಣ್ಯಾತೀತನೂ ಇರುವನು. ನನ್ನ ಅಧ್ಯಾತ್ಮಸಾಧನದಿಂದ ಆತ್ಮಜ್ಞಾನವಾಗಿ ನಾನು ಜನನಮರಣಕ್ಕೂ ದುಃಖಾದಿಗಳಿಗೂ ಒಳಗಾದ ದೇಹವಲ್ಲ, ಮನವಲ್ಲ, ಬುದ್ಧಿಯಲ್ಲ, ಆದರೆ ಅಂತರ್ಯಾಮಿಯು ನಾನು, ಎಂಬ ಸಾಕ್ಷಾತ್ಕಾರವಾಗಿ ಆ ಅರಿವು ನಿಂತು ನೆಲೆಗೊಂಡಿತೆಂದರೆ ನನ್ನ ಈ ದುಃಖಗಳು ಸಹ ನನಗೆ ಆನಂದರೂಪವಾಗಿ ಪರಿಣಮಿಸುವವು. ಹೀಗೆ ದುಃಖ ಹಾಗೂ ಅಪೂರ್ಣತೆ ಇವುಗಳ ಸ್ಥಿತಿಯ ವಿಚಾರವಿರುವುದು.

ಇದುವರೆಗೆ ತತ್ವಜ್ಞಾನದ ಸಾಮಾನ್ಯ ಸ್ವರೂಪವನ್ನೂ ಕೆಲವು ಸಿದ್ಧಾಂತಗಳನ್ನೂ ಹೇಳಿದಂತಾಯಿತು. ಇನ್ನು ಮನುಷ್ಯನ ಆತ್ಯಂತಿಕ ಧ್ಯೇಯವೇನು ಹಾಗೂ ಅದನ್ನು ಹೇಗೆ ಸಂಪಾದಿಸಬೇಕು ಎಂಬ ವಿಷಯವು ಉಳಿಯಿತು. ಆತ್ಯಂತಿಕ ಸತ್ಯವು ಯಾವುದೆಂಬದನ್ನು ನಿಶ್ಚಯಿಸುವದೆ ವೇದಾಂತ ಶಾಸ್ತ್ರದ ಮೂಲ ಉದ್ದೇಶಗಳಲ್ಲಿ ಒಂದು. ಹೀಗೆ ಒಮ್ಮೆ ಸತ್ಯವನ್ನು ನಿಶ್ಚಯಿಸಿದ ಮೇಲೆ ಅದನ್ನು ಸಾಕ್ಷಾತ್ಕರಿಸಿ ಅದರಲ್ಲಿಯೆ ನೆಲೆಯಾಗಿ ನಿಲ್ಲುವದಕ್ಕೆಯೆ ಒಂದು ಬಗೆಯಿಂದ ಮುಕ್ತಿ ಅಥವಾ ಮೋಕ್ಷವೆಂದೆನ್ನಬಹುದು. ಈ ದೃಷ್ಟಿಯಿಂದ ನೋಡಿದರೆ ಸತ್ಯಸಾಕ್ಷಾತ್ಕಾರಪೂರ್ವಕ ನಿತ್ಯಾನಂದದಲ್ಲಿ ಸ್ಥಿರವಾಗುವದೆ ಮುಕ್ತಿಯೆನಿಸುವದು. ಅದನ್ನು ಸಾಧಿಸುವ ಮಾರ್ಗವೆ ಆತ್ಮಸಾಧನೆಯ ಮಾರ್ಗವು.

ಈ ಧ್ಯೇಯವನ್ನು ಸಾಧಿಸಲಿಕ್ಕೆ ಅನೇಕ ಮಾರ್ಗಗಳಿರುವವು. ಎಲ್ಲ ಮಾರ್ಗಗಳಿಗೂ ಸಾಮಾನ್ಯವಾದ ಕೆಲವೊಂದು ತತ್ವಗಳಿರುವವು. ಮುಂದೆ ಪುರಾಣಾದಿ ಕಾಲಗಳಲ್ಲಿ ಪರಿಣತ ಸ್ಥಿತಿಗೆ ಬಂದ ಭಕ್ತಿಮಾರ್ಗಾದಿಗಳು ಬೀಜರೂಪದಿಂದ ವೇದೋಪನಿಷತ್ತುಗಳಲ್ಲಿದ್ದುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೂ ಎಲ್ಲ ಅಧ್ಯಾತ್ಮಸಾಧನೆಗೂ ಸಾಮಾನ್ಯವಾಗಿರುವ ಕೆಲವು ತತ್ವಗಳನ್ನು ಉಪನಿಷತ್ಕಾರರು ಹೇಳಿಬಿಟ್ಟಿದ್ದಾರೆ. ಆದುದರಿಂದ ಈ ವಿಷಯದಲ್ಲಿಯೂ ಉಪನಿಷತ್ತುಗಳೆ ಆಧಾರಗ್ರಂಥಗಳೆಂದು ಹೇಳಬಹುದು.

ಅನಂತಗುಣ, ಅನಂತಶಕ್ತಿ, ಅನಂತಜ್ಞಾನ, ಅನಂತಬಲ, ಅನಂತಕ್ರಿಯ

ನಾದ ಚಿದಾನಂದಮಯ ಪರಮಾತ್ಮನೆ ಎಲ್ಲವನ್ನೂ ತನ್ನ ಆನಂದದ ಉಕ್ಕಿನಿಂದ ಲೀಲೆಗಾಗಿ ನಿರ್ಮಿಸಿದನು. ಜೀವಾಂಶನಾಗಿ ತನ್ನ ಪೂರ್ಣತ್ವಕ್ಕೂ ತನ್ನ ಪೂರ್ಣಾನಂದತ್ವಕ್ಕೂ ಕುಂದು ಇಲ್ಲದೆ ಅಂತರ್ಯಾಮಿಯಾಗಿ ಈ ಸೃಷ್ಟಿಯಲ್ಲಿ ಭೋಕ್ತೃವಾದನು. ಹೀಗೆ ಭೋಕ್ತೃವಾದ ಕೂಡಲೆ ಭೋಗ-ಪರವಶನಾದುದರಿಂದ ಆ ಮಟ್ಟಿಗೆ ಚಿತ್ತದಲ್ಲಿಯ ಜ್ಞಾನಕ್ಕೆ ಆವರಣವು ಉಂಟಾಗಿ, ಚಿದಂಶದಲ್ಲಿ ಪೂರ್ಣ ಜ್ಞಾನವು ಮುಚ್ಚಿ ಮರೆಯಾಗಿ ಅಪೂರ್ಣ ಜ್ಞಾನದ ಹುಟ್ಟು ಆಯಿತು. ಹೀಗೆ ಆಗುವದೆ ದುಃಖದ ಮೂಲವು. ಅಪೂರ್ಣ ಜ್ಞಾನಯುಕ್ತ ಅಹಂಭಾವವಿಶಿಷ್ಟ ಆತ್ಮನೆ ಜೀವನೆನಿಸುವನು. ಈ ಅಪೂರ್ಣ ಜ್ಞಾನವನ್ನು ಹೋಗಲಾಡಿಸುವದೊಂದೇ ತಡವು. ಪುನಃ ಸ್ವರೂಪಜ್ಞಾನವಾಗಿ ಅಂತರ್ಯಾಮಿಯು ತನ್ನ ಚಿದಾನಂದಾವಸ್ಥೆಯಲ್ಲಿ ನಿಮಗ್ನನಾಗುವನು. ಇಂತಿದು ಜ್ಞಾನ ಅಜ್ಞಾನ, ಮುಕ್ತಿ ಬಂಧನ, ಇವುಗಳ ಸ್ಥೂಲ ಲಕ್ಷಣವು. ಆದರೆ ನಾನು ಅಲ್ಪನು, ದುಃಖಿಯು, ಅಪೂರ್ಣನು, ರಕ್ತಮಾಂಸ ಮಜ್ಜಾನಿರ್ಮಿತ ದೇಹವುಳ್ಳವನು, ಜನ್ಮಮರಣಾಧೀನನು ಮುಂತಾದ ಅರಿವು ಅಳಿದು ನಾನು ಆತ್ಮನು, ಅಜನು, ಅಮರನು, ಭಯರಹಿತನು, ಆನಂದಮಯನು, ನಾನು ಅಚ್ಛೇದ್ಯನು, ಅದಾಹ್ಯನು, ಮುಂತಾದ ಅರಿವು ಹುಟ್ಟಿ ಈಶಶಕ್ತಿಯ ಸ್ಫುಲಿಂಗದಂತೆ ವಿರಾಜಿಸುತ್ತ ಆ ಅರಿವಿನಲ್ಲಿ ಮರೆವಿಲ್ಲದೆ ಉಳಿ-ಯುವ ಬಗೆ ಹೇಗೆ? ಹಾಗೂ ಈಗ ಜೀವಾಂಶನು ವಿಷಯರಸದಲ್ಲಿ ನಿಮಗ್ನನಾಗಿ ಕ್ಷಣಿಕ ವಿಷಯಸುಖದ ಸವಿಯನ್ನೆ ಉಂಡು ಸಂತೃಪ್ತನಾಗುತ್ತಿರುವನು. ಈ ಸ್ಥಿತಿಯು ಅಳಿದು ಈ ರಸವು ಹೋಗಿ ಆತ್ಮಾನಂದದ ರಸದಲ್ಲಿ ಜೀವಾಂಶನು ರತನಾಗುವ ಬಗೆ ಹೇಗೆ? ಹಾಗೆ ಆದ ಹೊರತು ಜೀವನು ಮುಕ್ತನಾದನೆಂದೆನಿಸಲಾರನು. ಆತ್ಮನೆ ಆತ್ಯಂತಿಕ ಸತ್ಯವಸ್ತು ಎಂಬ ಸಾಕ್ಷಾತ್ಕಾರವಾಗಿ. ಅಂದರೆ ಸಂಶಯರಹಿತ ಜ್ಞಾನಜ್ಯೋತಿಯ ಪ್ರತ್ಯಕ್ಷ ದರ್ಶನವಾಗಿ ಮನುಷ್ಯನು ಆತ್ಮರತನೂ ಆತ್ಮಕ್ರೀಡನೂ ಆದನೆಂದರೆ ಅವನು ಮುಕ್ತನೆನಿಸಿಕೊಳ್ಳಲಿಕ್ಕೆ ಅರ್ಹನು. ಅಲ್ಲಿಯವರೆಗೆ ಅವನು ಬದ್ಧನು, ಅಜ್ಞನು, ದುಃಖಕ್ಲೇಶಗಳಿಗೆ ಒಳಗಾದವನು.

ಈ ಸ್ಥಿತಿಯು ಪ್ರಾಪ್ತವಾಗಲಿಕ್ಕೆ ವೇದಾಂತಗ್ರಂಥಗಳಲ್ಲಿ ಭಕ್ತಿಯೋಗ, ಬುದ್ಧಿಯೋಗ, ಕರ್ಮಯೋಗ ಮುಂತಾದ ಮಾರ್ಗಗಳು ಹೇಳಲ್ಪಟ್ಟಿವೆ. ಆದರೆ ಆ ಎಲ್ಲ ಯೋಗಗಳ ತಿರುಳು ಏನು ಎಂಬದನ್ನಷ್ಟೆ ಇಲ್ಲಿ ನೋಡಬೇಕಾಗಿದೆ. ಮೊದಲು ನಾನು ದುಃಖಿಯು, ನಾನು ಅಪೂರ್ಣನು ಎಂದೆನಿಸು

ವುದು ಮನುಷ್ಯನಿಗೆ ಸ್ವಾಭಾವಿಕವು. ಆ ದುಃಖಾದಿಗಳ ಅನುಭೋಗದಿಂದ ತಾಪಗೊಂಡು ಜೀವನು ಇವುಗಳಿಂದ ಮುಕ್ತನಾಗಲಿಚ್ಛಿಸುವನು. ಈ ತರದ ಇಚ್ಛೆಯು ಪ್ರಬಲವಾಯಿತೆಂದರೆ ಅವನು ಮುಮುಕ್ಷುವಾಗುವನು. ಈ ಹಸಿವೆ ಮುಂದೆ ಆನಂದಾಮೃತಭೋಜನವನ್ನು ದೊರಕಿಸಿಕೊಡುವದು. ಆದರೆ ಈ ಇಂದ್ರಿಯಮನಾದಿ ಹಾಗೂ ಈ ದೃಶ್ಯ ವಿಷಯಗಳಾಚೆಗೆ ಒಂದು ಚಿರ-ಸ್ಥಿರ-ಚಿನ್ಮಯ ವಸ್ತುವಿರುವದೆಂಬ ಶ್ರದ್ಧೆಯು ಅವಶ್ಯವು. ಆ ಶ್ರದ್ಧೆಯೆ ಎಲ್ಲ ಅಧ್ಯಾತ್ಮ ಸಾಧನದ ತಳಹದಿಯು. ಉಪನಿಷತ್ಕಾರರು 'ಅಸ್ತೀತ್ಯೇವೋ-ಪಲಬ್ಧಸ್ಯ ತತ್ವಭಾವಃ ಪ್ರಸೀದತಿ' ಎಂದು, ಏನೋ ಒಂದು ಶ್ರೇಷ್ಠ ಸತ್ಯವು ಇರುವದು ಎಂಬ ಶ್ರದ್ಧೆಯಿಂದಲೆ ಮುಂದೆ ತತ್ವಜ್ಞಾನವು ವಿಕಾಸಹೊಂದುವ ದೆಂದು ಹೇಳಿದ್ದಾರೆ. ನಮ್ಮ ಅಂತರ್ಯಾಮಿಯು ತತ್ವತಃ ಆನಂದರೂಪನೂ ಅಮೃತನೂ ಇರುವದರಿಂದ ಸಂಸಾರದಲ್ಲಿ ದುಃಖಾದಿಗಳಿಂದ ಮರೆಯಾಗಿ ದ್ದರೂ ತನ್ನ ನಿಜಸ್ವರೂಪದ ಜ್ಞಾನವು ಒಮ್ಮೆಲ್ಲೊಮ್ಮೆ ಅವನಿಗೆ ಹೊಳೆದೇ ಹೊಳೆಯುವದು ಸ್ವಾಭಾವಿಕವು. ಈ ಶ್ರದ್ಧೆಯು ಉಂಟಾಗುವದೆ ಅಧ್ಯಾತ್ಮ-ಮಾರ್ಗದಲ್ಲಿಯ ಮೊದಲನೆ ಅಡಿಯು.

ನಾವು ನಮ್ಮ ಇಂದ್ರಿಯಗಳಿಗೂ ಅವುಗಳನ್ನವಲಂಬಿಸಿದ ಮನ, ಬುದ್ಧಿ, ಭಾವನಾ ಶಕ್ತಿಗಳಿಗೂ ಗೋಚರವಾಗುವ ವಿಷಯಗಳನ್ನೂ ಸಂಕಲ್ಪ ವಿಕಲ್ಪ ಗಳನ್ನೂ ಭಾವನೆಗಳನ್ನೂ ಅನುಭವಿಸುತ್ತ ಕುಳಿತೆವೆಂದರೆ ನಮಗೆ ಸತ್ತತ್ವದ ಅರಿವು ಎಂದಿಗೂ ಆಗದು. ಯಾಕೆಂದರೆ ಆ ವರೆಗೆ ನಾವು ಈ ವ್ಯಕ್ತ ಅಥವಾ ಪ್ರಾದುರ್ಭೂತ (Manifested) ಸೃಷ್ಟಿಯಲ್ಲಿಯೆ ತೊಡಗಿ ತೊಳಲಾಡಿ ಸುಖದುಃಖ, ಶೀತೋಷ್ಣ ಮುಂತಾದ ದ್ವಂದ್ವಗಳಿಗೆ ಈಡಾಗುವೆವು. ಆದರೆ ಇವುಗಳಾಚೆಗೆ ಒಂದು ಸತ್ತತ್ವವು ಇರುವದು, ಅದು ಸತ್, ಚಿತ್, ಆನಂದ-ಮಯವು, ಅನಂತವು, ಅಮೃತವು, ಎಂಬ ಶ್ರದ್ಧೆ ಹುಟ್ಟಿತೆಂದರೆ ಈ ಹೊರಗಿನ ವಿಷಯಗಳಲ್ಲಿ ರಸವು ಕಡಿಮೆಯಾಗಿ ಇವುಗಳಾಚೆಗಿರುವ ಆ ಸತ್ತತ್ವದಲ್ಲಿಯೆ ಸ್ಥಿರವಾಗಿ ನಿಲ್ಲಬೇಕೆಂಬ ಇಚ್ಛೆಯು ಪ್ರಬಲವಾಗುವದು. ಆ ಇಚ್ಛೆಯು ಪ್ರಬಲವಾಗುತ್ತ ನಡೆದಂತೆ ವಿಷಯಗಳ ಕಡೆಗೆ ಹರಿಯುತ್ತಿರುವ ನಮ್ಮ ಚಿತ್ತಪ್ರವಾಹವು ಒಳಗಿನ ಸತ್ಯವಸ್ತುವಿನ ಕಡೆಗೆ ಹೋಗಲಾರಂಭಿಸುವದು. ಹೊರಗಿನ ವಸ್ತುಗಳು ಚಿರ, ಸ್ಥಿರ, ಪೂರ್ಣ ಸತ್ಯಗಳಲ್ಲ ಎಂಬದು ತಿಳಿದು ಅವುಗಳ ಬಗ್ಗೆ ಇದ್ದ ಕಾಮನೆಯು ತೀರ ಕಡಿಮೆಯಾಗುತ್ತ ಹೋಗುವದು. ಕೊನೆಗೆ ನಮ್ಮ ಎಲ್ಲ ಇಂದ್ರಿಯಗಳಿಗೆ ಗೋಚರವಾಗುವ ವಿಶ್ವವು ಪರಮಾತ್ಮ

ನಿಂದ ಹೊರಚೆಲ್ಲಿದ ಲೀಲೆಯೆಂಬ ಅರಿವು ಹುಟ್ಟಿ ಪರಮಾನಂದದ ಅನುಭವವು ಬರುವದು. ಮನಸ್ಸಿನೊಳಗಿನ ವಿಷಯಕಾಮನೆಗಳೆಲ್ಲವೂ ನಷ್ಟವಾದವೆಂದರೆ ಮರ್ತ್ಯನು ಅಮೃತನಾಗಿ ಇಲ್ಲಿಯೆ ಇದೇ ಲೋಕದಲ್ಲಿಯೆ ಬ್ರಹ್ಮಪದವಿಯನ್ನು ಪಡೆಯುತ್ತಾನೆಂದು ಋಷಿಗಳು ಹೇಳುವರು. ಈ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳುವದೆ ಅಧ್ಯಾತ್ಮದ ಧ್ಯೇಯವು. ಸತ್ಯದಲ್ಲಿ ಶ್ರದ್ಧೆ, ಅದನ್ನು ದೊರಕಿಸುವ ಅತ್ಯುತ್ಕಟ ಇಚ್ಛೆ, ಅದನ್ನು ದೊರಕಿಸಿಯೆ ಬಿಡುವೆನೆಂಬ ನಿಷ್ಠೆ, ಅನನ್ಯ ಉಪಾಸನೆ ಇವೇ ಈ ಮಾರ್ಗದಲ್ಲಿ ಮುಖ್ಯವಾದ ಸಾಧನಗಳು.

ಇನ್ನು ಈ ಸ್ಥಿತಿಯು ಹೇಗೆ ಪ್ರಾಪ್ತವಾಗುವದು ಎಂಬ ಬಗ್ಗೆ ಉಪನಿಷತ್ಕಾರರು ಹೇಳುವಾಗ ಮೊದಲು ಇದು ಯಾವ ಉಪಾಯಗಳಿಂದ ಪ್ರಾಪ್ತವಾಗಲಿಕ್ಕಿಲ್ಲೆಂಬದನ್ನು ಹೇಳುತ್ತಾರೆ. ಇಂದ್ರಿಯಗಳ ದ್ವಾರಾ, ಮನಸ್ಸಿನಿಂದ, ಪ್ರವಚನದಿಂದ, ತರ್ಕದಿಂದ, ಬಲಹೀನನಿಂದ ಈ ಆತ್ಮ ವಸ್ತುವು ಎಂದೂ ಪ್ರಾಪ್ತವಾಗಲಿಕ್ಕಿಲ್ಲವೆಂದು ಸ್ಪಷ್ಟವಾಗಿ ಹೇಳಿ ಇಂದ್ರಿಯನಿಗ್ರಹ, ತಪಶ್ಚರ್ಯ, ಬ್ರಹ್ಮಚರ್ಯ, ಶ್ರದ್ಧೆ, ವಿದ್ಯೆ, ಇವುಗಳಿಂದಲೇ ಇದು ಸಾಧ್ಯವು ಎಂದು ನುಡಿದಿದ್ದಾರೆ. ಪರಮಾತ್ಮನಲ್ಲಿ ಶ್ರದ್ಧೆ, ಅವನನ್ನು ಕಾಣಬೇಕೆಂಬ ಉತ್ಕಟ ಇಚ್ಛೆ, ಅವನನ್ನು ಕಂಡೇ ತೀರುವೆನೆಂಬ ನಿಷ್ಠೆ, ಅನನ್ಯ ಏಕಾಂತಿಕ ಭಕ್ತಿ ಇವೇ ಅಧ್ಯಾತ್ಮಮಾರ್ಗದ ಮುಖ್ಯ ಲಕ್ಷಣಗಳೆಂದು ಹೇಳಬಹುದು.

ಇನ್ನು ಈ ಸ್ಥಿತಿಯು ಪ್ರಾಪ್ತವಾದ ಮೇಲೆ ಯಾವಾಗಲೂ ಸಮಾಧಿಸ್ಥಿತಿ ಅಂದರೆ ಲಯಸ್ಥಿತಿಯಲ್ಲಿರುವದೆ ಉಚಿತವು, ಯಾವ ಕರ್ಮಗಳನ್ನೂ ಮಾಡದೆ ಬಾಹ್ಯತಃ ಕೇವಲ ಜಡನಂತೆ ಇರುವದೆ ಯೋಗ್ಯವು ಎಂದು ಕೆಲವರು ತಿಳಿಯಬಹುದು. ಆದರೆ ಉಪನಿಷತ್ಕಾರರು ಎರಡು ಮೂರೆಡೆಗಳಲ್ಲಿ ಮಾಡಿದ ಆತ್ಯಂತಿಕ ಸ್ಥಿತಿಯ ವರ್ಣನೆಗಳ ಮೇಲಿಂದ ನೋಡಲಾಗಿ ಹಾಗೆ ಆ ಸಮಾಧಿಸ್ಥಿತಿಯಲ್ಲಿಯೆ ಇರುವದು ಅವಶ್ಯವೆಂದು ತೋರುವದಿಲ್ಲ. ಯಾಕಂದರೆ ಬ್ರಹ್ಮವಿದರಲ್ಲಿ ಅಂದರೆ ಬ್ರಹ್ಮಜ್ಞಾನಿಗಳಲ್ಲಿ ಎಲ್ಲಕ್ಕೂ ಶ್ರೇಷ್ಠರು ಯಾರು ಎಂಬದನ್ನು ವರ್ಣಿಸುವಾಗ ಆತ್ಮಕ್ರೀಡನೂ ಆತ್ಮರತನೂ ಇದ್ದು ಕ್ರಿಯಾವಂತನಾಗಿದ್ದವನು ವರಿಷ್ಠನು ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಿದೆ. ಅದೇ ಪ್ರಕಾರವಾಗಿ ತೈತ್ತಿರೀಯದಲ್ಲಿ ಆತ್ಮಾನಂದಿಯಾದ ಬ್ರಹ್ಮಜ್ಞಾನಿಯು ಆನಂದದಿಂದ ಹಾಡುತ್ತ ಕುಣಿಯುತ್ತ ತಿರುಗುವನೆಂದು ವರ್ಣನೆಯಿರುವದು. ಇದಲ್ಲದೆ ಇಂಥ ಮನುಷ್ಯನ ಸ್ಥಿತಿಯನ್ನು ವರ್ಣಿಸುವಾಗ ಶ್ರೀಮದ್ವಿದ್ಯಾರಣ್ಯರು 'ಯತ್ರಯತ್ರ ಮನೋ ಯಾತಿ ತತ್ರತತ್ರ ಸಮಾಧಯಃ' ಎಂದು ಹೇಳಿದ್ದಾರೆ.

ಕೆಲವು ಯೋಗಗ್ರಂಥಗಳಲ್ಲಿ ಈ ಸ್ಥಿತಿಗೆ ಸಹಜಸಮಾಧಿ ಎಂಬ ಹೆಸರನ್ನು ಕೊಟ್ಟಿದ್ದಾರೆ. ಇವೆಲ್ಲವುಗಳ ಮೇಲಿಂದ ನೋಡಲಾಗಿ ಆತ್ಯಂತಿಕ ಸ್ಥಿತಿಯು ಬಾಹ್ಯಕರ್ಮಹೀನವಿರಲಿಕ್ಕೇಬೇಕು ಎಂದು ಅನ್ನುವ ಕಾರಣವಿಲ್ಲ. ಯಾವನು ತನ್ನ ಚಿತ್ತವನ್ನು ಬ್ರಹ್ಮಾನಂದದಲ್ಲಿ ಅಚ್ಚಳಿಯದೆ ಇಟ್ಟು ಪರಮಾತ್ಮನ ಲೀಲಾಸೃಷ್ಟಿಯಲ್ಲಿ ಆತನ ಪ್ರೇರಣೆಯಿಂದ ಕಾರ್ಯ ಮಾಡುತ್ತಿರುವನೊ ಅವನು ಪರಮಗತಿಯನ್ನು ಹೊಂದಿದವನೆಂದು ಹೇಳಬಹುದು. ಒಮ್ಮೆ ಈ ಪರಮಗತಿಯು ಪ್ರಾಪ್ತವಾಯಿತೆಂದರೆ ಕರ್ಮ ಮಾಡುವದರಿಂದ ಅದು ಅಳಿಯದು. ಆ ಸ್ಥಿತಿಯಲ್ಲಿ ಭಗವಂತನ ಪ್ರೇರಣೆಯೆ ಮಾರ್ಗದರ್ಶಕವು. ಈ ಸೃಷ್ಟಿಯೆಂದರೆ ಅನಂತಗುಣ, ಅನಂತಶಕ್ತಿ ಪರಮಾತ್ಮನ ದಿವ್ಯಲೀಲೆಯು, ಈ ಜೀವಗಳೆಂದರೆ ಈ ಲೀಲಾವಿಹಾರದಲ್ಲಿ ಸುಳಿದಾಡುತ್ತಿರುವ ಪರಮಾತ್ಮನ ಚಿದಂಶಗಳು. ಕೇವಲ ಪರಮಾತ್ಮನ ಸಂಕಲ್ಪದಿಂದ ಅವನ ಆನಂದೋದ್ರೇಕದಿಂದ ಈ ವಿಶ್ವವು ಅಸ್ತಿತ್ವದಲ್ಲಿ ಬಂದಿತು. ಆತ್ಮನು ಜೀವನಾಗಿ ತನ್ನ ನಿಜಸ್ವರೂಪದ ಮರವಿನಿಂದ ಸೃಷ್ಟಿಯ ದ್ವಂದ್ವಗಳಲ್ಲಿ ಸಿಲುಕಿ ತೊಳಲಾಡುತ್ತಿರುವನು. ತನ್ನ ನಿಜಸ್ವರೂಪದ ಅಂದರೆ ಅಂತರ್ಯಾಮಿಯ ಅರಿವನ್ನು ಮಾಡಿಕೊಂಡು ದ್ವಂದ್ವಾತೀತನಾಗಿ ಪರಮಾತ್ಮನ ಈ ಆನಂದವಿಹಾರದಲ್ಲಿ ಅವನ ಪ್ರೇರಣೆಯಂತೆ ದಿವ್ಯಭಾವದಿಂದ ನಡೆಯುತ್ತಿರುವದೆ ಜೀವನ ಧ್ಯೇಯವಾಗಿದೆ. ಈ ಅವಸ್ಥೆಯು ಪ್ರಾಪ್ತವಾಯಿತೆಂದರೆ ಕಗ್ಗತ್ತಲೆಯಿಂದ ಭಯಾನಕವಾದ ಸೃಷ್ಟಿಯು ಮುಂಜಾವಿನಲ್ಲಿಯ ಬಾಲಸೂರ್ಯನ ಎಳೆಕಿರಣಗಳ ಅರುಣಕಾಂತಿಯಿಂದ ಆಲ್ಹಾದಕರವಾಗಿ ತೋರುವಂತೆ ಈ ವಿಶ್ವವು ಆಲ್ಹಾದಮಯ ವೆನಿಸುವದು. ತಾಳಗೆಟ್ಟು ಬೇತಾಳನಂತೆ ಕುಣಿಯುತ್ತಿರುವ ಈ ನಿಸರ್ಗಶಕ್ತಿಗಳ ವ್ಯಾಪಾರಗಳಲ್ಲಿ ಒಂದು ಸ್ವರ್ಗೀಯ ಸಂಗೀತವೂ ಸಮತಾಲವೂ ಅನುಭವಕ್ಕೆ ಬರುವದು. ನಾನು ನಾನೆಂಬ ಅಹಂಕಾರದ ಗಂಟು ಒಡೆದು ದುಃಖದ ಬೀಜವು ಹುರಿದುಹೋಗಿ ಜೀವನಾನಂದದ ಹೆದ್ದೊರೆಯಲ್ಲಿ ನಾವು ಈಸಾಡಲಾರಂಭಿಸುವೆವು. ಆ ಆನಂದದ ಮುಂದೆ ಉತ್ತಮೋತ್ತಮ ಹೂವಿನ ಕಂಪಿನಿಂದಾಗುವ ಆನಂದವು ಏನೂ ಅಲ್ಲ; ಅದರ ಮುಂದೆ ಕವಿಕಲ್ಪಿತ ಅಪ್ಸರೆಯರ ದಿವ್ಯಸ್ವರೂಪದರ್ಶನದಿಂದಾಗುವ ಆನಂದವು ಕೇವಲ ತುಚ್ಛವು. ಷಡ್ರಸಪೂರಿತವಾದ ಪಕ್ವಾನ್ನಗಳನ್ನು ಆ ಆನಂದದ ಮೇಲಿಂದ ನಿವಾಳಿಸಿ ಚಲ್ಲಬಹುದು. ಗಾಯನಾನಂದವು ಎಲ್ಲಕ್ಕೂ ಹೆಚ್ಚಿನದೆಂದು ಹೇಳುವರು. ಆದರೆ ಅದು ಸಹ ಇದರ ಮುಂದೆ ತೀರ ಕಡಿಮೆ ತರಗತಿಯದು.

ಇದೇ ಪರಮಗತಿಯು. ಇದನ್ನು ಇಲ್ಲಿಯೆ ದೊರಕಿಸುವ ಮಹತ್ವಾಕಾಂಕ್ಷೆಯನ್ನು ನಾವು ತಾಳಬೇಕು. ಈ ದೇಹದಲ್ಲಿರುವಾಗಲೆ ಇದನ್ನು ಅನುಭವಿಸಬೇಕೆಂಬ ನಿಶ್ಚಯವನ್ನು ನಾವು ಮಾಡಬೇಕು. ಈ ಸ್ಥಿತಿಯಲ್ಲಿ ಎಲ್ಲ ನಿರಾಶೆಯು ಹರಿದುಹೋಗಿ, ಎಲ್ಲ ಜುಗುಪ್ಸೆಯು ನಷ್ಟವಾಗಿ, ಎಲ್ಲ ಭಯವು ಮಾಯವಾಗಿ, ನಮ್ಮ ಜೀವನವು ನಿಷ್ಪಾಪವೂ ಸ್ಫೂರ್ತಿಪೂರ್ಣವೂ, ತೇಜಸ್ವಿಯೂ ಆಗುವದು. ಬಾಹ್ಯವಸ್ತುಗಳ ಬಗ್ಗೆ ಸನ್ಯಾಸಿಗಳಿಗೂ ತ್ಯಾಗಿಗಳಿಗೂ ಇದ್ದ ತಿರಸ್ಕಾರಬುದ್ಧಿಯು ಅಳಿದು ಇದೆಲ್ಲ ಮಧು-ರಸ-ಕಾವ್ಯ-ಆನಂದಮಯವಾಗಿ ಕಂಗೊಳಿಸುವದು. ವಿಶ್ವಾತ್ಮನ ಸನ್ನಿಧಾನವನ್ನು ಪಡೆದ ಈ ಜೀವಿಗೆ ಪರಮಾತ್ಮ ಸಂಕಲ್ಪದಂತೆ ನಡೆಯುವದೊಂದೆ ಧರ್ಮವು. ಇವನು ಮುಕ್ತನು, ಸ್ವತಂತ್ರನು, ಸ್ವಯಂಸಿದ್ಧನು, ರೋಮರೋಮದಲ್ಲಿ ಪ್ರಾದುರ್ಭೂತವಾದ ಪರಮಾತ್ಮಭಾವವನ್ನು ಪ್ರತಿಕ್ಷಣಕ್ಕೆ ಪ್ರತಿಕರ್ಮದಲ್ಲಿ ಪ್ರಕಟಗೊಳಿಸುತ್ತ ಪರಮಾತ್ಮನ ಈ ಲೀಲಾವಿಹಾರದಲ್ಲಿ ವಿಹರಿಸುವದೆ ಅವನ ಸ್ವಭಾವವು. ಈ ಸ್ಥಿತಿಯನ್ನು ಎಲ್ಲರೂ ಪಡೆದು ಆತ್ಮಿಕಜೀವನದಲ್ಲಿ ನಿರತರಾಗುವ. 'ತಮಸೋ ಮಾ ಜ್ಯೋತಿರ್ಗಮಯ, ಅಸತೋ ಮಾ ಸದ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ' ಹೇ ಪರಮಾತ್ಮನ್, ಕತ್ತಲೆಯಿಂದ ಬೆಳಕಿನೆಡೆಗೆ, ಸಟೆಯಿಂದ ದಿಟದೆಡೆಗೆ, ಮೃತ್ಯುವಿನಿಂದ ಅಮೃತದೆಡೆಗೆ, ನಮ್ಮನ್ನು ಒಯ್ಯುವಂಥವನಾಗು.

ಶ್ರೀಕೃಷ್ಣಾರ್ಪಣಮಸ್ತು

ಓಂ ಶಾಂತಿ

ಓಂ ತತ್ಸತ್

ಕನ್ನಡದಲ್ಲಿ

# ಈಶೋಪನಿಷತ್ತು

## ಈಶೋಪನಿಷತ್ತಿನ ಸಾರಾಂಶ

ಈ ಉಪನಿಷತ್ತಿನಲ್ಲಿ ಹದಿನೆಂಟು ಮಂತ್ರಗಳಿರುವವು. ಮಿಕ್ಕ ಉಪನಿಷತ್ತುಗಳಿಗಿಂತ ಈ ಉಪನಿಷತ್ತು ತಿಳಿದುಕೊಳ್ಳಲಿಕ್ಕೆ ಹೆಚ್ಚು ಬಿಗಿಯಾದುದರಿಂದ ಇದರ ಸಾರಾಂಶವನ್ನು ವಿಸ್ತಾರವಾಗಿ ಕೊಡಬೇಕಾಗಿದೆ. ಇದಕ್ಕೆ ಸಾರಾಂಶವೆಂದೆನ್ನುವದಕ್ಕಿಂತ ವಿವೇಚನವೆಂದರೂ ಸಲ್ಲುವದು.

**ಶಾಂತಿಮಂತ್ರದ ಸಾರಾಂಶ:—** ಅನಂತಗುಣ ಅನಂತಶಕ್ತಿ ಅನಂತ ಜ್ಞಾನಗಳಿಂದ ಕೂಡಿದವನಾದುದರಿಂದ ಪರಮಾತ್ಮನು ಸರ್ವಸಂಪೂರ್ಣನೆನಿಸಿಕೊಳ್ಳುವನು. ಈ ವ್ಯಕ್ತವಿಶ್ವವಾದರೂ ನಿಯಮಬದ್ಧವಿರುವದರಿಂದ ವಸ್ತುತಃ ಸಂಪೂರ್ಣವಿರುವದು. ಇಂತಹ ನಿಯಮಬದ್ಧ ಸಂಪೂರ್ಣವಾದ ವಿಶ್ವವು ಸರ್ವಸಂಪೂರ್ಣನಾದ ಅನಂತ ಪರಮಾತ್ಮನಿಂದಲೆ ಉದ್ಭವಿಸುವದು. ಆದರೆ ಈ ವಿಶ್ವದ ಉತ್ಪತ್ತಿಯಿಂದ ಪರಮಾತ್ಮನಲ್ಲಿ ಏನಾದರೂ ಕಡಿಮೆಯಾಗುವದೆ? ಸರ್ವಥಾ ಇಲ್ಲ. ಹೇಳಿಕೇಳಿ ಅವನು ಅನಂತನು, ಅಖಂಡನು, ಅಚ್ಯುತನು, ಪರಿಪೂರ್ಣನು. ಅವನಿಂದ ಎಷ್ಟು ವಿಶ್ವಗಳು ಉತ್ಪನ್ನವಾದರೂ ಅವನೊಳಗಿಂದ ಎಷ್ಟು ಬ್ರಹ್ಮಾಂಡಗಳು ಹೊರಬಿದ್ದರೂ ಅವನ ಅನಂತವಾದ ಜ್ಞಾನಗುಣವಿಕ್ರಮಗಳು ಅಚ್ಚಳಿಯದೆ ಉಳಿಯುವವು. ಅವನಿಂದ ಉದ್ಭವಿಸಿದ ಈ ಎಲ್ಲ ವಿಶ್ವಗಳಾದರೂ ಅವನನ್ನು ಬಿಟ್ಟುಹೋಗುವುದೆಲ್ಲಿ?

ಇವೆಲ್ಲವುಗಳ ಹುಟ್ಟು ಸಾವು, ಅಳಿವು ಉಳಿವುಗಳು ಆ ಅನಂತನಲ್ಲಿಯೆ ಅಲ್ಲವೆ ? ಅಂದಮೇಲೆ ಆ ಅನಂತನ ಸಂಪೂರ್ಣತ್ವಕ್ಕೆ ಎಂದೆಂದಿಗೂ ಯಾವ ಕುಂದೂ ಉಂಟಾಗಲಾರದು. ಅನಂತ ಸಂಖ್ಯೆಯೊಳಗಿಂದ ಅನಂತ ಸಂಖ್ಯೆಯನ್ನು ಕಳೆದರೆ ಅನಂತವೆ ಉಳಿಯುವದೆಂದು ಗಣಿತಶಾಸ್ತ್ರದ ಸಿದ್ಧಾಂತವಿರುವದು. ಅದೇ ರೀತಿಯಲ್ಲಿ ಅನಂತ ಪರಮಾತ್ಮನಿಂದ ಅನಂತ ವಿಶ್ವಗಳು ಹುಟ್ಟಿದರೂ ಆ ಪರಮಾತ್ಮನ ಅನಂತತ್ವವು ಅಖಂಡ ಇದ್ದಂತೆಯೆ ಇರುವದು. ನಿರವಯುವವಾದ ಬಯಲಲ್ಲಿ ಅಂದರೆ ಆಕಾಶದಲ್ಲಿ ಶಬ್ದವು ಉತ್ಪನ್ನವಾದರೆ ಆ ಬಯಲಿನ ವಿಸ್ತಾರವೂ ಅನಂತತ್ವವೂ ಕಡಿಮೆಯಾಗಬಲ್ಲವೆ ? ಬಯಲಲ್ಲಿ ಕಾಮನ ಬಿಲ್ಲು ಮೂಡಿದರೆ ಆ ಬಯಲು ಸಂಕುಚಿತವಾಗಬಲ್ಲದೆ ? ಎಂದಿಗೂ ಇಲ್ಲ. ಹಾಗೆಯೆ ಈ ಪೂರ್ಣರೂಪ ಪರಮಾತ್ಮನಲ್ಲಿ ನಿಯಮಬದ್ಧ ಸಂಪೂರ್ಣವಾದ ವಿಶ್ವಗಳ ಉತ್ಪತ್ತಿಸ್ಥಿತಿಲಯಗಳು ಆಗುವವು, ಹೋಗುವವು. ಅದರಿಂದ ಪರಮಾತ್ಮನ ಸಂಪೂರ್ಣತ್ವಕ್ಕೂ ಅನಂತತ್ವಕ್ಕೂ ಅಖಂಡತ್ವಕ್ಕೂ ಬಾಧೆ ಬರಲಾರದು. ಇದೇ ಈ ಶಾಂತಿಮಂತ್ರದ ಸಾರಾಂಶವು.

**ಮಂತ್ರಗಳ ಸಾರಾಂಶ:—** ಈ ವಿಶ್ವದಲ್ಲಿಯ ಚೇತನ ಅಚೇತನ, ಜಡ ಸೂಕ್ಷ್ಮ, ಚರ ಅಚರಗಳಾದ ಸಕಲವಸ್ತುಗಳು ಸರ್ವವ್ಯಾಪಕ ಪರಮಾತ್ಮನಿಂದ ವ್ಯಾಪ್ತವಿರುವವು. ಎಲ್ಲೆಲ್ಲಿಯೂ ಅವನು ತುಂಬಿ ಇರುತಿರುವನು. ಆ ಪರಮಾತ್ಮನ ಯದೃಚ್ಛೆಯಿಂದ ಪ್ರಾಪ್ತವಾದ ವಸ್ತುಗಳನ್ನು ಈಶಪ್ರಸಾದವೆಂಬ ಭಾವನೆಯಿಂದ ನಾವು ಉಪಯೋಗಿಸಬೇಕು. ಈ ಜಗತ್ತಿನಲ್ಲಿ ಕರ್ತವ್ಯನಿಷ್ಠೆಯಿಂದ ಕರ್ಮಮಾಡುತ್ತ ಒಂದು ನೂರು ವರ್ಷ ಬಾಳಬೇಕೆಂದು ಎಲ್ಲರೂ ಇಚ್ಛಿಸಬೇಕು. ಈ ಮಾರ್ಗದಿಂದ ಹೋದರೆ ಮಾತ್ರ ಮುಕ್ತಿಯ ಆಶೆಯು. ಕರ್ಮದೋಷದಿಂದ ನಿರ್ಲಿಪ್ತರಿರಬೇಕಾದರೂ ಇದೇ ಹಾದಿಯು. ಈ ಮಾರ್ಗವನ್ನು ಬಿಟ್ಟುಬಿಡುವವರು ಹಾಗೂ ಆತ್ಮನನ್ನು ಅರಿತುಕೊಳ್ಳಲಿಕ್ಕೆ ಯತ್ನಿಸದೆ ಕೇವಲ ಪಶುಗಳಂತೆ ಆಯುಷ್ಯವನ್ನು ಕಳೆಯುವವರು ಅಜ್ಞಾನಾಂಧಕಾರದಿಂದ ಮುಸುಕಿದ ಆಸುರೀಲೋಕಗಳಿಗೆ ಹೋಗುವರು. ಅಜ್ಞಾನದಲ್ಲಿರುವದೆಂದರೆ ಆತ್ಮಘಾತಮಾಡಿಕೊಂಡಂತೆಯೆ ಸರಿ.

ಯಾವ, ಆತ್ಮನನ್ನು ಅರಿತುಕೊಳ್ಳದಿದ್ದರೆ ಇಂತಹ ಮಹತ್ತರವಾದ

ಹಾನಿಗೆ ನಾವು ಗುರಿಯಾಗುವವೊ ಆ ಆತ್ಮನ ನಿಜಸ್ವರೂಪವು ಹೇಗಿರುವದು ನೋಡುವಾ. ಆತ್ಮನು ಅಚಲನು, ಒಬ್ಬನೇ ಒಬ್ಬನು, ಮನಸ್ಸಿಗಿಂತಲೂ ವೇಗವುಳ್ಳವನು. ದೇವತೆಗಳಿಗೆ ಸಹ ಅವನು ಅಗೋಚರನು. ಅವನು ಎಲ್ಲರ ಆಚೆಗೆ ವಾಸಮಾಡುವವನು. ಸರ್ವವ್ಯಾಪಕನಾದ ಅವನಲ್ಲಿಯೆ ವಾಯುವು ಅಂದರೆ ಅವನ ವಿಶ್ವನಿರ್ಮಾಣಶಕ್ತಿಯು ಚಲನಾತ್ಮಕ ಕರ್ಮ ಶಕ್ತಿಯನ್ನು ಸ್ಥಾಪಿಸುವದು. ಅವನು ಚಲನೆಂದರೆ ಚಲನು, ಅಚಲನೆಂದರೆ ಅಚಲನು. ಅವನು ನಮ್ಮಿಂದ ದೂರನಿದ್ದಂತೆ ಸಮೀಪದಲ್ಲಿಯೂ ಇರುವನು. ಅವನು ಸರ್ವರ ಅಂತರ್ಬಾಹ್ಯಗಳನ್ನು ವ್ಯಾಪಿಸಿಬಿಟ್ಟಿರುವನು.

ಚರಾಚರ ಸರ್ವಭೂತಗಳು ಇಂತಹ ಆತ್ಮಸ್ವರೂಪದಲ್ಲಿಯೆ ವಾಸ ಮಾಡುತ್ತಿರುವವೆಂದು ಯಾವನು ಅರಿತುಕೊಳ್ಳುವನೊ, ಈ ಆತ್ಮಸ್ವರೂಪವೆ ಎಲ್ಲ ಭೂತಗಳಲ್ಲಿಯೂ ಇರುವದೆಂದು ಯಾವನು ಅನುಭವಿಸುವನೊ ಅವನ ಜುಗುಪ್ಸಾಬುದ್ಧಿಯೂ ಹೇಯಭಾವನೆಯೂ ಪೂರ್ಣ ನಷ್ಟವಾಗಿ ಹೋಗು ವವು. ಯಾಕಂದರೆ ಅವನು ಎಲ್ಲ ಪದಾರ್ಥಗಳಲ್ಲಿಯೂ ಆತ್ಮನನ್ನೆ ಕಾಣು ವನು. ಒಬ್ಬನೇ ಆತ್ಮನು ಈ ಸಕಲ ಭೂತಮಾತ್ರಗಳಾಗಿ ಆವಿರ್ಭವಿಸಿರು ವನು, ಪ್ರಕಟನಾಗಿರುವನು ಎಂಬ ಸಾಕ್ಷಾತ್ಕಾರವು ಯಾವ ಜ್ಞಾನಿಗೆ ಆಗಿರುವದೊ ಅವನಿಗೆ ಮೋಹವೆಲ್ಲಿಯದು, ಶೋಕವೆಲ್ಲಿಯದು ? ಆತ್ಮನು ಅತ್ಯಂತ ತೇಜಸ್ವಿಯೂ ಅಖಂಡನೂ ಅಶರೀರನೂ ಶುದ್ಧನೂ ನಿಷ್ಪಾಪನೂ ಇರುವನು. ಪರಮಾತ್ಮನು ತನ್ನನ್ನು ತಾನೆ ತನ್ನ ಸಂಕಲ್ಪಮಾತ್ರದಿಂದ ದಿಕ್ಕುದಿಕ್ಕುಗಳಲ್ಲಿಯೂ ವಿಸ್ತರಿಸಿರುವನು. ಸರ್ವಜ್ಞನೂ ಸರ್ವವ್ಯಾಪಕನೂ ಆದ ಈ ಸ್ವಯಂಭು ಪರಮಾತ್ಮನು ಅನಂತಕಾಲದಿಂದ ಅನಂತಕಾಲದ ವರೆಗೆ ಸಕಲ ಸೃಷ್ಟಪದಾರ್ಥಗಳಿಗೆ ಯಥಾಯೋಗ್ಯವಾದ ಕಟ್ಟುಗಳನ್ನು ಕಲ್ಪಿಸಿ ಈ ವಿಶ್ವವನ್ನು ನಿಯಮಗಳಿಗೆ ಒಳಗಾಗಿರುವಂತೆ ಮಾಡಿರುವನು.

ಆದರೆ ಕೆಲವರು ಈ ವ್ಯಕ್ತಸೃಷ್ಟಿಯ ಜ್ಞಾನವನ್ನಷ್ಟೇ ಪಡೆಕೊಂಡು ವಿಷಯಸುಖಗಳಾನೆಗೆ ಬಿದ್ದು ಕೇವಲ ಇದರ ಉಪಾಸನೆಯನ್ನೆ ಮಾಡ ತೊಡಗುವರು. ಇಂತಹ ಜನರಿಗೆ ಅಜ್ಞಾನಾಂಧಕಾರವು ತಪ್ಪದು. ಕೆಲವರು ವ್ಯಕ್ತಸೃಷ್ಟಿ ಮಿಥ್ಯೆ ಎಂದು ಭಾವಿಸಿ ಕೇವಲ ಅವ್ಯಕ್ತೋಪಾಸಕರಾಗುವರು. ಅವರನ್ನು ಸಹ ಅದಕ್ಕೂ ಹೆಚ್ಚಿನ ಅಜ್ಞಾನದ ಕಗ್ಗತ್ತಲೆಯು ಮುಸುಕಿ

ಬಿಡುವದು. ವ್ಯಕ್ತ ಹಾಗೂ ಅವ್ಯಕ್ತ ಇವು ಪ್ರತ್ಯೇಕವಾಗಿ ಪೂರ್ಣ ಸತ್ಯಗಳಲ್ಲ. ಇವು ಸತ್ಯಾಂಶಗಳು. ಇವೆರಡನ್ನೊಳಗೊಂಡ ಪರಮಾತ್ಮನೆ ಪೂರ್ಣ ಸತ್ಯನು. ಈ ವ್ಯಕ್ತಸೃಷ್ಟಿ ಹಾಗೂ ಅವ್ಯಕ್ತತತ್ವ, ಕ್ಷರ ಹಾಗೂ ಅಕ್ಷರ ಇವೆರಡನ್ನೂ ಸಮನ್ವಯದಿಂದ ತನ್ನಲ್ಲಿಟ್ಟುಕೊಂಡು ಇವುಗಳಾಚೆಗಿರುವ ಪರಮಾತ್ಮನ ಅಥವಾ ಪುರುಷೋತ್ತಮನ ಜ್ಞಾನವನ್ನು ಪಡೆದುಕೊಂಡರೆ ಮಾತ್ರ ಮಾನವನು ಸೃಷ್ಟಿಯ ಜ್ಞಾನದ ಬಲದಿಂದ ಮೃತ್ಯುಲೋಕವನ್ನು ದಾಟಿ ಅವ್ಯಕ್ತ ತತ್ವದ ಜ್ಞಾನದಿಂದ ಅಮೃತತ್ವವನ್ನು ಹೊಂದುವನು.

ಸತ್ಯ ಮತ್ತು ತೇಜಸ್ವಿಯಾದ ಸೂರ್ಯನಾರಾಯಣನ ಮುಖ ಮಂಡಲವು ಹೊಂಬಣ್ಣದ ಬಿಂಬದಿಂದ ಮುಚ್ಚಲ್ಪಟ್ಟಿರುವಂತೆ ಪರಮಾತ್ಮನ ಸತ್ಯರೂಪವು ಈ ಮೋಹಕವಾದ ವಿಶ್ವದಿಂದ ಮರೆಮಾಡಲ್ಪಟ್ಟಿರುವದು. ಆದುದರಿಂದ ಸಾಧಕನ ಪ್ರಾರ್ಥನೆ ಏನಂದರೆ, 'ಹೇ ಸರ್ವಪೋಷಕನಾದ ಜ್ಞಾನಸೂರ್ಯನೇ, ಸರ್ವ ಸದ್ಧರ್ಮಿಗಳಿಗೂ ಸತ್ಯಸ್ವರೂಪದ ದರ್ಶನವಾಗುವದಕ್ಕೋಸ್ಕರ ಈ ಮೋಹಮಯವಾದ ಮಾಯೆಯನ್ನು ದೂರ ಸರಿಬಿಡು. ನೀನು ನಿನ್ನ ಜ್ಞಾನಕಿರಣಗಳನ್ನು ಏಕೀಕರಿಸು. ನಾನು ನಿನ್ನ ಬಿಂಬದಲ್ಲಿ ಸಾಕ್ಷಾತ್ ಜ್ಞಾನಮಯ ಪುರುಷನನ್ನು ನೋಡುತ್ತಿರುವೆನು. ಅವನೇ ನನ್ನಲ್ಲಿಯೂ ಇರುವನು. ಈ ದೇಹವು ಸುಟ್ಟು ಬೂದಿಯಾಗಿ ಹೋಗುವದು. ಆದರೆ ಇದರಲ್ಲಿದ್ದ ಪ್ರಾಣವಾಯುವು ಸ್ವತಂತ್ರವೂ ಅಮೃತವೂ ಇರುವದು.'

'ಎಲೆ ಮನವೇ, ಇಂತಹ ಸಮಯದಲ್ಲಿ ಕೃತಕರ್ಮಗಳನ್ನು ಚನ್ನಾಗಿ ಸ್ಮರಿಸು. ಹೇ ಅಗ್ನಿದೇವನೇ, ಆತ್ಮನನ್ನು ಕಾಣಬೇಕು ಎಂಬ ಆಧ್ಯಾತ್ಮಿಕ ಪಿಪಾಸೆಯ ರೂಪದಿಂದ ನನ್ನಲ್ಲಿ ಇದ್ದ ಜ್ವಾಲೆಯೇ, ನನ್ನನ್ನು ಸನ್ಮಾರ್ಗದಲ್ಲಿ ಪ್ರವರ್ತಿಸು. ಯಾಕಂದರೆ, ಕರ್ಮ ಹಾಗೂ ಕರ್ಮಫಲಗಳ ಜ್ಞಾನವು ನಿನಗೆ ಸಂಪೂರ್ಣವಿರುವದು. ನನ್ನ ಪಾಪವನ್ನೂ ಕಲ್ಮಷವನ್ನೂ ಸುಟ್ಟು ಬಿಡು. ನಾನು ನಿನಗೆ ಸಹಸ್ರಶಃ ನಮಸ್ಕಾರ ಮಾಡುವೆನು.'

ಈ ಪ್ರಕಾರವಾಗಿ ಈ ಉಪನಿಷತ್ತಿನ ಸಾರಾಂಶವಿರುವದು.

ವಾದ ಶಾಸ್ತ್ರವು. ಆ ಗ್ರಂಥಗಳು ಅಷ್ಟೊಂದು ಮಹತ್ವವುಳ್ಳವುಗಳಿರುವದರಿಂದಲೆ ಅವುಗಳನ್ನು 'ಅಪೌರುಷೇಯ'ವೆಂದು ನಮ್ಮ ಪೂರ್ವಜರು ಭಾವಿಸಿದರು. ವೇದಾಂತಶಾಸ್ತ್ರವು ಅಥವಾ ಅಧ್ಯಾತ್ಮಶಾಸ್ತ್ರವು ಅಷ್ಟು ಮಹತ್ವದ್ದೆಂದೆ ಅದಕ್ಕೆ ಎಲ್ಲ ಶಾಸ್ತ್ರಗಳಲ್ಲಿ ಶ್ರೇಷ್ಠ ಸ್ಥಾನವು ದೊರಕಿತು. ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯೆ ನಾನು, ಎಂದು ಭಗವಂತನು ಭಗವದ್ಗೀತೆಯಲ್ಲಿ ಹೇಳಿರುವನು. ಇದು ಗುಟ್ಟಿನ ಮಾತು ಎಂದು ಅದೇ ಗೀತೆಯಲ್ಲಿ ಉಲ್ಲೇಖಿಸಿರುವದು. ಇದು 'ಪರಾವಿದ್ಯೆ' ಎಂದು ಉಪನಿಷತ್ತುಗಳು ಹೇಳುವವು. ಇದುವೆ 'ರಾಜವಿದ್ಯೆಯು' 'ರಾಜಗುಹ್ಯವು,' ವನ್ಯಮೃಗಗಳಲ್ಲಿ ಮೃಗರಾಜನಿರುವಂತೆ ಶಾಸ್ತ್ರಸಂಘದಲ್ಲಿ ವೇದಾಂತಕೇಸರಿಯು. ಇದರ ಗುಡುಗಿನ ಮುಂದೆ ಮಿಕ್ಕ ಶಾಸ್ತ್ರಗಳ ಚೀರಾಟವಡಗಿಹೋಗುವದು. ಇಂತಹದನ್ನು ನಾವು ಈಗ ಬಿಟ್ಟಿರುವೆವು. ಇಂತಹದನ್ನು ನಾವು ಈಗ ಹೀಯಾಳಿಸುತ್ತಿರುವೆವು. ಇದರಿಂದ ನಮಗೇನು ಲಾಭವು, ಅದರಿಂದ ಹೊಟ್ಟೆ ತುಂಬುವದೆ ಎಂದು ಮುಂತಾಗಿ ಹರಟುತ್ತ ನಮ್ಮ ತಿಳಿಗೇಡಿತನವನ್ನು ನಾವೇ ಹೊರಗೆಡಹುತ್ತಿರುವೆವು. ಇದರಿಂದ ನಮ್ಮ ಕಾಲಮೇಲೆ ನಾವೇ ಕಲ್ಲು ಚಲ್ಲುತ್ತಿರುವೆವಷ್ಟೇ. ಅದರಿಂದ ಆ ಶಾಸ್ತ್ರಕ್ಕೆ ಅಥವಾ ಅದರ ಯೋಗ್ಯತೆಗೆ ಯಾವ ಕುಂದೂ ಇಲ್ಲ.

ಸಾಕು ಬಿಡಿ, ನಿಮ್ಮ ವೇದಾಂತ; ಇದರಿಂದಲೆ ನಮ್ಮ ರಾಷ್ಟ್ರವು ಹಾಳಾಯಿತು; ಹತ್ತೀ ಬಿಟ್ಟೀ ಇಟ್ಟುಕೊಂಡು ಬತ್ತೀ ಮಾಡುವ ವಿಧವೆಯರ ಮುಂದೆ ನಿಮ್ಮ ವೇದಾಂತವನ್ನು ಹೇಳಿರಿ, ನಮಗದು ಬೇಡ; ನಮಗೆ ಬೇಕಾದುದು ವ್ಯವಹಾರ; ಅದೇನಾದರೂ ನಿಮ್ಮಲ್ಲಿದ್ದರೆ ಹೇಳಿರಿ, ಎಂದು ಕೆಲವರು ಎದುರಿಸುವರು. ಆದರೆ ಇವರು ಹೀಗೆ ಕೇಳುವುದರಲ್ಲಿ ಏನೂ ಹುರುಳಿಲ್ಲ. ನಾವು ಹಾಳಾದುದು ವೇದಾಂತ ಹಿಡಿದುದರಿಂದಲ್ಲ; ಅದನ್ನು ಬಿಟ್ಟುದರಿಂದ. ವೇದಾಂತದ ನಿಜವಾದ ಅರ್ಥವನ್ನು ತಿಳಿದುಕೊಂಡು ಅದರಂತೆ ನಡೆದುದರಿಂದಲ್ಲ; ಅದರ ಅಪಾರ್ಥಮಾಡಿ ಅಡ್ಡಹಾದಿ ಹಿಡಿದುದರಿಂದ. ಒಂದು ಗುಡಿಯೊಳಗಿನ ದೇವದೇವನನ್ನು ಇಷ್ಟದೇವತೆಯೆಂದು ಉಪಾಸನೆ ಮಾಡಿ ಶುದ್ಧಚಿತ್ತರಾಗಿ, ಶಾಂತಮನಸ್ಕರಾಗಿ ಮೋಕ್ಷದ ಮೆಟ್ಟಲುಗಳನ್ನು ಹತ್ತುವವರೂ ಇರುವರು. ಅದೇ ಗುಡಿಯಲ್ಲಿ ಕೇವಲ ಡಂಭಾಚಾರದ ಹೊಂಬರಾಟಮಾಡಿ ಗಂಟೆಬಡೆಯುತ್ತ ಭಾವಿಕ ಭಕ್ತರ ಹಣವನ್ನು ಸೆಳೆಯುವ ಸಾಧನವೆಂದು ಅದೇ ಮೂರ್ತಿಯ ದುರುಪಯೋಗ ಮಾಡುವ ಹಲವು ಪೂಜಾರರೂ ಇರುವರು. ರತ್ನಪರೀಕ್ಷಕನಲ್ಲದೆ ಮಂಗನೇನು ಬಲ್ಲುದು ಮಾಣಿಕದ ಬೆಲೆಯ?

ಜವೀಯೋ ನೈನದ್ದೇವಾ ಆಪ್ನುವನ್ಪೂರ್ವಮರ್ಶತ್ ॥ ತದ್ಧಾವತೋಽನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋ ಮಾತರಿಶ್ವಾದಧಾತಿ ॥೪॥ ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ ॥ ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥೫॥ ಯಸ್ತು ಸರ್ವಾಣಿ ಭೂತ್ಯಾನ್ಯಾತ್ಮನ್ಯೇವಾನುಪಶ್ಯತಿ॥ ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥೬॥ ಯಸ್ಮಿನ್ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ॥ ತತ್ರ ಕೋ ಮೋಽಹಃ ಕಃ ಶೋಕಃ ಏಕತ್ವಮನುಪಶ್ಯತಃ ॥೭॥ ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಂ ಶುದ್ಧಮಪಾಪವಿದ್ಧಮ್ ॥ ಕವಿರ್ಮನೀಷಿ ಪರಿಭೂಃ ಸ್ವಯಂಭೂರ್ಯಾಥಾತಥ್ಯತೋಽರ್ಥಾನ್ವ್ಯಧಧಾತ್ ಶಾಶ್ವತೀಭ್ಯಃ ಸಮಾಭ್ಯಃ ॥೮॥ ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ॥ ತತೋ ಭೂಯ ಇವತೇ ತಮೋ

---

ಆತ್ಮಘಾತಮಾಡಿಕೊಳ್ಳುವ ಜನರು ಅಂದರೆ ಆತ್ಮಜ್ಞಾನವನ್ನು ಮಾಡಿಕೊಳ್ಳದೆ ಇರುವ ಜನರು ಇಹಲೋಕವನ್ನು ಬಿಟ್ಟ ಮೇಲೆ ಆ ಆಸುರೀ ಲೋಕಗಳೆಡೆಗೆ ತೆರಳುವರು. (೪) ಅದು (ಆತ್ಮವು) ಅಚಲವು, ಏಕವು, ಮನಸಿಗಿಂತ ವೇಗವುಳ್ಳದ್ದು. ಯಾವದು ಎಲ್ಲಕ್ಕೂ ಮುನ್ನವೆ ಮುಂದಾದುದರಿಂದ ದೇವತೆಗಳಿಗೆ ( ಇತರ ಶಕ್ತಿಗಳಿಗೆ) ಸಹ ಪ್ರಾಪ್ತವಾಗಲಿಲ್ಲವೊ ಅದು ತಾನು ನಿಂತಲ್ಲಿ ನಿಂತು ಧಾವಿಸುತ್ತಿರುವ ಮಿಕ್ಕ ವಸ್ತುಗಳನ್ನು ದಾಟಿಹೋಗುವದು. ಅದರಲ್ಲಿ ಅಂದರೆ ಆ ಪರವಸ್ತುವಿನಲ್ಲಿ ವಾಯುವು ಅಂದರೆ ವಿಶ್ವನಿರ್ಮಾಣ ಶಕ್ತಿಯು ಅಪ್ಪುವನ್ನು ಅಂದರೆ ಕರ್ಮಶಕ್ತಿಗಳನ್ನು ಸ್ಥಾಪಿಸುವದು. (೫) ಅದು ಚಲಿಸುವದು, ಅದು ಚಲಿಸದು. ಅದು ದೂರವಿರುವದು, ಸಮೀಪವೂ ಇರುವದು. ಅದು ಸರ್ವಾಂತರದಲ್ಲಿಯೂ ಇರುವದು, ಸರ್ವರ ಬಾಹ್ಯದಲ್ಲಿಯೂ ಇರುವದು. (೬) ಆದರೆ ಯಾವನು ಸರ್ವಭೂತಮಾತ್ರಗಳನ್ನು ಆತ್ಮನಲ್ಲಿಯೂ ಆತ್ಮನನ್ನು ಸರ್ವಭೂತಗಳಲ್ಲಿಯೂ ಕಾಣುವನೊ ಅವನ ಜುಗುಪ್ಸೆಯು ಅಂದರೆ ಹೇಯಭಾವನೆಯು ಅಳಿದುಹೋಗುವದು. (೭) ಆತ್ಮನೇ ಸರ್ವ ಭೂತಮಾತ್ರಗಳ ರೂಪದಿಂದ ಆವಿರ್ಭವಿಸುವನೆಂಬ ಭಾವನೆಯು ನೆಲೆಗೊಂಡ ಹಾಗೂ ಏಕತ್ವದ ಸಾಕ್ಷಾತ್ಕಾರವಾದ ಜ್ಞಾನಿಗೆ ಮೋಹವೆಲ್ಲಿಯದು ಶೋಕವೆಲ್ಲಿಯದು ? (೮) ಅವನೇ ಅಂದರೆ ಆತ್ಮನೇ ಎಲ್ಲ ದಿಕ್ಕುಗಳಲ್ಲಿಯೂ ಪಸರಿಸಿದನು. ಅವನು ತೇಜಸ್ವಿಯು, ಅಶರೀರನು, ಘಾಯರಹಿತನು, ಸ್ನಾಯುರಹಿತನು, ಶುದ್ಧನು, ಪಾಪದಿಂದ ಅಲಿಪ್ತನು, ಅವನು

ಯ ಉ ವಿದ್ಯಾಯಾಂ ರತಾಃ ||೯|| ಅನ್ಯದೇವಾಹುರ್ವಿದ್ಯಯಾನ್ಯದಾಹುರ-ವಿದ್ಯಯಾ || ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚಚಕ್ಷಿರೇ ||೧೦|| ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ || ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ||೧೧|| ಅಂಧಂ ತಮಃ ಪ್ರವಿಶಂತಿ ಯೇಽಸಂಭೂತಿ-ಮುಪಾಸತೇ || ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಂ ರತಾಃ ||೧೨|| ಅನ್ಯದೇವಾಹುಃ ಸಂಭವಾದನ್ಯದಾಹುರಸಂಭವಾತ್ || ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ||೧೩|| ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಂ ಸಹ || ವಿನಾಶೇನ ಮೃತುಂ ತೀರ್ತ್ವಾ ಸಂಭೂತ್ಯಾಮೃತ ಮಶ್ನುತೇ ||೧೪|| ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್ || ತತ್ತ್ವಂ

---

ಕವಿಯು, ಬುದ್ಧಿವಂತನು, ಸರ್ವವ್ಯಾಪಿಯು, ಸ್ವಯಂಭುವು. ಅವನು ಅನಾದಿಕಾಲದಿಂದ ಸಕಲ ಸೃಷ್ಟ ಪದಾರ್ಥಗಳ ವ್ಯವಸ್ಥೆಯನ್ನು ಯಥಾಯೋಗ್ಯ ವಾಗಿ ಮಾಡಿರುವನು. (೯) ಬರಿಯ ಅವಿದ್ಯೆಯ (ವ್ಯಕ್ತವಿಶ್ವದ ಜ್ಞಾನದ) ಉಪಾಸನೆ ಮಾಡುವವರು ಅಜ್ಞಾನಾಂಧಕಾರದಲ್ಲಿ ಮುಳುಗುವರು. ಬರಿಯ ವಿದ್ಯೆಯ (ಅವ್ಯಕ್ತದ ಜ್ಞಾನದ) ಉಪಾಸನೆ ಮಾಡುವವರು ಅದಕ್ಕೂ ಹೆಚ್ಚಿನ ಗಾಢಾಂಧಕಾರದಲ್ಲಿ ಮುಳುಗುವರು. (೧೦) ವಿದ್ಯೆಯ ಫಲವು ಬೇರೆ, ಅವಿದ್ಯೆಯ ಫಲವು ಬೇರೆ, ಎಂದು ನಮಗೆ ಸತ್ಯೋಪದೇಶವನ್ನು ಕೊಟ್ಟ ಧೀರರು ಹೇಳಿದರು. (೧೧) ವಿದ್ಯೆ ಅವಿದ್ಯೆ ಮತ್ತು ಇವೆರಡನ್ನೂ ಒಳ ಗೊಂಡಿರುವ ಅದನ್ನು ( ಪರತತ್ತ್ವವನ್ನು ) ತಿಳಿದವನು ಅವಿದ್ಯೆಯ ಬಲದಿಂದ (ವ್ಯಕ್ತಸೃಷ್ಟಿಯ ಜ್ಞಾನದಿಂದ) ಮೃತ್ಯುಲೋಕವನ್ನು ದಾಟಿ ವಿದ್ಯೆಯ ಬಲ ದಿಂದ (ಅವ್ಯಕ್ತದ ಜ್ಞಾನದಿಂದ) ಅಮೃತತ್ತ್ವವನ್ನು ಪಡೆಯುವನು. (೧೨) ಬರಿಯ ಅಸಂಭೂತಿಯ (ವ್ಯಕ್ತಸೃಷ್ಟಿಯ) ಉಪಾಸನೆ ಮಾಡುವವರು (ಅದರ ಬೆನ್ನು ಹತ್ತುವವರು) ಅಜ್ಞಾನಾಂಧಕಾರಕ್ಕೆ ಗುರಿಯಾಗುವರು. ಬರಿಯ ಸಂಭೂತಿಯಲ್ಲಿಯೆ (ಅವ್ಯಕ್ತದಲ್ಲಿಯೆ) ನಿರತರಾಗುವವರು ಹೆಚ್ಚಿನ ಅಜ್ಞಾನ ದಲ್ಲಿ ಮುಳುಗಿಹೋಗುವರು. (೧೩) ಸಂಭವದ ( ಅವ್ಯಕ್ತದ ) ಉಪಾಸನೆ ಯಿಂದ ಬರುವ ಫಲವು ಬೇರೆ, ಅಸಂಭವದ (ವ್ಯಕ್ತದ) ಉಪಾಸನೆಯಿಂದ ಬರುವ ಫಲವು ಬೇರೆ ಎಂದು ನಮಗೆ ಸತ್ಯಜ್ಞಾನದ ಉಪದೇಶವನ್ನು ಮಾಡಿದ ಧೀರರು ಹೇಳಿದರು. (೧೪) ಸಂಭೂತಿಯನ್ನು ( ಅವ್ಯಕ್ತವನ್ನು ) ವಿನಾಶ

**ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥೧೫॥ ಪೂಷನ್ ಏಕರ್ಷೇ ಯಮ ಸೂರ್ಯ ಪ್ರಾಜಾಪತ್ಯ ವ್ಯೂಹ ರಶ್ಮೀನ್ಸಮೂಹ ॥ ತೇಜೋ ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ ಯೋಽಸಾವಸೌ ಪುರುಷಃ ಸೋಽಹಮಸ್ಮಿ ॥೧೬॥ ವಾಯುರನಿಲಮಮೃತಮಥೇದಂ ಭಸ್ಮಾಂತಂ ಶರೀರಮ್ ॥ ಓಂ ಕ್ರತೋ ಸ್ಮರ ಕೃತಂ ಸ್ಮರ ಕ್ರತೋ ಸ್ಮರ ಕೃತಂ ಸ್ಮರ ॥೧೭॥ ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ವಿ ಶ್ವಾನಿದೇವ ವಯುನಾನಿ ವಿದ್ವಾನ್ ॥ ಯುಯೋಧ್ಯಸ್ಮಜ್ಜುಹುರಾಣ ಮೇನೋ ಭೂ ಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥೧೮॥ ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣ ಮೇವಾವಶಿಷ್ಯತೇ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥ ಇತಿ ವಾಜಸನೇಯ ಸಂಹಿತೋಪನಿಷತ್ಸಂಪೂರ್ಣಾ ॥**

---

ವನ್ನು (ವ್ಯಕ್ತವನ್ನು) ಮತ್ತು ಇವೆರಡನ್ನೂ ಒಳಗೊಂಡಿರುವ ಅದನ್ನು (ಪರತತ್ವವನ್ನು) ಅರಿತವನು ವಿನಾಶದ ಉಪಾಸನೆಯಿಂದ ಮೃತ್ಯುಲೋಕ ವನ್ನು ದಾಟಿ ಸಂಭೂತಿಯ ಉಪಾಸನೆಯಿಂದ ಅಮೃತತ್ವವನ್ನು ಪಡೆಯು ವನು. (೧೫) ಸತ್ಯದ ಮುಖವು ಚಿನ್ನದ ಮುಚ್ಚಳದಿಂದ ಮುಚ್ಚಲ್ಪಟ್ಟಿರು ವದು. ಹೇ ಸರ್ವಪೋಷಕನೇ (ಜ್ಞಾನಸೂರ್ಯನೇ), ಸತ್ಯಧರ್ಮದ ಗೋಸುಗ, ಸತ್ಯದರ್ಶನಕ್ಕಾಗಿ ಆ ಮುಚ್ಚಳವನ್ನು ನೀನು ತೆರೆದುಬಿಡು. (೧೬) ಹೇ ಸರ್ವ ಪೋಷಕನೇ, ಸೂರ್ಯನೇ, ಪ್ರಜಾಪತಿಪುತ್ರನೇ, ನಿನ್ನ ಕಿರಣಗಳ ವ್ಯೂಹ ಕಟ್ಟಿ ಅವುಗಳನ್ನು ಏಕೀಕರಿಸು. ಅತ್ಯಂತ ಕಲ್ಯಾಣತಮ ವಾದ ನಿನ್ನ ತೇಜೋರೂಪವು ನನ್ನ ಮುಂದೆ ಕಂಗೊಳಿಸುತ್ತಿರುವದು. ಅಲ್ಲಿ ಗೋಚರನಾಗುವ ಆಗೋ ಆ ಪುರುಷನು. ಅವನೇ ನಾನು (ನನ್ನಲ್ಲಿಯ ಪುರುಷನು.) (೧೭) ವಾಯುವು ಅಂದರೆ ಪ್ರಾಣವಾಯುವು ಸ್ವತಂತ್ರವೂ ಅಮೃತವೂ ಇರುವದು. ಈ ಶರೀರವು ಭಸ್ಮವಾಗಿ ನಾಶಹೊಂದುವದು. ಹೇ ಸಂಕಲ್ಪಶಕ್ತಿಯೇ, ನೆನಿಸು, ನಿನ್ನ ಪೂರ್ವಕರ್ಮಗಳನ್ನು ನೆನಿಸು. (೧೮) ಹೇ ಅಗ್ನಿದೇವನೇ, ಸತ್ಫಲಗಳನ್ನು ಪ್ರಾಪ್ತಮಾಡಿಕೊಡುವ ಸನ್ಮಾರ್ಗ ದಿಂದ ನಮ್ಮನ್ನು ಒಯ್ಯುವಂಥವನಾಗು. ಹೇ ದೇವನೇ, ಕರ್ಮಫಲಗಳಾದ ನಾನಾ ವಿಶ್ವಗಳನ್ನು ನೀನು ಬಲ್ಲವನಿರುವಿ. ನಮ್ಮ ಕಲ್ಮಷವನ್ನೂ ಪಾಪ ವನ್ನೂ ನಾಶಗೊಳಿಸು. ಹೇ ಅಗ್ನಿಯೇ, ನಾವು ನಿನ್ನನ್ನು ಅನೇಕ ನಮ ನೋಕ್ತಿಗಳಿಂದ ಸ್ತುತಿಸುವೆವು. ಇಲ್ಲಿಗೆ ಅನುವಾದವು ಸಮಾಪ್ತವು.

## ವಿದ್ಯೆ ಅವಿದ್ಯೆಗಳ ವಿವೇಚನೆ

ವಿದ್ಯೆ ಅವಿದ್ಯೆ, ಸಂಭೂತಿ ಅಸಂಭೂತಿ ಇವುಗಳ ಅರ್ಥದ ಬಗ್ಗೆ ಸ್ವಲ್ಪ ವಿವೇಚನೆ ಮಾಡುವದು ಅವಶ್ಯವಿರುವದು. ವಿದ್ಯೆಯೆಂದರೆ ಅವ್ಯಕ್ತದ ಜ್ಞಾನವು. ವಿದ್ಯೆಯ ಉಪಾಸನೆಯೆಂದರೆ ಅವ್ಯಕ್ತದ ಜ್ಞಾನವನ್ನು ಮಾಡಿ-ಕೊಳ್ಳುವ ನಿಷ್ಠಾಯುಕ್ತ ಪ್ರಯತ್ನವು. ಅವಿದ್ಯೆಯೆಂದರೆ ವ್ಯಕ್ತಸೃಷ್ಟಿಯ ಜ್ಞಾನವು. ಅವಿದ್ಯೆಯ ಉಪಾಸನೆಯೆಂದರೆ ವ್ಯಕ್ತಸೃಷ್ಟಿಯ ಜ್ಞಾನವನ್ನು ದೊರಕಿಸುವ ಶ್ರದ್ಧಾಯುಕ್ತ ಯತ್ನವು. ವಿದ್ಯೆ ಅಥವಾ ಅವಿದ್ಯೆ ಇವುಗಳ ಉಪಾಸನೆಯನ್ನು ಪ್ರತ್ಯೇಕವಾಗಿ ಮಾಡುವವರು ಅಂಧಂತಮಸ್ಸಿಗೆ ಹೋಗುವರು. ಆದರೆ ವಿದ್ಯೆ ಹಾಗೂ ಅವಿದ್ಯೆಗಳ ಅಂದರೆ ವ್ಯಕ್ತಾವ್ಯಕ್ತ ಸೃಷ್ಟಿಗಳ ಜ್ಞಾನದ ಸಮನ್ವಯವಾದ ಪರಮಾತ್ಮಜ್ಞಾನವನ್ನು ಅರಿತುಕೊಂಡರೆ ಈ ಎರಡೂ ಜ್ಞಾನಗಳ ಯಥಾರ್ಥ ಉಪಯೋಗವಾಗುವದು. ಇದೇ ಪ್ರಕಾರವಾಗಿ, ಅಸಂಭೂತಿ ಸಂಭೂತಿಗಳ ಅರ್ಥವನ್ನು ಮಾಡಬೇಕು. ಆದರೆ ಸಂಭೂತಿ ಅಂದರೆ ಅವ್ಯಕ್ತವೆಂದೂ ಅಸಂಭೂತಿಯೆಂದರೆ ವ್ಯಕ್ತವೆಂದೂ ತಿಳಿಯತಕ್ಕದ್ದು. ವಿದ್ಯೆ ಹಾಗೂ ಸಂಭೂತಿ ಇವುಗಳಲ್ಲಿಯ ಮತ್ತು ಅವಿದ್ಯೆ ಹಾಗೂ ಅಸಂಭೂತಿ ಇವುಗಳಲ್ಲಿಯ ಸೂಕ್ಷ್ಮಭೇದವನ್ನು ಮರೆಯಕೂಡದು. ವಿದ್ಯೆಯೆಂದರೆ ಅವ್ಯಕ್ತದ ಜ್ಞಾನವು, ಸಂಭೂತಿಯೆಂದರೆ ಪ್ರತ್ಯಕ್ಷ ಆ ಅವ್ಯಕ್ತವೆ. ಅವಿದ್ಯೆಯೆಂದರೆ ವ್ಯಕ್ತದ ಜ್ಞಾನವು, ಅಸಂಭೂತಿಯೆಂದರೆ ಪ್ರತ್ಯಕ್ಷ ಆ ವ್ಯಕ್ತಸೃಷ್ಟಿಯೆ. ವಿದ್ಯೆ ಅವಿದ್ಯೆಗಳ ಉಪಾಸನೆಯೆಂದರೆ ಅನು-ಕ್ರಮವಾಗಿ ಅವ್ಯಕ್ತದ ಜ್ಞಾನದ ಹಾಗೂ ವ್ಯಕ್ತದ ಜ್ಞಾನದ ಉಪಾಸನೆಯು, ಶ್ರವಣಮನನಾದಿಗಳಿಂದ ಅವನ್ನು ಪಡೆಯುವ ಯತ್ನವು. ಸಂಭೂತಿಯ ಹಾಗೂ ಅಸಂಭೂತಿಯ ಉಪಾಸನೆಯೆಂದರೆ ಅನುಕ್ರಮವಾಗಿ ಅವ್ಯಕ್ತದಲ್ಲಿ ಹಾಗೂ ವ್ಯಕ್ತದಲ್ಲಿ ನಿಮಗ್ನವಾಗಿರೋಣ, ಆಸಕ್ತವಾಗಿರೋಣ. ಈ ಭೇದಗಳನ್ನು ಚನ್ನಾಗಿ ಲಕ್ಷದಲ್ಲಿಟ್ಟರೆ ೯-೧೪ ಶ್ಲೋಕಗಳ ಮರ್ಮವು ಹಾಗೂ ಯಥಾರ್ಥತೆಯು ತಿಳಿಯುವದು.

## ಈಶಾವಾಸ್ಯದಲ್ಲಿಯ ಹಲವು ಶಬ್ದಗಳ ಅರ್ಥಗಳು

**ಶಾಂತಿಮಂತ್ರ—** ವಿಘ್ನನಿವಾರಕ ಮಂತ್ರ

**ಅಸುರ್ಯಾ—** ಅಸುರರ, ಕತ್ತಲೆಯುಳ್ಳ.
**ಆತ್ಮಹನ್—** ಆತ್ಮವನ್ನು ಕೊಲ್ಲುವವನು ಅಂದರೆ ಆತ್ಮಜ್ಞಾನವನ್ನು ಮಾಡಿಕೊಳ್ಳಲೆತ್ನಿಸದೆ ಅಜ್ಞಾನದಲ್ಲಿರುವವನು.
**ಅರ್ಶತ್—** ಹೋಗುವ. **ಜಗತ್—** ಚಲಿಸುತ್ತಿರುವ.
**ಸ್ವಿತ್ —** ಸ್ವಲ್ಪಾದರೂ, ಕೊಂಚಾದರೂ.
**ಅಪಃ —** ಕರ್ಮಬೀಜಗಳಾದ ಕರ್ಮಶಕ್ತಿಗಳು- ಈ ವೈದಿಕ ಅರ್ಥವೆ ಇಲ್ಲಿ ಅಭಿಪ್ರೇತವಿರುವದು.
**ಮಾತರಿಶ್ವನ್-** ಆಕಾಶದಲ್ಲಿ ಚಲಿಸುವ-ಮಾತರಿ ಶ್ವಯತಿ ಇತಿ-ಪ್ರಾಣಶಕ್ತಿ.
**ದೇವಾಃ—** ನಿಸರ್ಗ ಶಕ್ತಿಗಳು, ಮನುಷ್ಯನಲ್ಲಿಯ ಶಕ್ತಿಗಳು.
**ನ ವಿಜುಗುಪ್ಸತೇ—** ಹೇಯಭಾವನೆಯನ್ನು ಅಥವಾ ಭಯವನ್ನು ತಾಳುವದಿಲ್ಲ-ಗುಪ್ ರಕ್ಷಣೇ, ಎಂಬ ಧಾತುವಿನಿಂದ ಬಂದದ್ದು.
**ಶುಕ್ರ—** ತೇಜಸ್ವಿಯಾದ. **ಕವಿ—** ಮಂತ್ರದ್ರಷ್ಟರಿಗೆ ಕವಿ ಎಂದು ಕರೆಯುವ ಪರಿಪಾಠವು ವೇದಗ್ರಂಥಗಳಲ್ಲಿರುವದು.
**ವಿದ್ಯಾ—** ಅವ್ಯಕ್ತದ ಜ್ಞಾನ. **ಅವಿದ್ಯಾ—** ವ್ಯಕ್ತದ ಜ್ಞಾನ.
**ಸಂಭೂತಿ—** ಅವ್ಯಕ್ತವು. **ಅಸಂಭೂತಿ—** ವ್ಯಕ್ತವು.
**ಧೀರಾಃ—** ಧೀರರು, ಜ್ಞಾನಿಗಳು-ಧಿಯಾ ರಾತಿ ಇತಿ.
**ವ್ಯೂಹ—** ಸೈನಿಕರನ್ನು ವ್ಯವಸ್ಥಿತವಾಗಿ ಗುಂಪುಗಟ್ಟುವದು.
**ಕ್ರತು—** ಸಂಕಲ್ಪಶಕ್ತಿ. **ರಾಯ—** ಸತ್ಫಲ.
**ವಯುನಾನಿ—** ಕರ್ಮಫಲಗಳು.

## ಈಶಾವಾಸ್ಯೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ಅತ್ಯಂತ ಪ್ರಾಚೀನವೆಂದು ನಿರ್ಧರಿಸಲ್ಪಟ್ಟಿರುವ ದಶೋಪನಿಷತ್ತುಗಳಲ್ಲಿ ಒಂದು ಬಗೆಯಿಂದ ಈಶಾವಾಸ್ಯೋಪನಿಷತ್ತು ಬಹಳ ಮಹತ್ವದ್ದೆಂದು ಹೇಳಬಹುದು. ಎಲ್ಲ ಉಪನಿಷತ್ತುಗಳೂ ಮುಖ್ಯವಾಗಿ ಎಲ್ಲಕ್ಕೂ ಶ್ರೇಷ್ಠಜ್ಞಾನವಾದ ಆತ್ಮಜ್ಞಾನವನ್ನೂ ಮೋಕ್ಷವಿಚಾರವನ್ನೂ ಚರ್ಚಿಸುವವು. ಶುದ್ಧಾತ್ಮರಾದ ಆರ್ಯಋಷಿಗಳ ಮನಸ್ಸಿನಲ್ಲಿ ಹೊಳೆದ ಈ ಉಚ್ಚ ಬ್ರಹ್ಮ-ಜ್ಞಾನದ ಅಂಗ ಉಪಾಂಗಗಳು ಬೇರೆ ಬೇರೆ ಉಪನಿಷತ್ತುಗಳಲ್ಲಿ ಬೇರೆ ಬೇರೆ

ರೀತಿಯಿಂದ ವಿಶದವಾಗಿ ನಿರೂಪಿಸಲ್ಪಟ್ಟಿರುವವು. ಒಂದು ಉಪನಿಷತ್ತಿನಲ್ಲಿ ನಿಷ್ಕಲ ಬ್ರಹ್ಮನ ವರ್ಣನೆ, ಚಿತ್ಸ್ವರೂಪದ ಮೀಮಾಂಸೆ, ಪ್ರಣವಮಂತ್ರದ ಮಹಿಮೆ ಮುಂತಾದವುಗಳು ವರ್ಣಿಸಲ್ಪಟ್ಟಿದ್ದರೆ ಇನ್ನೊಂದರಲ್ಲಿ ಯೋಗ-ಮಾರ್ಗವೂ ಜೀವ ಶಿವ ಸಂಬಂಧವೂ ಚರ್ಚಿಸಲ್ಪಟ್ಟಿರುವವು. ಸಂಪೂರ್ಣ ಬ್ರಹ್ಮಜ್ಞಾನವಾಗಬೇಕಾದರೆ ಈ ಎಲ್ಲ ಅಂಗ ಉಪಾಂಗಗಳ ಅಭ್ಯಾಸವನ್ನೂ ಮನನವನ್ನೂ ನಿದಿಧ್ಯಾಸವನ್ನೂ ಮಾಡುವದು ಅತ್ಯವಶ್ಯಕವಿದೆ. ಈ ದೃಷ್ಟಿಯಿಂದ ನೋಡಲಾಗಿ ಈ ಉಪನಿಷತ್ತು ಬಹಳ ವ್ಯಾಪಕವೂ ಜ್ಞಾನಭಕ್ತಿ-ಕರ್ಮಮಾರ್ಗಗಳನ್ನು ಸಮನ್ವಯದಿಂದ ಉಪದೇಶಿಸುವಂತಹದೂ ಇರುವದು. ಈ ಉಪನಿಷತ್ತಿನಲ್ಲಿದ್ದ ತತ್ತ್ವೋಪದೇಶವು ಸರ್ವಾಂಗಪರಿಪೂರ್ಣವಿರುವದು. ಇದನ್ನೊಂದನ್ನೇ ಓದಿ ಚನ್ನಾಗಿ ಅರಿತುಕೊಂಡರೂ ಆರ್ಯರ ದಿವ್ಯಜ್ಞಾನದ ದರ್ಶನವು ಆಗುವದೆಂಬಲ್ಲಿ ಯಾವ ಸಂಶಯವೂ ಇಲ್ಲ. ಈ ಉಪನಿಷತ್ತು ಬಹಳ ಚಿಕ್ಕದಿದ್ದರೂ ಇದರ ಪ್ರತಿ ವರ್ಣದಲ್ಲಿ, ಪ್ರತಿ ಸ್ವರದಲ್ಲಿ ತತ್ತ್ವಾರ್ಥಗಳು ತುಂಬಿ ನೂಸುತ್ತಿರುವವು. ತಿಳಿದುಕೊಳ್ಳಲಿಕ್ಕೆ ಸ್ವಲ್ಪ ಕ್ಲಿಷ್ಟವಿದ್ದರೂ ಚಿಕ್ಕದಿರುವದರಿಂದ ಪಾಠಮಾಡಲಿಕ್ಕೂ ನೆನಪಿನಲ್ಲಿಡಲಿಕ್ಕೂ ಒಳ್ಳೆ ಅನುಕೂಲವಿರುವದು. ಈ ಉಪನಿಷತ್ತಿನಲ್ಲಿಯ ಮಂತ್ರಸಾಮರ್ಥ್ಯವೂ ಅಗಾಧವಿರುವದು. ಯಾಕಂದರೆ, ಈ ಮಂತ್ರಗಳ ಅಭ್ಯಾಸ ಮಾಡುತ್ತ ಹೋದಹಾಗೆ ಅವುಗಳೊಳಗಿನ ಅರ್ಥವು ಹೆಚ್ಚು ಸ್ಪಷ್ಟವಾಗುತ್ತ ಹೋಗುವದಲ್ಲದೆ ಅವುಗಳಲ್ಲಿಯ ಗೂಢವಾದ ಆಧ್ಯಾತ್ಮಿಕ ರಹಸ್ಯವು ಅರಳುವ ಮೊಗ್ಗೆಗಳ ಸುಗಂಧದಂತೆ ದಿನದಿನಕ್ಕೆ ಹೆಚ್ಚು ಆನಂದವನ್ನುಂಟುಮಾಡುವದು. ಯೋಗಸ್ಥ ಮುನಿಗಳು ಯಾವ ಉಚ್ಚವಾದ ಆಧ್ಯಾತ್ಮಿಕ ಸ್ಥಿತಿಗೆ ಮುಟ್ಟಿ ಈ ಸ್ಫೂರ್ತ ದಿವ್ಯಮಂತ್ರಗಳನ್ನು ತಮ್ಮ ಮುಖದಿಂದ ಉಸುರಿದರೊ ಆ ಆಧ್ಯಾ-ತ್ಮಿಕ ಸ್ಥಿತಿಗೆ ಮುಟ್ಟುವವರೆಗೆ ಈ ಮಂತ್ರಗಳ ಸಂಪೂರ್ಣ ರಹಸ್ಯವು ತಿಳಿಯುವದು ಅಶಕ್ಯವೆಂದು ಹೇಳಬಹುದು. ಹಾಗೆ ಆಗುವವರೆಗೆ ನಮ್ಮ ಬ್ರಹ್ಮಜಿಜ್ಞಾಸೆಯಾದರೂ ಸಂಪೂರ್ಣ ಸಂತುಷ್ಟವಾಗಲಾರದು. ಆದರೆ ಈ ಉಪನಿಷತ್ತಿನ ಸಹಾಯದಿಂದ, ಇದರಲ್ಲಿಯ ಶ್ರೇಷ್ಠ ಮಂತ್ರಗಳ ಧ್ಯಾನದಿಂದ ಆ ಸ್ಥಿತಿಗೆ ಮುಟ್ಟಲೆತ್ನಿಸುವದು ಪ್ರತಿಯೊಬ್ಬನ ಕರ್ತವ್ಯವಷ್ಟೇ !

ಆರಂಭದ ಶಾಂತಿಮಂತ್ರದಲ್ಲಿಯೆ ಪರಮಾತ್ಮನಿಗೂ ವಿಶ್ವಕ್ಕೂ ಇದ್ದ

ವ್ಯಾಪ್ಯವ್ಯಾಪಕ ಸಂಬಂಧವು ಹೇಳಲ್ಪಟ್ಟಿದೆ. ಅನಂತ ಪರಮಾತ್ಮನಲ್ಲಿ ಆತನ ಅನಂತ ಶಕ್ತಿಯ ಪ್ರಭಾವದಿಂದ ಅನಂತ ವಿಶ್ವಗಳ ರಚನೆಯಾಗುವದು. ಆದರೆ ಈ ಸೃಷ್ಟಿಕಾರ್ಯಗಳಿಂದ ಪರಮಾತ್ಮನು ಯಾವಾಗಲೂ ಅಲಿಪ್ತನೆ ಇರುವನು. ಕೇವಲ ತನ್ನ ಲೀಲಾಮಾತ್ರದಿಂದ ಸೃಷ್ಟಿಗಳನ್ನು ಸೃಜಿಸುವ ಪರಮಾತ್ಮನ ಪೂರ್ಣತ್ವಕ್ಕೆ ಇದರಿಂದ ಬಾಧೆ ಬರದು, ಯಾವ ತರಹದ ಕುಂದುಕೊರತೆಗಳೂ ಉಂಟಾಗವು.

ವಿಶ್ವಗಳನ್ನು ಸೃಜಿಸಿ ಪರಮಾತ್ಮನು ತಾನು ದೂರಾಗುವನೆ? ಇಲ್ಲ. ಪರಮಾತ್ಮನು ವಿಶ್ವದ ಅಣುರೇಣುಗಳಲ್ಲಿ ವ್ಯಾಪಿಸಿ ವಾಸಿಸುತ್ತಿರುವನು. ಈ ವಿಶ್ವವೆಲ್ಲವೂ ಅವನ ವಾಸಸ್ಥಾನವು, ಅವನ ಹೊದಿಕೆಯು. ಈ ವಿಶ್ವಗಳನ್ನು ವ್ಯಾಪಿಸಿ ಅವನು ಹೆಚ್ಚಾಗಿ, ಅನಂತನಾಗಿ ಉಳಿದಿರುವನು. ಯಾಕಂದರೆ, ಅವನು ಅನಂತನು, ಅಗಾಧನು. ಇಂತಹ ಪರಮಾತ್ಮನಿಂದ ವ್ಯಾಪ್ತವಾದ ವಿಶ್ವದಲ್ಲಿ ಮಾನವನಿಗೆ 'ತನ್ನದು' ಎಂಬ ವಸ್ತುವು ಎಲ್ಲಿಂದ ಬರಬೇಕು? ಎಲ್ಲವೂ ಪರಮಾತ್ಮನದೆ. ಅವನು ಕೊಟ್ಟಿದ್ದನ್ನೆ ನಾವು ವೈರಾಗ್ಯಯುಕ್ತರಾಗಿ ತ್ಯಾಗಬುದ್ಧಿಯಿಂದ ಉಪಯೋಗಿಸತಕ್ಕದ್ದು. ಇದು ನಮ್ಮದು ಎಂಬ ಭಾವನೆಯಿಂದ ಯಾವದೇ ವಸ್ತುವಿನ ಬಗ್ಗೆ ನಮ್ಮ ಒಡೆತನವನ್ನು ಹೇಳುವದು ಸರ್ವಥಾ ತಪ್ಪು. ಅದು ಸತ್ಯಮಾರ್ಗವಲ್ಲ. ಆದುದರಿಂದ ಶ್ರೇಷ್ಠ ಭಕ್ತನು ಯಾವಾಗಲೂ ಪಾಲಿಗೆ ಬಂದದ್ದೆಲ್ಲ ಈಶಪ್ರಸಾದವೆಂಬ ಭಾವನೆಯಿಂದಲೆ ಭೋಗಿಸುವನು. ಈಶ್ವರದತ್ತ ಪ್ರಸಾದವೆಂದೆ ಅವನು ವಸ್ತುಗಳನ್ನು ಸ್ವೀಕರಿಸುವನು. ಮೊದಲು ಈಶ್ವರಾರ್ಪಣ ಮಾಡಿಯೆ ತಾನು ಸುಖಗಳನ್ನುಪ-ಭೋಗಿಸುವನು. ಸರ್ವವೂ ಪರಮಾತ್ಮನಿಂದ ಅಧಿಷ್ಠಿತವಿರುವದರಿಂದ ಎಲ್ಲವೂ ಅವನದೆ ಎಂಬ ಭಾವನೆಯಿಂದ ಉಪಭೋಗಿಸುವದು ಯೋಗ್ಯ ಮಾರ್ಗವು. ಪರಧನದಲ್ಲಿ ಆಶೆಯನ್ನಿಡದೆ, ಯಾತರಲ್ಲಿಯೂ ಆಸಕ್ತಿಯನ್ನಿಡದೆ ಈಶಸಂಕಲ್ಪದಿಂದ ಲಭಿಸಿದ ವಸ್ತುಗಳನ್ನಷ್ಟೆ ಸ್ವೀಕರಿಸಿ, ಈಶ್ವರಾರ್ಪಣ ಬುದ್ಧಿಯಿಂದ ಅವುಗಳನ್ನು ಸೇವಿಸಿ ಸಂತುಷ್ಟರಾಗುವದು ಎಲ್ಲಕ್ಕೂ ಶ್ರೇಯ-ಸ್ಕರ ಮಾರ್ಗವು.

ವಿಶ್ವವು ಈಶನಿಂದ ವ್ಯಾಪ್ತವೆಂಬ ಮಾತು ನಿಜವು. ಈಶದತ್ತವಾದ ವಸ್ತುಗಳನ್ನು ಈಶಪ್ರಸಾದವೆಂದು ಉಪಭೋಗಿಸತಕ್ಕದ್ದೆಂಬ ಮಾತಾದರೂ

ನಿಜವೇ. ಆದರೆ ನಮ್ಮ ಪ್ರಾಣಧಾರಣೆಗೆ ಅವಶ್ಯವಿದ್ದ ವಸ್ತುಗಳು ನಮ್ಮ ಕೈ ಬಾಯಿಯಲ್ಲಿ ಬಂದು ಬೀಳಬೇಕೆಂದು ಕೈಯೊಡ್ಡಿ ಬಾಯಿ ತೆರೆದು ನಾವು ಕುಳಿತುಕೊಳ್ಳಬೇಕೇ? ಛೇ. ಉಪನಿಷತ್ಕಾರರು ಅಂಥ ದೈವವಾದಿಗಳಲ್ಲ. ಈ ಪ್ರಶ್ನೆಗೆ ಅವರು ಸಮರ್ಪಕ ಹಾಗೂ ಸ್ಪಷ್ಟವಾದ ಉತ್ತರವನ್ನು ಕೊಟ್ಟಿರುವರು. ಅದೇನಂದರೆ, ನಾವು ನಮ್ಮ ಇಡೀ ನೂರು ವರ್ಷದ ಆಯುಷ್ಯವನ್ನು ಕರ್ಮವನ್ನಾಚರಿಸುತ್ತಲೆ ಕಳೆಯತಕ್ಕದ್ದು. ಕರ್ತವ್ಯಪರಾಯಣತೆಯಿಂದ ಸಮವಾಗಿ ನೂರು ವರ್ಷ ಬಾಳುವ ಇಚ್ಛೆಯನ್ನು ನಾವು ಮಾಡಬೇಕೆಂದು ಋಷಿಗಳು ಒತ್ತಿಹೇಳುತ್ತಾರೆ. ಕರ್ಮಬಂಧನದಿಂದ ಮುಕ್ತರಾಗಲಿಕ್ಕಾದರೂ ಇದೇ ಮಾರ್ಗವು. ಕರ್ಮಗಳನ್ನು ಬಿಟ್ಟು ನಡೆಯಲಾಗದು. ಕರ್ಮಗಳನ್ನು ಮಾಡುತ್ತ ಇರುವಾಗ ಸಹ ಇವೆಲ್ಲವೂ ಪರಮಾತ್ಮನವೆ ಎಂಬ ಭಾವನೆಯನ್ನು ಸ್ಥಿರವಾಗಿಟ್ಟುಕೊಳ್ಳಬೇಕು. ಅಂದರೆ ನೀರಿನಿಂದ ನಿರ್ಲಿಪ್ತವಿರುವ ಪದ್ಮಪತ್ರದಂತೆ ಮನುಷ್ಯನಾದರೂ ಕರ್ಮದಿಂದ ಅಂದರೆ ಕರ್ಮಬಂಧನದಿಂದ ಅಲಿಪ್ತನಿರುವನು.

ಬರಿಯ ಕರ್ಮಪರಾಯಣರಾದರೆ ನಮ್ಮ ಕಾರ್ಯವು ಕೈಗೂಡಿದಂತಾಗಲಿಲ್ಲ. ಆತ್ಮಜ್ಞಾನವು ಎಲ್ಲಕ್ಕೂ ಶ್ರೇಷ್ಠವಿರುವದು. ಅದು ಹಸ್ತಗತವಾಗುವವರೆಗೆ ಮಿಕ್ಕ ಎಲ್ಲ ಯತ್ನವೂ ವಿಫಲವು. ಎಲ್ಲ ದುಃಖದ ಬೀಜವು ಅಜ್ಞಾನದಲ್ಲಿಯೆ ಇರುವದು. ಆ ಅಜ್ಞಾನವನ್ನು ನಾಶಗೊಳಿಸಿ ಆತ್ಮಜ್ಞಾನವನ್ನು ಮಾಡಿಕೊಳ್ಳದಿದ್ದರೆ ದುಃಖಚಕ್ರವೂ ಅಜ್ಞಾನದ ಪರಿಣಾಮವಾದ ನಾನಾ ತಾಪಗಳೂ ಎಂದಿಗೂ ತಪ್ಪವು. ಆತ್ಮವೆ ಈ ವಿಶ್ವದ ಮೂಲತತ್ವವು. ಅದರ ನಿಜಸ್ವರೂಪವನ್ನು ಚನ್ನಾಗಿ ಅರಿತುಕೊಳ್ಳಲಿಕ್ಕೆಬೇಕು. ಅದು ಎಲ್ಲಕ್ಕೂ ಪೂರ್ವದಲ್ಲಿದ್ದದ್ದು, ಎಲ್ಲೆಲ್ಲಿಯೂ ಇರತಕ್ಕದ್ದು. ಕೇವಲ ಇಂದ್ರಿಯಗಳಿಂದ ಅದರ ಜ್ಞಾನವು ಆಗದು. ಅದು ಇಂದ್ರಿಯಾತೀತ ವಸ್ತುವು. ಅದು ಅಗೋಚರವು, ಕಾಣಲಿಕ್ಕೆ ಪರಸ್ಪರ ವಿರುದ್ಧವಾದ ಗುಣಗಳಿಂದ ಅದು ಯುಕ್ತವು. ಯಾಕಂದರೆ, ಅದು ಎಲ್ಲ ವಿರೋಧಗಳಾಚೆಗಿದ್ದು ಅನಂತಗುಣವೂ ಅನಂತಶಕ್ತಿಯೂ ಇರುವದು. ಅದು ಸರ್ವರ ಬಾಹ್ಯಾಂತರಗಳನ್ನು ಸಂಪೂರ್ಣವಾಗಿ ವ್ಯಾಪಿಸಿರುವದು. ಇಂತಹ ಆತ್ಮನ ಅನುಭವಾತ್ಮಕ ಜ್ಞಾನವಾದವನು ಧನ್ಯನು. ಯಾಕಂದರೆ, ಮೋಹ, ದುಃಖ, ಭಯ, ಶೋಕಾದಿಗಳು ಬಿಸಿಲಿನ

ಮುಂದಿನ ಮಂಜಿನಂತೆ, ಗಾಳಿಯ ಮುಂದಿನ ಮೋಡದಂತೆ ಅವನಿಂದ ದೂರ ಹರಿದು ಹಾರಿಹೋಗುವವು.

ಸೂಕ್ಷ್ಮನೂ ಅಶರೀರನೂ ಶುದ್ಧನೂ ಇರುವ ಆ ಆತ್ಮನೇ ಸ್ವಶಕ್ತಿಯಿಂದ ಎಲ್ಲ ದಿಕ್ಕಿಗೂ ಪಸರಿಸಿ ಈ ಸೃಷ್ಟಿಯನ್ನುತ್ಪನ್ನಮಾಡಿದನು. ಅದರ-ಲ್ಲಿಯ ಎಲ್ಲ ಪದಾರ್ಥಗಳನ್ನೂ ನಿಯಮಬದ್ಧ ಮಾಡಿದವನು, ಹಾಗೂ ಈಗ್ಯೂ ನಿಯಮನ ಮಾಡುತ್ತಿರುವವನು ಆ ಸ್ವಯಂಭುವಾದ ಪರಮಾತ್ಮನೇ. ಆದರೆ ಈ ನಿಯಮಬದ್ಧ ಅಥವಾ ಧರ್ಮಬದ್ಧವಾದ ವಿಶ್ವದ ನಿಯಮಗಳನ್ನರಿತುಕೊಂಡು ಅದರಂತೆ ನಡೆದರಾಯ್ತು, ಹೆಚ್ಚಿನ ತಾತ್ವಿಕ ವಿಚಾರವು ನಮಗೇಕೆ, ಎಂದು ಕೆಲವರು ಅನ್ನಬಹುದು. ಮತ್ತೆ ಕೆಲವರು, ಈ ವಿಶ್ವನಿಯಮಗಳಿಂದ ನಮಗೇನು ಪ್ರಯೋಜನ, ಅದರ ಮರ್ಮವನ್ನು ತಿಳಿದುಕೊಂಡು ಯಾವ ಅವ್ಯಕ್ತದಿಂದ ಈ ವಿಶ್ವವು ಉತ್ಪನ್ನವಾಯಿತೊ ಅದನ್ನಷ್ಟೆ ಅರಿತುಕೊಂಡು ಅದರ ಉಪಾಸನೆ ಮಾಡಿದರಾಯಿತು, ಎಂದು ಅನ್ನಬಹುದು. ಆದರೆ ಈ ಇಬ್ಬರೂ ತಪ್ಪುತಿಳುವಳಿಕೆಯುಳ್ಳವರು. ಸತ್ಯವಸ್ತುವಿನ ಏಕಾಂಗವನ್ನೆ ನೋಡಿ ಅದಷ್ಟೇ ಪೂರ್ಣ ಸತ್ಯವೆಂದು ಅವರು ತಿಳಿಯುವರು. ಇವೆರಡೂ ಸಾಪೇಕ್ಷಸತ್ಯಗಳು. ಇವುಗಳಲ್ಲಿ ಪ್ರತ್ಯೇಕವಾಗಿ ಒಂದೊಂದರ ಜ್ಞಾನವಷ್ಟೇ ಇದ್ದರೆ ಅದೊಂದು ಮಾದರಿಯ ಅಜ್ಞಾನವೆಂದೆ ಹೇಳಬಹುದು. ಬರಿಯ ವ್ಯಕ್ತದ ಜ್ಞಾನವಾಗಲಿ, ಉಪಾಸನೆಯಾಗಲಿ, ಮನುಷ್ಯನಿಗೆ ಮುಕ್ತಿಯನ್ನು ಕೊಡಲಾರದು. ಯಾಕಂದರೆ, ಬರಿಯ ವ್ಯಕ್ತವೆಂದರೆ ಅವ್ಯಕ್ತದಿಂದ ಸ್ಥಲ-ಕಾಲಗಳಲ್ಲಿ ನಿರ್ಮಿಸಲ್ಪಟ್ಟ ನಾಮರೂಪವಿಶೇಷವು. ವ್ಯಕ್ತವು ಚಲವೂ ಚಂಚಲವೂ ಕ್ಷಣಭಂಗುರವೂ ದುಃಖಮಯವೂ ಅಪೂರ್ಣವೂ ಇರುವದು. ಇನ್ನು ಬರಿಯ ಅವ್ಯಕ್ತದ ಜ್ಞಾನವಾಗಲಿ, ಉಪಾಸನೆಯಾಗಲಿ, ಅದೂ ಒಂದು ಮಾದರಿಯ ಅಜ್ಞಾನವೆ ಸೈ. ಅವ್ಯಕ್ತವೆಂದರೆ ಪರಮಾತ್ಮನ ಅಗೋಚರವಾದ ತಪಃಶಕ್ತಿಯು, ವಿಶ್ವವನ್ನು ನಿರ್ಮಿಸುವ ಪರಮಾತ್ಮನ ವಿಶಿಷ್ಟ ಶಕ್ತಿಯು, ಆದರೆ ಸಂಪೂರ್ಣ ಪರಮಾತ್ಮನಲ್ಲ. ಆದುದರಿಂದ ಬರಿಯ ಅವ್ಯಕ್ತದ ಉಪಾಸನೆಯಿಂದ ಮನುಷ್ಯನು ಒಂದು ಬಗೆಯ ಆನಂದರಹಿತ ಶೂನ್ಯರೂಪವನ್ನು ಸಾಕ್ಷಾತ್ಕರಿಸಬಹುದು. ಆದರೆ ಅವನು ನಿತ್ಯಾನಂದಗತಿಗೆ ಎರವಾಗುವನು.

ಹಾಗಾದರೆ ನಿಜವಾದ ಮುಕ್ತಿಯ ಉಪಾಯವು ಯಾವುದು? ವ್ಯಕ್ತ ಅವ್ಯಕ್ತಗಳನ್ನೊಳಕೊಂಡು ಅವುಗಳಾಚೆಗಿರುವ ಪರಮಾತ್ಮನ ಜ್ಞಾನವೆ ನಿಜವಾದ ಮೋಕ್ಷದ ತಳಹದಿಯು. ಕ್ಷರ ಅಕ್ಷರಗಳನ್ನು ದಾಟಿ ಇರುವ ಪರಾತ್ಪರ ತತ್ವವು ಸ್ವಯಂಪ್ರಕಾಶವಾಗಿ ಕಂಗೊಳಿಸುವದು. ಆ ಪರಮಾತ್ಮನೆ ಈ ಕ್ಷರ ಅಕ್ಷರಗಳ ಸ್ವಾಮಿಯು, ಈ ವ್ಯಕ್ತ ಅವ್ಯಕ್ತಗಳ ಈಶ್ವರನು. ಕಠೋಪನಿಷತ್ತಿನಲ್ಲಿ ಪರಮಪುರುಷನೆಂದೂ ಶ್ವೇತಾಶ್ವತರದಲ್ಲಿ ದೇವನೆಂದೂ ಶ್ರೀಮದ್ಭವದ್ಗೀತೆಯಲ್ಲಿ ಪುರುಷೋತ್ತಮನೆಂದೂ ಹೇಳಲ್ಪಟ್ಟ ಅತ್ಯಂತ ಶ್ರೇಷ್ಠ ತತ್ವವು ಇದೇ. ಈ ತತ್ವಜ್ಞಾನದಿಂದಲೆ, ಈ ಪರಮಾತ್ಮನ ಸಾಕ್ಷಾತ್ಕಾರದಿಂದಲೆ ನಿತ್ಯಾನಂದದಾಯಿಯಾದ ಮುಕ್ತಿಯು ದೊರೆಯುವದು. ಆ ಪರಮಾತ್ಮನ ನಿಜಜ್ಞಾನದ ಹೊರ್ತು ಮಿಕ್ಕ ಜ್ಞಾನಗಳೆಲ್ಲ ಅಜ್ಞಾನಗಳೆ ಅಥವಾ ಸಾಪೇಕ್ಷ ಜ್ಞಾನಗಳೆ. ಅವು ನಿಜಜ್ಞಾನವೆಂದೆನಿಸಿಕೊಳ್ಳಲಿಕ್ಕೆ ಯೋಗ್ಯವಲ್ಲ. ಯಾವ ಪ್ರಕಾರವಾಗಿ ತೇಜೋಮಯ ಸೂರ್ಯನ ಸಂಪೂರ್ಣ ಜ್ಞಾನವಾಗುವವರೆಗೆ ಸೂರ್ಯನ ಸುತ್ತಲು ಭ್ರಮಿಸುತ್ತಿರುವ ಗ್ರಹಗಣದ ಪೂರ್ಣಜ್ಞಾನವಾಗಲಾರದೊ ಅದೇ ಪ್ರಕಾರವಾಗಿ ತನ್ನ ಅಂಶಶಕ್ತಿಗಳಿಂದ ಕ್ಷರಾಕ್ಷರಗಳನ್ನು ಲೀಲೆಯಿಂದ ನಿರ್ಮಿಸಿ ತನ್ನ ಆನಂದಸ್ವರೂಪದಲ್ಲಿ ನಿತ್ಯ ನಿರಂತರ ನಿರತನಿದ್ದ ಪರಮಾತ್ಮನ ಜ್ಞಾನವಾಗುವವರೆಗೆ ಕ್ಷರಾಕ್ಷರಗಳ ಜ್ಞಾನವು ಸಂಪೂರ್ಣವೆನಿಸಲಾರದು. ಆ ಪರಮಾತ್ಮನ ಜ್ಞಾನವಾದ ಬಳಿಕ ಈ ಕ್ಷರಾಕ್ಷರಗಳ ಅಥವಾ ವ್ಯಕ್ತಾವ್ಯಕ್ತಗಳ ಜ್ಞಾನವು ಸಾರ್ಥವಾಗುವದು, ಸಫಲವಾಗುವದು. ಈ ವಿಶ್ವದಲ್ಲಿಯ ಎಲ್ಲ ವಸ್ತುಗಳ ಪರಸ್ಪರ ಸಂಬಂಧವು ತಿಳಿದು ಪರಮ ಪದವನ್ನೂ ನಿತ್ಯಾನಂದಕರವಾದ ಮುಕ್ತಿಯನ್ನೂ ಹೇಗೆ ಪಡೆಯಬೇಕೆಂಬುದು ತೀವ್ರ ಗೊತ್ತಾಗುವದು. ಆಮೇಲೆ ಅಜ್ಞಾನವಾಗಲಿ ಅಪೂರ್ಣತೆಯಾಗಲಿ ಹೇಳಹೆಸರಿಲ್ಲದಂತೆ ನಷ್ಟವಾಗುವದು, ಅಚ್ಚ ಅರಿವಿನ ಬೆಳಕು ಬೆಳಗುವದು ಹಾಗೂ ಜ್ಞಾನದ ಹಸಿವು ಹಿಂಗುವದು.

ಆದರೆ ಆ ಮಹಾಮಹಿಮ ಪರಮಾತ್ಮನ ಜ್ಞಾನವಾಗುವ ಬಗೆ ಹೇಗೆ? ಈ ಮೋಹಕವಾದ ವಿಶ್ವವು ನಮ್ಮ ಇಂದ್ರಿಯಗಳನ್ನು ಆಕರ್ಷಿಸಿ ನಮ್ಮ ಮನಸ್ಸನ್ನು ವಿಷಯಗಳಲ್ಲಿ ತೊಡಕಿಸಿಬಿಡುತ್ತದೆ. ಪರಮಾತ್ಮನು ಎಲ್ಲೆಲ್ಲಿಯೂ ವ್ಯಾಪ್ತನಿದ್ದರೂ ಅವನು ಈ ಹೊಂಬಣ್ಣದ ಹೊದಿಕೆಯಿಂದ ಮರೆ

ಮಾಡಲ್ಪಟ್ಟಿರುವನು. ಪ್ರಕೃತಿಯೆಂಬ ತ್ರಿಗುಣಮಯ ಮಾಯೆಯ ಮೊಬಣ್ಣದ ಸುಂದರವಾದ ಆಚ್ಛಾದನದಿಂದ ಸತ್ಯರೂಪವು ಮುಚ್ಚಲ್ಪಟ್ಟಿರುವದು. ಆದುದರಿಂದ ನಮಗೆ ಸತ್ಯಜ್ಞಾನವು ಬೇಕಾಗಿದ್ದರೆ ಎಲ್ಲ ಪ್ರಕಾಶದ ಉಗಮಸ್ಥಾನವಾದ ಸೂರ್ಯನ ಉಪಾಸನೆಯನ್ನೆ ಮಾಡಬೇಕಾಗುವದು. ನಮಗೆ ಬರಿಯ ಇಂದ್ರಿಯಗೋಚರ ಪ್ರಕಾಶದಿಂದ ಪ್ರಯೋಜನವಿಲ್ಲ. ನಮಗೆ ಅಂತಃಪ್ರಕಾಶವು, ಜ್ಞಾನಜ್ಯೋತಿಯು ಬೇಕಾಗಿರುವದು. ಆದುದರಿಂದ ಚಿತ್ಸೂರ್ಯನ ಅಥವಾ ಜ್ಞಾನಸೂರ್ಯನ ಉಪಾಸನೆಯೆ ನಮಗೆ ವಿಹಿತವಾದದ್ದು. ಈ ದೃಶ್ಯಸೂರ್ಯನು ದೃಶ್ಯಸೃಷ್ಟಿಯ ಪೋಷಕನೂ ನಿಯಾಮಕನೂ ಪ್ರಾಣದಾತನೂ ಪ್ರಕಾಶದಾತನೂ ಇರುವಂತೆ ಜ್ಞಾನಸೂರ್ಯನು ಚಿತ್ಸೃಷ್ಟಿಯ ಪೋಷಕನೂ ಪ್ರಕಾಶಕನೂ ಇರುವನು. ಅವನೇ ನಮಗೆ ತನ್ನ ಸ್ವರೂಪವನ್ನು ಪ್ರಕಟಮಾಡಿ ತೋರಿಸುವನು. ಏಕನಿಷ್ಠ ಭಕ್ತನಿಗೆ ಯಾವದು ತಾನೇ ಅಸಾಧ್ಯ? ಜ್ಞಾನಸೂರ್ಯನ ಏಕಾಂತಭಕ್ತನಿಗೆ ಜ್ಞಾನದ ಸಾಕ್ಷಾತ್ಕಾರವಾಗುವದು ನಿಃಸಂಶಯವು. ಸಾಕ್ಷಾತ್ಕಾರದ ಸಮಯದಲ್ಲಿ ಆ ಜ್ಞಾನಸೂರ್ಯನಲ್ಲಿಯ ಜ್ಞಾನಪುರುಷನ ಕೂಡ ಈ ಭಕ್ತನು ಐಕ್ಯವನ್ನನುಭವಿಸುವನು.

ಸಾಕ್ಷಾತ್ ಸತ್ಯಸ್ವರೂಪದ ದರ್ಶನವಾದ ಬಳಿಕ 'ನಾನು' ಎಂದು ಸಂಬೋಧಿಸಲ್ಪಡುತ್ತಿರುವ ವ್ಯಕ್ತಿಯಲ್ಲಿ ಕ್ಷಣಭಂಗುರ ಭಾಗವು ಯಾವುದು, ಅಮೃತಭಾಗವು ಯಾವದು ಎಂಬುದರ ಅರಿವು ನಿಚ್ಚಳವಾಗಿ ಆಗುವದು. ವೃಥಾ ಅಹಂಭಾವದ ಕಲ್ಪನೆಯು ಅಳಿದು ಹೋಗುವದು. ಜ್ಞಾನವಾಗುವವರೆಗೆ ಪ್ರಧಾನವಿದ್ದ ದೇಹಾತ್ಮಭಾವವು ನಷ್ಟವಾಗಿ ಜ್ಞಾನಸೂರ್ಯನ ಅನುಗ್ರಹದಿಂದ ಸತ್ಯದ ಅರಿವು ಚಿತ್ತದಲ್ಲಿ ನಿರಂತರ ನೆಲೆಗೊಳ್ಳುವದು. ಭಕ್ತನ ಕೃತಕರ್ಮವೆಲ್ಲ ನಷ್ಟವಾಗಿ ಹೋಗುವ ಸಮಯವು ಇದೇ. ಜ್ಞಾನಾಗ್ನಿಯಿಂದ ಒಮ್ಮೆ ದಗ್ಧವಾದ ಕರ್ಮವು ಮುಂದೆ ಎಂದಿಗೂ ಬಂಧಕವಾಗಲಾರದು. ಅಗ್ನಿಯ ಝಳ ತಾಕಿದ ಬೀಜವು ಹೇಗೆ ಮೊಳೆಯಲಾರದೊ ಹಾಗೆಯೆ ಜ್ಞಾನಸ್ಪರ್ಶವಾದ ಕರ್ಮವು ಮನುಷ್ಯನನ್ನು ತನ್ನ ನಿರ್ಘೃಣ ಪಾಶದಿಂದ ಕಟ್ಟಲಾರದು. ಆದರೆ ಸಾಕ್ಷಾತ್ಕಾರವಾದ ಮಾತ್ರಕ್ಕೆ ಸಾಧನವು ಸಮಾಪ್ತವಾಯಿತೆಂದು ತಿಳಿಯಕೂಡದು. ಸಾಕ್ಷಾತ್ಕಾರವಾಗುವ ವರೆಗೆ

ಉಪಾಸಕನು ನಾನಾ ಉಪಾಸನೆಗಳಿಂದ ತನ್ನ ಜ್ಞಾನಜ್ವಾಲೆಯನ್ನು ಎಚ್ಚರಗೊಳಿಸುವನು. ಅದು ಅಂತರ್ಜಾಗ್ರತಿಯಾದಂತಾಯಿತು. ಆ ಜಾಗ್ರತಿಯು ಅವನನ್ನು ಜ್ಞಾನಸೂರ್ಯನ ಬಿಂಬದ ವರೆಗೆ ಒಯ್ದು ಮುಟ್ಟಿಸುವದು. ಆ ಅಂತರ್ಜ್ಯೋತಿಗೆ ಶತಶಃ ನಮಸ್ಕಾರ ಮಾಡಿ ನಾವು ಅದನ್ನು ಪ್ರಸನ್ನ ಮಾಡಿಕೊಳ್ಳತಕ್ಕದ್ದು. ಅಂದರೆ ಸಕಲ ಪಾಪಗಳೂ ಅಪೂರ್ಣತೆಗಳೂ ಸುಟ್ಟು ಹೋಗಿ ನಿಷ್ಪಾಪ ಸಂಪೂರ್ಣ ಪರಮಾತ್ಮನ ಜ್ಞಾನದಲ್ಲಿ ಸ್ಥಿತರಾಗುವೆವು.

ಸಂಕ್ಷೇಪದಿಂದ ಮೇಲ್ಕಾಣಿಸಿದ ಎಲ್ಲ ವಿಚಾರಗಳೂ ಅನುಭವಗಳೂ ಅನುಭವದ ಮಾರ್ಗಗಳೂ ಈಶಾವಾಸ್ಯೋಪನಿಷತ್ತಿನ ಹದಿನೆಂಟು ಶ್ಲೋಕಗಳಲ್ಲಿ ಅಡಕವಾಗಿರುವವು. ಇದರ ಮೇಲಿಂದ ಈ ಉಪನಿಷತ್ತಿನ ಭಾಷಾಸರಣಿಯು ಎಷ್ಟು ಗೂಢವೂ ಗಂಭೀರವೂ ಯೋಗಯುಕ್ತವೂ ಇರುವದೆಂಬದು ಸ್ಪಷ್ಟವಾಗುವದು. ಋಷಿಗಳು ಹೇಳಿಕೇಳಿ ಮಂತ್ರದ್ರಷ್ಟರು, ಅಂದರೆ ಮಂತ್ರಗಳನ್ನು ಸ್ಫೂರ್ತಿಯಿಂದ, ದಿವ್ಯ ದೃಷ್ಟಿಯಿಂದ ಸಾಕ್ಷಾತ್ಕರಿಸಿದವರು. ಸಾಮಾನ್ಯ ತರ್ಕದಿಂದ ತಿಳಿಯಲಶಕ್ಯವಾದ ಆಧ್ಯಾತ್ಮಿಕ ಸತ್ಯಗಳನ್ನು ತಮ್ಮ ಯೋಗಸಾಮರ್ಥ್ಯದಿಂದ ಅನುಭವಿಸಿದವರವರು. ಆ ತಮ್ಮ ಸ್ಫೂರ್ತಿಯ ಸರಣಿಗನುಸರಿಸುವಂಥ ಭಾಷೆಯನ್ನೇ ಉಪನಿಷತ್ತಿನಲ್ಲಿ ಅವರು ಉಪಯೋಗಿಸುವರು. ಆದುದರಿಂದ ಈ ಉಪನಿಷತ್ತು ನಡುನಡುವೆ ಕೀಲಿ ತಪ್ಪಿದಂತೆಯೂ ಅಸಂಬದ್ಧವಿದ್ದಂತೆಯೂ ಒಮ್ಮೊಮ್ಮೆ ಭಾಸವಾಗುತ್ತದೆ. ಆದರೆ ಉಪನಿಷತ್ತುಗಳು ಒಂದೆರಡು ಸಾರಿ ಅಥವಾ ನೂರಾರು ಸಾರಿ ಕೇವಲ ಬುದ್ಧಿಯ ಸಹಾಯದಿಂದ ಓದಿದರೆ ತಿಳಿಯುವ ಗ್ರಂಥಗಳಲ್ಲ. ಯೋಗದಿಂದಲೂ ಧ್ಯಾನಾದಿ ಮಾನಸಿಕ ಅಭ್ಯಾಸದಿಂದಲೂ ನಮ್ಮ ಚಿತ್ತವನ್ನು ಉಚ್ಚಸ್ಥಿತಿಗೆ ಒಯ್ಯದೆ ಉಪನಿಷತ್ತುಗಳ ನಿಜವಾದ ಹುರುಳು ತಿಳಿಯುವದು ಅಶಕ್ಯವು. ಉಪನಿಷತ್ತುಗಳಲ್ಲಿಯೆ ಉಕ್ತವಾದ ಯೋಗಮಾರ್ಗದಿಂದ ಸಾಧಕರು ಸಾಗಿದರೆ ಉಪನಿಷತ್‌ಮಂತ್ರಗಳಲ್ಲಿ ಅಡಕವಾದ ಗಹನ ಗಂಭೀರ ಅರ್ಥವು ಹೊಳೆದು ಅವರು ಕೃತಾರ್ಥರಾಗುವರು. ಗುಡ್ಡದ ಮೇಲೆ ಏರುವವರು ಒಂದೊಂದು ಹೆಜ್ಜೆ ಮೇಲಕ್ಕೇರಿದಂತೆ ಕೆಳಗಿನ ವಿಶಾಲ ಸೃಷ್ಟಿಯು ಬಿಚ್ಚಿದ ಪಟದಂತೆ ಅವರ ಕಣ್ಣಿಗೆ ಸ್ಪಷ್ಟವಾಗಿ ತೋರುವಂತೆ ಈ ಸಾಧನದಲ್ಲಿ ಹೆಚ್ಚು ಮುಂದಕ್ಕೆ ಹೋದ ಹಾಗೆ ಮಂತ್ರಗಳ ರಹಸ್ಯವು ವಿಶದ

ವಾಗುತ್ತ ಹೋಗಿ ಮನಸ್ಸಿಗೆ ಆಲ್ಹಾದವೂ ಆನಂದವೂ ಉಂಟಾಗುವವು. ಈ ಸಂಗತಿಗಳು ಪ್ರತ್ಯಕ್ಷ ಅನುಭವದಿಂದಲೆ ತಿಳಿಯತಕ್ಕವುಗಳು. ಒಮ್ಮೆ ಆ ಸತ್ಯ ವಸ್ತುವಿನ ಅನುಭವವಾಯಿತೆಂದರೆ ಆ ಅನುಭವವನ್ನು ಸ್ಪಷ್ಟವಾದ ಭಾಷೆ ಯಲ್ಲಿ ವ್ಯಕ್ತಮಾಡಿ ತೋರಿಸಬಹುದು. ಆದರೆ ಇಂತಹ ಭಾಷೆಯಲ್ಲಿ ಆ ಉಪನಿಷತ್ ಮಂತ್ರಗಳಲ್ಲಿದ್ದ ಸ್ಫೂರ್ತಿಯು ಎಲ್ಲಿಂದ ಬರಬೇಕು? ತರ್ಕ ಯುಕ್ತ ಭಾಷೆಯು ಬುದ್ಧಿಯನ್ನು ಒಪ್ಪಿಸಬಹುದು. ಆದರೆ ಇಡೀ ಚಿತ್ತ ಶಕ್ತಿಯನ್ನು ಸಂತೋಷಪಡಿಸಿ ನಮ್ಮ ಮುಂದೆ ಸತ್ಯಸೂರ್ಯನ ಬಿಂಬವನ್ನು ತಂದು ನಿಲ್ಲಿಸುವ ಸಾಮರ್ಥ್ಯವು ಸ್ಫೂರ್ತಿಯುಕ್ತವಾದ ದಿವ್ಯ ಉಪನಿಷತ್ ಮಂತ್ರಗಳಲ್ಲಿಯೆ ಇರುವದು !

ಇನ್ನು ಈ ಉಪನಿಷತ್ತಿನಲ್ಲಿಯ ತತ್ವಗಳನ್ನೆ ತರ್ಕಶುದ್ಧವಾದ ಭಾಷೆ ಯಲ್ಲಿ ಬರೆದು ಈ ನಾಲ್ಕು ನುಡಿಗಳನ್ನು ಮುಗಿಸುವಾ. ವೇದಾಂತದಲ್ಲಿಯ ಅಂಗೋಪಾಂಗಗಳನ್ನು ಬದಿಗಿಟ್ಟು ಅದರಲ್ಲಿಯ ಮುಖ್ಯವಿಷಯಗಳ ವಿಚಾರ ಮಾಡಿದರೆ ಜೀವ, ಜಗತ್, ಈಶ್ವರ, ಇವುಗಳ ಪರಸ್ಪರ ಸಂಬಂಧವು ಮತ್ತು ಜೀವನ ಮೋಕ್ಷಸಾಧನೆಯು ಈ ಎರಡು ವಿಷಯಗಳು ಉಳಿಯುವವು. ಜೀವಾ ತ್ಮನು ಕರ್ಮಭೂಮಿಯಲ್ಲಿ ಅವತರಿಸಿರುವದರಿಂದ ಅವನಿಗೆ ಕರ್ಮವು ಬಿಟ್ಟಿ ದ್ದಲ್ಲ. ಅವನು ಕರ್ಮವನ್ನು ಮಾಡಿಯೆ ತೀರಲಿಕ್ಕೆ ಬೇಕು. ವಸ್ತುತಃ ಕರ್ಮವು ಯಾರಿಗೂ ಬಿಟ್ಟಿದ್ದಲ್ಲ. ಆದರೆ ಕೇವಲ ಕರ್ಮದಲ್ಲಿಯೆ ನಿಮಗ್ನ ನಾಗಿರುವದೆಂದರೆ ಮನುಷ್ಯನು ಒಂದು ಯಂತ್ರವಾಗಿ ಪರಿಣಮಿಸಿದಂತೆಯೆ ಸೈ. ಕರ್ಮಕ್ಕೆ ತುದಿಮೊದಲುಗಳೆ ಇಲ್ಲ. ಆದುದರಿಂದ ತಾವು ಮಾಡುವ ಕರ್ಮವು ಯಾವ ಮಾದರಿಯದಿರುವದು ಹಾಗೂ ಅದನ್ನು ಯಾವ ಬುದ್ಧಿ ಯಿಂದ ಮಾಡಿದರೆ ತಾನು ಅದರಿಂದ ಅಲಿಪ್ತನಿರುವದು ಶಕ್ಯವು, ಇದನ್ನು ತಿಳಿದುಕೊಳ್ಳದೆ ಜೀವಾತ್ಮನಿಗೆ ಸಮಾಧಾನವಾಗಲಾರದು. ಇದನ್ನು ತಿಳಿದು ಕೊಳ್ಳಬೇಕಾದರೆ ಈ ವಿಶ್ವದ ಅಥವಾ ಕರ್ಮಭೂಮಿಯ ಕರ್ತನು ಯಾರು ಏನು ಎಂಬ ಪ್ರಶ್ನೆಗಳು ಉದ್ಭವಿಸುವವು. ಈ ವಿಶ್ವವು ಒಂದೇ ಒಂದು ಶಕ್ತಿ ಯಾದ ಪರಮಾತ್ಮನಿಂದ ಹುಟ್ಟಿರುವದರಿಂದಲೂ ಆ ಪರಮಾತ್ಮನು ಅಣು ರೇಣುಗಳಲ್ಲಿಯೂ ವ್ಯಾಪ್ತನಿರುವದರಿಂದಲೂ ನಾವು ಕರ್ಮ ಮಾಡಬೇಕಾ ದರೆ ಅಥವಾ ವಸ್ತುಗಳನ್ನುಪಯೋಗಿಸಬೇಕಾದರೆ ಈಶನ ಹಾಗೂ ಜಗತ್ತಿನ

ಈ ಸಂಬಂಧವನ್ನು ಅರಿತುಕೊಂಡು ಈ ಅರಿವನ್ನು ಸಾಕ್ಷಿಯಾಗಿಟ್ಟುಕೊಳ್ಳ ಬೇಕಾಗುತ್ತದೆ. ಅಂದರೆ ಕರ್ಮಮಾಡುವಾಗ ಈಶ್ವರಾರ್ಚನೆಯ ಬುದ್ಧಿಯೂ ವಸ್ತುಗಳನ್ನು ಉಪಯೋಗಿಸುವಾಗ ಈಶಪ್ರಸಾದವನ್ನು ಸೇವಿಸುತ್ತಿರುವೆ ವೆಂಬ ಬುದ್ಧಿಯೂ ಸಹಜವೆ ನೆಲೆಗೊಳ್ಳುತ್ತದೆ. ಈ ಭಾವನೆಯನ್ನಿಟ್ಟು ನಾವು ಕರ್ಮಮಾಡುತ್ತ ಹೋದರೆ ನಮ್ಮ ಕರ್ಮಕ್ಕೆ ಒಂದು ಬಗೆಯ ಪೂರ್ಣತ್ವವೂ ಯಥಾರ್ಥತೆಯೂ ಬರುವದು. ಈ ಭಾವನೆಯ ಅತ್ಯಂತ ವಿಕಾಸವೆ ಭಕ್ತಿಯ ಪರಮಾವಧಿಯು. ಆದರೆ ಕರ್ಮಭಕ್ತಿಗಳ ಈ ನಿಜಾರ್ಥವೂ ಸತ್ಯಧೋರ ಣವೂ ಯಾವಾಗಲೂ ಕಣ್ಣು ಮುಂದೆ ಇರಬೇಕಾದರೆ ಜ್ಞಾನದ ಸಾಕ್ಷಾ ತ್ಕಾರವಾಗಲಿಕ್ಕೆ ಬೇಕು. ಜ್ಞಾನಸಾಕ್ಷಾತ್ಕಾರವಾಗಿ ಪುರುಷೋತ್ತಮನ ಪ್ರತ್ಯಕ್ಷ ದರ್ಶನವು ನಮ್ಮ ಚಿತ್ಸರ್ವಸ್ವಕ್ಕೆ ಆಯಿತೆಂದರೆ ನಮ್ಮ ಎಲ್ಲ ಕರ್ಮ ಗಳು ಯಥಾರ್ಥವಾಗಿ, ಅರ್ಥ ಪೂರ್ಣವಾಗಿ, ನಮ್ಮ ಎಲ್ಲ ಭಕ್ತಿಭಾವನೆಯು ಸಾರ್ಥವಾಗಿ ಮುಕ್ತಿಯು ನಮ್ಮ ಕೈಸೇರಿತೆಂದು ತಿಳಿಯಬೇಕು. ಮೋಕ್ಷ ಸಾಧನದ ಮಾರ್ಗದಲ್ಲಿ ಸಾಗುವಾಗ ಕರ್ಮವೆಂದರೆ ನಮ್ಮ ಕೈಕಾಲುಗಳಿ ದ್ದಂತೆ, ಭಕ್ತಿಯೆಂದರೆ ನಮ್ಮ ಅಂತಃಕರಣವಿದ್ದಂತೆ, ಜ್ಞಾನವೆಂದರೆ ನಮ್ಮ ಕಣ್ಣುಗಳಿದ್ದಂತೆ. ಇದು ಒಂದು ರೂಪಕವಾಯಿತು. ಇನ್ನು ಅಂತಃಶಕ್ತಿಗಳ ದೃಷ್ಟಿಯಿಂದ ನೋಡಲಾಗಿ ಕರ್ಮವೆಂದರೆ ನಮ್ಮ ಇಚ್ಛಾಶಕ್ತಿಯ ಅಥವಾ ಸಂಕಲ್ಪಶಕ್ತಿಯ ಬಾಹ್ಯಪರಿಣಾಮವು, ಭಕ್ತಿಯು ನಮ್ಮ ಪ್ರೇಮಭಾವನೆಯ ಪರಿಣತಿಯು, ಜ್ಞಾನವೆಂದರೆ ನಮ್ಮ ಚಿತ್‌ಶಕ್ತಿಯ ನಿಜಸ್ವರೂಪವು. ಪರ ಮಾತ್ಮನು ದಯಪಾಲಿಸಿದ ಈ ಎಲ್ಲ ಶಕ್ತಿಗಳ ಸಮನ್ವಯದಿಂದ ನಾವು ಆ ಪರಮಾತ್ಮನ ಕಡೆಗೆ ಮೋಕ್ಷಾರ್ಥವಾಗಿ ಧಾವಿಸಬೇಕೆಂಬುದೆ ಈಶಾವಾ ಸ್ಯೋಪನಿಷತ್ತಿನ ಸಾರವು. ಈ ಪರಮ ಶ್ರೇಷ್ಠವಾದ ಆಧ್ಯಾತ್ಮಿಕ ಜ್ಞಾನ ವನ್ನು ತಾವು ಸ್ವತಃ ಸಾಕ್ಷಾತ್ಕರಿಸಿ, ಪರಮಾತ್ಮನ ಅಪರೋಕ್ಷಜ್ಞಾನದಿಂದ ಅಮರರಾಗಿ, ಪುರಾತನ ಋಷಿಗಳು ಪರಮಾತ್ಮನ ಪ್ರಸಾದದಿಂದ ಯೋಗ ಸ್ಥಿತಿಯಲ್ಲಿರುವಾಗ ಈ ಉಪನಿಷತ್ತನ್ನು ಪಾಮರರ ಉದ್ಧಾರಾರ್ಥವಾಗಿ ಉಪದೇಶಿಸಿರುವರು.

ಈಗ ಮನುಷ್ಯನ ಬುದ್ಧಿವಿಕಾಸವು ಬೇಕಾದಷ್ಟು ಆಗಿದೆ. ಹೊಸ ಹೊಸ ಶಾಸ್ತ್ರೀಯ ಶೋಧಗಳ ಮೂಲಕ ಮನುಷ್ಯನ ಶಕ್ತಿಯು ಮಿತಿಮೀರಿ

ಬೆಳೆದಿದೆ. ಹೀಗಿದ್ದರೂ ಎಲ್ಲೆಲ್ಲಿಯೂ ಅಶಾಂತಿ, ಭಯ, ಆಸುರೀವೃತ್ತಿ, ಹಿಂಸೆ, ಸೂರೆ, ಇವುಗಳ ಚಲ್ಲಾಟವೆ ಕಂಡುಬರುತ್ತಿದೆ.

ಈ ಬಗ್ಗೆ ಮಾತನಾಡುವಾಗ ಪಾಶ್ಚಾತ್ಯ ತತ್ವಜ್ಞಾನಿಗಳು ಹೇಳುವದೇನಂದರೆ, ಮನುಷ್ಯನ ಬೇರೆ ಶಕ್ತಿಗಳು ಬೆಳೆಯುತ್ತ ಹೋದ ಪ್ರಮಾಣದಲ್ಲಿ ಅವನ ನೈತಿಕ ಹಾಗೂ ಆತ್ಮಿಕ ಶಕ್ತಿಗಳು ವಿಕಾಸ ಹೊಂದಲಿಲ್ಲ. ಆದುದರಿಂದ ಮನುಷ್ಯನಲ್ಲಿಯ ಪಾಶವೀವೃತ್ತಿಗಳೆ ಇನ್ನೂ ತಾಂಡವ ನೃತ್ಯವನ್ನು ಮಾಡುತ್ತಿವೆ ಹಾಗೂ ಹೊಸ ಶಕ್ತಿಗಳನ್ನೆಲ್ಲ ತಮ್ಮ ಆಯುಧಗಳನ್ನಾಗಿ ಉಪಯೋಗಿಸುತ್ತಿವೆ. ಇದೇ ಮಾತನ್ನು ಇನ್ನೊಂದು ರೀತಿ ಹೇಳಬೇಕೆಂದರೆ, ಮನುಷ್ಯನಲ್ಲಿಯ ಅಹಂಕಾರಭೂತವು ಸಿಂಹಾಸನಾರೂಢವಾಗಿ ಆಳುತ್ತಿದೆ. ಆದುದರಿಂದ ಹೊಸ ಶೋಧ ಮುಂತಾದವುಗಳ ಲಾಭವು ಮಾನವ ಜಾತಿಗೆ ಆಗದೆ ಕೆಲವೊಂದು ವ್ಯಕ್ತಿಗಳಿಗೆ ಇಲ್ಲವೆ ಕೆಲವೊಂದು ಜನಾಂಗಗಳಿಗೆ ಮಾತ್ರ ಆಗುತ್ತಲಿದೆ. ಮಿಕ್ಕವರು ಕೇವಲ ದಾಸರಾಗಿ ಭಯ, ದುಃಖ ಮುಂತಾದವುಗಳಿಗೆ ಈಡಾಗಿದ್ದಾರೆ.

ಮಾನವ ಜಾತಿಯಲ್ಲಿ ನಿಜವಾದ ಶಾಂತಿ ಪುಷ್ಟಿ ತುಷ್ಟಿಗಳ ಸಾಮ್ರಾಜ್ಯವು ಸ್ಥಾಪನವಾಗಬೇಕಾಗಿದ್ದರೆ ಮನುಷ್ಯನ ಆಂತರಿಕ ವಿಕಾಸವಾಗಲಿಕ್ಕೆ ಬೇಕು, ಅವನ ನೈತಿಕ ಮಟ್ಟ ಏರಲಿಕ್ಕೆ ಬೇಕು, ಅವನ ಅಹಂಕಾರವು ಅಡಗಿ, ಅವನಲ್ಲಿಯ ಪಶುವೃತ್ತಿಯು ಅಳಿದು, ಅವನಲ್ಲಿ ದೈವೀ ಗುಣಗಳ ವರ್ಚಸ್ಸು ಬೆಳೆಯಲಿಕ್ಕೆ ಬೇಕು. ಹೀಗೆ ಆಗಬೇಕಾದರೆ ಮನುಷ್ಯನು ತನ್ನಲ್ಲಿಯ ಅಹಂಕಾರವನ್ನು ತಳ್ಳಲಿಕ್ಕೆ ಬೇಕು.

ಯಥಾರ್ಥವಾಗಿ ನೋಡಿದರೆ ಅಹಂಕಾರವೆಂಬುದು, 'ನಾನು ನನ್ನದು' ಎಂಬದು ಅಸತ್ಯವು. 'ನಾನು ನನ್ನದು' ಎಂಬುದಕ್ಕೆ ಈಗ ಬಹಳ ದೊಡ್ಡ ಸ್ಥಾನವು ದೊರಕಿದೆ. ಅದೇ ಅಹಂಕಾರ. ನಿಜವಾಗಿ ಪರೀಕ್ಷಿಸಿದರೆ 'ನಾನು' ಯಾರು, ನನ್ನ ಸ್ಥಾನವೇನು, ಎಂಬುದು ಗೊತ್ತಾದರೆ ಅಹಂಕಾರವಳಿದು ನಮ್ಮಲ್ಲಿ ಜ್ಞಾನವು ಪ್ರಕಟವಾಗುವದು. ಅಹಂಕಾರದ ಮೂಲಕವೆ ನಾವು 'ಇದೆಲ್ಲವು ನನ್ನದು, ಇದೆಲ್ಲ ನನ್ನ ಸಲುವಾಗಿ ಇದೆ, ಇದನ್ನು ನಾನೊಬ್ಬನೆ ಉಪಯೋಗಿಸಬೇಕು, ಇದನ್ನು ಇನ್ನಾರೂ ಕೊಳ್ಳಕೂಡದು' ಎಂದು ಹೋರಾಟವನ್ನೂ ಹೂಡುತ್ತೇವೆ.

ಈ ಅಸತ್ಯಕ್ಕೆ ಪ್ರತಿಯಾಗಿ ಈಶಾವಾಸ್ಯವು ‘ ಇದೆಲ್ಲ ನಿನಗಿಂತ ಹೆಚ್ಚಿನ, ಎಲ್ಲರಿಗಿಂತ ಹೆಚ್ಚಿನ, ಆದಿಶಕ್ತಿಯದು. ಆ ಶಕ್ತಿಯೆ ಇದನ್ನೆಲ್ಲ ವ್ಯಾಪಿಸಿದೆ. ಎಲ್ಲೆಲ್ಲಿಯೂ ಆ ಶಕ್ತಿಯೆ ಇದೆ. ಆ ಶಕ್ತಿಯ ಮುಂದೆ ನೀನೆಷ್ಟರವನು ? ನೀನು ಕೇವಲ ಕ್ಷುದ್ರ ಅಣುಮಾತ್ರ. ಆ ಶಕ್ತಿ ಎಲ್ಲವನ್ನೂ ಆಳುವಂತಹದು, ಎಲ್ಲವನ್ನೂ ವ್ಯಾಪಿಸಿಕೊಂಡು ಇರುವಂತಹದು ’ ಎಂಬ ಸತ್ಯವನ್ನು ಪ್ರಥಮದಲ್ಲಿಯೆ ಸಾರುವದು. ಮೂಲೇ ಕುಠಾರಃ, ಎಂಬಂತೆ ಈಶಾವಾಸ್ಯದ ಮೊದಲನೆ ಮಂತ್ರವು ಅಹಂಕಾರದ ಬೇರಿಗೆ ಕೊಡ್ಲಿಯ ಪೆಟ್ಟನ್ನು ಹಾಕುವದು.

ಹಾಗಾದರೆ ವ್ಯಕ್ತಿತ್ವದ ಅಸ್ತಿತ್ವವೆಂಬುದು ಇಲ್ಲೇ ಇಲ್ಲವೊ ? ಎಂದು ಕೇಳಬಹುದು. ಅದಕ್ಕೆ ಪರಿಹಾರವೆಂದು ಈ ಉಪನಿಷತ್ತು ಎರಡನೆಯ ಮಂತ್ರದಲ್ಲಿ ‘ ನೀನು ಜೀವಿಸಬೇಕು, ಭೋಗಿಸಬೇಕು. ಆದರೆ ಹೇಗೆ ? ಆ ಪರಮಶಕ್ತಿಯು ನಿನಗೆ ದಯಪಾಲಿಸಿದ್ದುದನ್ನು ಮಾತ್ರ ಕೊಂಡು ನೀನು ಭೋಗಿಸಬೇಕು. ಹೆಚ್ಚಿನದನ್ನು ಆಶಿಸಕೂಡದು. ಅದಕ್ಕೂ ಹೆಚ್ಚಿನದು ನಿನ್ನದಲ್ಲೇ ಅಲ್ಲ. ನಿನ್ನ ಜೀವನಕ್ಕೆ ಎಷ್ಟು ಅವಶ್ಯವೊ ಅಷ್ಟನ್ನೆ ನೀನು ಕೊಂಡು ಭೋಗಿಸಬೇಕಲ್ಲದೆ ಹೆಚ್ಚಿನದನ್ನು ನೀನು ಮುಟ್ಟಕೂಡದು. ಉಳಿದುದೆಲ್ಲ ಎರಡನೆಯವರದು, ನಿನ್ನದಲ್ಲ. ಅದನ್ನು ನೀನು ಅಪೇಕ್ಷಿಸಬಾರದು.’

ಹೇಗೋ ಏನೋ, ಒಂದು ಜೀವಂತ ಹೆಣದಂತೆ ಮನುಷ್ಯನು ಜೀವಿಸಬೇಕೆಂದು ಈ ಉಪನಿಷತ್ತು ಹೇಳುವುದಿಲ್ಲ. ‘ ನಿನ್ನ ಕರ್ಮವನ್ನು ಯಾವಾಗಲೂ ಮಾಡುತ್ತ ಒಳ್ಳೇ ಚಟುವಟಿಕೆಯುಳ್ಳ ಜೀವವು ಜೀವಿಸುವಂತೆ ಪೂರ್ಣ ನೂರು ವರ್ಷ ಬಾಳುವ ಇಚ್ಛೆಯುಳ್ಳವನಾಗು ’ ಎಂದು ಮುಂದಿನ ಮಂತ್ರವು ಹೇಳುವದು. ಮನುಷ್ಯನ ಜೀವನವು ಸರ್ವಾಂಗಸುಂದರವಾಗಲು ಇದೊಂದೇ ಹಾದಿ ಎಂದು ಈ ಉಪನಿಷತ್ತಿನ ಅಭಿಪ್ರಾಯವಿರುವದು. ಹೀಗೆ ಈ ತತ್ವಗಳನ್ನವಲಂಬಿಸಿ, ಈ ವೃತ್ತಿಯಿಂದ ಸತತ ಸತ್ಕರ್ಮಾಚರಣೆ ಮಾಡುತ್ತ ಇದ್ದರೆ ಮನುಷ್ಯನು ಕರ್ಮದೋಷಗಳಿಂದ ನಿರ್ಲಿಪ್ತನಿರಬಲ್ಲನೆಂದು ಈ ಉಪನಿಷತ್ತಿನ ಸಿದ್ಧಾಂತವಿದೆ.

ಸಾರಾಂಶವೇನಂದರೆ, ಈ ಉಪನಿಷತ್ತು ಈ ಪ್ರಕಾರದ ಗಂಭೀರವಾದ ತತ್ವಗಳಿಂದ ತುಂಬಿದೆ. ಆ ದೃಷ್ಟಿಯಿಂದ ಇದನ್ನು ಓದುತ್ತ ಹೋದರೆ

ನಮಗೆ ಇವರ ಸಂಪೂರ್ಣ ತಿರುಳು ತಿಳಿಯುವದು ಹಾಗೂ ಈಗ ಪ್ರಚಲಿತ ವಿದ್ದ ಶ್ರೇಷ್ಠ ತತ್ವಗಳು ಎಷ್ಟು ಸುಲಭವಾಗಿ ಇಲ್ಲಿ ಹೇಳಲ್ಪಟ್ಟಿವೆ ಎಂಬುದರ ಮನವರಿಕೆಯಾಗುವದು.

ಉಪನಿಷತ್ತುಗಳ ಪೂರ್ಣಾರ್ಥವನ್ನು ತಿಳಿದುಕೊಂಡು ಅವುಗಳ ಉಪದೇಶದಂತೆ ನಡೆಯುವ ಸಾಮರ್ಥ್ಯವು ನಮ್ಮಲ್ಲಿ ಬರಲಿ ಎಂದು ನಾನು ಪ್ರಾರ್ಥಿಸುವೆನು.

---

# ಕೇನೋಪನಿಷತ್ತು

## ಕೇನೋಪನಿಷತ್ತಿನ ಸಾರಾಂಶ

'ನನ್ನ ಶಕ್ತಿಗಳೆಲ್ಲವೂ ವೃದ್ಧಿ ಹೊಂದಲಿ. ಬ್ರಹ್ಮನು ನನ್ನನ್ನು ನಿರಾಕರಿಸದಿರಲಿ. ಉಪನಿಷದ್ಧರ್ಮಗಳೆಲ್ಲವೂ ನನ್ನಲ್ಲಿ ನೆಲೆಗೊಳ್ಳಲಿ' ಎಂದು ಶಾಂತಿಮಂತ್ರದಲ್ಲಿ ಪ್ರಾರ್ಥಿಸಿ ಉಪನಿಷತ್ಕಾರರು ಉಪನಿಷತ್ತನ್ನು ಪ್ರಾರಂಭಿಸುವರು. ಈ ಉಪನಿಷತ್ತಿನಲ್ಲಿ ೪ ಖಂಡಗಳೂ ಒಟ್ಟು ೩೪ ಮಂತ್ರಗಳೂ ಇರುವವು.

ಅಖಿಲ ಕರ್ಮಗಳ ಪ್ರೇರಕನು ಪರಮಾತ್ಮನೇ. ಸಕಲೇಂದ್ರಿಯಗಳ ಪ್ರೇರಕನು ತಾನೇ ಆದರೂ ಆ ಇಂದ್ರಿಯಗಳಿಗೆ ತಾನು ಅಗೋಚರನಿರುವನು. ಅವನು ನಮ್ಮ ಜ್ಞಾನೇಂದ್ರಿಯಗಳ ವಿಷಯವಾಗಲಾರನು. ಅವನು ಮನಸ್ಸಿಗೂ ಅಗೋಚರನು. ಇವೆಲ್ಲವುಗಳ ಉದ್ಭವವು ಅವನಿಂದಲೆ ಇರುವುದು. ಇವುಗಳ ಸಂಚಾಲಕನಾದರೂ ಅವನೇ ಇರುವನು. ನಮ್ಮ ಸಕಲ ಶಕ್ತಿಗಳನ್ನು ದಾಟಿ ಅವುಗಳಾಚೆಗಿರುವವನೆ ಪರಬ್ರಹ್ಮನು. ಆ ದೈವ ಈ

ದೈವ, ಆ ದೇವರು ಈ ದೇವರು, ಎಂದು ಮೂರ್ತ ಅಥವಾ ಅಮೂರ್ತ ವಸ್ತುಗಳನ್ನು ಜನರು ಪರದೈವತವೆಂದು ಪೂಜಿಸುತ್ತಿರುವರು. ಆದರೆ ಪರಬ್ರಹ್ಮನು ಇವುಗಳಾಚೆಗಿರುವನು. ಇದು ಮೊದಲನೆಯ ಖಂಡದ ಸಾರಾಂಶವು. ಎರಡನೆಯ ಖಂಡದಲ್ಲಿ, ಸತ್ಯಜ್ಞಾನವು ಯಾರಿಗೆ ಆಗಿರುವುದೆಂಬುದನ್ನು ಹೇಗೆ ತಿಳಿಯಬೇಕು? ಎಂಬ ವಿಷಯವು ಚರ್ಚಿಸಲ್ಪಟ್ಟಿದೆ. ತಮಗೆ ಬ್ರಹ್ಮವು ತಿಳಿದಿರುವುದು, ಎಂದು ಅಭಿಮಾನಪಡುವವರಿಗೆ ಅದು ಎಂದಿಗೂ ತಿಳಿಯದು. ಬ್ರಹ್ಮಸ್ವರೂಪವು ಅತ್ಯಂತ ವಿಸ್ತೃತವೂ ಅನಂತವೂ ಇರುವುದರಿಂದ ಅದು ತಮಗೆ ತಿಳಿದಿಲ್ಲವೆಂದು ನಮ್ರವಾಗಿ ಹೇಳುವ ಜ್ಞಾನಿಗಳಿಗೆ ಮಾತ್ರ ಅದು ತಿಳಿಯಬಲ್ಲುದು. ಇಂತಹ ಬ್ರಹ್ಮಜ್ಞಾನವನ್ನು ಇಹಲೋಕದಲ್ಲಿಯೆ, ಈ ಜನ್ಮದಲ್ಲಿಯೆ ಮಾಡಿಕೊಳ್ಳತಕ್ಕದ್ದೆಂದು ಋಷಿಗಳು ಒಳ್ಳೇ ಆಸ್ಥೆಯಿಂದ ಹೇಳಿ ಎರಡನೆ ಖಂಡವನ್ನು ಮುಗಿಸುವರು. ಮೂರನೆ ಖಂಡದಲ್ಲಿ ಒಂದು ಸುಂದರವಾದ ಸಣ್ಣ ಕಥೆಯು ಹೇಳಲ್ಪಟ್ಟಿದೆ. ಬ್ರಹ್ಮವೆ ಎಲ್ಲಕ್ಕೂ ಶ್ರೇಷ್ಠವು ಎಂಬ ಸತ್ಯವನ್ನು ಮನಸ್ಸಿನ ಮೇಲೆ ಬಿಂಬಿಸುವುದಕ್ಕೋಸ್ಕರವೆ ಈ ರೂಪಕವು ಇಲ್ಲಿ ಉಪಯೋಗಿಸಲ್ಪಟ್ಟಿದೆ. ಅಖಿಲ ವಿಶ್ವದಲ್ಲಿರುವ ಮಹಿಮೆಯೆಲ್ಲವೂ ಬ್ರಹ್ಮನದೆ ಇರುವದು, ಎಂಬುದನ್ನು ಸಿದ್ಧಮಾಡುವದೆ ಆ ಕಥೆಯ ಉದ್ದೇಶವು. ಅಗ್ನಿ, ಇಂದ್ರ, ವಾಯು ಮುಂತಾದ ಎಲ್ಲ ಶಕ್ತಿಗಳೂ ಪರಪ್ರಕಾಶಿತವಾದುವುಗಳು; ಇವುಗಳಿಗೆ ಇದ್ದ ಶಕ್ತಿಯು ಆ ಬ್ರಹ್ಮನಿಂದಲೆ ಬಂದಿರುವುದು, ಎಂಬವನ್ನು ಹೇಳಿದ ಮೇಲೆ ನಾಲ್ಕನೆಯ ಖಂಡವು ಪ್ರಾರಂಭವಾಗುವದು. ಒಂದು ಸುಂದರ ಮೋಹಕ ಸ್ತ್ರೀರೂಪವನ್ನು ಧರಿಸಿ, ಜ್ಞಾನದೇವಿಯು ಪ್ರಕಟಳಾಗಿ, ಎಲ್ಲ ದೇವತೆಗಳಿಗೆ ಅಂದರೆ ನಿಸರ್ಗಶಕ್ತಿಗಳಲ್ಲಿ ಅಧಿಷ್ಠಿತವಿದ್ದ ದೇವತೆಗಳಿಗೆ ಬ್ರಹ್ಮಜ್ಞಾನವನ್ನು ಉಪದೇಶಿಸುವಳು. ಆಧಿದೈವಿಕ ಹಾಗೂ ಆಧ್ಯಾತ್ಮಿಕ ಎಂಬ ಎರಡು ದೃಷ್ಟಾಂತಗಳಿಂದ ಬ್ರಹ್ಮಸ್ವರೂಪದ ವರ್ಣನೆಯು ಇಲ್ಲಿ ಮಾಡಲ್ಪಟ್ಟಿದೆ. ಮಿಂಚಿನ ಒಂದು ದೈದೀಪ್ಯಮಾನವಾದ ಸೆಳಕಿನಂತೆ ಬ್ರಹ್ಮಜ್ಞಾನವು ಹೊಳೆಯುವುದು ಎಂಬದು ಆಧಿದೈವಿಕ ದೃಷ್ಟಾಂತವು. ಮನಸ್ಸು ತನ್ನ ಇಷ್ಟ ವಸ್ತುವಿನ ಕಡೆಗೆ ವೇಗದಿಂದ ಹರಿದು ಹೋಗುವಂತೆ, ತನ್ನ ಇಷ್ಟ ಸಂಕಲ್ಪವನ್ನು ಒಂದೇ ಕ್ಷಣದಲ್ಲಿ ಸ್ಮರಿಸುವಂತೆ, ಬ್ರಹ್ಮವು ಮನಸಿನಲ್ಲಿ ಹೊಳೆಯುವುದು ಎಂಬುದು ಆಧ್ಯಾತ್ಮಿಕ

ದೃಷ್ಟಾಂತವು. ಹೀಗೆ ಹೇಳಿ ತಪಸ್ಸು ಕರ್ಮ ದಮಗಳು ಬ್ರಹ್ಮಜ್ಞಾನದ ಪ್ರತಿಷ್ಠೆ ಅಂದರೆ ಆಧಾರವೆಂದೂ ವೇದವು ಆ ಜ್ಞಾನದ ಅಂಗವೆಂದೂ ಸತ್ಯವು ಅವರ ಆಶ್ರಯಸ್ಥಾನವೆಂದೂ ನಿರೂಪಿಸಿ ಋಷಿಗಳು ಈ ಉಪನಿಷತ್ತಿನ ಚತುರ್ಥ ಖಂಡವನ್ನು ಮುಗಿಸುವರು. ಈ ಪ್ರಕಾರವಾಗಿ ಬ್ರಹ್ಮವೆ ಸರ್ವ ಶ್ರೇಷ್ಠ ಶಕ್ತಿಯು ಎಂಬುದು ಈ ಉಪನಿಷತ್ತಿನಲ್ಲಿಯ ಮುಖ್ಯ ಪ್ರಮೇಯವು. ಈ ಶಕ್ತಿಯಿಂದಲೆ ಮಿಕ್ಕ ಶಕ್ತಿಗಳ ಉದ್ಭವವಿರುವುದರಿಂದ ಅವುಗಳಿಗೆ ಆ ಮೂಲಶಕ್ತಿಯ ಸಂಪೂರ್ಣ ಆಕಲನವಾಗುವುದು ಶಕ್ಯವಿಲ್ಲವೆಂಬುದು ಆ ಪ್ರಮೇಯದ ಉಪಸಿದ್ಧಾಂತವು. ಈ ಬ್ರಹ್ಮವು ಬುದ್ಧಿಗೆ ತೋಚದಿದ್ದರೂ ಮನಃಶಕ್ತಿಗೆ ತಿಳಿಯದಿದ್ದರೂ ಮನುಷ್ಯನು ಪುನೀತನಾದನೆಂದರೆ ಈ ಬ್ರಹ್ಮ ಜ್ಞಾನವು ಅವನಿಗೆ ಸುಲಭ ಸಾಧ್ಯವಾಗುವುದು, ಎಂದು ಹೇಳಿ ಋಷಿಗಳು ಈ ಉಪನಿಷತ್ತನ್ನು ಮುಗಿಸಿರುವರು.

# ಕೇನೋಪನಿಷತ್

## ಶಾಂತಿಮಂತ್ರ

ಓಂ ಆಪ್ಯಾಯಂತು ಮಮಾಂಗಾನಿ ವಾಕ್ ಪ್ರಾಣಶ್ಚಕ್ಷುಃ ಶ್ರೋತ್ರಮಥೋ **ಬಲಮಿಂದ್ರಿಯಾಣಿ ಚ ಸರ್ವಾಣಿ, ಸರ್ವಂ ಬ್ರಹ್ಮೋಪನಿಷದಂ, ಮಾಹಂ ಬ್ರಹ್ಮ ನಿರಾಕುರ್ಯಾಂ, ಮಾ ಮಾ ಬ್ರಹ್ಮ ನಿರಾಕರೋದನಿರಾಕರಣಮಸ್ತ್ವನಿರಾಕರಣ-ಮಸ್ತು ॥ ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

---

**ಶಾಂತಿಮಂತ್ರದ ಅನುವಾದ:—** ನನ್ನ ಅವಯುವಗಳೂ ಕಣ್ಣು ಕಿವಿಗಳೂ ಪ್ರಾಣವಾಣಿಗಳೂ ಸರ್ವೇಂದ್ರಿಯಗಳೂ ಬಲವುಳ್ಳವುಗಳಾಗಲಿ. ಎಲ್ಲವೂ ಉಪನಿಷದೋಕ್ತ ಬ್ರಹ್ಮವಿರುವುದು. ನಾನು ಬ್ರಹ್ಮನನ್ನು ನಿರಾಕರಿಸುವಂಥವನಾಗದಿರಲಿ. ಬ್ರಹ್ಮನು ನನ್ನನ್ನು ನಿರಾಕರಿಸದಿರಲಿ. (ಉಭಯ ಪಕ್ಷದಲ್ಲಿಯೂ) ನಿರಾಕರಣವಾಗದಿರಲಿ, ನಿರಾಕರಣವಾಗದಿರಲಿ. ಉಪನಿಷತ್ತಿನಲ್ಲಿ ಉಲ್ಲೇಖಿಸಿದ ಗುಣ ಧರ್ಮಗಳೆಲ್ಲ ಆತ್ಮನಿರತನಾದ ನನ್ನಲ್ಲಿ ಮನೆ ಮಾಡಲಿ, ಬೇರೂರಲಿ! ಓಂ ಶಾಂತಿ.

# ಉಪನಿಷತ್ತು

ಓಂ ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ॥ ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥೧॥ ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಶ್ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೨ ॥ ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನೋ ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾದನ್ಯದೇವ ತದ್ವಿದಿತಾದಥೋ ಅವಿದಿತಾದಧಿ॥ ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ॥೩॥ ಯದ್ವಾಚಾನಭ್ಯುದಿತಂ ಯೇನ ವಾಗಭ್ಯುದ್ಯತೇ ॥ ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥೪॥ ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಂ॥

---

**ಮಂತ್ರಗಳ ಅನುವಾದ:—** (೧) ಯಾರ ಇಚ್ಛೆಗನುಸರಿಸಿ, ಯಾರ ಪ್ರೇರಣೆಯಿಂದ ಈ ಮನಸ್ಸು ತನ್ನ ವಿಷಯದಲ್ಲಿ ತೊಡಗುವುದು ? ಪ್ರಾಣವು ಮೊಟ್ಟಮೊದಲು ಯಾರ ಆಜ್ಞೆಯಿಂದ ತನ್ನ ಕರ್ಮವನ್ನಾರಂಭಿಸುವುದು ? ಯಾರ ಇಚ್ಛೆಯಿಂದ ಜನರು ನುಡಿಯುವರು ? ಕಣ್ಣುಕಿವಿಗಳಿಗೆ ಆಜ್ಞೆ ಮಾಡುವ ದೇವತೆಯು ಯಾರು ? (೨) (ಮೇಲಿನ ಪ್ರಶ್ನೆಗಳಿಗೆ ಉತ್ತರ) ಯಾವುದು ಕಿವಿಗಳ ಕಿವಿಯೊ ಮನಸ್ಸಿನ ಮನಸೊ ವಾಣಿಯ ವಾಣಿಯೊ ಅದು ಪ್ರಾಣದ ಪ್ರಾಣವು, ಕಣ್ಣುಗಳ ಕಣ್ಣು. ಧೀರರು ಇವುಗಳಾಚೆಗೆ ಅಂದರೆ ಇಂದ್ರಿಯಗಳಾಚೆಗೆ ಹೋಗುವರು ಹಾಗೂ ಈ ಲೋಕದಿಂದ ತೆರಳಿದ ಬಳಿಕ ಅಮೃತಪದವಿಯನ್ನು ಪಡೆಯುವರು. (೩) ಅದು ಅಂದರೆ ಆ ಬ್ರಹ್ಮವು ಇದ್ದಲ್ಲಿಗೆ ನಮ್ಮ ದೃಷ್ಟಿಯು ಹೋಗಲರಿಯದು. ನಮ್ಮ ವಾಚಾ ಶಕ್ತಿಗೆ ಅದು ನಿಲುಕದು. ನಮ್ಮ ಮನಸು ಅಲ್ಲಿಯವರೆಗೆ ಹೋಗಿ ಮುಟ್ಟಲಾರದು. ಅದನ್ನು ನಾವು ಅರಿಯೆವು, ಶಿಷ್ಯರಿಗೆ ಕಲಿಸಲಿಕ್ಕೆ ಬರುವಷ್ಟು ಅಥವಾ ಬರುವಂತೆ ಅಷ್ಟು ಸಂಪೂರ್ಣ ರೀತಿಯಿಂದ ನಾವು ಅದನ್ನು ತಿಳಿಯೆವು. ಅದು ಇದುವರೆಗೆ ಗೊತ್ತಾದ ಮತ್ತು ಗೊತ್ತಾಗದ ವಸ್ತುಗಳಾಚೆಗಿರುವುದು. ನಮಗೆ ಆ ಜ್ಞಾನವನ್ನು ಹೇಳಿದ ಪೂರ್ವಿಕರಿಂದ ಹೀಗೆ ಕೇಳಿದೆವು. (೪) ಯಾವುದು ವಾಚಾಶಕ್ತಿಯಿಂದ ವ್ಯಕ್ತಮಾಡಲ್ಪಡಲಾರದೊ ಆದರೆ ಯಾವುದರ ಶಕ್ತಿಯಿಂದ ವಾಣಿಯು ಪ್ರಕಟವಾಗುವುದೊ ಅದೇ

ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೫ ॥ ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ॥ ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೬ ॥ ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಂ ॥ ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೭ ॥ ಯತ್ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ॥ ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೮ ॥ ಇತಿ ಪ್ರಥಮಃ ಖಂಡಃ ॥ ೧ ॥

ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ ತ್ವಂ ವೇತ್ಥ, ಬ್ರಹ್ಮಣೋ ರೂಪಂ ಯದಸ್ಯ ತ್ವಂ ಯದಸ್ಯ ಚ ದೇವೇಷ್ವಥ ನು ಮೀಮಾಂಸ್ಯ ಮೇವ ತೇ ಮನ್ಯೇ ವಿದಿತಮ್ ॥ ೯ ॥ ನಾಹಂ ಮನ್ಯೇ ಸುವೇದೇತಿ ನೋ ನ

---

ಬ್ರಹ್ಮವೆಂದು ನೀನು ತಿಳಿ. ಜನರು ಯಾವುವನ್ನು ಬ್ರಹ್ಮವೆಂದು ಉಪಾಸಿಸುತ್ತಿರುವರೊ ಅದು ಬ್ರಹ್ಮವಲ್ಲ. (೫) ಯಾವುದು ಮನಸ್ಸಿನ ಸಹಾಯದಿಂದ ವಿಚಾರಮಾಡುವುದಿಲ್ಲ; ಆದರೆ ಮನಸ್ಸೆ ಯಾವುದರ ವಿಚಾರವಿಷಯವಾಗುವುದೊ ಅದೇ ಬ್ರಹ್ಮವೆಂದು ತಿಳಿ. ಜನರು ಯಾವುದನ್ನು ಬ್ರಹ್ಮವೆಂದು ಉಪಾಸಿಸುತ್ತಿರುವರೊ ಅದು ಬ್ರಹ್ಮವಲ್ಲ. (೬) ಯಾವುದು ಕಣ್ಣುಗಳಿಂದ ನೋಡುವದಿಲ್ಲ; ಆದರೆ ಯಾವುದು ಕಣ್ಣುಗಳನ್ನೆ ನೋಡಬಲ್ಲದೊ ಅದು ಬ್ರಹ್ಮವೆಂದು ತಿಳಿ. ಜನರು ಯಾವುದನ್ನು ಬ್ರಹ್ಮವೆಂದು ಉಪಾಸಿಸುತ್ತಿರುವರೊ ಅದು ಬ್ರಹ್ಮವಲ್ಲ. (೭) ಯಾವುದು ಕಿವಿಗಳಿಂದ ಕೇಳುವುದಿಲ್ಲ; ಆದರೆ ಯಾವುದು ಕಿವಿಗಳನ್ನೆ ಕೇಳುವುದೊ ಅದು ಬ್ರಹ್ಮವೆಂದು ತಿಳಿ. ಜನರು ಯಾವುದನ್ನು ಬ್ರಹ್ಮವೆಂದು ಉಪಾಸಿಸುತ್ತಿರುವರೊ ಅದು ಬ್ರಹ್ಮವಲ್ಲ. (೮) ಯಾವುದು ಪ್ರಾಣದ ಸಹಾಯದಿಂದ ಉಸುರಾಡಿಸುವುದಿಲ್ಲ ಆದರೆ ಯಾವುದು ಪ್ರಾಣಶಕ್ತಿಯನ್ನೆ ಉಸುರಾಡಿಸುವದೊ ಅದೇ ಬ್ರಹ್ಮವೆಂದು ತಿಳಿ. ಜನರು ಯಾವುದನ್ನು ಬ್ರಹ್ಮವೆಂದು ಉಪಾಸಿಸುತ್ತಿರುವರೊ ಅದು ಬ್ರಹ್ಮವಲ್ಲ. ಇಲ್ಲಿಗೆ ಪ್ರಥಮ ಖಂಡವು ಸಮಾಪ್ತವು.

(ಗುರುಗಳು ಶಿಷ್ಯನಿಗೆ ಅನ್ನುವದೇನಂದರೆ) (೯) ಇವನ್ನು ಅಂದರೆ ಬ್ರಹ್ಮವನ್ನು ನಾನು ಚನ್ನಾಗಿ ಅರಿತಿರುವೆನು, ಎಂದು ನೀನು ತಿಳಿದುಕೊಂಡಿದ್ದರೆ ಆ ಬ್ರಹ್ಮಸ್ವರೂಪವನ್ನು ನೀನು ಅತಿ ಅಲ್ಪ ಪ್ರಮಾಣದಲ್ಲಿ ಅರಿತುಕೊಂಡಿರುವಿ. ಯಾವ ಬ್ರಹ್ಮನ ಜ್ಞಾನವು ಆಗಿರುವುದೆಂದು ನೀನು ತಿಳಿದಿರುವಿಯೊ ಅವನ ಸ್ವರೂಪವು ನಿನ್ನ ವಿಷಯದಲ್ಲಿಯೂ ದೇವತೆಗಳ ವಿಷಯ

ವೇದೇತಿ ವೇದ ಚ ॥ ಯೋ ನಸ್ತದ್ವೇದ ತದ್ವೇದ ನೋ, ನ ವೇದೇತಿ ವೇದ ಚ ॥ ೧೦ ॥ ಯಸ್ಯಾಮತಂ ತಸ್ಯ ಮತಂ, ಮತಂ ಯಸ್ಯ ನ ವೇದ ಸಃ ॥ ಅವಿಜ್ಞಾತಂ ವಿಜಾನತಾಂ, ವಿಜ್ಞಾತಮವಿಜಾನತಾಮ್ ॥ ೧೧ ॥ ಪ್ರತಿಬೋಧವಿದಿತಂ ಮತಮ-ಮೃತತ್ವಂ ಹಿ ವಿಂದತೇ ॥ ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್ ॥ ೧೨ ॥ ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದಿನ್ಮಹತೀ ವಿನಷ್ಟಿಃ ॥ ಭೂತೇಷು ಭೂತೇಷು ವಿಚಿತ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೧೩ ॥ ಇತೀ ದ್ವಿತೀಯಃ ಖಂಡಃ ॥ ೨॥

---

ದಲ್ಲಿಯೂ ಯಾವ ಪ್ರಕಾರದ್ದಿರುವುದೆಂಬುದರ ಮೀಮಾಂಸೆಯು ಇನ್ನೂ ಆಗತಕ್ಕದ್ದಿದೆ ಎಂದು ನನ್ನ ಅಭಿಪ್ರಾಯ. (೧೦) (ಶಿಷ್ಯನು ಅಂದದ್ದು) ನಾನು ಚನ್ನಾಗಿ ಬ್ರಹ್ಮನನ್ನು ಅರಿತಿರುವೆನೆಂದೂ ತಿಳಿಯೆನು, ಅದನ್ನು ಅರಿಯೆನೆಂದೂ ತಿಳಿಯೆನು. (ಗುರುಗಳು ಅಂದದ್ದು) ನಮ್ಮೊಳಗೆ ಯಾರು ಅವನನ್ನು ಬಲ್ಲೆವೆಂದು ಬಗೆಯುವರೊ ಅವರಿಗೆ ಅವನ ಯಥಾರ್ಥಜ್ಞಾನವಿಲ್ಲವೆಂದು ತಿಳಿಯಬೇಕು. ಯಾರು (ನಮ್ರತೆಯಿಂದ) ಅರಿಯೆವೆಂದು ಒಪ್ಪುವರೊ ಅವರೇ ನಿಜವನ್ನರಿತಿರುವರು. (೧೧) ಯಾರು ತಮಗೆ ಇದು ತಿಳಿದಿಲ್ಲವೆಂದು ಭಾವಿಸುವರೊ ಅವರಿಗೆ ಇದು ತಿಳಿದಿರುವುದು. ತ[illegible]ದಿರುವುದೆಂದು ಯಾರ ಭಾವನೆಯೊ ಅವರಿಗೆ ಇದು ತಿಳಿದಿರುವುದಿಲ್ಲ. ಇದನ್ನು ಬಲ್ಲೆವು, ಅನ್ನುವವರಿಗೆ ಇದು ತಿಳಿದಿರುವುದಿಲ್ಲ, ಇದನ್ನರಿಯೆವು ಅನ್ನುವವರಿಗೆ ಇದು ತಿಳಿದಿರುವುದು. (೧೨) ಈ ಜ್ಞಾನವು ಪ್ರತಿಬೋಧದಿಂದಲಿ ಅಂದರೆ ನಿಜಸ್ವರೂಪದ ಧ್ಯಾನದಿಂದಲೆ ಆಗುವಂತಹದು. ಇದರಿಂದ ಅಮೃತತ್ವವು ಪ್ರಾಪ್ತವಾಗುವುದು. ಆತ್ಮನಿಂದ (ಪ್ರಾಣ-ಮನ ಮೊದಲಾದವುಗಳಿಂದಲ್ಲ) ವೀರ್ಯವು (ಜ್ಞಾನವನ್ನು ದೊರಕಿಸುವ ಶಕ್ತಿಯು) ಪ್ರಾಪ್ತವಾಗುವುದು. ಜ್ಞಾನದಿಂದ ಅಮೃತವು ದೊರೆಯುವುದು. (೧೩) ಇದನ್ನು ಈ ಲೋಕದಲ್ಲಿಯೆ ಅರಿತುಕೊಂಡರೆ ಅದು ಸತ್ಯಜ್ಞಾನವು. ಈ ಜ್ಞಾನವನ್ನು ಇಲ್ಲಿಯೆ ಇಹಲೋಕದಲ್ಲಿಯೆ ಅರಿತುಕೊಳ್ಳದಿದ್ದರೆ ಮಹಾ ನಷ್ಟಕ್ಕೆ ಗುರಿಯಾಗುವಿರಿ. ಧೀರರು ಸರ್ವಭೂತಗಳಲ್ಲಿಯೂ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದು ಮೃತ್ಯುಲೋಕದಿಂದ ತೆರಳಿ ಹೋದಮೇಲೆ ಅಮೃತತ್ವವನ್ನು ಹೊಂದುವರು. ಇಲ್ಲಿಗೆ ದ್ವಿತೀಯ ಖಂಡವು ಸಮಾಪ್ತವು.

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ ತ ಐಕ್ಷಂತಾಸ್ಮಾಕಮೇವಾಯಂ ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥ ೧೪ ॥ ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂವ ತನ್ನ ವ್ಯಜಾನಂತ ಕಿಮಿದಂ ಯಕ್ಷಮಿತಿ ॥ ೧೫ ॥ ತೇಽಗ್ನಿಮಬ್ರುವಜ್ಞಾತವೇದ ಏತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ॥ ೧೬ ॥ ತದಭ್ಯದ್ರವತ್ತಮಭ್ಯವದತ್ಕೋಽಸೀತ್ಯಗ್ನಿರ್ವಾ ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ॥ ೧೭ ॥ ಯಸ್ಮಿಂಸ್ತ್ವಯಿ ಕಿಂ ವೀರ್ಯಮಪೀದಂ ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ ॥ ೧೮ ॥ ತಸ್ಮೈ ತೃಣಂ ನಿದಧಾವೇತದ್ದಹೇತಿ ತದುಪಪ್ರೇಯಾಯ ಸರ್ವಜವೇನ ತನ್ನ ಶಶಾಕ ದಗ್ಧುಂ ಸ ತತ ಏವ ನಿವವೃತೇ ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೧೯ ॥ ಅಥ ವಾಯುಮಬ್ರುವನ್ವಾಯವೇತದ್ವಿಜಾನೀಹಿ

---

(೧೪) ಒಮ್ಮೆ (ದೇವಾಸುರ ಯುದ್ಧದಲ್ಲಿ) ಬ್ರಹ್ಮನ ಗೆಲವಿನಿಂದ ದೇವತೆಗಳಿಗೆ ದೊಡ್ಡಸ್ತಿಕೆಯು ಪ್ರಾಪ್ತವಾಗಿ ಅವರು, ಇದು ತಾವು ಗೆದ್ದ ವಿಜಯವು, ಈ ಮಹಿಮೆಯು ತಮ್ಮದೆ, ಎಂದು ಬಗೆಯಲಾರಂಭಿಸಿದರು. (೧೫) ಇದು ಬ್ರಹ್ಮನಿಗೆ ತಿಳಿಯಿತು. ಅವನು ದೇವತೆಗಳೆದುರಿಗೆ ಪ್ರಕಟನಾದನು. ಈ ಯಕ್ಷವು (ಪ್ರಕಟನಾದ ಬ್ರಹ್ಮನು, ವಿಲಕ್ಷಣ ವಸ್ತುವು) ಏನೆಂಬದು ಅವರಿಗೆ ತಿಳಿಯಲಿ ಇಲ್ಲ. (೧೬) ದೇವತೆಗಳೆಲ್ಲರೂ ಕೂಡಿ ಅಗ್ನಿಯನ್ನು ಕುರಿತು ಅಂದದ್ದು:— ಹೇ ಜಾತವೇದನೇ (ಜ್ಞಾನಿಯೇ), ಈ ಯಕ್ಷವು ಏನಿರುವದೆಂಬದನ್ನು ಅರಿತುಕೊಳ್ಳುವವನಾಗು. ಅಗ್ನಿಯು ಒಳ್ಳೇದು ಎಂದು ಸಮ್ಮತಿಸಿದನು. (೧೭) ಅಗ್ನಿಯು ಸಮೀಪಕ್ಕೆ ಹೋಗಲಾಗಿ, ನೀನು ಯಾರು, ಎಂದು ಬ್ರಹ್ಮನು ಕೇಳಿದನು. ನಾನು ಅಗ್ನಿಯು, ನನ್ನನ್ನು ಜಾತವೇದನೆಂದೂ ಕರೆಯುವರು, ಎಂದು ಅಗ್ನಿಯು ಉತ್ತರ ಕೊಟ್ಟನು. (೧೮) ಹೀಗೆ ಪ್ರಸಿದ್ಧನಿದ್ದ ನಿನ್ನಲ್ಲಿ ಯಾವ ಶಕ್ತಿಯು ಇರುವುದೆಂದು ಬ್ರಹ್ಮನು ಪುನಃ ಪ್ರಶ್ನೆ ಮಾಡಲಾಗಿ ಅಗ್ನಿಯು ಅಂದದ್ದು, 'ಈ ಪೃಥ್ವಿಯ ಮೇಲಿನ ಯಚ್ಚಾವತ್ ವಸ್ತುಗಳನ್ನು ನಾನು ಸುಡಬಲ್ಲೆನು.' (೧೯) ಇದನ್ನು ಸುಡು, ಎಂದು ಬ್ರಹ್ಮನು ಅವನ ಕೈಯಲ್ಲಿ ಒಂದು ಕಡ್ಡಿಯನ್ನು ಕೊಟ್ಟನು. ತನ್ನ ಸರ್ವಸ್ವದಿಂದ ಸುಡಲೆತ್ನಿಸಿದರೂ ಅಗ್ನಿಯು ಅದನ್ನು ಸುಡಲು ಸಮರ್ಥನಾಗಲಿಲ್ಲ! ಕೂಡಲೆ ಅಗ್ನಿಯು ದೇವತೆಗಳ

ಕಿಮೇತದ್ಯಕ್ಷಮಿತಿ ತಥೇತಿ ॥ ೨೦ ॥ ತದಭ್ಯದ್ರವತ್ತಮಭ್ಯವದತ್ಕೋಽಸೀತಿ ವಾ-ಯುರ್ವಾ ಅಹಮಸ್ಮೀತ್ಯಬ್ರವೀನ್ಮಾತರಿಶ್ವಾ ವಾ ಅಹಮಸ್ಮೀತಿ ॥ ೨೧ ॥ ತಸ್ಮಿಂ-ಸ್ತ್ವಯಿ ಕಿಂ ವೀರ್ಯಮಿತ್ಯಪೀದಂ ಸರ್ವಮಾದದೀಯಂ ಯದಿದಂ ಪೃಥಿವ್ಯಾಮಿತಿ ॥ ೨೨ ॥ ತಸ್ಮೈ ತೃಣಂ ನಿದಧಾವೇತದಾದತ್ಸ್ವೇತಿ ತದುಪಪ್ರೇಯಾಯ ಸರ್ವಜವೇನ ತನ್ನ ಶಶಾಕಾದಾತುಂ ಸ ತತ ಏವ ನಿವವೃತೇ ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೨೩ ॥ ಅಥೇಂದ್ರಮಬ್ರುವನ್ಮಘವನ್ನೇತದ್ವಿಜಾನೀಹಿ ಕಿಮೇತದ್ಯಕ್ಷಮಿತಿ ತಥೇತಿ ತದಭ್ಯದ್ರವತ್ತಸ್ಮಾತ್ತಿರೋದಧೇ ॥ ೨೪ ॥ ಸ ತಸ್ಮಿನ್ನೇವಾಕಾಶೇ ಸ್ತ್ರಿಯ-

---

ಕಡೆಗೆ ತಿರುಗಿ ಹೋಗಿ, ಆ ಯಕ್ಷವು ಏನಿರುವುದೆಂಬದನ್ನು ತಿಳಿಯಲು ನಾನು ಸಮರ್ಥನಾಗಲಿಲ್ಲವೆಂದು ಹೇಳಿದನು. (೨೦) ಈ ಯಕ್ಷವು ಏನಿರುವುದೆಂಬ ದನ್ನು ತಿಳಿದುಕೊಳ್ಳುವಂಥವನಾಗು, ಎಂದು ದೇವತೆಗಳು ವಾಯುವಿಗೆ ಹೇಳಲಾಗಿ ಹಾಗೆಯೆ ಆಗಲೆಂದು ವಾಯುವು ಹೊರಟನು. (೨೧) ಸಮೀಪಕ್ಕೆ ಹೋಗಲಾಗಿ, ನೀನು ಯಾರು, ಎಂದು ಪುನಃ ಬ್ರಹ್ಮನು ಕೇಳಿದನು. ನಾನು ವಾಯುವು, ನನ್ನನ್ನು ಮಾತರಿಶ್ವನೆಂದೂ ಕರೆಯುವರು, ಎಂದು ವಾಯುವು ಹೇಳಿದನು. (೨೨) ಹಾಗಿದ್ದರೆ ನಿನ್ನಲ್ಲಿ ಯಾವ ಶಕ್ತಿಯು ಇರುವುದು, ಎಂದು ಬ್ರಹ್ಮನು ಕೇಳಲಾಗಿ, ಈ ಭೂಮಂಡಲದಲ್ಲಿದ್ದ ಚರಾಚರ ವಸ್ತುಗಳನ್ನೆಲ್ಲ ನಾನು ಸೆಳೆಯಲು ಸಮರ್ಥನೆಂದು ವಾಯುವು ಉತ್ತರ ಕೊಟ್ಟನು. (೨೩) ಹಾಗಾದರೆ ಇದನ್ನು ಸೆಳೆ, ಎಂದು ಬ್ರಹ್ಮನು ಅವನ ಕೈಯಲ್ಲಿ ಒಂದು ಕಡ್ಡಿಯನ್ನು ಕೊಟ್ಟನು. ತನ್ನ ಎಲ್ಲ ಬಲವನ್ನುಪ-ಯೋಗಿಸಿ ಯತ್ನಿಸಿದರೂ ವಾಯುವು ಅದನ್ನು ಸೆಳೆದೊಯ್ಯಲು ಸಮರ್ಥನಾಗಲಿಲ್ಲ. ಅಲ್ಲಿಂದ ವಾಯುವು ಮರಳಿ ಹೋಗಿ, ನಾನು ಆ ಯಕ್ಷನನ್ನು ತಿಳಿಯಲು ಸಮರ್ಥನಾಗಲಿಲ್ಲವೆಂದು ದೇವತೆಗಳಿಗೆ ತಿಳಿಸಿದನು. (೨೪) ಆಗ ದೇವತೆಗಳು ಹೇ ಮಘವನ್, ಆ ಯಕ್ಷವು ಏನಿರುವುದೆಂಬುದನ್ನು ಅರಿತುಕೊಳ್ಳುವವನಾಗು, ಎಂದು ಇಂದ್ರನಿಗೆ ಹೇಳುವಂಥವರಾದರು. ಒಳ್ಳೇದು, ಎಂದು ಇಂದ್ರನು ಬ್ರಹ್ಮನ ಸಮೀಪಕ್ಕೆ ಹೋಗಲಾಗಿ ಬ್ರಹ್ಮನು ಒಮ್ಮೆಲೆ ಅಂತರ್ಧಾನ ಹೊಂದಿದನು. (೨೫) ಬ್ರಹ್ಮನು ಮೊದಲು ನಿಂತ ಸ್ಥಳದಲ್ಲಿಯೆ ಓರ್ವ ಸ್ತ್ರೀಯು ಅವನ ಕಣ್ಣಿಗೆ ಬಿದ್ದಳು. ಹೊಂಬಣ್ಣದಿಂದ ವಿಶೇಷವಾಗಿ ಶೋಭಿಸುತ್ತಿರುವ ಆ ಉಮಾದೇವಿಯನ್ನು ಕುರಿತು, ಈ ಯಕ್ಷವು ಯಾರು,

ಮಾಜಗಾಮ ಬಹುಶೋಭಮಾನಾಮುಮಾಂ ಹೈಮವತೀಂ ತಾಂ ಹೋವಾಚ ಕಿಮೇತದ್ಯಕ್ಷಮಿತಿ ॥ ೨೫ ॥ ಇತಿ ತೃತೀಯಃ ಖಂಡಃ ॥ ೩ ॥

ಸಾ ಬ್ರಹ್ಮೇತಿ ಹೋವಾಚ ಬ್ರಹ್ಮಣೋ ವಾ ಏತದ್ವಿಜಯೇಽಮಹೀಯಧ್ವಮಿತಿ ತತೋ ಹೈವ ವಿದಾಂಚಕಾರ ಬ್ರಹ್ಮೇತಿ ॥೨೬॥ ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ದೇವಾನ್ಯದಗ್ನಿರ್ವಾಯುರಿಂದ್ರಸ್ತೇ ಹ್ಯೇನನ್ನೇದಿಷ್ಟಂ ಪಸ್ಪರ್ಶುಸ್ತೇ ಹ್ಯೇನತ್ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥ ೨೭ ॥ ತಸ್ಮಾದ್ವಾ ಇಂದ್ರೋಽತಿತರಾಮಿವಾನ್ಯಾನ್ದೇವಾನ್ಸ ಹ್ಯೇನನ್ನೇದಿಷ್ಟಂ ಪಸ್ಪರ್ಶ ಸ ಹ್ಯೇನಂ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥೨೮॥ ತಸ್ಯೈಷ ಆದೇಶೋ ಯದೇತದ್ವಿದ್ಯುತೋ ವ್ಯದ್ಯುತದಾ ೩ ಇತೀತಿ ನ್ಯಮೀಮಿಷದಾ ೩ ಇತ್ಯಧಿದೈವತಮ್ ॥ ೨೯ ॥ ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಮನೋಽನೇನ ಚೈತದುಪಸ್ಮರತ್ಯಭೀಕ್ಷ್ಣಂ ಸಂಕಲ್ಪಃ ॥ ೩೦ ॥ ತದ್ಧ ತದ್ವನಂ ನಾಮ ತದ್ವನಮಿತ್ಯುಪಾಸಿತವ್ಯಂ ಸ ಯ ಏತದೇವಂ

---

ಎಂದು ಇಂದ್ರನು ಪ್ರಶ್ನೆಮಾಡಿದನು. ಇಲ್ಲಿ ತೃತೀಯ ಖಂಡವು ಸಮಾಪ್ತವು.

(೨೬) ಆ ಯಕ್ಷವು ಪ್ರತ್ಯಕ್ಷ ಬ್ರಹ್ಮನು, ಅವನ ಗೆಲವಿನಿಂದಲೆ ನಿಮ್ಮ ದೊಡ್ಡಸ್ತಿಕೆಯು ಎಂದು ತಿಳಿಯುವಂಥವರಾಗಿರಿ, ಹೀಗೆ ಆಕೆಯು ನುಡಿದಳು. ಆಮೇಲೆ ಅವನು ಬ್ರಹ್ಮನೆಂಬುದು ಇಂದ್ರನಿಗೆ ತಿಳಿಯಿತು. (೨೭) ಆದುದರಿಂದಲೆ ಮಿಕ್ಕ ದೇವತೆಗಳಿಗಿಂತಲೂ ಇವರು ಅಂದರೆ ಅಗ್ನಿ ವಾಯು ಇಂದ್ರರು ಹೆಚ್ಚಿನವರು. ಅಗ್ನಿ ವಾಯು ಇಂದ್ರರು ಬಹಳ ಸಮೀಪಕ್ಕೆ ಹೋಗಿ ಬ್ರಹ್ಮನನ್ನು ಸ್ಪರ್ಶಿಸಿದವರು. ಇವನೇ ಬ್ರಹ್ಮನೆಂಬುದನ್ನು ಇವರು ಮಿಕ್ಕ ದೇವತೆಗಳಿಗಿಂತಲೂ ಮೊದಲು ತಿಳಿದುಕೊಂಡರು. (೨೮) ಅದೇ ಕಾರಣದ ಮೂಲಕ ಇಂದ್ರನು ಎಲ್ಲ ದೇವತೆಗಳಲ್ಲಿಯೂ ಹೆಚ್ಚಿನವನು. ಅವನಿಗೆ ಬಹಳ ನಿಕಟವಾದ ಬ್ರಹ್ಮಸಂಸ್ಪರ್ಶವಾಯಿತು. ಇವನು ಬ್ರಹ್ಮನೆಂಬುದು ಎಲ್ಲರಿಗಿಂತಲೂ ಮುಂಚೆ ಇಂದ್ರನಿಗೆ ತಿಳಿಯಿತು. (೨೯) ಇದು ಆ ಬ್ರಹ್ಮನ ಆದೇಶವು ನಿದರ್ಶಕ ಲಕ್ಷಣವು; ವಿದ್ಯುಲ್ಲತೆಯ ಮಿಂಚಿನಂತೆ, ಕಣ್ಣುರೆಪ್ಪೆಗಳ ಮುಚ್ಚುವಿಕೆ ತೆರೆಯುವಿಕೆಯಂತೆ (ಬ್ರಹ್ಮವು ಹೊಳೆಯುವುದು), ಇದು ಆಧಿದೈವಿಕ ಲಕ್ಷಣವು ಅಂದರೆ ನಿಸರ್ಗಶಕ್ತಿಗಳಿಗೆ ಸಂಬಂಧಿಸಿದ ಆದೇಶವು. (೩೦) ಇನ್ನು ಆಧ್ಯಾತ್ಮಿಕ ಆದೇಶವು—ಮನಸ್ಸಿನ ಗತಿಯಂತೆ ಸಂಕಲ್ಪಶಕ್ತಿಯು ಮನಸ್ಸಿನಿಂದ ಇಷ್ಟವಸ್ತುವಿನ ಸ್ಮರಣಮಾಡಿ

ವೇದಾಽಭಿ ಹ್ಯೈನಂ ಸರ್ವಾಣಿ ಭೂತಾನಿ ಸಂವಾಂಛಂತಿ ॥ ೩೧ ॥ ಉಪನಿಷದಂ ಭೋ ಬ್ರೂಹೀತ್ಯುಕ್ತಾಯ ಉಪನಿಷದ್ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ ॥ ೩೨ ॥ ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ ವೇದಾಃ ಸರ್ವಾಂಗಾನಿ ಸತ್ಯ-ಮಾಯತನಮ್ ॥ ೩೩ ॥ ಯೋವಾ ಏತಾಮೇವಂವೇದಾಪಹತ್ಯ ಪಾಪ್ಮಾನಮಂತೇ ಸ್ವರ್ಗೇ ಲೋಕೇ ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ ॥ ೩೪ ॥ ಇತಿ ಚತುರ್ಥಃ ಖಂಡಃ ॥ ೪ ॥

---

ದಂತೆ (ಬ್ರಹ್ಮಜ್ಞಾನವು ಹೊಳೆಯುವುದು). (೩೧) ಆ ಬ್ರಹ್ಮನು ಆನಂದ ಸ್ವರೂಪನು. ಆನಂದಸ್ವರೂಪನೆಂದು ಅವನ ಉಪಾಸನೆ ಮಾಡಬೇಕು. ಇಂಥ ಬ್ರಹ್ಮಜ್ಞಾನವಿದ್ದವನ ಕೃಪೆಯನ್ನು ಸರ್ವಭೂತಮಾತ್ರರು ಪಡೆಯ ಲಿಚ್ಛಿಸುವರು (೩೨) (ಶಿಷ್ಯನು ಅಂದದ್ದು) ಉಪನಿಷತ್ತನ್ನು ಅಂದರೆ ಅಂತ ಜ್ಞಾನವನ್ನು ಹೇಳಬೇಕು. (ಗುರುಗಳು ಅಂದದ್ದು) ಇದುವರೆಗೆ ಹೇಳಿದ ಜ್ಞಾನವು ಬ್ರಹ್ಮನದೇ. ನಾವು ನಿನಗೆ ಉಪನಿಷತ್ತನ್ನು ಹೇಳಿರುವೆವು. (೩೩) ತಪಸ್ಸು, ದಮ, ಮತ್ತು ಕರ್ಮ ಇವು ಆ ಜ್ಞಾನದ ಪ್ರತಿಷ್ಠೆ (ಆಧಾರವು). ಸಕಲ ವೇದಗಳು ಆ ಜ್ಞಾನದ ಅಂಗಗಳು. ಸತ್ಯವೆ ಅದರ ಆಶ್ರಯ ಸ್ಥಾನವು. (೩೪) ಯಾವನು ಇವುಗಳನ್ನು ಈ ರೀತಿಯಿಂದ ಅರಿತುಕೊಳ್ಳುವನೊ ಅವನು ಎಲ್ಲ ಪಾಪಗಳನ್ನು ನಾಶಗೊಳಿಸಿ ಕೊನೆಗೆ ಶ್ರೇಷ್ಠವಾದ ಸ್ವರ್ಗಲೋಕದಲ್ಲಿ ಪ್ರತಿಷ್ಠೆಯನ್ನು (ದೊಡ್ಡಸ್ಥಿತಿಯನ್ನು) ಹೊಂದುವನು, ಮಹತ್ವವನ್ನು ಪಡೆಯುವನು. ಇಲ್ಲಿ ಚತುರ್ಥಖಂಡವು ಸಮಾಪ್ತವು.

## ಹಲವು ಶಬ್ದಗಳ ಅರ್ಥಗಳು

**ಉಪನಿಷತ್—** ಬ್ರಹ್ಮವಿದ್ಯೆ. **ಪ್ರತಿಬೋಧ—** ಧ್ಯಾನ.
**ದಭ್ರ—** ಸ್ವಲ್ಪೇ. **ಜಾತವೇದ**— ಜ್ಞಾನಿ. (ಅಗ್ನಿಯ ಹೆಸರು).
**ನಿರಾಕರಣ—** ತಾತ್ಸಾರಮಾಡೋಣ, ಧಿಕ್ಕರಿಸೋಣ.
**ಅಮೃತತ್ವ—** ನಾಶರಹಿತ ನಿತ್ಯಾನಂದಸ್ಥಿತಿ.
**ಯಕ್ಷ—** ಅದ್ಭುತವಾದ ಪೂಜ್ಯವಸ್ತು.
**ಮಾತರಿಶ್ವನ್—** ವಾಯು, ಅಂತರಾಲದಲ್ಲಿ ಸುಳಿದಾಡುವವ.
**ಆಧಿದೈವಿಕ**– ದೈವೀಶಕ್ತಿಗಳಿಗೆ ಅಂದರೆ ನಿಸರ್ಗ ಶಕ್ತಿಗಳಿಗೆ ಸಂಬಂಧಿಸಿದ.

**ಆಧ್ಯಾತ್ಮಿಕ—** ಆತ್ಮನಿಗೆ ಸಂಬಂಧಿಸಿದ, ಶರೀರಸ್ಥ.
**ಆದೇಶ—** ನಿದರ್ಶಕ ಲಕ್ಷಣ ಅಥವಾ ಚಿನ್ಹ.
**ಪ್ರತಿಷ್ಠಾ—** ಆಧಾರ, ತಳಹದಿ. **ಅಭೀಕ್ಷ್ಣ—** ಇಷ್ಟ.
**ವನಂ—** ಆನಂದರೂಪ. **ಜ್ಯೇಯ—** ಶ್ರೇಷ್ಠನಾದ.

## ಕೇನೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ಕೇನೋಪನಿಷತ್ತು ಪ್ರಾಚೀನವಾದ ದಶೋಪನಿಷತ್ತುಗಳಲ್ಲಿ ಒಂದು. ಇದರ ಮಂತ್ರಸಂಖ್ಯೆಯು ಮೂವತ್ತುನಾಲ್ಕು ಮಾತ್ರ ಇರುವುದರಿಂದ ಇದಾದರೂ ಒಂದು ಬಹಳ ಸಣ್ಣ ಉಪನಿಷತ್ತು. ಆದರೆ ಸಣ್ಣದಿದ್ದ ಮಾತ್ರಕ್ಕೆ ಇದರ ಮಹತ್ವವು ಕಡಿಮೆಯಾಗಲಾರದು. ತದ್ವಿರುದ್ಧ ಉಪನಿಷತ್ತುಗಳು ಸಣ್ಣವಿದ್ದಷ್ಟು ಅವು ಹೆಚ್ಚು ಮಹತ್ವವುಳ್ಳವುಗಳಿರುವವೆಂದು ನಮಗೆ ಕಂಡು ಬರುವದು ! ಉದಾ:- ಎಲ್ಲ ಉಪನಿಷತ್ತುಗಳನ್ನು ಓದುವುದಾಗದಿದ್ದರೂ ಹತ್ತು ಉಪನಿಷತ್ತುಗಳನ್ನಾದರೂ ಓದಬೇಕು. ಅವುಗಳನ್ನೂ ಓದುವದಾಗ ದಿದ್ದರೆ ಕೊನೆಗೆ ಉಪನಿಷತ್ಸಾರಭೂತವಾದ ಮಾಂಡೂಕ್ಯೋಪನಿಷತ್ತನ್ನಾ ದರೂ ಓದಬೇಕೆಂದು ಸಂಸ್ಕೃತದಲ್ಲಿ ಒಂದು ಸುಭಾಷಿತವಿರುವುದು. ಮಾಂಡೂ ಕ್ಯೋಪನಿಷತ್ತು ಹನ್ನೆರಡೆ ಮಂತ್ರಗಳುಳ್ಳದ್ದು. ಆದರೂ ಅದರ ಮಹತ್ವವು ಅಷ್ಟೊಂದು ಹೇಳಲ್ಪಟ್ಟಿದೆ.

ಇನ್ನು ಉಪನಿಷತ್ತುಗಳಲ್ಲಿ ಬ್ರಹ್ಮವಿದ್ಯೆಯೆ ಮುಖ್ಯ ವಿಷಯವು. ಎರಡನೆಯ ವಿಷಯಗಳು ಎಲ್ಲಿಯಾದರೂ ಸಂದಿಗೊಂದಿಗಳಲ್ಲಿದ್ದರೂ ಅವು ಕೇವಲ ಆನುಷಂಗಿಕವಾಗಿ ಅಥವಾ ಮುಖ್ಯ ವಿಷಯಕ್ಕೆ ಪೋಷಕವಾಗಿ ಇರುವುವು. ಒಮ್ಮೆ ಅನ್ವಯದಿಂದ, ಒಮ್ಮೆ ವ್ಯತಿರೇಕದಿಂದ, ಒಮ್ಮೆ ಸ್ಪಷ್ಟ ವಾಗಿ ಮತ್ತೊಮ್ಮೆ ಸಂದಿಗ್ಧವಾಗಿ, ಒಮ್ಮೆ ಸರಲಭಾಷೆಯಲ್ಲಿ ಮತ್ತೊಮ್ಮೆ ಅಲಂಕಾರಿಕ ಭಾಷೆಯಲ್ಲಿ, ಒಮ್ಮೆ ಪ್ರತ್ಯಕ್ಷ ಒಡನುಡಿಗಳಿಂದ ಇನ್ನೊಮ್ಮೆ ರೂಪಕ ದೃಷ್ಟಾಂತಗಳ ಸಹಾಯದಿಂದ ಬ್ರಹ್ಮಜ್ಞಾನವೆ ನಾನಾಬಗೆಯಿಂದ, ನಾನಾವಿಧದಿಂದ, ನಾನಾರೂಪದಿಂದ ಉಪನಿಷತ್ತುಗಳಲ್ಲಿ ಬೋಧಿಸಲ್ಪಟ್ಟಿರು ವುದು. ಆದರೆ ಪ್ರತಿಯೊಂದು ಉಪನಿಷತ್ತಿನಲ್ಲಿ ಬ್ರಹ್ಮಜ್ಞಾನದ ಕೆಲವೊಂದು ಅಂಶವು ಅಥವಾ ಅಂಗವು ವಿಶೇಷ ಬಲಗೊಟ್ಟು ಹೇಳಲ್ಪಟ್ಟಿರುವುದು. ಪರ

ಬ್ರಹ್ಮನು ಇಂದ್ರಿಯಾತೀತನು, ಅವನೇ ಸರ್ವಪ್ರೇರಕನು, ಎಂಬ ವಿಷಯವು ಈ ಉಪನಿಷತ್ತಿನಲ್ಲಿ ಚನ್ನಾಗಿ ವರ್ಣಿಸಲ್ಪಟ್ಟಿವೆ. ಬ್ರಹ್ಮಜ್ಞಾನವು ನನಗಿರುವುದು ನಿನಗಿರುವುದು ಎಂದು ಹೆಮ್ಮೆಯಿಂದ ಎದೆಯುಬ್ಬಿಸಿಕೊಂಡು ಅಡ್ಡಾಡುವವರು ಬಹುಜನರು. ಆದರೆ ಅವರೊಳಗೆ ನಿಜವಾದ ಜ್ಞಾನಿಗಳೆಷ್ಟು ಮತ್ತು ಆ ಜ್ಞಾನಿಗಳ ಲಕ್ಷಣಗಳೇನು, ಎಂಬುದನ್ನು ಋಷಿಗಳು ಬಹಳ ಮನೋರಂಜಕವಾಗುವಂತೆ ವಿರೋಧಾಭಾಸದಿಂದ ಈ ಉಪನಿಷತ್ತಿನಲ್ಲಿ ವರ್ಣಿಸಿರುವರು. ಆ ದೇವತೆ ಹೆಚ್ಚಿನದು ಈ ದೇವತೆ ಹೆಚ್ಚಿನದು, ನಮ್ಮ ದೇವರು ದೊಡ್ಡವನು ನಿಮ್ಮ ದೇವರು ದೊಡ್ಡವನು, ಎಂದು ಸಾಮಾನ್ಯ ಜನರು ತಮ್ಮ ತಮ್ಮ ಇಷ್ಟದೇವತೆಗಳ ಮಾಹಾತ್ಮ್ಯವನ್ನು ಹೊಗಳುವರು. ಜಗತ್ತಿನಲ್ಲಿ ನಾನಾ ಇಷ್ಟದೇವತೆಗಳ ಉಪಾಸನೆಯು ರೂಢವಿರುವುದು. ಆದರೆ ನಮ್ಮ ದೇವತೆಯಾಗಲಿ ಮಿಕ್ಕವರ ದೇವತೆಯಾಗಲಿ, ಅವೆಲ್ಲ ಎಲ್ಲ ದೇವತೆಗಳಾಚೆಗಿರುವ ಅಖಂಡ, ಅನಂತ, ದಿವ್ಯ, ನಿರಂಜನ ಪರಮಾತ್ಮನ ಸಂಪೂರ್ಣ ಜ್ಞಾನವಾಗುವುದಕ್ಕೋಸ್ಕರ ಕೈಕೊಂಡ ಸಾಧನಗಳೆಂಬುದನ್ನು ನಾವು ಮರೆಯಕೂಡದು. ತಮ್ಮ ತಮ್ಮ ಭಿನ್ನ ಭಿನ್ನ ಸ್ವಭಾವಗಳಿಗನುಸರಿಸಿ, ತಮ್ಮ ಅಲ್ಪ ಬಹು ಶಕ್ತಿಗಳಿಗನುಸರಿಸಿ, ತಮ್ಮ ಸಾಧನೆಯು ನಡೆಯಲಿಕ್ಕೆ ಸುಲಭವಾಗಬೇಕೆಂದು ನಾನಾ ದೇವತೆಗಳನ್ನು ಜನರು ಪೂಜಿಸುವರು. ಆದರೆ ಯಾವ ದೇವತೆಗಳೂ ಸ್ವತಂತ್ರವಲ್ಲ, ಸರ್ವ ದೇವತೆಗಳೂ ಪರಬ್ರಹ್ಮಪ್ರೇರಿತವಾದವುಗಳು, ಎಂಬ ಸಿದ್ಧಾಂತವು ಈ ಉಪನಿಷತ್ತಿನಲ್ಲಿ ಮಾಡಲ್ಪಟ್ಟಿವೆ. ಋಷಿಗಳು ಒಳ್ಳೇ ಸುಂದರವಾದ ಒಂದು ಕಥಾನುಸಂದರ್ಭದಿಂದ ಈ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಉಪಾಸನೆಗಾಗಿ ಅನೇಕ ದೇವತೆಗಳನ್ನು ಗ್ರಹಿಸಿದ್ದರೂ ವೈದಿಕಧರ್ಮದ 'ಏಕಮೇವಾದ್ವಿತೀಯಂ' ಎಂಬ ಸನಾತನ ಪ್ರಮೇಯವು ಒಂದು ಕ್ಷಣವಾದರೂ ಕವಿಗಳ ಕಣ್ಣುಮುಂದಿನಿಂದ ಕದಲಿರಲಿಲ್ಲ. ಸಾಮಾನ್ಯ ಜನರು ಯಾವ ದೇವತೆಗಳ ಉಪಾಸನೆಯಲ್ಲಿ ತೊಡಗಿರುವರೊ ಆ ದೇವತೆಗಳು ಪರಮಶ್ರೇಷ್ಠವಾದ ಬ್ರಹ್ಮವಲ್ಲವೆಂದು ಕವಿಗಳು ಧಿಕ್ಕರಿಸಿ ಒತ್ತಿ ಹೇಳುತ್ತಾರೆ. ವಸ್ತುತಃ 'ಏಕಂ ಸದ್ವಿಪ್ರಾ ಬಹುಧಾ ವದಂತಿ' ಅಥವಾ 'ಏಕಮೇವಾದ್ವಿತೀಯಂ' ಎಂಬ ಶ್ರುತಿವಾಕ್ಯಗಳಿಗೆ ಕೇನೋಪನಿಷತ್ತು ಒಂದು ಮನೋಹರವಾದ ಟೀಕೆ ಇದ್ದಂತೆ ಇರುವುದು. ಪರಮ

ಸತ್ಯವು ಒಂದೇ ಇರುವದು ಹಾಗು ಅದು ಅತೀಂದ್ರಿಯವಿರುವುದು. ಈ ಎರಡೇ ಮುಖ್ಯ ಪ್ರಮೇಯಗಳನ್ನು ಈ ಉಪನಿಷತ್ತಿನಲ್ಲಿ ಕವಿಗಳು ಚರ್ಚಿಸಿರುವರೆಂದರೂ ಸಲ್ಲುವದು. ಎರಡನೆಯ ಖಂಡವೊಂದನ್ನು ಹಾಗೂ ನಾಲ್ಕನೆಯ ಖಂಡದೊಳಗಿನ ಒಂದೆರಡು ಶ್ಲೋಕಗಳನ್ನುಳಿದು ಮಿಕ್ಕ ಉಪನಿಷತ್ತಿನ ಭಾಷೆಯು ಬಹಳ ಸುಲಭವಿರುವುದು. ಎರಡನೆಯ ಖಂಡದಲ್ಲಿ ಕಂಡು ಬರುವ ಕ್ಲಿಷ್ಟತೆಯು ಅಲ್ಲಿ ಉಪಯೋಗಿಸಲ್ಪಟ್ಟ ಸಂಕ್ಷೇಪ ಪದ್ಧತಿಯ ದೋಷವು. ಹೀಗಿದ್ದರೂ ಒಮ್ಮೆ ತಿಳಿವು ಹುಟ್ಟಿತೆಂದರೆ ಈ ಕ್ಲಿಷ್ಟತೆಯೆ ಬಹು ಸೊಗಸಾಗಿ ಕಂಗೊಳಿಸುವುದು. ಗುಡ್ಡವನ್ನು ಏರುವಾಗ ಎಷ್ಟೆ ಕಷ್ಟವಾದರೂ ಮನುಷ್ಯನು ಒಮ್ಮೆ ಮೇಲೆ ಏರಿದನೆಂದರೆ ಹೇಗೆ ಆನಂದಿತನಾಗುವನೊ ಹಾಗೆಯೆ ಈ ಎರಡನೆಯ ಖಂಡದ ಕ್ಲಿಷ್ಟತೆಯ ವಿಷಯವಿರುವುದು. ನಾಲ್ಕನೆಯ ಖಂಡದಲ್ಲಿಯ ಕ್ಲಿಷ್ಟತೆಯು ಅಲ್ಲಿ ಉಪಯೋಗಿಸಲ್ಪಟ್ಟ ಕೆಲವು ಪಾರಿಭಾಷಿಕ ಶಬ್ದಗಳ ಮೂಲಕ ಉತ್ಪನ್ನವಾಗಿರುವುದು. ಒಟ್ಟಿನಮೇಲೆ ನೋಡಲಾಗಿ ಒಳ್ಳೆ ಚಿಕ್ಕ ಬಾಲಕರಿಗೆ ಸಹ ತಿಳಿಯುವಂತೆ ಕಥೆಗಳನ್ನು ಹೇಳುತ್ತ, ದೃಷ್ಟಾಂತಗಳನ್ನು ಕೊಡುತ್ತ ಋಷಿಗಳು ಈ ಉಪನಿಷತ್ತನ್ನು ಬಹಳ ಮನೋಹರವಾಗುವಂತೆ, ಜ್ಞಾನವು ಮನಸ್ಸಿನಲ್ಲಿ ನಟ್ಟು ಬದ್ಧಮೂಲವಾಗುವಂತೆ ರಚಿಸಿರುವರು.

ಬ್ರಹ್ಮವು ಹೇಳಿ ಕೇಳಿ ಅತೀಂದ್ರಿಯವಸ್ತುವು. ಸೃಷ್ಟ ಜಗತ್ತಿನಲ್ಲಿಯ ಸೂಕ್ಷ್ಮತಮ ವಸ್ತುಗಳನ್ನು ಸಹ ನಾನಾತರದ ಯಾಂತ್ರಿಕ ಉಪಕರಣಗಳ ಸಹಾಯದಿಂದ ನೋಡಬಹುದು, ಗೊತ್ತುಹಿಡಿಯಬಹುದು. ಆದರೆ ಯಾವ ವಸ್ತುವು ಈ ಇಂದ್ರಿಯಶಕ್ತಿಗಳನ್ನೆ ನಿರ್ಮಿಸಿರುವುದೊ ಅದನ್ನು ಕಾಣುವ ಬಗೆ ಹೇಗೆ? ಕಣ್ಣಿನಿಂದ ಜಗತ್ತನ್ನು ನೋಡಬಹುದು ಆದರೆ ಕಣ್ಣನ್ನೆ ನೋಡುವುದಾದರೆ ಹೇಗೆ ನೋಡಬೇಕು? ಆದುದರಿಂದಲೆ ಬ್ರಹ್ಮನು ಕಣ್ಣಿನ ಕಣ್ಣು, ಕಿವಿಯ ಕಿವಿ, ಎಂದು ಹೇಳಿದ್ದಾರೆ. ಕಣ್ಣಿನ ಕಣ್ಣು ಅಂದರೆ ಕಣ್ಣನ್ನು ನೋಡುವ ಸಾಮರ್ಥ್ಯವು ಯಾವನಲ್ಲಿರುವುದೊ ಅವನು. ಕಣ್ಣು ಯಾವ ಶಕ್ತಿಯ ಮೂಲಕ ನೋಡಬಲ್ಲುದೊ ಆ ಶಕ್ತಿಯನ್ನು ಕೊಡುವವನು, ಈ ಇಂದ್ರಿಯಗಳ ಮತ್ತು ಇಂದ್ರಿಯಶಕ್ತಿಗಳ ಆಚೆಗಿದ್ದು ಪ್ರೇರಿಸುವ [illegible] ಗಳಿಂದ ಇಂದ್ರಿಯಗಳಿಗೆ ಅಗೋಚರನು, ಇಂದ್ರಿಯಾತೀತನು.

ಸಾಮಾನ್ಯತಃ ಮನುಷ್ಯನು ತನ್ನ ಇಂದ್ರಿಯಶಕ್ತಿಗಳ ಮೇಲೆಯೆ ಅವಲಂಬಿಸಿ ಎಲ್ಲ ವಸ್ತುಗಳ ಆಕಲನವನ್ನು ಅವುಗಳಿಂದಲೆ ಮಾಡುವನು. ಆದರೆ ಇವುಗಳ ಶಕ್ತಿಯು ಎಲ್ಲಿಂದ ಬಂದಿತು, ಇವುಗಳ ಪ್ರೇರಕನು ಯಾರು, ಎಂಬ ತಾತ್ತ್ವಿಕ ವಿಚಾರದಿಂದ ಈ ಉಪನಿಷತ್ತಿನ ಆರಂಭವಿರುವುದು. ಆರ್ಯಋಷಿಗಳ ದೃಷ್ಟಿಯು ಯಾವಾಗಲೂ ಅತ್ಯಂತ ಸೂಕ್ಷ್ಮವಿದ್ದಿತೆಂಬುದು ಹೆಜ್ಜೆಜ್ಜೆಗೆ ನಮಗೆ ಪ್ರತೀತವಾಗುವುದು. ಈ ಅವರ ಮನೋಧರ್ಮಕ್ಕನುಸರಿಸಿ ಅವರು ಪ್ರತಿಯೊಂದು ವಿಷಯದಲ್ಲಿಯೂ ಮೂಲತತ್ತ್ವಗಳನ್ನು ಹುಡುಕಿ ತೆಗೆಯುವುದರಲ್ಲಿ ತಮ್ಮ ತೈಲಬುದ್ಧಿಯನ್ನೂ ತಮ್ಮ ದಿವ್ಯದೃಷ್ಟಿಯನ್ನೂ ತಮ್ಮ ಯೋಗಸಾಮರ್ಥ್ಯವನ್ನೂ ಉಪಯೋಗಿಸಿರುವರು. ಕೇವಲ ಬಹಿರ್ಮುಖ ವಿಚಾರಗಳಿಂದ ಅವರಿಗೆ ಸಮಾಧಾನವೆ ಆಗುತ್ತಿರಲಿಲ್ಲ. ಇವರಾಚೆಗೇನಿರುವುದು, ಅದರಾಚೆಗೇನಿರುವುದು, ಎಂದು ಅವರು ಪ್ರಶ್ನೆಮಾಡಿ ನಿಜವಸ್ತುವಿನ ಜ್ಞಾನವನ್ನು ಹುಡುಕುತ್ತಿದ್ದರು. ಈ ತರದ ಸಂಶೋಧನದಿಂದ ನಿಶ್ಚಿತವಾದ ಜ್ಞಾನವನ್ನು ಅವರು ನಮಗೆ ಹೇಳಿರುವರು. ಅದೇ ಪ್ರಕಾರದ ತತ್ತ್ವಾನ್ವೇಷಣದ ಶಕ್ತಿಯು ನಮ್ಮಲ್ಲಿಯೂ ಉಂಟಾಗಲಿ ಎಂದು ಪರಮಾತ್ಮನನ್ನು ಬೇಡಿಕೊಂಡು ಈ ನಾಲ್ಕು ನುಡಿಗಳನ್ನು ಮುಗಿಸುವ. ಓಂ ಶಾಂತಿಃ.

---

# ಕಠೋಪನಿಷತ್ತು

## ಕಠೋಪನಿಷತ್ತಿನ ಸಾರಾಂಶ

ಈ ಉಪನಿಷತ್ತಿನಲ್ಲಿ ಎರಡು ಅಧ್ಯಾಯಗಳಿರುವವು. ಒಂದೊಂದು ಅಧ್ಯಾಯದಲ್ಲಿ ಮೂರು 'ವಲ್ಲಿ' ಗಳು ಅಂದರೆ ಖಂಡಗಳಿರುವವು. ಮೊದಲನೆಯ ಅಧ್ಯಾಯವು ತುಸು ದೊಡ್ಡದಿರುವದು. ಶಾಂತಿಮಂತ್ರವನ್ನು ಬಿಟ್ಟು

ಮಂತ್ರಸಂಖ್ಯೆಯು ೧೧೯ ಇರುವದು. ಕೆಲವು ಪ್ರತಿಗಳಲ್ಲಿ ೧೧೮ ಮಂತ್ರಗಳೆ ಕೊಡಲ್ಪಟ್ಟಿರುವವು. ಆ ಪ್ರತಿಗಳಲ್ಲಿ ಮಂತ್ರಗಳು ಕಡಿಮೆ ಇರುವವೆಂದು ತಿಳಿಯಕೂಡದು. ಯಾಕಂದರೆ, ಆ ಪ್ರತಿಗಳಲ್ಲಿ ೨ ನೇ ವಲ್ಲಿಯಲ್ಲಿಯ ೨೦-೨೧ ಮಂತ್ರಗಳು ಕೂಡಿ ಒಂದೇ ಮಂತ್ರವೆಂದು ಎಣಿಸಲ್ಪಟ್ಟಿರುವವು.

ಈ ಉಪನಿಷತ್ತಿನಲ್ಲಿ ಸಾಧಾರಣವಾಗಿ ಮೂರು ವ್ಯಕ್ತಿಗಳ ವಚನಗಳಿರುವವೆಂದು ಅನ್ನಬಹುದು. ಯಮ-ನಚಿಕೇತರ ಸಂವಾದವೆ ಮುಖ್ಯವಾದದ್ದು. ಅಲ್ಲಲ್ಲಿ ಉಪನಿಷತ್ಕಾರರೂ ಸ್ಪಷ್ಟೀಕರಣ ಮಾಡುವ ಹಲವು ಮಂತ್ರಗಳನ್ನು ಹೇಳಿರುವರು.

ಶಾಂತಿಮಂತ್ರದಲ್ಲಿ ಉಪನಿಷತ್ಕಾರರು ತಮ್ಮಿಬ್ಬರನ್ನೂ ಅಂದರೆ ಉಪನಿಷತ್ಕಾರರನ್ನೂ ಉಪನಿಷತ್ತನ್ನು ಕೇಳುವವರನ್ನೂ ಪರಮಾತ್ಮನು ಕಾಪಾಡಬೇಕು, ತಮ್ಮಿಬ್ಬರಿಗೂ ಸುಖಶಾಂತಿಗಳನ್ನು ಕೊಡಬೇಕು, ಎಂದು ಬೇಡಿಕೊಂಡಿರುವರು. ತಾವಿಬ್ಬರೂ ಕೂಡಿ ವೀರಕರ್ಮಗಳನ್ನು ಮಾಡಬೇಕು, ತಮ್ಮಿಬ್ಬರ ಅಧ್ಯಯನವು ಶ್ರೇಯಸ್ಕರವಾಗಬೇಕು, ತಮ್ಮಿಬ್ಬರಲ್ಲಿ ಎಂದಿಗೂ ದ್ವೇಷವು ಹುಟ್ಟಬಾರದು ಎಂಬುದೆ ಅವರ ಕೋರಿಕೆಯು.

ಶಾಂತಿಮಂತ್ರದ ನಂತರ ಉಪನಿಷತ್ತಿನ ಕಥೆಗೆ ಆರಂಭವಾಗುವದು. ಓರ್ವ ಬಡ ಬ್ರಾಹ್ಮಣನಿದ್ದನು. ಅವನು ಯಜ್ಞಮಾಡುವದರಿಂದ ದೊರಕುವ ಕೀರ್ತಿಯ ಆಶೆಯಿಂದ ವಿಶ್ವಜಿತ್ ಎಂಬ ದೊಡ್ಡ ಯಜ್ಞವನ್ನು ಮಾಡಿದನು. ಯಾಜಕನು ತನ್ನ ಎಲ್ಲ ಸಂಪತ್ತನ್ನು ದಾನಮಾಡಿಬಿಡಬೇಕೆಂಬುದೆ ಆ ಯಜ್ಞದ ಮುಖ್ಯವಿಧಿಯು. ಅದಕ್ಕನುಸರಿಸಿ ಆ ಬ್ರಾಹ್ಮಣನು ತನ್ನ ಎಲ್ಲ ಸಂಪತ್ತನ್ನು ದಾನಮಾಡಿಬಿಟ್ಟನು. ಆದರೆ ಅವನು ಬಡವನಿದ್ದುದರಿಂದ ಅವನ ಕಡೆಗೆ ಬಹಳ ಸಂಪತ್ತು ಇರಲಿಲ್ಲ. ತನ್ನ ಕಡೆಗೆ ಇದ್ದ ಮುಪ್ಪಾದ, ಬರಡಾದ, ಕಾಲುಹೋದ ಆಕಳುಗಳನ್ನು ಅವನು ದಾನಮಾಡಿದನು. ಅವನ ಮನೆಯಲ್ಲಿದ್ದ ಚಿಕ್ಕ ಮಗನು ಇದನ್ನೆಲ್ಲ ನೋಡಿ ವಿಷಾದಪಟ್ಟನು. ಯಾಕಂದರೆ ಇಂತಹ ಅನುಪಯುಕ್ತ ವಸ್ತುಗಳನ್ನು ದಾನಮಾಡುವದರಿಂದ ಪುಣ್ಯವು ದೊರಕಲಾರದೆಂದು ಅವನಿಗೆ ಗೊತ್ತಿತ್ತು. ತನ್ನ ತಂದೆಯು ತನ್ನಲ್ಲಿ ಸಾಕಷ್ಟು ಸಂಪತ್ತು ಇಲ್ಲದಿದ್ದರೂ ಕೇವಲ ಲೌಕಿಕ ಕೀರ್ತಿಯ ಆಶೆಯಿಂದ ವಿಶ್ವಜಿತ್ [illegible] ಯಾಗವನ್ನು ಹೂಡಿದನೆಂದು ಅವನಿಗೆ ತೋರಿತು. ತನ್ನ

ತಂದೆಗೆ ನಿಜವಾದ ಪುಣ್ಯವು ದೊರಕಬೇಕೆಂದೂ ಅವನ ಯಜ್ಞವು ವಿಫಲ-ವಾಗಬಾರದೆಂದೂ ತನ್ನ ಆತ್ಮಯಜ್ಞದಿಂದ ಇದನ್ನೆಲ್ಲ ಕೈಗೂಡಿಸಬೇಕೆಂದೂ ಆ ಚಿಕ್ಕ ಮಗುವಿನ ಮನಸ್ಸಿನಲ್ಲಿ ಬಂದಿತು. ಆ ಮಗುವಿನ ಹೆಸರು ನಚಿಕೇತ. ಈ ಭಾವನೆಯು ಅವನಲ್ಲಿ ದೃಢವಾದ ಬಳಿಕ ನನ್ನನ್ನು ಯಾರಿಗೆ ದಾನ ಕೊಡುವಿ, ಎಂದು ಅವನು ತಂದೆಯನ್ನು ಎರಡು-ಮೂರು ಸಾರೆ ಕೇಳಿದನು. ಮಗನ ಈ ಪ್ರಶ್ನೆಯು ಹಟವಾರಿತನದ್ದೆಂದು ಕಲ್ಪಿಸಿ ತಂದೆಯು ಅದರ ಕಡೆಗೆ ಏನೂ ಲಕ್ಷ ಕೊಡಲಿಲ್ಲ. ಮಗನು ಬಿಟ್ಟೂಬಿಡದೆ ಕೇಳಲಾರಂಭಿಸಿದ್ದನ್ನು ನೋಡಿ ಸಿಟ್ಟಾಗಿ, ನಿನ್ನನ್ನು ಯಮರಾಜನಿಗೆ ಕೊಟ್ಟಿರುವೆನು ಹೋಗು, ಎಂದು ಹೇಳಿದನು. ತನ್ನನ್ನು ತಂದೆಯು ಯಮರಾಜನಿಗೆ ಯಾಕೆ ಕೊಟ್ಟಿರಬಹುದೆಂದು ನಚಿಕೇತನು ತನ್ನ ಮನಸ್ಸಿನಲ್ಲಿಯೆ ಯೋಚಿಸತೊಡಗಿದನು. ಅಷ್ಟರಲ್ಲಿ, ಸಿಟ್ಟಿನ ಭರದಲ್ಲಿ ತಾನಾಡಿದ ಮಾತುಗಳ ಬಗ್ಗೆ ತಂದೆಗೆ ಬಲು ಪಶ್ಚಾತ್ತಾಪವಾಯಿತು. ತಲೆಯು ಶಾಂತವಾದ ಬಳಿಕ ತನ್ನ ಮಗನನ್ನು ಯಮನ ಕಡೆಗೆ ಕಳುಹಲಿಕ್ಕೆ ಅವನು ಹಿಂದುಮುಂದೆ ನೋಡತೊಡಗಿದನು. ಆದರೆ ನಚಿಕೇತನು ತನ್ನ ತಂದೆಗೆ ಅವನ ಪ್ರತಿಜ್ಞೆಯ ಭಂಗವನ್ನು ಮಾಡಗೊಡಲಿಲ್ಲ. ಮನುಷ್ಯನ ಕ್ಷಣಭಂಗುರತ್ವದ ಉಪದೇಶ ಮಾಡಿ, ಹಿಂದೆ ಆಗಿಹೋದ ಹಾಗೂ ಪ್ರಸ್ತುತ ಇರುವ ಶ್ರೇಷ್ಠ ಪುರುಷರ ಉದಾಹರಣೆಗಳನ್ನು ಕೊಟ್ಟು, ತನ್ನ ತಂದೆಯು ಪ್ರತಿಜ್ಞೆಗನುಸರಿಸಿ ನಡೆಯುವಂತೆ ನಚಿ-ಕೇತನು ಮಾಡಿದನು. ನಿರುಪಾಯನಾಗಿ ಬ್ರಾಹ್ಮಣನು ಮಗನನ್ನು ಯಮನ ಕಡೆಗೆ ಕಳುಹಿದನು. ಯಮನು ಮನೆಯಲ್ಲಿಲ್ಲದ್ದರಿಂದ ನಚಿಕೇತನು ಮೂರು ದಿನಗಳ ವರೆಗೆ ಅವನ ಮನೆಯ ಮುಂದೆಯೆ ಉಪವಾಸ ಕುಳಿತು ಹಾದೀ ಕಾಯಬೇಕಾಯಿತು. ಯಮನು ಮನೆಗೆ ಬರಲು ಈ ಚಿಕ್ಕ ಮೂರ್ತಿಯನ್ನು ನೋಡಿ ಬೆರಗಾದನು. ನಚಿಕೇತನು ಅದುವರೆಗೆ ಉಪವಾಸವಿದ್ದುದನ್ನು ಕೇಳಿ ಅವನು ಬಹಳ ವ್ಯಸನಬಟ್ಟನು. ಕೂಡಲೆ ನೀರು ಮುಂತಾದ್ದನ್ನು ಕೊಟ್ಟು ನಚಿಕೇತನನ್ನು ಸಂತುಷ್ಟಪಡಿಸಿ ಅವನಿಗೆ ಮೂರು ದಿನಗಳವರೆಗೆ ಉಪವಾಸ ವಿದ್ದುದಕ್ಕಾಗಿ ಮೂರು ವರಗಳನ್ನು ಕೊಡಮಾಡಿದನು. ನಚಿಕೇತನು ಕ್ರಮವಾಗಿ ಮೂರು ವರಗಳನ್ನು ಬೇಡಿಕೊಂಡು ಅವುಗಳನ್ನು ಪಡೆದನು.

ತನ್ನ ತಂದೆಯ ಕೋಪವು ಶಾಂತವಾಗಬೇಕು, ತಾನು ಯಮನ ಬಳಿ

ಯಿಂದ ತಿರುಗಿಹೋದಮೇಲೆ ತಂದೆಯು ತನ್ನ ಗುರ್ತು ಹಿಡಿದು ತನ್ನನ್ನು ಪ್ರೇಮದಿಂದ ಮಾತಾಡಿಸಬೇಕು, ತಂದೆಯ ಚಿಂತೆಯು ಅಳಿದು ಅವನು ಶಾಂತಚಿತ್ತನಾಗಬೇಕು, ಎಂಬುದಾಗಿ ನಚಿಕೇತನು ಮೊದಲನೆ ವರದಿಂದ ಬೇಡಿಕೊಂಡನು. ಹಾಗೆ ಆಗುವದೆಂದು ಯಮರಾಜನು ಅವನಿಗೆ ಆಶೀರ್ವಾದ ಕೊಟ್ಟನು. ನಚಿಕೇತನು ಎರಡನೆ ವರದಿಂದ ಸ್ವರ್ಗಸಾಧನವಾದ ಅಗ್ನಿಯ ಉಪಾಸನೆಯ ಜ್ಞಾನವನ್ನು ಪಡೆದುಕೊಂಡನು. ನಚಿಕೇತನ ಜ್ಞಾನಜಿಜ್ಞಾಸೆಯನ್ನೂ ಅವನ ತೀಕ್ಷ್ಣಬುದ್ಧಿಯನ್ನೂ ನೋಡಿ ಸಂತುಷ್ಟನಾಗಿ ಯಮನು ಯಜನೀಯ ಅಗ್ನಿಯು ಇನ್ನು ಮುಂದೆ ನಚಿಕೇತನ ಹೆಸರಿನಿಂದಲೆ ಕರೆಯಲಾಗುವದೆಂದು ಹೇಳಿದನು. ಇವಲ್ಲದೆ ಅಗ್ನಿಯ ಸ್ವರೂಪವನ್ನೂ ಯಜ್ಞದ ವಿಧಿಯನ್ನೂ ಅಗ್ನಿಯ ಉಪಾಸನೆಯ ಫಲವನ್ನೂ ಯಮನು ನಚಿಕೇತನಿಗೆ ಹೇಳಿದನು. ಆಮೇಲೆ ಮೂರನೆ ವರದಿಂದ ನಚಿಕೇತನು ಆತ್ಮಜ್ಞಾನವನ್ನು ಕೇಳಿದನು. ಮೊದಮೊದಲು ಈ ಜ್ಞಾನವನ್ನು ಪದೇಶಿಸಲಿಕ್ಕೆ ಯಮನು ಒಪ್ಪಲಿಲ್ಲ. ಅದು ಅಗಮ್ಯವೂ ದುಜ್ಞೇ೯ಯವೂ ಇರುವುದೆಂದು ಯಮನು ಹೇಳಿದನು. ಆದರೆ ನಚಿಕೇತನು ತನ್ನ ನಿಶ್ಚಯವನ್ನು ಬಿಡಲಿಲ್ಲ. ಯಮನು ಪುನಃ ಪುನಃ ನಾನಾ ಕಾಮನೆಗಳ ಪೂರ್ತಿಯನ್ನೂ ಸಕಲೈಶ್ವರ್ಯಗಳನ್ನೂ ದೀರ್ಘಾಯುಷ್ಯವನ್ನೂ ಅರಸೊತ್ತಿಗೆಯನ್ನೂ ಬೇಡಿಕೊ, ಸಕಲ ಸ್ವರ್ಗಸುಖ ಸಾಧನಗಳನ್ನು ನಾನು ನಿನಗೆ ಇಲ್ಲಿಯೆ ಒದಗಿಸಿಕೊಡುವೆನು, ಈ ಆತ್ಮಜ್ಞಾನದ ಬಗ್ಗೆ ಮಾತ್ರ ಪ್ರಶ್ನೆಮಾಡಬೇಡ, ಎಂದು ಬಹುಪರಿಯಾಗಿ ನಚಿಕೇತನಿಗೆ ಹೇಳಿದನು. ಆದರೆ ನಚಿಕೇತನು ಇಂತಹ ಮೋಹಕ್ಕೆ ಒಳಗಾಗದೆ ಅವುಗಳಾವೂ ನನಗೆ ಬೇಡ, ನನಗೆ ಬೇಕಾದದ್ದು ಆ ಆತ್ಮಜ್ಞಾನವೆ, ಅದನ್ನೆ ನನಗೆ ದಯಪಾಲಿಸು, ಎಂದು ಹಟಹಿಡಿದನು. ಆ ಬಾಲಬ್ರಹ್ಮಚಾರಿಯ ಈ ಸತ್ಯಧೃತಿಯನ್ನು ಕಂಡು ಯಮದೇವನು ಪ್ರಸನ್ನನಾದನು. ಮುಂದೆ ಅವನಿಗೆ ವಿಸ್ತಾರವಾಗಿ ಬ್ರಹ್ಮಜ್ಞಾನವನ್ನು ಹೇಳಿದನು.

'ಈ ಜಗತ್ತಿನಲ್ಲಿ ಶ್ರೇಯಸ್ಸು ಪ್ರೇಯಸ್ಸು, ಆತ್ಮಸುಖ ವಿಷಯಸುಖ, ಎಂಬ ಎರಡು ತರದ ಸುಖಗಳು. ಮನುಷ್ಯನು ಇವೆರಡರಲ್ಲಿ ಒಂದರಿಂದ ಪ್ರೇರಿತನಾಗಿ ಕರ್ಮದಲ್ಲಿ ಪ್ರವೃತ್ತನಾಗುತ್ತಾನೆ. ಬುದ್ಧಿವಂತರು ಆತ್ಮಸುಖ ... ...ಡರು ವಿಷಯಸುಖವನ್ನು ಹುಡುಕುತ್ತಿರುತ್ತಾರೆ. ನೀನು

ಪ್ರೇಯಸ್ಸನ್ನು ಬಿಟ್ಟು ಶ್ರೇಯಸ್ಸನ್ನೆ ಧ್ಯೇಯವಾಗಿಟ್ಟುಕೊಂಡಿರುವಿ. ಆತ್ಮ ಸುಖವು ಆತ್ಮಜ್ಞಾನದಿಂದ ಆತ್ಮನಲ್ಲಿಯೆ ದೊರೆಯತಕ್ಕ ವಸ್ತುವು. ಆ ಆತ್ಮನೆ ಸತ್ಯವಸ್ತುವು. ಅವನೆ ಎಲ್ಲಕ್ಕೂ ಆಧಾರನು. ಅವನು ಗೂಢವಾಗಿ ಮನುಷ್ಯನ ಅಂತಃಕರಣದಲ್ಲಿರುವನು. ಅಧ್ಯಾತ್ಮಯೋಗದಿಂದ, ಧ್ಯಾನದಿಂದ ಅವನ ಸಂಪೂರ್ಣ ಜ್ಞಾನವಾಗಬಲ್ಲುದು. ವೇದಗಳಾಗಲಿ ನಾನಾ ವ್ರತಗಳಾಗಲಿ ಈ ಆತ್ಮನನ್ನೆ ಧ್ಯೇಯವಾಗಿಟ್ಟುಕೊಂಡಿರುವವು. ಓಂಕಾರಮಂತ್ರವೆ ಆ ಆತ್ಮಸ್ವರೂಪದ ನಿರ್ದೇಶವು. ಅವಕ್ಕೆ ಹುಟ್ಟು ಸಾವುಗಳಿಲ್ಲ. ಅದು ಅನಿತ್ಯವಾದವುಗಳಲ್ಲಿ ನಿತ್ಯವಾದದ್ದು, ಅಚೇತನಗಳಲ್ಲಿ ಚೈತನ್ಯವುಳ್ಳದ್ದು. ಎಲ್ಲಕ್ಕೂ ಸೂಕ್ಷ್ಮವೂ ಎಲ್ಲಕ್ಕೂ ದೊಡ್ಡದೂ ಇರುವದು. ಆದರೆ ಇಂತಹ ಆತ್ಮನ ಜ್ಞಾನವು ತರ್ಕದಿಂದಾಗಲಿ ಬುದ್ಧಿಯಿಂದಾಗಲಿ ಪ್ರವಚನಗಳಿಂದಾಗಲಿ ವೇದಶ್ರವಣದಿಂದಾಗಲಿ ಆಗಲಾರದು. ಆತ್ಮಪ್ರಸಾದದಿಂದಲೆ ಅಂದರೆ ಪರಮಾತ್ಮನ ಅನುಗ್ರಹದಿಂದಲೆ ಈ ಆತ್ಮಜ್ಞಾನವಾಗುವದು. ಈ ಶರೀರದಲ್ಲಿ ಜೀವಾತ್ಮಪರಮಾತ್ಮರು ಛಾಯಾತಪದಂತೆ ಅಂದರೆ ಬೆಳಕುನೆಳಲಿನಂತೆ ವಾಸಿಸುತ್ತಿರುವರು. ಪರಮಾತ್ಮಸಾಕ್ಷಾತ್ಕಾರವನ್ನು ಇಚ್ಛಿಸುವವನು ಮನಸೇಂದ್ರಿಯಗಳನ್ನು ಸಂಯಮಿಸಿ, ಬುದ್ಧಿಯನ್ನು ಶುದ್ಧಮಾಡಿ, ಪರಮಾತ್ಮಧ್ಯಾನದಲ್ಲಿ ನಿಮಗ್ನನಾಗಬೇಕು. ಈ ಬಾಹ್ಯೇಂದ್ರಿಯಗಳಾಚೆಗೆ ಬುದ್ಧಿಯು, ಅದರಾಚೆಗೆ ಮಹದಾತ್ಮನು ಅಥವಾ ಹಿರಣ್ಯಗರ್ಭನು, ಅವನಾಚೆಗೆ ಅವ್ಯಕ್ತವು, ಅದರಾಚೆಗೆ ಪರಮಪುರುಷನು. ಹೀಗೆ ಈ ವಿಶ್ವದ ರಚನೆಯಿರುವದು. ಸರ್ವಾಂತರ್ಯಾಮಿಯಾದ ಈ ಗೂಢಾತ್ಮನನ್ನು ಧ್ಯಾನಯೋಗದಿಂದ, ತೀಕ್ಷ್ಣವಾದ ಬುದ್ಧಿಯಿಂದ ಕಂಡುಕೊಳ್ಳಬೇಕು. ಬಾಹ್ಯ ಶಕ್ತಿಗಳನ್ನು ಅವುಗಳಾಚೆಗಿರುವ ತತ್ತ್ವಗಳಲ್ಲಿ ಲಯಮಾಡುತ್ತ ಧ್ಯಾನಮಾಡಬೇಕು. ಚಿತ್ತದಲ್ಲಿ ಶಾಂತಾತ್ಮನ ಅಥವಾ ಪರಮಾತ್ಮನ ಅರಿವು ಒಂದೇ ಅಚಲವಾಗಿರುವಂತೆ ಲಯಚಿಂತನವೆಂಬ ಧ್ಯಾನವಿಧಿಯನ್ನು ಅಭ್ಯಸಿಸಬೇಕು.

'ಪರಮಾತ್ಮನು ವಿಶ್ವವನ್ನು ಸೃಜಿಸುವಾಗ ತನ್ನ ಶಕ್ತಿಗಳನ್ನು ಹೊರಗೆ ವಿಸ್ತರಿಸಿದನು. ಆದುದರಿಂದ ನಮ್ಮ ಇಂದ್ರಿಯಗಳು ಬಾಹ್ಯ ವ್ಯಾಪಾರಗಳ ಕಡೆಗೆ ಧಾವಿಸುವುವು. ಅವುಗಳನ್ನು ಅಂತರ್ಮುಖ ಮಾಡುವುದರಿಂದ ನಮಗೆ ಆತ್ಮದರ್ಶನವಾಗುವುದು. ಆ ಆತ್ಮತತ್ತ್ವದಿಂದಲೆ ಎಲ್ಲ

ಸೃಷ್ಟಿಯ ಉತ್ಪತ್ತಿಯು. ಅದೊಂದೆ ಎಲ್ಲರ ಉಗಮಸ್ಥಾನವು. ಅದೊಂದೇ ಬಹುರೂಪಿಯಾಗಿ ನಾನಾಬಗೆಯಿಂದ ನಟಿಸುತ್ತಿರುವುದು. ಈ ವಿಶ್ವದಲ್ಲಿ ಕೇವಲ ನಾನಾತ್ವವನ್ನು ನೋಡುವವರು ಮೂರ್ಖರು. ಸರ್ವವಿಶ್ವಕ್ಕೆ ಆಧಾರಭೂತವಾದ ಆತ್ಮತತ್ವವು ಅಂಗುಷ್ಠಪರಿಮಾಣವನ್ನು ತಾಳಿ ಪ್ರತಿಯೊಬ್ಬನ ಅಂತಃಕರಣದಲ್ಲಿ ರಹಸ್ಯವಾಗಿ ವಾಸಿಸುತ್ತಿರುವುದು. ಈ ಆತ್ಮತತ್ವವನ್ನರಿತವನು ಆತ್ಮಮಯನಾಗುವನು, ಪುನರ್ಜನ್ಮವನ್ನು ನೀಗುವನು, ಅಮೃತನಾಗುವನು. ಆತ್ಮಜ್ಞಾನವನ್ನು ಮಾಡಿಕೊಳ್ಳದಿರುವವರು ಪುನಃ ಪುನಃ ಸಂಸಾರದಲ್ಲಿ ಬರಬೇಕಾಗುವುದು.

'ಈ ಆತ್ಮನು ತಾನೇ ಎಲ್ಲ ವಿಶ್ವವನ್ನು ಸೃಜಿಸಿ ಅದನ್ನು ವ್ಯಾಪಿಸಿಕೊಂಡಿದ್ದರೂ ಅವನು ನಿರ್ಲಿಪ್ತನೆ ಇರುವನು. ಈ ಜನ್ಮದಲ್ಲಿಯೆ ಆತ್ಮಜ್ಞಾನವನ್ನು ಮಾಡಿಕೊಳ್ಳಬೇಕು; ಯಾಕಂದರೆ, ಇಹಲೋಕದಲ್ಲಿ, ಇದೇ ಜನ್ಮದಲ್ಲಿ ಆತ್ಮಜ್ಞಾನವು ಸ್ಪಷ್ಟವಾಗಿ, ಪೂರ್ಣವಾಗಿ ಆಗಬಲ್ಲುದು. ಪಿತೃಲೋಕ ಗಂಧರ್ವಲೋಕ ಸ್ವರ್ಗಲೋಕಗಳಲ್ಲಿ ಆತ್ಮಸಾಕ್ಷಾತ್ಕಾರವು ಚನ್ನಾಗಿ ಆಗಲಾರದು. ಆದುದರಿಂದ ಪಂಚೇಂದ್ರಿಯಗಳನ್ನೂ ಮನಸ್ಸನ್ನೂ ಬುದ್ಧಿಯನ್ನೂ ಸ್ಥಿರಮಾಡಿ ಯೋಗಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳಬೇಕು. ಅಂದರೆ ನಿಶ್ಚಲವಾದ ಆತ್ಮನಲ್ಲಿ ಪರಮಾತ್ಮದರ್ಶನವಾಗುವುದು. ಪರಮಾತ್ಮನ ಅಸ್ತಿತ್ವದಲ್ಲಿ ದೃಢವಿಶ್ವಾಸವನ್ನಿಟ್ಟು ಸಾಧನವನ್ನು ಆರಂಭಿಸಬೇಕು. ಅಂದರೆ ಕಾರ್ಯಕಾರಣಗಳ ತತ್ವಜ್ಞಾನವು ತೀವ್ರವೆ ಆಗುವುದು. ಆ ಜ್ಞಾನವಾಯಿತೆಂದರೆ ಎಲ್ಲ ಮಿಥ್ಯಾಜ್ಞಾನವು ಮಂಜಿನಂತೆ ಮಾಯವಾಗಿ ಆತ್ಮಜ್ಯೋತಿಯು ನಿಚ್ಚಳವಾಗಿ ಬೆಳಗಲಾರಂಭಿಸುವುದು. ಹೃದಯದಿಂದ ನೂರಾಒಂದು ನಾಡಿಗಳು ಹೊರಡುವುವು. ಅವುಗಳಲ್ಲಿ ಸುಷುಮ್ನಾ ಎಂಬುದೊಂದು. ಅದು ಬ್ರಹ್ಮರಂಧ್ರದ ಕಡೆಗೆ ಸಾಗುವುದು. ಅದರಗುಂಟ ಪ್ರಾಣವನ್ನೇರಿಸಲಿಕ್ಕೆ ಯತ್ನಮಾಡಬೇಕು. ಅಂದರೆ ಅಮೃತತ್ವವು ನಿಮ್ಮ ಕೈಸೇರುವುದು. ಅಂತರಾತ್ಮನ ಸತ್ಯಜ್ಞಾನವೆ ಮುಖ್ಯವಾದದ್ದು. ಆ ಜ್ಞಾನವಾಯಿತೆಂದರೆ ಎಲ್ಲ ಕಾಮನೆಗಳೂ ಎಲ್ಲ ಮೂಢ ಭಾವನೆಗಳೂ ಎಲ್ಲ ಮಿಥ್ಯಾಕಲ್ಪನೆಗಳೂ ನಾಶಹೊಂದುವವು. ಆ ಮೇಲೆ ಈ ನಿತ್ಯಸತ್ಯವಾದ ಆತ್ಮತತ್ವವನ್ನು ಅನಿತ್ಯವಾದ ಶರೀರಾದಿಗಳಿಂದ ಬೇರ್ಪಡಿಸಬೇಕು. ಗಲಗು

ಬೆಳೆಯುವಾಗ ಅದರ ಕೂಡ ಅದರ ಮೇಲೆ ಸೊಪ್ಪೆಯೂ ಬೆಳೆಯುತ್ತ ಹೋಗುವುದು. ಗಲಗು ಬೆಳೆಯುವವರೆಗೆ ಆ ಸೊಪ್ಪೆಯು ಆವಶ್ಯಕವು. ಆದರೆ ಗಲಗು ಬೆಳೆದ ಮೇಲೆ ಆ ಸೊಪ್ಪೆಯನ್ನು ಸವರಿ ತೆಗೆದು ಚಲ್ಲಿ ಒಳಗಿನ ಗಣಿಯನ್ನಷ್ಟೆ ನಾವು ಉಪಯೋಗಿಸುವೆವು. ಅದರಂತೆಯೆ ಆತ್ಮಾ ಮತ್ತು ಬುದ್ಧಿ ಮನಸ್ಸು ಇಂದ್ರಿಯಾದಿಗಳ ಸಂಬಂಧವಿರುವುದು. ಹೀಗೆ ಆತ್ಮತತ್ವವನ್ನು ನಿಶ್ಚಯದಿಂದಲೂ ಧೈರ್ಯದಿಂದಲೂ ಬೇರ್ಪಡಿಸಲಾಗಿ ಪೂರ್ಣ ಸಾಕ್ಷಾತ್ಕಾರವಾಗಿ ಮನುಷ್ಯನು ಜೀವನ್ಮುಕ್ತನಾಗುವನು. ಅವನು ನಿಷ್ಪಾಪನೂ ಶೋಕರಹಿತನೂ ಭಯರಹಿತನೂ ಆಗುವನು.' ಇದೇ ಈ ಉಪನಿಷತ್ತಿನ ಸಾರಾಂಶವು.

# ಕಠೋಪನಿಷತ್

## ಶಾಂತಿಮಂತ್ರ

ಓಂ ಸಹ ನಾವವತು ॥ ಸಹ ನೌ ಭುನಕ್ತು ॥ ಸಹ ವೀರ್ಯಂ ಕರವಾವಹೈ ॥ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ

## ಉಪನಿಷತ್ತು

**ಓಂ ಉಶನ್ ಹ ವೈ ವಾಜಶ್ರವಸಃ ಸರ್ವವೇದಸಂ ದದೌ॥ ತಸ್ಯ ಹ ನಚಿಕೇತಾ ನಾಮ ಪುತ್ರ ಆಸ ॥ ೧ ॥ ತಂ ಹ ಕುಮಾರಂ ಸಂತಂ ದಕ್ಷಿಣಾಸು ನೀಯಮಾನಾಸು॥ ಶ್ರದ್ಧಾವಿವೇಶ ಸೋಽಮನ್ಯತ ॥ ೨ ॥ ಪೀತೋದಕಾ ಜಗ್ಧತೃಣಾ ದುಗ್ಧದೋಹಾ**

---

**ಶಾಂತಿಮಂತ್ರದ ಅನುವಾದ**– ಅವನು ನಮ್ಮಿಬ್ಬರನ್ನೂ ಕಾಪಾಡಲಿ. ನಮ್ಮಿಬ್ಬರಿಗೂ ಕೂಡಿ ಉಪಭೋಗಗಳನ್ನೀಯಲಿ. ಇಬ್ಬರೂ ಕೂಡಿ ವೀರ್ಯವನ್ನು ದೊರಕಿಸುವಾ. ನಮ್ಮ ಅಧ್ಯಯನವು ತೇಜಸ್ವಿಯಾಗಲಿ. ನಮ್ಮೊಳಗೆ ಹಗೆತನವಿಲ್ಲದಿರಲಿ. ಓಂ ಶಾಂತಿ.

**ಮಂತ್ರಗಳ ಅನುವಾದ—** (೧) ಫಲಾಪೇಕ್ಷೆಯುಳ್ಳವನೊಬ್ಬನು ತನ್ನ ಸರ್ವಸಂಪತ್ತನ್ನು (ವಿಶ್ವಜಿತ್ ಎಂಬ ಯಜ್ಞವನ್ನು ಮಾಡುತ್ತಿರುವಾಗ) ದಾನಕೊಟ್ಟನು. ಅವನಿಗೆ ನಚಿಕೇತನೆಂಬ ಓರ್ವ ಮಗನಿದ್ದನು. (೨) ಅವನು ಚಿಕ್ಕ ವಯಸ್ಸಿನವನಿದ್ದರೂ ದಾನಕೊಟ್ಟ ವಸ್ತುಗಳನ್ನು (ಬಡಕ

ನಿರಿಂದ್ರಿಯಾಃ ॥ ಆನಂದಾ ನಾಮ ತೇ ಲೋಕಾಸ್ತಾನ್ಸ ಗಚ್ಛತಿ ತಾ ದದತ್ ॥ ೩ ॥ ಸ ಹೋವಾಚ ಪಿತರಂ ತತಃ ಕಸ್ಮೈ ಮಾಂ ದಾಸ್ಯಸೀತಿ ॥ ದ್ವಿತೀಯಂ ತೃತೀಯಂ ತಂ ಹೋವಾಚ ಮೃತ್ಯವೇ ತ್ವಾ ದದಾಮೀತಿ ॥ ೪ ॥ ಬಹೂನಾಮೇಮಿ ಪ್ರಥಮೋ ಬಹೂನಾಮೇಮಿ ಮಧ್ಯಮಃ ॥ ಕಿಂ ಸ್ವಿದ್ಯಮಸ್ಯ ಕರ್ತವ್ಯಂ ಯನ್ಮಯಾದ್ಯ ಕರಿಷ್ಯತಿ ॥ ೫ ॥ ಅನುಪಶ್ಯ ಯಥಾ ಪೂರ್ವೇ ಪ್ರತಿಪಶ್ಯ ಯಥಾ ಪರೇ ॥ ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವಾಜಾಯತೇ ಪುನಃ ॥ ೬ ॥ ವೈಶ್ವಾನರಃ ಪ್ರವಿಶತ್ಯತಿಥಿರ್ಬ್ರಾಹ್ಮಣೋ ಗೃಹಾನ್ ॥ ತಸ್ಯೈತಾಂ ಶಾಂತಿಂ ಕುರ್ವಂತಿ ಹರ ವೈವಸ್ವತೋದ

---

ಆಕಳುಗಳನ್ನು) ಬ್ರಾಹ್ಮಣರು ಒಯ್ಯುವಾಗ ಕಂಡು ಅವನ ಮನಸ್ಸಿನಲ್ಲಿ ಶ್ರದ್ಧೆಯು (ಸದ್ಭಾವನೆಯು) ಉದ್ಭವಿಸಿತು. ಅವನು ಹೀಗೆ ವಿಚಾರ ಮಾಡಿದನು– (೩) ಹುಲ್ಲು ನೀರುಗಳನ್ನು ಸಹ ಬಿಟ್ಟ (ತಿನ್ನುವ ಸಾಮರ್ಥ್ಯವಿಲ್ಲದ) ಇಂತಹ ಬರಡಾದ ಅವಯವರಹಿತ ಹಸುಗಳನ್ನು ದಾನಕೊಡುವವನ ಪಾಲಿಗೆ ಆನಂದರಹಿತ ಲೋಕಗಳು ಬರುವುವು. (೪) (ಹೀಗೆ ವಿಚಾರ ಮಾಡಿ ತಂದೆಯ ಆ ಪಾಪವನ್ನು ಸ್ವಾತ್ಮಾರ್ಪಣದಿಂದ ಕಳೆಯಬೇಕೆಂದು) ನನ್ನನ್ನು ಯಾರಿಗೆ ಕೊಡುವಿ, ಎಂದು ಅವನು ತನ್ನ ತಂದೆಯನ್ನು ಕೇಳಿದನು. ಎರಡು-ಮೂರುಸಾರೆ ಕೇಳಲಾಗಿ, ಮೃತ್ಯುದೇವತೆಗೆ ನಿನ್ನನ್ನು ಕೊಡುವೆನೆಂದು ತಂದೆಯು (ಸಿಟ್ಟಿನಿಂದ) ನುಡಿದನು. (೫) (ಅದನ್ನು ಕೇಳಿ) ಬಹು ಜನರಲ್ಲಿ ನಾನು ಪ್ರಥಮನು ಅಂದರೆ ಪ್ರಥಮ ಶ್ರೇಣಿಯವನು. (ನಾನು ಮಿಕ್ಕ ಸಾಮಾನ್ಯ ಜನರಂತೆ ನಷ್ಟ ಕರ್ಮಫಲವನ್ನು ಭೋಗಿಸುವುದಕ್ಕಾಗಿ ಯಮನ ಕಡೆಗೆ ಹೋಗದೆ ಶಿಷ್ಯನೋಪಾದಿಯಲ್ಲಿ ಹೋಗುತ್ತಿರುವೆನು ಆದುದರಿಂದ ಪ್ರಥಮ ಶ್ರೇಣಿಯವನು. ಅಷ್ಟು ಪುಣ್ಯವಂತನಿಲ್ಲದಿದ್ದರೂ ಮಧ್ಯಮನಂತೂ ಸರಿಯೇ, ಆದರೆ ಕನಿಷ್ಠನಲ್ಲ.) ಪ್ರಥಮನಿಲ್ಲದಿದ್ದರೂ ಬಹು ಜನರಲ್ಲಿ ನಾನು ಮಧ್ಯಮ ಶ್ರೇಣಿಯವನಂತೂ ಸರಿಯೇ. ಯಮನು ತನ್ನ ಯಾವ ಕೆಲಸವನ್ನು ನನ್ನ ಕಡೆಯಿಂದ ಮಾಡಿಸುವನು ? (೬) (ತನ್ನನ್ನು ಯಮನ ಕಡೆಗೆ ಕಳುಹಲಿಕ್ಕೆ ಹಿಂಜರಿಯುವ ತಂದೆಯನ್ನು ನೋಡಿ) ಪೂರ್ವಜರ ಕಡೆಗೂ ಈಗಿನ ಜನರ ಕಡೆಗೂ ನೋಡಿದರೆ ಮರ್ತ್ಯನಾದ ಮನುಷ್ಯನು ಹುಲ್ಲಿನಂತೆ ಹುಟ್ಟಿ ಹಣ್ಣಾಗಿ ಸಾಯುವನು. ಹುಲ್ಲಿನಂತೆ ಪುನಃ ಹುಟ್ಟುವನು. (ಆದುದರಿಂದ ದುಃಖಮಾಡುವ ಕಾರಣವೆ ಇಲ್ಲ.)

ಕಮ್ ॥ ೭ ॥ ಆಶಾಪ್ರತೀಕ್ಷೇಸಂಗತಂ ಸುನೃತಾಂ ಚೇಷ್ಟಾಪೂರ್ತೇ ಪುತ್ರಪಶೂಂಶ್ಚ ಸರ್ವಾನ್ ॥ ಏತದ್ವೃಂಕ್ತೇ ಪುರುಷಸ್ಯಾಲ್ಪಮೇಧಸೋ ಯಸ್ಯಾನಶ್ನನ್ವಸತಿ ಬ್ರಾಹ್ಮಣೋ ಗೃಹೇ ॥ ೮ ॥ ತಿಸ್ರೋ ರಾತ್ರೀರ್ಯದವಾತ್ಸೀರ್ಗೃಹೇ ಮೇಽನಶ್ನ-ನ್ಬ್ರಹ್ಮನ್ನತಿಥಿರ್ನಮಸ್ಯಃ ॥ ನಮಸ್ತೇಽಸ್ತು ಬ್ರಹ್ಮನ್ಸ್ವಸ್ತಿ ಮೇಽಸ್ತು ತಸ್ಮಾತ್ಪ್ರತಿ ತ್ರೀನ್ವರಾನ್ವೃಣೀಷ್ವ ॥ ೯ ॥ ಶಾಂತಸಂಕಲ್ಪಃ ಸುಮನಾ ಯಥಾ ಸ್ಯಾದ್ವೀತಮನ್ಯು-ರ್ಗೌತಮೋ ಮಾಭಿಮೃತ್ಯೋ ॥ ತ್ವತ್ಪ್ರಸೃಷ್ಟಂ ಮಾಭಿವದೇತ್ಪ್ರತೀತ ಏತತ್ತ್ರಯಾಣಾಂ ಪ್ರಥಮಂ ವರಂ ವೃಣೇ ॥ ೧೦ ॥ ಯಥಾ ಪುರಸ್ತಾದ್ಭವಿತಾ ಪ್ರತೀತ ಔದ್ದಾಲಕಿ-ರಾರುಣಿರ್ಮತ್ಪ್ರಸೃಷ್ಟಃ ॥ ಸುಖಂ ರಾತ್ರೀಃ ಶಯಿತಾ ವೀತಮನ್ಯುಸ್ತ್ವಾಂ ದದೃಶಿವಾ-ನ್ಮೃತ್ಯುಮುಖಾತ್ಪ್ರಮುಕ್ತಮ್ ॥ ೧೧ ॥ ಸ್ವರ್ಗೇ ಲೋಕೇ ನ ಭಯಂ ಕಿಂಚ ನಾಸ್ತಿ

---

(೭) (ಯಮನಕಡೆಗೆ ಹೋಗಿ ಯಮನು ಮನೆಯಲ್ಲಿಲ್ಲದ್ದರಿಂದ ಮೂರು ದಿನಗಳ ವರೆಗೆ ನಚಿಕೇತನು ಅಲ್ಲಿಯೆ ಕಾಯ್ದುಕೊಂಡಿದ್ದನು.) (ಹೇಮಮಾಲಾದೇವಿಯು ಅಂದದ್ದು), ಬ್ರಾಹ್ಮಣ ಅತಿಥಿಯು ಸಾಕ್ಷಾತ್ ಅಗ್ನಿಯಂತೆ ಮನೆಯನ್ನು ಪ್ರವೇಶಿಸುವನು. ಈ ರೀತಿಯಿಂದ (ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು) ಅವನನ್ನು ಶಾಂತಮಾಡುವರು. ವೈವಸ್ವತನೇ (ಅಂದರೆ ಯಮನೆ), ನೀರು ತಾ. (೮) ಯಾವ ಅಲ್ಪ ಬುದ್ಧಿಯುಳ್ಳವನ ಮನೆಯಲ್ಲಿ ಬ್ರಾಹ್ಮಣನು ಉಣ್ಣದೆ ವಾಸಮಾಡುವನೊ ಅವನ ಆಶೆ ಪ್ರತೀಕ್ಷೆಗಳು, ಧ್ಯಾನ ಸುನೃತಗಳು, ಇಷ್ಟಾಪೂರ್ತಿಗಳ ಫಲಗಳು, ಎಲ್ಲ ಪಶುಪುತ್ರಾದಿಗಳು ನಾಶಹೊಂದುವವು. (೯) ಹೇ ಬ್ರಹ್ಮನ್ (ಬ್ರಾಹ್ಮಣನೇ), ವಂದನೀಯ ಅತಿಥಿಯಾದ ನೀನು ಆಹಾರವನ್ನು ಸೇವಿಸದೆ ನನ್ನ ಮನೆಯಲ್ಲಿ ಮೂರು ರಾತ್ರಿ ವಾಸಮಾಡಿರುವಿ. ಆದುದರಿಂದ ನಿನಗೆ ನಮಸ್ಕಾರವು. ಹೇ ಬ್ರಹ್ಮನ್, ನನಗೆ ಸ್ವಸ್ತಿ ಅಂದರೆ ಅಭಯವಿರಲಿ. ನೀನು ನನ್ನಿಂದ ಮೂರು ವರಗಳನ್ನು ಬೇಡಿಕೊ. (೧೦) (ನಚಿಕೇತನು ಮೂರು ವರಗಳನ್ನು ಬೇಡಿಕೊಳ್ಳುವನು.) ಹೇ ಮೃತ್ಯೋ, ನನ್ನ ವಿಷಯಕ್ಕಿದ್ದ ಗೌತಮನ (ತಂದೆಯ) ಸಿಟ್ಟು ಶಾಂತವಾಗಲಿ. ಅವನ ಮನಸು ಪ್ರಸನ್ನವಾಗಲಿ, ಅವನಿಗಿದ್ದ ನನ್ನ ಚಿಂತೆಯು ದೂರವಾಗಲಿ. ನಿನ್ನ ಬಳಿಯಿಂದ ತಿರುಗಿ ಹೋದ ನನ್ನ ಗುರುತು ಹಿಡಿದು ಅವನು ಪ್ರೇಮದಿಂದ ನನ್ನನ್ನು ಮಾತಾಡಿಸಲಿ. ಮೂರು ವರಗಳಲ್ಲಿ ಈ ಮೊದಲನೆಯ ವರವನ್ನು ನಾನು ಬೇಡುವೆನು. (೧೧) (ಯಮದೇವರು ಅಂದದ್ದು), ಅರುಣಪುತ್ರನಾದ

**ನ ತತ್ರ ತ್ವಂ ನ ಜರಯಾ ಬಿಭೇತಿ ॥ ಉಭೇ ತೀರ್ತ್ವಾಽಶನಾಯಾಪಿಪಾಸೇ ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥೧೨॥ ಸ ತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ ಪ್ರಬ್ರೂಹಿ ತಂ ಶ್ರದ್ದಧಾನಾಯ ಮಹ್ಯಂ ॥ ಸ್ವರ್ಗಲೋಕಾ ಅಮೃತತ್ವಂ ಭಜಂತ ಏತದ್ದ್ವಿತೀಯೇನ ವೃಣೇ ವರೇಣ ॥೧೩॥ ಪ್ರ ತೇ ಬ್ರವೀಮಿ ತದು ಮೇ ನಿಬೋಧ ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್ ॥ ಅನಂತಲೋಕಾಪ್ತಿಮಥೋ ಪ್ರತಿಷ್ಠಾಂ ವಿದ್ಧಿ ತ್ವಮೇತನ್ನಿಹಿತಂ ಗುಹಾಯಾಮ್ ॥ ೧೪ ॥ ಲೋಕಾದಿಮಗ್ನಿಂ ತಮುವಾಚ ತಸ್ಮೈ ಯಾ ಇಷ್ಟಕಾ ಯಾವತೀರ್ವಾ ಯಥಾ ವಾ ॥ ಸ ಚಾಪಿ ತತ್ಪ್ರತ್ಯವದದ್ಯಥೋಕ್ತಮಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ ॥ ೧೫ ॥ ತಮಬ್ರವೀತ್ಪ್ರೀಯಮಾಣೋ ಮಹಾತ್ಮಾ ವರಂ ತವೇಹಾದ್ಯ ದದಾಮಿ ಭೂಯಃ ॥ ತವೈವ ನಾಮ್ನಾ**

ಔದ್ದಾಲಕಿಯು (ನಿನ್ನ ತಂದೆಯು) ನನ್ನ ಬಳಿಯಿಂದ ಮರಳಿಹೋದ ನಿನ್ನನ್ನು ಮೊದಲಿನಂತೆ ಗುರುತಿಸುವನು. ಮೃತ್ಯುಮುಖದಿಂದ ಮುಕ್ತನಾದ ನಿನ್ನನ್ನು ನೋಡಿ ಅವನ ಕೋಪವು ಶಾಂತವಾಗುವುದು. ರಾತ್ರಿ ಅವನಿಗೆ ಚನ್ನಾಗಿ ನಿದ್ರೆಬರುವುದು. (೧೨) (ನಚಿಕೇತನು ಅಂದದ್ದು), ಸ್ವರ್ಗದಲ್ಲಿ ಭಯದ ಹೆಸರು ಸಹ ಇಲ್ಲ. ಅಲ್ಲಿ ನೀನು ಇಲ್ಲ. ಮನುಷ್ಯನಿಗೆ ಅಲ್ಲಿ ಮುಪ್ಪಿನ ಹೆದರಿಕೆಯೂ ಇಲ್ಲ. ಹಸಿವೆ ನೀರಡಿಕೆಗಳ ಕಾಟವನ್ನು ಮೀರಿದ ಶೋಕರಹಿತ ಪುರುಷನು ಸ್ವರ್ಗಲೋಕದಲ್ಲಿ ಆನಂದದಿಂದಿರುವನು. (೧೩) ಹೇ ಮೃತ್ಯೋ, ಅಂಥ ಸ್ವರ್ಗಸಾಧನವಾದ ಅಗ್ನಿಯ ಜ್ಞಾನವು ನಿನಗಿರುವುದು. ಶ್ರದ್ಧಾವಂತನಾದ ನನಗೆ ಆ ಜ್ಞಾನವನ್ನುಪದೇಶಿಸು. ಸ್ವರ್ಗವನ್ನು ಸೇರಿದವರು ಅಮೃತತ್ವವನ್ನು ಪಡೆಯುವರು. ಎರಡನೇ ವರದಿಂದ ನಾನು ಈ ಜ್ಞಾನವನ್ನು ಬೇಡಿಕೊಳ್ಳುವೆನು. (೧೪) (ಯಮನು ಅಂದದ್ದು), ಎಲೈ ನಚಿಕೇತನೇ, ಸ್ವರ್ಗಸಾಧನವಾದ ಅಗ್ನಿಯ ಜ್ಞಾನವನ್ನರಿತವನು ನಾನು ನಿನಗೆ ಅದನ್ನು ಹೇಳುವೆನು. ಲಕ್ಷಗೊಟ್ಟು ಕೇಳು. ಇದು ಅನಂತಲೋಕಗಳನ್ನು ಪ್ರಾಪ್ತಮಾಡಿಕೊಡುವಂತಹದು, ಇದು ಎಲ್ಲಕ್ಕೂ ಆಧಾರಭೂತವಾದದ್ದು. (ಹೃದಯ) ಗುಹೆಯಲ್ಲಿರುವ ಇದನ್ನು ನೀನು ಅರಿತುಕೊ. (೧೫) (ಆ ಮೇಲೆ) ಯಮದೇವನು ಸಕಲ ಲೋಕಗಳಿಗೆ ಆದಿಯಾದ ಅಗ್ನಿಯ ಜ್ಞಾನವನ್ನು ಅವನಿಗೆ ಹೇಳಿದನು. ಎಂತಹ ಹಾಗೂ ಎಷ್ಟು ಇಟ್ಟಂಗಿಗಳು (ವೇದಿಕೆಗೆ) ಬೇಕಾಗುವುವು, (ವೇದಿಕೆಯನ್ನು) ಹೇಗೆ ಸಿದ್ಧಪಡಿಸಬೇಕು, ಇದನ್ನು ಯಮನು ಹೇಳಿದನು. ಎಲ್ಲ ವಿಧಿಯನ್ನು ಯಥೋಕ್ತವಾಗಿ ಅಂದರೆ

ಭವಿತಾಯಮಗ್ನಿಃ ಸೃಂಕಾಂ ಚೇಮಾಮನೇಕರೂಪಾಂ ಗೃಹಾಣ ॥ ೧೬ ॥ ತ್ರಿಣಾಚಿಕೇತಸ್ತ್ರಿಭಿರೇತ್ಯಸಂಧಿಂ ತ್ರಿಕರ್ಮಕೃತ್ತರತಿ ಜನ್ಮಮೃತ್ಯೂ ॥ ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ ನೀಚಾಯ್ಯೇಮಾಂ ಶಾಂತಿಮತ್ಯಂತಮೇತಿ ॥ ೧೭ ॥ ತ್ರಿಣಾಚಿಕೇತಸ್ತ್ರಯಮೇತದ್ವಿದಿತ್ವಾ ಯ ಏವಂ ವಿದ್ವಾಂಶ್ಚಿನುತೇ ನಾಚಿಕೇತಮ್ ॥ ಸ ಮೃತ್ಯುಪಾಶಾನ್ಪುರತಃ ಪ್ರಣೋದ್ಯ ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥ ೧೮ ॥ ಏಷ ತೇಽಗ್ನಿರ್ನಚಿಕೇತಃ ಸ್ವರ್ಗ್ಯೋ ಯಮವೃಣೀಥಾ ದ್ವಿತೀಯೇನ ವರೇಣ ॥ ಏತಮಗ್ನಿಂ ತವೈವ ಪ್ರವಕ್ಷ್ಯಂತಿ ಜನಾಸಸ್ತೃತೀಯಂ ವರಂ ನಚಿಕೇತೋ ವೃಣೀಷ್ವ ॥ ೧೯ ॥ ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇಽಸ್ತೀತ್ಯೇಕೇ ನಾಯ-

---

ಯಮನು ಉಪದೇಶಿಸಿದಂತೆ, ನಚಿಕೇತನು ಬಾಯಿಂದ ಅಂದು ತೋರಿಸಲು ಯಮನು ಸಂತುಷ್ಟನಾಗಿ ಪುನಃ ಹೇಳಲಾರಂಭಿಸಿದನು. (೧೬) ಆ ಮಹಾತ್ಮನು ಪ್ರಸನ್ನನಾಗಿ ನಚಿಕೇತನಿಗೆ ಅಂದದ್ದು, ನಾನು ನಿನಗೆ ಪುನಃ ಒಂದು ವರವನ್ನು ಕೊಡುವೆನು. ಇನ್ನು ಈ ಅಗ್ನಿಯು ನಿನ್ನ ಹೆಸರಿನಿಂದಲೆ ಪ್ರಸಿದ್ಧವಾಗುವುದು. ಅನೇಕ ರೂಪಗಳುಳ್ಳ (ಅನೇಕ ಫಲಗಳನ್ನು ಕೊಡುವಂಥ) ಈ ಮಾಲೆಯನ್ನು (ಈ ಕರ್ಮಮಾರ್ಗದ ಜ್ಞಾನವನ್ನು) ನಾನು ನಿನಗೆ ಹೇಳುವೆನು. ಅದನ್ನು ಗ್ರಹಿಸು. (೧೭) ಮೂರು ಅಗ್ನಿಗಳುಳ್ಳ ಅಂದರೆ ಆಹವನೀಯ, ಅನ್ವಾಹಾರ್ಯ, ಗಾರ್ಹಪತ್ಯ ಎಂಬ ಮೂರು ಅಗ್ನಿಗಳನ್ನಿಟ್ಟ ಅಗ್ನಿಹೋತ್ರಿಯು ಅದರ ಜ್ಞಾನ ಅಧ್ಯಯನ ಅನುಷ್ಠಾನಗಳನ್ನು ಮಾಡಿಕೊಂಡು ಇಜ್ಯಾ (ಯಜ್ಞ) ಅಧ್ಯಯನ ದಾನ ಕರ್ಮಗಳಲ್ಲಿ ನಿರತನಿರುವವನು ಜನ್ಮಮೃತ್ಯುಗಳನ್ನು ಗೆಲ್ಲುವನು. ಈ ತೇಜಸ್ವಿಯಾದ ಪೂಜಾರ್ಹ ಬ್ರಹ್ಮಪುತ್ರನನ್ನು (ಅಗ್ನಿಯನ್ನು) ಅರಿತವನು ಅವನ ಸಂಪೂರ್ಣ ಜ್ಞಾನವನ್ನು ಪಡೆದು ಅತ್ಯಂತ ಶಾಂತಿಯನ್ನನುಭವಿಸುವನು. (೧೮) ಮೂರು ಯಜ್ಞಗಳನ್ನು ಮಾಡಿ ಈ ಮೂರರ (ಜ್ಞಾನ ಅಧ್ಯಯನ ಅನುಷ್ಠಾನಗಳ) ಪೂರ್ಣಬೋಧವನ್ನು ಪಡೆದು ಯಾವನು ನಚಿಕೇತ ಎಂಬ ಅಗ್ನಿಯ ಅನುಷ್ಠಾನ ಮಾಡುವನೊ ಅವನು ಸಾಯುವುದಕ್ಕೂ ಮೊದಲೆ ಮೃತ್ಯುಪಾಶವನ್ನು ನಾಶಗೊಳಿಸುವನು. ಅವನು ಶೋಕಗಳನ್ನು ದಾಟಿ ಹೋಗಿ ಸ್ವರ್ಗದಲ್ಲಿ ಆನಂದವನ್ನನುಭವಿಸುವನು. (೧೯) ನೀನು ಎರಡನೆ ವರವೆಂದು ಬೇಡಿಕೊಂಡ ನಚಿಕೇತಾಗ್ನಿಯ ಜ್ಞಾನವು

ಮಸ್ತೀತಿ ಚೈಕೇ ॥ ಏತದ್ವಿದ್ಯಾಮನುಶಿಷ್ಟಸ್ತ್ವಯಾಹಂ ವರಾಣಾಮೇಷ ವರಸ್ತೃತೀಯಃ ॥ ೨೦ ॥ ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ ನ ಹಿ ಸುವಿಜ್ಞೇಯಮಣು ರೇಷ ಧರ್ಮಃ ॥ ಅನ್ಯಂ ವರಂ ನಚಿಕೇತೋ ವೃಣೀಷ್ವ ಮಾ ಮೋಪರೋತ್ಸೀರತಿ ಮಾ ಸೃಜೈನಮ್ ॥ ೨೧ ॥ ದೇವೈರತ್ರಾಪಿ ವಿಚಿಕಿತ್ಸಿತಂ ಕಿಲ ತ್ವಂ ಚ ಮೃತ್ಯೋ ಯನ್ನ ಸುವಿಜ್ಞೇಯಮಾತ್ಥ ॥ ವಕ್ತಾ ಚಾಸ್ಯ ತ್ವಾದೃಗನ್ಯೋ ನ ಲಭ್ಯೋ ನಾನ್ಯೋ ವರಸ್ತುಲ್ಯ ಏತಸ್ಯ ಕಶ್ಚಿತ್ ॥ ೨೨ ॥ ಶತಾಯುಷಃ ಪುತ್ರಪೌತ್ರಾನ್ವೃಣೀಷ್ವ ಬಹೂನ್ಪಶೂನ್ಹಸ್ತಿಹಿರಣ್ಯಮಶ್ವಾನ್ ॥ ಭೂಮೇರ್ಮಹದಾಯತನಂ ವೃಣೀಷ್ವ ಸ್ವಯಂ ಚ ಜೀವ ಶರದೋ ಯಾವದಿಚ್ಛಸಿ ॥ ೨೩ ॥ ಏತತ್ತುಲ್ಯಂ ಯದಿ ಮನ್ಯಸೇ ವರಂ ವೃಣೀಷ್ವ ವಿತ್ತಂ ಚಿರಜೀವಿಕಾಂ ಚ ॥ ಮಹಾಭೂಮೌ ನಚಿಕೇತಸ್ತ್ವಮೇಧಿ

---

ಇದೇ. ಈ ಅಗ್ನಿಯನ್ನು ಜನರು ಇನ್ನು ಮುಂದೆ ನಿನ್ನ ಹೆಸರಿನಿಂದಲೆ ಕರೆಯುವರು. ಎಲೈ ನಚಿಕೇತನೇ, ಮೂರನೆ ವರವನ್ನು ಬೇಡು. (೨೦) (ನಚಿಕೇತನು ಅಂದದ್ದು), ಮನುಷ್ಯನು ಮರಣಹೊಂದಿದ ಮೇಲೆ ಅವನು ಅಂದರೆ ಅವನ ಆತ್ಮವು ಇರುವುದೆಂದು ಕೆಲವರು, ಇರುವುದಿಲ್ಲವೆಂದು ಕೆಲವರು ಅನ್ನುವರು. ನಿನ್ನಿಂದ ಈ ಬಗ್ಗೆ ನಿಶ್ಚಿತ ಜ್ಞಾನವನ್ನು ಅರಿತು ಕೊಳ್ಳಬೇಕೆಂದು ಇಚ್ಛಿಸುವೆನು. ವರಗಳಲ್ಲಿ ಇದು ಮೂರನೆಯದು. (೨೧) (ಯಮನು ಅಂದದ್ದು), ಪೂರ್ವದಲ್ಲಿ ದೇವತೆಗಳು ಸಹ ಇದರ ಬಗ್ಗೆ ಚರ್ಚೆಮಾಡಿರುವರು. ಇದು ಚನ್ನಾಗಿ ತಿಳಿಯತಕ್ಕ ವಿಷಯವಲ್ಲ. ಇದು ಅತ್ಯಂತ ಸೂಕ್ಷ್ಮ ಧರ್ಮವು. ನಚಿಕೇತನೇ, ಬೇರೊಂದು ವರವನ್ನು ಬೇಡು. ಇದರ ವಿಷಯಕ್ಕೆ ಬಹಳ ಹಟ ಹಿಡಿಯಬೇಡ. ನನ್ನನ್ನು ಈ ಬೇಡಿಕೆಯಿಂದ ಮುಕ್ತಮಾಡು. (೨೨) ( ನಚಿಕೇತನು ಅಂದದ್ದು ), ಯಾವ ಪ್ರಶ್ನೆಯ ವಿಷಯಕ್ಕೆ ದೇವತೆಗಳು ಸಹ ಚರ್ಚೆಮಾಡಿರುವರೊ ಯಾವುದು ಚನ್ನಾಗಿ ತಿಳಿಯಲಾರದೆಂದು ನೀನು ಅನ್ನುವಿಯೊ ಅಂತಹ ಪ್ರಶ್ನೆಯ ಉತ್ತರವನ್ನು ಹೇಳುವವನು ನಿನ್ನಂತಹನು ಬೇರೊಬ್ಬನು ದೊರೆಯಲಾರನು. ಈ ವರಕ್ಕೆ ಸಮಾನವಾದ ವರವೂ ಇನ್ನೊಂದಿಲ್ಲ. (೨೩) (ಯಮನು ಅಂದದ್ದು), ನೂರು ವರ್ಷ ಬಾಳಬಹುದಾದ ಮಕ್ಕಳು ಮೊಮ್ಮಕ್ಕಳನ್ನು ಬೇಡಿಕೊ. ಬಹಳ ಪಶುಗಳನ್ನೂ ಆನೆ ಕುದುರೆಗಳನ್ನೂ ಚಿನ್ನವನ್ನೂ ಬೇಡು. ವಿಶಾಲ ವಾದ ಭೂಮಿಯನ್ನು ಬೇಡು. ನಿನಗೆ ಇಷ್ಟವಿದ್ದಷ್ಟು ಆಯುಷ್ಯವನ್ನು

ಕಾಮಾನಾಂ ತ್ವಾ ಕಾಮಭಾಜಂ ಕರೋಮಿ ||೨೪|| ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ ಸರ್ವಾನ್ಕಾಮಾಂಶ್ಛಂದತಃ ಪ್ರಾರ್ಥಯಸ್ವ || ಇಮಾ ರಾಮಾಃ ಸರಥಾಃ ಸತೂರ್ಯಾ ನಹೀದೃಶಾ ಲಂಭನೀಯಾ ಮನುಷ್ಯೈಃ|| ಆಭಿರ್ಮತ್ಪ್ರತ್ತಾಭಿಃ ಪರಿಚಾರಯಸ್ವ ನಚಿಕೇತೋ ಮರಣಂ ಮಾನುಪ್ರಾಕ್ಷೀಃ || ೨೫ || ಶ್ವೋಭಾವಾ ಮರ್ತ್ಯಸ್ಯ ಯದಂತಕೈತತ್ಸರ್ವೇಂದ್ರಿಯಾಣಾಂ ಜರಯಂತಿ ತೇಜಃ || ಅಪಿ ಸರ್ವಂ ಜೀವಿತಮಲ್ಪಮೇವ ತವೈವ ವಾಹಾಸ್ತವ ನೃತ್ತಗೀತೇ || ೨೬ || ನ ವಿತ್ತೇನ ತರ್ಪಣೀಯೋ ಮನುಷ್ಯೋ ಲಪ್ಸ್ಯಾಮಹೇ ವಿತ್ತಮದ್ರಾಕ್ಷ್ಮ ಚೇತ್ತ್ವಾ|| ಜೀವಿಷ್ಯಾಮೋ ಯಾವದೀಶಿಷ್ಯಸಿ ತ್ವಂ ವರಸ್ತು ಮೇ ವರಣೀಯಃ ಸ ಏವ || ೨೭ || ಅಜೀರ್ಯತಾಮಮೃತಾನಾಮುಪೇತ್ಯ ಜೀರ್ಯನ್ಮರ್ತ್ಯಃ ಕ್ವಧಃಸ್ಥಃ ಪ್ರಜಾನನ್|| ಅಭಿಧ್ಯಾಯನ್ವರ್ಣರತಿಪ್ರಮೋದಾನತಿದೀರ್ಘೇ ಜೀವಿತೇ ಕೋ ರಮೇತ || ೨೮ || ಯಸ್ಮಿನ್ನಿದಂ

---

ಪಡೆದುಕೊ. (೨೪) ಇದಕ್ಕೆ ಸಮಾನವಾದ ಬೇಕಾದ ವರವನ್ನು ಬೇಡು. ಸಂಪತ್ತನ್ನೂ ಚಿರಜೀವನವನ್ನೂ ಬೇಡಿಕೊ. ನಚಿಕೇತನೇ, ಈ ಲೋಕಕ್ಕೆ ನೀನು ಅರಸನಾಗು. ಸಕಲ ಕಾಮನೆಗಳನ್ನುಪಭೋಗಿಸುವ ಸಾಮರ್ಥ್ಯವನ್ನು ನಾನು ನಿನಗೆ ಕೊಡುವೆನು. (೨೫) ಮೃತ್ಯುಲೋಕದಲ್ಲಿ ದುರ್ಲಭವಾದ ಎಲ್ಲ ಕಾಮನೆಗಳನ್ನು ಸ್ವೇಚ್ಛೆಯಿಂದ ಬೇಡು. ರಥಗಳಿಂದಲೂ ವಾದ್ಯಗಳಿಂದಲೂ ಸಮೇತರಾದ ಈ ಮನೋಹರ ಸುಂದರಿಯರು ಮನುಷ್ಯನಿಗೆ ದುರ್ಲಭರು. ನಾನು ಕಳಿಸುವ ಈ ರಮಣಿಯರ ಸೇವೆಯನ್ನು ಸ್ವೀಕರಿಸು. ನಚಿಕೇತನೇ, ಆ ಮರಣದ ವಿಷಯಕ್ಕೆ ಮಾತ್ರ ಪ್ರಶ್ನೆಯನ್ನು ಕೇಳಬೇಡ. (೨೬) (ನಚಿಕೇತನು ಅಂದದ್ದು), ಹೇ ನರಾಂತಕನೇ, ಇವೆಲ್ಲ ಕ್ಷಣಿಕ ವಸ್ತುಗಳು, ಇಂದ್ರಿಯ ಬಲವನ್ನು ಕ್ಷೀಣಮಾಡಿ ಬಿಡುವಂತಹವುಗಳು. ಈ ಜೀವಿತವಾದರೂ ತುಸುಕಾಲ ಬಾಳುವುದು. (ಮನುಷ್ಯನು ಸತ್ತಮೇಲೆ) ಈ ವಾಹನಗಳೂ ನಿನ್ನವೆ. ಈ ನೃತ್ಯಗೀತಗಳೂ ನಿನ್ನವೆ! (೨೭) ಮನುಷ್ಯನು ಸಂಪತ್ತಿಯಿಂದ ಸಂತುಷ್ಟನಾಗತಕ್ಕವನಲ್ಲ. ನಿನ್ನ ದರ್ಶನ ಮಾತ್ರದಿಂದ ನಮಗೆ ಸಂಪತ್ತು ದೊರೆಯುವುದು. ನಿನ್ನಾಳಿಕೆ ಇರುವವರೆಗೆ ನನ್ನಾಯುಷ್ಯಕ್ಕೂ ಕುಂದಿಲ್ಲ. ಆದರೆ ಬೇಡಲಿಕ್ಕೆ ಯೋಗ್ಯವಾದ ಆ ವರವನ್ನೆ ನಾನು ಬೇಡುವೆನು. (೨೮) ಅಜೀರ್ಯ ಅಂದರೆ ಮುಪ್ಪಿಲ್ಲದ ಅಮೃತ ದೇವತೆಗಳ ಕಡೆಗೆ ಬಂದು ತಿಳಿವಳಿಕೆಯುಳ್ಳ ಭೂಲೋಕದಲ್ಲಿಯ ಮನುಷ್ಯನು ಕ್ಷಣಿಕ ಸುಖಗಳನ್ನು ಬೇಡಬಹುದೆ? ಸಂಗೀತ, ರತಿ,

ವಿಚಿಕಿತ್ಸಂತಿ ಮೃತ್ಯೋ ಯತ್ಸಾಂಪರಾಯೇ ಮಹತಿ ಬ್ರೂಹಿ ನಸ್ತತ್॥ ಯೋಽಯಂ ವರೋ ಗೂಢಮನುಪ್ರವಿಷ್ಟೋ ನಾನ್ಯಂ ತಸ್ಮಾನ್ನಚಿಕೇತಾ ವೃಣೀತೇ ॥ ೨೯ ॥
ಇತೀ ಪ್ರಥಮೋಽಧ್ಯಾಯೇ ಪ್ರಥಮಾ ವಲ್ಲೀ ॥

ಅನ್ಯಚ್ಛ್ರೇಯೋಽನ್ಯದುತೈವ ಪ್ರೇಯಸ್ತೇ ಉಭೇ ನಾನಾರ್ಥೇ ಪುರುಷಂ ಸಿನೀತಃ॥ ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ ಹೀಯತೇಽರ್ಥಾದ್ಯ ಉ ಪ್ರೇಯೋ ವೃಣೀತೇ ॥ ೧ ॥ ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ ॥ ಶ್ರೇಯೋ ಹಿ ಧೀರೋಽಭಿಪ್ರೇಯಸೋ ವೃಣೀತೇ ಪ್ರೇಯೋ ಮಂದೋ ಯೋಗಕ್ಷೇಮಾತ್ ವೃಣೀತೇ ॥ ೨ ॥ ಸ ತ್ವಂ ಪ್ರಿಯಾನ್ಪ್ರಿಯ ರೂಪಾಂಶ್ಚ ಕಾಮಾನಭಿಧ್ಯಾಯನ್ನಚಿಕೇತೋಽತ್ಯಸ್ರಾಕ್ಷೀಃ ನೈತಾಂ ಸೃಂಕಾಂ ವಿತ್ತಮಯೀಮವಾಪ್ತೋ ಯಸ್ಯಾಂ ಮಜ್ಜಂತಿ ಬಹವೋ ಮನುಷ್ಯಾಃ ॥ ೩ ॥ ದೂರ-

---

ಮುಂತಾದವುಗಳಲ್ಲಿಯ ಕ್ಷಣಿಕ ಸುಖಗಳನ್ನು ಚನ್ನಾಗಿ ತಿಳಿದ ಮನುಷ್ಯನು ದೀರ್ಘಾಯುಷ್ಯವನ್ನು ಬಯಸಬಹುದೆ ? (೨೯) ಹೇ ಮೃತ್ಯೋ, ಯಾವ ತತ್ವದ ವಿಷಯಕ್ಕೆ ಚರ್ಚೆ ನಡೆದಿರುವುದೊ ಯಾವುದು ಪರಲೋಕದಲ್ಲಿ ಮಹತ್ವವುಳ್ಳದ್ದೊ ಆ ತತ್ವವನ್ನು ನನಗೆ ತಿಳಿಸು. ಈ ಗೂಢವಾಗಿರುವ ವರವನ್ನು ಬಿಟ್ಟು ಈ ನಚಿಕೇತನು ಬೇರೊಂದು ವರವನ್ನು ಬೇಡುವವನಲ್ಲ.
ಪ್ರಥಮಾಧ್ಯಾಯದ ಪ್ರಥಮವಲ್ಲಿಯು ಸಮಾಪ್ತವು.

(೧) (ಯಮನು ಅಂದದ್ದು), ಶ್ರೇಯಸ್ಸು ಎಂಬುದು ಬೇರೆ ಪ್ರೇಯಸ್ಸು ಎಂಬದು ಬೇರೆ. ಭಿನ್ನ ಭಿನ್ನ ಫಲಗಳುಳ್ಳ ಇವೆರಡರಲ್ಲಿ ಮನುಷ್ಯನು ಆಸಕ್ತನು. (ಇವೆರಡರಲ್ಲಿ ಒಂದರಿಂದ ಪ್ರೇರಿತನಾಗಿ ಮನುಷ್ಯನು ಕರ್ಮದಲ್ಲಿ ಪ್ರವೃತ್ತನಾಗುವನು.) ಇವೆರಡರಲ್ಲಿ ಶ್ರೇಯಸ್ಸಿನ ಮಾರ್ಗದಿಂದ ಹೋಗುವವನ ಕಲ್ಯಾಣವಾಗುವದು, ಪ್ರೇಯಸ್ಸಿನ ಮಾರ್ಗದಿಂದ ಹೋಗುವವನ ಪುರುಷಾರ್ಥವು ನಾಶಹೊಂದುವದು. (೨) ಶ್ರೇಯಸ್ಸು ಪ್ರೇಯಸ್ಸು ಇವೆರಡೂ ಮನುಷ್ಯನೆದುರಿಗೆ ಬಂದುನಿಲ್ಲುವವು. ಬುದ್ಧಿವಂತನು ಚನ್ನಾಗಿ ಪರೀಕ್ಷಿಸಿ ಇವುಗಳನ್ನು ವಿಂಗಡಿಸುವನು. ಬುದ್ಧಿವಂತನು ಪ್ರೇಯಸ್ಸಿಗಿಂತಲೂ ಶ್ರೇಯಸ್ಸೇ ವಿಹಿತವೆಂದು ಅದನ್ನು ಆರಿಸುವನು. ಮೂಢನು ಯೋಗಕ್ಷೇಮಕ್ಕಾಗಿ ಅಂದರೆ ಇಹಲೋಕದ ಸುಖದ ಸಲುವಾಗಿ ಪ್ರೇಯಸ್ಸನ್ನೇ ಆರಿಸುವನು. (೩) ನಚಿಕೇತನೇ, ನೀನು ಪ್ರಿಯಪದಾರ್ಥಗಳನ್ನೂ ಪ್ರಿಯವಿರುವ ಕಾಮನೆಗಳನ್ನೂ ವಿಚಾರಪೂರ್ವಕವಾಗಿ ತ್ಯಜಿಸಿರುವಿ. ಬಹು ಜನರು

ಮೇತೇ ವಿಪರೀತೇ ವಿಷೂಚೀ ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ।। ವಿದ್ಯಾಭೀಪ್ಸಿತಂ ನಚಿಕೇತಸಂ ಮನ್ಯೇ ನ ತ್ವಾ ಕಾಮಾ ಬಹವೋ ಲೋಲುಪಂತಃ ।। ೪ ।। ಅವಿದ್ಯಾಯಾಮಂತರೇ ವರ್ತಮಾನಾಃ।।ದಂದ್ರಮ್ಯಮಾಣಾಃ ಪರಿಯಂತಿ ಮೂಢಾಃ ಅಂಧೇನೈವ ನೀಯಮಾನಾ ಯಥಾಂಧಾಃ ।।೫।। ನ ಸಾಂಪರಾಯಪ್ರತಿಭಾತಿ ಬಾಲಂ ಪ್ರಮಾದ್ಯಂತಂ ವಿತ್ತಮೋಹೇನ ಮೂಢಮ್। ಅಯಂ ಲೋಕೋ ನಾಸ್ತಿ ಪರ ಇತಿ ಮಾನೀ ಪುನಃ ಪುನರ್ವಶಮಾಪದ್ಯತೇ ಮೇ ।। ೬ ।। ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ। ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ।। ೭ ।। ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ ಬಹುಧಾ ಚಿಂತ್ಯಮಾನಃ ।। ಅನನ್ಯಪ್ರೋಕ್ತೇ ಗತಿರತ್ರ ನಾಸ್ತ್ಯಣೀಯಾನ್ಹ್ಯತರ್ಕ್ಯಮನುಪ್ರಮಾಣಾತ್ ।। ೮ ।। ನೈಷಾ ತರ್ಕೇಣ

ಯಾವ ಮಾರ್ಗದಿಂದ ಸಾಗಿ ಅದರಲ್ಲಿ ಮಗ್ನರಾಗುವರೊ ಆ ಧನಧಾನ್ಯಗಳಿಂದ ಸಮೃದ್ಧವಾದ ಮಾರ್ಗವನ್ನು ನೀನು ಸ್ವೀಕರಿಸಲಿಲ್ಲ. (೪) ಅವಿದ್ಯೆ ವಿದ್ಯೆ ಎಂಬುವುಗಳು ಬಹಳ ಪರಸ್ಪರ ವಿಪರೀತವಾದವುಗಳು ಹಾಗೂ ಭಿನ್ನವುಳ್ಳವುಗಳು. ನೀನು (ನಚಿಕೇತನು) ವಿದ್ಯೆಯನ್ನಪೇಕ್ಷಿಸುವವನೆಂದು ನಾನು ತಿಳಿಯುವೆನು. ಯಾಕಂದರೆ, ನಾನಾ ಕಾಮನೆಗಳಿಂದ ನೀನು ಮೋಹಿತನಾಗಲಿಲ್ಲ. (೫) ಅವಿದ್ಯೆಯಿಂದ (ಅಜ್ಞಾನದಿಂದ) ಮುಸುಕಿದವರು ತಮ್ಮಷ್ಟಕ್ಕೆ ತಾವೇ ಬುದ್ಧಿವಂತರೆಂದೂ ಪಂಡಿತರೆಂದೂ ಭಾವಿಸುವರು. ಈ ಮೂಢರು ಕುರುಡರ ಬೆನ್ನು ಬಿದ್ದು ಹೋಗುವ ಕುರುಡರಂತೆ ಅಡ್ಡಡ್ಡ ದಾರಿಗಳಲ್ಲಿ ಸುತ್ತಾಡಿ ಸವೆಯುವರು. (೬) ಸಂಪತ್ತಿಯ ಮೋಹದಿಂದ ಮೂಢನಾಗಿ ಪ್ರಮಾದಗಳನ್ನು ಮಾಡುತ್ತಿರುವ ಬಾಲಬುದ್ಧಿಯ ಮನುಷ್ಯನಿಗೆ ಪರಲೋಕಸಾಧನದ ಹಾದಿಯು ಕಾಣಲಾರದು. ಇರುವುದಿದೊಂದೆ ಲೋಕವು, ಪರಲೋಕವು ಇಲ್ಲೇ ಇಲ್ಲ, ಎಂದು ತಿಳಿಯುವವನು ಪುನಃ ಪುನಃ ನನ್ನ ಪಾಶಕ್ಕೆ ಗುರಿಯಾಗುವನು. (೭) ಯಾವುದು (ಯಾವ ಆತ್ಮನ ಜ್ಞಾನವು) ಬಹಳ ಜನರಿಗೆ ಕೇಳಲಿಕ್ಕೆ ಸಹ ದೊರೆಯಲಾರದೊ ಅಂತಹ ಆತ್ಮನ ಜ್ಞಾನವನ್ನು ಕೌಶಲ್ಯದಿಂದ ಹೇಳುವವನು ಸಿಕ್ಕುವುದು ಮೊದಲು ಆಶ್ಚರ್ಯವು. ಕುಶಲ ಗುರುವು ಲಭಿಸಿದರೂ ಅವನಿಂದ ಉಪದಿಷ್ಟನಾಗಿ ಅದನ್ನು ತಿಳಿದುಕೊಳ್ಳುವವನು ಸಿಕ್ಕುವುದು ಅದಕ್ಕೂ ಹೆಚ್ಚಿನ ಆಶ್ಚರ್ಯವು. (೮) ಇದರ ಬಗ್ಗೆ ನಾನಾಬಗೆಯ ಭಿನ್ನಾಭಿಪ್ರಾಯಗಳಿರುವದರಿಂದ ಸಾಮಾನ್ಯ ಮನುಷ್ಯನು

**ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ॥ ಯಾಂ ತ್ವಮಾಪಃ ಸತ್ಯಧೃತಿರ್ಬತಾಸಿ ತ್ವಾದೃಂನೋ ಭೂಯಾನ್ನಚಿಕೇತಃ ಪ್ರಷ್ಟಾ ॥೯॥ ಜಾನಾಮ್ಯಹಂ ಶೇವಧಿರಿತ್ಯನಿತ್ಯಂ ನಹ್ಯಧ್ರುವೈಃ ಪ್ರಾಪ್ಯತೇ ಹಿ ಧ್ರುವಂ ತತ್ ॥ ತತೋ ಮಯಾ ನಚಿಕೇತಶ್ಚಿತೋಽಗ್ನಿರನಿತ್ಯೈರ್ದ್ರವ್ಯೈಃ ಪ್ರಾಪ್ತವಾನಸ್ಮಿ ನಿತ್ಯಮ್ ॥ ೧೦ ॥ ಕಾಮ-ಸ್ಯಾಪ್ತಿಂ ಜಗತಃ ಪ್ರತಿಷ್ಠಾಂ ಕ್ರತೋರಾನಂತ್ಯಮಭಯಸ್ಯ ಪಾರಮ್ ॥ ಸ್ತೋಮಂ ಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ ಧೃತ್ಯಾ ಧೀರೋ ನಚಿಕೇತೋಽತ್ಯ-ಸ್ರಾಕ್ಷೀಃ ॥ ೧೧ ॥ ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾಹಿತಂ ಗಂಹ್ವ-ರೇಷ್ಠಂ ಪುರಾಣಮ್ ॥ ಅಧ್ಯಾತ್ಮಯೋಗಾಧಿಗಮೇನ ದೇವಂ ಮತ್ವಾ ಧೀರೋ-ಹರ್ಷಶೋಕೇ ಜಹಾತಿ ॥ ೧೨ ॥ ಏತಚ್ಛ್ರುತ್ವಾ ಸಂಪರಿಗೃಹ್ಯ ಮರ್ತ್ಯಃ ಪ್ರವೃಹ್ಯ**

ಹೇಳಿದರೆ ಇದು ಚನ್ನಾಗಿ ತಿಳಿಯುವಂತಹದಲ್ಲ. ಆದರೆ ಆತ್ಮಜ್ಞಾನಿಯು ಹೇಳಲಾಗಿ ತಿಳಿಯದಿರುವಂತಹದು ಇದರಲ್ಲಿ ಏನೂ ಇಲ್ಲ. ಇದು ಅಣುವಿಗಿಂತಲೂ ಅಣುವೂ ಅತರ್ಕ್ಯವೂ ಇರುವದು. (೯) ಇದರ ಜ್ಞಾನವು ಕೇವಲ ತರ್ಕದಿಂದ ಆಗಲರಿಯದು. ಅತ್ಯಂತ ಪ್ರಿಯನೇ, ಎರಡನೆಯವನು (ಜ್ಞಾನಿಯು) ಹೇಳುವುದರಿಂದಲೆ ಇದು ಚನ್ನಾಗಿ ತಿಳಿಯುವದು. ಅದು ನಿನಗೆ ಪ್ರಾಪ್ತವಾಗಿರುವದು. ಯಾಕಂದರೆ, ನೀನು ನಿಜವಾಗಿ ಸತ್ಯನಿಷ್ಠನಿರುವಿ. ನಚಿಕೇತನೇ, ನನಗೆ ನಿನ್ನಂತೆ ಪ್ರಶ್ನೆಮಾಡುವವನು ಭೆಟ್ಟಿಯಾಗಲಿ. (೧೦) ಸಂಪತ್ತಿಯು ಅನಿತ್ಯವೆಂಬುದನ್ನು ನಾನು ಬಲ್ಲೆನು. ಈ ಅನಿತ್ಯ ವಸ್ತುಗಳ ಸಹಾಯದಿಂದ ಆ ನಿತ್ಯವಸ್ತುವು ಪ್ರಾಪ್ತವಾಗಲಾರದು. ಆದುದರಿಂದ ಅನಿತ್ಯ ವಸ್ತುಗಳಿಂದ ನಚಿಕೇತನೆಂಬ ಅಗ್ನಿಯನ್ನು ಸಂತುಷ್ಟಪಡಿಸಲಾಗಿ ನನಗೆ ಈ (ಸಾಪೇಕ್ಷವಾದ) ನಿತ್ಯಸ್ಥಾನವು ಮಾತ್ರ ದೊರಕಿರುವದು. (೧೧) ಎಲ್ಲ ಕಾಮನೆಗಳ ಸಂಪೂರ್ತಿಯೂ ಜಗತ್ತಿನ ಆಧಾರವೂ ಎಲ್ಲ ಸಂಕಲ್ಪಗಳ ಸಮಾಪ್ತಿಯೂ ಅಭಯದ ಸೀಮೆಯೂ ಸ್ತುತ್ಯವೂ ಮಹಾ ವಿಸ್ತೀರ್ಣವೂ ಆದ ಪರಮಪದವನ್ನು ನೋಡಿ ನೀನು ಧೈರ್ಯದಿಂದ ಮಿಕ್ಕ ಸುಖಗಳನ್ನು ಬೇಡೆಂದು ತ್ಯಜಿಸಿಬಿಟ್ಟಿರುವಿ. (೧೨) ಆ ದುರ್ದರ್ಶನವಾದ, ಗೂಢವಾಗಿ ಒಳಗೆ ಇರುವ, ಹೃದಯಗುಹೆಯಲ್ಲಿ ಸ್ಥಿತವಾದ, ದೇಹದ ಗುಪ್ತ ಸ್ಥಳದಲ್ಲಿ ವಾಸಿಸುತ್ತಿರುವ, ಸನಾತನವಾದ, ತೇಜಸ್ವಿಯಾದ ಆತ್ಮನನ್ನು ಅಧ್ಯಾತ್ಮ ಯೋಗಬಲದಿಂದುಂಟಾಗುವ ಜ್ಞಾನದಿಂದ ಸಾಕ್ಷಾತ್ಕರಿಸಿ ಬುದ್ಧಿ

ಧರ್ಮ್ಯಮಣುಮೇತಮಾಪ್ಯ ॥ ಸ ಮೋದತೇ ಮೋದನೀಯಂ ಹಿ ಲಬ್ಧ್ವಾ ವಿವೃತಂ
ಸದ್ಮ ನಚಿಕೇತಸಂ ಮನ್ಯೇ ॥೧೩॥ ಅನ್ಯತ್ರ ಧರ್ಮಾದನ್ಯತ್ರಾಧರ್ಮಾದನ್ಯತ್ರಾಸ್ಮಾ-
ತ್ಕೃತಾಕೃತಾತ್ ॥ ಅನ್ಯತ್ರ ಭೂತಾಚ್ಚ ಭವ್ಯಾಚ್ಚ ಯತ್ತತ್ಪಶ್ಯಸಿ ತದ್ವದ ॥೧೪॥ ಸರ್ವೇ
ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ ॥ ಯದಿಚ್ಛಂತೋ
ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್ ॥೧೫॥
ಏತದ್ಧ್ಯೇವಾಕ್ಷರಂ ಬ್ರಹ್ಮ ಹ್ಯೇತದೇವಾಕ್ಷರಂ ಪರಮ್ ॥ ಏತದ್ಧ್ಯೇವಾಕ್ಷರಂ
ಜ್ಞಾತ್ವಾ ಯೋ ಯದಿಚ್ಛತಿ ತಸ್ಯ ತತ್ ॥ ೧೬ ॥ ಏತದಾಲಂಬನಂ ಶ್ರೇಷ್ಠಮೇತ-
ದಾಲಂಬನಂ ಪರಂ ॥ ಏತದಾಲಂಬನಂ ಜ್ಞಾತ್ವಾ ಬ್ರಹ್ಮಲೋಕೇ ಮಹೀಯತೇ
॥೧೭॥ ನ ಜಾಯತೇ ಮ್ರಿಯತೇ ವಾ ವಿಪಶ್ಚಿನ್ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್॥
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ

---

ವಂತನು ಹರ್ಷಶೋಕಗಳೆರಡನ್ನೂ ದಾಟುವನು. (೧೩) ಇವನ್ನು ಕೇಳಿ
ಚನ್ನಾಗಿ ಅರಿತುಕೊಂಡು ಧರ್ಮವನ್ನು (ಸತ್ಯವನ್ನು ಧ್ಯಾನದಿಂದ ಅಂತಃ
ಕರಣದಲ್ಲಿ) ಬೇರ್ಪಡಿಸಿ ಈ ಅಣುವಾದ (ಸೂಕ್ಷ್ಮವಾದ) ಆತ್ಮನನ್ನು ಪ್ರಾಪ್ತ
ಮಾಡಿಕೊಂಡು ಮನುಷ್ಯನು ಆನಂದದ ಉಗಮಸ್ಥಾನವೆ ಕೈಸೇರಿದುದರಿಂದ
ಆನಂದಪೂರ್ಣನಾಗುವನು. ಇಂತಹ ಆನಂದಸ್ಥಾನದ ದ್ವಾರವು ನಚಿಕೇತನ
ಸಲುವಾಗಿ ತೆರೆದಿರುವುದೆಂದು ನಾನು ಬಗೆಯುವೆನು. (೧೪) (ನಚಿಕೇತನು
ಅಂದದ್ದು), ಯಾವದು ಧರ್ಮ ಅಧರ್ಮಗಳಿಂದ ಭಿನ್ನವೆಂದು, ಕಾರ್ಯ
ಕಾರಣಗಳಿಂದ ಬೇರೆಯೆಂದು, ಭೂತ ಭವಿಷ್ಯತ್ತುಗಳಿಂದ ಅನ್ಯತರವೆಂದು
ನೀನು ಅರಿತಿರುವಿಯೊ ಅದನ್ನು ನನಗೆ ಹೇಳು. (೧೫) (ಯಮನು
ಅಂದದ್ದು), ಸಕಲವೇದಗಳು ಯಾವ ಪರಮ ಪದವನ್ನು ಪ್ರತಿಪಾದಿಸುವವೊ
ಯಾವ ಧ್ಯೇಯಕ್ಕಾಗಿ ಎಲ್ಲ ತಪಸ್ಸುಗಳೊ ಯಾವ ಪದದ ಅಪೇಕ್ಷೆಯಿಂದ
ಜನರು ಬ್ರಹ್ಮಚರ್ಯವ್ರತವನ್ನು ಪಾಲಿಸುವರೊ ಆ ಪರಮಗತಿಯ ವಿಷ
ಯಕ್ಕೆ ನಾನು ಸಂಕ್ಷೇಪದಿಂದ ಹೇಳುವೆನು. ಓಂ ಎಂಬುದೆ ಅದು. (೧೬)
ಇದೇ ಅಕ್ಷರ ಬ್ರಹ್ಮವು. ಅತ್ಯಂತ ಶ್ರೇಷ್ಠವಾದ ಅಕ್ಷರವಾದರೂ ಇದೇ. ಈ
ಅಕ್ಷರದ ಜ್ಞಾನವನ್ನು ಪಡೆದವನು ಯಾವ ಪದವನ್ನು ಇಚ್ಛಿಸುವನೊ ಆ
ಪದವನ್ನು ಪಡೆಯುವನು. (೧೭) ಇದು ಶ್ರೇಷ್ಠವಾದ ಸಾಧನವು. ಎಲ್ಲಕ್ಕೂ
ಹೆಚ್ಚಿನ ಸಾಧನವು ಇದೇ. ಈ ಸಾಧನವನ್ನರಿತವನು ಬ್ರಹ್ಮಲೋಕದಲ್ಲಿ

॥ ೧೮ ॥ ಹಂತಾ ಚೇನ್ಮನ್ಯತೇ ಹಂತುಂ ಹತಶ್ಚೇನ್ಮನ್ಯತೇ ಹತಮ್ ॥ ಉಭೌ ತೌ
ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥೧೯॥ ಅಣೋರಣೀಯಾನ್ಮಹತೋ
ಮಹೀಯಾನಾತ್ಮಾಸ್ಯ ಜಂತೋರ್ನಿಹಿತೋ ಗುಹಾಯಾಮ್ ॥ ತಮಕ್ರತುಃ ಪಶ್ಯತಿ
ವೀತಶೋಕೋ ಧಾತುಃ ಪ್ರಸಾದಾನ್ಮಹಿಮಾನಮಾತ್ಮನಃ ॥೨೦॥ ಆಸೀನೋ ದೂರಂ
ವ್ರಜತಿ ಶಯಾನೋ ಯಾತಿ ಸರ್ವತಃ ॥ ಕಸ್ತಂ ಮದಾಮದಂ ದೇವಂ ಮದನ್ಯೋ
ಜ್ಞಾತುಮರ್ಹತಿ ॥೨೧॥ ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್ ॥ ಮಹಾಂತಂ
ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥ ೨೨ ॥ ನಾಯಮಾತ್ಮಾ ಪ್ರವಚ-
ನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ॥ ಯಮೇವೈಷ ವೃಣುತೇ
ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥ ೨೩ ॥ ನಾವಿರತೋ

---

ಮಹತ್ವವನ್ನು ಹೊಂದುವನು. (೧೮) ಜ್ಞಾನಮಯ ಆತ್ಮನಿಗೆ ಹುಟ್ಟು ಸಾವುಗಳಿಲ್ಲ. ಆತ್ಮವು ಇನ್ನಾವ ವಸ್ತುವಿನಿಂದಲೂ ಉತ್ಪನ್ನವಾಗಿಲ್ಲ. ಅದು ಉತ್ಪನ್ನವಾದ ವಸ್ತುವಲ್ಲ. ಅದು ಅಜವು, ನಿತ್ಯವು, ಶಾಶ್ವತವು, ಸನಾತನವು. ಶರೀರವು ಕೊಲ್ಲಲ್ಪಟ್ಟರೂ ಆತ್ಮವು ಸಾಯಲಾರದಂತಹದು. (೧೯) ನಾನು ಕೊಲ್ಲುವೆನೆಂದು ಬಗೆಯುವ ಕೊಲ್ಲುವವನೂ ನಾನು ಕೊಲ್ಲಲ್ಪಡುವೆನೆಂದು ಬಗೆಯುವ ಕೊಲ್ಲಲ್ಪಡುವವನೂ ಅಜ್ಞಾನಿಗಳೆ. ಆತ್ಮನು ಕೊಲ್ಲುವುದೂ ಇಲ್ಲ, ಕೊಲ್ಲಲ್ಪಡುವುದೂ ಇಲ್ಲ. (೨೦) ಪ್ರಾಣಿಯ ಹೃದಯಗುಹೆಯಲ್ಲಿರುವ ಆತ್ಮವಸ್ತುವು ಅಣುವಿಗಿಂತಲೂ ಅಣುವಿರುವುದು, ಮಹತ್ತಿಗಿಂತಲೂ ಮಹತ್ತಿರುವುದು. ನಿಷ್ಕಾಮನಾದವನಿಗೆ ಆತ್ಮನ ದರ್ಶನವಾಗುವದು. ಶೋಕರಹಿತನಾದವನು ಪರಮಾತ್ಮನ ಅನುಗ್ರಹದಿಂದ ಆತ್ಮನ ಮಹಿಮೆಯನ್ನು ಅರಿತುಕೊಳ್ಳುವನು. (೨೧) ಕುಳಿತಲ್ಲಿಯೆ ಕುಳಿತು ಆತ್ಮವು ದೂರ ಅಡ್ಡಾಡುವದು, ಮಲಗಿ ಎಲ್ಲ ಕಡೆಗೂ ಹೋಗುವದು. ಆ ಆನಂದಯುಕ್ತ ಹಾಗೂ ಆನಂದರಹಿತ ದೇವನನ್ನು (ತೇಜಸ್ವಿಯಾದ ಆತ್ಮನನ್ನು) ನನ್ನ ಹೊರತು ಯಾರು ಬಲ್ಲರು? (೨೨) ಶರೀರಗಳಲ್ಲಿ ಅಶರೀರನಾಗಿಯೂ ಅನಿತ್ಯಗಳಲ್ಲಿ ನಿತ್ಯನಾಗಿಯೂ ಇರುವ ಈ ಸರ್ವವ್ಯಾಪಿಯಾದ ಶ್ರೇಷ್ಠ ಆತ್ಮನ ಸಾಕ್ಷಾತ್ಕಾರ ಮಾಡಿಕೊಂಡ ಬುದ್ಧಿವಂತನು ಶೋಕರಹಿತನು. (೨೩) ಆತ್ಮಜ್ಞಾನವು ಪ್ರವಚನದಿಂದ ಲಭ್ಯವಲ್ಲ. ಮೇಧಾಶಕ್ತಿಯಿಂದ ಅಥವಾ ಬಹಳ ಶ್ರವಣದಿಂದ ಇದು ಲಭ್ಯವಲ್ಲ. ಆತ್ಮನು ಯಾವನ ಮೇಲೆ ಪ್ರಸನ್ನನಾಗುವನೊ ಅವನಿಗೆ ಮಾತ್ರ ಅವನು ಲಭ್ಯನು. ಆತ್ಮನು ತನ್ನ ನಿಜಸ್ವರೂಪ

ದುಶ್ಚರಿತಾನ್ನಾಶಾಂತೋ ನಾಸಮಾಹಿತಃ ॥ ನಾಶಾಂತಮನಸೋ ವಾಪಿ ಪ್ರಜ್ಞಾನೇ ನೈನಮಾಪ್ನುಯಾತ್ ॥೨೪॥ ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಃ ॥ ಮೃತ್ಯುರ್ಯಸ್ಯೋಪಸೇಚನಂ ಕ ಇತ್ಥಾ ವೇದ ಯತ್ರ ಸಃ ॥೨೫॥ ಇತಿ ಪ್ರಥಮೋ-ಧ್ಯಾಯೇ ದ್ವಿತೀಯಾ ವಲ್ಲೀ ॥

ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ॥ ಛಾಯಾತಪೌ ಬ್ರಹ್ಮವಿದೋ ವದಂತಿ ಪಂಚಾಗ್ನಯೋ ಯೇ ಚ ತ್ರಿಣಾಚಿಕೇತಾಃ ॥೧॥ ಯಃ ಸೇತುರೀಜಾನಾನಾಮಕ್ಷರಂ ಬ್ರಹ್ಮ ಯತ್ಪರಮ್ ॥ ಅಭಯಂ ತಿತೀರ್ಷತಾಂ ಪಾರಂ ನಾಚಿಕೇತಂ ಶಕೇಮಹಿ ॥ ೨ ॥ ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ॥ ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥೩॥ ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು ಗೋಚರಾನ್ ॥ ಆತ್ಮೇಂದ್ರಿ-

---

ವನ್ನು ಅವನಿಗೆ ಪ್ರಕಟಮಾಡಿ ತೋರಿಸುವನು. (೨೪) ಯಾವನು ದುಷ್ಟ ಕರ್ಮಗಳನ್ನು ಬಿಟ್ಟಿಲ್ಲವೊ ಯಾವನು ಅಶಾಂತನೊ ಯಾವನು ಏಕಾಗ್ರಚಿತ್ತ ವಿಲ್ಲದವನೊ ಯಾವನ ಮನಸಿನಲ್ಲಿ ಶಾಂತಿಯು ನೆಲೆಗೊಂಡಿಲ್ಲವೊ ಅವನಿಗೆ ಆತ್ಮನ (ಬೌದ್ಧಿಕ) ಜ್ಞಾನವಾದರೂ ಆತ್ಮಸಾಕ್ಷಾತ್ಕಾರವಾಗಲಾರದು. (೨೫) ಬ್ರಾಹ್ಮಣ ಕ್ಷತ್ರಿಯರೀರ್ವರೂ ಯಾವ ಆತ್ಮನ ಆಹಾರವೊ ಮೃತ್ಯುವು ಯಾವನ ಉಪಖಾದ್ಯವೊ ಅವನು ಎಲ್ಲಿರುವನೆಂಬವನ್ನು ಅನಾಯಾಸದಿಂದ ತಿಳಿದುಕೊಳ್ಳಬಹುದೆ? ಇಲ್ಲಿ ಪ್ರಥಮ ಅಧ್ಯಾಯದ ದ್ವಿತೀಯ ವಲ್ಲಿಯು ಸಮಾಪ್ತವು.

(೧) ಹೃದಯಗುಹೆಯನ್ನು ಪ್ರವೇಶಿಸಿ ಲೋಕದಲ್ಲಿ ಕರ್ಮಫಲಗಳನ್ನನುಭವಿಸುತ್ತ ಪರಮಶ್ರೇಷ್ಠಸ್ಥಾನದಲ್ಲಿ ಎರಡು ಆತ್ಮಗಳು(ಜೀವದೇವಗಳು) ಇರುತ್ತಿರುವವು. ಅವು ಛಾಯಾತಪಗಳಂತೆ (ಬೆಳಕು ನೆಳಲಿನಂತೆ) ಇರುವವೆಂದು ಬ್ರಹ್ಮಜ್ಞಾನಿಗಳು ಹೇಳುವರು. ನಚಿಕೇತ ಅಗ್ನಿಯ ಯಜ್ಞವನ್ನು ಮೂರು ಸಾರೆ ಮಾಡಿದವರು ಹೀಗೆಯೆ ಹೇಳುವರು. (೨) ಯಾಜಕರಿಗೆ ಸೇತುವಿನಂತಿರುವ ನಚಿಕೇತವೆಂಬ ಅಗ್ನಿಯನ್ನೂ ಸಂಸಾರವನ್ನು ದಾಟಿ ಹೋಗಲಿಕ್ಕೆ ಸಾಧನರೂಪವಾದ ಅಕ್ಷರ, ಅಭಯ ಪರಬ್ರಹ್ಮನನ್ನೂ ನಾವು ಬಲ್ಲೆವು. (೩) ಈ ಶರೀರವು ಒಂದು ರಥವೆಂದೂ ಆತ್ಮನು ಅದರಲ್ಲಿಯ ರಥಿಯೆಂದೂ ತಿಳಿದುಕೊ. ಬುದ್ಧಿಯು ಸಾರಥಿಯೆಂದೂ ಮನಸು ಕಡಿವಾಣ

ಯಮನೋಯುಕ್ತಃ ಭೋಕ್ತೇತ್ಯಾಹುರ್ಮನೀಷಿಣಃ ॥ ೪ ॥ ಯಸ್ತ್ವವಿಜ್ಞಾನವಾನ್ಭವತ್ಯಯುಕ್ತೇನ ಮನಸಾ ಸದಾ ॥ ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥ ೫ ॥ ಯಸ್ತು ವಿಜ್ಞಾನವಾನ್ಭವತಿ ಯುಕ್ತೇನ ಮನಸಾ ಸದಾ ॥ ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥೬॥ ಯಸ್ತ್ವವಿಜ್ಞಾನವಾನ್ಭವತ್ಯಮನಸ್ಕಃ ಸದಾಽಶುಚಿಃ ॥ ನ ಸ ತತ್ಪದಮಾಪ್ನೋತಿ ಸಂಸಾರಂ ಚಾಧಿಗಚ್ಛತಿ ॥ ೭ ॥ ಯಸ್ತು ವಿಜ್ಞಾನವಾನ್ಭವತಿ ಸಮನಸ್ಕಃ ಸದಾಶುಚಿಃ ॥ ಸ ತು ತತ್ಪದಮಾಪ್ನೋತಿ ಯಸ್ಮಾದ್ಭೂಯೋ ನ ಜಾಯತೇ ॥ ೮ ॥ ವಿಜ್ಞಾನಸಾರಥಿರ್ಯಸ್ತು ಮನಃ ಪ್ರಗ್ರಹವಾನ್ನರಃ ॥ ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥ ೯ ॥ ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ ॥ ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ಪರಃ ॥ ೧೦ ॥ ಮಹತಃ ಪರಮವ್ಯಕ್ತಮವ್ಯಕ್ತಾತ್ಪುರುಷಃ ಪರಃ ॥ ಪುರುಷಾನ್ನ ಪರಂ ಕಿಂಚಿತ್ಸಾ ಕಾಷ್ಠಾ ಸಾ ಪರಾ-

---

ವೆಂದೂ ಅರಿತುಕೊ. (೪) ಇಂದ್ರಿಯಗಳು ಕುದುರೆಗಳೆಂದೂ ತದ್ವಿಷಯಗಳು ಅವು ಸಾಗುವ ಮಾರ್ಗವೆಂದೂ ಅನ್ನುವರು. ಇಂದ್ರಿಯ ಹಾಗೂ ಮನಸು ಇವುಗಳಿಂದ ಯುಕ್ತನಾದ ಆತ್ಮನು ಸುಖದುಃಖಗಳ ಭೋಕ್ತೃವೆಂದು ಜ್ಞಾಣರು ಹೇಳುವರು. (೫) ಮನಸು ಯಾವಾಗಲೂ ಚಂಚಲವಿರುವುದರಿಂದ ಶುದ್ಧಜ್ಞಾನವಿಲ್ಲದವನ ಇಂದ್ರಿಯಗಳು, ದುಷ್ಟ ಕುದುರೆಗಳು ಸಾರಥಿಯ ವಶಕ್ಕೆ ಬಾರದಂತೆ, ಅವನ ವಶಕ್ಕೆ ಬಾರವು. (೬) ಮನಸು ಸರ್ವದಾ ಯೋಗಯುಕ್ತವಿರುವುದರಿಂದ ವಿಜ್ಞಾನವಂತನಾಗಿರುವವನ ಇಂದ್ರಿಯಗಳು, ಒಳ್ಳೇ ಕುದುರೆಗಳು ಸಾರಥಿಯ ವಶದಲ್ಲಿರುವಂತೆ, ಅವನ ವಶದಲ್ಲಿಯೆ ಇರುವವು. (೭) ಯಾವನು ವಿಜ್ಞಾನರಹಿತನೊ ಚಂಚಲಚಿತ್ತವುಳ್ಳವನೊ ಸದಾ ಅಪವಿತ್ರನೊ ಅವನಿಗೆ ಆ ಪದವು ದೊರೆಯಲಾರದು. ಅವನಿಗೆ ಪುನಃ ಸಂಸಾರವು ಪ್ರಾಪ್ತವಾಗುವುದು. (೮) ವಿಜ್ಞಾನವಂತನೂ ಸ್ಥಿರಚಿತ್ತವುಳ್ಳವನೂ ಸರ್ವದಾ ಪವಿತ್ರನೂ ಆ ಪದವನ್ನು ಪಡೆಯುವನು. ಅಲ್ಲಿಂದ ಅವನಿಗೆ ಪುನಃ ಹುಟ್ಟು ಎಂಬುದೆ ಇಲ್ಲ. (೯) ಯಾವ ಮನುಷ್ಯನು ವಿಜ್ಞಾನವನ್ನೆ ಸಾರಥಿಯಾಗಿಟ್ಟುಕೊಂಡು ಮನಸ್ಸನ್ನು ಸಂಯಮಿಸುವನೊ ಅವನು ಈ ಸಂಸಾರವನ್ನು ದಾಟಿಹೋಗುವನು. ಅದೇ ಸರ್ವವ್ಯಾಪಿಯ ಶ್ರೇಷ್ಠ ಪದವು. (೧೦) ಇಂದ್ರಿಯಗಳಾಚೆಗೆ ತನ್ಮಾತ್ರಗಳು ಅಂದರೆ ಪಂಚಭೂತಗಳ ಸೂಕ್ಷ್ಮಸ್ವರೂಪಗಳಿರುವುವು. ಅವುಗಳನ್ನು ದಾಟಿ ಮನಸು,

ಗತಿಃ ॥೧೧॥ ಏಷ ಸರ್ವೇಷು ಭೂತೇಷು ಗೂಢೋತ್ಮಾ ನ ಪ್ರಕಾಶತೇ ॥ ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥೧೨॥ ಯಚ್ಛೇದ್ವಾಂಗ್ಮನಸಿ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾನ ಆತ್ಮನಿ ॥ ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇ-ಚ್ಛಾಂತ ಆತ್ಮನಿ ॥೧೩॥ ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ ॥ ಕ್ಷುರಸ್ಯ-ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್ಕವಯೋ ವದಂತಿ ॥೧೪॥ ಅಶಬ್ದ-ಮಸ್ಪರ್ಶಮರೂಪಮವ್ಯಯಂ ತಥಾऽರಸಂ ನಿತ್ಯಮಗಂಧವಚ್ಚ ಯತ್ ॥ ಅನಾದ್ಯ-ನಂತಂ ಮಹತಃಪರಂ ಧ್ರುವಂ ನಿಚಾಯ್ಯ ತನ್ಮೃತ್ಯುಮುಖಾತ್ಪ್ರಮುಚ್ಯತೇ ॥೧೫॥ ನಾಚಿಕೇತಮುಪಾಖ್ಯಾನಂ ಮೃತ್ಯುಪ್ರೋಕ್ತಂ ಸನಾತನಮ್ ॥ ಉಕ್ತ್ವಾ ಶ್ರುತ್ವಾ ಚ ಮೇಧಾವೀ ಬ್ರಹ್ಮಲೋಕೇ ಮಹೀಯತೇ ॥೧೬॥ ಯ ಇಮಂ ಪರಮಂ

---

ಮನಸಿನಾಚೆಗೆ ಬುದ್ಧಿ, ಅದರಾಚೆಗೆ ಮಹದಾತ್ಮವು. (೧೧) ಮಹದಾತ್ಮದ ಆಚೆಗೆ ಶ್ರೇಷ್ಠವಾದ ಅವ್ಯಕ್ತವು. ಅದರಾಚೆಗೆ ಶ್ರೇಷ್ಠ ಪುರುಷನು. ಪುರುಷನಿಗಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ಅದೇ ಕಟ್ಟಕಡೆಯ ಅತ್ಯಂತ ಶ್ರೇಷ್ಠವಾದ ಪರಮಗತಿಯು. (೧೨) ಸಕಲ ಭೂತಗಳಲ್ಲಿಯೂ ಗೂಢವಾಗಿರುವ ಆ ಆತ್ಮನು ಪ್ರಕಟನಾಗುವದಿಲ್ಲ. ಆದರೆ ಅವನು ಸೂಕ್ಷ್ಮ ದರ್ಶಿಗಳ ಸೂಕ್ಷ್ಮ ಹಾಗೂ ತೀಕ್ಷ್ಣ ಬುದ್ಧಿಗೆ ದೃಗ್ಗೋಚರನಾಗುವನು. (೧೩) ಜಾಣನಿದ್ದವನು ತನ್ನ ಮನಸ್ಸಿನಲ್ಲಿ ವಾಕ್ಶಕ್ತಿಯ ಲಯಮಾಡಬೇಕು. ಮನಸ್ಸನ್ನು ಜ್ಞಾನಮಯ ಅಥವಾ ಚೇತನಮಯ ಆತ್ಮನಲ್ಲಿ ಲೀನಮಾಡಬೇಕು. ಚೇತನಮಯ ಆತ್ಮನನ್ನು ಮಹದಾತ್ಮನಲ್ಲಿ, ಮಹದಾತ್ಮನನ್ನು ಶಾಂತಾತ್ಮನಲ್ಲಿ ಲೀನಮಾಡಬೇಕು. (೧೪) ಏಳಿರಿ. ಜಾಗ್ರತರಾಗಿರಿ. ಶ್ರೇಷ್ಠರ ಕಡೆಗೆ ಹೋಗಿ ಅರಿತುಕೊಳ್ಳಿರಿ. ಈ ಮಾರ್ಗದಿಂದ ನಡೆಯುವುದು ಕತ್ತಿಯ ಮೊನೆಯಮೇಲಿನ ನಡೆಯಷ್ಟು ಕಠಿಣವೆಂದು ಕವಿಗಳು ಹೇಳುವರು. (೧೫) ಅದು (ಆತ್ಮವು) ಶಬ್ದರಹಿತವು, ಸ್ಪರ್ಶರಹಿತವು, ಅವ್ಯಯವು, ರೂಪರಹಿತವು. ಅದೇ ರೀತಿಯಲ್ಲಿ ಅದು ರಸರಹಿತವು, ನಿತ್ಯವು, ಗಂಧ-ರಹಿತವು, ಅನಾದಿಯು, ಅನಂತವು. ಮಹತ್ತತ್ವದಾಚೆಗೆ ಅಂದರೆ ವಿರಾಟ ದಾಚೆಗೆ ಇರುವಂತಹದು, ಸತ್ಯವು. ಅದನ್ನರಿತವನು ಮೃತ್ಯುಮುಖದಿಂದ ಮುಕ್ತನಾಗುವನು. (೧೬) ಯಮದೇವರು ಹೇಳಿದ ಈ ನಚಿಕೇತನ ಸನಾತನ ಉಪಾಖ್ಯಾನವನ್ನು ಹೇಳಿ ಹಾಗೂ ಕೇಳಿ ಬುದ್ಧಿವಂತನು ಬ್ರಹ್ಮ

ಗುಹ್ಯಂ ಶ್ರಾವಯೇದ್ಬ್ರಹ್ಮಸಂಸದಿ ॥ ಪ್ರಯತಃ ಶ್ರಾದ್ಧಕಾಲೇ ವಾ ತದಾನಂತ್ಯಾಯ ಕಲ್ಪತೇ ॥ ತದಾನಂತ್ಯಾಯ ಕಲ್ಪತ ಇತಿ ॥ ೧೭ ॥ ಇತಿ ಪ್ರಥಮೋಧ್ಯಾಯೇ ತೃತೀಯಾ ವಲ್ಲೀ ॥ ಇತಿ ಪ್ರಥಮೋಧ್ಯಾಯಃ ॥

ಪರಾಂಚಿಖಾನಿ ವ್ಯತೃಣತ್ಸ್ವಯಂಭೂ ತಸ್ಮಾತ್ಪರಾಙ್‌ಪಶ್ಯತಿ ನಾಂತರಾತ್ಮನ್॥ ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್ ॥ ೧ ॥ ಪರಾಚಃ ಕಾಮಾನನುಯಂತಿ ಬಾಲಾಸ್ತೇ ಮೃತ್ಯೋರ್ಯಂತಿ ವಿತತಸ್ಯ ಪಾಶಮ್ ॥ ಅಥ ಧೀರಾ ಅಮೃತತ್ವಂ ವಿದಿತ್ವಾ ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯಂತೇ ॥ ೨ ॥ √ಯೇನ ರೂಪಂ ರಸಂ ಗಂಧಂ ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ॥ ಏತೇನೈವ ವಿಜಾನಾತಿ ಕಿಮತ್ರ ಪರಿಶಿಷ್ಯತ ಏತದ್ವೈ ತತ್ ॥ ೩ ॥ ಸ್ವಪ್ನಾಂತಂ ಜಾಗರಿತಾಂತಂ ಚೋಭೌ ಯೇನಾನುಪಶ್ಯತಿ ॥ ಮಹಾಂತಂ ವಿಭುಮಾತ್ಮಾನಂ

---

ಲೋಕದಲ್ಲಿ ಮಹತ್ವವನ್ನು ಹೊಂದುವನು. (೧೭) ಯಾವ ಶುದ್ಧ ಮನುಷ್ಯನು ಈ ಪರಮಗುಹ್ಯವನ್ನು ಬ್ರಾಹ್ಮಣಸಮಾಜದಲ್ಲಿಯಾಗಲಿ, ಶ್ರಾದ್ಧಸಮಯದಲ್ಲಿಯಾಗಲಿ, ಬ್ರಾಹ್ಮಣರಿಗೆ ಶ್ರವಣಮಾಡಿಸುವನೊ ಅವನು ಅನಂತತ್ವವನ್ನು ಪಡೆಯುವನು.

ಇಲ್ಲಿಗೆ ಪ್ರಥಮ ಅಧ್ಯಾಯದ ತೃತೀಯ ವಲ್ಲಿಯು ಸಮಾಪ್ತವು.

## ಪ್ರಥಮ ಅಧ್ಯಾಯವು ಸಮಾಪ್ತವು

(೧) (ಯಮನು ಅಂದದ್ದು), ಸ್ವಯಂಭು ಪರಮಾತ್ಮನು ಶಕ್ತಿಗಳನ್ನು ಬಹಿರ್ಮುಖವಾಗಿ ಹರಿಬಿಟ್ಟನು. ಆದುದರಿಂದ ಇಂದ್ರಿಯಗಳು ಬಾಹ್ಯವಸ್ತುಗಳನ್ನು ಮಾತ್ರ ನೋಡಬಲ್ಲವು, ಅವುಗಳಿಗೆ ಅಂತರಾತ್ಮನು ಗೋಚರನಾಗನು. ಕ್ವಚಿತ್ ಯಾವನಾವನೊಬ್ಬ ಬುದ್ಧಿವಂತನು ಅಮೃತತ್ವವನ್ನು ಹೊಂದುವ ಇಚ್ಛೆಯಿಂದ ತನ್ನ ದೃಷ್ಟಿಯನ್ನು ಅಂತರ್ಮುಖಮಾಡಿ ಅಂತರಾತ್ಮನನ್ನು ಸಾಕ್ಷಾತ್ಕರಿಸುವನು. (೨) ಬಾಲಬುದ್ಧಿಯುಳ್ಳವರು ಬಾಹ್ಯಕಾಮನೆಗಳ ಬೆನ್ನುಬೀಳುವರು ಹಾಗೂ ವಿಸ್ತೃತವಾದ ಮರಣಪಾಶದಲ್ಲಿ ಸಿಕ್ಕುವರು. ಆದರೆ ಬುದ್ಧಿವಂತರು ಅಮೃತಪದವಿಯನ್ನರಿತು ಕೊಂಡು ಇಹಲೋಕದ ಈ ಅನಿತ್ಯ ವಸ್ತುಗಳಲ್ಲಿ ನಿತ್ಯವಸ್ತುವನ್ನು ಹುಡುಕುವದಿಲ್ಲ. (೩) ರೂಪ ರಸ ಗಂಧ ಶಬ್ದ ಸ್ಪರ್ಶ ಹಾಗೂ ಮೈಥುನಗಳ

**ಮತ್ವಾ ಧೀರೋ ನ ಶೋಚತಿ ||೪|| ಯ ಇಮಂ ಮಧ್ವದಂ ವೇದ ಆತ್ಮಾನಂ ಜೀವಮಂತಿಕಾತ್ || ಈಶಾನಂ ಭೂತಭವ್ಯಸ್ಯ ನ ತತೋ ವಿಜುಗುಪ್ಸತ ಏತದ್ವೈ ತತ್ ||೫|| ಯಃ ಪೂರ್ವಂ ತಪಸೋ ಜಾತಮದ್ಭ್ಯಃ ಪೂರ್ವಮಜಾಯತ || ಗುಹಾಂ ಪ್ರವಿಶ್ಯ ತಿಷ್ಠಂತಂ ಯೋ ಭೂತೇಭಿರ್ವ್ಯಪಶ್ಯತ ಏತದ್ವೈ ತತ್ ||೬|| ಯಾ ಪ್ರಾಣೇನ ಸಂಭವತ್ಯದಿತಿರ್ದೇವತಾಮಯೀ || ಗುಹಾಂ ಪ್ರವಿಶ್ಯ ತಿಷ್ಠಂತೀ ಯಾ ಭೂತೇಭಿರ್ವ್ಯಜಾಯತ ಏತದ್ವೈ ತತ್ ||೭|| ಅರಣ್ಯೋರ್ನಿಹಿತೋ ಜಾತವೇದಾ ಗರ್ಭ ಇವ ಸುಭೃತೋ ಗರ್ಭಿಣೀಭಿಃ || ದಿವೇದಿವ ಈಡ್ಯೋ ಜಾಗೃವದ್ಭಿರ್ಹವಿಷ್ಮದ್ಭಿರ್ಮನುಷ್ಯೇಭಿರಗ್ನಿರೇತದ್ವೈ ತತ್ ||೮|| ಯತಶ್ಚೋದೇತಿ ಸೂರ್ಯೋಽಸ್ತಂ ಯತ್ರ ಚ ಗಚ್ಛತಿ || ತಂ ದೇವಾಃ ಸರ್ವೇಽರ್ಪಿತಾಸ್ತದು ನಾತ್ಯೇತಿ ಕಶ್ಚನ ಏತದ್ವೈ ತತ್ ||೯|| ಯದೇವೇಹ ತದಮುತ್ರ ಯದಮುತ್ರ ತದನ್ವಿಹ || ಮೃತ್ಯೋಃ ಸ ಮೃತ್ಯುಮಾ-**

---

ಜ್ಞಾನವು ಈ ಆತ್ಮನಿಂದಲೆ ಆಗುವುದು. ಇನ್ನೇನು ಉಳಿಯಿತು ? ಅದು ಇದೇ (ಯಾವುದರಿಂದ ಈ ಜ್ಞಾನವಾಗುವುದೊ ಅದೇ ಆತ್ಮವು). (೪) ಸ್ವಪ್ನಸ್ಥಿತಿಯಲ್ಲಿಯೂ ಜಾಗ್ರತ್‌ಸ್ಥಿತಿಯಲ್ಲಿಯೂ ಆಗುವ ವ್ಯಾಪಾರಗಳು ಯಾವನ ಬಲದಿಂದ ತಿಳಿಯುತ್ತವೆಯೊ ಆ ಶ್ರೇಷ್ಠ ಸರ್ವವ್ಯಾಪಿಯಾದ ಆತ್ಮನನ್ನರಿತುಕೊಂಡು ಜಾಣನು ಶೋಕವನ್ನು ಬಿಟ್ಟುಬಿಡುವನು. (೫) ಜೀವನ ಸನ್ನಿಧಿಯಲ್ಲಿದ್ದು ಫಲವನ್ನನುಭೋಗಿಸುವ ಆತ್ಮನನ್ನೂ ಭೂತ ಭವಿಷ್ಯಗಳೊಡೆಯನಾದವನನ್ನೂ ಅರಿತವನು ಭಯರಹಿತನಾಗುವನು. ಅದು ಇದೆ. (೬) ಯಾವುದು ತಪಸ್ಸಿನ ಪೂರ್ವದಲ್ಲಿಯೂ ಅಪ್ಪು ಮುಂತಾದ ತತ್ವಗಳ ಪೂರ್ವದಲ್ಲಿಯೂ ಉತ್ಪನ್ನವಾಯಿತೊ ಯಾವುದು ಹೃದಯಗುಹೆಯನ್ನು ಪ್ರವೇಶಿಸಿ ಭೂತಗಳೊಡನೆ ಇದ್ದುದನ್ನು ಜ್ಞಾನಿಗಳು ನೋಡಿದರೊ ಅದು ಇದೆ. (೭) ಸರ್ವದೇವತೆಗಳನ್ನೊಳಗೊಂಡ ಅದಿತಿಯು ಪ್ರಾಣಶಕ್ತಿಸಹಿತ ಹುಟ್ಟಿದಳು. ಹೃದಯಗುಹೆಯನ್ನು ಪ್ರವೇಶಿಸಿ ಅಲ್ಲಿ ಸ್ಥಿರಳಾದ ಆಕೆಯು ಸರ್ವಭೂತಗಳ ಸಹಿತ ಹುಟ್ಟಿದಳು. ಇದೇ ಅದು. (೮) ಬಸುರಿದ್ದ ಸ್ತ್ರೀಯರಿಂದ ರಕ್ಷಿಸಲ್ಪಟ್ಟ ಅವರ ಗರ್ಭದಂತೆ ಜ್ಞಾನಿಯಾದ ಅಗ್ನಿಯು ಎರಡು ಅರಣಿಗಳ ಹೊಟ್ಟೆಯಲ್ಲಿರುವನು. ಹವಿರ್ಭಾಗಗಳನ್ನು ಕೊಡುವ ಜಾಗ್ರತರಾದ ಮನುಷ್ಯರು ಇವನನ್ನು ದಿನಾಲು ಒಳ್ಳೇ ಎಚ್ಚರಿಕೆಯಿಂದ ಪೂಜಿಸತಕ್ಕದ್ದು. ಇದೇ ಅದು. (೯) ಅಲ್ಲಿಂದಲೆ ಸೂರ್ಯನ ಉದಯವು. ಸೂರ್ಯನು ಅಸ್ತವಾಗುವುದಾದರೂ ಅಲ್ಲಿಯೆ. ಸಕಲ ದೇವತೆಗಳು

ಪ್ನೋತಿ ಯ ಇಹ ನಾನೇವ ಪಶ್ಯತಿ ॥೧೦॥ ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಂಚನ ॥ ಸ ಮೃತ್ಯುಂ ಗಚ್ಛತಿ ಯ ಇಹ ನಾನೇವ ಪಶ್ಯತಿ ॥೧೧॥ ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ ॥ ಈಶಾನೋ ಭೂತಭವ್ಯಸ್ಯ ನ ತತೋ ವಿಜುಗುಪ್ಸತ ಏತದ್ವೈ ತತ್ ॥೧೨॥ ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮ್ರಕಃ ॥ ಈಶಾನೋ ಭೂತಭವ್ಯಸ್ಯ ಸ ಏವಾದ್ಯ ಸ ಉ ಶ್ವ ಏತದ್ವೈ ತತ್ ॥೧೩॥ ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ ॥ ಏವಂ ಧರ್ಮಾನ್ ಪೃಥಕ್ ಪಶ್ಯಂಸ್ತಾನೇವಾನುವಿಧಾವತಿ ॥೧೪॥ ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ॥ ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ ॥೧೫॥ ಇತಿ ದ್ವಿತೀಯೋಽಧ್ಯಾಯೇ ಪ್ರಥಮಾ ವಲ್ಲೀ ॥

---

ಅಲ್ಲಿಯೆ ಇರುವರು. ಯಾವನೂ ಅದರಾಚೆಗೆ ಹೋಗಲಾರನು. ಇದೇ ಅದು. (೧೦) ಇಲ್ಲಿರುವಂತೆ ಅಲ್ಲಿ ಇರುವುದು. ಅಲ್ಲಿ ಇರುವಂತೆಯೆ ಇಲ್ಲಿಯೂ ಇರುವುದು. ಇಲ್ಲಿ ಕೇವಲ ನಾನಾತ್ವವಿರುವುದೆಂದು ಬಗೆಯುವವನು ಪುನಃ ಪುನಃ ಮರಣಕ್ಕೆ ಒಳಗಾಗುವನು. (೧೧) ಇದು ಮನಸಿನಿಂದಲೆ ಪ್ರಾಪ್ತವಾಗತಕ್ಕ ವಸ್ತುವು. ಇಲ್ಲಿ ಯಾವ ನಾನಾತ್ವವೂ ಇಲ್ಲ. ಇಲ್ಲಿ ಕೇವಲ ನಾನಾತ್ವವಿರುವುದೆಂದು ಬಗೆಯುವವನು ಪುನಃ ಪುನಃ ಮರಣಕ್ಕೆ ಒಳಗಾಗುವನು. (೧೨) ಮನುಷ್ಯನ ಅಂತಃಕರಣದಲ್ಲಿ ಅಂಗುಷ್ಠ ಪರಿಮಾಣವುಳ್ಳ ಮನುಷ್ಯನು ಸ್ಥಿತನಾಗಿರುವನು. ಅವನು ಭೂತಭವಿಷ್ಯತ್ ಕಾಲಗಳೊಡೆಯನು. (ಇದನ್ನು ತಿಳಿದವನು) ನಿರ್ಭಯನಾಗುವನು. ಇದೇ ಅದು. (೧೩) ಈ ಅಂಗುಷ್ಠಪರಿಮಿತಿಯುಳ್ಳ ಪುರುಷನು ಹೊಗೆಸೋಂಕದ ಜ್ಯೋತಿಯಂತಿರುವನು. ಭೂತಭವಿಷ್ಯಗಳ ಒಡೆಯನಿರುವನು. ಇವತ್ತಿರು-ವವನೂ ಅವನೇ, ನಾಳಿಗಿರುವವನೂ ಅವನೇ. ಇದೇ ಅದು. (೧೪) ಶಿಖರದ ಮೇಲೆ ಬಿದ್ದ ಮಳೆಯ ನೀರು ಸುತ್ತುಮುತ್ತಲಿನ ಗುಡ್ಡಗಳಲ್ಲಿ ಹರಿಯಲಾರಂಭಿಸುವಂತೆ ಇಲ್ಲಿ ನಾನಾ ಧರ್ಮಗಳು (ಭಿನ್ನತ್ವವು) ಇರುವುವೆಂದು ಬಗೆಯುವವನು ಧರ್ಮಗಳನ್ನು ಬೆನ್ನಟ್ಟುವನು. (೧೫) ಎಲೈ ಗೌತಮನೇ, ಶುದ್ಧೋದಕದಲ್ಲಿ ಶುದ್ಧೋದಕವನ್ನು ಕೂಡಿಸಿದರೆ ಅದು ತದ್ರೂಪವಾಗುವಂತೆ ಬ್ರಹ್ಮಜ್ಞಾನಿಯಾದ ಮುನಿಯ ಆತ್ಮವು ತದ್ರೂಪ ಅಂದರೆ ಬ್ರಹ್ಮರೂಪವಾಗುವುದು. ಇಲ್ಲಿಗೆ ದ್ವಿತೀಯ ಅಧ್ಯಾಯದ ಪ್ರಥಮ ವಲ್ಲಿಯು ಸಮಾಪ್ತವು.

ಪುರಮೇಕಾದಶದ್ವಾರಮಜಸ್ಯಾವಕ್ರಚೇತಸಃ ॥ ಅನುಷ್ಠಾಯ ನ ಶೋಚತಿ ವಿಮುಕ್ತಶ್ಚ ವಿಮುಚ್ಯತೇ ಏತದ್ವೈ ತತ್ ॥೧॥ ಹಂಸಃ ಶುಚಿಷದ್ವಸುರಂತರಿಕ್ಷಸ-ದ್ಧೋತಾ ವೇದಿಷದತಿಥಿರ್ದುರೋಣಸತ್ ॥ ನೃಷದ್ವರ ಸದೃತಸದ್ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಂ ಬೃಹತ್ ॥೨॥ ಊರ್ಧ್ವಂ ಪ್ರಾಣಮುನ್ನಯತ್ಯ ಪಾನಂ ಪ್ರತ್ಯಗಸ್ಯತಿ ॥ ಮಧ್ಯೇ ವಾಮನಮಾಸೀನಂ ವಿಶ್ವೇದೇವಾ ಉಪಾಸತ ॥೩॥ ಅಸ್ಯ ವಿಸ್ರಂಸಮಾನಸ್ಯ ಶರೀರಸ್ಥಸ್ಯ ದೇಹಿನಃ ॥ ದೇಹಾದ್ವಿಮುಚ್ಯಮಾನಸ್ಯ ಕಿಮತ್ರ ಪರಿಶಿಷ್ಯತೇ ಏತದ್ವೈ ತತ್ ॥೪॥ ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ ॥ ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥೫॥ ಹಂತ ತ ಇದಂ ಪ್ರವಕ್ಷ್ಯಾಮಿ ಗುಹ್ಯಂ ಬ್ರಹ್ಮ ಸನಾತನಮ್ ॥ ಯಥಾ ಚ ಮರಣಂ ಪ್ರಾಪ್ಯ ಆತ್ಮಾ ಭವತಿ ಗೌತಮ ॥೬॥ ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ ॥

---

(೧) ಹನ್ನೊಂದು ದ್ವಾರಗಳುಳ್ಳ ಈ ಪಟ್ಟಣವು ಅಂದರೆ ಶರೀರವು ಅಜನಾದ ಶುದ್ಧ ಚೈತನ್ಯಾತ್ಮನದು. ಆತ್ಮನ ಧ್ಯಾನ ಮಾಡುವವನು ಶೋಕ ರಹಿತನಾಗುವನು. ಅವನು ಜೀವನ್ಮುಕ್ತನಾಗಿ ವಿದೇಹ ಮುಕ್ತಿಯನ್ನು ಹೊಂದುವನು. ಇದೇ ಅದು. (೨) ಅದು ಆಕಾಶದಲ್ಲಿ ಸೂರ್ಯರೂಪ ದಿಂದ, ಅಂತರಿಕ್ಷದಲ್ಲಿ ವಾಯುರೂಪದಿಂದ, ವೇದಿಕೆಯಲ್ಲಿ ಅಗ್ನಿರೂಪದಿಂದ ( ಯಾಜಕೋ ಅಗ್ನಿಃ ), ಮನೆಯಲ್ಲಿ ಅತಿಥಿರೂಪದಿಂದ ವಾಸಿಸುತ್ತಿರು ವದು. ಅದು ಮನುಷ್ಯರಲ್ಲಿ, ಶ್ರೇಷ್ಠರಲ್ಲಿ, ಸತ್ಯದಲ್ಲಿ, ಆಕಾಶದಲ್ಲಿ ವ್ಯಾಪಿಸಿ ರುವುದು. ನೀರಿನಲ್ಲಿ ಹುಟ್ಟುವ, ಭೂಮಿಯಲ್ಲಿ ಬೆಳೆಯುವ, ಯಜ್ಞ ಅಂದರೆ ಕರ್ಮದಿಂದುದ್ಭವಿಸುವ, ಪರ್ವತಗಳ ಮೇಲೆ ಬೆಳೆಯುವ, ಎಲ್ಲ ವಸ್ತುಗಳೂ ಅದೇ. ಅದು ಸತ್ಯವಿರುವದು. ಅತ್ಯಂತ ವಿಶಾಲವಿರುವದು. (೩) ಅದು ಪ್ರಾಣವಾಯುವನ್ನು ಮೇಲಕ್ಕೆತ್ತುವದು, ಅಪಾನವಾಯುವನ್ನು ಕೆಳಗೆ ಒತ್ತುವದು. ಈ ಶರೀರಮಧ್ಯದಲ್ಲಿ ಕುಳಿತಿರುವ ಆತ್ಮನನ್ನು ಪೂಜ್ಯನೆಂದು ಎಲ್ಲ ದೇವತೆಗಳು ಉಪಾಸಿಸುವರು. (೪) (ಒಮ್ಮಿಲ್ಲೊಮ್ಮೆ) ದೇಹವನ್ನು ಬಿಟ್ಟು ಹೊರಟುಹೋಗುವ ದೇಹಿಯು ಇದನ್ನು ಬಿಟ್ಟು ಹೊರಬಿದ್ದನೆಂದರೆ ಇಲ್ಲಿ ಏನು ಉಳಿಯುವದು ? (ಏನೂ ಇಲ್ಲ). ಇದೇ ಅದು. (೫) ಮನು ಷ್ಯನು ಜೀವಿಸುತ್ತಿರುವುದು ಪ್ರಾಣವಾಯುವಿನ ಬಲದಿಂದಲೂ ಅಲ್ಲ, ಅಪಾನ ವಾಯುವಿನ ಬಲದಿಂದಲೂ ಅಲ್ಲ. ಇವೆರಡೂ ಯಾವನ ಆಶ್ರಯದಿಂದಿರು ವವೊ ಅವನ (ಆ ಆತ್ಮನ) ಬಲದಿಂದಲೆ ಜನರು ಬದುಕಿರುವರು. (೬) ಎಲೈ

ಸ್ಥಾಣುಮನ್ಯೇಽನುಸಂಯಂತಿ ಯಥಾಕರ್ಮ ಯಥಾಶ್ರುತಮ್ ॥೭॥ ಯ ಏಷ ಸುಪ್ತೇಷು ಜಾಗರ್ತಿ ಕಾಮಂ ಕಾಮಂ ಪುರುಷೋ ನಿರ್ಮಿಮಾಣಃ ॥ ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ॥ ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ ಏತದ್ವೈ ತತ್ ॥೮॥ ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ ॥ ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೯॥ ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ ॥ ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥೧೦॥ ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ॥ ಏಕಸ್ತಥಾ ಸರ್ವಭೂತಾಂತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥೧೧॥ ಏಕೋ ವಶೀ

---

ಗೌತಮನೇ, ಇಕೋ ನಿನಗೆ ಈ ಸನಾತನ ಬ್ರಹ್ಮನ ರಹಸ್ಯವನ್ನು ಹೇಳುವೆನು ಕೇಳು. ಮರಣಪಶ್ಚಾತ್ ಆತ್ಮನು ಯಾವ ಸ್ಥಿತಿಯಲ್ಲಿರುವನೆಂಬದನ್ನು ಕೇಳು. (೭) ತಮ್ಮ ತಮ್ಮ ಕರ್ಮಜ್ಞಾನಗಳಿಗನುಸರಿಸಿ ಕೆಲವು ದೇಹಿಗಳು ಶರೀರಧಾರಣಕ್ಕಾಗಿ ಬೇರೆ ಬೇರೆ ಯೋನಿಗಳನ್ನು ಪ್ರವೇಶಿಸುವವು. ಕೆಲವು ಜಡರೂಪವನ್ನು ಹೊಂದುವುವು. (೮) ನಿದ್ರಿತರಾದವರಲ್ಲಿ ಎಚ್ಚರಿದ್ದು ನಾನಾ ಕಾಮನೆಗಳಿಗನುರೂಪವಾಗಿ ( ರೂಪಗಳನ್ನು ) ನಿರ್ಮಿಸುತ್ತಿರುವ ಪುರುಷನೆ ಆ ಪವಿತ್ರವಾದ ಬ್ರಹ್ಮನು. ಅದೇ ಅಮೃತವು. ಸರ್ವಲೋಕಗಳು ಅದರ ಆಶ್ರಯದಿಂದಲೆ ಇರುವುವು. ಯಾರೂ ಅದರಾಚೆಗೆ ಹೋಗಲಾರರು. ಇದೇ ಅದು. (೯) ಒಂದು ಭವನವನ್ನು ಪ್ರವೇಶಿಸಿದ ಒಂದೇ ಅಗ್ನಿಯು ಆಯಾ ವಸ್ತುಗಳಿಗನುರೂಪವಾದ (ಅಗ್ನಿಯು ಹೊತ್ತಿದಾಗ) ರೂಪಗಳನ್ನು ಧರಿಸುವಂತೆ ಸರ್ವಭೂತಗಳ ಅಂತರದಲ್ಲಿರುವ ಒಬ್ಬನೆ ಆತ್ಮನು ನಾನಾ ರೂಪಗಳನ್ನು ಧರಿಸಿ ವಸ್ತುಗಳ ಹೊರಗೂ ವ್ಯಾಪಿಸಿರುವನು. (೧೦) ಒಂದು ಭುವನವನ್ನು ಪ್ರವೇಶಿಸಿದ ಒಂದೇ ವಾಯುವು(ಅವುಗಳನ್ನು ಸಂಬಂಧಿಸಿದಾಗ) ಆಯಾ ವಸ್ತುಗಳಿಗನುರೂಪವಾದ ರೂಪಗಳನ್ನು ಧರಿಸುವಂತೆ ಸರ್ವ ಭೂತಾಂತರಾತ್ಮನಾದ ಒಬ್ಬನೆ ಆತ್ಮನು ನಾನಾ ರೂಪಗಳನ್ನು ಧರಿಸಿ ಎಲ್ಲ ವಸ್ತುಗಳ ಹೊರಗೆ ವ್ಯಾಪಿಸಿರುವನು. (೧೧) ಸರ್ವಲೋಕದ ಕಣ್ಣಿನಂತಿರುವ ಸೂರ್ಯನು ಕಣ್ಣಿಗೆ ಕಾಣುವ ಬಾಹ್ಯದೋಷಗಳಿಂದ ನಿರ್ಲಿಪ್ತನಿರುವಂತೆ ಸರ್ವಭೂತಾಂತರಾತ್ಮನಾದ ಒಬ್ಬನೆ ಆತ್ಮನು ಲೋಕದ ದುಃಖಗಳಿಂದ

ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ ॥ ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥೧೨॥ ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್॥ ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್ ॥೧೩॥ ತದೇತದಿತಿ ಮನ್ಯಂತೇಽನಿರ್ದೇಶ್ಯಂ ಪರಮಂ ಸುಖಮ್ ॥ ಕಥಂ ನು ತದ್ವಿಜಾನೀಯಾಂ ಕಿಮು ಭಾತಿ ವಿಭಾತಿ ವಾ ॥೧೪॥ ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ॥ ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ ॥೧೫॥ ಇತಿ ದ್ವಿತೀಯೇಽಧ್ಯಾಯೇ ದ್ವಿತೀಯಾ ವಲ್ಲೀ ॥

ಊರ್ಧ್ವಮೂಲೋಽವಾಕ್‌ಶಾಖ ಏಷೋಽಶ್ವತ್ಥಃ ಸನಾತನಃ ॥ ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತಮುಚ್ಯತೇ ॥ ತಸ್ಮಿಂಲ್ಲೋಕಾಃ ಶ್ರಿತಾಃ ಸರ್ವೇ

---

ನಿರ್ಲಿಪ್ತನಿರುವನು. ಅವನು ಲೋಕಬಾಹ್ಯನಿರುವನು. (೧೨) ಒಂದೇ ರೂಪವನ್ನು ನಾನಾರೂಪವಾಗಿ ಪ್ರಕಟಮಾಡುವ ಸರ್ವಭೂತಾಂತರಾತ್ಮನಾದ ಸರ್ವಸ್ವಾಮಿಯನ್ನು ಯಾವ ಬುದ್ಧಿವಂತರು ತಮ್ಮ ಆತ್ಮನಲ್ಲಿ ನೋಡುವರೊ ಅವರಿಗೆ ಅಕ್ಷಯ ಸುಖವು ದೊರಕೊಳ್ಳುವುದು. ಇತರರಿಗೆ ಈ ಸುಖವು ದೊರೆಯಲಾರದು. (೧೩) ಅನಿತ್ಯ ವಸ್ತುಗಳಲ್ಲಿ ನಿತ್ಯನೂ ಸರ್ವಚೇತನಗಳಲ್ಲಿ ಒಬ್ಬನೆ ಚೈತನ್ಯನೂ ಬಹು ಜನರ ಕಾಮನೆಗಳನ್ನು ಪೂರೈಸುವವನೂ ತಮ್ಮ ಆತ್ಮನಲ್ಲಿರುವನೆಂದು ಯಾವ ಬುದ್ಧಿವಂತರು ಅರಿಯುವರೊ ಅವರ ಸುಖವು ಅಕ್ಷಯವಾಗುವುದು. ಇತರರ ಸುಖವು ಅಕ್ಷಯವಾಗಲಾರದು. (೧೪) ಅನಿರ್ದೇಶ್ಯವಾದ ಪರಮಸುಖವು ಇದೇ ಎಂದು ಜನರು ಎಣಿಸುವರು. ಅದನ್ನು ನಾನು ಹೇಗೆ ಅರಿತುಕೊಳ್ಳಬೇಕು? ಅದು ಅನುಭವಕ್ಕೆ ಬರುವದೊ ಇಲ್ಲವೊ ಯಾರು ಬಲ್ಲರು? (೧೫) ಅಲ್ಲಿ (ಆ ಪರಮಾನಂದ ಸ್ಥಾನದಲ್ಲಿ) ಸೂರ್ಯನು ಪ್ರಕಾಶಿಸುವುದಿಲ್ಲ. ಚಂದ್ರ-ತಾರಕೆಗಳ ಪ್ರಕಾಶವೂ ಅಲ್ಲಿ ಇಲ್ಲ. ಈ ವಿದ್ಯುತ್ತೂ ಅಲ್ಲಿ ಮಿಂಚುವುದಿಲ್ಲ. ಅಂದಮೇಲೆ ಅಗ್ನಿಯ ಪಾಡೇನು? ಅದು ಪ್ರಕಾಶಿಸಿದ ಮೇಲೆ ಅದರ ಪ್ರಕಾಶದಿಂದ ಎಲ್ಲವೂ ಪ್ರಕಾಶಿಸುವುದು. ಅದರ ಬೆಳಕಿನಿಂದ ಇದೆಲ್ಲವೂ ಬೆಳಗುವುದು. ಇಲ್ಲಿಗೆ ದ್ವಿತೀಯಾಧ್ಯಾಯದ ದ್ವಿತೀಯ ವಲ್ಲಿಯು ಸಮಾಪ್ತವು.

ತದು ನಾತ್ಯೇತಿ ಕಶ್ಚನ ಏತದ್ವೈ ತತ್ ॥೧॥ ಯದಿದಂ ಕಿಂಚ ಜಗತ್ಸರ್ವಂ ಪ್ರಾಣ ಏಜತಿ ನಿಃಸೃತಮ್ ॥ ಮಹದ್ಭಯಂ ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವಂತಿ ॥೨॥ ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ ॥ ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥೩॥ ಇಹ ಚೇದಶಕದ್ಬೋದ್ಧುಂ ಪ್ರಾಕ್ ಶರೀರಸ್ಯ ವಿಸ್ರಸಃ ॥ ತತಃ ಸರ್ಗೇಷು ಲೋಕೇಷು ಶರೀರತ್ವಾಯ ಕಲ್ಪತೇ ॥೪॥ ಯಥಾದರ್ಶೇ ತಥಾತ್ಮನಿ ಯಥಾ ಸ್ವಪ್ನೇ ತಥಾ ಪಿತೃಲೋಕೇ ॥ ಯಥಾಪ್ಸು ಪರೀವ ದದೃಶೇ ತಥಾ ಗಂಧರ್ವಲೋಕೇ ಛಾಯಾತಪಯೋರಿವ ಬ್ರಹ್ಮಲೋಕೇ ॥೫॥ ಇಂದ್ರಿಯಾಣಾಂ ಪೃಥಗ್ಭಾವಮುದಯಾಸ್ತಮಯೌ ಚ ಯತ್ ॥ ಪೃಥಗುತ್ಪದ್ಯಮಾನಾನಾಂ ಮತ್ವಾ ಧೀರೋ ನ ಶೋಚತಿ ॥೬॥ ಇಂದ್ರಿಯೇಭ್ಯಃ ಪರಂ ಮನೋ

---

(೧) ಇದು (ಸಂಸಾರವು) ಸನಾತನವಾದ ಅಶ್ವತ್ಥವೃಕ್ಷವು. ಇದರ ಬೇರುಗಳು ಮೇಲೆ ಇರುವವು, ಟೊಂಗೆಗಳು ಕೆಳಗೆ ಬೆಳೆದಿರುವವು. ಅದೇ (ಆ ವೃಕ್ಷದ ಮೂಲವು) ಶುದ್ಧವಸ್ತುವು, ಬ್ರಹ್ಮವು. ಅದಕ್ಕೆಯೆ ಅಮೃತವೆನ್ನುವರು. ಸರ್ವ ಲೋಕಗಳು ಅದರ ಆಶ್ರಯದಿಂದಲೆ ಇರುವವು. ಅದರಾಚೆಗೆ ಯಾರೂ ಹೋಗಲಾರರು. ಇದೇ ಅದು. (೨) ಸ್ಪಷ್ಟವಾದ ಈ ಸಕಲ ವಿಶ್ವವು ಪ್ರಾಣದಲ್ಲಿಯೆ (ಪ್ರಾಣವು ಸರ್ವವ್ಯಾಪಕವಿರುವುದರಿಂದ) ಚಲಿಸುವದು. ಅದು (ವಿಶ್ವದ ಕಾರಣವು) ದೊಡ್ಡದಿರುವದು. ಅದು ಮೇಲಕ್ಕೆತ್ತಿದ ವಜ್ರಾಯುಧದಂತೆ ಭಯವನ್ನುಂಟುಮಾಡುವಂತಹದಿರುವದು. ಇದನ್ನು ತಿಳಿದವರು ಅಮೃತರಾಗುವರು. (೩) ಅವನ (ವಿಶ್ವದಕಾರಣನ) ಭಯದಿಂದಲೆ ಬೆಂಕಿಯು ಸುಡುವದು. ಸೂರ್ಯನು ಬೆಳಗುವನು. ಇಂದ್ರನೂ ವಾಯುವೂ ಐದನೆಯವನಾದ ಯಮನೂ ಅವನ ಭಯದ ಮೂಲಕವೇ ಕರ್ಮಮಾಡುವರು. (೪) ಈ ಶರೀರವು ಪತನವಾಗುವದಕ್ಕೂ ಮೊದಲು ಆತ್ಮಜ್ಞಾನವಾದರೆ ಒಳಿತು. ಇಲ್ಲದಿದ್ದರೆ ಸೃಷ್ಟಿಯಲ್ಲಿ ಬೇರೆಬೇರೆ ಲೋಕಗಳಲ್ಲಿ ಜೀವನು ಜನ್ಮವೆತ್ತಬೇಕಾಗುವದು. (೫) ಕನ್ನಡಿಯಲ್ಲಿ ಸ್ಪಷ್ಟವಾಗಿ ಕಾಣುವಂತೆ ತನ್ನ ಆತ್ಮನಲ್ಲಿ (ಬ್ರಹ್ಮದರ್ಶನವಾಗುವದು). ಸ್ವಪ್ನ ಸೃಷ್ಟಿಯಲ್ಲಿ (ಅಸ್ಪಷ್ಟವಾಗಿ) ಕಾಣುವಂತೆ ಪಿತೃಲೋಕದಲ್ಲಿ, ನೀರಿನಲ್ಲಿ (ಅಸ್ಪಷ್ಟವಾಗಿ) ಕಾಣುವಂತೆ ಗಂಧರ್ವಲೋಕದಲ್ಲಿ ಬೆಳಕು ನೆಳಲುಗಳು (ಸ್ಪಷ್ಟವಾಗಿ) ಕಾಣುವಂತೆ ಬ್ರಹ್ಮಲೋಕದಲ್ಲಿ ಬ್ರಹ್ಮದರ್ಶನವಾಗುವದು. (೬) ಪೃಥಕ್ಕಾಗಿ ಅಂದರೆ ಬೇರೆಬೇರೆ ತನ್ಮಾತ್ರೆಗಳಿಂದ ಹುಟ್ಟುವ ಇಂದ್ರಿಯಗಳ ಭಿನ್ನ ಭಾವ

ಮನಸಃ ಸತ್ತ್ವಮುತ್ತಮಮ್ ॥ ಸತ್ತ್ವಾದಧಿ ಮಹಾನಾತ್ಮಾ ಮಹತೋಽವ್ಯಕ್ತಮುತ್ತಮಮ್ ॥೭॥ ಅವ್ಯಕ್ತಾತ್ತು ಪರಃ ಪುರುಷೋ ವ್ಯಾಪಕೋಽಲಿಂಗ ಏವ ಚ ॥ ಯಜ್ಜ್ಞಾತ್ವಾ ಮುಚ್ಯತೇ ಜಂತುರಮೃತತ್ವಂ ಚ ಗಚ್ಛತಿ ॥೮॥ ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚ ನೈನಮ್ ॥ ಹೃದಾ ಮನೀಷಿ ಮನಸಾಭಿಕ್ಲೃಪ್ತೋ ಯ ಏತದ್ವಿದುರಮೃತಾಸ್ತೇ ಭವಂತಿ ॥೯॥ ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ॥ ಬುದ್ಧಿಶ್ಚ ನ ವಿಚೇಷ್ಟತಿ ತಾಮಾಹುಃ ಪರಮಾಂ ಗತಿಮ್ ॥೧೦॥ ತಾಂ ಯೋಗಮಿತಿ ಮನ್ಯಂತೇ ಸ್ಥಿರಾಮಿಂದ್ರಿಯಧಾರಣಾಮ್ ॥ ಅಪ್ರಮತ್ತಸ್ತದಾ ಭವತಿ ಯೋಗೋ ಹಿ ಪ್ರಭವಾಪ್ಯಯೌ ॥೧೧॥ ನೈವ ವಾಚಾ ನ ಮನಸಾ ಪ್ರಾಪ್ತುಂ ಶಕ್ಯೋ ನ ಚಕ್ಷುಷಾ ॥ ಅಸ್ತೀತಿ ಬ್ರುವತೋಽನ್ಯತ್ರ ಕಥಂ ತದುಪಲಭ್ಯತೇ ॥೧೨॥ ಅಸ್ತೀತ್ಯೇವೋಪಲಬ್ಧವ್ಯಸ್ತತ್ತ್ವಭಾವೇನ ಚೋಭಯೋಃ ॥

---

ಗಳನ್ನೂ ಅವುಗಳ ಹುಟ್ಟುಸಾವುಗಳನ್ನೂ ಅರಿತು ಬುದ್ಧಿವಂತನು ಶೋಕರಹಿತನಾಗುವನು. (೭) ಇಂದ್ರಿಯಗಳಿಗಿಂತಲೂ ಮನಸು ಶ್ರೇಷ್ಠವಾದುದು, ಮನಸಿನಕಿಂತಲೂ ಶುದ್ಧ ಬುದ್ಧಿಯು ಹೆಚ್ಚಿನದು. ಬುದ್ಧಿಯಾಚೆಗೆ ಮಹದಾತ್ಮವಿರುವದು. ಅದನ್ನು ದಾಟಿ ಉತ್ತಮವಾದ ಅವ್ಯಕ್ತವಿರುವದು. (೮) ಅವ್ಯಕ್ತಕ್ಕಿಂತಲೂ ಪುರುಷನು ಶ್ರೇಷ್ಠನು. ಅವನು ಸರ್ವವ್ಯಾಪಕನಿರುವನು, ಸರ್ವಲಕ್ಷಣರಹಿತನಿರುವನು. ಅವನನ್ನರಿತು ಪ್ರಾಣಿಯು ಮುಕ್ತನಾಗುವನು, ಅಮೃತತ್ವವನ್ನು ಪಡೆಯುವನು. (೯) ಅವನ ಸ್ವರೂಪವು ದೃಷ್ಟಿಗೋಚರವಾಗಲಾರದು. ಕಣ್ಣಿನಿಂದ ಅವನನ್ನು ಯಾರೂ ಕಾಣರು. ಮನದಿಂದ (ಧ್ಯಾನದಿಂದ) ಮನಃಸಂಯಮಿಯ ಅಂತಃಕರಣದಲ್ಲಿ ಅವನು ಗೋಚರನಾಗುವನು. ಇದನ್ನರಿತವರು ಅಮೃತರಾಗುವರು. (೧೦) ಯಾವನ ಪಂಚಜ್ಞಾನೇಂದ್ರಿಯಗಳೂ ಮನಸೂ ಸ್ಥಿರವಾಗಿ ಬುದ್ಧಿಯು ನಿಶ್ಚಲವಾಗಿರುವುದೊ ಅವನಿಗೆ ಪರಮಸ್ಥಿತಿಯು ಪ್ರಾಪ್ತವಾಯಿತೆಂದು ಅನ್ನುವರು. (೧೧) ಈ ಸ್ಥಿರವಾದ ಇಂದ್ರಿಯಧಾರಣೆಯೆ ಯೋಗವೆಂದು ತಿಳಿದವರೆಣಿಸುವರು. ಆದರೆ ಅವನು (ಯೋಗಿಯು) ಇಂತಹ ಸಮಯದಲ್ಲಿ ಒಳ್ಳೆ ಎಚ್ಚರದಿಂದಿರುವನು. ಯಾಕಂದರೆ, ಯೋಗಸ್ಥಿತಿಗೆ ಅಳಿವು ಉಳಿವುಗಳಿರುವವು. (೧೨) ಅದು ವಾಕ್ಶಕ್ತಿಯಿಂದಾಗಲಿ ಮನಸಿನಿಂದಾಗಲಿ ಚಕ್ಷುಗಳಿಂದಾಗಲಿ ಪ್ರಾಪ್ತವಾಗುವಂತಹದಲ್ಲ. ಅದು (ಆತ್ಮವು) ಇರುವದೆನ್ನುವವರನ್ನುಳಿದು (ಆಸ್ತಿಕ್ಯಬುದ್ಧಿ ಅಥವಾ ಶ್ರದ್ಧೆಯುಳ್ಳವರನ್ನುಳಿದು) ಬೇರೆಯವರಿಗೆ ಹೇಗೆ ಲಭಿಸಬೇಕು?

ಅಸ್ತೀತ್ಯೇವೋಪಲಬ್ಧಸ್ಯ ತತ್ತ್ವಭಾವಃ ಪ್ರಸೀದತಿ ||೧೩|| ಯದಾ ಸರ್ವೇ ಪ್ರಮು-
ಚ್ಯಂತೇ ಕಾಮಾ ಯೇಽಸ್ಯ ಹೃದಿ ಸ್ಥಿತಾ || ಅಥ ಮರ್ತ್ಯೋಽಮೃತೋ ಭವತ್ಯತ್ರ
ಬ್ರಹ್ಮ ಸಮಶ್ನುತೇ ||೧೪|| ಯದಾ ಸರ್ವೇ ಪ್ರಭಿದ್ಯಂತೇ ಹೃದಯಸ್ಯೇಹ
ಗ್ರಂಥಯಃ || ಅಥ ಮರ್ತ್ಯೋಽಮೃತೋ ಭವತ್ಯೇತಾವದನುಶಾಸನಮ್ ||೧೫||
ಶತಂ ಚೈಕಾಚ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿನಿಃಸೃತೈಕಾ ||
ತಯೋರ್ಧ್ವಮಾಯನ್ನಮೃತತ್ವಮೇತಿ ವಿಷ್ವಙ್ಙನ್ಯಾ ಉತ್ಕ್ರಮಣೇ ಭವಂತಿ ||೧೬||
ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ||
ತಂ ಸ್ವಾಚ್ಛರೀರಾತ್ಪ್ರವೃಹೇನ್ಮುಂಜಾದಿವೇಷೀಕಾಂ ಧೈರ್ಯೇಣ || ತಂ ವಿದ್ಯಾಚ್ಛುಕ್ರ-
ಮಮೃತಂ ತಂ ವಿದ್ಯಾಚ್ಛುಕ್ರಮಮೃತಮಿತಿ ||೧೭|| ಮೃತ್ಯುಪ್ರೋಕ್ತಾಂ ನಚಿಕೇ-
ತೋಽಥ ಲಬ್ಧ್ವಾ ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಮ್ || ಬ್ರಹ್ಮಪ್ರಾಪ್ತೋ
ವಿರಜೋಽಭೂದ್ವಿಮೃತ್ಯುರನ್ಯೋಽಪ್ಯೇವಂ ಯೋ ವಿದಧ್ಯಾತ್ಮಮೇವ ||೧೮|| ಇತಿ

---

(೧೩) ಅದು ಇರುವುದೆಂಬ ಶ್ರದ್ಧೆಯಿಂದಲೆ ಅದನ್ನು ದೊರಕಿಸತಕ್ಕದ್ದು. ಎರಡರ (ಕಾರ್ಯಕಾರಣಗಳ) ಸತ್ಯಜ್ಞಾನದಿಂದ ಅದನ್ನು ದೊರಕಿಸತಕ್ಕದ್ದು. ಅದು ಇರುವದೆಂಬ ಭಾವನೆಯು ಹುಟ್ಟಿತೆಂದರೆ ಸತ್ಯಜ್ಞಾನವು ಪ್ರಕಟವಾಗುವದು. (೧೪) ಮನುಷ್ಯನ ಅಂತಃಕರಣದಲ್ಲಿರುವ ಎಲ್ಲ ಕಾಮನೆಗಳು ಅಳಿದು ಹೋದವೆಂದರೆ ಅವನು ಅಮೃತನಾಗುವನು, ಇಲ್ಲಿಯೆ ಬ್ರಹ್ಮಪದವನ್ನು ಪಡೆಯುವನು (೧೫) ಅಂತಃಕರಣದಲ್ಲಿ ಮನೆಮಾಡಿರುವ ಎಲ್ಲ ಮಿಥ್ಯಾ ಬಂಧನಗಳು ನಷ್ಟವಾದವೆಂದರೆ ಮರ್ತ್ಯನಿರುವ ಮನುಷ್ಯನು ಅಮೃತನಾಗುವನು. ಈ ವಿದ್ಯೆಯು ಇಲ್ಲಿಯ ವರೆಗೆ ಹೇಳಲ್ಪಟ್ಟಿರುವದು. (೧೬) ಹೃದಯದ ನಾಡಿಗಳು ನೂರಾಒಂದು. ಅವುಗಳಲ್ಲಿ ಒಂದು (ಸುಷುಮ್ನಾನಾಡಿ ಎಂಬುವದು) ತಲೆಯ ಕಡೆಗೆ ಹೋಗಿರುವದು. ಅದರಗುಂಟ (ಪ್ರಾಣವು) ಮೇಲಕ್ಕೇರಿದರೆ ಮನುಷ್ಯನು ಅಮೃತತ್ವವನ್ನು ಪಡೆಯುವನು. ಮಿಕ್ಕ ನಾಡಿಗಳಗುಂಟ (ಪ್ರಾಣವು) ಹೋದರೆ ವಿವಿಧ ಜನ್ಮಗಳು ಪ್ರಾಪ್ತವಾಗುವವು. (೧೭) ಅಂಗುಷ್ಠಪರಿಮಾಣವುಳ್ಳ ಪುರುಷನು, ಅಂತರಾತ್ಮನು ಯಾವಾಗಲೂ ಜನರ ಅಂತಃಕರಣಗಳಲ್ಲಿ ವಾಸಿಸುತ್ತಿರುವನು. ಆ ಅಂತರಾತ್ಮನನ್ನು ಒಳ್ಳೇ ಧೈರ್ಯದಿಂದ, ಮುಂಜಾತೃಣದ ಸೊಪ್ಪೆಯನ್ನು ಸುಲಿದು ಗಣೆಯನ್ನು ಬೇರೆ ತೆಗೆಯುವಂತೆ, ಬೇರ್ಪಡಿಸಬೇಕು ಅಥವಾ ಪೃಥಕ್ ಮಾಡಬೇಕು. ಅದೇ ತೇಜಸ್ಸುಳ್ಳ ಅಮೃತವಸ್ತುವು. ಅದೇ ತೇಜಸ್ಸುಳ್ಳ ಅಮೃತವಸ್ತುವು. (೧೮)

**ದ್ವಿತೀಯೋಽಧ್ಯಾಯೇ ತೃತೀಯಾ ವಲ್ಲೀ ಸಮಾಪ್ತಾ ॥೩॥ ಇತಿ ದ್ವಿತೀಯೋಽಧ್ಯಾಯಃ ॥೨॥**

**ಓಂ ಸಹ ನಾವವತು॥ ಸಹ ನೌ ಭುನಕ್ತು ॥ ಸಹ ವೀರ್ಯಂ ಕರವಾವಹೈ ॥ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥ಓಂ॥ ಇತಿ ಯಜುರ್ವೇದೀಯ ಕಠೋಪನಿಷತ್ಸಮಾಪ್ತಾ ॥**

---

ಯಮನು ಉಪದೇಶಿಸಿದ ಈ ವಿದ್ಯೆಯನ್ನರಿತುಕೊಂಡು ಅವನು ಕಲಿಸಿದ ಸಂಪೂರ್ಣ ಯೋಗವಿಧಿಯನ್ನು ಕಲಿತು ನಚಿಕೇತನು ಬ್ರಹ್ಮಪದವನ್ನು ಪಡೆದನು. ಅವನು ಪಾಪರಹಿತನೂ ಅಮೃತನೂ ಆದನು. ಈ ಅಧ್ಯಾತ್ಮಜ್ಞಾನವನ್ನರಿತುಕೊಳ್ಳುವ ಅನ್ಯಜನರಾದರೂ ಹೀಗೆಯೆ ಮುಕ್ತರಾಗುವರು.

ಇಲ್ಲಿಗೆ ದ್ವಿತೀಯಾಧ್ಯಾಯದ ತೃತೀಯ ವಲ್ಲಿಯು ಸಮಾಪ್ತವು.

## ಕಠೋಪನಿಷತ್ತಿನ ಕನ್ನಡ ಅನುವಾದವು ಸಮಾಪ್ತವು

## ಹಲವು ಶಬ್ದಗಳ ಅರ್ಥಗಳು

**ಉಶನ್—** ಇಚ್ಛಿಸುವ.

**ವಿಶ್ವಜಿತ್—** ಒಂದು ಯಜ್ಞವಿಶೇಷವು. ಎಲ್ಲ ಸಂಪತ್ತಿಯನ್ನು ದಾನಮಾಡಿ ಬಿಡುವುದೆ ಈ ಯಜ್ಞದ ಮುಖ್ಯವಿಧಿಯು.

**ಪ್ರಥಮ—** (ಪ್ರಥಮ ಶಿಷ್ಯ)- ಗುರುಗಳಿಗೆ ಇಷ್ಟವಾದ ಕಾರ್ಯವನ್ನು ಅವರು ಹೇಳುವದಕ್ಕೂ ಪೂರ್ವದಲ್ಲಿಯೆ ಮಾಡಿಬಿಡುವವನು.

**ಮಧ್ಯಮ—** (ಮಧ್ಯಮ ಶಿಷ್ಯ)— ಗುರುಗಳು ಹೇಳಿದಾಕ್ಷಣವೆ ಆ ಕಾರ್ಯವನ್ನು ಮಾಡಿಬಿಡುವವನು.

**ಆಶಾ—** ಎಲ್ಲ ಇಷ್ಟ ವಸ್ತುಗಳ ಬಗ್ಗೆ ಇದ್ದ ಇಚ್ಛೆ.

**ವೈವಸ್ವತ—** ವಿವಸ್ವಾನನ ಪುತ್ರ.

**ಪ್ರತೀಕ್ಷಾ—** ವಿಶಿಷ್ಟ ಅಪ್ರಾಪ್ತ ವಸ್ತುಗಳ ಇಚ್ಛೆ.

**ಸೂನೃತ—** ಮಧುರ ಭಾಷಣ, ಸತ್ಯಭಾಷಣ.

**ಇಷ್ಟಾಪೂರ್ತ—** ಯಜ್ಞಯಾಗ ಹಾಗೂ ಪರೋಪಕಾರ.

**ವಲ್ಲಿ—** ಬಳ್ಳಿ, ಇಲ್ಲಿ ಗ್ರಂಥಪರಿಚ್ಛೇದ ಅಥವಾ ಭಾಗ.

**ಶ್ರೇಯಸ್—** ಆತ್ಯಂತಿಕ ಕಲ್ಯಾಣ, ಆತ್ಮಸುಖ.

**ಪ್ರೇಯಸ್—** ವಿಷಯಸುಖ, ಇಂದ್ರಿಯಸುಖ.

**ಯೋಗಕ್ಷೇಮ—** ಲೌಕಿಕ ಸುಸ್ಥಿತಿ; ಸಿಕ್ಕದೇ ಇದ್ದುದನ್ನು ದೊರಕಿಸುವುದು ಯೋಗವು, ಇದ್ದುದನ್ನು ರಕ್ಷಿಸುವುದು ಕ್ಷೇಮವು.

**ಮೇಧಾ—** ಬುದ್ಧಿ. **ಪ್ರವಚನ—** ಎರಡನೆಯವರಿಗೆ ಕಲಿಸುವುದು.

**ಪಂಚಾಗ್ನಯಃ—** ಅಗ್ನಿಹೋತ್ರಗಳು— ದಕ್ಷಿಣ, ಗಾರ್ಹಪತ್ಯ, ಆಹವನೀಯ, ಸಭ್ಯ, ಆವಸಥ್ಯ, ಇವೇ ಆ ಪಂಚಾಗ್ನಿಗಳ ಹೆಸರುಗಳು.

**ತಪಸ್—** ಚೈತನ್ಯಶಕ್ತಿಯ ಏಕೀಕರಣ-ಏಕಾಗ್ರಕರಣ.

**ಅದಿತಿ—** ಪ್ರಾಣದೇವತೆ.

**ಅರಣಿ—** ತಿಕ್ಕಿ ಅಗ್ನಿಯನ್ನು ಹುಟ್ಟಿಸುವಾಗ ಉಪಯೋಗಿಸಲ್ಪಟ್ಟ ಕಟಿಗಿಯ ತುಂಡು.

**ನಿರ್ಧೂಮ—** ಹೊಗೆಯಿಲ್ಲದ. **ವೇದಿ—** ಅಗ್ನಿಯ ಗದ್ದುಗೆ.

**ತನ್ಮಾತ್ರಾ—** ಸೂಕ್ಷ್ಮಸ್ಥಿತಿಯಲ್ಲಿರುವ ಪಂಚಭೂತಗಳು.

**ಮಹತ್—** ಹಿರಣ್ಯಗರ್ಭ ಅಥವಾ ವಿರಾಟ್.

**ಮಹದಾತ್ಮಾ—** ಹಿರಣ್ಯಗರ್ಭದಲ್ಲಿ ಅಂತರ್ಭೂತವಾದ ಚೈತನ್ಯ.

**ನಾಡಿ—** ಜ್ಞಾನತಂತು.

**ಲಯಚಿಂತನ—** 'ಅಪರ' ಅಂದರೆ ಕೆಳಗಿನ ತತ್ತ್ವವನ್ನು 'ಪರ' ಅಂದರೆ ಮೇಲಿನ ತತ್ತ್ವದಲ್ಲಿ ಲಯಮಾಡುತ್ತ ಧ್ಯಾನಮಾಡುವುದು. ಹೇಗಂದರೆ, ಇಂದ್ರಿಯಗಳನ್ನು ಮನಸಿನಲ್ಲಿ, ಮನಸನ್ನು ಬುದ್ಧಿಯಲ್ಲಿ, ಬುದ್ಧಿಯನ್ನು ಆತ್ಮನಲ್ಲಿ, ಆತ್ಮನನ್ನು ಪರಮಾತ್ಮನಲ್ಲಿ, ಹೀಗೆ ಕೊನೆಗೆ ಒಂದೇ ವಸ್ತುವು ಉಳಿದು ಅದರ ಧ್ಯಾನದಲ್ಲಿಯೆ ರತವಾಗುವುದು ಲಯಚಿಂತನ ವೆನಿಸುವುದು. **ಮುಂಜಾ—** ಒಂದು ಬಗೆಯ ಹುಲ್ಲು.

## ಕಠೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ಪ್ರಾಚೀನವೆಂದೆಣಿಸಲ್ಪಟ್ಟ ಎಲ್ಲ ಉಪನಿಷತ್ತುಗಳಲ್ಲಿಯೂ ಬ್ರಹ್ಮ-ಜ್ಞಾನವೆ ಹೇಳಲ್ಪಟ್ಟಿದ್ದರೂ ಪ್ರತಿಯೊಂದು ಉಪನಿಷತ್ತಿನಲ್ಲಿ ಒಂದು ಮಾದರಿಯ ನವೀನತೆಯೂ ಸೌಂದರ್ಯವೂ ಕಂಗೊಳಿಸುವುದು. ಬ್ರಹ್ಮಾನಂದ ವೆಂಬ ಮಧುಸೇವನದಿಂದ ಉನ್ಮತ್ತರಾದ ಉಪನಿಷತ್ಕಾರರು ಭಿನ್ನ ಭಿನ್ನ

ಉಪನಿಷತ್ತುಗಳಲ್ಲಿ ಭಿನ್ನ ಭಿನ್ನ ರೀತಿಯಿಂದ, ವಿಧವಿಧದ ಶೈಲಿಯಿಂದ ಬ್ರಹ್ಮಜ್ಞಾನವನ್ನು ನಿರೂಪಿಸಿರುವರು. ಕೇವಲ ಪರಮಾತ್ಮಪ್ರೇರಣೆಯಿಂದ ಸ್ಫೂರ್ತಿಗೊಂಡ ಈ ಶ್ರುತಿಕಾರರು ತಮ್ಮ ಕಾವ್ಯಪ್ರತಿಭೆಯನ್ನು ಬಹುರೂಪ ದಿಂದ ಈ ಗ್ರಂಥಗಳಲ್ಲಿ ವಿಸ್ತರಿಸಿ, ಅವುಗಳನ್ನು ರಮಣೀಯವಾದ ದಿವ್ಯ ಕಾವ್ಯಗಳಂತೆ ಮನೋವೇಧಕ ಮಾಡಿಬಿಟ್ಟಿರುವರು. ಪ್ರತಿನಿತ್ಯವೂ ಪೂರ್ವ ದಿಕ್ಕಿನಲ್ಲಿ ಉದಯವಾಗಿ, ಈ ಜಗತ್ತನ್ನು ತನ್ನ ಕಿರಣಗಳಿಂದ ಬೆಳಗಿ ಸಾಯಂಕಾಲದಲ್ಲಿ ಅಸ್ತಾಚಲದ ಹಿಂದೆ ಮುಳುಗುವ ಸೂರ್ಯನು ಒಬ್ಬನೆ ಎಂಬ ಮಾತು ನಿಜವು. ಆದರೆ ಉದಯಗಿರಿಯಿಂದ ಪ್ರಾತಃಕಾಲದಲ್ಲಿ ಮೇಲಕ್ಕೇರು ತ್ತಿರುವಾಗ ಕಾಣುವ ಅವನ ಸುಂದರವಾದ ಅರುಣಕಾಂತಿಯು ಎಂದಾದರೂ ಮಾಸುವುದೆ? ಆತ್ಮತತ್ವದ ಜ್ಞಾನವಾದರೂ ಇದೇ ಬಗೆಯಾಗಿರುವುದು. ಎಂದಿಗೂ ಎಷ್ಟು ಹೇಳಿದರೂ ನಾನಾರೀತಿಯಿಂದ ವರ್ಣಿಸಿದರೂ ಅದು ಹಳೆಯದಾಗದು, ಮಾಸದು, ಅನಂತವಿರುವುದರಿಂದ ಆ ಜ್ಞಾನವು ಯಾವಾ ಗಲೂ ನವೀನವೆ, ಸುಂದರವೆ, ಆಕರ್ಷಕವೆ ಸರಿ.

ಈಶಾವಾಸ್ಯೋಪನಿಷತ್ತು ಅತಿ ಸಂಕ್ಷಿಪ್ತವೂ ಸೂತ್ರರೂಪವೂ ಸ್ವಲ್ಪ ಕಠಿಣವೂ ಇದ್ದರೂ ಅದು ಅತ್ಯಂತ ವ್ಯಾಪಕವೂ ಬ್ರಹ್ಮಜ್ಞಾನದ ಎಲ್ಲ ಅಂಗೋಪಾಂಗಗಳನ್ನು ಒಳಕೊಳ್ಳುವಂತಹದೂ ಇರುವುದು. ಕೇನೋಪ-ನಿಷತ್ತು ಸಂವಾದರೂಪವಿರುವುದೆಂಬ ಮಾತು ನಿಜವು. ಆದರೆ ಅದು ಬ್ರಹ್ಮಜ್ಞಾನದ ಒಂದೇ ಭಾಗವನ್ನು, ಬ್ರಹ್ಮನ ಏಕತ್ವ ಹಾಗೂ ಸರ್ವ ಶ್ರೇಷ್ಠತ್ವವನ್ನು ಹೆಚ್ಚು ಒತ್ತಿ ಹೇಳುವುದೆಂಬುದು ಸ್ಪಷ್ಟವು. ಮುಂಡಕೋಪ-ನಿಷತ್ತು ಸುಲಭವೂ ದೃಷ್ಟಾಂತಗಳಿಂದ ಶೋಭಿಸುವಂತಹದೂ ಇದ್ದು ವ್ಯಾಪಕವಾದರೂ ಇರುವುದು. ಅದು ಹೆಸರಿಗೆ ಸಂವಾದಾತ್ಮಕವು. ಏಕಂದರೆ, ಪ್ರಾರಂಭಕ್ಕೆ ಮಾತ್ರ ಒಂದು ಪ್ರಶ್ನೆ ಇದ್ದು ಮುಂದೆ ಎಲ್ಲವೂ ಪ್ರವಚನ ರೂಪವೆ ಇರುವುದು. ಈ ಕಠೋಪನಿಷತ್ತಿನಲ್ಲಿಯ ವೈಶಿಷ್ಟ್ಯವೆಂದರೆ, ಇದೊಂದು ಚಿಕ್ಕ ಕಥೆ ಇರುವುದು. ಕಥೆಯು ಅಂತಹ ದೊಡ್ಡ ಮಹತ್ವದ್ದೂ ಇಲ್ಲ ಅಥವಾ ಚಿತ್ತಾಕರ್ಷಕವೂ ಇಲ್ಲ. ಆದರೆ ಕಥೆಯಲ್ಲಿಯ ಕಥಾನಾಯಕನ ಚಿತ್ರವು ಒಮ್ಮೆ ನೋಡಿದರೆ ಮರೆಯದಂತಹದೂ ಅತ್ಯಂತ ಮನೋ ವೇಧಕವೂ ಇರುವುದು. ಕಠೋಪನಿಷತ್ತು ಮರೆತುಹೋದರೂ ನಚಿಕೇತ

ನನ್ನು ಯಾರಾದರೂ ಮರೆಯಬಹುದೆ? ಆ ನಚಿಕೇತನೆ ಈ ಉಪಾಖ್ಯಾನಕ್ಕೆ ಇಷ್ಟು ಸೌಂದರ್ಯವನ್ನೂ ರಮಣೀಯತೆಯನ್ನೂ ಉಂಟುಮಾಡಿರುವನು.

ನಚಿಕೇತನು ಕೇವಲ ಒಂದು ಚಿಕ್ಕ ಹಸುವು, ಓರ್ವ ಚಿಕ್ಕ ಬಟುವು. ಅವನು ಆರೇ ವರ್ಷದ ವಯಸ್ಸಿನವನಿದ್ದನೆಂದು ಕೆಲವು ಭಾಷ್ಯಕಾರರು ಬರೆದಿರುವರು. ಉಪನಿಷತ್ಕಾರರು ಅವನನ್ನು ಕುಮಾರನೆಂದು ಸಂಬೋಧಿಸಿರುವರು. ಅವನ ಶ್ರದ್ಧೆ, ಪಿತೃಭಕ್ತಿ, ಅವನ ನಿರ್ಭಯತೆ, ಅವನ ಇಂದ್ರಿಯ ನಿಗ್ರಹ, ಅವನ ಶಾಂತವೃತ್ತಿ, ಅವನ ಜ್ಞಾನಪಿಪಾಸೆ, ಅವನ ನಿರ್ಮೋಹ, ಅವನ ಸತ್ಯಧೃತಿ ಇವುಗಳನ್ನು ನೋಡಿ ನಿರ್ಘೃಣನೆಂದೂ ಕಠೋರನೆಂದೂ ಪುರಾಣಾದಿಗಳಲ್ಲಿ ಪ್ರಸಿದ್ಧನಾದ ಯಮರಾಜನು ಸಹ ಬೆರಗಾಗಿ ಪ್ರಸನ್ನನಾದನು! ಯಮನು ಅವನನ್ನು ನಾನಾರೀತಿಯಿಂದ ಮೋಹಿಸಲೆತ್ನಿಸಿದರೂ ತನ್ನ ಸತ್ಯನಿಷ್ಠೆಯಿಂದ ಎಳ್ಳಷ್ಟಾದರೂ ಕದಲದೆ ನಚಿಕೇತನು ತನಗೆ ಬ್ರಹ್ಮ-ಜ್ಞಾನದ ಹೊರ್ತು ಬೇರೆ ಯಾವುದೂ ಬೇಡವೆಂದು ಸ್ಪಷ್ಟವಾಗಿ ಹೇಳಿದನು; ಯಮನು ಕೊಡಮಾಡಿದ ಸಕಲೈಶ್ವರ್ಯಗಳನ್ನು ಕಃಪದಾರ್ಥಗಳಂತೆ ತುಚ್ಛೀಕರಿಸಿ ನಿರಾಕರಿಸಿದನು; 'ನ ವಿತ್ತೇನ ತರ್ಪಣೀಯೋ ಮನುಷ್ಯಃ' ಎಂಬುದನ್ನು ಸಿದ್ಧಮಾಡಿ ತೋರಿಸಿದನು. ಇದರ ಮೇಲಿಂದ ಬ್ರಹ್ಮಜ್ಞಾನವನ್ನು ಪಡೆಯಬೇಕಾದರೆ ಎಂತಹ ಬಲಿಷ್ಠವಾದ ತ್ಯಾಗಬುದ್ಧಿಯು ಬೇಕಾಗುವುದೆಂಬುದು ಸ್ಪಷ್ಟವಾಗುವುದು.

ಬ್ರಹ್ಮಜ್ಞಾನವನ್ನು ಕೇಳುವಾಗ, ಮರಣಪಶ್ಚಾತ್ ಆತ್ಮನ ಸ್ಥಿತಿಯು ಏನಾಗುವದೆಂದು ನಚಿಕೇತನು ಆರಂಭ ಮಾಡಿರುವನು. ಈ ಪ್ರಶ್ನೆಯ ಉತ್ತರವನ್ನು ಯಮದೇವರೆ ಕೊಡುವುದು ಎಲ್ಲ ದೃಷ್ಟಿಯಿಂದಲೂ ವಿಹಿತವಿರುವದು. ಯಾಕಂದರೆ ದೇಹ ಆತ್ಮಗಳನ್ನು ಬೇರ್ಪಡಿಸಿ, ದೇಹಗಳನ್ನು ಒಡೆದ ಸಿಪ್ಪೆಗಳಂತೆ ಇಲ್ಲಿ ಚೆಲ್ಲಿ ಆತ್ಮಗಳನ್ನು ಕೊಂಡೊಯ್ಯುವ ಮೃತ್ಯುದೇವತೆಗಲ್ಲದೆ ಈ ಮಾತು ಇನ್ನಾರಿಗೆ ಚೆನ್ನಾಗಿ ಗೊತ್ತಿರಬಲ್ಲದು? ಎಲ್ಲಕ್ಕೂ ಶ್ರೇಷ್ಠವಾದ ಅಮೃತಪದವು ಆತ್ಮಜ್ಞಾನದಿಂದಲೆ ದೊರೆಯುವದೆಂಬ ಪ್ರಮೇಯವು ಈ ಉಪನಿಷತ್ತಿನಲ್ಲಿಯೂ ಪ್ರತಿಪಾದಿಸಲ್ಪಟ್ಟಿದೆ. ಅಗ್ನಿಯ ಉಪಾಸನೆಯ ಫಲದ ವಿಷಯಕ್ಕೆ ಹೇಳುವಾಗ, ಹಿರಣ್ಯಗರ್ಭ ಅಥವಾ ಮಹದಾತ್ಮ ಅಥವಾ ವಿರಾಟಪದವಿಯೆ ಅದರಿಂದ ದೊರೆಯುವ ಎಲ್ಲಕ್ಕೂ ಶ್ರೇಷ್ಠಪದವಿ.

ಅದಕ್ಕೂ ಹೆಚ್ಚಿನ ಪದವು ಉಪಾಸನೆಯಿಂದ ದೊರೆಯಲಾರದೆಂದು ಯಮನು ನಿರ್ಧರಿಸಿರುವನು. ಹೀಗೆ ಹೇಳಿ ಆಮೇಲೆ ಆತ್ಮವಸ್ತುವಿನ ಚರ್ಚೆಯನ್ನು ಆರಂಭಿಸಿರುವನು.

ಮೋಕ್ಷದಾಯಕವಾದ ಬ್ರಹ್ಮಜ್ಞಾನವನ್ನು ಇಹಲೋಕದಲ್ಲಿಯೆ, ನರ ಜನ್ಮದಲ್ಲಿಯೆ ಪಡೆದುಕೊಳ್ಳಬೇಕೆಂದೂ ಇಲ್ಲದಿದ್ದರೆ ಮಹಾ ಅನರ್ಥವು ಒದಗುವದೆಂದೂ ಕೇನೋಪನಿಷತ್ತಿನಲ್ಲಿ ಹೇಳಿದಂತೆ ಈ ಉಪನಿಷತ್ತಿನಲ್ಲಿಯೂ ಹೇಳಿದೆ. ಈ ಕರ್ಮಭೂಮಿಯಲ್ಲಿ, ಈ ನರದೇಹದಲ್ಲಿ ಯಾವ ತರದ ಆತ್ಮ ಸಾಕ್ಷಾತ್ಕಾರವು ಆಗುವದು ಶಕ್ಯವಿರುವದೋ ಆ ತರದ ಸ್ಪಷ್ಟವಾದ ಸಾಕ್ಷಾತ್ಕಾರವು ಬ್ರಹ್ಮಲೋಕವೊಂದನ್ನು ಬಿಟ್ಟು ಇನ್ನಾವ ಲೋಕದಲ್ಲಿಯೂ ಆಗಲಾರದೆಂದು ಉಪನಿಷತ್ಕಾರರು ನಿಶ್ಚಯದಿಂದ ಹೇಳಿರುವರು. ಪಿತೃಲೋಕ, ಗಂಧರ್ವಲೋಕಗಳಲ್ಲಿ ಚನ್ನಾಗಿ ಆತ್ಮಸಾಕ್ಷಾತ್ಕಾರವು ಆಗುವದು ಶಕ್ಯವಿಲ್ಲೆಂದು ಹೇಳಿ, ಆತ್ಮಸಾಕ್ಷಾತ್ಕಾರವು ಬ್ರಹ್ಮಲೋಕದಲ್ಲಿ ಎಷ್ಟು ಸ್ಪಷ್ಟವಾಗಿ ಆಗಬಲ್ಲದೊ ಅಷ್ಟೇ ಸ್ಪಷ್ಟವಾಗಿ ಮೃತ್ಯುಲೋಕದಲ್ಲಿಯೂ ಆಗಬಲ್ಲದು ಎಂದು ಈ ಉಪನಿಷತ್ಕಾರರು ಹೇಳಿರುವರು. ಆದರೆ ಮೃತ್ಯುಲೋಕದಲ್ಲಿ ಈ ಸಾಧ್ಯವನ್ನು ಸಾಧಿಸದೆ ಬ್ರಹ್ಮಲೋಕವನ್ನು ಪಡೆಯುವ ಯತ್ನಮಾಡಿ ಆಮೇಲೆ ಅಲ್ಲಿ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವ ದ್ರಾವಿಡೀ ಪ್ರಾಣಾಯಾಮವನ್ನು ಯಾರು ಮಾಡುವರು ? ಆದುದರಿಂದ ಈ ಜನ್ಮದಲ್ಲಿಯೆ ಈ ಬ್ರಹ್ಮವಿದ್ಯೆಯನ್ನು ಪಡೆದು ನಚಿಕೇತನಂತೆ ಅಮೃತನಾಗುವದು ಪ್ರತಿಯೊಬ್ಬನ ಆದ್ಯಕರ್ತವ್ಯವು ಎಂದು ಹೇಳಬಹುದು.

ಕಠೋಪನಿಷತ್ಕಾರರು ಇಷ್ಟೇ ಹೇಳಿ ಸುಮ್ಮನಿರಲಿಲ್ಲ. ಕೇವಲ ಬೌದ್ಧಿಕ ಜ್ಞಾನದಿಂದ ‘ ಆತ್ಮಸ್ಥಿತಿಯು ’ ಪ್ರಾಪ್ತವಾಗಲಾರದೆಂದು ಉಪನಿಷತ್ಕಾರರು ಹೆಜ್ಜೆಹೆಜ್ಜೆಗೆ ಅಲ್ಲಲ್ಲಿ ಹೇಳುವರು. ‘ನ ಮೇಧಯಾ’ ‘ನ ತರ್ಕೇಣ’ ಎಂಬ ಉಕ್ತಿಗಳು ಉಪನಿಷತ್ತುಗಳಲ್ಲಿ ಹೇರಳವಾಗಿರುವವು. ಆದರೆ ಕಠೋಪನಿಷತ್ತಿನಲ್ಲಿ ಬ್ರಹ್ಮವಿದ್ಯೆಯ ವಿವೇಚನವಷ್ಟೇ ಹೇಳಲ್ಪಟ್ಟಿಲ್ಲ. ಅದರೊಡನೆ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಳ್ಳುವ ‘ಯೋಗವಿಧಿ’ಯಾದರೂ ಹೇಳಲ್ಪಟ್ಟಿರುವದು. ಈ ಯೋಗವಿಧಿಯನ್ನು ಹೇಳುವಾಗ, ಇಂದ್ರಿಯಾದಿಗಳೂ ಇಂದ್ರಿಯವಿಷಯಗಳೂ ಪ್ರಥಮದರ್ಶನಕ್ಕೆ ಗೋಚರವಾಗುವ ವಸ್ತು-

ಗಳೆಂದು ಹೇಳಿ, ಅವುಗಳಾಚೆಗಿದ್ದ ಶಕ್ತಿಗಳ ವಿವರಣೆ ಮಾಡುತ್ತ ಕೊನೆಗೆ ಪರಮಪುರುಷನೆ ಶ್ರೇಷ್ಠನೆಂದು ಋಷಿಗಳು ನಿಶ್ಚಯಿಸಿರುವರು. ಆ ಸ್ಥಾನವನ್ನು ಮುಟ್ಟಬೇಕಾದರೆ 'ಲಯಚಿಂತನ' ವಿಧಿಯನ್ನು ಉಪನಿಷತ್ಕಾರರು ಉಪದೇಶಿಸಿರುವರು. ದೇಹ, ಇಂದ್ರಿಯಗಳು, ಮನಸು, ಆತ್ಮ ಇವುಗಳ ಸಂಬಂಧವನ್ನು ರಥ ಹಾಗೂ ರಥಿಯ ರೂಪಕದಿಂದ ಬಹಳ ಸುಂದರವಾಗಿ ವರ್ಣಿಸಿ, ಇವೆಲ್ಲವುಗಳಾಚೆಗೆ ಹೋಗಿ, ಧ್ಯಾನದಿಂದ ಪರಮಾತ್ಮನಲ್ಲಿ ಸ್ಥಿರರಾಗಬೇಕೆಂಬುದನ್ನು ಋಷಿಗಳು ಚಿಕ್ಕ ಮಕ್ಕಳಿಗೆ ಸಹ ತಿಳಿಯುವಂತೆ ಬರೆದಿರುವರು. ಈ ರೂಪಕವು ಬಹಳ ಪ್ರಸಿದ್ಧವಿರುವದು ಹಾಗೂ ಎಲ್ಲ ವೇದಾಂತ ಗ್ರಂಥಗಳಲ್ಲಿಯೂ ಒಮ್ಮಿಲ್ಲೊಮ್ಮೆ ಉದಾಹರಿಸಲ್ಪಟ್ಟಿರುವದು.

ಕಠೋಪನಿಷತ್ತಿನಲ್ಲಿ ಹೇಳಿದ ಯೋಗವಿಧಿಯ ವಿವೇಚನವನ್ನು ಸ್ವಲ್ಪ ಶಾಸ್ತ್ರೀಯ ರೀತಿಯಿಂದ ಮಾಡುವದು ಅವಶ್ಯವೆಂದು ತೋರುತ್ತದೆ. ಹಾಗೆ ಮಾಡಬೇಕಾದರೆ, ಪಿಂಡ ಬ್ರಹ್ಮಾಂಡಗಳಲ್ಲಿಯ ತತ್ವಗಳನ್ನು ಚನ್ನಾಗಿ ವಿಮರ್ಶಿಸಬೇಕಾಗುವದು. ಪಿಂಡವನ್ನು ಪರೀಕ್ಷಿಸಿ ನೋಡಿದರೆ ಅದರಲ್ಲಿ ಬಾಹ್ಯ ಇಂದ್ರಿಯಗಳು, ಅವುಗಳಾಚೆಗೆ ಸೂಕ್ಷ್ಮ ಇಂದ್ರಿಯಗಳು, ಆ ಇಂದ್ರಿಯಗಳನ್ನಾಳುವ ಮನಸು, ಆ ಮೇಲೆ ಮನಃಶಕ್ತಿಗಳಲ್ಲಿ ಶ್ರೇಷ್ಠವಾದ ಶುದ್ಧಬುದ್ಧಿ, ಅದರಾಚೆಗೆ ಆತ್ಮನು ಅಥವಾ ಅಂತರಾತ್ಮನು ಇರುವನೆಂದೂ ಅವುಗಳಲ್ಲಿ ಅಂತರಾತ್ಮನೆ ಎಲ್ಲಕ್ಕೂ ಶ್ರೇಷ್ಠನಿರುವನೆಂದೂ ಕಂಡುಬರುವದು. ಆದರೆ ಸಾಮಾನ್ಯತಃ ಮನುಷ್ಯನು ವಿಕಾರವಶನಿರುವದರಿಂದ ಈ ಅಂತರಾತ್ಮನು ಮೂಲೆಗೊತ್ತಲ್ಪಟ್ಟು ಪ್ರೇಯಸ್ಸಿಗೆ ಲುಬ್ಧವಾದ ಮನಸಿನ ಸಾಮ್ರಾಜ್ಯವೆ ನಡೆಯುತ್ತಿರುವಂತೆ ಕಂಡುಬರುವದು. ಈ ಸ್ಥಿತಿಯನ್ನು ಪಲ್ಲಟಿಸಿ, ನಿಜವಾದ ಅರಸನನ್ನು ಅಂದರೆ ಅಂತರಾತ್ಮನನ್ನೆ ಅಂತಃಕರಣದಲ್ಲಿ ಪ್ರಸ್ಥಾಪಿಸುವದು ನಮ್ಮ ಧ್ಯೇಯವಾಗಿರಬೇಕು. ಇದು ಪಿಂಡದ ವಿಷಯವಾಯ್ತು. ಇನ್ನು ಬ್ರಹ್ಮಾಂಡದಲ್ಲಿ ಪಂಚಭೂತಗಳು, ಪಂಚತನ್ಮಾತ್ರೆಗಳು, ಅವುಗಳಾಚೆಗೆ ಮಹತ್ ಅಥವಾ ಮಹದಾತ್ಮಾ ಅಂದರೆ ವಿರಾಟ ಅಥವಾ ಹಿರಣ್ಯಗರ್ಭನು, ಅದರಾಚೆಗೆ ಅವ್ಯಕ್ತ ಬ್ರಹ್ಮವು ಹಾಗೂ ಅದರಾಚೆಗೆ ಪುರುಷನು ಹೀಗೆ ಒಬ್ಬರಿಗಿಂತಲೂ ಒಬ್ಬರು ಶ್ರೇಷ್ಠರು, ಅಂದರೆ ಆಚೆಗಿನವರು ಎಂದು ಕಂಡುಬರುವದು. ಪಿಂಡದಲ್ಲಿರುವ ಅಂತರಾತ್ಮನೂ ಅಥವಾ ಅಂಗುಷ್ಠ

ಪರಿಮಾಣದ ಪುರುಷನೂ ಬ್ರಹ್ಮಾಂಡದ ಪರಮಪದವಿಯಲ್ಲಿ ಅಧಿಷ್ಠಿತನಾದ ಪರಮಾತ್ಮನೂ ತತ್ವತಃ ಒಂದೇ ಸ್ವರೂಪದವರೆಂದು ನಿರ್ಧಾರವಾಯಿತೆಂದರೆ ಸಾಧನೆಗೆ ಸುಲಭವಾಗುವದು. ಬ್ರಹ್ಮಾಂಡದ ಮೂಲಕಾರಣನಾದ ಪೂರ್ಣ ಪುರುಷೋತ್ತಮನೆ ಪಿಂಡದಲ್ಲಿ ಅಂತರಾತ್ಮನಾಗಿ ಅಂಶರೂಪದಿಂದ ವಾಸಿಸುತ್ತಿರುವನೆಂಬದನ್ನು ಅರಿತುಕೊಂಡು ಯೋಗಸಾಧನೆಗೆ ಆರಂಭಮಾಡುವದು ವಿಹಿತವೆಂಬುದು ಸ್ಪಷ್ಟವಿದೆ.

ಸರ್ವಜ್ಞ ಪುರುಷನಲ್ಲಿ ಆಸ್ತಿಕ್ಯಬುದ್ಧಿಯೆ, ದೃಢವಿಶ್ವಾಸವೆ, ಈ ಯೋಗ ವಿಧಿಯ ಮೊದಲನೆ ಮೆಟ್ಟಲು. ಆಮೇಲೆ ಕಾರ್ಯರೂಪವಾದ ಈ ವಿಶ್ವದ ನಿಜಸ್ವರೂಪವನ್ನು ತಿಳಿದುಕೊಂಡು ಅದರ ಮೋಹಕ್ಕೆ ಒಳಗಾಗದೆ ಯಾವಾಗಲೂ ನಿಜಜ್ಞಾನದಲ್ಲಿ ನಿರತನಿದ್ದು ವರ್ತಿಸುವದೆ ಎರಡನೆ ಮೆಟ್ಟಲೆನ್ನಬಹುದು. ನಿಜಜ್ಞಾನ, ನಿಜಜ್ಞಾನವು ಅಂತಃಕರಣದಲ್ಲಿ ನಿರಂತರವಿರುವಂತೆ 'ಆತ್ಮ ತತ್ವದ' ಧ್ಯಾನ ಮಾಡುತ್ತಿರುವದೆ ಮೂರನೆ ಮೆಟ್ಟಲು. ಈ ಧ್ಯಾನವು ಹೆಚ್ಚು ಸ್ಥಿರವಾಗುತ್ತ ಹೋದಂತೆ ಅಹಂಭಾವವು ದೇಹಾದಿ ವಸ್ತುಗಳನ್ನು ಬಿಟ್ಟು ಅಂತಃಕರಣದಲ್ಲಿ ವಾಸಿಸುತ್ತಿರುವ ಕೇವಲಾತ್ಮನಲ್ಲಿ ಸ್ಥಿರವಾಗುವದು. ಇಂದ್ರಿಯ, ಮನಸು, ಬುದ್ಧಿ, ಇವು ಯಾವೂ 'ನಾನಲ್ಲ'. 'ನಾನು' ನಿತ್ಯ ನಿರಾಳ ನಿರವಯವ ಸತ್ಯ ಚಿನ್ಮಯ ಆತ್ಮನೆಂಬುದನ್ನು ದೃಢವಾಗಿಟ್ಟುಕೊಂಡು ಪರಮಾತ್ಮನನ್ನು ಸಾಕ್ಷಾತ್ಕರಿಸುವದೆ ಈ ಯೋಗವಿಧಿಯ ಕಡೆಯ ಮೆಟ್ಟಲು. ಆತ್ಮಸಾಕ್ಷಾತ್ಕಾರವಾದವನು ಜೀವನ್ಮುಕ್ತನಾಗುವನು. ಜೀವನ್ಮುಕ್ತನಾದವನು ಅಮೃತನಾಗುವನು.

ಈ ರೀತಿಯಾಗಿ ಬ್ರಹ್ಮವಿದ್ಯೆ ಹಾಗೂ ಯೋಗವಿಧಿ ಇವೆರಡೂ ಈ ಉಪನಿಷತ್ತಿನಲ್ಲಿ ಉಪದೇಶಿಸಲ್ಪಟ್ಟಿರುವವು. ಅವುಗಳನ್ನು ಪಠಿಸಿ ಅದರಂತೆ ವರ್ತಿಸುವವರಿಗೆ, ನೀವಾದರೂ ನಚಿಕೇತನಂತೆ ನಿಷ್ಪಾಪರೂ ಅಮೃತರೂ ಆಗುವಿರೆಂದು ಉಪನಿಷತ್ಕಾರರು ಆಶ್ವಾಸನವನ್ನಿತ್ತಿರುವರು. ಬಾಲಬ್ರಹ್ಮಚರ್ಯದ ತೇಜಸ್ಸಿನಿಂದ ಮಿಂಚುವ ಆ ಕುಮಾರ ನಚಿಕೇತನ ದಿವ್ಯಮೂರ್ತಿಯು ನಮ್ಮೆಲ್ಲರ ಅಂತಃಕರಣದಲ್ಲಿ ನೆಲೆಗೊಂಡು ಆ ಜ್ಞಾನಪಿಪಾಸೆಯನ್ನೂ ನಿರ್ಭಯತೆಯನ್ನೂ ಸತ್ಯನಿಷ್ಠೆಯನ್ನೂ ನಮ್ಮಲ್ಲಿಯೂ ಜಾಗೃತವಾಡಿ ಸ್ಥಿರಗೊಳಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸಿ ಈ ನಾಲ್ಕು ನುಡಿಗಳನ್ನು ಮುಗಿಸುವಾ.

# ಮಾಂಡೂಕ್ಯೋಪನಿಷತ್ತು

## ಮಾಂಡೂಕ್ಯೋಪನಿಷತ್ತಿನ ಸಾರಾಂಶ

ಶಾಂತಿಮಂತ್ರದಲ್ಲಿ 'ಓಂ ಭದ್ರಂ ಕರ್ಣೇಭಿಃ' ಎಂಬುದಾಗಿ ಆಶೀರ್ವಾದವನ್ನೂ ಕಲ್ಯಾಣವನ್ನೂ ದೇವತೆಗಳ ಕಡೆಯಿಂದ ಬೇಡಿಕೊಂಡು ಋಷಿಗಳು ಈ ಉಪನಿಷತ್ತನ್ನು ಆರಂಭಿಸುವರು. ತಾವು ದೃಢ ಅಂಗಗಳುಳ್ಳವರಾಗಿ ಸಾಯುವವರೆಗೆ ದೇವತೆಗಳ ಸೇವೆ ಮಾಡಲಿಕ್ಕೆ ಸಮರ್ಥರಾಗಬೇಕೆಂದು ಉಪನಿಷತ್ತನ್ನು ಬರೆಯುವ ಕವಿಗಳು ಬಯಸುವರು. ತಮಗೆ 'ಸ್ವಸ್ತಿ' ಇರಬೇಕು ಎಂದು ಇಂದ್ರ, ಸೂರ್ಯ, ಗರುಡ, ಬೃಹಸ್ಪತಿ ಮುಂತಾದ ದೇವತೆಗಳನ್ನು ಪ್ರಾರ್ಥಿಸುವರು.

ಈ ಉಪನಿಷತ್ತಿನಲ್ಲಿ ಹನ್ನೆರಡೆ ಮಂತ್ರಗಳಿರುವವು. ಕ್ಷರಾಕ್ಷರ ವಸ್ತುಗಳ ನಿರ್ದೇಶರೂಪವಾದ ಓಂಕಾರವನ್ನು ಕುರಿತು ವ್ಯಾಖ್ಯಾನ ಮಾಡುವದೆ ಋಷಿಗಳ ಮುಖ್ಯ ಉದ್ದೇಶವು. ಆದುದರಿಂದ 'ತಸ್ಯ ಉಪವ್ಯಾಖ್ಯಾನಂ' ಅಂದರೆ ಓಂಕಾರದ ಉಪವ್ಯಾಖ್ಯಾನವೆಂದು ಆರಂಭದ ವಾಕ್ಯದಲ್ಲಿಯೆ ಹೇಳಿದ್ದಾರೆ. ಓಂಕಾರವೆಂಬುದು ಅತ್ಯಂತ ವ್ಯಾಪಕವಾದ ಬ್ರಹ್ಮನಿರ್ದೇಶವು. ಸತ್ ಅಸತ್, ಕ್ಷರ ಅಕ್ಷರ, ದೃಶ್ಯಾದೃಶ್ಯ, ಆತ್ಮಾನಾತ್ಮ, ಚಿತ್ ಅಚಿತ್, ಇವೆಲ್ಲವೂ ಈ ಓಂಕಾರದಿಂದ ನಿರ್ದಿಷ್ಟವಾಗುವವು. ಇದಲ್ಲದೆ ಆತ್ಮಾನಾತ್ಮಗಳಾಚೆಗಿರುವ ಅನಿರ್ದೇಶ್ಯವಾದ ಸತ್ಯವೂ ಈ ಓಂಕಾರದಿಂದ ನಿರ್ದಿಷ್ಟವಾಗುವದು. ಸಂಕ್ಷೇಪದಿಂದ ಹೇಳಬೇಕಾದರೆ, ಇದ್ದದ್ದೆಲ್ಲವೂ ಓಂಕಾರವೆ, ಓಂಕಾರವೆ ಸಕಲ ಅಸ್ತಿತ್ವದ ನಿರ್ದೇಶವೆಂದು ತಿಳಿಯತಕ್ಕದ್ದು. ಓಂಕಾರದಲ್ಲಿ ಸರ್ವವೂ ಒಳಕೊಂಡಿರುವದು. ಸರ್ವವೂ ಓಂಕಾರವೆ, ಓಂಕಾರವೆ ಸರ್ವವು.

ಎಷ್ಟೆಂದರೂ ಓಂಕಾರವು ಬರಿಯ ನಿರ್ದೇಶವು. ನಿರ್ದಿಷ್ಟ ವಸ್ತುವು ಯಾವದೆಂಬ ಪ್ರಶ್ನೆಯು ಇದರಿಂದ ಬಿಡಿಸಲ್ಪಡದೆ ಹಾಗೆಯೆ ಉಳಿಯುವದು.

ನಿಷತ್ತುಗಳ ಮಹತ್ವವು ಅವು ಚಿಕ್ಕ ದೊಡ್ಡವಿರುವದನ್ನವಲಂಬಿಸಿಲ್ಲ, ಮಂತ್ರ ಸಂಖ್ಯೆಯಲ್ಲಿಯೂ ಮಹತ್ವವಿಲ್ಲ. ಆದರೆ ಆಯಾ ಉಪನಿಷತ್ತಿನ ಮಹತ್ವವು ಅದರಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯದ ಮಹತ್ವವನ್ನೆ ಅವಲಂಬಿಸಿರುವದು. ಆ ದೃಷ್ಟಿಯಿಂದ ನೋಡಿದರೆ ಮಾಂಡೂಕ್ಯದಲ್ಲಿ ಆತ್ಮನು, ಆತ್ಮನ ನಾಲ್ಕು ಅವಸ್ಥೆಗಳು, ಆತ್ಮನಿರ್ದೇಶವಾದ ಓಂಕಾರ ಇವೇ ವಿಷಯಗಳು ಬಂದಿರುವವು. ಗ್ರಂಥವಿಷಯವು ಅತ್ಯಂತ ಮಹತ್ವಪೂರ್ಣವೂ ವ್ಯಾಪಕವೂ ಕಠಿಣವೂ ಇದ್ದರೂ ಪ್ರತಿಪಾದನಶೈಲಿಯು ಸರಲವೂ ಸುಲಭವೂ ಇರುವದು.

ಸಾಮಾನ್ಯವಾಗಿ ಬ್ರಹ್ಮಜ್ಞಾನ ಅಥವಾ ಆತ್ಮಜ್ಞಾನವೆಂದ ಕೂಡಲೆ ಬಹುಜನರು, ಇದು ತಮಗೆ ತಿಳಿಯದ ವಿಷಯವೆಂದು ಮೋರೆ ತಿರುವುವರು. ಆದರೆ ಇಂತಹ ಜನರಿಗೆ ಸಹ ಆತ್ಮಜ್ಞಾನದ ಮಹತ್ವವು ತಿಳಿಯುವಂತೆ ಇಲ್ಲಿ ಉಪನಿಷತ್ಕಾರರು ಆತ್ಮಜ್ಞಾನವನ್ನು ನಿರೂಪಿಸಿರುವರು. ಈ ಉಪನಿಷತ್ತಿನಲ್ಲಿ ಆತ್ಮ ಮತ್ತು ಬ್ರಹ್ಮ ಈ ಶಬ್ದಗಳು ಆತ್ಯಂತಿಕ ಸತ್ಯವೆಂಬ ಅರ್ಥವಲ್ಲಿ ಉಪಯೋಗಿಸಲ್ಪಟ್ಟಿವೆ. ಆ ಆತ್ಯಂತಿಕ ಸತ್ಯದ ಪರಿಚಯವನ್ನು ಸಂಕ್ಷೇಪದಲ್ಲಿ ಮಾಡಿಕೊಟ್ಟುಉಪನಿಷತ್ಕಾರರು ಆ ಸತ್ಯದ ನಿರ್ದೇಶಮಂತ್ರವಾದ ಓಂ-ಕಾರದ ಉಪದೇಶವನ್ನಾದರೂ ನಮಗೆ ಈ ಉಪನಿಷತ್ತಿನಲ್ಲಿ ಮಾಡಿರುವರು.

ಆತ್ಮಾ ಅಥವಾ ಬ್ರಹ್ಮವೆಂಬುದು ಎಲ್ಲಿಯೊ ದೂರವಿದ್ದು ನಮಗೆ ನಿಲುಕದ ವಸ್ತುವಲ್ಲ. ಅದು ಎಲ್ಲೆಲ್ಲಿಯೂ ತುಂಬಿಕೊಂಡಿರುವದು. ಅದರಲ್ಲಿಯೆ ನಾವು ಚಲಿಸುವೆವು, ಅದರಲ್ಲಿಯೆ ಇರುವೆವು. ಅದನ್ನು ಬಿಟ್ಟು ನಾವು ಎಳ್ಳಷ್ಟು ಸಹ ಕದಲಲಾರೆವು, ಕ್ಷಣಹೊತ್ತು ಸಹ ಇರಲಾರೆವು. ಅದು ಅಷ್ಟು ಸರ್ವ ವ್ಯಾಪಕವು. ನಾವು ಹುಟ್ಟುವದು ಅದರಲ್ಲಿ, ಇರುವದು ಅದರಲ್ಲಿ, ಸಾಯುವದು ಅದರಲ್ಲಿ. ಇಂದ್ರಿಯಗೋಚರವಾದ ಹಾಗೂ ಇಂದ್ರಿಯಗಳಿಗೆ ಅಗೋಚರವಾದ ಎಲ್ಲ ವಸ್ತುಗಳೂ ಆತ್ಮಮಯವೆ ಇರುವವು. ಆತ್ಮನನ್ನು ಬಿಟ್ಟು ಆತ್ಮನ ವಿನಾ ಏನೂ ಯಾವದೂ ಇರಲಾರದು. ಹೀಗಿರುವದರಿಂದ ಆತ್ಮನನ್ನು ಹುಡುಕಲಿಕ್ಕೆ ಅತ್ತಿತ್ತ ಹರಿದಾಡುವ ಕಾರಣವಿಲ್ಲ, ಹರಿದಾಡಿ ಹೈರಾಣವಾಗುವ ಕಾರಣವಿಲ್ಲ. ಕುಳಿತಲ್ಲಿ, ನಿಂತಲ್ಲಿ, ಮಾತಾಡುವಲ್ಲಿ, ಆಡುವಲ್ಲಿ, ಹೋದಲ್ಲಿ, ಬಂದಲ್ಲಿ, ಆತ್ಮನನ್ನು ಕಾಣಬಹುದು, ಆತ್ಮನನ್ನು ಸಾಕ್ಷಾತ್ಕರಿಸಬಹುದು.

ಆತ್ಮಜ್ಞಾನವೂ ಆತ್ಮಸಾಕ್ಷಾತ್ಕಾರವೂ ಇಷ್ಟೊಂದು ಸುಲಭವಿದ್ದರೆ ಬಹುಜನರು ಇಷ್ಟು ಕಷ್ಟಬಡುವದೇಕೆ? ಇದು ಯಥಾರ್ಥವಾದ ಪ್ರಶ್ನೆಯು. ಯಾವನಿಗೆ ಯಾವ ವಸ್ತು ಬೇಕೊ ಅವನಿಗೆ ಆ ವಸ್ತು ದೊರೆಯುವದು. ಅವರವರ ಶ್ರದ್ಧೆಯಂತೆ ಅವರವರಾಗುವರು. ಅವರವರ 'ಕೃತುವಿನಂತೆ' ಅವರವರ ಜನ್ಮವು, ಅವರವರ ವಾಸನೆಗಳಂತೆ ಅವರವರ ಭೋಗವು. ಈ ಸಿದ್ಧಾಂತವು ನಿರಪವಾದವು. ಸರ್ವರೂ ಸಾಮಾನ್ಯವಾಗಿ ತಮ್ಮ ಪ್ರಾಣ ಪೋಷಣೆಯನ್ನಿಚ್ಛಿಸುವರು. ಆದುದರಿಂದ ಅದು ಅವರಿಗೆ ಪ್ರಾಪ್ತವಾಗುವದು. ಸಂತತಿಯ ವೃದ್ಧಿಯಾದರೂ ಪ್ರಾಣದ ಮುಖ್ಯ ಪ್ರವೃತ್ತಿಗಳಲ್ಲಿ ಒಂದು. ಆದುದರಿಂದ ಸರ್ವರೂ ಸಂತತಿಯ ವೃದ್ಧಿಯ ಕೆಲಸದಲ್ಲಿ ತೊಡಗುವರು. ಎಲ್ಲ ಇಂದ್ರಿಯಗಳಿಗೂ ಭಿನ್ನ ಭಿನ್ನ ವಿಷಯಗಳಲ್ಲಿ ರಾಗದ್ವೇಷಗಳು ಉಂಟಾಗುವುವು. ಎಲ್ಲರೂ ಇಂದ್ರಿಯಪ್ರವೃತ್ತಿಗಳಿಗೆ ಒಳಗಾಗುವುದರಿಂದ ಆಯಾ ವಿಷಯಗಳಲ್ಲಿ ಆಸಕ್ತರಾದ ಅವರು ಅಲ್ಲಿಯೆ ತೊಡಗುವರು. ತಮ್ಮ ತಮ್ಮ ಮನಸಿಗೆ ಪ್ರಿಯಕರವಾದ ವಸ್ತುಗಳನ್ನು ದೊರಕಿಸಿ ಅವುಗಳನ್ನುಪಭೋಗಿಸುವುದರಲ್ಲಿ ಆಯುಷ್ಯವೆಲ್ಲವೂ ಸಣ್ಣಾಗಿ ಸವೆದು ಹೋಗುವುದು. ಸರ್ವರೂ ಈ ಮೋಹಕವಾದ ವಿಶ್ವದ ವಿಷಯಗಳಲ್ಲಿ ಆನಂದವನ್ನು ಹುಡುಕುವರು. ಆನಂದದ ಉಗಮಸ್ಥಾನವಾದ ಈ ವಿಶ್ವದ ಜನಕನಾದ ಆತ್ಮನನ್ನು ಹುಡುಕುವವರು ಬಹಳ ಕ್ವಚಿತ. ಕಾಮನಬಿಲ್ಲಿನ ಬಣ್ಣಗಳಿಗೆ ಲುಬ್ಧರಾಗಿ ಅದರ ಕಡೆಗೆ ಕಣ್ಣಿಟ್ಟು ನೋಡುವವರೆ ಬಹಳ. ಇಂತಹ ಅನಂತ ಕಾಮನಬಿಲ್ಲುಗಳನ್ನು ತನ್ನ ಕಿರಣಗಳಿಂದ ಉತ್ಪನ್ನಮಾಡಲು ಸಮರ್ಥನಾದ ಸೂರ್ಯನಾರಾಯಣನ ಧ್ಯಾನಮಾಡುವವರು ಒಬ್ಬಿಬ್ಬರೆ ಸರಿ. ಕ್ಷಣಭಂಗುರ ಸುಖಗಳನ್ನು ಬೇಡಿದರೆ ಸತ್ಯ ನಿತ್ಯ ಸುಖವು ಹೇಗೆ ದೊರೆಯಬೇಕು? ತಾತ್ಪರ್ಯವೇನಂದರೆ, ಆತ್ಮಜ್ಞಾನವನ್ನೂ ಆತ್ಮಸುಖವನ್ನೂ ಮೊರಕಿಸುವುದು ಕಠಿಣವಿಲ್ಲ. ಅದರ ಬೆನ್ನುಬಿದ್ದು ಅದನ್ನು ದೊರಕಿಸಲೆತ್ನಿಸುವವರೆ ಕಡಿಮೆ. ಅದರ ಅಸ್ತಿತ್ವದಲ್ಲಿ ಶ್ರದ್ಧೆಯಿಟ್ಟು ಹಂಬಲದಿಂದ ಹವಣಿಸುವವರೆ ವಿರಲ. ಧನಸುಖ, ಸ್ತ್ರೀಸುಖ, ಪುತ್ರಸುಖ, ಇವೇ ಸತ್ಯವಸ್ತುಗಳೆಂದು ತಿಳಿದು ಅವುಗಳ ಸಲುವಾಗಿಯೆ ಎಲ್ಲರೂ ಯತ್ನಿಸುವರು. ಅವುಗಳಲ್ಲಿ ಸಿಕ್ಕುವಷ್ಟು ಸುಖವು ಅವರವರಿಗೆ ಸಿಕ್ಕುತ್ತದೆ. ಅವುಗಳಲ್ಲಿಲ್ಲದ ಹೆಚ್ಚಿನ ಸುಖವು ಅವರಿಗೆ ಎಲ್ಲಿಂದ

ಬರಬೇಕು? ಹೊಟ್ಟು ಥಳಿಸಿ ಕಾಳು ಕಾಣಬೇಕೆಂದರೆ ಆದೀತೆ? ಹೀಗೆ ವಿಚಾರ ಮಾಡಿ ನೋಡಿದರೆ ಸತ್ಯನಿತ್ಯ ಆತ್ಮಸುಖವು ಬಹುಜನರಿಗೆ ದೊರೆಯದ ಕಾರಣವು ಒಡೆದು ತೋರುವುದಿಲ್ಲವೆ? ಆತ್ಮಶ್ರದ್ಧೆ, ಆತ್ಮನಿಷ್ಠೆ, ಆತ್ಮಪ್ರಯತ್ನ ಗಳಿಲ್ಲದ ಮೂಲಕ ಆತ್ಮಾನಂದವೂ ಇಲ್ಲ. ಧನಪುತ್ರಕಲತ್ರಗಳಲ್ಲಿ ಶ್ರದ್ಧೆ, ಅವುಗಳನ್ನು ದೊರಕಿಸುವ ವಿಷಯದಲ್ಲಿ ನಿಷ್ಠೆ ಇರುವುದರಿಂದ ಅವು ತಕ್ಕ ಮಟ್ಟಿಗೆ ಅವರವರ ಯೋಗ್ಯತೆಯ ಮೇರೆಗೆ ಎಲ್ಲರಿಗೂ ದೊರೆಯುವುವು. ವಿಷಯಗಳನ್ನು ದೊರಕಿಸುವ ಕಾರ್ಯದಲ್ಲಿ ಜನರು ತೋರಿಸುವಷ್ಟು ಶ್ರದ್ಧೆ, ನಿಷ್ಠೆಗಳನ್ನು ಆತ್ಮನನ್ನು ದೊರಕಿಸುವ ಕೆಲಸದಲ್ಲಿ ಜನರು ತೋರಿಸಿದರೆ ಅದಾದರೂ ಅಷ್ಟೇ ಸುಲಭವಾಗಿ, ಸಹಜವಾಗಿ ದೊರೆಯಬಲ್ಲದು.

ಒಳ್ಳೇದು, ಆತ್ಮನು ಸರ್ವವ್ಯಾಪಕನಿದ್ದರೆ ಆ ಆತ್ಮನಿಗೂ ಈ ಎಲ್ಲ ವಸ್ತು ಗಳಿಗೂ ಸಂಬಂಧವೇನು? ಎಲ್ಲವೂ ಆತ್ಮನೆ ಇದ್ದರೆ ಏಕರೂಪವಾಗಿರದೆ ಹಲವು ರೂಪಗಳಾಗಿ ಏಕೆ ಕಾಣುವದು? ಎಂಬ ಪ್ರಶ್ನೆಗೆ ಉತ್ತರಕೊಟ್ಟು ಸತ್ಯಾತ್ಮನ ಸಾಕ್ಷಾತ್ಕಾರದ ಹಾದಿ ತೋರಿಸುವದೆ ಈ ಉಪನಿಷತ್ಕಾರರ ಮುಖ್ಯ ಉದ್ದೇಶವು. ಆತ್ಮನೆಂದರೆ ಶುದ್ಧ ಚೈತನ್ಯವು. ಅನಂತನೂ ಅಪಾರನೂ ಅಗಾಧನೂ ನಿರವಯವನೂ ಏಕರೂಪನೂ ಇರುವ ಸತ್ಯ ನಿತ್ಯ ಚೈತನ್ಯ ಪುರುಷನೆ ಆತ್ಮನು. ಅವನೇ ನಾಲ್ಕು ಅವಸ್ಥಾಂತರಗಳನ್ನು ಹೊಂದಿ ಚಿತ್ರ ವಿಚಿತ್ರ ರೂಪಗಳನ್ನು ಧರಿಸಿ ನಟಿಸುವನು. ಕೇವಲ ತನ್ನ ಸ್ವೇಚ್ಛೆಯಿಂದ, ತನ್ನ ಲೀಲೆಯಿಂದ, ತನ್ನ ಆನಂದಕ್ಕಾಗಿ ಅವನು ಹೀಗೆ ಮಾಡುವನು. 'ಪರಮಾತ್ಮನು, ಪರಶಿವನು ಈ ಜಗವ ನಿರ್ಮಿಸಿದ ಕೇವಲ ತನ್ನ ವಿನೋದ ಕ್ಕಾಗಿ.' ತನ್ನೊಳಗಿಂದಲೆ ತನ್ನ ಸಂಕಲ್ಪದಿಂದ ಸ್ವೇಚ್ಛಾನುಸಾರವಾಗಿ ಪರ-ಮಾತ್ಮನು ಈ ವಿಶ್ವವನ್ನು ರಚಿಸಿದನು. ಅಥವಾ ತಾನೇ ಈ ವಿಶ್ವವಾಗಿ ತೋರಿದನು. ಆದರೆ ಅವನು ಅನಂತನಿರುವುದರಿಂದ ಸೃಷ್ಟಿಗಳ ರಚನೆಯಿಂದ ಅವನಲ್ಲಿ ಯಾವ ಊನವೂ ಉಂಟಾಗಲಿಲ್ಲ. ಅವನು ಮೊದಲಿನಂತೆಯೆ ಉಳಿದಿರುವನು. ಹೀಗೆ ಅಚ್ಚಳಿಯದೆ ಉಳಿದ ಶುದ್ಧ ಆತ್ಮಸ್ವರೂಪವೆ ಎಲ್ಲಕ್ಕೂ ಹೆಚ್ಚಿನ ಹಾಗೂ ಶ್ರೇಷ್ಠವಾದ ನಾಲ್ಕನೆಯ ಅವಸ್ಥೆಯು. ಯೋಗಿಗಳು ಪರಾಕಾಷ್ಠೆಯಿಂದ ಈ ತುರೀಯಾವಸ್ಥೆಯನ್ನು ಹೊಂದುವರೆಂದು ಹೇಳ ಬಹುದು. ಒಬ್ಬನೇ ಆತ್ಮನು ಹಲವಾದದ್ದು ತನ್ನ ಇಚ್ಛೆಯಿಂದ, ತನ್ನ ಲೀಲೆ

ಗಾಗಿ ಎಂಬುದಾಯ್ತು. ಹೀಗೆ ಹಲವಾಗಿ ತಾನು ಸೃಷ್ಟಿಯಿಂದ ಹೊರ-ಗಾದನೆ? ಇಲ್ಲ. ಅದರಲ್ಲಿ ಸಂಪೂರ್ಣವಾಗಿ ವ್ಯಾಪಿಸಿಕೊಂಡನು. ಭೋಗ್ಯ ವಸ್ತುವಾಗಿ ಜಡವಾದನು, ಪ್ರಾಣಿಗಳೆಂಬುವಲ್ಲಿ ಭೋಕ್ತೃನಾದನು. ಹೀಗೆ ಆತ್ಮನಿಗೂ ವಿಶ್ವಕ್ಕೂ ನಿಕಟ ಸಂಬಂಧವಿರುವುದು. ತತ್ವತಃ, ಎರಡರಲ್ಲಿಯೂ ಭಿನ್ನತ್ವವಿಲ್ಲೇ ಇಲ್ಲ. ಒಂದೇ ಹಲವಾಗಿ ತೋರಿದಲ್ಲಿ ಭಿನ್ನತ್ವವೆಲ್ಲಿಂದ ಬರ ಬೇಕು? ಏಕವು ಈ ಪ್ರಕಾರವಾಗಿ ಅನೇಕವಾಯ್ತು ಹಾಗೂ ಏಕಕ್ಕೂ ಅನೇಕಕ್ಕೂ ಈ ಪರಿಯ ಸಂಬಂಧವಿರುವುದು.

ಇನ್ನು ಶುದ್ಧ ಚೈತನ್ಯದ ನಾಲ್ಕು ಅವಸ್ಥೆಗಳು ಯಾವವೆಂಬುದನ್ನು ನೋಡುವ. ಈ ಶುದ್ಧ ಚೈತನ್ಯನೆ ಶುದ್ಧ ಜೀವಾತ್ಮನ ಸ್ವರೂಪದಿಂದ ಮನುಷ್ಯ ನಲ್ಲಿರುವನು. ಜಾಗೃತ್ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳು ಅವನಿಗೆ ಇಲ್ಲಿ ಪ್ರಾಪ್ತವಾಗುವವು. ಜಾಗೃತ ಸ್ಥಿತಿಯಲ್ಲಿ ನಡೆಯುವ ಎಲ್ಲ ವ್ಯಾಪಾರಗಳು ಈ ನಮ್ಮ ಸ್ಥೂಲ ಶರೀರದಿಂದ ನಡೆಯುವವು. ಸ್ಥೂಲ ಇಂದ್ರಿಯಗಳು ಸ್ಥೂಲ ವಿಷಯಗಳನ್ನುಪಭೋಗಿಸುವವು. ಪ್ರಾಣಗಳು, ಮನ, ಬುದ್ಧಿ, ಚಿತ್ತ, ಅಹಂ ಕಾರಾದಿಗಳು ಸ್ಥೂಲ ಇಂದ್ರಿಯಗಳಿಗಿಂತ ವಿರಲವಿದ್ದರೂ ಜಾಗೃತ ಸ್ಥಿತಿಯಲ್ಲಿ ಅವು ಸ್ಥೂಲ ಇಂದ್ರಿಯಗಳ ಸೇವೆಯಲ್ಲಿ ನಿರತವಾಗಿರುವದರಿಂದ ಸ್ಥೂಲ ರೂಪವನ್ನೆ ಹೊಂದಿರುವವು. ಇಂತಹ ಸ್ಥೂಲಾವಸ್ಥೆಯಲ್ಲಿರುವದು ಚೈತನ್ಯದ ಪ್ರಥಮಾವಸ್ಥೆಯು. ಸ್ವಪ್ನಸ್ಥಿತಿಯಲ್ಲಿ ಎಲ್ಲ ವ್ಯಾಪಾರಗಳು ಸೂಕ್ಷ್ಮ ಸೃಷ್ಟಿ ಯಲ್ಲಿ ನಡೆಯುವವು. ಆಗ ಸ್ಥೂಲ ಶರೀರವು ನಿಶ್ಚೇಷ್ಟವಾದಂತೆ ಬಿದ್ದು ಕೊಳ್ಳುವದು. ಸೂಕ್ಷ್ಮ ಶರೀರವು, ಲಿಂಗ ಶರೀರವು ಸೂಕ್ಷ್ಮೇಂದ್ರಿಯಗಳ ಮುಖಾಂತರವಾಗಿ ಸೂಕ್ಷ್ಮ ವಿಷಯಗಳ (ವಾಸನೆಗಳ) ಉಪಭೋಗವನ್ನು ಕೊಳ್ಳುವಂತೆ ಕಂಡುಬರುವದು. ಪ್ರಾಣ, ಬುದ್ಧಿ, ಚಿತ್ತ, ಅಹಂಕಾರಾದಿ ಗಳು ಈ ಸ್ಥಿತಿಯಲ್ಲಿ ಸೂಕ್ಷ್ಮ ಶರೀರದ ಅಧೀನವಾಗಿ ನಡೆಯುವವು. ಇಂತಹ ಸೂಕ್ಷ್ಮ ಸ್ಥಿತಿಯಲ್ಲಿರುವದು ಚೈತನ್ಯದ ದ್ವಿತೀಯಾವಸ್ಥೆಯು. ಸುಷುಪ್ತಿ ಸ್ಥಿತಿಯಲ್ಲಿ ಶರೀರೇಂದ್ರಿಯಗಳ ಕಾಟವು ಅಳಿದು ಪ್ರಾಣ, ಮನ, ಬುದ್ಧಿ, ಚಿತ್ತ, ಅಹಂಕಾರಾದಿಗಳು ಚೈತನ್ಯದಲ್ಲಿ ಲೀನವಾಗುವವು. ಈ ಸ್ಥಿತಿಯಲ್ಲಿ ಆತ್ಮನು ಚೈತನ್ಯದ ಮುಖಾಂತರವೆ ಆನಂದಾನುಭವವನ್ನು ಪಡೆಯುವನು. ಇಂತಹ ಸುಷುಪ್ತಾವಸ್ಥೆಯಲ್ಲಿರುವದು ಚೈತನ್ಯದ ತೃತೀಯಾವಸ್ಥೆಯು.

ಸಂಕಲ್ಪಗಳ ಉಗಮವಾಗಲಿ ಸೃಷ್ಟಿರಚನೆಯ ಕಲ್ಪನೆಗಳಾಗಲಿ ಆತ್ಮನಿಗೆ ಈ ಮೂರನೆ ಅವಸ್ಥೆಯಲ್ಲಿಯೆ ಆಗುವವು. ಇದರಾಚೆಗಿದ್ದ ಶುದ್ಧ ಚೈತನ್ಯಾವಸ್ಥೆಯಂತೂ ಮೇಲೆ ವಿವರಿಸಲ್ಪಟ್ಟಿವೆ.

ಹೀಗೆ ಒಂದೇ ಆತ್ಮನಿಗೆ ಈ ನಾಲ್ಕು ಅವಸ್ಥಾಂತರಗಳು. ಈ ನಾಲ್ಕು ಅವಸ್ಥೆಗಳಲ್ಲಿಯೂ ವಿದ್ಯುಲ್ಲತೆಯಂತೆ ಹರಿದಾಡುತ್ತ ಆತ್ಮನು ತನ್ನ ಆನಂದ ವಿಹಾರವನ್ನು ಸ್ವಚ್ಛಂದದಿಂದ ನಡೆಸಿರುವನು. ಓಂ ಎಂಬುದು ಈ ಆತ್ಮನ ನಿರ್ದೇಶವು. ಇದು ಆತ್ಮಮಂತ್ರವು. ಈ ಮಂತ್ರದ ಧ್ಯಾನದಿಂದ ನಮ್ಮ ಚಂಚಲವಾದ ಮನವನ್ನು ಸ್ಥಿರಮಾಡಿ ಆತ್ಮಸ್ವರೂಪವನ್ನು ಅರಿತುಕೊಳ್ಳಬೇಕು. ಉಪನಿಷತ್ಕಾರರು ಈ ಸುಲಭ ಮಂತ್ರವನ್ನು ಹೇಳಿದ್ದು ಈ ಉದ್ದೇಶದಿಂದಲೆ. ಈ ಬ್ರಹ್ಮನಿರ್ದೇಶದಲ್ಲಿ ಶುದ್ಧ ಚೈತನ್ಯನೂ ಅವನ ನಾಲ್ಕು ಅವಸ್ಥೆಗಳೂ ಒಳಗೊಂಡಿರುವವು. ಈ ನಿರ್ದೇಶದ ಚಿಂತನದಿಂದ ಆ ಪರಮ ಚೈತನ್ಯ ಪುರುಷನ ಸಂಪೂರ್ಣ ಜ್ಞಾನ ಮಾಡಿಕೊಳ್ಳುವದು ಸುಲಭವಾಗುವದು. ಈ ರೀತಿಯಾಗಿ ಈ ಉಪನಿಷತ್ತಿನಲ್ಲಿ ಶುದ್ಧ ಚೈತನ್ಯನ ಸ್ವರೂಪವೂ ಅವನ ಅವಸ್ಥೆಗಳೂ ಆ ಜ್ಞಾನವನ್ನರಿತುಕೊಳ್ಳಲಿಕ್ಕೆ ಸಾಧನವಾದ ಮಂತ್ರವೂ ಕೊಡಲ್ಪಟ್ಟಿರುವವು. ಇದನ್ನರಿತುಕೊಳ್ಳುವ ಬುದ್ಧಿಯು ಎಲ್ಲರಿಗೂ ಆಗಲಿ ಎಂದು ಆ ಪರಮಾತ್ಮನನ್ನು ಪ್ರಾರ್ಥಿಸಿ ಈ ಉಪನಿಷತ್ತಿನ ಬಗ್ಗೆ ಬರೆದ ಈ ನಾಲ್ಕು ನುಡಿಗಳನ್ನು ಮುಗಿಸುವಾ.

---

# ಪ್ರಶ್ನೋಪನಿಷತ್ತು

## ಪ್ರಶ್ನೋಪನಿಷತ್ತಿನ ಸಾರಾಂಶ

ಪ್ರಶ್ನೋಪನಿಷತ್ತು 'ಓಂ ಭದ್ರಂ ಕರ್ಣೇಭಿಃ' ಎಂಬ ಶಾಂತಿಮಂತ್ರದಿಂದ ಆರಂಭಿಸುವದು. ಎಲ್ಲ ದೇವತೆಗಳನ್ನು ಪ್ರಾರ್ಥಿಸಿ, ಋಷಿಗಳು ಕಲ್ಯಾಣವನ್ನೂ ಸ್ವಸ್ತಿಯನ್ನೂ ಬೇಡಿಕೊಳ್ಳುವರು.

ಒಮ್ಮೆ ಆರು ಜನ ಶಿಷ್ಯರು ಪಿಪ್ಪಲಾದಮುನಿಯ ಬಳಿಗೆ ಬಂದರು. ಮತ್ತು ಒಬ್ಬೊಬ್ಬರು ಒಂದೊಂದರಂತೆ ಆರು ಪ್ರಶ್ನೆಗಳನ್ನು ಕೇಳಿದರು. ಮುನಿಯು ಪ್ರತಿ ಪ್ರಶ್ನೆಗೆ ಸಮಾಧಾನಕರವಾದ ಉತ್ತರವನ್ನು ಕೊಟ್ಟು ಅವರೆಲ್ಲರನ್ನೂ ಸಂತುಷ್ಟಮಾಡಿದನು. ಒಂದು ಪ್ರಶ್ನೆ ಹಾಗೂ ಅದರ ಉತ್ತರ ಇವೆರಡೂ ಕೂಡಿ ಈ ಉಪನಿಷತ್ತಿನ ಒಂದು ಖಂಡವೆಂದೆನಿಸುವದು. ಇದರಂತೆ ಇದರಲ್ಲಿ ಆರು ಖಂಡಗಳಿರುವವು. ಈ ಖಂಡಗಳಿಗೆ ಖಂಡಗಳೆನ್ನದೆ ಮೊದಲನೆ ಪ್ರಶ್ನೆ, ಎರಡನೆ ಪ್ರಶ್ನೆ, ಮೂರನೆ ಪ್ರಶ್ನೆ, ಎಂದು ಅನ್ನುವ ರೂಢಿ.

ಈ ಪ್ರಜೆಗಳು ಎಲ್ಲಿಂದ ಉತ್ಪನ್ನರಾದರು, ಎಂಬುದೆ ಮೊದಲನೆ ಪ್ರಶ್ನೆಯು. ಇದಕ್ಕೆ ಉತ್ತರ ಕೊಡುವಾಗ ಮುನಿಗಳು ಹೇಳಿದ್ದೇನಂದರೆ, 'ಪ್ರಜಾಪತಿಯು ಪ್ರಜೆಗಳನ್ನುತ್ಪನ್ನ ಮಾಡುವ ಇಚ್ಛೆಯುಳ್ಳವನಾಗಿ ಜಡ ಮತ್ತು ಚೈತನ್ಯವೆಂಬ ಎರಡು ತತ್ವಗಳನ್ನು ನಿರ್ಮಿಸಿದನು. ಇಂದ್ರಿಯಗಳಿಗೆ ಗೋಚರವಾಗುವ ಸ್ಥೂಲಸೂಕ್ಷ್ಮವಾದದ್ದು ಎಲ್ಲವೂ ಜಡವು. ಇವುಗಳಲ್ಲಿ ಚಲನವಲನವನ್ನುಂಟುಮಾಡುವ ವಸ್ತುವೆ ಚೈತನ್ಯವು. ಚಂದ್ರನು ಜಡ ಸ್ವರೂಪನೆಂದೂ ಸೂರ್ಯನು ಚೈತನ್ಯಸ್ವರೂಪನೆಂದೂ ಋಷಿಗಳು ಕಲ್ಪಿಸಿರುವರು. ಸೂರ್ಯನು ತನ್ನ ಉದಯದಿಂದ ಈ ಚರಾಚರ ವಸ್ತುಗಳಲ್ಲಿ ಚೈತನ್ಯವನ್ನುಂಟುಮಾಡುವನು. ಚಂದ್ರಲೋಕವೆಂದರೆ ಸ್ವರ್ಗಲೋಕವು. ಪುಣ್ಯಕರ್ಮಗಳನ್ನು ಮಾಡುವವನು ಸ್ವರ್ಗಲೋಕಕ್ಕೆ ಹೋಗಿ ಅಲ್ಲಿ ತನ್ನ ಪುಣ್ಯದ ಪರಿಸಮಾಪ್ತಿಯಾಗುವವರೆಗೆ ಸುಖಗಳನ್ನನುಭವಿಸಿ ಪುನಃ ಜನ್ಮ ತಾಳುವನು. ಯಜ್ಞಯಾಗ ಪರೋಪಕಾರಾದಿ ಕರ್ಮಗಳನ್ನು ಮಾಡುವವರು ಚಂದ್ರಲೋಕವನ್ನು ಜಯಿಸುವರು. ಈ ಮಾರ್ಗಕ್ಕೆ ಪಿತೃಯಾನವೆಂದೆನ್ನುವರು. ಸೂರ್ಯಲೋಕವೆಂದರೆ ಪುನರ್ಜನ್ಮರಹಿತ ಮುಕ್ತರ ಸ್ಥಾನವು. ಜ್ಞಾನ ಶ್ರದ್ಧಾದಿಗಳಿಂದ ಈ ಸೂರ್ಯಲೋಕವು ಪ್ರಾಪ್ತವಾಗುವದು. ಈ ಮಾರ್ಗವು ದೇವಯಾನವೆನಿಸುವದು.' ಸಂವತ್ಸರವು ಪ್ರಜಾಪತಿಯೆಂದು ಕಲ್ಪಿಸಿ ದಕ್ಷಿಣ ಉತ್ತರಾಯಣಗಳು ಜಡ ಚೈತನ್ಯ ಮಾರ್ಗಗಳೆಂದೂ ಮಾಸವು ಪ್ರಜಾಪತಿಯೆಂದು ಕಲ್ಪಿಸಿ ಇರುಳು ಹಗಲುಗಳು ಜಡ ಚೈತನ್ಯಗಳೆಂದೂ ಮುನಿಗಳು ನಿರ್ಧರಿಸಿದ್ದಾರೆ. ಕೊನೆಗೆ ಅನ್ನವೆ ಪ್ರಜಾಪತಿಯೆಂದೂ ಅದರಿಂದಲೆ ರೇತಸ್ಸು, ಅದರಿಂದ ಪ್ರಜೆಗಳು, ಎಂದು ಹೇಳಿದ್ದಾರೆ.

ಈ ದೇಹಕ್ಕೆ ಯಾವ ಶಕ್ತಿಗಳು ಆಧಾರರೂಪವಾಗಿವೆ, ಅವುಗಳಲ್ಲಿ ಯಾವ ಶಕ್ತಿಯು ದೇಹವನ್ನು ಚೈತನ್ಯದಿಂದ ತುಂಬುವದು, ಅವುಗಳಲ್ಲಿ ವರಿಷ್ಠವಾದ ಶಕ್ತಿಯು ಯಾವದು, ಎಂಬುದು ಎರಡನೆ ಪ್ರಶ್ನೆಯು. 'ಪಂಚಭೂತಗಳೂ ಇಂದ್ರಿಯಗಳೂ ಈ ದೇಹಕ್ಕೆ ನಿಜವಾದ ಆಧಾರಗಳಲ್ಲ, ಪ್ರಾಣವೆ ಮುಖ್ಯ ಆಧಾರವು. ಅದಿದ್ದರೆ ಮಿಕ್ಕವುಗಳ ಇರವು, ಅದು ಹೋದರೆ ಮಿಕ್ಕವುಗಳ ಅಳಿವು. ಅದೇ ಎಲ್ಲಕ್ಕೂ ವರಿಷ್ಠವಾದದ್ದು. ಸೂರ್ಯ, ಇಂದ್ರ, ಮುಂತಾದ ಎಲ್ಲ ದೇವತೆಗಳು ಪ್ರಾಣದ ವಶದಲ್ಲಿರುವವು. ಪ್ರಾಣವೆ ವಿಶ್ವಪತಿಯು. ಅದೇ ಎಲ್ಲಕ್ಕೂ ಆಧಾರವು. ಅದೇ ಎಲ್ಲರ ಪ್ರೇರಕವು,' ಎಂಬುದೆ ಮುನಿಗಳ ಉತ್ತರವು.

ಈ ಪ್ರಾಣವು ಎಲ್ಲಿಂದ ಬರುವದು, ಈ ಶರೀರದಲ್ಲಿ ಹೇಗೆ ಸೇರುವದು ತನ್ನನ್ನು ಐದು ಬಗೆಯಾಗಿ ವಿಭಾಗಿಸಿ ಶರೀರದಲ್ಲಿ ಹೇಗೆ ವಾಸಿಸುವದು, ಹೊರಗೆ ಹೇಗೆ ಹೋಗುವದು, ಬಾಹ್ಯ ಪದಾರ್ಥಗಳನ್ನು ಹೇಗೆ ಧಾರಣ ಮಾಡುವದು, ದೇಹದೊಳಗಿನ ತತ್ವಗಳಿಗೆ ಹೇಗೆ ಆಧಾರ ಕೊಡುವದು, ಎಂಬುದು ಮೂರನೆ ಪ್ರಶ್ನೆಯು ಇದಕ್ಕೆ ಉತ್ತರವೇನಂದರೆ, 'ಆತ್ಮನಿಂದ ಪ್ರಾಣದ ಉತ್ಪತ್ತಿಯು, ಮನಸ್ಸನ್ನನುಲಕ್ಷಿಸಿ ಪ್ರಾಣವು ದೇಹವನ್ನು ಪ್ರವೇಶಿಸುವದು. ಅದು ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನವೆಂಬ ಐದು ಪ್ರಕಾರದ ಭಾಗಗಳನ್ನು ತನ್ನಲ್ಲಿ ತಾನೇ ಮಾಡಿಕೊಳ್ಳುವದು. ದೇಹದಲ್ಲಿ ಇವುಗಳಿಗೆ ಬೇರೆ ಬೇರೆ ಸ್ಥಳಗಳನ್ನು ನೇಮಿಸಿಕೊಡುವದು. ಪಾಯೂಪಸ್ಥವಲ್ಲಿ ಅಪಾನವು, ಕಣ್ಣು, ಕಿವಿ, ಮೊಗ, ಮೂಗುಗಳಲ್ಲಿ ಪ್ರಾಣವು, ಜಠರದಲ್ಲಿ ಸಮಾನವು, ನಾಡಿಗಳಲ್ಲಿ ವ್ಯಾನವು, ಕಂಠದಲ್ಲಿ ಉದಾನವು, ಹೀಗೆ ಈ ಪಂಚಪ್ರಾಣಗಳ ವ್ಯವಸ್ಥೆಯು. ಪ್ರಾಣವು ಈ ದೇಹವನ್ನು ಬಿಟ್ಟು ಹೊರಗೆ ಹೋಗಬೇಕಾದರೆ ಉದಾನವನ್ನು ಆಶ್ರಯಿಸಿ ಹೋಗುವದು. ಆದಿತ್ಯ, ಪೃಥಿವಿ, ಆಕಾಶ, ವಾಯು, ತೇಜ ಇವು ಅನುಕ್ರಮವಾಗಿ ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನಗಳೆನಿಸಿ ಬಾಹ್ಯಪದಾರ್ಥಗಳಿಗೆ ಆಧಾರವಾಗಿರುವವು. ಅಪಾನ, ಪ್ರಾಣ, ಸಮಾನ, ವ್ಯಾನ, ಉದಾನ ಎಂಬ ರೂಪಗಳನ್ನು ತಾಳಿ ದೇಹದೊಳಗಿನ ತತ್ವಗಳಿಗೆ ಪ್ರಾಣವು ಆಧಾರವಾಗಿರುವದು.'

ದೇಹದಲ್ಲಿ ಯಾರು ಮಲಗುವರು, ಯಾರು ಎಚ್ಚರಿರುವರು, ಕನಸು

ಗಳನ್ನು ಯಾರು ಕಾಣುವರು, ಸುಖವು ಯಾರಿಗಾಗುವದು, ಎಲ್ಲ ಶಕ್ತಿಗಳು ಯಾರಲ್ಲಿ ಪ್ರತಿಷ್ಠಿತವಿರುವವು, ಎಂಬುದು ನಾಲ್ಕನೆ ಪ್ರಶ್ನೆಯು. ಮುನಿಗಳು ಹೇಳುವುದೇನಂದರೆ, ' ಎಲ್ಲ ಶಕ್ತಿಗಳು ಮನಸ್ಸಿನಲ್ಲಿ ಒಂದಾಗಿ ಮಲಗುವವು. ಪ್ರಾಣಾಗ್ನಿಗಳು ಮಾತ್ರ ಎಚ್ಚರಿರುವವು. ಅವು ತಮ್ಮತಮ್ಮ ಕಾರ್ಯ ಗಳನ್ನು ಸತತ ಮಾಡುತ್ತಿರುವವು. ಮನಸ್ಸೇ ಸ್ವಪ್ನವನ್ನು ನೋಡುವ ದೇವತೆಯು. ನಾನಾತರದ ಶಕ್ಯಾಶಕ್ಯ ದೃಷ್ಟಾದೃಷ್ಟ ಪದಾರ್ಥಗಳು ಸ್ವಪ್ನ ದಲ್ಲಿ ಮನಸ್ಸಿನಲ್ಲಿ ಗೋಚರವಾಗುವವು. ಸುಷುಪ್ತಿಕಾಲದಲ್ಲಿ ಅಥವಾ ಪೂರ್ಣಜ್ಞಾನವಾಯಿತೆಂದರೆ ಆತ್ಮನು ಸುಖಿಯಾಗುವನು, ಮನಸ್ಸಾದರೂ ಸುಖವನ್ನನುಭವಿಸುವದು. ಸುಷುಪ್ತಿಯಲ್ಲಿ ಎಲ್ಲ ಭೂತಗಳೂ ಅವುಗಳ ತನ್ಮಾತ್ರೆಗಳೂ ಎಲ್ಲ ಇಂದ್ರಿಯಗಳೂ ಇಂದ್ರಿಯವಿಷಯಗಳೂ ಆತ್ಮನಲ್ಲಿ ಲೀನವಾಗಿ ಹೋಗುವವು. ಆತ್ಮನೆ ನೋಡುವವನು, ಕೇಳುವವನು, ನುಡಿಯುವವನು. ಅವನು ಪರಮ ಶ್ರೇಷ್ಠವಾದ ಅಕ್ಷರ ಬ್ರಹ್ಮನಲ್ಲಿ ಪ್ರತಿಷ್ಠಿ ತನು. ಆ ಪರಬ್ರಹ್ಮವೆ ಎಲ್ಲರ ಪ್ರತಿಷ್ಠೆಯು. '

ಮನುಷ್ಯನು ಸಾಯುವವರೆಗೆ ಓಂಕಾರದ ಧ್ಯಾನಮಾಡಿದರೆ ಅವನು ಯಾವ ಲೋಕವನ್ನು ಪಡೆಯುವನು, ಎಂಬುದು ಐದನೆ ಪ್ರಶ್ನೆಯು. ಮುನಿ ಗಳು ಈ ಪ್ರಶ್ನೆಯನ್ನು ಕುರಿತು ಹೇಳುವದೇನಂದರೆ, ' ಪರ ಅಪರ ಬ್ರಹ್ಮ ಗಳನ್ನು ಈ ಓಂಕಾರವು ಒಳಗೊಂಡಿರುವದು. ಓಂಕಾರ ಧ್ಯಾನದಿಂದ ಪರ-ಅಪರ ಬ್ರಹ್ಮಗಳಲ್ಲಿ ಒಂದನ್ನು ಮನುಷ್ಯನು ಸಂಪಾದಿಸುವನು. ಓಂಕಾರವು ಮೂರು ಮಾತ್ರೆಗಳುಳ್ಳದು. ಅಕಾರ, ಉಕಾರ, ಮಕಾರಗಳೆ ಆ ಮಾತ್ರೆಗಳು. ಮೊದಲನೆ ಮಾತ್ರೆಯ ಧ್ಯಾನಮಾಡುವದೆಂದರೆ, ಋಗ್ವೇದದ ಉಪಾಸನೆ ಮಾಡುವದು. ಈ ಲೋಕದಲ್ಲಿ ಮಹಿಮೆಯನ್ನನುಭವಿಸುವದೆ ಮೊದಲನೆ ಮಾತ್ರೆಯ ಧ್ಯಾನದ ಫಲವು. ಎರಡನೆ ಮಾತ್ರೆಯ ಧ್ಯಾನಮಾಡುವದೆಂದರೆ, ಯಜುರ್ವೇದವಿಹಿತವಾದ ಯಜ್ಞಯಾಗಾದಿ ಪುಣ್ಯ-ಕರ್ಮಗಳನ್ನು ಮಾಡು ವದು. ಪುಣ್ಯವು ತೀರುವವರೆಗೆ ಸ್ವರ್ಗಲೋಕದಲ್ಲಿ ಸುಖಗಳನ್ನನುಭವಿಸಿ ತಿರುಗಿ ಬರುವದೆ ಎರಡನೆ ಮಾತ್ರೆಯ ಧ್ಯಾನದ ಫಲ. ಮೂರು ಮಾತ್ರೆಗಳನ್ನು ಕೂಡಿಸಿ ಓಂಕಾರದ ಧ್ಯಾನಮಾಡುವವನು ಪುನರ್ಜನ್ಮರಹಿತವಾದ ಸೂರ್ಯ ಲೋಕ ಅಥವಾ ಬ್ರಹ್ಮಲೋಕಕ್ಕೆ ತೆರಳುವನು. ಅದೇ ಅಮೃತಪದವು. '

ಷೋಡಶಕಲಾ (ಅಂಶ ಅಥವಾ ಭಾಗ) ಯುಕ್ತ ಪುರುಷನು ಯಾರು, ಎಂಬುದು ಆರನೆ ಪ್ರಶ್ನೆಯು. ಇದಕ್ಕೆ ಉತ್ತರ ಕೊಡುವಾಗ ಮುನಿಗಳು ಅಂದದ್ದು, 'ಈ ಶರೀರದಲ್ಲಿಯೆ ಆ ಪುರುಷನು ಇರುವನು. ಆ ಪುರುಷನೆ ಪ್ರಾಣ, ಶ್ರದ್ಧೆ, ಆಕಾಶ, ವಾಯು, ತೇಜ, ಆಪ, ಪೃಥಿವಿ, ಇಂದ್ರಿಯಗಳು, ಮನ, ಅನ್ನ, ವೀರ್ಯ, ತಪ, ಮಂತ್ರ, ಕರ್ಮ, ಲೋಕ, ನಾಮ ಎಂಬ ಹದಿನಾರು ಕಲೆಗಳನ್ನು ಉತ್ಪನ್ನ ಮಾಡಿದನು. ಇವೆಲ್ಲವೂ ಪುರುಷನಲ್ಲಿ ಲೀನವಾಗುವವು. ಭಿನ್ನ ಭಿನ್ನ ನದಿಗಳು ಸಮುದ್ರದಲ್ಲಿ ಕೂಡಿ ನಾಮರಹಿತ ವಾಗುವಂತೆ ಎಲ್ಲ ವ್ಯಕ್ತ ಪದಾರ್ಥಗಳು ಈ ಪುರುಷನಲ್ಲಿ ಲಯಹೊಂದಿ ನಿರ್ನಾಮವಾಗಿ ಹೋಗುವವು. ಎಲ್ಲ ದೇವತೆಗಳು, ಪ್ರಾಣಗಳು, ಭೂತಗಳು ಈ ಪರಮ ಪುರುಷನಲ್ಲಿ ಪ್ರತಿಷ್ಠಿತವಾಗಿವೆ. ಇವನೇ ಆ ಷೋಡಶಕಲಾ ಯುಕ್ತ ಪುರುಷನು.' ಹೀಗೆ ಆರನೆ ಅಂದರೆ ಕೊನೆಯ ಪ್ರಶ್ನೆಯ ಸಾರಾಂಶ ವಿರುವದು. ಈ ಕಲೆಗಳೆಲ್ಲ ಆತ್ಮನಿಂದಲೆ ಆವಿರ್ಭವಿಸಿ ಆತ್ಮನಲ್ಲಿಯೆ ಲಯ ಹೊಂದುವವು ಎಂದು ಪ್ರತಿಪಾದಿಸುವದೆ ಉಪನಿಷತ್ಕಾರರ ಉದ್ದೇಶವು.

# ಪ್ರಶ್ನೋಪನಿಷತ್

## ಶಾಂತಿಮಂತ್ರ

**ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯ-ಜತ್ರಾಃ॥ ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿರ್ವ್ಯಶೇಮ ದೇವಹಿತಂ ಯದಾಯುಃ॥ ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ಸ್ವಸ್ತಿ ನಃ ಪೂಷಾ ವಿಶ್ವವೇದಾಃ ॥ ಸ್ವಸ್ತಿ ನಸ್ತಾ-ರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

## ಉಪನಿಷತ್

**ಓಂ ಸುಕೇಶಾ ಚ ಭಾರದ್ವಾಜಃ ಶೈಬ್ಯಶ್ಚ ಸತ್ಯಕಾಮಃ ಸೌರ್ಯಾಯಣೀ ಚ**

---

**ಅನುವಾದ:—** ಮಾಂಡೂಕ್ಯ ಉಪನಿಷತ್ತಿನ ಶಾಂತಿ ಮಂತ್ರದಂತೆ.

**ಮಂತ್ರಗಳ ಅನುವಾದ:—** (೧) ಭರದ್ವಾಜಪುತ್ರನಾದ ಸುಕೇಶ, ಶಿಬಿಪುತ್ರನಾದ ಸತ್ಯಕಾಮ, ಗರ್ಗವಂಶೋತ್ಪನ್ನನಾದ ಸೌರ್ಯಾಯಣಿ,

ಗಾರ್ಗ್ಯಃ ಕೌಸಲ್ಯಶ್ಚಾಶ್ವಲಾಯನೋ ಭಾರ್ಗವೋ ವೈದರ್ಭಿಃ ಕಬಂಧೀ ಕಾತ್ಯಾಯನಸ್ತೇ ಹೈತೇ ಬ್ರಹ್ಮಪರಾ ಬ್ರಹ್ಮನಿಷ್ಠಾಃ ಪರಂ ಬ್ರಹ್ಮಾನ್ವೇಷಮಾಣಾ ಏಷ ಹ ವೈ ತತ್ಸರ್ವಂ ವಕ್ಷ್ಯತೀತಿ ತೇ ಹ ಸಮಿತ್ಪಾಣಯೋ ಭಗವಂತಂ ಪಿಪ್ಪಲಾದಮುಪಸನ್ನಾಃ ॥ ೧ ॥ ತಾನ್ಹ ಸ ಋಷಿರುವಾಚ ಭೂಯ ಏವ ತಪಸಾ ಬ್ರಹಚರ್ಯೇಣ ಶ್ರದ್ಧಯಾ ॥ ಸಂವತ್ಸರಂ ಸಂವತ್ಸ್ಯಥ ಯಥಾಕಾಮಂ ಪ್ರಶ್ನಾನ್ ಪ್ರಚ್ಛಥ ಯದಿ ವಿಜ್ಞಾಸ್ಯಾಮಃ ಸರ್ವಂ ಹ ವಾ ವಕ್ಷ್ಯಾಮ ಇತಿ ॥ ೨ ॥ ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ॥ ಭಗವನ್ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯಂತ ಇತಿ ॥ ೩ ॥ ತಸ್ಮೈ ಸ ಹೋವಾಚ ಪ್ರಜಾಕಾಮೋ ವೈ ಪ್ರಜಾಪತಿಃ ಸ ತಪೋಽತಪ್ಯತ ಸ ತಪಸ್ತಪ್ತ್ವಾ ಸ ಮಿಥುನಮುತ್ಪಾದಯತೇ ರಯಿಂ ಚ ಪ್ರಾಣಂ ಚೇತ್ಯೇತೌ ಮೇ ಬಹುಧಾಃ ಪ್ರಜಾಃ ಕರಿಷ್ಯ ಇತಿ ॥ ೪ ॥ ಆದಿತ್ಯೋ ಹ ವೈ ಪ್ರಾಣೋ ರಯಿರೇವ ಚಂದ್ರಮಾ ರಯಿರ್ವಾ ಏತತ್ಸರ್ವಂ ಯನ್ಮೂರ್ತಂ ಚಾಮೂರ್ತಂ ಚ ತಸ್ಮಾನ್ಮೂರ್ತಿರೇವ ರಯಿಃ ॥ ೫ ॥ ಯಥಾದಿತ್ಯ ಉದಯನ್ಯತ್ಪ್ರಾಚೀಂ ದಿಶಂ

---

ಅಶ್ವಲಾಯನಪುತ್ರನಾದ ಕೌಸಲ್ಯ, ವಿದರ್ಭದೇಶದ ಭಾರ್ಗವ, ಕತ್ಯಯನಪುತ್ರನಾದ ಕಬಂಧಿ, ಈ ಆರು ಜನರು ಬ್ರಹ್ಮನಲ್ಲಿ ಭಕ್ತಿಯುಳ್ಳವರು, ಬ್ರಹ್ಮನಿಷ್ಠರು, ಬ್ರಹ್ಮಪ್ರಾಪ್ತಿಗಾಗಿ ಯತ್ನಿಸುವವರು, ತಮಗೆ ಇವನು ಎಲ್ಲ (ಬ್ರಹ್ಮಜ್ಞಾನವನ್ನು) ಹೇಳುವನೆಂದು ತಿಳಿದು ಕೈಯಲ್ಲಿ ಸಮಿಧೆಯನ್ನು ಹಿಡಿದುಕೊಂಡು ( ಶಿಷ್ಯರೋಪಾದಿಯಲ್ಲಿ ) ಭಗವಾನ್ ಪಿಪ್ಪಲಾದ ಮುನಿಯ ಬಳಿಗೆ ಹೋದರು. (೨) ಅವರನ್ನು ಕುರಿತು ಋಷಿಯು, ' ಶ್ರದ್ಧಾಯುಕ್ತರಾಗಿ ಬ್ರಹ್ಮಚರ್ಯವ್ರತದಿಂದ ತಪಸ್ಸು ಮಾಡುತ್ತ ಒಂದು ವರ್ಷ ಇಲ್ಲಿ ಇದ್ದುಕೊಳ್ಳಿರಿ, ಸ್ವೇಚ್ಛಾನುಸಾರವಾಗಿ ಪ್ರಶ್ನೆಮಾಡಿರಿ. ನಮಗೆ ಗೊತ್ತಿದ್ದ ಮಟ್ಟಿಗೆ ಉತ್ತರಗಳನ್ನು ಹೇಳುವೆವು,' ಎಂದನು. (೩) ಆಮೇಲೆ ( ಕೆಲವು ಕಾಲವು ಹೋದ ಮೇಲೆ ) ಕತ್ಯಯನಪುತ್ರನಾದ ಕಬಂಧಿಯು ಅವರೆಡೆಗೆ ಬಂದು, ಹೇ ಭಗವನ್, ಈ ಪ್ರಜೆಗಳು ಎಲ್ಲಿಂದ ಉತ್ಪನ್ನರಾಗುವರು, ಎಂದು ಕೇಳಿದನು. (೪) ಮುನಿಯು ಅಂದದ್ದು, ಪ್ರಜೆಗಳನ್ನಿಚ್ಛಿಸುವ ಪ್ರಜಾಪತಿಯು ತಪಸ್ಸು ಮಾಡಿದನು ತಪಸ್ಸು ಮಾಡಿ ಇವೆರಡೂ ಕೂಡಿ ನಾನಾ ಬಗೆಯ ಪ್ರಜೆಗಳನ್ನು ಹುಟ್ಟಿಸಲೆಂದು ರಯಿ (ಅನ್ನ ಅಥವಾ ಜಡ) ಮತ್ತು ಪ್ರಾಣ (ಶಕ್ತಿ ಅಥವಾ ಚೈತನ್ಯ) ಎಂಬ ಮಿಥುನವನ್ನು (ಜೋಡಿ) ಉತ್ಪನ್ನ ಮಾಡಿದನು. (೫) ಆದಿತ್ಯನೆ ಪ್ರಾಣತತ್ವವು. ಚಂದ್ರನೆ ರಯಿಯು (ಜಡತತ್ವವು).

ಪ್ರವಿಶತಿ ತೇನ ಪ್ರಾಚ್ಯಾನ್ಪ್ರಾಣಾನ್ರಶ್ಮಿಷು ಸನ್ನಿಧತ್ತೇ॥ ಯದ್ದಕ್ಷಿಣಾಂ ಯತ್ಪ್ರತೀಚೀಂ ಯದುದೀಚೀಂ ಯದಧೋ ಯದೂರ್ಧ್ವಂ ಯದಂತರಾದಿಶೋ ಯತ್ಸರ್ವಂ ಪ್ರಕಾಶಯತಿ ತೇನ ಸರ್ವಾನ್ಪ್ರಾಣಾನ್ ರಶ್ಮಿಷು ಸನ್ನಿಧತ್ತೇ ॥ ೬ ॥ ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋಽಗ್ನಿರುದಯತೇ ॥ ತದೇತದೃಚಾಭ್ಯುಕ್ತಮ್ ॥ ೭ ॥ ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ ಜ್ಯೋತಿರೇಕಂ ತಪಂತಮ್ ॥ ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥ ೮ ॥ ಸಂವತ್ಸರೋ ವೈ ಪ್ರಜಾಪತಿಸ್ತಸ್ಯಾಯನೇ ದಕ್ಷಿಣಂ ಚೋತ್ತರಂ ಚ ॥ ತದ್ಯೇ ಹ ವೈ ತದಿಷ್ಟಾಪೂರ್ತೇ ಕೃತಮಿತ್ಯುಪಾಸತೇ ತೇ ಚಾಂದ್ರಮಸಮೇವ ಲೋಕಮಭಿಜಯಂತೇ ॥ ತ ಏವ ಪುನರಾವರ್ತಂತೇ ತಸ್ಮಾದೇತೇ ಋಷಯಃ ಪ್ರಜಾಕಾಮಾ ದಕ್ಷಿಣಂ ಪ್ರತಿಪದ್ಯಂತೇ ॥ ಏಷ ಹ ವೈ ರಯಿರ್ಯಃ ಪಿತೃಯಾಣಃ ॥ ೯ ॥ ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾತ್ಮಾನ-

---

ಮೂರ್ತಾಮೂರ್ತವಾದ ಇದೆಲ್ಲವೂ ರಯಿಯು (ಜಡವು), ಆದುದರಿಂದ ಮೂರ್ತವಿದ್ದುದೆಲ್ಲ ರಯಿಯೆ. (೬) ಸೂರ್ಯನು ಉದಯಿಸಿ ಪೂರ್ವದಲ್ಲಿ ಮೂಡಿದನೆಂದರೆ ಪೂರ್ವದಿಕ್ಕಿನಲ್ಲಿರುವ ಪ್ರಾಣ (ಶಕ್ತಿ) ಗಳನ್ನು ಕಿರಣಗಳಿಂದ ಪ್ರೇರಿಸುವನು (ಸಂನಿಧತ್ತೇ ಅಂದರೆ ಇಡುವನು). ದಕ್ಷಿಣ ಪಶ್ಚಿಮ ಉತ್ತರ, ಕೆಳಗೆ, ಮೇಲೆ, ಅಂತರಿಕ್ಷ ಎಂಬ ಎಲ್ಲ ದಿಕ್ಕುಗಳಲ್ಲಿ ಸರ್ವವಸ್ತುಗಳನ್ನು ಬೆಳಗಿ ಎಲ್ಲ ಪ್ರಾಣಗಳನ್ನು (ಶಕ್ತಿಗಳನ್ನು) ತನ್ನ ಕಿರಣಗಳಿಂದ ಪ್ರೇರಿಸುವನು. (೭) ಅವನೇ (ಆದಿತ್ಯನೇ) ಈ ವಿಶ್ವರೂಪ ವೈಶ್ವಾನರನು, (ಜೀವಾತ್ಮಕ ಅಗ್ನಿಯು) ಪ್ರಾಣನು, ಅಗ್ನಿಯು. ಅವನು ಉದಯಿಸುವನು. ಅದು ಈ ಕೆಳಗಣ ಮಂತ್ರದಿಂದ ಹೇಳಲ್ಪಟ್ಟಿರುವದು. (೮) ಇದು ನಾನಾ ರೂಪಗಳುಳ್ಳದ್ದು, ಕಿರಣಯುಕ್ತವಾದದ್ದು. ಇದು ಅಗ್ನಿಯು, ಇದು ಶ್ರೇಷ್ಠವಾದ ಸ್ಥಾನವು, ಇದೊಂದೆ ಪ್ರಕಾಶವುಳ್ಳ ಜ್ಯೋತಿಯು, ಸಹಸ್ರಕಿರಣಗಳುಳ್ಳ, ನೂರಾರು ಬಗೆಯಿಂದ ವರ್ತಿಸುವ, ಪ್ರಜೆಗಳ ಪ್ರಾಣನಾದ ಈ ಸೂರ್ಯನು ಉದಯಿಸುತ್ತಿರುವನು. (೯) ಸಂವತ್ಸರವು (ವರ್ಷವು) ಪ್ರಜಾಪತಿಯೆನಿಸುವುದು. ಅದಕ್ಕೆ ದಕ್ಷಿಣಾಯನ ಉತ್ತರಾಯಣವೆಂಬ ಎರಡು ಗತಿಗಳು. ಯಾರು ಇಷ್ಟಾಪೂರ್ತಿಕರ್ಮಗಳನ್ನು ಮಾಡಿ ಇದನ್ನು ಉಪಾಸಿಸುವರೊ ಅವರು ಚಂದ್ರಲೋಕವನ್ನು ಜಯಿಸುವರು. ಅವರು ಅಲ್ಲಿಂದ ಪುನಃ ತಿರುಗಿ ಬರುವರು. ಆದುದರಿಂದ ಪ್ರಜೆಗಳನ್ನಿಚ್ಛಿಸುವ ಈ ಋಷಿಗಳು ದಕ್ಷಿಣ

ಮನ್ವಿಷ್ಯಾದಿತ್ಯಮಭಿಜಯಂತ ಏತದ್ವೈ ಪ್ರಾಣಾನಾಮಾಯತನಮೇತದಮೃತಮ-ಭಯಮೇತಸ್ಮಾನ್ನ ಪುನರಾವರ್ತಂತ ಇತ್ಯೇಷ ನಿರೋಧಃ ॥ ತದೇಷ ಶ್ಲೋಕಃ ॥ ೧೦ ॥ ಪಂಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ ಪರೇ ಅರ್ಧೇ ಪುರೀ-ಷಿಣಮ್ ॥ ಅಥೇಮೇ ಅನ್ಯ ಉಪರೇ ವಿಚಕ್ಷಣಂ ಸಪ್ತಚಕ್ರೇ ಷಳರ ಆಹುರರ್ಪಿತ ಮಿತಿ ॥ ೧೧ ॥ ಮಾಸೋ ವೈ ಪ್ರಜಾಪತಿಸ್ತಸ್ಯ ಕೃಷ್ಣಪಕ್ಷ ಏವ ರಯಿಃ ಶುಕ್ಲಃ ಪ್ರಾಣಸ್ತಸ್ಮಾದೇತೇ ಋಷಯಃ ಶುಕ್ಲ ಇಷ್ಟಿಂ ಕುರ್ವಂತೀತರ ಇತರಸ್ಮಿನ್ ॥ ೧೨ ॥ ಅಹೋರಾತ್ರೋ ವೈ ಪ್ರಜಾಪತಿಸ್ತಸ್ಯಾಹರೇವ ಪ್ರಾಣೋ ರಾತ್ರಿರೇವ ರಯಿಃ ಪ್ರಾಣಂ ವಾ ಏತೇ ಪ್ರಸ್ಕಂದಂತಿ ॥ ಯೇ ದಿವಾ ರತ್ಯಾ ಸಂಯುಜ್ಯಂತೇ ಬ್ರಹ್ಮಚರ್ಯಮೇವ ತದ್ಯದ್ರಾತ್ರೌ ರತ್ಯಾ ಸಂಯುಜ್ಯಂತೇ ॥ ೧೩ ॥ ಅನ್ನಂ

ಮಾರ್ಗವನ್ನು ಆಶ್ರಯಿಸುವರು. ಇದೇ ರಯಿಯು. ಪಿತೃಯಾನವೆಂಬದು ಇದೇ. (೧೦) ಇನ್ನು ಉತ್ತರ ಮಾರ್ಗವನ್ನವಲಂಬಿಸಿ, ತಪಸ್ಸು, ಬ್ರಹ್ಮ-ಚರ್ಯ, ಶ್ರದ್ಧೆ, ವಿದ್ಯೆಗಳಿಂದ ಆತ್ಮನನ್ನರಿತುಕೊಂಡು ಆದಿತ್ಯನನ್ನು (ಆದಿತ್ಯ ಲೋಕವನ್ನು) ಜಯಿಸುವರು. ಇದೇ (ಸೂರ್ಯನೆ) ಪ್ರಾಣದ ಆಧಾರವು. ಇದು ಅಮೃತವು. ಭಯರಹಿತವು. ಇದು ಎಲ್ಲಕ್ಕೂ ಶ್ರೇಷ್ಠವಾದ ಗತಿಯು. ಇಲ್ಲಿಂದ (ಇಲ್ಲಿಗೆ ಮುಟ್ಟಿದ ಬಳಿಕ) ತಿರುಗಿ ಬರುವುದಿಲ್ಲ (ಅವರಿಗೆ ಪುನರ್ಜನ್ಮವಿಲ್ಲ). ಹೀಗೆ ನಿರೋಧವಿರುವುದು (ನಿಯಮವಿರುವುದು). ಆ ಶ್ಲೋಕವು ಇದು (ಅದರ ಬಗ್ಗೆ ಈ ಶ್ಲೋಕವು ಹೇಳಲ್ಪಟ್ಟಿರುವುದು). (೧೧) ಅತ್ತ ಕಡೆಯ ಅರ್ಧದಲ್ಲಿರುವವನಿಗೆ (ದಕ್ಷಿಣಾಯನದಲ್ಲಿರುವ ಸೂರ್ಯನಿಗೆ) ದೇವತೆಗಳು ಪಂಚಪಾದಗಳುಳ್ಳವನೆಂದೂ (ಶಿಶಿರ ಹೇಮಂತ ಕೂಡಿ ಒಂದು ಮತ್ತು ಮಿಕ್ಕ ನಾಲ್ಕು ಹೀಗೆ ಒಟ್ಟು ಐದು ಋತುಗಳು) ತಂದೆಯೆಂದೂ ದ್ವಾದಶ ಆಕೃತಿಗಳುಳ್ಳವನೆಂದೂ ಸೃಷ್ಟಿಯನ್ನು ಪೂರೈಸುವವನೆಂದೂ ಅನ್ನುವರು. ಇನ್ನೊಂದರ್ಧದಲ್ಲಿರುವವನಿಗೆ (ಉತ್ತರಾಯಣದಲ್ಲಿರುವ ಸೂರ್ಯನಿಗೆ) ಆರಾರು ಅರಿಗಳುಳ್ಳ (ಹಲ್ಲುಗಳುಳ್ಳ) ಏಳು ಗಾಲಿಗಳುಳ್ಳ ರಥದಲ್ಲಿ ಆರೂಢನಾದ ವಿದ್ವಾಂಸನೆನ್ನುವರು. (೧೨) ಮಾಸವು ಪ್ರಜಾಪ್ರತಿಯು. ಕೃಷ್ಣ-ಪಕ್ಷವೆ ರಯಿಯು, ಶುಕ್ಲಪಕ್ಷವೆ ಪ್ರಾಣವು. ಆದುದರಿಂದ ಈ ಋಷಿಗಳು ಶುಕ್ಲಪಕ್ಷದಲ್ಲಿ ಯಜ್ಞಕರ್ಮವನ್ನು ಮಾಡುವರು. ಇತರರು ಇತರ ಪಕ್ಷದಲ್ಲಿ (ಕೃಷ್ಣಪಕ್ಷದಲ್ಲಿ) ಮಾಡುವರು. (೧೩) ಹಗಲಿರುಳು (ಇವೆರಡೂ ಕೂಡಿ) ಪ್ರಜಾಪತಿಯು. ಹಗಲೆ ಪ್ರಾಣವು, ಇರುಳೆ ರಯಿಯು. ಹಗಲು ಸ್ತ್ರೀಸಂಗ

ವೈ ಪ್ರಜಾಪತಿಸ್ತತೋ ಹ ವೈ ತದ್ರೇತಸ್ತಸ್ಮಾದಿಮಾಃ ಪ್ರಜಾಃ ಪ್ರಜಾಯಂತ ಇತಿ ॥ ೧೪ ॥ ತದ್ಯೇ ಹ ವೈ ತತ್ಪ್ರಜಾಪತಿವ್ರತಂ ಚರಂತಿ ಯೇ ಮಿಥುನಮುತ್ಪಾದಯಂತೇ ॥ ತೇಷಾಮೇವೈಷ ಬ್ರಹ್ಮಲೋಕೋ ಯೇಷಾಂ ತಪೋ ಬ್ರಹ್ಮಚರ್ಯಂ ಯೇಷು ಸತ್ಯಂ ಪ್ರತಿಷ್ಠಿತಮ್ ॥ ೧೫ ॥ ತೇಷಾಮಸೌ ವಿರಜೋ ಬ್ರಹ್ಮಲೋಕೋ ನ ಯೇಷು ಜಿಹ್ಮಮನೃತಂ ನ ಮಾಯಾ ಚೇತಿ ॥ ಇತಿ ಪ್ರಥಮಃ ಪ್ರಶ್ನಃ ॥

ಅಥ ಹೈನಂ ಭಾರ್ಗವೋ ವೈದರ್ಭಿಃ ಪಪ್ರಚ್ಛ॥ ಭಗವನ್ಕತ್ಯೇವ ದೇವಾಃ ಪ್ರಜಾಃ ವಿಧಾರಯಂತೇ ಕತರ ಏತತ್ಪ್ರಕಾಶಯಂತೇ ಕಃ ಪುನರೇಷಾಂ ವರಿಷ್ಠಃ ॥ ೧ ॥ ತಸ್ಮೈ ಸ ಹೋವಾಚಾಕಾಶೋ ಹ ವಾ ಏಷ ದೇವೋ ವಾಯುರಗ್ನಿರಾಪಃ ಪೃಥಿವೀ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ ॥ ತೇ ಪ್ರಕಾಶ್ಯಾಭಿವದಂತಿ ವಯಮೇತದ್ಬಾಣಮವಷ್ಟಭ್ಯ ವಿಧಾರಯಾಮಃ ॥ ೨ ॥ ತಾನ್ವರಿಷ್ಠಃ ಪ್ರಾಣ ಉವಾಚ ಮಾಮೋಹಮಾ-

ಮಾಡುವವರು ಪ್ರಾಣವನ್ನು ಹಾಳುಮಾಡುವರು. ಇರುಳು ಸ್ತ್ರೀಸಂಗ ಮಾಡುವುದು ಬ್ರಹ್ಮಚರ್ಯವೆಂದೆನಿಸುವುದು. (೧೪) ಅನ್ನವೆ ಪ್ರಜಾಪತಿಯು. ಅದರಿಂದ ರೇತಸ್ಸಿನ ಉತ್ಪತ್ತಿಯು. ಅದರಿಂದಲೆ ಮುಂದೆ ಪ್ರಜೆಗಳು ಹುಟ್ಟುವರು. (೧೫) ಆದುದರಿಂದ ಯಾರು ಮಿಥುನವನ್ನುತ್ಪನ್ನ ಮಾಡುವರೊ ಅವರು ಪ್ರಜಾಪತಿ ವ್ರತವನ್ನು ಆಚರಿಸುವರು. ಯಾರಲ್ಲಿ ಬ್ರಹ್ಮಚರ್ಯವೂ ತಪವೂ ಸ್ಥಿರವಿರುವವೊ ಅವರದೆ ಈ ಬ್ರಹ್ಮಲೋಕವು. (೧೬) ಯಾರಲ್ಲಿ ಠಕ್ಕತನವೂ ಅನೃತವೂ ಕಪಟವೂ ಇಲ್ಲವೊ ಅವರದೆ ಈ ಪವಿತ್ರವಾದ ಬ್ರಹ್ಮಲೋಕವು.

ಇಲ್ಲಿಗೆ ಪ್ರಥಮ ಪ್ರಶ್ನೆಯು ಸಮಾಪ್ತವು.

(೧) ಆಮೇಲೆ ವಿದರ್ಭ ದೇಶದ ಭಾರ್ಗವನು ಪಿಪ್ಪಲಾದನನ್ನು ಕೇಳಿದನು. 'ಭಗವನ್, ಎಷ್ಟು ದೇವತೆಗಳು (ಶಕ್ತಿಗಳು) ಪ್ರಜೆಗಳಿಗೆ ಆಧಾರವಾಗಿ ನಿಂತಿರುವವು? ಈ ದೇವತೆಗಳಲ್ಲಿ ಇದನ್ನು (ಈ ಶರೀರವನ್ನು) ಪ್ರಕಾಶಿಸುವವರು ಯಾರು? ಮತ್ತು ಈ ದೇವತೆಗಳಲ್ಲಿ ವರಿಷ್ಠರು ಯಾರು?' (೨) ಅವನನ್ನು ಕುರಿತು ಋಷಿಯು ಅಂದದ್ದು, ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ವಾಣಿ, ಮನ, ಚಕ್ಷು, ಶ್ರೋತ್ರ ಇವೇ ಆ ದೇವತೆಗಳು. ಈ ದೇವತೆಗಳು (ಶರೀರವನ್ನು) ಪ್ರಕಾಶಗೊಳಿಸಿ (ಅದನ್ನು ಚೈತನ್ಯಮಯ ಮಾಡಿ), ತಾವು ಸ್ಥಿರವಾಗಿ ನಿಂತು ಈ ಶರೀರಕ್ಕೆ ಆಧಾರವಾಗಿರುವವೆಂದು

ಪದ್ಯಥಾಹಮೇವೈತತ್ಪಂಚಧಾತ್ಮಾನಂ ಪ್ರವಿಭಜ್ಯೈತದ್ಬಾಣಮುವಷ್ಟಭ್ಯ ವಿಧಾರಯಾಮೀತಿ ॥ ೩ ॥ ತೇಽಶ್ರದ್ಧಧಾನಾ ಬಭೂವುಃ ಸೋಽಭಿಮಾನಾದೂರ್ಧ್ವಮುತ್ಕ್ರಮತ ಇವ ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ ಏವೋತ್ಕ್ರಾಮಂತೇ ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವ ಏವ ಪ್ರತಿಷ್ಠಂತೇ ತದ್ಯಥಾ ಮಕ್ಷಿಕಾ ಮಧುಕರರಾಜಾನಮುತ್ಕ್ರಾಮಂತಂ ಸರ್ವಾ ಏವೋತ್ಕ್ರಾಮಂತೇ ಏವಮುಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವಾ ಏವ ಪ್ರತಿಷ್ಠಂತ ಏವಂ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ ತೇ ಪ್ರೀತಾಃ ಪ್ರಾಣಂ ಬ್ರುವಂತಿ ॥ ೪ ॥ ಏಷೋಽಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ ಮಘವಾನೇಷ ವಾಯುರೇಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್ ॥ ೫ ॥ ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್ ॥ ಋಚೋ ಯಜೂಂಷಿ ಸಾಮಾನಿ ಯಜ್ಞಃ ಕ್ಷತ್ರಂ ಬ್ರಹ್ಮ ಚ ॥ ೬ ॥ ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿಜಾಯಸೇ ॥ ತುಭ್ಯಂ ಪ್ರಾಣಃ ಪ್ರಜಾಸ್ತ್ವಿಮಾ ಬಲಿಂ ಹರಂತಿ ಯಃ ಪ್ರಾಣೈಃ

ಅನ್ನುವರು. (೩) ದೇವತೆಗಳನ್ನು ಕುರಿತು ವರಿಷ್ಠನಾದ ಪ್ರಾಣನು, 'ಮೋಹಗೊಳಬೇಡಿರಿ. ನಾನೇ ಐದು ಭಾಗವಾಗಿ, ಸ್ಥಿರವಾಗಿ ನಿಂತು ಈ ಶರೀರಕ್ಕೆ ಆಧಾರವಾಗಿರುವೆನು,' ಅಂದನು. (೪) ಅವರು ಆ ಮಾತಿನಲ್ಲಿ ವಿಶ್ವಾಸವಿಡಲಿಲ್ಲ. ಅವನು (ಪ್ರಾಣನು) ಅಭಿಮಾನದಿಂದ ಶರೀರ ಬಿಟ್ಟು ಹೊರಗೆ ಹೊರಡುವವನಂತೆ ಹೊರಟನು. ಅವನು ಹೊರಗೆ ಹೊರಟ ಕೂಡಲೆ ಇತರರೂ ಹೊರಗೆ ಹೊರಡಬೇಕಾಗುವದು. ಅವನು ಪ್ರತಿಷ್ಠಿತನಾದ (ಸ್ಥಿರನಾದ) ಕೂಡಲೆ ಇತರ ದೇವತೆಗಳು ಪ್ರತಿಷ್ಠಿತರಾಗುವರು. ಹೇಗೆಂದರೆ, ಜೇನ್ನೊಣಗಳ ಅರಸನು (ರಾಣಿಯು) ಹೊರಟ ಕೂಡಲೆ ಎಲ್ಲ ಜೇನ್ನೊಣಗಳು ಹೊರಡುವವು. ಅವನು ಸ್ಥಿರವಾಗಿ ನಿಂತ ಕೂಡಲೆ ಎಲ್ಲ ಜೇನ್ನೊಣಗಳು ಸ್ಥಿರವಾಗಿ ನಿಲ್ಲುವವು. ಅದೇ ರೀತಿ ವಾಣಿ, ಮನ, ಚಕ್ಷು, ಶ್ರೋತ್ರಗಳು ಪ್ರೀತವಾಗಿ ಪ್ರಾಣವನ್ನು ಹೊಗಳುವವು. (೫) 'ಇದೇ ಅಗ್ನಿಯು. ಪ್ರಕಾಶಿಸುವ ಸೂರ್ಯನು ಇವನೆ. ಇದೇ ಪರ್ಜನ್ಯವು. ಇವನೆ ಇಂದ್ರನು. ಇವನೆ ವಾಯುವು. ಇದೇ ಪೃಥಿವಿಯು. ಇದೇ ರಯಿಯು ಅಂದರೆ ಜಡವು. ಇವನೆ ದೇವರು. ಸತ್ ಅಸತ್ ಅಮೃತವಿದ್ದುದೆಲ್ಲವೂ ಇದೇ. (೬) ರಥದ ಗಾಲಿಯ ಗಡ್ಡೆಯಲ್ಲಿ ಹಲ್ಲುಗಳು ಕೂಡ್ರಿಸಲ್ಪಟ್ಟಿರುವಂತೆ ಎಲ್ಲವೂ ಪ್ರಾಣದಲ್ಲಿಯೆ ಸ್ಥಾಪಿಸಲ್ಪಟ್ಟಿರುವದು. ಋಚೆಗಳು (ಸ್ತುತಿಮಂತ್ರ), ಬ್ರಾಹ್ಮಣರು ಎಲ್ಲವೂ ಪ್ರಾಣದಲ್ಲಿಯೆ

ಪ್ರತಿತಿಷ್ಠತಿ ॥ ೭ ॥ ದೇವಾನಾಮಸಿ ವಹ್ನಿತಮಃ ಪಿತೃಣಾಂ ಪ್ರಥಮಾ ಸ್ವಧಾ ॥ ಋಷೀಣಾಂ ಚರಿತಂ ಸತ್ಯಮಥರ್ವಾಂಗಿರಸಾಮಸಿ ॥ ೮ ॥ ಇಂದ್ರಸ್ತ್ವಂ ಪ್ರಾಣ ತೇಜಸಾ ರುದ್ರೋಽಸಿ ಪರಿರಕ್ಷಿತಾ ॥ ತ್ವಮಂತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ ॥ ೯ ॥ ಯದಾ ತ್ವಮಭಿವರ್ಷಸ್ಯಥೇಮಾಃ ಪ್ರಾಣ ತೇ ಪ್ರಜಾಃ ॥ ಆನಂದ-ರೂಪಾಸ್ತಿಷ್ಠಂತಿ ಕಾಮಾಯಾನ್ನಂ ಭವಿಷ್ಯತೀತಿ ॥ ೧೦ ॥ ವ್ರಾತ್ಯಸ್ತ್ವಂ ಪ್ರಾಣೈಕ ಋಷಿರತ್ತಾ ವಿಶ್ವಸ್ಯ ಸತ್ಪತಿಃ॥ ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವ ನಃ ॥ ೧೧ ॥ ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ ॥ ಯಾ ಚ ಮನಸಿ ಸಂತತಾ ಶಿವಾಂ ತಾಂ ಕುರು ಮೋತ್ಕ್ರಮೀಃ ॥ ೧೨ ॥ ಪ್ರಾಣ ಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ಪ್ರತಿಷ್ಠಿತಮ್ ॥ ಮಾತೇವ ಪುತ್ರಾನ್ರಕ್ಷಸ್ವ ಶ್ರೀಶ್ಚ ಪ್ರಜ್ಞಾಂ ಚ ವಿಧೇಹಿ ಇತಿ ॥ ೧೩ ॥ ಇತಿ ದ್ವಿತೀಯಃ ಪ್ರಶ್ನಃ ॥

---

ಪ್ರತಿಷ್ಠಿತವಿರುವುವು. (೭) ನೀನು ಪ್ರಜಾಪತಿಯು. ಗರ್ಭದಲ್ಲಿ ನೀನು ಚರಿಸುವಿ. ನೀನೆ ಹುಟ್ಟುವಿ. ಪ್ರಾಣಗಳನ್ನೊಡಗೂಡಿ (ಪಂಚಪ್ರಾಣಗಳ ಸಹಿತ) ಇರುವ ಪ್ರಾಣನು ನೀನೆ. ನಿನ್ನ ಪ್ರೀತ್ಯರ್ಥವೆ ಈ ಪ್ರಜೆಗಳು ಬಲಿ-ಹರಣ (ಅನ್ನವನ್ನರ್ಪಿಸುವುದು) ಮಾಡುವರು. (೮) ನೀನು ದೇವತೆಗಳ ಶ್ರೇಷ್ಠನಾದ ಅಗ್ನಿಯು, ಪಿತೃಗಳ ಮೊದಲನೆಯ ಆಹುತಿಯು, ಋಷಿಗಳ ಸತ್ಯ ಆಚಾರವು ಮತ್ತು ಅಂಗಿರಸರ ( ಆ ವಂಶದ ಜನರ ) ಅಥರ್ವನು (ಇಂದ್ರಿಯ ಶಕ್ತಿಗಳಲ್ಲಿ ನೀನು ಮುಖ್ಯತತ್ವವು). (೯) ಪ್ರಾಣನೇ, ನೀನು ತೇಜಸ್ಸಿನಿಂದ ಇಂದ್ರನಿರುವಿ. (ವಿಶ್ವವನ್ನು) ರಕ್ಷಿಸುವ ರುದ್ರನು ನೀನು, ಅಂತರಿಕ್ಷದಲ್ಲಿ ಚರಿಸುವಿ, ನೀನು ಪ್ರಕಾಶ ಕೊಡುವ ವಸ್ತುಗಳಲ್ಲಿ ಎಲ್ಲಕ್ಕೂ ಶ್ರೇಷ್ಠನಾದ ಸೂರ್ಯನಿರುವಿ. (೧೦) ಹೇ ಪ್ರಾಣನೇ, ನೀನು ಮಳೆಗರೆಯ ಲಾರಂಭಿಸಿದ ಕೂಡಲೆ ಇನ್ನು ಯಥೇಷ್ಟವಾಗಿ ಧಾನ್ಯವು ಬೆಳೆಯುವುದೆಂದು ಈ ಪ್ರಜೆಗಳು ಒಳ್ಳೇ ಆನಂದಭರಿತರಾಗುವರು. (೧೧) ಪ್ರಾಣನೇ, ನೀನು ನಿಯಮಬಾಹ್ಯನು, ಏಕಋಷಿಯು, ಸತತಗಾಮಿಯು, ಈಶ್ವರನು. ನಾವು ಆದ್ಯಗಳನ್ನು (ಪ್ರಥಮ ಆಹುತಿಗಳನ್ನು) ಕೊಡುವವರು. ನೀನು ವಾಯುವಿನ ತಂದೆಯು. (೧೨) ಈ ವಾಚೆಯಲ್ಲಿ ಶ್ರೋತ್ರದಲ್ಲಿ ಚಕ್ಷುಗಳಲ್ಲಿ ಮನಸಿನಲ್ಲಿ ವ್ಯಾಪಿಸಿದ ನಿನ್ನ ಸ್ವರೂಪವನ್ನು ಮಂಗಲಕರವಾಗುವಂತೆ ಮಾಡು, (ಅವು ಗಳನ್ನು ಆಶೀರ್ವದಿಸು). ಪ್ರಾಣವನ್ನು ಹೊರಗೆ ಹೋಗಗೊಡಬೇಡ. (೧೩) ಸ್ವರ್ಗದಲ್ಲಿ ಪ್ರತಿಷ್ಠಿತವಾದ ಈ ಪ್ರಾಣದ ವಶದಲ್ಲಿಯೆ ಸರ್ವವೂ ಇರುವುದು.

**ಅಥ ಹೈನಂ ಕೌಸಲ್ಯಶ್ಚಾಶ್ವಲಾಯನಃ ಪಪ್ರಚ್ಛ ॥ ಭಗವನ್ಕುತ ಏಷ ಪ್ರಾಣೋ ಜಾಯತೇ ಕಥಮಾಯಾತ್ಯಸ್ಮಿಞ್ಶರೀರ ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರತಿಷ್ಠತೇ ಕೇನೋತ್ಕ್ರಮತೇ ಕಥಂ ಬಾಹ್ಯಮಭಿಧತ್ತೇ ಕಥಮಧ್ಯಾತ್ಮಮಿತಿ ॥ ೧ ॥ ತಸ್ಮೈ ಸ ಹೋವಾಚಾತಿಪ್ರಶ್ನಾನ್ಪೃಚ್ಛಸಿ ಬ್ರಹ್ಮಿಷ್ಠೋಽಸೀತಿ ತಸ್ಮಾತ್ತೇಽಹಂ ಬ್ರವೀಮಿ ॥ ೨ ॥ ಆತ್ಮನ ಏಷ ಪ್ರಾಣೋ ಜಾಯತೇ ॥ ಯಥೈಷಾ ಪುರುಷೇ ಛಾಯೈತಸ್ಮಿನ್ನೇತದಾತತಂ ಮನೋಽಧಿಕೃತೇನಾಯಾತ್ಯಸ್ಮಿಞ್ಶರೀರೇ ॥ ೩ ॥ ಯಥಾ ಸಮ್ರಾಡೇವಾಧಿಕೃತಾನ್ವಿನಿಯುಂಕ್ತೇ ॥ ಏತಾನ್ ಗ್ರಾಮಾನೇತಾನ್ ಗ್ರಾಮಾನಧಿತಿಷ್ಠಸ್ವೇತ್ಯೇವಮೇವೈಷ ಪ್ರಾಣ ಇತರಾನ್ಪ್ರಾಣಾನ್ಪೃಥಕ್ಪೃಥಗೇವ ಸಂನಿಧತ್ತೇ ॥ ೪ ॥ ಪಾಯೂಪಸ್ಥೇಽಪಾನಂ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಪ್ರಾಣಃ ಸ್ವಯಂ ಪ್ರತಿಷ್ಠತೇ ಮಧ್ಯೇ ತು ಸಮಾನಃ ॥ ಏಷ ಹ್ಯೇತದ್ಧುತಮನ್ನಂ ಸಮಂ ನಯತಿ ತಸ್ಮಾದೇತಾಃ ಸಪ್ತಾರ್ಚಿಷೋ ಭವಂತಿ ॥ ೫ ॥ ಹೃದಿ**

---

ತಾಯಿಯು ಮಕ್ಕಳನ್ನು ಕಾಪಾಡುವಂತೆ ನಮ್ಮನ್ನು ಕಾಪಾಡು. ನಮಗೆ ಸಿರಿಯನ್ನೂ ಜ್ಞಾನವನ್ನೂ ಕೊಡು.'

ಇಲ್ಲಿಗೆ ದ್ವಿತೀಯ ಪ್ರಶ್ನೆಯು ಮುಗಿಯಿತು.

(೧) ಆ ಬಳಿಕ ಅಶ್ವಲಾಯನಪುತ್ರನಾದ ಕೌಸಲ್ಯನು ಪಿಪ್ಪಲಾದನನ್ನು ಕೇಳಿದನು. 'ಭಗವನ್, ಈ ಪ್ರಾಣವು ಎಲ್ಲಿ ಹುಟ್ಟುವದು ? ಈ ಶರೀರದಲ್ಲಿ ಹೇಗೆ ಬರುವದು ? ತನ್ನನ್ನು ವಿಭಾಗಿಸಿಕೊಂಡು ಹೇಗೆ ಇದ್ದುಕೊಳ್ಳುವದು ? ಯಾವ ಕಾರಣದಿಂದ ಇದು ಹೊರಗೆ ಹೋಗುವುದು ? ಬಾಹ್ಯವಸ್ತುಗಳನ್ನು ಹೇಗೆ ಧರಿಸುವುದು? ದೇಹವನ್ನಾಶ್ರಯಿಸಿ ಹೇಗೆ ವಾಸಿಸುವುದು ? ' (೨) ಅವನಿಗೆ ಋಷಿಯು ಅಂದದ್ದು, ' ಗಹನ ಪ್ರಶ್ನೆಗಳನ್ನು ಕೇಳುವಿ. ನೀನು ಬ್ರಹ್ಮನಿಷ್ಠನಿರುವಿ, ಆದುದರಿಂದ ನಾನು ನಿನಗೆ ಹೇಳುವೆನು. (೩) ಆತ್ಮನಿಂದ ಈ ಪ್ರಾಣವು ಹುಟ್ಟುವುದು. ಯಾವ ಪ್ರಕಾರವಾಗಿ ಈ ಛಾಯೆಯು ಪುರುಷನಲ್ಲಿರುವದೊ ಹಾಗೆಯೆ ಇದು ( ಈ ಪ್ರಾಣವು) ಅವನನ್ನು ಸಂಪೂರ್ಣವಾಗಿ ವ್ಯಾಪಿಸಿರುವುದು. ಈ ಶರೀರದಲ್ಲಿ ಮನದ ಮುಖಾಂತರ ಪ್ರಾಣವು ಬರುವುದು. (೪) ಇಂಥಿಂಥ ಅಥವಾ ಈ ಈ ಗ್ರಾಮಗಳನ್ನು ಆಳಿರೆಂದು ಹೇಳಿ ಸಮ್ರಾಟನು ತನ್ನ ಅಧಿಕಾರಿಗಳನ್ನು ನೇಮಿಸುವಂತೆ ಈ ಪ್ರಾಣವು ಪ್ರಾಣಗಳನ್ನು ಅಂದರೆ ಪಂಚಪ್ರಾಣಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಸ್ಥಾಪಿಸುವದು. (೫) ಪಾಯೂಪಸ್ಥಗಳಲ್ಲಿ ( ಗುದ ಹಾಗೂ

**ಹ್ಯೇಷ ಆತ್ಮಾ ॥ ಅತ್ರೈತದೇಕಶತಂ ನಾಡೀನಾಂ ತಾಸಾಂ ಶತಂ ಶತಮೇಕೈಕಸ್ಯಾಂ ದ್ವಾಸಪ್ತತಿರ್ದ್ವಾಸಪ್ತತಿಃ ಪ್ರತಿಶಾಖಾನಾಡೀಸಹಸ್ರಾಣಿ ಭವನ್ತ್ಯಾಸು ವ್ಯಾನಶ್ಚರತಿ ॥೬॥ ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಮ್ ॥ ೭ ॥ ಆದಿತ್ಯೋ ಹ ವೈ ಬಾಹ್ಯಃ ಪ್ರಾಣ ಉದಯತ್ಯೇಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ॥ ಪೃಥಿವ್ಯಾಂ ಯಾ ದೇವತಾ ಸೈಷಾ ಪುರುಷಸ್ಯಾಪಾನಮವಷ್ಟಭ್ಯಾಂತರಾ ಯದಾಕಾಶಃ ಸ ಸಮಾನೋ ವಾಯುರ್ವ್ಯಾನಃ ॥ ೮ ॥ ತೇಜೋ ಹ ವಾವ ಉದಾನಸ್ತಸ್ಮಾದುಪಶಾಂತತೇಜಾಃ ॥ ಪುನರ್ಭವಮಿಂದ್ರಿಯೈರ್ಮನಸಿ ಸಂಪದ್ಯಮಾನೈಃ ॥ ೯ ॥ ಯಚ್ಚಿತ್ತಸ್ತೇನೈಷ ಪ್ರಾಣಮಾಯಾತಿ ಪ್ರಾಣಸ್ತೇಜಸಾ ಯುಕ್ತಃ ॥ ಸಹಾತ್ಮನಾ ಯಥಾ-**

ಜನನೇಂದ್ರಿಯಗಳಲ್ಲಿ ) ಅಪಾನವಾಯುವನ್ನು ನೇಮಿಸುವದು. ಚಕ್ಷುಃ ಶ್ರೋತ್ರಮುಖನಾಸಿಕೆಗಳಲ್ಲಿ ಪ್ರಾಣವು ತಾನೇ ನಿಲ್ಲುವದು. ಮಧ್ಯದಲ್ಲಿ (ಶರೀರಮಧ್ಯದಲ್ಲಿ) ಸಮಾನವಾಯುವಿರುವದು. ಈ ಸಮಾನವು ಆಹುತಿ ಕೊಟ್ಟ ಅನ್ನವನ್ನು ಸಮವಾಗಿ ಹಂಚುವದು. ಅದರಿಂದ ಈ ಏಳು ಜ್ವಾಲೆಗಳು (ಜಠರಾಗ್ನಿಯು) ಹುಟ್ಟುವವು. (೬) ಈ ಆತ್ಮವು ಹೃದಯದಲ್ಲಿರುವದು. ಇಲ್ಲಿ ನೂರಾಒಂದು ನಾಡಿಗಳಿರುವವು. ಅವುಗಳೊಳಗಣ ಒಂದೊಂದರಲ್ಲಿ ನೂರು ನೂರು ಶಾಖೆಗಳು; ಆ ಶಾಖಾ ನಾಡಿಗಳಲ್ಲಿ ಪುನಃ ಒಂದೊಂದಕ್ಕೆ ಎಪ್ಪತ್ತೆರಡು ಸಾವಿರ ಪ್ರತಿಶಾಖಾ ನಾಡಿಗಳು ಇರುವವು. ಅವುಗಳಲ್ಲಿ ವ್ಯಾನವಾಯುವು ಸುಳಿದಾಡುವದು. (೭) ಆ ನಾಡಿಗಳಲ್ಲಿಯ ಒಂದು ನಾಡಿಯ (ಸುಷುಮ್ನಾ) ಮುಖಾಂತರ ಮೇಲಕ್ಕೆ ಹೋಗುವ ಉದಾನ ವಾಯುವು ಮನುಷ್ಯನ ಪುಣ್ಯದಿಂದ ಅವನನ್ನು ಪುಣ್ಯಲೋಕಕ್ಕೆ ಒಯ್ಯುವದು, ಪಾಪದಿಂದ ಪಾಪಲೋಕಕ್ಕೆ ಒಯ್ಯುವದು, ಪುಣ್ಯ ಪಾಪಗಳು ಸಮಾನವಿದ್ದರೆ (ಉಭಾಭ್ಯಾಮ್) ಮನುಷ್ಯಲೋಕಕ್ಕೆ ಒಯ್ಯುವದು. (೮) ಆದಿತ್ಯನು ಬಾಹ್ಯ (ಶರೀರದ ಹೊರಗೆ ಇರುವ) ಪ್ರಾಣನು. ಅವನು ಚಾಕ್ಷುಷ (ಕಣ್ಣಿನಲ್ಲಿದ್ದ) ಪ್ರಾಣವನ್ನು ಅನುಗ್ರಹಿಸುತ್ತ ಉದಯಿಸುವನು. ಪೃಥ್ವಿಯಲ್ಲಿ ಅಧಿಷ್ಠಿತವಿದ್ದ ದೇವತೆಯು ಪುರುಷನ ಅಪಾನವಾಯುವು. ಅಂತರಿಕ್ಷದಲ್ಲಿರುವ ಆಕಾಶವು ಸಮಾನವಾಯುವು. ವಾಯುವು ವ್ಯಾನವು. (೯) ತೇಜಸ್ಸೆ ಉದಾನವಾಯುವು, ಆದುದರಿಂದ (ಮರಣ ಹೊಂದಿದವರು) ತೇಜೋವಿಹೀನರು. ಮನದಲ್ಲಿ ಅಂತರ್ಗತವಾದ ಇಂದ್ರಿಯಗಳ ಸಹಿತ (ಸತ್ತವರು) ಪುನ-

ಸಂಕಲ್ಪಿತಂ ಲೋಕಂ ನಯತಿ ॥ ೧೦ ॥ ಯ ಏವಂ ವಿದ್ವಾನ್ಪ್ರಾಣಂ ವೇದ ॥ ನ ಹಾಸ್ಯ ಪ್ರಜಾ ಹೀಯತೇಽಮೃತೋ ಭವತಿ ತದೇಷ ಶ್ಲೋಕಃ ॥ ೧೧ ॥ ಉತ್ಪತ್ತಿ-ಮಾಯತಿಂ ಸ್ಥಾನಂ ವಿಭುತ್ವಂ ಚೈವ ಪಂಚಧಾ ॥ ಅಧ್ಯಾತ್ಮಂ ಚೈವ ಪ್ರಾಣಸ್ಯ ವಿಜ್ಞಾಯಾಮೃತಮಶ್ನುತೇ ವಿಜ್ಞಾಯಾಮೃತಮಶ್ನುತ ಇತಿ ॥ ೧೨ ॥ ಇತಿ ತೃತೀಯಃ ಪ್ರಶ್ನಃ ॥

ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ ಭಗವನ್ನೇತಸ್ಮಿನ್ಪುರುಷೇ ಕಾನಿ ಸ್ವಪಂತಿ ಕಾನ್ಯಸ್ಮಿನ್ ಜಾಗ್ರತಿ ಕತರ ಏಷ ದೇವಃ ಸ್ವಪ್ನಾನ್ಪಶ್ಯತಿ ಕಸ್ಯೈ-ತತ್ಸುಖಂ ಭವತಿ ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವಂತೀತಿ ॥ ೧ ॥ ತಸ್ಮೈ ಸ ಹೋವಾಚ ॥ ಯಥಾ ಗಾರ್ಗ್ಯ ಮರೀಚಯೋಽರ್ಕಸ್ಯಾಸ್ತಂ ಗಚ್ಛತಃ ಸರ್ವಾ ಏತಸ್ಮಿಂಸ್ತೇಜೋಮಂಡಲ ಏಕೀಭವಂತಿ ॥ ತಾಃ ಪುನಃಪುನರುದಯತಃ ಪ್ರಚ-ರಂತ್ಯೇವಂ ಹ ವೈ ತತ್ಸರ್ವಂ ಪರೇ ದೇವೇ ಮನಸ್ಯೇಕೀಭವಂತಿ ॥ ತೇನ ತರ್ಹ್ಯೇಷ-

---

ರ್ಜನ್ಮ ಹೊಂದುವರು. (೧೦) ಚಿತ್ತದ ಸಂಗಡ, ಉದಾನವು ಪ್ರಾಣದೆಡೆಗೆ ಬರುವದು. ಪ್ರಾಣವು ತೇಜಸ್ಸಿನಿಂದ ಯುಕ್ತವಾಗಿ ಆತ್ಮನಸಹಿತ ಮನುಷ್ಯ ನನ್ನು ಇಷ್ಟವಾದ ಲೋಕಕ್ಕೆ ಒಯ್ಯುವದು. (೧೧) ಈ ಬಗೆಯಾಗಿ ಪ್ರಾಣ ವನ್ನರಿತ ವಿದ್ವಾಂಸನ ಪ್ರಜೆಗಳು ನಷ್ಟವಾಗುವದಿಲ್ಲ. ಅವನು ಅಮೃತನಾಗು ವನು. ಅದರ ವಿಷಯಕ್ಕೆ ಈ (ಕೆಳಗಣ) ಶ್ಲೋಕವು. (೧೨) ಪ್ರಾಣದ ಉತ್ಪತ್ತಿ, ಬರುವಿಕೆ (ಶರೀರದಲ್ಲಿ), ಸ್ಥಾನಗಳು (ಇರುವ ಸ್ಥಾನಗಳು), ಐದು ಬಗೆಯ ವ್ಯಾಪಕತ್ವ, ಅದರ ಅಧ್ಯಾತ್ಮ (ದೇಹಸಂಬಂಧ) ಇವುಗಳನ್ನು ತಿಳಿ ದುಕೊಂಡು ಮನುಷ್ಯನು ಅಮೃತಪದವನ್ನು ಹೊಂದುವನು. ಅಮೃತಪದ ವನ್ನು ಹೊಂದುವನು.

ಇಲ್ಲಿಗೆ ತೃತೀಯ ಪ್ರಶ್ನೆಯು ಸಮಾಪ್ತವು.

(೧) ಆ ನಂತರ ಗರ್ಗವಂಶೋತ್ಪನ್ನನಾದ ಸೌರ್ಯಾಯಣಿಯು ಕೇಳಿ ದ್ದೇನಂದರೆ, 'ಭಗವನ್, ಈ ಪುರುಷನಲ್ಲಿ ಯಾವುವು (ಯಾವ ಶಕ್ತಿಗಳು) ಮಲಗುವವು ಯಾವವು ಎಚ್ಚರಿರುವವು ? ಇವುಗಳಲ್ಲಿ ಯಾವ ದೇವತೆಯು ಸ್ವಪ್ನಗಳನ್ನು ಕಾಣುವನು, ಯಾವನಿಗೆ ಸುಖವಾಗುವದು, ಯಾತರಲ್ಲಿ ಎಲ್ಲವೂ ಸೇರುವದು (ಲಯಹೊಂದುವದು)?' (೨) ಅವನಿಗೆ ಋಷಿಯು ಅಂದದ್ದು, ಹೇ ಗಾರ್ಗ್ಯನೇ, ಮುಳುಗುವ ಸೂರ್ಯನ ಎಲ್ಲ ಕಿರಣಗಳು

**ಪುರುಷೋ ನ ಶೃಣೋತಿ ನ ಪಶ್ಯತಿ ನ ಜಿಘ್ರತಿ ನ ರಸಯತೇ ನ ಸ್ಪೃಶತೇ ನಾಭಿವದತೇ ನಾದತ್ತೇ ನಾನಂದಯತೇ ನ ವಿಸೃಜತೇ ನೇಯಾಯತೇ ಸ್ವಪಿತೀತ್ಯಾಚಕ್ಷತೇ ॥ ೨ ॥ ಪ್ರಾಣಾಗ್ನಯ ಏವೈತಸ್ಮಿನ್ಪುರೇ ಜಾಗ್ರತಿ ಗಾರ್ಹಪತ್ಯೋ ಹ ವಾ ಏಷೋಽಪಾನೋ ವ್ಯಾನೋಽನ್ವಾಹಾರ್ಯ ಪಚನೋ ಯದ್ಗಾರ್ಹಪತ್ಯಾತ್ಪ್ರಣೀಯತೇ ಪ್ರಣಯನಾದಾಹವನೀಯಃ ಪ್ರಾಣಃ ॥ ೩ ॥ ಯದುಚ್ಛ್ವಾಸನಿಃಶ್ವಾಸಾವೇತಾವಾಹುತೀ ಸಮಂ ನಯತೀತಿ ಸ ಸಮಾನಃ ಮನೋ ಹ ವಾವ ಯಜಮಾನ ಇಷ್ಟಫಲಮೇವೋದಾನಃ ಸ ಏನಂ ಯಜಮಾನಮಹರಹರ್ಬ್ರಹ್ಮ ಗಮಯತಿ ॥ ೪ ॥ ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ ॥ ಯದ್ದೃಷ್ಟಂ ದೃಷ್ಟಮನು ಪಶ್ಯತಿ ಶ್ರುತಂ ಶ್ರುತಮೇವಾರ್ಥಮನುಶೃಣೋತಿ ದೇಶದಿಗಂತರೈಶ್ಚ ಪ್ರತ್ಯನುಭೂತಂ ಪುನಃ ಪುನಃ ಪ್ರತ್ಯನುಭವತಿ ದೃಷ್ಟಂ ಚಾದೃಷ್ಟಂ ಚ ಶ್ರುತಂ ಚಾಶ್ರುತಂ ಚಾನುಭೂತಂ ಚಾನನುಭೂತಂ ಚ ಸಚ್ಚಾಸಚ್ಚ ಸರ್ವಂ ಪಶ್ಯತಿ ಸರ್ವಃ ಪಶ್ಯತಿ ॥೫॥**

---

ಅವನ ಈ ತೇಜೋಮಂಡಲದಲ್ಲಿ ಒಂದಾಗಿಹೋಗುವವು. ಅವನು ಮೂಡಿದನೆಂದರೆ ಅವು ಪುನಃ ವಿಸ್ತರಿಸುವವು. ಇದೇ ರೀತಿ, ಎಲ್ಲಕ್ಕೂ ಹೆಚ್ಚಿನ ದೇವತೆಯಾದ ಮನದಲ್ಲಿ ಇದೆಲ್ಲವೂ ಲೀನವಾಗುವುದು. ಆದ್ದರಿಂದಲೆ (ಮಲಗಿದಾಗ) ಈ ಪುರುಷನು ಕೇಳುವುದಿಲ್ಲ, ನೋಡುವುದಿಲ್ಲ, ಮೂಸಿಸುವುದಿಲ್ಲ, ರುಚಿ ನೋಡುವುದಿಲ್ಲ, ಸ್ಪರ್ಶಿಸುವುದಿಲ್ಲ, ನುಡಿಯುವುದಿಲ್ಲ, ತೆಗೆದುಕೊಳ್ಳುವುದಿಲ್ಲ, ಆನಂದಿಸುವುದಿಲ್ಲ, ವಿಸರ್ಜನ ಮಾಡುವುದಿಲ್ಲ, ಹೋಗುವದಿಲ್ಲ; ಇಂಥವನಿಗೆ 'ಮಲಗಿರುವನೆಂದು' ಅನ್ನುವರು. (೩) ಈ ಪುರದಲ್ಲಿ (ಶರೀರದಲ್ಲಿ) ಪ್ರಾಣಾಗ್ನಿಗಳು ಮಾತ್ರ ಎಚ್ಚರಿರುವವು. ಅಪಾನ ವಾಯುವು ಅಗ್ನಿಹೋತ್ರಿಗಳ ಕುಂಡದಲ್ಲಿರುವ ಗಾರ್ಹಪತ್ಯ ಅಗ್ನಿಯು. ವ್ಯಾನವಾಯುವು (ದಕ್ಷಿಣಾಗ್ನಿ) ಅನ್ವಾಹಾರ್ಯ ಅಗ್ನಿಯು, ಪ್ರಾಣವಾಯುವು ಆಹವನೀಯ ಅಗ್ನಿಯು (ಪೂರ್ವಾಗ್ನಿಯು), ಗಾರ್ಹಪತ್ಯ ಅಗ್ನಿಯಿಂದ ಇದು ಹೊತ್ತಿಸಲ್ಪಡುವದು, (ಗಾರ್ಹಪತ್ಯದಿಂದ) ಒಯ್ಯಲ್ಪಡುವದರಿಂದ ಇದು ಆಹವನೀಯ ಎಂದೆನಿಸುವದು. (೪) ಯಾವ ವಾಯುವು ಉಚ್ಛ್ವಾಸ - ನಿಶ್ವಾಸಗಳೆಂಬ ಆಹುತಿಗಳನ್ನು ಸಮವಾಗಿ ನಡೆಸುವದೊ ಅದು ಸಮಾನವಾಯುವು. ಮನವೆ ಯಜಮಾನನು. ಇಷ್ಟಫಲವೆ ಉದಾನ ವಾಯುವು. ಇದು ಯಜಮಾನನನ್ನು (ಮನವನ್ನು) ಪ್ರತಿದಿನ ಬ್ರಹ್ಮನ ಕಡೆಗೆ ಒಯ್ಯುವದು. (೫) ಈ ದೇವತೆಯು (ಮನವು) ಸ್ವಪ್ನದಲ್ಲಿ ವೈಭವವನ್ನುಪಭೋಗಿಸುವದು.

ಸ ಯದಾ ತೇಜಸಾಭಿಭೂತೋ ಭವತ್ಯತ್ರೈಷ ದೇವಃ ಸ್ವಪ್ನಾನ್ನ ಪಶ್ಯತ್ಯಥ ತದೈತ-ಸ್ಮಿಞ್ಛರೀರೇ ಏತತ್ಸುಖಂ ಭವತಿ ॥೬॥ ಸ ಯಥಾ ಸೋಮ್ಯ ವಯಾಂಸಿ ವಾಸೋ ವೃಕ್ಷಂ ಸಂಪ್ರತಿಷ್ಠಂತೇ ॥ ಏವಂ ಹ ವೈ ತತ್ಸರ್ವಂ ಪರ ಆತ್ಮನಿ ಸಂಪ್ರತಿಷ್ಠತೇ ॥ ೭ ॥ ಪೃಥಿವೀ ಚ ಪೃಥಿವೀಮಾತ್ರಾ ಚಾಪಶ್ಚಾಪೋಮಾತ್ರಾ ಚ ತೇಜಶ್ಚ ತೇಜೋಮಾತ್ರಾ ಚ ವಾಯುಶ್ಚ ವಾಯುಮಾತ್ರಾ ಚಾಕಾಶಶ್ಚಾಕಾಶಮಾತ್ರಾ ಚ ಚಕ್ಷುಶ್ಚ ದ್ರಷ್ಟವ್ಯಂ ಚ ಶ್ರೋತ್ರಂ ಚ ಶ್ರೋತವ್ಯಂ ಚ ಘ್ರಾಣಂ ಚ ಘ್ರಾತವ್ಯಂ ಚ ರಸಶ್ಚ ರಸಯಿತವ್ಯಂ ಚ ತ್ವಕ್ ಚ ಸ್ಪರ್ಶಯಿತವ್ಯಂ ಚ ವಾಕ್ ಚ ವಕ್ತವ್ಯಂ ಚ ಹಸ್ತೌ ಚಾದಾತವ್ಯಂ ಚೋಪಸ್ಥಶ್ಚಾನಂದಯಿತವ್ಯಂ ಚ ಪಾಯುಶ್ಚ ವಿಸರ್ಜಯಿತವ್ಯಂ ಚ ಪಾದೌ ಚ ಗಂತವ್ಯಂ ಚ ಮನಶ್ಚ ಮಂತವ್ಯಂ ಚ ಬುದ್ಧಿಶ್ಚ ಬೋದ್ಧವ್ಯಂ ಚಾ-ಹಂಕಾರಶ್ಚಾಹಂಕರ್ತವ್ಯಂ ಚ ಚಿತ್ತಂ ಚ ಚೇತಯಿತವ್ಯಂ ಚ ತೇಜಶ್ಚ ವಿದ್ಯೋ-ತಯಿತವ್ಯಂ ಚ ಪ್ರಾಣಶ್ಚ ವಿಧಾರಯಿತವ್ಯಂ ಚ ॥ ೮ ॥ ಏಷ ಹಿ ದ್ರಷ್ಟಾ ಸ್ಪ್ರಷ್ಟಾ

ನೋಡಿದ್ದನ್ನೆಲ್ಲ ಪುನಃ ನೋಡುವದು, ಕೇಳಿದ್ದನ್ನೆಲ್ಲ ಮತ್ತೆ ಕೇಳುವದು, ದೇಶದಿಗಂತರಗಳಲ್ಲಿ ಅನುಭವಿಸಿದ್ದನ್ನೆಲ್ಲ ಪುನಃ ಪುನಃ ಅನುಭವಿಸುವದು, ನೋಡಿದ್ದನ್ನು ನೋಡದಿದ್ದುದನ್ನು, ಕೇಳಿದ್ದನ್ನು ಕೇಳದಿದ್ದುದನ್ನು, ಅನುಭವಿಸಿದ್ದನ್ನು ಅನುಭವಿಸದಿದ್ದುದನ್ನು, ಸದಸತ್ತನ್ನು ಎಲ್ಲವನ್ನೂ ನೋಡುವದು, ಎಲ್ಲವೂ ನೋಡುವದು. (೬) ಜ್ಞಾನದಿಂದ (ಎಚ್ಚರದಿಂದ) ಪರಾಭೂತನಾಯಿತೆಂದರೆ (ಜ್ಞಾನದ ಪ್ರಭಾವವು ಹೆಚ್ಚಾಯಿತೆಂದರೆ) ಈ ಮನವು ಕನಸುಗಳನ್ನು ಕಾಣುವದಿಲ್ಲ. ಆ ಮೇಲೆ (ಜ್ಞಾನವಾದ ಮೇಲೆ) ಈ ಶರೀರದಲ್ಲಿ ಅದು (ಮನವು) ಸುಖಿಯಾಗಿರುವದು. (೭) ಎಲೇ ಮುದ್ದುಮಗನೇ, ಹಕ್ಕಿಗಳು ತಮ್ಮ ಗೂಡುಗಳಿದ್ದ ವೃಕ್ಷವನ್ನು ಆಶ್ರಯಿಸುವಂತೆ ಇದೆಲ್ಲವೂ ಶ್ರೇಷ್ಠವಾದ ಆತ್ಮನಲ್ಲಿ ಲೀನವಾಗುವದು. (೮) ಪೃಥಿವಿಯೂ ಅದರ ತನ್ಮಾತ್ರೆಯೂ (ಸೂಕ್ಷ್ಮರೂಪವೂ) ನೀರೂ ಅದರ ತನ್ಮಾತ್ರೆಯೂ ತೇಜವೂ ಅದರ ತನ್ಮಾತ್ರೆಯೂ ವಾಯುವೂ ಅದರ ತನ್ಮಾತ್ರೆಯೂ ಆಕಾಶವೂ ಅದರ ತನ್ಮಾ-ತ್ರೆಯೂ ಕಣ್ಣೂ ಕಾಣತಕ್ಕದ್ದೂ ಕಿವಿಯೂ ಕೇಳತಕ್ಕದ್ದೂ ಮೂಗೂ ಮೂಸಿನೋಡತಕ್ಕದ್ದೂ ರಸನೆಯೂ ರುಚಿಯಿರತಕ್ಕದ್ದೂ ತ್ವಕ್ಕೂ ಸ್ಪರ್ಶಿಸತಕ್ಕದ್ದೂ ವಾಚೆಯೂ ಮಾತಾಡತಕ್ಕದ್ದೂ ಕೈಗಳೂ ಕೊಳ್ಳತಕ್ಕದ್ದೂ ಉಪಸ್ಥವೂ ಆನಂದಿಸತಕ್ಕದ್ದೂ ಗುದವೂ ವಿಸರ್ಜಿಸತಕ್ಕದ್ದೂ ಕಾಲುಗಳೂ ಹೋಗುವ ಕ್ರಿಯೆಯೂ ಮನವೂ ವಿಚಾರಿಸತಕ್ಕದ್ದೂ ಬುದ್ಧಿಯೂ ತಿಳಿಯತಕ್ಕದ್ದೂ ಅಹಂಕಾರವೂ

**ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ ಸ ಪರೇಽಕ್ಷರೇ ಆತ್ಮನಿ ಸಂಪ್ರತಿಷ್ಠತೇ ॥ ೯ ॥ ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯಮಶರೀರಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವೋ ಭವತಿ ತದೇಷ ಶ್ಲೋಕಃ ॥೧೦॥ ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾ ಭೂತಾನಿ ಸಂಪ್ರತಿಷ್ಠಂತಿ ಯತ್ರ ॥ ತದಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಃ ಸರ್ವಮೇವಾವಿವೇಶೇತಿ ॥ ೧೧ ॥ ಇತಿ ಚತುರ್ಥಃ ಪ್ರಶ್ನಃ ॥**

**ಅಥ ಹೈನಂ ಶೈಬ್ಯಃ ಸತ್ಯಕಾಮಃ ಪಪ್ರಚ್ಛ ॥ ಸ ಯೋ ಹ ವೈತದ್ಭಗವನ್ಮನುಷ್ಯೇಷು ಪ್ರಾಯಣಾಂತಮೋಂಕಾರಮಭಿಧ್ಯಾಯೀತ ॥ ಕತಮಂ ವಾವ ಸ ತೇನ ಲೋಕಂ ಜಯತೀತಿ ॥ ೧ ॥ ತಸ್ಮೈ ಸ ಹೋವಾಚ ॥ ಏತದ್ವೈ ಸತ್ಯಕಾಮ**

ಅಹಂಕಾರವಿಷಯವೂ ಚಿತ್ತವೂ ಚೇತಿಸಲು ಯೋಗ್ಯವಾದದ್ದೂ ತೇಜವೂ ಬೆಳಗತಕ್ಕದ್ದೂ ಪ್ರಾಣವೂ ಪ್ರಾಣದಿಂದ ಆಶ್ರಯಿಸಲ್ಪಡತಕ್ಕದ್ದೂ ಎಲ್ಲವೂ ಆತ್ಮನಲ್ಲಿ ಲೀನವಾಗುವದು. (೯) ನೋಡುವ, ಸ್ಪರ್ಶಿಸುವ, ಕೇಳುವ, ಮೂಸಿ ನೋಡುವ, ರುಚಿನೋಡುವ, ವಿಚಾರಮಾಡುವ, ತಿಳಿದುಕೊಳ್ಳುವ, ಮಾಡುವ, ವಿಜ್ಞಾನಪೂರ್ಣ ಆತ್ಮನೆ ಈ ಪುರುಷನು. ಅವನು ಶ್ರೇಷ್ಠವಾದ ಅಕ್ಷರ ಆತ್ಮನಲ್ಲಿ ಸೇರುವನು. (೧೦) ಪ್ರಿಯ ಕುಮಾರನೇ, ಆ ಛಾಯಾ ರಹಿತ, ಶರೀರರಹಿತ, ವರ್ಣರಹಿತ, ಶುಭ್ರವಾದ ಅಕ್ಷರವನ್ನರಿತವನು ಆ ಪರಮ ಅವ್ಯಯಪದವನ್ನು ಪಡೆಯುವನು. ಸರ್ವಜ್ಞನಾದ ಅವನು ಸರ್ವವೂ ತಾನೇ ಆಗಿಬಿಡುವನು. ಆ ವಿಷಯಕ್ಕೆ ಈ ಕೆಳಗಣ ಶ್ಲೋಕವು. (೧೧) ಎಲ್ಲ ದೇವತೆಗಳ ಸಹಿತವಾಗಿ ವಿಜ್ಞಾನಾತ್ಮನೂ ಪ್ರಾಣಗಳೂ ಭೂತಗಳೂ ಯಾತ ರಲ್ಲಿ ಲೀನವಾಗುವವೂ ಆ ಅವ್ಯಯ ವಸ್ತುವನ್ನರಿತವನು ಸರ್ವಜ್ಞನು. ಅವನು ಸರ್ವ ವ್ಯಾಪಕನಾದನೆಂದೆ ತಿಳಿಯಬೇಕು.

ಇಲ್ಲಿಗೆ ಚತುರ್ಥ ಪ್ರಶ್ನೆಯು ಸಮಾಪ್ತವು.

(೧) ಆ ಬಳಿಕ ಶಿಬಿಪುತ್ರನಾದ ಸತ್ಯಕಾಮನು ಋಷಿಗೆ ಪ್ರಶ್ನೆಮಾಡಿದನು. 'ಹೇ ಭಗವನ್, ಸಾಯುವವರೆಗೆ ಈ ಓಂಕಾರದ ಧ್ಯಾನಮಾಡುವ ಮನುಷ್ಯನು ಈ ಧ್ಯಾನದ ಸಹಾಯದಿಂದ ಯಾವ ಲೋಕವನ್ನು ಜಯಿಸುವನು? (೨) ಅವನನ್ನು ಕುರಿತು ಋಷಿಯು ಅಂದದ್ದು, ಸತ್ಯಕಾಮನೇ, ಈ

**ಪರಂ ಚಾಪರಂ ಚ ಬ್ರಹ್ಮ ಯದೋಂಕಾರಸ್ತಸ್ಮಾದ್ವಿದ್ವಾನೇತೇನೈವಾಯತನೇನೈ-ಕತರಮನ್ವೇತಿ ॥ ೨ ॥ ಸ ಯದ್ಯೇಕಮಾತ್ರಮಭಿಧ್ಯಾಯೀತ ಸ ತೇನೈವ ಸಂವೇದಿತ-ಸ್ತೂರ್ಣಮೇವ ಜಗತ್ಯಾಮಭಿಸಂಪದ್ಯತೇ ॥ ತಮೃಚೋ ಮನುಷ್ಯಲೋಕಮುಪ-ನಯಂತೇ ಸ ತತ್ರ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂಪನ್ನೋ ಮಹಿಮಾನ-ಮನುಭವತಿ ॥ ೩ ॥ ಅಥ ಯದಿ ದ್ವಿಮಾತ್ರೇಣ ಮನಸಿ ಸಂಪದ್ಯತೇ ಸೋಽಂತ-ರಿಕ್ಷಂ ಯಜುರ್ಭಿರುನ್ನೀಯತೇ ಸ ಸೋಮಲೋಕಂ ಸ ಸೋಮಲೋಕೇ ವಿಭೂತಿಮನುಭೂಯ ಪುನರಾವರ್ತತೇ ॥ ೪ ॥ ಯಃ ಪುನರೇತತ್ತ್ರಿಮಾತ್ರೇಣೋ ಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ ಸ ತೇಜಸಿ ಸೂರ್ಯೇ ಸಂಪನ್ನಃ ॥ ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತ ಏವಂ ಹ ವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮಲೋಕಂ ಸ ಏತ-ಸ್ಮಾಜ್ಜೀವಘನಾತ್ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ ತದೇತೌ ಶ್ಲೋಕೌ ಭವತಃ ॥ ೫ ॥ ತಿಸ್ರೋ ಮಾತ್ರಾ ಮೃತ್ಯುಮತ್ಯಃ ಪ್ರಯುಕ್ತಾ ಅನ್ಯೋನ್ಯಸಕ್ತಾ**

ಓಂಕಾರವೆಂಬುದೆ ಪರ ಮತ್ತು ಅಪರ ಬ್ರಹ್ಮವು. ಆದುದರಿಂದ ವಿದ್ವಾಂಸನು ಇದರ ಆಧಾರದಿಂದಲೆ ಎರಡರಲ್ಲಿ ( ಪರ ಅಪರ ಬ್ರಹ್ಮಗಳಲ್ಲಿ ) ಒಂದನ್ನು ಸಂಪಾದಿಸುವನು. (೩) ಏಕಮಾತ್ರೆಯನ್ನಷ್ಟೆ ( ಓಂಕಾರದ ಏಕಮಾತ್ರೆ ಅಂದರೆ 'ಅಕಾರ'ವು ಅಂದರೆ ಋಗ್ವೇದವು ) ಧ್ಯಾನಿಸುವವನು ಅದರಿಂದಲೆ ಪ್ರೇರಿತನಾಗಿ ಜಗತ್ತಿನಲ್ಲಿ ತೀವ್ರವೆ ಸಂಪನ್ನನಾಗುವನು. ಅವನನ್ನು ಋಚೆಗಳು ( ಋಗ್ವೇದ ಮಂತ್ರಗಳು ) ಮನುಷ್ಯಲೋಕಕ್ಕೆ ಒಯ್ಯುವವು. ಅಲ್ಲಿ ತಪಸ್ಸು ಬ್ರಹ್ಮಚರ್ಯ ಶ್ರದ್ಧೆಗಳಿಂದ ಸಂಪನ್ನನಾಗಿ ವೈಭವವನ್ನುಪಭೋಗಿಸುವನು. (೪) ಇನ್ನು ಮನಸ್ಸಿನಲ್ಲಿ ದ್ವಿಮಾತ್ರೆಯ ಕೂಡ ( ಓಂಕಾರದ ದ್ವಿಮಾತ್ರೆಯ ಕೂಡ ) ಯುಕ್ತನಾಗುವವನು (ಧ್ಯಾನಮಾಡುವವನು) ಯಜುರ್ವೇದದ ಮಂತ್ರಗಳಿಂದ ಅಂತರಿಕ್ಷಕ್ಕೆ ಒಯ್ಯಲ್ಪಡುವನು. ಅದು ಸೋಮಲೋಕವು (ಚಂದ್ರಲೋಕವು). ಅವನು ಸೋಮಲೋಕದಲ್ಲಿ ಐಶ್ವರ್ಯ-ವನ್ನನುಭವಿಸಿ ಪುನಃ ತಿರುಗಿ ಬರುವನು. (೫) ಆದರೆ ತ್ರಿಮಾತ್ರೆಯಾದ (ಮೂರು ಮಾತ್ರೆಗಳುಳ್ಳ) ಈ ಓಂ ಎಂಬ ಅಕ್ಷರದ ಮುಖಾಂತರ ಪರಮಪುರುಷನ ಧ್ಯಾನ ಮಾಡುವವನು ತೇಜಃಪುಂಜನಾದ ಸೂರ್ಯನ ಕಡೆಗೆ ಹೋಗುವನು (ಸೂರ್ಯಲೋಕಕ್ಕೆ ಹೋಗುವನು). ಅವನು ಪರಿಬಿಚ್ಚಿದ ಹಾವಿನಂತೆ ಪಾಪಮುಕ್ತನಾಗಿ ಸಾಮವೇದದ ಮಂತ್ರಗಳಿಂದ ಬ್ರಹ್ಮ-

ಅನುವಿಪ್ರಯುಕ್ತಾಃ ಕ್ರಿಯಾಸು ಬಾಹ್ಯಾಭ್ಯಂತರಮಧ್ಯಮಾಸು ಸಮ್ಯಕ್ ಪ್ರಯುಕ್ತಾಸು ನ ಕಂಪತೇ ಜ್ಞಃ ॥ ೬ ॥ ಋಗ್ಭಿರೇತಂ ಯಜುರ್ಭಿರಂತರಿಕ್ಷಂ ಸ ಸಾಮಭಿರ್ಯತ್ತತ್ಕವಯೋ ವೇದಯಂತೇ ॥ ತಮೋಂಕಾರೇಣೈವಾಯತನೇನಾನ್ವೇತಿ ವಿದ್ವಾನ್ಯತ್ತಚ್ಛಾಂತಮಜರಮಮೃತಮಭಯಂ ಪರಂ ಚೇತಿ ॥ ೭ ॥ ಇತಿ ಪಂಚಮಃ ಪ್ರಶ್ನಃ ॥

ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ ॥ ಭಗವನ್ ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರೋ ಮಾಮುಪೇತ್ಯೈತಂ ಪ್ರಶ್ನಮಪೃಚ್ಛತ ॥ ಷೋಡಶಕಲಂ ಭಾರದ್ವಾಜ ಪುರುಷಂ ವೇತ್ಥ ತಮಹಂ ಕುಮಾರಮಬ್ರುವಂ ನಾಹಮಿಮಂ ವೇದ ಯದ್ಯಹಮಿಮಮವೇದಿಷಂ ಕಥಂ ತೇ ನಾವಕ್ಷ್ಯಮಿತಿ ಸಮೂಲೋ ವಾ ಏಷ ಪರಿಶುಷ್ಯತಿ ಯೋಽನೃತಮಭಿವದತಿ ತಸ್ಮಾನ್ನಾರ್ಹಾಮ್ಯನೃತಂ ವಕ್ತುಂ ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ ॥ ತಂ ತ್ವಾ ಪೃಚ್ಛಾಮಿ ಕ್ವಾಸೌ ಪುರುಷ ಇತಿ ॥ ೧ ॥

---

ಲೋಕಕ್ಕೆ ಒಯ್ಯಲ್ಪಡುವನು. ಅವನು ಜೀವ ಚೈತನ್ಯದ ಆಚೆಗಿರುವ ಶರೀರಸ್ಥ ಪರಾತ್ಪರ ಪುರುಷನನ್ನು ಸಾಕ್ಷಾತ್ಕರಿಸುವನು. ಅದರ ವಿಷಯಕ್ಕೆ ಈ (ಕೆಳಗಣ) ಎರಡು ಶ್ಲೋಕಗಳಿರುವವು. (೬) ಈ ಮೂರು ಮಾತ್ರೆಗಳ (ಓಂಕಾರದ ಮಾತ್ರೆಗಳ) ಪ್ರತ್ಯೇಕ ಪ್ರಯೋಗವು ನಾಶಹೊಂದುವಂತಹದು (ಈ ಮಾತ್ರೆಗಳನ್ನು ಬಿಡಿಬಿಡಿಯಾಗಿ ಪ್ರಯೋಗಿಸಿದರೆ ಅವುಗಳ ಫಲವು ಕ್ಷಣಭಂಗುರವಾಗುವುದು). ಅವುಗಳನ್ನು ಒಂದಕ್ಕೊಂದು ಜೋಡಿಸಿ, ಬಿಡಿಸದೆ, ಏಕವಾಗಿ, ಬಾಹ್ಯಾಭ್ಯಂತರ ಮಧ್ಯಮ ಕ್ರಿಯೆಗಳಲ್ಲಿ ಚನ್ನಾಗಿ ಪ್ರಯೋಗಿಸುವಲ್ಲಿ ಜ್ಞಾನಿಯು ಹಿಂಜರಿಯುವದಿಲ್ಲ. (೭) ಋಗ್ವೇದದಿಂದ ಇದನ್ನು ( ಈ ಲೋಕವನ್ನು ) ಯಜುರ್ವೇದದಿಂದ ಅಂತರಿಕ್ಷವನ್ನು ವಿದ್ವಾಂಸನು ಸಂಪಾದಿಸುವನು. ಕವಿಗಳು ಹೇಳುವ ಆ ಶಾಂತ, ಮುಪ್ಪು ಇಲ್ಲದ, ಅಮೃತ, ಅಭಯ, ಪರಮಪದವನ್ನು ವಿದ್ವಾಂಸನು ಆ ಓಂಕಾರದ ಆಧಾರದಿಂದಲೆ ಸಾಮವೇದ ಮಂತ್ರಗಳಿಂದ ಗೆಲ್ಲುವನು.

ಇಲ್ಲಿಗೆ ಪಂಚಮ ಪ್ರಶ್ನೆಯು ಸಮಾಪ್ತವು.

(೧) ಭರದ್ವಾಜಪುತ್ರನಾದ ಸುಕೇಶ ಇವನು ಆ ನಂತರ ಋಷಿಗೆ ಪ್ರಶ್ನೆ ಮಾಡಿದನು. 'ಭಗವನ್, ಕೋಸಲದ ರಾಜಪುತ್ರನಾದ ಹಿರಣ್ಯನಾಭನು ನನ್ನ ಬಳಿಗೆ ಬಂದು, ಭಾರದ್ವಾಜನೇ, ಹದಿನಾರು ಕಲೆಗಳುಳ್ಳ (ಭಾಗಗಳುಳ್ಳ)

**ತಸ್ಮೈ ಸ ಹೋವಾಚ ॥ ಇಹೈವಾಂತಃಶರೀರೇ ಸೋಮ್ಯ ಸ ಪುರುಷೋ ಯಸ್ಮಿನ್ನೇತಾಃ ಷೋಡಶಕಲಾಃ ಪ್ರಭವಂತೀತಿ ॥ ೨ ॥ ಸ ಈಕ್ಷಾಂಚಕ್ರೇ ॥ ಕಸ್ಮಿನ್ನಹಂ ಉತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ॥ ೩ ॥ ಸ ಪ್ರಾಣಮಸೃಜತ ಪ್ರಾಣಾತ್ ಶ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥವೀಂದ್ರಿಯಂ ಮನೋಽನ್ನಮನ್ನಾದ್ವೀರ್ಯಂ ತಪೋಮಂತ್ರಾಃ ಕರ್ಮಲೋಕಾ ಲೋಕೇಷು ನಾಮ ಚ ॥ ೪ ॥ ಸ ಯಥೇಮಾ ನದ್ಯಃ ಸ್ಯಂದಮಾನಾಃ ಸಮುದ್ರಾಯಣಾಃ ಸಮುದ್ರಂ ಪ್ರಾಪ್ಯಾಸ್ತಂ ಗಚ್ಛಂತಿ ಭಿದ್ಯೇತೇ ತಾಸಾಂ ನಾಮರೂಪೇ ಸಮುದ್ರ ಇತ್ಯೇವಂ ಪ್ರೋಚ್ಯತೇ । ಏವಮೇವಾಸ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ ಪ್ರಾಪ್ಯಾಸ್ತಂ ಗಚ್ಛಂತಿ ಭಿದ್ಯಂತೇ ತಾಸಾಂ ನಾಮರೂಪೇ ಪುರುಷ ಇತ್ಯೇವಂ ಪ್ರೋಚ್ಯತೇ ಸ ಏಷೋಽಕಲೋಽಮೃತೋ ಭವತಿ ತದೇಷ ಶ್ಲೋಕಃ ॥ ೫ ॥ ಅರಾ ಇವ ರಥನಾಭೌ ಕಲಾ**

---

ಅಥವಾ ಅಂಶಗಳುಳ್ಳ ಪುರುಷನು ಯಾರೆಂಬದನ್ನು ಬಲ್ಲೆಯಾ, ಎಂದು ಕೇಳಿದನು. ನಾನು ಇದನ್ನರಿಯೆನು, ಅರಿತಿದ್ದರೆ ನಾನು ನಿನಗೆ ಹೇಳದೆ ಇರುವೆನೆ? ಸಟೆಯಾಡುವವನು ಸಮೂಲ ನಾಶಕ್ಕೆ ಗುರಿಯಾಗುವನು. ಆದ್ದರಿಂದ ನಾನು ಸಟೆಯಾಡುವದು ಯುಕ್ತವಲ್ಲ, ಎಂದು ಉತ್ತರಕೊಟ್ಟೆನು. ಇದನ್ನು ಕೇಳಿ ಕುಮಾರನು ಸುಮ್ಮನೆ ರಥವನ್ನೇರಿ ಹೊರಟುಹೋದನು. ಅವನ್ನು ಕುರಿತು ( ಆ ಪ್ರಶ್ನೆಯನ್ನು ) ನಾನು ನಿನ್ನನ್ನು ಕೇಳುವೆನು. ಆ ಪುರುಷನು ಎಲ್ಲಿರುವನು ?' (೨) ಅವನಿಗೆ ಪಿಪ್ಪಲಾದನು ಅಂದದ್ದು, ಮಗನೇ, ಯಾವನಲ್ಲಿ ಈ ಹದಿನಾರು ಕಲೆಗಳು ಉತ್ಪನ್ನವಾಗುವವೊ ಆ ಪುರುಷನು ಈ ಅಂತಃಶರೀರದಲ್ಲಿಯೆ ಇರುವನು. (೩) ಅವನು (ಆ ಪುರುಷನು) ವಿಚಾರ ಮಾಡಿದ್ದೇನಂದರೆ, ಯಾವನು ಹೊರಗೆ ( ಶರೀರವನ್ನು ಬಿಟ್ಟು ) ಹೋದರೆ ನಾನು ಹೊರಗೆ ಹೋಗಬಹುದು, ಯಾವನು ಪ್ರತಿಷ್ಠಿತನಾದರೆ (ಶರೀರದಲ್ಲಿ) ನಾನು ಪ್ರತಿಷ್ಠಿತನಾಗಬಹುದು ? (೪) ಅವನು (ಪುರುಷನು) ಪ್ರಾಣವನ್ನು ಸೃಜಿಸಿದನು, ಪ್ರಾಣದಿಂದ ಶ್ರದ್ಧೆಯನ್ನು, ಆಕಾಶ-ವಾಯು-ಜ್ಯೋತಿ-ಆಪ-ಪೃಥಿವಿಗಳನ್ನು, ಇಂದ್ರಿಯ ಮನಗಳನ್ನು, ಅನ್ನವನ್ನು, ಅನ್ನದಿಂದ ವೀರ್ಯ (ಶಕ್ತಿ), ತಪಸ್ಸು, ಮಂತ್ರ, ಕರ್ಮ, ಲೋಕಗಳನ್ನು, ಲೋಕಗಳಲ್ಲಿ ನಾಮವನ್ನು ಅಂದರೆ ( ಪದಾರ್ಥಗಳ ) ಹೆಸರನ್ನು ಸೃಜಿಸಿದನು. (೫) ಯಾವ ಪ್ರಕಾರ ಸಮುದ್ರಾಭಿಮುಖವಾಗಿ ಹರಿಯುತ್ತಿರುವ ಹೊಳೆಗಳು ಸಮುದ್ರವನ್ನು ಕೂಡಿ

**ಯಸ್ಮಿನ್ಪ್ರತಿಷ್ಠಿತಾಃ॥ ತಂ ವೇದ್ಯಂ ಪುರುಷಂ ಯಥಾ ಮಾ ವೋ ಮೃತ್ಯುಃ ಪರಿವ್ಯಥಾ ಇತಿ ॥ ೬ ॥ ತಾನ್ಹೋವಾಚೈತಾವದೇವಾಹಮೇತತ್ಪರಂ. ಬ್ರಹ್ಮ ವೇದ ನಾತಃ ಪರಮಸ್ತೀತಿ ॥ ೭ ॥ ತೇ ತಮರ್ಚಯಂತಸ್ತ್ವಂ ಹಿ ನಃ ಪಿತಾ ಯೋಽಸ್ಮಾಕಮ-ವಿದ್ಯಾಯಾಃ ಪರಂ ಪಾರಂ ತಾರಯಸೀತಿ ॥ ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ ॥ ಇತಿ ಷಷ್ಠಃ ಪ್ರಶ್ನಃ ॥ ಇತಿ ಪ್ರಶ್ನೋಪನಿಷತ್ ಸಮಾಪ್ತಾ ॥**

---

ಸಮುದ್ರದಲ್ಲಿ ಅಸ್ತವಾಗುವವೊ, ಅವುಗಳ ನಾಮರೂಪಗಳು ಅಳಿದು ಸಮುದ್ರವೆಂದು ಮಾತ್ರ ಹೇಳಲ್ಪಡುವವೊ ಅದೇ ಪ್ರಕಾರ ಇದನ್ನು ತಿಳಿದವನ ದೃಷ್ಟಿಯಿಂದ ನೋಡಲಾಗಿ, ಪುರುಷಾಭಿಮುಖವಾಗಿ ಸಾಗುವ ಈ ಹದಿನಾರು ಕಲೆಗಳು ಪುರುಷನನ್ನು ಕೂಡಿ ಪುರುಷನಲ್ಲಿ ಲಯವಾಗುವವು ಹಾಗೂ ಇವುಗಳ ನಾಮರೂಪಗಳು ಅಳಿದುಹೋಗಿ ಪುರುಷನೆಂದು ಮಾತ್ರ ಹೇಳಲ್ಪಡುವವು. ಆ ಪುರುಷನು ಕಲಾರಹಿತನು ( ಭಾಗರಹಿತನು, ಅಖಂಡನು ), ಅಮೃತನು. ಆ ವಿಷಯಕ್ಕೆ ಈ (ಕೆಳಗಿನ) ಶ್ಲೋಕವು. (೬) ರಥಚಕ್ರದ ಗಡ್ಡೆಯಲ್ಲಿ ಚಕ್ರದ ಹಲ್ಲುಗಳಂತೆ ಯಾವನಲ್ಲಿ ಕಲೆಗಳು ಪ್ರತಿಷ್ಠಿತವಾಗಿರುವವೊ ಆ ತಿಳಿಯಲಿಕ್ಕೆ ಯೋಗ್ಯನಾದ ಪುರುಷನನ್ನು ಅರಿತುಕೊಳ್ಳಿರಿ. ಜ್ಞಾನವಾದ ಮೇಲೆ ಈ ಮೃತ್ಯುವು ಪೀಡಿಸಲರಿಯದು. (೭) ಅವರೆಲ್ಲರನ್ನು ಕುರಿತು ಮುನಿಯು, 'ಪರಬ್ರಹ್ಮನ ವಿಷಯಕ್ಕೆ ನನಗೆ ಇಷ್ಟೇ ಜ್ಞಾನವಿರುವದು. ಇದಕ್ಕೂ ಹೆಚ್ಚಿನದು ಏನೂ ಇಲ್ಲ' ಅಂದನು. (೮) ಅವನನ್ನು (ಮುನಿಯನ್ನು) ಪೂಜಿಸುತ್ತ ಅವರು (ಶಿಷ್ಯರು) ಅಂದದ್ದು, ನೀನು ನಮ್ಮೆಲ್ಲರ ತಂದೆಯು. ಅಜ್ಞಾನದ ಆಚೆಯ ದಂಡೆಗೆ ನಮ್ಮನ್ನು ದಾಟಿಸುವವನು ನೀನೆ. ಋಷಿಶ್ರೇಷ್ಠರಿಗೆ ನಮಸ್ಕಾರವಿರಲಿ, ಋಷಿಶ್ರೇಷ್ಠರಿಗೆ ನಮಸ್ಕಾರವಿರಲಿ.

ಇಲ್ಲಿಗೆ ಆರನೆ ಪ್ರಶ್ನೆಯು ಸಮಾಪ್ತವು.

ಮುಂದೆ 'ಭದ್ರಂ ಕರ್ಣೇಭಿಃ' ಎಂಬ ಪ್ರಾರಂಭಕ್ಕೆ ಇದ್ದ ಶಾಂತಿಮಂತ್ರ.

## ಪ್ರಶ್ನೋಪನಿಷತ್ತಿನಲ್ಲಿಯ ಕೆಲವು ಶಬ್ದಾರ್ಥಗಳು

**ಸಮಿತ್ಪಾಣಿ—** ಕೈಯಲ್ಲಿ ಸಮಿಧೆಗಳನ್ನು (ಅಗ್ನಿಯನ್ನು ಹೊತ್ತಿಸಲಿಕ್ಕೆ ಬೇಕಾಗುವ ಚಕ್ಕೆಗಳು) ಹಿಡಿದುಕೊಂಡು. (ಗುರುಗಳೆಡೆಗೆ ಹೋಗುವಾಗ ಹೀಗೆ ಹೋಗುವ ಪದ್ಧತಿಯು ಇರುವುದು.)

**ರಯಿ—** ಅನ್ನ ಅಥವಾ ಜಡ (ತದ್ವಿರುದ್ಧ ಚೈತನ್ಯ).

**ಮಿಥುನ—** ಗಂಡು ಹೆಣ್ಣುಗಳ ಜೋಡಿ.

**ವಿಶ್ವರೂಪ—** ನಾನಾರೂಪಗಳುಳ್ಳ.

**ಇಷ್ಟಾಪೂರ್ತಕರ್ಮ—** ಯಜ್ಞಯಾಗಾದಿ ಮಾಡುವುದು ಹಾಗೂ ಕೆರೆಭಾವಿಗಳನ್ನು ಕಟ್ಟಿಸುವುದು.

**ನಿರೋಧ—** ನಿಯಮ.

**ದ್ವಾದಶಾಕೃತಿ—** ಸೂರ್ಯನ ದ್ವಾದಶ ರೂಪಗಳು.

**ಪಂಚಪ್ರಾಣ—** ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ.

**ಏಕರ್ಷಿ—** ಒಬ್ಬನೇ ಸಂಚರಿಸುವವನು.

**ಆದ್ಯ—** ತಿನ್ನಲಿಕ್ಕೆ ಯೋಗ್ಯವಾದ (ಆಹುತಿ) ಅಥವಾ ಪ್ರಥಮ.

**ಅಧ್ಯಾತ್ಮ—** ದೇಹಕ್ಕೆ ಸಂಬಂಧಿಸಿದ.

**ಗಾರ್ಹಪತ್ಯ—** ಅಗ್ನಿಹೋತ್ರಿಗಳ ಮನೆಯಲ್ಲಿ ಪಶ್ಚಿಮ ಕುಂಡದಲ್ಲಿರತಕ್ಕ ಅಗ್ನಿಯು. ಗೃಹಪತಿಗಳ (ಗೃಹಸ್ಥರ) ಮನೆಯಲ್ಲಿರುವದರಿಂದ ಅದಕ್ಕೆ ಈ ಹೆಸರು.

**ಅನ್ವಾಹಾರ್ಯ—** ಅಗ್ನಿಹೋತ್ರಿಗಳ ದಕ್ಷಿಣಾಗ್ನಿ, ಅಮಾವಾಸ್ಯೆಗೆ ಮಾಡತಕ್ಕ ಪಿತೃಶ್ರಾದ್ಧದ ಆಹುತಿಗಳು ಈ ಅಗ್ನಿಯಲ್ಲಿ ಕೊಡಲ್ಪಡುತ್ತವೆ.

**ಆಹವನೀಯ—** ಪೂರ್ವಾಗ್ನಿ, ಹವನಕ್ಕೆ ಯೋಗ್ಯವಾದುದರಿಂದ ಆಹವನೀಯವೆನಿಸುವದು. ಇದು ದಿನಾಲು ಗಾರ್ಹಪತ್ಯ ಅಗ್ನಿಯಿಂದ ಹೊತ್ತಿಸಲ್ಪಡುವದು.

**ತನ್ಮಾತ್ರಾ —** ತತ್ವಗಳ ಆತ್ಯಂತ ಶುದ್ಧ ಸೂಕ್ಷ್ಮಸ್ವರೂಪ. ವ್ಯಕ್ತ ಸೃಷ್ಟಿಯಾಗುವ ಪೂರ್ವದಲ್ಲಿರುವ ತತ್ವಗಳ ಸ್ಥಿತಿ.

**ಕಲಾ —** ಅಂಶಗಳು ಅಥವಾ ಅವಯವಗಳು.

**ಕಲಾರಹಿತ —** ಏಕರೂಪವಾದ, ಅಖಂಡವಾದ.

**ಪ್ರಜಾ —** ಪ್ರಾಣಿಗಳು, ಜೀವಗಳು, ಭೂತಗಳು.

**ತಪ —** ಸಂಕಲ್ಪಮಯ ತಪಸ್ಸು.

**ಸಂನಿಧತ್ತೇ —** ಇಡುವನು, ಪ್ರೇರಿಸುವನು

**ವ್ರಾತ್ಯ —** ಉಪನಯನಾದಿ ಸಂಸ್ಕಾರವಿರಹಿತನು. ಇಲ್ಲಿ ಪ್ರಾಣನು

ಎಲ್ಲರಿಗೂ ಮೊದಲು ಇದ್ದವನಾದ್ದರಿಂದ ಅವನಿಗೆ ಸಂಸ್ಕಾರ ಮಾಡುವವರಾರು ? ಆದ್ದರಿಂದ ಇಲ್ಲಿ 'ವ್ರಾತ್ಯ'ನೆಂದರೆ ಸಂಸ್ಕಾರಾತೀತನೆಂದು ಅರ್ಥವು.

**ಏಕಮಾತ್ರ—** ಓಂ ಇದರಲ್ಲಿ ಅ+ಉ+ಮ್ ಹೀಗೆ ಮೂರು ಮಾತ್ರೆಗಳು. 'ಅ' ಇದು ಋಗ್ವೇದದ ಪ್ರತೀಕವು; 'ಉ' ಇದು ಯಜುರ್ವೇದದ ಪ್ರತೀಕವು; 'ಮ್' ಇದು ಸಾಮವೇದದ ಪ್ರತೀಕವು. ಓಂ ಇದರ 'ಏಕಮಾತ್ರ' ಧ್ಯಾನ ಅಥವಾ ಉಪಾಸನೆಯೆಂದರೆ ಋಗ್ವೇದಕ್ಕೆ ಪ್ರಾಧಾನ್ಯ ಕೊಟ್ಟು ಮಾಡಲ್ಪಟ್ಟ ಓಂ ಇದರ ಉಪಾಸನೆಯು (ಸ್ತುತಿಪ್ರಧಾನ).

**ದ್ವಿಮಾತ್ರೇಣ —** ಅಂದರೆ ಯಜುರ್ವೇದಕ್ಕೆ ಪ್ರಾಧಾನ್ಯ ಕೊಟ್ಟು ಮಾಡಿದ ಓಂ ಇದರ ಉಪಾಸನೆಯು (ಕರ್ಮಪ್ರಧಾನ).

**ತ್ರಿಮಾತ್ರೇಣ—** ಧ್ಯಾನವೆಂದರೆ ಸಂಪೂರ್ಣ ಬ್ರಹ್ಮಜ್ಞಾನ ಮೂಲಕ ಓಂ ಇದರ ಉಪಾಸನೆಯು. ಮೊದಲಿನ ಎರಡು ಉಪಾಸನೆಗಳು ಏಕಾಂಗಿಯಾಗುವವು. ಮೂರನೆಯದು ಸಂಪೂರ್ಣವಿರುವದರಿಂದಲೂ ಜ್ಞಾನಮಯವಿರುವದರಿಂದಲೂ ಅದರಿಂದ ಬ್ರಹ್ಮಪ್ರಾಪ್ತಿಯಾಗುವದು.

**ಬಾಹ್ಯ, ಅಭ್ಯಂತರ, ಮಧ್ಯಮ—** ಜಾಗ್ರತ, ಸುಷುಪ್ತ, ಸ್ವಪ್ನ.

**ವಿವೇಚನ —** (೧) ಓಂಕಾರದ 'ಏಕಮಾತ್ರೆ'ಯಿಂದ ಉಪಾಸನೆಯೆಂದರೆ, ಓಂ ಇದು ಇಂದ್ರವರುಣಾದಿ ದೇವತೆಗಳ ಪ್ರತೀಕವೆಂದು ತಿಳಿದು ಅದರ ಉಪಾಸನೆ ಮಾಡುವದು. (೨) ಓಂಕಾರದ 'ದ್ವಿಮಾತ್ರೆ'ಯಿಂದ ಉಪಾಸನೆಯೆಂದರೆ, ಓಂ ಇದು ಯಜ್ಞಾಧಿದೇವತೆಯ ಪ್ರತೀಕವೆಂದು ತಿಳಿದು ಅದರ ಉಪಾಸನೆ ಮಾಡುವದು. (೩) ಓಂಕಾರದ 'ತ್ರಿಮಾತ್ರೆ'ಯಿಂದ ಉಪಾಸನೆಯೆಂದರೆ, ಓಂ ಇದು ಸಂಪೂರ್ಣ ಬ್ರಹ್ಮನ ಪ್ರತೀಕವೆಂದು ತಿಳಿದು ಅದರ ಉಪಾಸನೆ ಮಾಡುವದು.

## ಪ್ರಶ್ನೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ಈ ಉಪನಿಷತ್ತು ಸಂವಾದರೂಪವಿರುವದೆಂಬುದು ಸ್ಪಷ್ಟವಿದೆ. ಇದರ ಹೆಸರಾದರೂ ಪ್ರಶ್ನೋಪನಿಷತ್ ಎಂದು ಸಾರ್ಥವಾಗಿಯೆ ಕಲ್ಪಿಸಲ್ಪಟ್ಟಿರುವದು. ಯಾವದೆ ವಿಷಯವನ್ನು ಎರಡನೆಯವರಿಗೆ ತಿಳಿಸಬೇಕಾದರೆ ಈ ಸಂವಾದಪದ್ಧತಿಯು ಬಹಳ ಸಹಾಯಕವಿರುವದೆಂಬುದು ಎಲ್ಲರ ಅನುಭವದ

ಮಾತು. 'ಬ್ರಹ್ಮ'ನಂಥ ಗಹನವಿಷಯವನ್ನು ತಿಳಿಸಬೇಕಾದಾಗಂತೂ ಈ ಪದ್ಧತಿಯು ಇಂತಿಷ್ಟು ಮಹತ್ವದ್ದೆಂದು ಹೇಳಲಶಕ್ಯವು. ಈ ಪದ್ಧತಿಯಲ್ಲಿಯ ಮುಖ್ಯ ಗುಣವೆಂದರೆ, ಒಂದೊಂದು ಪ್ರಶ್ನೆಯ ವಿಚಾರ ಮಾಡುವಾಗ ವಿಷ-ಯದ ಆಯಾ ಭಾಗದ ಮೇಲೆಯೆ ಮನವು ಏಕಾಗ್ರವಾಗಿ ಆ ಭಾಗವು ಉತ್ತಮವಾಗಿ ಬುದ್ಧಿಗೋಚರವಾಗುತ್ತ ನಡೆಯುವದು. ಆದುದರಿಂದ ಇಡೀ ವಿಷಯವನ್ನು ಆಕಲನ ಮಾಡುವ ಭಾರವು ನಮ್ಮ ಬುದ್ಧಿಯ ಮೇಲೆ ಒಮ್ಮೆಲೆ ಬೀಳದೆ ಆ ವಿಷಯದ ಪೃಥಕ್ಕರಿಸಿದ ಭಾಗಗಳು ಸಹಜಬುದ್ಧಿಗಮ್ಯವಾಗಿ ವಿಷಯಜ್ಞಾನವಾಗುವದು.

ಈ ಉಪನಿಷತ್ತಿನಲ್ಲಿದ್ದ ಒಟ್ಟು ಆರು ಪ್ರಶ್ನೆಗಳಲ್ಲಿ ಸಾಧಾರಣವಾಗಿ ಆತ್ಮಜ್ಞಾನದ ಎಲ್ಲ ಮುಖ್ಯ ವಿಷಯಗಳ ಚರ್ಚೆಯು ಅಂತರ್ಭೂತವಾಗಿರುವದು. ಇದಲ್ಲದೆ ಓಂಕಾರದ ಉಪಾಸನೆ ಹಾಗೂ ಅದರ ಭಿನ್ನ ಭಿನ್ನ ಪ್ರಕಾರಗಳು ಆತ್ಮಜ್ಞಾನದ ಸಾಧನಗಳೆಂದು ಚರ್ಚಿಸಲ್ಪಟ್ಟಿರುವವು. ಮೊದಲನೆ ಪ್ರಶ್ನೆಯ ಉತ್ತರದಲ್ಲಿ ತಪಸ್ಸು, ಬ್ರಹ್ಮಚರ್ಯ, ಶ್ರದ್ಧೆ, ವಿದ್ಯೆ ಇವೇ ಆತ್ಮಜ್ಞಾನದ ಸಾಧನಗಳೆಂದು ಸ್ಪಷ್ಟವಾಗಿ ಉಲ್ಲೇಖವಿರುವದು. ಪ್ರಜೆಗಳ ಉತ್ಪತ್ತಿಯು ಹೇಗೆ ಆಗಿರುವದೆಂಬ ಪ್ರಶ್ನೆಯನ್ನು ಕಬಂಧಿಯು ಮಾಡಿರುವನು. ಹೀಗೆ ಮೊದಲು ಪ್ರತ್ಯಕ್ಷವಸ್ತು ಅಥವಾ ಇಂದ್ರಿಯಗೋಚರ ವಸ್ತುಗಳಿಂದ ಆರಂಭವಾಗಿ ಅತೀಂದ್ರಿಯವಾದ ಆತ್ಮನ ಜ್ಞಾನದ ವರೆಗೆ ಋಷಿಗಳು ಹೋಗಿ ಮುಟ್ಟಿರುವರು. 'ದೇವ' ಎಂಬ ಶಬ್ದವು ಉಪನಿಷತ್ತುಗಳಲ್ಲಿ ವಿಶ್ವದಲ್ಲಿಯ ಶಕ್ತಿಗಳು ಎಂಬ ಮತ್ತು ಮನುಷ್ಯ ದೇಹಾಂತರ್ಗತವಾದ ಶಕ್ತಿಗಳು ಎಂಬ ಅರ್ಥದಿಂದ ಬಹಳ ಸಾರೆ ಉಪಯೋಗಿಸಲ್ಪಟ್ಟಿರುವದು. ಆದುದರಿಂದ ಯಾವ ದೇವತೆಗಳು ಈ ಪ್ರಜೆಗಳ ಧಾರಣ ಮಾಡುತ್ತಾರೆಂದು ಭಾರ್ಗವನೆಂಬವನು ಎರಡನೆ ಪ್ರಶ್ನೆಯಿಂದ ಕೇಳಿರುವನು. ಉಪನಿಷತ್‌ಕಾಲದಲ್ಲಿ ಅತ್ಯಂತ ಉಜ್ವಲ ಹಾಗೂ ಉತ್ಕಟವಾದ ತಮ್ಮ ಸ್ಫೂರ್ತಿಯುಕ್ತ ಕಲ್ಪಕಶಕ್ತಿಯಿಂದ ಋಷಿಗಳು ಈ ದೇವತೆಗಳಿಗೆ ನಾನಾರೂಪಗಳನ್ನು ಕಲ್ಪಿಸಿದರು. ಇಂದ್ರ, ರುದ್ರ, ಸೂರ್ಯ ಮುಂತಾದ ದೇವತೆಗಳ 'ಪುರುಷವಿಧ' ವರ್ಣನೆಗಳು ಅಲ್ಲಲ್ಲಿ ಬರುವವು. ಅವುಗಳ ಮೇಲಿಂದ ಋಷಿಗಳು ಕೇವಲ ಕಾಲ್ಪನಿಕ ದೇವತೆಗಳ ಉಪಾಸಕರಿದ್ದರೆಂದು ಕೆಲವರು ತಿಳಿಯುವರು. ಆದರೆ ಅದು

ಅಜ್ಞಾನದಿಂದಾದ ತಪ್ಪು ತಿಳಿವಳಿಕೆಯು. ಉಪನಿಷತ್ತುಗಳನ್ನು ಲಕ್ಷಪೂರ್ವಕ ವಾಗಿ ಓದುವವರು ಈ ಸಂಗತಿಯನ್ನು ಚನ್ನಾಗಿ ತಿಳಿದುಕೊಳ್ಳಬಹುದು. ಪ್ರಜೆಗಳ ಧಾರಣವನ್ನು ಯಾವ ದೇವತೆಗಳು ಮಾಡುವರೆಂಬ ಪ್ರಶ್ನೆಗೆ ಆಕಾಶ, ವಾಯು, ಅಗ್ನಿ, ಆಪ, ಪೃಥ್ವಿ, ವಾಚೆ, ಮನ, ಚಕ್ಷು, ಶ್ರೋತ್ರ ಎಂದು ಋಷಿಗಳು ಉತ್ತರಕೊಟ್ಟಿರುವರು ಮತ್ತು ಇವೆಲ್ಲವುಗಳಿಗಿಂತ ಪ್ರಾಣವು ಶ್ರೇಷ್ಠವೆಂದು ಪ್ರತಿಪಾದಿಸಿರುವರು. ಇದರ ಮೇಲಿಂದ ನೋಡಲಾಗಿ ದೇವತೆಗಳೆಂದರೇನು ಎಂಬುದು ಸ್ಪಷ್ಟವಾಗುವದು.

ಪ್ರಶ್ನೆಮಾಡುವವರು ಪ್ರಾಣವು ಎಲ್ಲಕ್ಕೂ ಶ್ರೇಷ್ಠವಿರುವದೆಂಬದನ್ನು ಕೇಳಿ ಸಂತುಷ್ಟರಾಗದೆ ಆ ಪ್ರಾಣವು ಎಲ್ಲಿಂದ ಬಂದಿತೆಂದು ಮತ್ತೆ ಪ್ರಶ್ನೆ ಮಾಡಿರುವರು. ಅದಕ್ಕೆ ಪ್ರಾಣವು ಆತ್ಮನಿಂದ ಹುಟ್ಟಿತೆಂದು ಋಷಿಗಳು ಉತ್ತರ ಕೊಟ್ಟಿರುವರು. ಆದರೆ ಪ್ರಾಣದಾಚೆಗಿರುವ ಚಿಚ್ಛಕ್ತಿಗಳು ಹೇಗಿರುವ ವೆಂಬ ಜಿಜ್ಞಾಸೆಯು ಪುನಃ ಶಿಷ್ಯರ ಮನದಲ್ಲಿ ತಲೆದೋರಿ ಅವರು ಸ್ವಪ್ನ, ಸುಷುಪ್ತಿ, ಜಾಗ್ರತಿಗಳ ವಿಷಯಕ್ಕೆ ಪ್ರಶ್ನೆಮಾಡಿರುವರು. ಚಿತ್ತದ ಮೂರು ಅವಸ್ಥೆಗಳ ವರ್ಣನೆಗಳನ್ನು ಕೊಟ್ಟ ಮೇಲೆ ಸಹ ಆತ್ಯಂತಿಕ ಸತ್ಯದ ನೀರಡಿಕೆ ಇದ್ದ ಮತ್ತು ಆ ಸತ್ಯದ ಅನುಭವವನ್ನು ಪಡೆಯುವ ಲವಲವಿಕೆಯಿದ್ದ ಶಿಷ್ಯನು ಕೇಳುವದೇನಂದರೆ, ಓಂಕಾರ ಸಾಧನದಿಂದ ಮನುಷ್ಯನು ಯಾವ ಲೋಕವನ್ನು ಜಯಿಸಬಹುದು, ಅತ್ಯಂತ ಉಚ್ಚ ಸ್ಥಿತಿಗೆ ಮುಟ್ಟಬಹುದೊ ಇಲ್ಲವೊ ? ಋಷಿಗಳು ಓಂಕಾರಧ್ಯಾನದ ಭಿನ್ನ ಭಿನ್ನ ಪ್ರಕ್ರಿಯೆಗಳನ್ನು ಹೇಳಿದ ನಂತರ ಸಹ ಶಿಷ್ಯರ ಪೂರ್ಣತೃಪ್ತಿಯಾಗದೆ, ಯಾವ ಆತ್ಮವು ಈ ಷೋಡಶಕಲೆಗಳಾಚೆಗಿರುವದೊ, ಯಾವ ಆತ್ಮನಲ್ಲಿ ಎಲ್ಲವೂ ಏಕರಸವಾಗು ವದೊ ಆ ಆತ್ಮನ ವಿಷಯಕ್ಕೆ ಶಿಷ್ಯರು ಪುನಃ ಪ್ರಶ್ನೆ ಮಾಡಿರುವರು. ಈ ಪ್ರಶ್ನೆಗೆ ಉತ್ತರಕೊಡುವಾಗ ಒಂದು ಸುಂದರವಾದ ಉದಾಹರಣೆಯನ್ನು ಕೊಟ್ಟು ಋಷಿಗಳು ಶಿಷ್ಯರ ಜಿಜ್ಞಾಸೆಯನ್ನು ಪೂರ್ಣವಾಗಿ ತೃಪ್ತಮಾಡಿ ರುವರು. ನಾನಾ ಹೊಳೆಗಳು ಹರಿದುಹೋಗಿ ಕಡಲಲ್ಲಿ ಒಮ್ಮೆ ಕೂಡಿದ ವೆಂದರೆ ತಮ್ಮ ತಮ್ಮ ನಾಮರೂಪಗಳನ್ನು ತ್ಯಜಿಸಿ ಕೇವಲ 'ಕಡಲು' ಎಂಬ ಒಂದೇ ಹೆಸರಿನಿಂದ ನಿರ್ದೇಶಿಸಲ್ಪಡುತ್ತಿರುವಂತೆ ಷೋಡಶ ಕಲೆಗಳು ಆತ್ಮ ನಲ್ಲಿ ಲೀನವಾದ ಮೇಲೆ ಆತ್ಮನೆಂದೆ ಸಂಬೋಧಿಸಲ್ಪಡುವವು. ಚಿಕ್ಕ ಬಾಲಕ

ರಿಗೆ ಸಹ ತಿಳಿಯುವಂತಹ ಈ ಉದಾಹರಣೆಯನ್ನು ಕೊಟ್ಟು ಋಷಿಗಳು ಈ ಉಪನಿಷತ್ತನ್ನು ಮುಗಿಸಿರುವರು.

ಈ ಉಪನಿಷತ್ತಿನಲ್ಲಿ ಆತ್ಮಜ್ಞಾನದ ಸಂಬಂಧದ ಮುಖ್ಯ ಮುಖ್ಯ ಪ್ರಶ್ನೆಗಳು ಬಿಡಿಸಲ್ಪಟ್ಟಿರುವವಲ್ಲದೆ ಅವು ಒಳ್ಳೇ ತರ್ಕಾನುಕ್ರಮದಿಂದ ಕೊಡಲ್ಪಟ್ಟಿರುವವು. ಒಟ್ಟಿನ ಮೇಲೆ ನೋಡಲಾಗಿ ಈ ಉಪನಿಷತ್ತು ಓದಲಿಕ್ಕೂ ತಿಳಿದುಕೊಳ್ಳಲಿಕ್ಕೂ ಬಹಳ ಸುಲಭವಿರುವದು. ಸ್ವರ್ಗ ಹಾಗೂ ಮೋಕ್ಷ ಇವೆರಡೂ ಭಿನ್ನ ಅವಸ್ಥೆಗಳು, ಹಾಗೂ ಮೋಕ್ಷವು ಸ್ವರ್ಗಕ್ಕಿಂತ ಶ್ರೇಷ್ಠ ಮತ್ತು ಆತ್ಯಂತಿಕ ಅವಸ್ಥೆಯೆಂದು ಇಲ್ಲಿ ವಿಂಗಡಿಸಿ ಹೇಳಲ್ಪಟ್ಟಿರುವದು. ಕಾಮ್ಯಬುದ್ಧಿಯಿಂದ ಮಾಡಿದ ಪುಣ್ಯಕರ್ಮಗಳ ಫಲವು ಸ್ವರ್ಗವು. ಆದರೆ ಪೂರ್ಣಜ್ಞಾನಿಯಾದ ನಿಷ್ಕಾಮ ಪುರುಷನಿಗೆ ದೊರೆಯುತಕ್ಕ ಫಲವು ಮೋಕ್ಷವು. ಮೋಕ್ಷದ ಮುಖ್ಯ ಲಕ್ಷಣವು ಪುನರ್ಜನ್ಮ ರಹಿತ ಆನಂದ ಸ್ಥಿತಿಯು. ಶ್ರದ್ಧೆ, ಬ್ರಹ್ಮಚರ್ಯೆ, ತಪಸ್ಸು, ವಿದ್ಯೆ ಇವು ಜ್ಞಾನಕ್ಕೆ - ಶುದ್ಧ ಆತ್ಮಜ್ಞಾನಕ್ಕೆ - ಅವಶ್ಯವಾದವುಗಳು, ಹೀಗೆ ಮಿಕ್ಕ ಉಪನಿಷತ್ತುಗಳಲ್ಲಿ ಹೇಳಲ್ಪಟ್ಟ ಪ್ರಮೇಯಗಳೆ ಪುನಃ ಭಿನ್ನ ಭಿನ್ನ ಸಂದರ್ಭಗಳಲ್ಲಿ ಭಿನ್ನ ಭಾಷೆಯಲ್ಲಿ ಇಲ್ಲಿ ನಿರೂಪಿಸಲ್ಪಟ್ಟಿರುವವು.

ಕೊನೆಗೆ ಕಲ್ಯಾಣಕಾರಕವಾದದ್ದನ್ನೆ ಕೇಳುವಾ, ಕಲ್ಯಾಣಕರವಾದದ್ದನ್ನೆ ನೋಡುವಾ, ಎಲ್ಲ ದೇವತೆಗಳು ನಮಗೆ ಕಲ್ಯಾಣದಾಯಿಗಳಾಗಲಿ ಮುಂತಾದ ಆಶೀರ್ವಾದಗಳನ್ನು ಬೇಡಿ ಋಷಿಗಳು ಉಪನಿಷತ್ತನ್ನು ಸಂಪೂರ್ಣ ಮುಗಿಸಿರುವರು. ಯಾವಾಗಲೂ ಸದ್ಭಾವನೆಯಿಂದ ಕಲ್ಯಾಣಕಾರಕವಾದ ವಾತಾವರಣವನ್ನೂ ಕಲ್ಯಾಣಕಾರಕ ಪರಿಸ್ಥಿತಿಯನ್ನೂ ಉತ್ಪನ್ನವಾಗುವಂತೆ ಮಾಡುವದು ಎಲ್ಲರ ಕರ್ತವ್ಯವಿರುವದು. ಕಲ್ಯಾಣವೆಂದರೆ ಕೇವಲ ಐಹಿಕ ಯೋಗಕ್ಷೇಮವೆಂದು ಯಾರೂ ತಿಳಿಯಬಾರದು. ಕಲ್ಯಾಣವೆಂದರೆ ಆತ್ಮಿಕ ಕಲ್ಯಾಣವು, ಆತ್ಮನ ಸತ್ ಸ್ಥಿತಿಯು, ಅದೇ ಎಲ್ಲರ ಧ್ಯೇಯವು, ಅದೇ ಆದರ್ಶವು, ಅದೇ ಸ್ಪೃಹಣೀಯ ಅವಸ್ಥೆಯು, ಆ ಅವಸ್ಥೆಯ ಕಡೆಗೆ ಹೋಗಲಿಕ್ಕೆ ಎಲ್ಲರಿಗೂ ಪರಮಾತ್ಮನು ಸ್ಫುರಣವನ್ನು ಕೊಡಲಿ ಎಂದು ಪ್ರಾರ್ಥಿಸಿ ಈ ಪ್ರಕರಣವನ್ನು ಮುಗಿಸುವಾ.

# ಮುಂಡಕೋಪನಿಷತ್ತು

## ಮುಂಡಕೋಪನಿಷತ್ತಿನ ಸಾರಾಂಶ

ಶಾಂತಿಮಂತ್ರದಲ್ಲಿ 'ಓಂ ಭದ್ರಂ ಕರ್ಣೇಭಿಃ' ಎಂದು ಆಶೀರ್ವಾದವನ್ನೂ ಕಲ್ಯಾಣವನ್ನೂ ದೇವತೆಗಳಿಂದ ಬೇಡಿಕೊಂಡು ಋಷಿಗಳು ಉಪನಿಷತ್ತನ್ನು ಆರಂಭಿಸಿರುವರು. ಗಟ್ಟಿಮುಟ್ಟಯಾದ ಮೈಕೈಗಳುಳ್ಳವರಾಗಿ ಸಾವವರೆಗೆ ದೇವತೆಗಳ ಸೇವೆಮಾಡಲಿಕ್ಕೆ ಸಮರ್ಥರಾಗಬೇಕು, ಎಂದು ಉಪನಿಷತ್ತನ್ನು ಬರೆದ ಕವಿಗಳು ಬಯಸುವರು. ತಮಗೆ ಸ್ವಸ್ತಿ ಇರಬೇಕು ಎಂದು ಇಂದ್ರ, ಸೂರ್ಯ, ಗರುಡ, ಬೃಹಸ್ಪತಿ ಮುಂತಾದ ದೇವತೆಗಳನ್ನು ಪ್ರಾರ್ಥಿಸುವರು. ಈ ಉಪನಿಷತ್ತಿನಲ್ಲಿ ಮೂರು ಮುಂಡಕಗಳೂ ಪ್ರತಿ ಮುಂಡಕದಲ್ಲಿ ಎರಡು ಖಂಡಗಳೂ ಇರುವವು. ಮಂತ್ರ ಸಂಖ್ಯೆಯು ೬೪.

೧ ನೆ ಮುಂಡಕದ ೧ ನೆ ಖಂಡದಲ್ಲಿ ಬ್ರಹ್ಮವಿದ್ಯೆಯ ಪರಂಪರೆಯನ್ನೂ ಪರಾ-ಅಪರಾ ವಿದ್ಯೆಗಳ ಲಕ್ಷಣಗಳನ್ನೂ ಆದಿಬ್ರಹ್ಮನ ತಪಸ್ಸಿನಿಂದ ಅನ್ನ ನಾಮರೂಪಾದಿಗಳ ಉತ್ಪತ್ತಿಯನ್ನೂ ಹೇಳಿದೆ. ಯಜ್ಞಪ್ರಧಾನವಾದ ಕರ್ಮಮಾರ್ಗವೂ ಅದರ ಫಲಗಳೂ ಅದರ ಹೀನತ್ವವೂ ಜ್ಞಾನಮಾರ್ಗದ ಶ್ರೇಷ್ಠತ್ವವೂ ಜ್ಞಾನಮಾರ್ಗವೂ ಅದರ ಫಲವೂ ೨ ನೆ ಮುಂಡಕದಲ್ಲಿ ಬಂದಿವೆ. ದ್ವಿತೀಯ ಮುಂಡಕದ ಪ್ರಥಮಖಂಡದಲ್ಲಿ ಒಂದೇ ಅಕ್ಷರದಲ್ಲಿ ಅಖಿಲ ವಿಶ್ವವೂ ಪ್ರಾಣಗಳೂ ಮನಸ್ಸೂ ರಸವೂ ಯಚ್ಚಾವತ್ ವಸ್ತುಗಳೂ ಉದ್ಭವಿಸಿದವೆಂದೂ ಇದನ್ನರಿತವನ ಸಂಶಯಗಳೆಲ್ಲವೂ ನಷ್ಟವಾಗುವವೆಂದೂ ಪ್ರತಿಪಾದನವಿರುವದು. ೨ ನೆ ಖಂಡದಲ್ಲಿ ಎಲ್ಲಕ್ಕೂ ಶ್ರೇಷ್ಠವಾದ ಪರಬ್ರಹ್ಮನ ಜ್ಞಾನವನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಋಷಿಗಳು ಹೇಳಿದ್ದಾರೆ. ಬ್ರಹ್ಮನನ್ನು ಲಕ್ಷ್ಯವಾಗಿಟ್ಟುಕೊಂಡು ನಮ್ಮ ಚಿತ್ತವು ಏಕಾಗ್ರವಾಗಿ ಉಪನಿಷತ್ ಜ್ಞಾನವನ್ನವಲಂಬಿಸಿ ಪ್ರಣವಮಂತ್ರದ ಉಪಾಸನೆಯಿಂದ ಬ್ರಹ್ಮನಲ್ಲಿ ತಾದಾತ್ಮ್ಯವನ್ನು ಹೊಂದಬೇಕೆಂಬುದೆ ಅವರ ಉಪದೇಶದ

ಸಾರವು. ಬ್ರಹ್ಮಸ್ವರೂಪದ ವರ್ಣನೆಯಂತೂ ಮಿಕ್ಕ ಖಂಡಗಳಲ್ಲಿರುವಂತೆ ಈ ಖಂಡದಲ್ಲಿಯೂ ಇರುವದು. ೩ ನೆ ಮುಂಡಕದ ಪ್ರಥಮ ಖಂಡದಲ್ಲಿ ಜೀವ ಶಿವರ ಪರಸ್ಪರ ಸಂಬಂಧವನ್ನೂ ಈ ಸಂಸಾರವು ಯಾವ ಮಾದರಿಯದಿರುವ ದೆಂಬದನ್ನೂ ಒಳ್ಳೆ ಸುಂದರವಾದ ರೂಪಕಗಳಿಂದ ಕವಿಗಳು ವರ್ಣಿಸಿರುವರು. ಬ್ರಹ್ಮಜ್ಞಾನಿಯ ಸ್ಥಿತಿಯು ಹೇಗಿರುವದು, ಬ್ರಹ್ಮಜ್ಞಾನಿಗಳಲ್ಲಿ ಅತಿಶ್ರೇಷ್ಠರು ಯಾರು, ಆ ಸ್ಥಿತಿಯನ್ನು ಹೊಂದುವ ಮಾರ್ಗವು ಯಾವದು, ಆ ಸ್ಥಿತಿಯನ್ನು ಹೊಂದಿದವರು ಎಷ್ಟು ಸಮರ್ಥರಿರುವರು, ಮುಂತಾದ ವಿಷಯಗಳು ಇದೇ ಖಂಡದಲ್ಲಿ ವಿವರಿಸಲ್ಪಟ್ಟಿರುವವು. ತೃತೀಯ ಮುಂಡಕದ ದ್ವಿತೀಯ ಖಂಡವು ಕೊನೆಯದು. ಆತ್ಮಜ್ಞಾನವು ಯಾರಿಗೆ ದೊರೆಯುವದು, ಯಾರಿಗೆ ದೊರೆಯ ಲಾರದು, ಎಂಬುದನ್ನು ಚರ್ಚಿಸಿ ಆತ್ಮಪ್ರಸಾದವಿಲ್ಲದೆ ಅದು ಎಂದಿಗೂ ಪ್ರಾಪ್ತವಾಗಲಾರದೆಂದು ಈ ಖಂಡದಲ್ಲಿ ನಿರ್ಧಾರವು ಮಾಡಲ್ಪಟ್ಟಿರುವದು. ಬ್ರಹ್ಮಜ್ಞಾನಿಗಳು ಪುನರ್ಜನನರಹಿತವಾದ ಅಮೃತತ್ವವನ್ನು ಪಡೆಯುವ-ರೆಂದೂ ಬ್ರಹ್ಮನಲ್ಲಿ ಎಲ್ಲ ವಿವಿಧತೆಗಳು ಲಯವಾಗಿ ಏಕವಾಗುವವೆಂದೂ ಈ ಖಂಡದಲ್ಲಿ ವಿವರಣೆಯಿರುವದು. ಈ ಬ್ರಹ್ಮವಿದ್ಯೆಯನ್ನು ಯಾರಿಗೆ ಕಲಿಸ ಬೇಕು ಎಂಬುದರ ವಿಷಯಕ್ಕೆ ಒಂದು ಋಗ್ವೇದ ಮಂತ್ರವನ್ನು ಉದಹರಿಸಿ ಈ ಉಪನಿಷತ್ತು ಸಮಾಪ್ತವಾಗಿರುವದು.

# ಮುಂಡಕೋಪನಿಷತ್

## ಶಾಂತಿಮಂತ್ರ

**ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯ-ಜತ್ರಾಃ ॥ ಸ್ಥಿರೈರಂಗೈಸ್ತುಷ್ಟುವಾಸಸ್ತನೂಭಿರ್ವ್ಯಶೇಮ ದೇವಹಿತಂ ಯದಾಯುಃ॥ ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ । ಸ್ವಸ್ತಿ ನಃಪೂಷಾ ವಿಶ್ವವೇದಾಃ ॥ ಸ್ವಸ್ತಿ ನಸ್ತಾ-ರ್ಕ್ಷ್ಯೋ ಅರಿಷ್ಟನೇಮಿಃ । ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

---

**ಶಾಂತಿಮಂತ್ರ—** ದೇವತೆಗಳೇ ನಮ್ಮ ಕಿವಿಗಳು ಯಾವಾಗಲೂ ಭದ್ರವಾದದ್ದನ್ನೇ ಕೇಳಲಿ. ಯಜನೀಯ ದೇವತೆಗಳೇ ನಮ್ಮ ಕಣ್ಣುಗಳು ಅಖಂಡ ಕಲ್ಯಾಣವನ್ನೇ ನೋಡಲಿ. ಸುದೃಢವಾದ ಅವಯವಗಳುಳ್ಳವರಾಗಿ

ಓಂ ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ॥ ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠ ಪುತ್ರಾಯ ಪ್ರಾಹ ॥ ೧ ॥ ಅಥರ್ವಣೇಯಾಂ ಪ್ರವದೇತ ಬ್ರಹ್ಮಾಽಥರ್ವಾ ತಾಂ ಪುರೋವಾಚಾಂಗಿರೇ ಬ್ರಹ್ಮವಿದ್ಯಾಮ್ ॥ ಸ ಭಾರದ್ವಾಜಾಯ ಸತ್ಯವಾಹಾಯ ಪ್ರಾಹ ಭಾರದ್ವಾಜೋಽಂಗಿರಸೇ ಪರಾವರಾಮ್ ॥ ೨ ॥ ಶೌನಕೋ ಹ ವೈ ಮಹಾಶಾಲೋಽಂಗಿ ರಸಂ ವಿಧಿವದುಪಸನ್ನಃ ಪಪ್ರಚ್ಛ ॥ ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ ॥ ೩ ॥ ತಸ್ಮೈ ಸ ಹೋವಾಚ ॥ ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ ಯದ್ಬ್ರಹ್ಮವಿದೋ ವದನ್ತಿ ಪರಾ ಚೈವಾ-ಪರಾ ಚ ॥ ೪ ॥ ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋಽಥರ್ವ ವೇದಃ ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ ॥ ೫ ॥

---

ಅಂದರೆ ಗಟ್ಟಿಯುಳ್ಳವರಾಗಿ ಒಟ್ಟುಗೂಡಿ ಎಲ್ಲ ಆಯುಷ್ಯವನ್ನು ಪರಮೇಶ್ವರ ಸ್ತವನದಲ್ಲಿಯೆ ಕಳೆಯುವಾ. ಶ್ರೇಷ್ಠಜ್ಞಾನಿಯಾದ ಇಂದ್ರನು ನಮ್ಮ ಕಲ್ಯಾಣ ಮಾಡಲಿ. ಸರ್ವಜ್ಞಾನಿಯಾದ ಸೂರ್ಯನು ನಮ್ಮ ಮೇಲೆ ಪ್ರಸನ್ನನಿರಲಿ. ಅರಿಷ್ಟಗಳನ್ನು ನಾಶಮಾಡುವ ಗರುಡನು ನಮ್ಮನ್ನು ಕೃಪಾ ದೃಷ್ಟಿಯಿಂದ ನೋಡಲಿ. ಬೃಹಸ್ಪತಿಯು ದಯಪಾಲಿಸಲಿ.

(೧) ಬ್ರಹ್ಮನು ಎಲ್ಲ ದೇವತೆಗಳಿಗೂ ಮೊದಲು ಹುಟ್ಟಿದನು. ಅವನು ವಿಶ್ವಕರ್ತನು. ಅವನು ಭುವನರಕ್ಷಕನು. ಅವನು ಸಕಲ ವಿದ್ಯೆಗಳಿಗೂ ಆಧಾರಭೂತವಾದ ಬ್ರಹ್ಮವಿದ್ಯೆಯನ್ನು ತನ್ನ ಚೊಚ್ಚಿಲ ಮಗನಾದ ಅಥರ್ವ ನಿಗೆ ಬೋಧಿಸಿದನು. (೨) ಬ್ರಹ್ಮನಿಂದ ಕಲಿತ ಈ ಬ್ರಹ್ಮವಿದ್ಯೆಯನ್ನು ಪೂರ್ವದಲ್ಲಿ ಅಥರ್ವನು ಅಂಗಿರನಿಗೆ ಉಪದೇಶಿಸಿದನು. ಅಂಗಿರನು ಭರ-ದ್ವಾಜ ಕುಲೋತ್ಪನ್ನನಾದ ಸತ್ಯವಾಹನಿಗೆ ಈ ಬೋಧವನ್ನು ಮಾಡಿದನು. ಸತ್ಯವಾಹನು ಈ ಪರಾಪರ ವಿದ್ಯೆಯನ್ನು ಅಂಗಿರಸನಿಗೆ ಉಪದೇಶಿಸಿದನು. (೩) ಒಮ್ಮೆ ಮಹಾನ್ ಗೃಹಸ್ಥಾಶ್ರಮಿಯಾದ ಶೌನಕನು ಅಂಗಿರಸನ ಬಳಿಗೆ ಶಿಷ್ಯನೋಪಾದಿಯಲ್ಲಿ ಬಂದು ಪ್ರಶ್ನೆ ಮಾಡಿದ್ದೇನಂದರೆ- ಭಗವನ್, ಯಾವ ದನ್ನು ಅರಿತುಕೊಳ್ಳುವದರಿಂದ ಅಖಿಲ ವಿಶ್ವದ ಜ್ಞಾನವಾಗುವದೊ ಅದನ್ನು ಹೇಳಬೇಕು. (೪) ಅಂಗಿರಸನು ಅಂದದ್ದು— ನೀನು ತಿಳಿಯತಕ್ಕ ವಿದ್ಯೆ ಗಳು ಎರಡು. ಬ್ರಹ್ಮಜ್ಞಾನಿಗಳು ಅವುಗಳನ್ನು ಪರಾ ಮತ್ತು ಅಪರಾ ಎಂದು ಕರೆಯುವರು. (೫) ಅವುಗಳಲ್ಲಿ ಅಪರಾ ಎಂಬುದು ಋಗ್ವೇದ, ಯಜು-

**ಯತ್ತದ-ದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃ ಶ್ರೋತ್ರಂ ತದಪಾಣಿ ಪಾದಂ ನಿತ್ಯಂ ವಿಭುಂಸರ್ವಗತಂ ಸುಸೂಕ್ಷ್ಮಂ || ತದವ್ಯಯಂ ತದ್ಭೂತ ಯೋನಿಂ ಪರಿಪಶ್ಯಂತಿ ಧೀರಾಃ|| ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ||೬|| ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಂಭವನ್ತಿ || ಯಥಾ ಸತಃ ಪುರುಷಾತ್ಕೇಶಲೋಮಾನಿ ತಥಾಕ್ಷರಾತ್ಸಂಭವತೀಹ ವಿಶ್ವಮ್ ||೭|| ತಪಸಾ ಚೀಯತೇ ಬ್ರಹ್ಮ ತತೋಽನ್ನಮಭಿಜಾಯತೇ || ಅನ್ನಾತ್ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಮ್ || ೮ || ಯಃ ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ || ತಸ್ಮಾದೇತದ್ ಬ್ರಹ್ಮ ನಾಮರೂಪಮನ್ನಂ ಚ ಜಾಯತೇ || ೯ || ಇತಿ ಪ್ರಥಮಮುಂಡಕೇ ಪ್ರಥಮಃ ಖಂಡಃ ||**

---

ರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಮತ್ತು ಜ್ಯೋತಿಷ ಇವುಗಳನ್ನು ಒಳಕೊಂಡಿರುವದು. ಯಾವ ವಿದ್ಯೆಯಿಂದ ಅಕ್ಷರವಾದ ಆತ್ಮವನ್ನರಿಯಬಹುದೊ ಅದೇ ಪರಾವಿದ್ಯೆಯು. (೬) ಆತ್ಮತತ್ವವು ನೋಡಲಿಕ್ಕೂ ಹಿಡಿಯಲಿಕ್ಕೂ ಬಾರದ್ದು, ಸಂಬಂಧ ವಿರಹಿತವಿದ್ದದ್ದು, ಬಣ್ಣ ಕಣ್ಣು ಕಿವಿ ಕೈಕಾಲುಗಳಿಲ್ಲದ್ದು. ನಿತ್ಯವು, ಸರ್ವ ವ್ಯಾಪಿಯು, ಸರ್ವಗತವು, ಅತ್ಯಂತ ಸೂಕ್ಷ್ಮವು, ಅವ್ಯಯವು, ಸರ್ವಭೂತ ಮಾತ್ರಗಳ ಉತ್ಪತ್ತಿಸ್ಥಾನವು. ಬಲ್ಲಿದರು ಎಲ್ಲೆಲ್ಲಿಯೂ ಇದನ್ನೆ ನೋಡುವರು. (೭) ಜೇಡವು ತನ್ನ ಶರೀರದಿಂದ ಎಳೆಗಳನ್ನು ಬಿಟ್ಟು ಪುನಃ ಅವುಗಳನ್ನು ನೇದಿಕೊಳ್ಳುವಂತೆ, ಭೂಮಿಯಲ್ಲಿ ವನಸ್ಪತಿಗಳು ಹುಟ್ಟುವಂತೆ, ಮೈಮೇಲೆ ಕೂದಲುಗಳು ಬರುವಂತೆ ಈ ವಿಶ್ವವೆಲ್ಲವೂ ಆ ಅಕ್ಷರದಿಂದಲೆ ಉದ್ಭವಿಸುವದು. (೮) ತನ್ನ ತಪಸ್ಸಿನಿಂದ ಬ್ರಹ್ಮನು ವಿಸ್ತಾರಹೊಂದುವನು. ಆತನಿಂದ ಅನ್ನದ ಅಂದರೆ ಜಡದ ಉತ್ಪತ್ತಿಯು. ಅನ್ನದಿಂದಲೆ ಮುಂದೆ ಪ್ರಾಣ, ಮನಸ್ಸು, ಸತ್ಯ, ಲೋಕಗಳು, ಕರ್ಮದಲ್ಲಿ ಅಮೃತತ್ವ, ಇವುಗಳು ಹುಟ್ಟುವವು. (೯) ಯಾವನು ಸರ್ವಜ್ಞನೊ ಎಲ್ಲವನ್ನು ಅರಿಯುವಂಥವನೊ ಅವನ ತಪಸ್ಸಾದರೂ ಜ್ಞಾನಮಯವೆ ಇರುವದು. ಅವನಿಂದ ಈ ಬ್ರಹ್ಮನ ಉದ್ಭವವು. ನಾಮರೂಪ, ಅನ್ನ ಅಂದರೆ ಜಡ, ಇವುಗಳ ಹುಟ್ಟು ಅವನಿಂದಲೆ.

ಪ್ರಥಮ ಮುಂಡಕದ ಪ್ರಥಮ ಖಂಡವು ಸಮಾಪ್ತ.

ತದೇತತ್ಸತ್ಯಂ ಮಂತ್ರೇಷು ಕರ್ಮಾಣಿ ಕವಯೋಯಾನ್ಯಪಶ್ಯಂಸ್ತಾನಿ ತ್ರೇತಾಯಾಂ ಬಹುಧಾ ಸಂತತಾನಿ || ತಾನ್ಯಾಚರಥ ನಿಯತಂ ಸತ್ಯಕಾಮಾ | ಏಷ ವಃ ಪಂಥಾಃ ಸುಕೃತಸ್ಯಲೋಕೇ || ೧ || ಯದಾ ಲೇಲಾಯತೇ ಹ್ಯರ್ಚಿಸ್ಸಮಿದ್ಧೇ ಹವ್ಯವಾಹನೇ || ತದಾಜ್ಯಭಾಗಾವಂತರೇಣಾಹುತೀ ಪ್ರತಿಪಾದಯೇಚ್ಛ್ರದ್ಧಯಾ ಹುತವಮ್ || ೨ || ಯಸ್ಯಾಗ್ನಿಹೋತ್ರಮದರ್ಶಮಪೌರ್ಣಮಾಸಮಚಾತುರ್ಮಾಸ್ಯಮನಾಗ್ರಯಣಮತಿಥಿವರ್ಜಿತಂ ಚ ಅಹುತಮವೈಶ್ವದೇವಮವಿಧಿನಾ ಹುತಮಾಸಪ್ತಮಾಂ ಸ್ತಸ್ಯ ಲೋಕಾನ್ಹಿನಸ್ತಿ || ೩ || ಕಾಲೀಕರಾಲೀ ಚ ಮನೋಜವಾ ಚ ಸುಲೋಹಿತಾ ಯಾ ಚ ಸುಧೂಮ್ರವರ್ಣಾ || ಸ್ಫುಲಿಂಗಿನೀ ವಿಶ್ವರುಚೀ ಚ ದೇವೀ ಲೇಲಾಯಮಾನಾ ಇತಿ ಸಪ್ತಜಿಹ್ವಾಃ || ೪ || ಏತೇಷು ಯಶ್ಚರತೇ ಭ್ರಾಜಮಾನೇಷು ಯಥಾಕಾಲಂ ಚಾಹುತಯೋ ಹ್ಯಾದದಾಯನ್ || ತನ್ನಯಂತೇ ಸೂರ್ಯಸ್ಯ ರಶ್ಮಯೋ ಯತ್ರ ದೇವಾನಾಂ ಪತಿರೇಕೋಧಿವಾಸಃ || ೫ || ಏಹ್ಯೇಹೀತಿ ತಮಾ

---

(೧) ಅದು ಈ ಸತ್ಯವು. ವೇದಮಂತ್ರಗಳಲ್ಲಿ ಕವಿಗಳು ಕಂಡ ಕರ್ಮಗಳು ತ್ರೇತಾಯುಗದಲ್ಲಿ ವಿವಿಧವಾಗಿ ವಿಸ್ತರಿಸಿದವು. ನೀವು ಆ ಕರ್ಮಗಳನ್ನು ಸತ್ಯವನ್ನರಿಯುವ ಇಚ್ಛೆಯಿಂದ ನಿತ್ಯ ಆಚರಿಸಿರಿ. ಈ ಲೋಕದಲ್ಲಿ ಇದೇ ಪುಣ್ಯದ ಮಾರ್ಗವು. (೨) ಯಜ್ಞಕುಂಡದಲ್ಲಿಯ ಅಗ್ನಿಯು ಹೊತ್ತಿ ಅದರ ಜ್ವಾಲೆಯು ಚನ್ನಾಗಿ ಹೊಯ್ದಾಡಲಾರಂಭಿಸಿತೆಂದರೆ ಎರಡು ತುಪ್ಪದ ಆಹುತಿಗಳ ನಡುವೆ ಶ್ರದ್ಧಾಯುಕ್ತನಾಗಿ ನೀನು ನಿಯತವಾದ ಆಹುತಿಯನ್ನು ಕೊಡು. (೩) ಯಾವ ಅಗ್ನಿಹೋತ್ರಿಯು ಅಮಾವಾಸ್ಯೆ ಹುಣ್ಣಿವೆ ಚಾತುರ್ಮಾಸಗಳಲ್ಲಿ ಕೊಡತಕ್ಕ ಆಹುತಿಗಳನ್ನು ಕೊಡುವದಿಲ್ಲವೊ ವರ್ಷಾರಂಭದ ಫಲಾಹುತಿಯನ್ನೀಯುವದಿಲ್ಲವೊ ಯಾವನ ಅಗ್ನಿಹೋತ್ರವ್ರತವು ಆಹುತಿ ಅತಿಥಿ ವೈಶ್ವದೇವ ವರ್ಜಿತವೊ, ಯಾವನು ವಿಧಿವಿರುದ್ಧವಾಗಿ ಆಹುತಿಯನ್ನು ಕೊಡುವನೊ ಅವನು ಸಪ್ತಸ್ವರ್ಗಗಳನ್ನು ಪಡೆಯನು. (೪) ಕಪ್ಪಾದ ಕಾಲಿ, ಭಯಾನಕವಾದ ಕರಾಲಿ, ಮನಸ್ಸಿನಷ್ಟು ಚಾಪಲ್ಯವುಳ್ಳ ಮನೋಜವೆ, ಆರಕ್ತವಾದ ಸುಲೋಹಿತೆ, ಹೊಗೆಬಣ್ಣದ ಸುಧೂಮ್ರವರ್ಣೆ, ಕಿಡಿಗೆದರುವ ಸ್ಫುಲಿಂಗಿನೀ, ಸುಂದರರೂಪಿಯಾದ ವಿಶ್ವರುಚಿ ಇವು ಅಗ್ನಿದೇವತೆಯ ಹೊಯ್ದಾಡುವ ಏಳು ನಾಲಿಗೆಗಳು. (೫) ಅಗ್ನಿಜ್ವಾಲೆಗಳು ಹೀಗೆ ಮಿಂಚುತ್ತಿರುವಾಗ ಯಥಾಕಾಲಕ್ಕೆ ಆಹುತಿಗಳನ್ನು ಸಮರ್ಪಿಸುವ ಪುರುಷನನ್ನು ಆ ಜ್ವಾಲೆಗಳು ಸೂರ್ಯ ಕಿರಣಗಳಾಗಿ ದೇವೇಂದ್ರನು ಒಬ್ಬನೆ ಇರು

ಹುತಯಃ ಸುವರ್ಚಸಃ ಸೂರ್ಯಸ್ಯ ರಶ್ಮಿಭಿರ್ಯಜಮಾನಂ ವಹಂತಿ ॥ ಪ್ರಿಯಾಂ ವಾಚ
ಮಭಿವದಂತ್ಯೋಽರ್ಚಯಂತ್ಯ ಏಷ ವಃ ಪುಣ್ಯಃ ಸುಕೃತೋ ಬ್ರಹ್ಮಲೋಕಃ ॥ ೬ ॥
ಪ್ಲವಾ ಹ್ಯೇತೇ ಅದೃಢಾ ಯಜ್ಞರೂಪಾ ಅಷ್ಟಾದಶೋಕ್ತಮವರಂ ಏಷು ಕರ್ಮ ॥
ಏತಚ್ಛ್ರೇಯೋಯೇಽಭಿನಂದಂತಿ ಮೂಢಾ ಜರಾಮೃತ್ಯುಂ ತೇ ಪುನರೇವಾಪಿ-
ಯಂತಿ ॥ ೭ ॥ ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂ
ಮನ್ಯಮಾನಾಃ ॥ ಜಂಘನ್ಯಮಾನಾಃ ಪರಿಯಂತಿ ಮೂಢಾ ಅಂಧೇನೈವ ನೀಯ-
ಮಾನಾ ಯಥಾಂಧಾಃ ॥ ೮ ॥ ಅವಿದ್ಯಾಯಾಂ ಬಹುಧಾ ವರ್ತಮಾನಾ ವಯಂ
ಕೃತಾರ್ಥಾ ಇತ್ಯಭಿಮನ್ಯಂತಿ ಬಾಲಾಃ ॥ ಯತ್ಕರ್ಮಿಣೋ ನ ಪ್ರವೇದಯಂತಿ
ರಾಗಾತ್ತೇನಾತುರಾಃ ಕ್ಷೀಣಲೋಕಾಶ್ಚ್ಯವಂತೇ ॥ ೯ ॥ ಇಷ್ಟಾಪೂರ್ತಂ ಮನ್ಯ
ಮಾನಾ ವರಿಷ್ಠಂ ನಾನ್ಯಚ್ಛ್ರೇಯೋ ವೇದಯಂತೇ ಪ್ರಮೂಢಾಃ ॥ ನಾಕಸ್ಯ
ಪೃಷ್ಠೇ ತೇ ಸುಕೃತೇಽನುಭೂತ್ವೇಮಂ ಲೋಕಂ ಹೀನತರಂ ವಾ ವಿಶಂತಿ ॥ ೧೦ ॥

---

ತ್ತಿರುವ ಸ್ಥಾನಕ್ಕೆ ಕರೆದೊಯ್ಯುವವು. (೬) 'ಬನ್ನಿ ಬನ್ನಿ' ಎಂದು ಸಂಬೋಧಿಸುತ್ತ ಈ ಯಜಮಾನನನ್ನು ಆಹುತಿಗಳು ಹೊಳೆಯುವ ಸೂರ್ಯ ಕಿರಣಗಳೊಂದಿಗೆ ಕರೆದುಕೊಂಡು ಹೋಗುವವು. ಪ್ರಿಯಭಾಷಣಮಾಡುತ್ತ ಆದರಿಸುತ್ತ ನಿಮ್ಮ ಸುಕೃತದ ಫಲವಾದ ಪುಣ್ಯಪೂರ್ಣ ಬ್ರಹ್ಮಲೋಕವು ಇದೇ ಎಂದು ಅವು ಯಜಮಾನನಿಗೆ ಹೇಳುವವು. (೭) ಆದರೆ ಹದಿನೆಂಟರಿಂದ, ಅಂದರೆ ೧೬ ಋತ್ವಿಕ್ಕುಗಳು, ಯಜಮಾನ ಹಾಗೂ ಗೃಹಿಣಿ ಹೀಗೆ ಒಟ್ಟು ಹದಿನೆಂಟರಿಂದ ಒಡಗೂಡಿದ, ಹಾಗೂ 'ಅವರ' ಅಂದರೆ ಹೀನ ಕರ್ಮಯುಕ್ತವಾದ ಯಜ್ಞರೂಪ ನೌಕೆಗಳು ನಿರ್ಬಲವಾದವುಗಳು. ಯಜ್ಞಗಳೆ ಅತ್ಯಂತ ಶ್ರೇಷ್ಠವೆಂದು ಆನಂದಿಸುವ ಮೂಢರು ಪುನಃ ಪುನಃ ಹುಟ್ಟು ಸಾವುಗಳಿಗೆ ಒಳಗಾಗುವರು. (೮) ಅವಿದ್ಯೆಯಲ್ಲಿ ಮುಳುಗಿದ್ದರೂ ತಾವು ಪಂಡಿತರು, ಧೀರರು ಎಂದು ತಿಳಿದುಕೊಳ್ಳುವ ಮೂಢರು ಕುರುಡರ ಬೆನ್ನು ಬಿದ್ದ ಕುರುಡರಂತೆ ಎಡವುತ್ತ ಬೀಳುತ್ತ ಹುಟ್ಟು ಸಾವುಗಳಲ್ಲಿ ಸುತ್ತಾಡುವರು. (೯) ಅನೇಕವಿಧವಾಗಿ ಗಾಢ ಅಜ್ಞಾನದಲ್ಲಿದ್ದರೂ ಬಾಲಬುದ್ಧಿಯವರು ತಾವು ಕೃತಾರ್ಥರೆಂದು ತಿಳಿಯುವರು. ಕರ್ಮಾಸಕ್ತರು ಕರ್ಮದಲ್ಲಿಯ ತಮ್ಮ ಪ್ರೀತಿಯಿಂದ ಮೋಹಿತರಾಗಿ ಸತ್ಯವನ್ನು ತಿಳಿಯದೆ ಹೋಗುವರು. ಆದುದರಿಂದ ಅವರು ದುಃಖಿತರಾಗುವರು. ತೀವ್ರವೆ ಪುಣ್ಯವು ಮುಗಿದು ಸ್ವರ್ಗದಿಂದ ಚ್ಯುತರಾಗುವರು. (೧೦) ಇಷ್ಟಾಪೂರ್ತಿಯೆ ವರಿಷ್ಠವಾದದ್ದು,

ತಪಃ ಶ್ರದ್ಧೇ ಯೇ ಹ್ಯುಪವಸಂತ್ಯರಣ್ಯೇ ಶಾಂತಾ ವಿದ್ವಾಂಸೋ ಭೈಕ್ಷಚರ್ಯಾಂ ಚರಂತಃ ॥ ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ॥೧೧॥ ಪರೀಕ್ಷ್ಯ ಲೋಕಾನ್ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ॥ ತದ್ವಿಜ್ಞಾನಾರ್ಥಂ ಸ ಗುರು-ಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥ ೧೨ ॥ ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತಚಿತ್ತಾಯ ಶಮಾನ್ವಿತಾಯ ॥ ಯೇನಾ-ಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ವತೋ ಬ್ರಹ್ಮವಿದ್ಯಾಮ್ ॥೧೩॥

ಇತಿ ಪ್ರಥಮ ಮುಂಡಕೇ ದ್ವಿತೀಯಃ ಖಂಡಃ ॥ ೨ ॥

ಪ್ರಥಮ ಮುಂಡಕಂ ಸಮಾಪ್ತಮ್

---

ಇದಕ್ಕೂ ಶ್ರೇಯಸ್ಸುಳ್ಳದ್ದು ಯಾವದೂ ಇಲ್ಲವೆಂದು ತಿಳಿಯುವ ಹಿರೇ ಹುಚ್ಚರು ಸ್ವರ್ಗದಲ್ಲಿ ತಮ್ಮ ಪುಣ್ಯಫಲಗಳನ್ನುಂಡು ಈ ಲೋಕವನ್ನು ಅಥವಾ ಇದಕ್ಕೂ ಹೀನ ಲೋಕವನ್ನು ಪುನಃ ಪ್ರವೇಶಿಸುವರು. (೧೧) ಆದರೆ ಯಾವ ವಿದ್ವಾಂಸರು ತಪಸ್ಸು ಮತ್ತು ಶ್ರದ್ಧಾಯುಕ್ತರಾಗಿ ಭಿಕ್ಷೆಯಮೇಲೆ ನಿರ್ವಾಹಮಾಡುತ್ತ ಶಾಂತಚಿತ್ತದಿಂದ ಅರಣ್ಯದಲ್ಲಿ ವಾಸಿಸುತ್ತಾರೊ ಅವರು ಅವ್ಯಯ ಹಾಗೂ ಅಮೃತ ಪುರುಷನಿದ್ದೆಡೆಗೆ ರಜೋವಿರಹಿತರಾಗಿ ಸೂರ್ಯ ದ್ವಾರದಿಂದ ಹೋಗುವರು. (೧೨) ಕರ್ಮಮಾರ್ಗದಿಂದ ದೊರಕುವಂಥ ಲೋಕಗಳನ್ನು ಪರೀಕ್ಷಿಸಿ ಬ್ರಾಹ್ಮಣನು ಆ ಲೋಕಗಳ ವಿಷಯಕ್ಕೆ ವಿರಕ್ತನಾಗುವನು. ಯಾಕಂದರೆ ಸ್ವಯಂಭು ಪರಮಾತ್ಮನು ಕರ್ಮಮಾರ್ಗದಿಂದ ಲಭ್ಯನಲ್ಲವೆಂಬುದನ್ನು ಅವನು ಬಲ್ಲನು. ಪರಮೇಶ್ವರನ ಜ್ಞಾನಾರ್ಥವಾಗಿ ಕೈಯಲ್ಲಿ ಸಮಿಧೆಯನ್ನು ಹಿಡಿದುಕೊಂಡು ವೇದಜ್ಞ ಬ್ರಹ್ಮನಿಷ್ಠ ಗುರುವಿನ ಸನ್ನಿಧಿಗೆ ಹೋಗಬೇಕು. (೧೩) ಆ ವಿದ್ವಾಂಸನು ಹೀಗೆ ತನ್ನ ಸಮೀಪಕ್ಕೆ ಬಂದ ಶಾಂತಚಿತ್ತದವನಿಗೆ ಹಾಗೂ ಶಮದಿಂದ ಕೂಡಿದವನಿಗೆ ಯಾವ ಬ್ರಹ್ಮವಿದ್ಯೆಯಿಂದ ಸತ್ಯ ಅಕ್ಷರ ಪುರುಷನ ಜ್ಞಾನವಾಗುವದೊ ಆ ವಿದ್ಯೆಯನ್ನು ಪೂರ್ಣವಾಗಿ ಉಪದೇಶಿಸುವನು.

ಪ್ರಥಮ ಮುಂಡಕದ ದ್ವಿತೀಯ ಖಂಡವು ಸಮಾಪ್ತ

ಮೊದಲನೆ ಮುಂಡಕವು ಸಮಾಪ್ತ

**ತದೇತತ್ಸತ್ಯಂ ಯಥಾ ಸುದೀಪ್ತಾತ್ಪಾವಕಾದ್ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ ॥ ತಥಾಕ್ಷರಾದ್ವಿವಿಧಾಃ ಸೋಮ್ಯ ಭಾವಾಃ ಪ್ರಜಾಯಂತೇ ತತ್ರ ಚೈವಾಪಿಯಂತಿ ॥ ೧ ॥ ದಿವ್ಯೋ ಹ್ಯಮೂರ್ತಃ ಪುರುಷಃ ಸಬಾಹ್ಯಾಭ್ಯಂತರೋ ಹ್ಯಜಃ ॥ ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ಪರತಃ ಪರಃ ॥ ೨ ॥ ಏತಸ್ಮಾಜ್ಜಾಯತೇ ಪ್ರಾಣೋ ಮನಃಸರ್ವೇಂದ್ರಿಯಾಣಿ ಚ ॥ ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥ ೩ ॥ ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ ॥ ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪೃಥಿವೀ ಹ್ಯೇಷ ಸರ್ವಭೂತಾಂತರಾತ್ಮಾ ॥ ೪ ॥ ತಸ್ಮಾದಗ್ನಿಃ ಸಮಿಧೋ ಯಸ್ಯ ಸೂರ್ಯಃ ಸೋಮಾತ್ಪರ್ಜನ್ಯ ಓಷಧಯಃ ಪೃಥಿವ್ಯಾಂ ॥ ಪುಮಾನ್ ರೇತಃ ಸಿಂಚತಿ ಯೋಷಿತಾಯಾಂ ಬಹ್ವೀಃ ಪ್ರಜಾಃ ಪುರುಷಾತ್ಸಂಪ್ರಸೂತಾಃ ॥ ೫ ॥ ತಸ್ಮಾದೃಚಃ ಸಾಮ ಯಜೂಂಷಿ ದೀಕ್ಷಾ ಯಜ್ಞಾಶ್ಚ ಸರ್ವೇ ಕ್ರತವೋ ದಕ್ಷಿಣಾಶ್ಚ ॥ ಸಂವತ್ಸರಶ್ಚ ಯಜಮಾನಶ್ಚ ಲೋಕಾಃ**

---

(೧) ಅದು ಈ ಸತ್ಯವು. ಒಂದೇ ಚನ್ನಾಗಿ ಹೊತ್ತಿದ ಅಗ್ನಿಯಿಂದ ಸಾವಿರಾರು ಕಿಡಿಗಳು ಹೊರಡುವಂತೆ ಅಕ್ಷರಬ್ರಹ್ಮನಿಂದ ವಿವಿಧ ವಸ್ತುಗಳು ಹುಟ್ಟಿ ಅಲ್ಲಿಯೆ ಲಯಹೊಂದುವವು. (೨) ಆದರೆ ದಿವ್ಯ ಅನಾದಿ ರೂಪರಹಿತ ಹಾಗೂ ಒಳಹೊರಗೆಂಬ ಭೇದವಿಲ್ಲದ ಆ ಪುರುಷನು ಪ್ರಾಣಮನಗಳಾಚೆಗಿರುವನು. ಅವನು ಅತ್ಯಂತ ಶುಭ್ರನು. ನಿರ್ಮಲನು ಶ್ರೇಷ್ಠವಾದ ಅಕ್ಷರಕ್ಕಿಂತಲೂ ವರಿಷ್ಠನು. (೩) ಪ್ರಾಣ ಮನಸ್ಸು ಇಂದ್ರಿಯಗಳು ಅವನಿಂದ ಹುಟ್ಟುವವು. ಅಪ್ಪು ಜ್ಯೋತಿ ವಾಯು ಆಕಾಶಗಳು ವಿಶ್ವಾಧಾರವಾದ ಪೃಥ್ವಿ ಇವುಗಳ ಉದ್ಭವವು ಅವನಿಂದಲೆ. (೪) ಅಗ್ನಿಯು ಅವನ ಶಿರಸ್ಸು, ಚಂದ್ರಸೂರ್ಯರು ಕಣ್ಣುಗಳು, ದಿಕ್ಕುಗಳು ಕಿವಿಗಳು. ಉದ್ಬೋಧಿತ ವೇದಗಳೆ ವಾಣಿಯು, ವಾಯುವು ಅವನ ಪ್ರಾಣವು. ವಿಶ್ವವು ಅವನ ಹೃದಯವು. ಪೃಥ್ವಿಯು ಅವನ ಪಾದದೆಡೆಗೆ ಇರುವದು. ಅವನು ಸರ್ವಭೂತಾಂತರಾತ್ಮನು. (೫) ಸೂರ್ಯನೆ ಸಮಿಧೆಯಾದ ಅಗ್ನಿಯ ಉತ್ಪತ್ತಿಯು ಅವನಿಂದಲೆ. ಸೋಮನಿಂದ ಉತ್ಪನ್ನವಾಗುವ ಪರ್ಜನ್ಯವು, ಭೂಮಿಯಲ್ಲಿ ಹುಟ್ಟುವ ಔಷಧಿಗಳು ಅವನಿಂದಲೆ. ಪುರುಷನು ಸ್ತ್ರೀಯೋನಿಯಲ್ಲಿ ರೇತಸಿಂಚನ ಮಾಡುವನು ಮತ್ತು ಪರಮಪುರುಷನಿಂದ ವಿಪುಲ

ಸೋಮೋ ಯತ್ರ ಪವತೇ ಯತ್ರ ಸೂರ್ಯಃ ॥೬॥ ತಸ್ಮಾಚ್ಚ ದೇವಾ ಬಹುಧಾ ಸಂಪ್ರಸೂತಾಃ ಸಾಧ್ಯಾ ಮನುಷ್ಯಾಃ ಪಶವೋ ವಯಾಂಸಿ ॥ ಪ್ರಾಣಾಪಾನೌ ವ್ರೀಹಿಯವೌ ತಪಶ್ಚ ಶ್ರದ್ಧಾ ಸತ್ಯಂ ಬ್ರಹ್ಮಚರ್ಯಂ ವಿಧಿಶ್ಚ ॥೭॥ ಸಪ್ತ ಪ್ರಾಣಾ: ಪ್ರಭವಂತಿ ತಸ್ಮಾತ್ಸಪ್ತಾರ್ಚಿಷಃ ಸಮಿಧ: ಸಪ್ತ ಹೋಮಾ: ॥ ಸಪ್ತ ಇಮೇ ಲೋಕಾ ಯೇಷು ಚರಂತಿ ಪ್ರಾಣಾ ಗುಹಾಶಯಾ ನಿಹಿತಾ: ಸಪ್ತ ಸಪ್ತ ॥ ೮ ॥ ಅತಃ ಸಮುದ್ರಾ ಗಿರಯಶ್ಚ ಸರ್ವೇಽಸ್ಮಾತ್ಸ್ಯಂದಂತೇ ಸಿಂಧವಃ ಸರ್ವರೂಪಾಃ ॥ ಅತಶ್ಚ ಸರ್ವಾ ಓಷಧಯೋ ರಸಾಶ್ಚ ಏನೈಷ ಭೂತೈಸ್ತಿಷ್ಠತೇ ಹ್ಯಂತರಾತ್ಮಾ ॥೯॥ ಪುರುಷ ಏವೇದಂ ವಿಶ್ವಂ ಕರ್ಮ ತಪೋ ಬ್ರಹ್ಮ ಪರಾಮೃತಮ್ ॥ ಏತದ್ಯೋ ವೇದ ನಿಹಿತಂ ಗುಹಾಯಾಂ ಸೋಽವಿದ್ಯಾಗ್ರಂಥಿಂ ವಿಕಿರತೀಹ ಸೋಮ್ಯ ॥೧೦॥

ಇತಿ ದ್ವಿತೀಯಮುಂಡಕೇ ಪ್ರಥಮಃ ಖಂಡಃ ॥ ೧ ॥

---

ಪ್ರಜೆಯು ಹುಟ್ಟುವದು. (೬) ಋಗ್ವೇದ, ಯಜುರ್ವೇದ, ಸಾಮವೇದ ಗಳು, ದೀಕ್ಷೆ, ದಕ್ಷಿಣೆಗಳು, ಯಜ್ಞ, ಕ್ರತುಗಳು, ಸಂವತ್ಸರ, ಯಜಮಾನ, ಲೋಕಗಳು, ಚಂದ್ರಸೂರ್ಯರು ಪಾವನಮಾಡುವ ಎಲ್ಲ ಸ್ಥಾನಗಳು ಅವ ನಿಂದಲೆ ಪ್ರಕಟವಾಗಿರುವವು. (೭) ನಾನಾ ದೇವತೆಗಳು, ಸಾಧ್ಯರು, ಮನುಷ್ಯರು, ಪಶುಪಕ್ಷಿಗಳು, ಪ್ರಾಣಾಪಾನಗಳು, ವ್ರೀಹಿಯವಗಳು, ತಪಸ್ಸು ಶ್ರದ್ಧೆ ಸತ್ಯ ಬ್ರಹ್ಮಚರ್ಯ, ಇವುಗಳ ಉಗಮಸ್ಥಾನವು ಅವನೇ. (೮) ಸಪ್ತಪ್ರಾಣಗಳು, ಅಗ್ನಿಯ ಏಳು ನಾಲಿಗೆಗಳು, ಸಪ್ತಸಮಿಧೆಗಳು, ಸಪ್ತಹೋಮಗಳು, ಹೃದಯಸ್ಥ ಪ್ರಾಣಗಳು ಚರಿಸುವ ಏಳು ಲೋಕಗಳು, ಏಳು ಏಳು ಆಗಿ ಇಡಲ್ಪಟ್ಟ ಎಲ್ಲವುಗಳೂ ಅವನಿಂದಲೆ ಪ್ರಭವಿಸಿರುವವು. (೯) ಇದರಿಂದಲೆ ಎಲ್ಲ ಸಮುದ್ರಗಳು, ಎಲ್ಲ ಬೆಟ್ಟಗಳು; ಎಲ್ಲ ಪ್ರಕಾರದ ನದಿಗಳು ಇವನಿಂದಲೆ ಹರಿಯುವವು. ಎಲ್ಲ ಔಷಧಿಗಳ ಉಗಮವು ಇವ ನಿಂದಲೆ. ಯಾವ ಆನಂದದ ಮೂಲಕ ಅಂತರಾತ್ಮನು ಭೂತಸಂಘದ ಜೊತೆಗೆ ವಾಸಿಸುವನೊ ಆ ಆನಂದದ ಮೂಲವಾದರೂ ಇವನಲ್ಲಿಯೆ. (೧೦) ಈ ವಿಶ್ವವೆಲ್ಲವೂ ಆ ಪುರುಷನೆ. ಕರ್ಮ ತಪಸ್ಸು ಬ್ರಹ್ಮ ಮತ್ತು ಶ್ರೇಷ್ಠವಾದ ಅಮೃತವಾದರೂ ಅವನೆ. ಸೌಮ್ಯನೇ, ಅಂತಃಕರಣದ ವಿವರ ದಲ್ಲಿದ್ದ ಈ ಸತ್ಯವನ್ನು ಅರಿತವನು ಇದೇ ಜನ್ಮದಲ್ಲಿ ಅಜ್ಞಾನದ ಗಂಟನ್ನು ಸೀಳಿ ಮುಕ್ತನಾಗುವನು.

ದ್ವಿತೀಯ ಮುಂಡಕದ ಪ್ರಥಮಖಂಡವು ಸಮಾಪ್ತವು

ಆವಿಃ ಸಂನಿಹಿತಂ ಗುಹಾಚರನ್ನಾಮ ಮಹತ್ಪದಮತ್ರೈತತ್ಸಮರ್ಪಿತಂ ॥ ಏಜತ್ಪ್ರಾಣನ್ನಿಮಿಷಚ್ಚ ಯದೇತಜ್ಜಾನಥ ಸದಸದ್ವರೇಣ್ಯಂ ಪರಂ ವಿಜ್ಞಾನಾದ್ಯದ್ವರಿಷ್ಠಂ ಪ್ರಜಾನಾಮ್ ॥೧॥ ಯದರ್ಚಿಮದ್ಯದಣುಭ್ಯೋಽಣು ಚ ಯಸ್ಮಿಲ್ಲೋಕಾ ನಿಹಿತಾ ಲೋಕಿನಶ್ಚ ॥ ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನಃ ॥ ತದೇತತ್ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯ ವಿದ್ಧಿ ॥೨॥ ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಂ ಹ್ಯುಪಾಸಾನಿಶಿತಂ ಸಂಧಯೀತ ॥ ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ ತದೇವಾಕ್ಷರಂ ಸೋಮ್ಯ ವಿದ್ಧಿ ॥೩॥ ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ॥ ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥ ೪ ॥ ಯಸ್ಮಿಂದ್ಯೌಃ ಪೃಥಿವೀ ಚಾಂತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ ॥ ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥಾಮೃತಸ್ಯೈಷ ಸೇತುಃ ॥ ೫ ॥ ಅರಾ ಇವ ರಥನಾಭೌ ಸಂಹತಾ

---

(೧) ನಮ್ಮ ಹೃದಯದ ಅಂತರ್ಗುಹೆಯಲ್ಲಿ ಸಂಚರಿಸುತ್ತಿರುವ ಮತ್ತು ವ್ಯಕ್ತ ಹಾಗೂ ಅವ್ಯಕ್ತವಿರುವ ವಸ್ತುವೆ ಸರ್ವರ ಮಹದಾಧಾರವು. ಸಂಚಲಿಸುವ ಉಸುರಾಡಿಸುವ ದೃಷ್ಟಿಯುಳ್ಳ ಎಲ್ಲ ಭೂತಗಳು ಆ ವಸ್ತುವಿನಲ್ಲಿಯೆ ವಾಸಿಸುವವು. ಇದೇ ಸತ್ ಮತ್ತು ಅಸತ್. ಇದೇ ಶ್ರೇಷ್ಠವು. ವಿಜ್ಞಾನವನ್ನು ಮೀರಿ ಇದು ಎಲ್ಲ ಪ್ರಜೆಗಳಿಗೂ ಅತಿಶಯವಾಗಿ ಶ್ರೇಷ್ಠವಿರುವದು. (೨) ಯಾವುದು ಅತ್ಯಂತ ತೇಜಸ್ವಿಯಾದದ್ದೊ ಅಣುವಿಗಿಂತ ಅಣುವೊ ಸಕಲ ಲೋಕಗಳೂ ಲೋಕಗಳ ಅಖಿಲ ಪ್ರಜೆಗಳೂ ಯಾವುದರಲ್ಲಿ ಸ್ಥಿರವಾಗಿರುವವೊ ಅದೇ ಅಕ್ಷರಬ್ರಹ್ಮವಿದು. ಅದೇ ಪ್ರಾಣವು. ಅದೇ ಮನಸ್ಸು. ಅದೇ ವಾಣಿಯು. ಸತ್ಯವಾದರೂ ಅದೇ. ಅಮೃತವೂ ಅದೇ. ಸೌಮ್ಯನೇ, ಅರಿಯತಕ್ಕ ಈ ವಸ್ತುವನ್ನು ಅರಿತುಕೋ. (೩) ಮಹಾಸ್ತ್ರವಾದ ಉಪನಿಷತ್ತೆಂಬ ಬಿಲ್ಲನ್ನೆತ್ತಿ ಉಪಾಸನೆಯಿಂದ ಕೂರಾದ (ಮನವೆಂಬ) ಬಾಣವನ್ನು ಅದಕ್ಕೆ ಹೂಡು. ಚಿತ್ತವನ್ನು ಪರಮಾತ್ಮನಲ್ಲಿ ಏಕಮಾಡಿ ಆ ಅಕ್ಷರವನ್ನೆ ಗುರಿಯಾಗಿಟ್ಟುಕೊಂಡು ನಿನ್ನ ಬಾಣವನ್ನು ಬಿಡು ಮತ್ತು ತಾದಾತ್ಮ್ಯವನ್ನು ಹೊಂದು. (೪) ಓಂಕಾರವು ಬಿಲ್ಲು ನಿನ್ನ ಆತ್ಮನೆ ಬಾಣವು. ಬ್ರಹ್ಮವೆ ಗುರಿಯು. ಗುರಿಯನ್ನು ತಪ್ಪದೆವೇಧಿಸಿ ಬಾಣದಂತೆ ತನ್ಮಯನಾಗಬೇಕು. (೫) ಸ್ವರ್ಗ ಪೃಥಿವಿ ಅಂತರಿಕ್ಷಗಳು ಯಾವನಲ್ಲಿರುವವೊ ಪ್ರಾಣದಿಂದೊಡಗೂಡಿ ಮನಸ್ಸು ಯಾವನಲ್ಲಿ ಸ್ಥಿತವೊ ಆ

ಯತ್ರ ನಾಡ್ಯಃ ॥ ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ ॥ ಓಮಿತ್ಯೇವಂ ಧ್ಯಾಯಥ ಆತ್ಮಾನಂ ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್ ॥ ೬ ॥ ಯಃ ಸರ್ವಜ್ಞಃ ಸರ್ವವಿದ್ಯಸ್ಯೈಷ ಮಹಿಮಾ ಭುವಿ ॥ ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಪ್ರತಿಷ್ಠಿತಃ॥ ಮನೋಮಯಃ ಪ್ರಾಣಶರೀರನೇತಾ ಪ್ರತಿಷ್ಠಿತೋಽನ್ನೇ ಹೃದಯಂ ಸನ್ನಿಧಾಯ॥ ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾ ಆನಂದರೂಪಮಮೃತಂ ಯದ್ವಿಭಾತಿ ॥ ೭ ॥ ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ॥ ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿಂದ್ರಷ್ಟೇ ಪರಾವರೇ ॥ ೮ ॥ ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಂ ॥ ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಸ್ತದ್ಯದಾತ್ಮವಿದೋ ವಿದುಃ ॥೯॥ ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ॥ ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವ

---

ಒಂದೇ ಒಂದಾದ ಆತ್ಮನನ್ನು ಅರಿತುಕೊ. ಮಿಕ್ಕ ಮಾತುಗಳನ್ನು ಬಿಟ್ಟು ಬಿಡು. ಯಾಕಂದರೆ ಇದೇ ಅಮೃತವನ್ನು ಪಡೆಯುವ ಮಾರ್ಗವು. (೬) ರಥಚಕ್ರದ ನಾಭಿಯಲ್ಲಿ ಅದರ ಹಲ್ಲುಗಳು ಒಂದಾಗುವಂತೆ ಶರೀರದ ಸಕಲ ನಾಡಿಗಳು ಎಲ್ಲಿ ಒಂದಾಗುವವೊ ಅಲ್ಲಿ ಈ ಆತ್ಮನು ಸಂಚರಿಸುವನು ಮತ್ತು ನಾನಾರೂಪದಿಂದ ವ್ಯಕ್ತನಾಗುವನು. ಆ ಆತ್ಮನನ್ನು ಓಂ ಎಂದು ಧ್ಯಾನಿಸು. ಅದೇ ನಿನ್ನನ್ನು ತಮಸ್ಸಿನಾಚೆಗೆ ಒಯ್ಯಲಿ. (೭) ಯಾವನು ಸರ್ವಜ್ಞನೊ ಸರ್ವವನ್ನರಿಯುವಂಥವನೊ ಅವನ ಮಹಿಮೆಯೆ ಈ ಭೂಮಿಯ ಮೇಲೆ ಕಂಡುಬರುವದು. ಈ ಆತ್ಮನು ದಿವ್ಯವಾದ ಬ್ರಹ್ಮಪುರವೆಂಬ ಹೃದಯಾಕಾಶದಲ್ಲಿ ನೆಲೆಸಿರುವನು. ಅನ್ನದಲ್ಲಿ ಅಂದರೆ ಜಡದಲ್ಲಿ ಹೃದಯವೆಂಬದನ್ನು ಸ್ಥಾಪಿಸಿ ತಾನು ಮನೋಮಯನಾಗಿ ಪ್ರಾಣ ಶರೀರಗಳ ನಿಯಮನ ಮಾಡುತ್ತ ಆ ಹೃದಯದಲ್ಲಿ ನಿಂತಿರುವನು. ಆನಂದರೂಪದಿಂದ ಅಮೃತನಾಗಿ ಪ್ರಕಾಶಿಸುವ ಈ ಆತ್ಮನನ್ನು ಬಲ್ಲಿದರು ಎಲ್ಲ ಕಡೆಗೂ ಕಾಣುವರು. (೮) ಹೀಗೆ ಪರಾವರ ಬ್ರಹ್ಮನ ಪ್ರತ್ಯಕ್ಷ ಜ್ಞಾನವಾಯಿತೆಂದರೆ ಜ್ಞಾನಿಯ ಅಂತಃಕರಣದಲ್ಲಿಯ ಗಂಟುಗಳು ಒಡೆದು ಎಲ್ಲ ಸಂಶಯಗಳ ಪರಿಹಾರವಾಗಿ ಕರ್ಮಗಳು ಕ್ಷಯಹೊಂದುವವು. (೯) ನಿರವಯವವಾದ ಪವಿತ್ರ ಬ್ರಹ್ಮವು ಚಿನ್ನದಂತೆ ಹೊಳಪುಳ್ಳ ಕೋಶದಲ್ಲಿ ಅಡಗಿರುವದು. ಅದು ಶುಭ್ರವೂ ಜ್ಯೋತಿಗಳ ಜ್ಯೋತಿಯೂ ಇರುವದು. ಇದನ್ನು ಆತ್ಮಜ್ಞಾನಿಗಳು ಬಲ್ಲರು.

ಮಿದಂ ವಿಭಾತಿ ॥೧೦॥ ಬ್ರಹ್ಮೈವೇದಮಮೃತಂ ಪುರಸ್ತಾದ್ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ ॥ ಅಧಶ್ಚೋರ್ಧ್ವಂ ಚ ಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್ ॥ ೧೧ ॥ ಇತಿ ದ್ವಿತೀಯಮುಂಡಕೇ ದ್ವಿತೀಯಃ ಖಂಡಃ ॥ ೨ ॥

॥ ಇತೀ ದ್ವಿತೀಯಮುಂಡಕಂ ಸಮಾಪ್ತಂ ॥

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ॥ ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥ ೧ ॥ ಸಮಾನೇ ವೃಕ್ಷೇ ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ ॥ ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ ॥ ೨ ॥ ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್ ॥ ತದಾ ವಿದ್ವಾನ್ಪುಣ್ಯಪಾಪೇ ವಿಧೂಯ ನಿರಞ್ಜನಃ ಪರಮಂ ಸಾಮ್ಯಮುಪೈತಿ ॥ ೩ ॥

---

(೧೦) ಅಲ್ಲಿ ಸೂರ್ಯನು ಪ್ರಕಾಶಿಸುವದಿಲ್ಲ. ಚಂದ್ರತಾರಕೆಗಳ ಉದಯವು ಅಲ್ಲಿ ಆಗುವದಿಲ್ಲ. ವಿದ್ಯುತ್ಪ್ರಕಾಶವು ಅಲ್ಲಿ ಇಲ್ಲ. ಅಂದಮೇಲೆ ಅಗ್ನಿಯ ಮಾಡೇನು ? ಅವನು ಪ್ರಕಾಶಿಸಿದ ಮೇಲೆಯೆ ಮಿಕ್ಕ ಎಲ್ಲ ವಸ್ತುಗಳು ಪ್ರಕಾಶಿಸುವವು. ಅವನ ಬೆಳಕಿನಿಂದಲೆ ಇದೆಲ್ಲವೂ ಬೆಳಗುವದು. (೧೧) ಇದೆಲ್ಲವೂ ಅಮೃತಬ್ರಹ್ಮವು. ನಮ್ಮ ಮುಂದೆ ಹಿಂದೆ ದಕ್ಷಿಣಕ್ಕೆ ಉತ್ತರಕ್ಕೆ ಮೇಲೆ ಕೆಳಗೆ ಎತ್ತೆತ್ತಲೂ ಬ್ರಹ್ಮವೆ ಪಸರಿಸಿರುವದು. ಈ ವರಿಷ್ಠವಾದ ವಿಶ್ವವು ಬ್ರಹ್ಮವಲ್ಲದೆ ಮತ್ತಿನ್ನೇನು ?

ದ್ವಿತೀಯ ಮುಂಡಕದ ದ್ವಿತೀಯ ಖಂಡವು ಸಮಾಪ್ತ.

ಎರಡನೆ ಮುಂಡಕವು ಸಮಾಪ್ತ

(೧) ಪರಸ್ಪರ ಸ್ನೇಹವುಳ್ಳ ಸುಂದರ ರೆಕ್ಕೆಗಳುಳ್ಳ ಎರಡು ಪಕ್ಷಿಗಳು ಒಂದೇ ವೃಕ್ಷದ ಮೇಲೆ ಜೊತೆಯಾಗಿ ಇರುವವು. ಅವುಗಳಲ್ಲಿ ಒಂದು ಆ ಗಿಡದ ಸುಂದರ ಸವಿಯಾದ ಹಣ್ಣನ್ನು ತಿನ್ನುವದು. ಎರಡನೆಯದು ತಾನು ತಿನ್ನದೆ ತನ್ನ ಗೆಳೆಯರನ್ನು ನೋಡುತ್ತ ಕುಳ್ಳಿರುವದು. (೨) ಪರಮಾತ್ಮನ ಸಂಗಡ ಒಂದೇ ಸಂಸಾರವೃಕ್ಷದ ಮೇಲೆ ಇರುವ ಜೀವಾತ್ಮನು ವಿಷಯ ನಿಮಗ್ನನಾಗಿ ಪರವಶನಾದುದರಿಂದ ಮೋಹಿತನಾಗಿ ದುಃಖಕ್ಕೆ ಒಳಗಾಗುವನು. ಪೂಜಿತನಾದ ಆ ಈಶನನ್ನು ನೋಡಿ ಇದೆಲ್ಲವೂ ಅವನ ಮಹಿಮೆಯೆಂಬವನ್ನು ತಿಳಿದುಕೊಂಡರೆ ಅವನ ದುಃಖದ ಪರಿಹಾರವಾಗುವದು. (೩)

ಪ್ರಾಣೋ ಹ್ಯೇಷ ಯಃ ಸರ್ವಭೂತೈರ್ವಿಭಾತಿ ವಿಜಾನನ್ವಿದ್ವಾನ್ಭವತೇ ನಾತಿವಾದೀ ॥
ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ ॥ ೪ ॥ ಸತ್ಯೇನ
ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಂ ॥ ಅಂತಃ-
ಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ
॥ ೫ ॥ ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ॥
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಂ
॥ ೬ ॥ ಬೃಹಚ್ಚ ತದ್ದಿವ್ಯಮಚಿಂತ್ಯರೂಪಂ ಸೂಕ್ಷ್ಮಾಚ್ಚ ತತ್ಸೂಕ್ಷ್ಮತರಂ ವಿಭಾತಿ॥
ದೂರಾತ್ಸುದೂರೇ ತದಿಹಾಂತಿಕೇ ಚ ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಂ ॥ ೭ ॥
ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ॥ ಜ್ಞಾನ
ಪ್ರಸಾದೇನ ವಿಶುದ್ಧಸತ್ವಸ್ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ ॥ ೮ ॥

---

ಚಿನ್ನದ ಬಣ್ಣವುಳ್ಳ ಸರ್ವಕರ್ತೃವಾದ ಈಶನನ್ನೂ ಪುರುಷನನ್ನೂ ಬ್ರಹ್ಮನ ಉತ್ಪತ್ತಿಸ್ಥಾನವಾದ ಪರಮಾತ್ಮನನ್ನೂ ವಿದ್ವಾಂಸನು ನೋಡಿದನೆಂದರೆ ಪುಣ್ಯ-ಪಾಪಗಳನ್ನು ನೀಗಿ ಪರಮಪವಿತ್ರನಾಗಿ ಶ್ರೇಷ್ಠವಾದ ಸಾಮ್ಯಾವಸ್ಥೆಯನ್ನು ಹೊಂದುವನು. (೪) ಎಲ್ಲ ಭೂತಮಾತ್ರಗಳಲ್ಲಿ ಬೆಳಗುತ್ತಿರುವ ಪ್ರಾಣವು ಇವನೇ ಎಂಬುದನ್ನರಿತು ವಿದ್ವಾಂಸನು ಹೆಚ್ಚಿನ ವಾದಗಳನ್ನು ಬಿಟ್ಟುಬಿಡುವನು. ಆತ್ಮರತನಿದ್ದು ಆತ್ಮನಕೂಡ ಕ್ರೀಡಿಸುತ್ತ ಕ್ರಿಯಾವಂತನಾಗಿರುವವನೆ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನು. (೫) ಸತ್ಯ, ತಪಸ್ಸು, ಸತ್ಯ-ಜ್ಞಾನ ಹಾಗೂ ನಿತ್ಯ ಬ್ರಹ್ಮಚರ್ಯ ಇವೇ ಈ ಆತ್ಮಜ್ಞಾನದ ಮಾರ್ಗಗಳು. ದೋಷಗಳನ್ನೆಲ್ಲ ಕಳಕೊಂಡ ಯತಿಗಳು ಶುಭ್ರನಾದ ಈ ಜ್ಯೋತಿರ್ಮಯ ಆತ್ಮನನ್ನು ತಮ್ಮ ಅಂತಃಶರೀರದಲ್ಲಿ ನೋಡುವರು. (೬) ಕೊನೆಗೆ ಗೆಲವು ಸತ್ಯಕ್ಕೆ; ಸುಳ್ಳಿಗಲ್ಲ. ದೇವಯಾನಪಂಥವು ಸತ್ಯದಿಂದಲೆ ಕಟ್ಟಲ್ಪಟ್ಟಿದೆ. ಎಲ್ಲ ಕಾಮನೆಗಳನ್ನು ತೊರೆದ ಋಷಿಗಳು ಇದೇ ಮಾರ್ಗವನ್ನಾಕ್ರಮಿಸಿ ಸತ್ಯದ ಪರಮ ನಿಧಾನವಾದ ಶ್ರೇಷ್ಠ ಪದವಿಯನ್ನು ಹೊಂದುವರು. (೭) ಅದು ವಿಶಾಲವೂ ದಿವ್ಯವೂ ಅಚಿಂತ್ಯರೂಪವೂ ಸೂಕ್ಷ್ಮಕ್ಕಿಂತ ಸೂಕ್ಷ್ಮವೂ ಇರುವದು. ಅದು ದೂರಕ್ಕಿಂತ ದೂರವಿದ್ದು ಸಮೀಪಕ್ಕಿಂತ ಸಮೀಪವಿದ್ದು ದಿವ್ಯ ದೃಷ್ಟಿಯ ಜ್ಞಾನಿಗಳಿಗೆ ಅವರ ಹೃದಯಾಂತರದ ಗುಹೆಯಲ್ಲಿಯೆ ಗೋಚರವಾಗುವದು. (೮) ಈ ಆತ್ಮವು ಕಣ್ಣುಗಳಿಂದಾಗಲಿ ವಾಕ್ಶಕ್ತಿಯಿಂದಾಗಲಿ ದೊರೆಯದು. ಅನ್ಯದೇವತೆಗಳ ಸಹಾಯದಿಂದ ತಪಸ್ಸಿನಿಂದ ಅಥವಾ ಕರ್ಮ

ಏಷೋಽಣುರಾತ್ಮಾ ಚೇತಸಾ ವೇದಿತವ್ಯೋ ಯಸ್ಮಿನ್ ಪ್ರಾಣಃ ಪಂಚಧಾ ಸಂವಿವೇಶ॥ ಪ್ರಾಣೈಶ್ಚಿತ್ತಂ ಸರ್ವಮೋತಂ ಪ್ರಜಾನಾಂ ಯಸ್ಮಿನ್ವಿಶುದ್ಧೇ ವಿಭವತ್ಯೇಷ ಆತ್ಮಾ ॥ ೯ ॥ ಯಂ ಯಂ ಲೋಕಂ ಮನಸಾ ಸಂವಿಭಾತಿ ವಿಶುದ್ಧಸತ್ವಃ ಕಾಮಯತೇ ಯಾಂಶ್ಚ ಕಾಮಾನ್ ॥ ತಂ ತಂ ಲೋಕಂ ಜಾಯತೇ ತಾಂಶ್ಚ ಕಾಮಾಂಸ್ತಸ್ಮಾದಾತ್ಮಜ್ಞಂ ಹ್ಯರ್ಚಯೇದ್ಭೂತಿಕಾಮಃ ॥ ೧೦ ॥ ಇತಿ ತೃತೀಯ ಮುಂಡಕೇ ಪ್ರಥಮಃ ಖಂಡಃ ॥

ಸ ವೇದೈತತ್ಪರಮಂ ಬ್ರಹ್ಮ ಧಾಮ ಯತ್ರ ವಿಶ್ವಂ ನಿಹಿತಂ ಭಾತಿ ಶುಭ್ರಂ ॥ ಉಪಾಸತೇ ಪುರುಷಂ ಯೇ ಹ್ಯಕಾಮಾಸ್ತೇ ಶುಕ್ರಮೇತದತಿವರ್ತಂತಿ ಧೀರಾಃ ॥ ೧ ॥ ಕಾಮಾನ್ಯಃ ಕಾಮಯತೇ ಮನ್ಯಮಾನಃ ಸ ಕಾಮಭಿರ್ಜಾಯತೇ ತತ್ರ ತತ್ರ ॥ ಪರ್ಯಾಪ್ತಕಾಮಸ್ಯ ಕೃತಾತ್ಮನಸ್ತು ಇಹೈವ ಸರ್ವೇ ಪ್ರವಿಲೀಯಂತಿ ಕಾಮಾಃ ॥ ೨ ॥ ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ ಬಹುನಾ

---

ಗಳಿಂದ ಅದು ಲಭ್ಯವಾಗದು. ಶುದ್ಧ ಸ್ವಭಾವದವನೆ ಜ್ಞಾನವನ್ನು ಹೊಂದಿ ಧ್ಯಾನಮಗ್ನನಾದಾಗ ಈ ನಿಷ್ಕಲಾತ್ಮನನ್ನು ಕಾಣಬಲ್ಲನು. (೯) ಆತ್ಮನು ಅತಿಸೂಕ್ಷ್ಮನು. ನಮ್ಮ ಶುದ್ಧಬುದ್ಧಿಯಿಂದಲೆ ಅವನನ್ನರಿಯುವದು ಶಕ್ಯವು. ಪ್ರಾಣವು ಪಂಚರೂಪಗಳನ್ನು ಧರಿಸಿ ಅವನಲ್ಲಿ ಪ್ರವೇಶಿಸಿತು. ಎಲ್ಲ ಭೂತಗಳ ಚಿತ್ತವು ಪ್ರಾಣಗಳಿಂದ ತುಂಬಿರುವದು. ಆ ಚಿತ್ತವು ಶುದ್ಧವಾಯಿತೆಂದರೆ ಆತ್ಮನ ಪ್ರಕಾಶವು ಬೆಳಗುವದು. (೧೦) ಶುದ್ಧ ಸ್ವಭಾವದವನು ತನ್ನ ಮನಸ್ಸಿನಿಂದ ಯಾವ ಯಾವ ಲೋಕಗಳನ್ನು ನೋಡುವನೊ ಯಾವ ಯಾವ ಕಾಮಗಳನ್ನು ಇಚ್ಛಿಸುವನೊ ಆಯಾ ಲೋಕಗಳನ್ನೂ ಆಯಾ ಕಾಮನೆಗಳನ್ನೂ ಪಡೆಯುವನು. ಆದುದರಿಂದ ಕಲ್ಯಾಣವನ್ನು ಇಚ್ಛಿಸುವವನು ಆತ್ಮಜ್ಞನನ್ನು ಅರ್ಚಿಸಬೇಕು.

ಮೂರನೆ ಮುಂಡಕದ ಪ್ರಥಮ ಖಂಡವು ಸಮಾಪ್ತವು.

(೧) ಯಾವನಲ್ಲಿ ನಿಂತುದುದರಿಂದ ಈ ವಿಶ್ವವು ಬೆಳ್ಳಗೆ ಹೊಳೆಯುತ್ತಿರುವದೊ ಆ ಪರಮಸ್ಥಾನವನ್ನು ಪರಮಬ್ರಹ್ಮನನ್ನು ಅವನು ಅರಿಯುವನು. ನಿಷ್ಕಾಮರಾಗಿ ಈ ಪುರುಷನ ಉಪಾಸನೆಯನ್ನು ಮಾಡುವ ಧೀರರು ಈ ಸೃಷ್ಟಿಯ ಬೀಜದ ಆಚೆಗೆ ಹೋಗುವರು. (೨) ಕಾಮನೆಗಳನ್ನು ಇಚ್ಛಿಸುವವನು ಹಾಗೂ ಅವುಗಳಲ್ಲಿ ಆಸಕ್ತನಾದವನು ಆ ಕಾಮನೆಗಳು ಎಳೆದೊಯ್ಯುವಲ್ಲಿ ಹೋಗಬೇಕಾಗುವದು. ಆದರೆ ತನ್ನ ಕಾಮನೆಗಳನ್ನು ಗೆದ್ದು ಕೃತ

ಶ್ರುತೇನ ॥ ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್ ॥ ೩ ॥ ನಾಯಮಾತ್ಮಾ ಬಲಹೀನೇನ ಲಭ್ಯೋ ನ ಚ ಪ್ರಮಾದಾತ್ತಪಸೋ ವಾಪ್ಯಲಿಂಗಾತ್ ॥ ಏತೈರುಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿಶತೇ ಬ್ರಹ್ಮಧಾಮ ॥ ೪ ॥ ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ ಕೃತಾತ್ಮಾನೋ ವೀತರಾಗಾಃ ಪ್ರಶಾಂತಾಃ ॥ ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ ಯುಕ್ತಾತ್ಮಾನಃ ಸರ್ವಮೇವಾವಿಶಂತಿ ॥ ೫ ॥ ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ಯತಯಃ ಶುದ್ಧಸತ್ವಾಃ ॥ ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾತ್ಪರಿಮುಚ್ಯಂತಿ ಸರ್ವೇ ॥ ೬ ॥ ಗತಾಃ ಕಲಾಃ ಪಂಚದಶ ಪ್ರತಿಷ್ಠಾ ದೇವಾಶ್ಚ ಸರ್ವೇ ಪ್ರತಿದೇವತಾಸು ॥ ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತಿ ॥ ೭ ॥ ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ ॥ ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ

---

ಕೃತ್ಯನಾದವನ ಕಾಮನೆಗಳು ಇಲ್ಲಿಯೆ ಲಯಹೊಂದುವವು. (೩) ಪ್ರವಚನದಿಂದಲೂ ಮೇಧಾಶಕ್ತಿಯಿಂದಲೂ ಬಹು ಶ್ರವಣದಿಂದಲೂ ಆತ್ಮನು ಲಭ್ಯನಲ್ಲ. ಯಾವನನ್ನು ಆತ್ಮನು ಆರಿಸುವನೊ ಯಾವನ ಮೇಲೆ ಪ್ರಸನ್ನನಾಗುವನೊ ಅವನಿಗೆ ಆತ್ಮನು ತಾನೇ ಸ್ವಯಂಪ್ರಕಟನಾಗುವನು. (೪) ಈ ಆತ್ಮನು ಬಲಹೀನನಿಗೆ ಲಭ್ಯನಲ್ಲ. ಕಾಮನೆಗಳಿಂದ ಮೋಹಿತನಾದವನ ಕೈ ಸೇರುವವನಲ್ಲ. ಸತ್ಯಾಂಶವಿಲ್ಲದ ತಪಸ್ವಿಯ ಅಧೀನನಾಗುವವನಲ್ಲ. ಆದರೆ ವಿದ್ವಾಂಸನು ಎಲ್ಲ ಮಾರ್ಗಗಳಿಂದ ಯತ್ನಮಾಡುತ್ತಿರಲಾಗಿ ಅವನ ಆತ್ಮನು ಬ್ರಹ್ಮನಲ್ಲಿ ಪ್ರವೇಶಿಸುವನು. (೫) ಋಷಿಗಳು ಆತ್ಮಪ್ರಾಪ್ತಿಯನ್ನು ಮಾಡಿಕೊಂಡು ಜ್ಞಾನತೃಪ್ತರೂ ಕೃತಾತ್ಮರೂ ಶಾಂತಚಿತ್ತರೂ ಆಸಕ್ತಿರಹಿತರೂ ಆಗುವರು. ಸರ್ವವ್ಯಾಪಕನನ್ನು ಎಲ್ಲ ಕಡೆಯಲ್ಲಿಯೂ ಅನುಭವಿಸುತ್ತ ಧೀರರು ಪರಮಾತ್ಮನಲ್ಲಿ ಯುಕ್ತಾತ್ಮರಾಗಿ ಸರ್ವಾತ್ಮನಲ್ಲಿ ಪ್ರವೇಶಿಸುವರು. (೬) ಯತಿಗಳು ವೇದಾಂತ ಮತ್ತು ವಸ್ತುಗಳ ವಿಶೇಷ ಜ್ಞಾನದಿಂದ ನಿಶ್ಚಯಾರ್ಥವನ್ನು ಅರಿತುಕೊಂಡು ಸನ್ಯಾಸಯೋಗದಿಂದ ಶುದ್ಧ ಚಿತ್ತರಾಗಿ ಅಂತಕಾಲಕ್ಕೆ ಪೂರ್ಣ ಮುಕ್ತರಾಗಿ ಅಮೃತತ್ವವನ್ನು ಪಡೆದು ಬ್ರಹ್ಮಲೋಕಕ್ಕೆ ತೆರಳುವರು. (೭) ಹದಿನೈದು ಕಲೆಗಳು ತಮ್ಮ ತಮ್ಮ ಸ್ಥಾನಗಳಲ್ಲಿ ಲೀನವಾದವು. ದೇವತೆಗಳೆಲ್ಲ ತಮ್ಮ ಸ್ಥಾನಕ್ಕೆ ಹೋದರು. ಕರ್ಮಗಳು, ವಿಜ್ಞಾನಮಯ ಆತ್ಮನು,

**ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥೮॥ ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ ನಾಸ್ಯಾಽಬ್ರಹ್ಮವಿತ್ಕುಲೇ ಭವತಿ ತರತಿ ಶೋಕಂ ತರತಿ ಪಾಪ್ಮಾನಂ ಗುಹಾಗ್ರಂಥಿಭ್ಯೋ ವಿಮುಕ್ತೋಽಮೃತೋ ಭವತಿ ॥ ೯ ॥ ತದೇತ-ದೃಚಾಽಭ್ಯುಕ್ತಂ ॥ ಕ್ರಿಯಾವಂತಃ ಶ್ರೋತ್ರಿಯಾ ಬ್ರಹ್ಮನಿಷ್ಠಾಃ ಸ್ವಯಂ ಜುಹ್ವತ ಏಕರ್ಷಿಂ ಶ್ರದ್ಧಯಂತಃ ತೇಷಾಮೇವೈತಾಂ ಬ್ರಹ್ಮವಿದ್ಯಾಂ ವದೇತ ಶಿರೋವ್ರತಂ ವಿಧಿವದ್ಯೈಸ್ತು ಚೀರ್ಣಮ್ ॥ ೧೦ ॥ ತದೇತತ್ಸತ್ಯಮೃಷಿರಂಗಿರಾಃ ಪುರೋವಾಚ ನೈತದಚೀರ್ಣವ್ರತೋಽಧೀತೇ ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ ॥ ೧೧ ॥ ಇತಿ ತೃತೀಯ ಮುಂಡಕೇ ದ್ವಿತೀಯಃ ಖಂಡಃ ॥ ೨ ॥**

**॥ ಇತಿ ಮುಂಡಕೋಪನಿಷತ್ಸಮಾಪ್ತಾ ॥**

---

ಎಲ್ಲವೂ ಪರಮ ಅವ್ಯಯದಲ್ಲಿ ಒಂದಾಗಿ ಹೋಗುವವು. (೮) ಯಾವ ರೀತಿ ಯಿಂದ ಹರಿಯುವ ನದಿಗಳು ತಮ್ಮ ನಾಮರೂಪಗಳನ್ನು ತ್ಯಜಿಸಿ ಸಮುದ್ರ ದಲ್ಲಿ ಅಸ್ತವಾಗುವವೋ ಅದೇ ರೀತಿಯಲ್ಲಿ ಜ್ಞಾನಿಯು ನಾಮರೂಪಗಳಿಂದ ಮುಕ್ತನಾಗಿ ಪರಮಾತ್ಮನಲ್ಲಿ ಅಂದರೆ ಪರಾತ್ಪರ ದಿವ್ಯಪುರುಷನಲ್ಲಿ ಪ್ರವೇಶಿ-ಸುವನು. (೯) ಪರಬ್ರಹ್ಮನನ್ನು ಅರಿತವನು ತಾನೇ ಬ್ರಹ್ಮನಾಗುವನು. ಅವನ ಕುಲದಲ್ಲಿ ಬ್ರಹ್ಮಜ್ಞಾನವಿಲ್ಲದವನು ಯಾವನೂ ಹುಟ್ಟುವದಿಲ್ಲ. ಅವನು ಶೋಕಪಾಪಗಳನ್ನು ದಾಟಿಹೋಗುವನು. ಸಂಶಯಗಳಿಂದ ಮುಕ್ತನಾಗಿ ಅಮೃತನಾಗುವನು. (೧೦) ಈ ವಿಷಯಕ್ಕೆ ಕೆಳಗಿನ ಋಗ್ವೇದ ಮಂತ್ರವು ಹೇಳಲ್ಪಟ್ಟಿದೆ. ಕರ್ಮತತ್ಪರರಾದ ವೇದಜ್ಞ ಬ್ರಹ್ಮನಿಷ್ಠರು ಶ್ರದ್ಧಾಯುಕ್ತರಾಗಿ ಜ್ಞಾನೇಶ್ವರನಾದ ಪರಮಾತ್ಮನಿಗೆ ಸ್ವಯಂ ಆಹುತಿಯನ್ನು ಕೊಡುವಂಥವ ರಾದರೆ ಮಾತ್ರ ಈ ವಿದ್ಯೆಯನ್ನು ಅವರಿಗೆ ಬೋಧಿಸಬೇಕು. ಶಿರೋವ್ರತ ವನ್ನು ವಿಧಿಯುಕ್ತವಾಗಿ ಆಚರಿಸುವವರಷ್ಟೆ ಈ ಜ್ಞಾನಕ್ಕೆ ಅಧಿಕೃತರು. (೧೧) ಪೂರ್ವದಲ್ಲಿ ಅಂಗಿರಸ ಋಷಿಯು ಹೇಳಿದ ಸತ್ಯವು ಇದೇ. ವ್ರತಾ-ಚರಣೆಯನ್ನು ಮಾಡದಿದ್ದವನು ಇದರ ಅಧ್ಯಯನವನ್ನು ಮಾಡತಕ್ಕದ್ದಲ್ಲ. ಪರಮ ಋಷಿಗಳಿಗೆ ನಮಸ್ಕಾರವು. ಪರಮ ಋಷಿಗಳಿಗೆ ನಮಸ್ಕಾರವು.

ಮೂರನೆ ಮುಂಡಕದ ಎರಡನೇ ಖಂಡವು ಸಮಾಪ್ತವು.

## ಮುಂಡಕೋಪನಿಷತ್ತು ಸಮಾಪ್ತವು

## ಮುಂಡಕೋಪನಿಷತ್ತಿನಲ್ಲಿಯ ಕೆಲವು ಶಬ್ದಾರ್ಥಗಳು

**ಸಾಧ್ಯ—** ದೇವವಿಶೇಷ. **ಅಪರಾ—** ಹೀನವಾದ, ಕಡಿಮೆತರಹದ.

**ಪರಾ —** ಶ್ರೇಷ್ಠವಾದ. **ಶಿಕ್ಷಾ —** ವರ್ಣೋಚ್ಚಾರ ವಿದ್ಯೆ.

**ಕಲ್ಪ —** ಯಜ್ಞಯಾಗದ ಕ್ರಮ, ಯಜ್ಞಯಾಗದ ವಿಧಿ.

**ನಿರುಕ್ತ—** ಶಬ್ದಗಳ ವ್ಯುತ್ಪತ್ತಿಶಾಸ್ತ್ರ. **ಅನ್ನ—** ಅಖಿಲ ಜಡ ವಿಶ್ವ.

**ಅಗ್ರಫಲ —** ಪ್ರಥಮಫಲ, ಮೀಸಲ ಪೈರು.

**ವಿಜ್ಞಾನ—** ವಿವಿಧಜ್ಞಾನ, ವಸ್ತುಗಳ ವಿಶೇಷಜ್ಞಾನ.

**ವೈಶ್ವದೇವ—** ಅಗ್ನಿ ಮುಖಾಂತರವಾಗಿ ಸಕಲ ದೇವತೆಗಳಿಗೆ ಆಹುತಿಯನ್ನು ಕೊಡುವ ವಿಧಿಯು.

**ಸೋಮ್ಯ —** ಶಿಷ್ಯನನ್ನು ಸಂಬೋಧಿಸುವ ಶಬ್ದವಿಶೇಷವು.

**ಅವಿದ್ಯೆ—** ಕರ್ಮವಿಷಯಕ ಜ್ಞಾನ.

**ಇಷ್ಟಾಪೂರ್ತ—** ಶ್ರೌತಸ್ಮಾರ್ತಯಜ್ಞ ಹಾಗೂ ಲೌಕಿಕ ಪರೋಪಕಾರಗಳು.

**ಸೂರ್ಯದ್ವಾರ—** ಅರ್ಚಿರಾದಿ ಅಥವಾ ದೇವಯಾನ ಮಾರ್ಗವು. ಇದರಿಂದ ಹೋಗಲಾಗಿ ಪುನರ್ಜನ್ಮವಿಲ್ಲ.

**ಭಾವ—** ಸೃಷ್ಟಪದಾರ್ಥ ಅಥವಾ ವಸ್ತು.

**ಉದ್ಬೋಧಿತ—** ಈಶಪ್ರೇರಣೆಯಿಂದ ಪ್ರಕಟವಾದ.

**ಸಮಿಧಾ—**ಹೋಮಕ್ಕಾಗಿ ಉಪಯೋಗಿಸುವ ಅಶ್ವತ್ಥದ ಒಣಕಟ್ಟಿಗೆ.

**ಅಜ—** ಜನ್ಮರಹಿತ. **ಸೋಮ—** ದೇವತೆಗಳ ಪೇಯ.

**ವ್ರೀಹಿ—** ಭತ್ತ, ಅಕ್ಕಿ. **ಯವ—** ಜವೆಗೋದಿ.

**ರಸ—** ಇಂದ್ರಿಯಗಳಿಗೆ ಸುಖ ಕೊಡಬಲ್ಲ ವಿಷಯದಲ್ಲಿರುವ ತತ್ವ, ರುಚಿ.

**ಸತ್, ಅಸತ್—** ಇಂದ್ರಿಯಗಳ ಮುಖಾಂತರ ಬುದ್ಧಿಗೆ ಗೋಚರವಾಗುವದೆಲ್ಲವೂ ಸತ್. ಅದರಾಚೆಗೆ ಇರುವ ಅವ್ಯಕ್ತವು ಅಸತ್.

**ತಪ—** ಶಕ್ತಿಯ ಕೇಂದ್ರೀಕರಣ.

**ನಿಷ್ಕಲ—** ಅವಯವರಹಿತ, ಅಖಂಡ.

**ದೇವಯಾನ—** ಜ್ಞಾನಮಾರ್ಗ. **ಪ್ರವಚನ—** ತತ್ತ್ವವಿವರಣೆ.

**ಆಜ್ಯಾಹುತಿ —** ತುಪ್ಪದ ಆಹುತಿ.

**೧೫ ಕಲೆಗಳು** ಪಂಚಭೂತ, ಪಂಚೇಂದ್ರಿಯ ಹಾಗೂ ಪಂಚ ಪ್ರಾಣಗಳು ಕೂಡಿ ಹದಿನೈದು.

**ಗುಹಾಗ್ರಂಥಿ —** ಹೃದಯದಲ್ಲಿಯ ಸಂಶಯದ ಗಂಟುಗಳು.

**ಶಿರೋವ್ರತ—** ಶ್ರೇಷ್ಠವ್ರತ, ಬ್ರಹ್ಮಚರ್ಯ.

## ಮುಂಡಕೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ವಿಷಯಪ್ರತಿಪಾದನದ ದೃಷ್ಟಿಯಿಂದ ಈ ಉಪನಿಷತ್ತು ಬಹಳ ಸರ್ವಾಂಗಸುಂದರವೂ ಸಂಪೂರ್ಣವೂ ಇರುವದು. ಭಾಷೆಯಲ್ಲಿ ಕ್ಲಿಷ್ಟತೆ ಅಥವಾ ಕಠಿಣತೆಯು ಎಲ್ಲಿಯೂ ಕಂಡುಬರುವದಿಲ್ಲ. ಇದರ ಶೈಲಿಯು ಉಪಮಾರೂಪಕಾದಿಗಳಿಂದ ವಿಶೇಷ ಅಲಂಕೃತವಿರುವದರಿಂದ ಓದಲಿಕ್ಕೆ ಬಹಳ ಸೊಗಸೆನಿಸುವುದು. ಎಲ್ಲ ಉಪನಿಷತ್ತುಗಳಲ್ಲಿಯೂ ಬ್ರಹ್ಮವಿದ್ಯೆಯೆಂಬ ಒಂದೇ ವಿಷಯವು ಪ್ರತಿಪಾದ್ಯವಿದ್ದರೂ ಈ ವಿಷಯವು ಅತ್ಯಂತ ವಿಸ್ತೃತವಿರುವದರಿಂದ ಇದರಲ್ಲಿ ಅನೇಕ ವಿಭಾಗಗಳಾಗಬಲ್ಲವು. ಬ್ರಹ್ಮ-ಸ್ವರೂಪವು, ವಿಶ್ವದ ಉತ್ಪತ್ತಿ, ಜೀವ ಶಿವನ ಸಂಬಂಧ, ಜ್ಞಾನಸಾಧನದ ಮಾರ್ಗ, ಕರ್ಮಮಾರ್ಗ ಜ್ಞಾನಮಾರ್ಗಗಳ ತಾರತಮ್ಯ, ಜ್ಞಾನಿಯ ಅಂತಿಮಸ್ಥಿತಿ, ಹೀಗೆ ಈ ವಿಷಯದಲ್ಲಿ ಹಲವು ವಿಭಾಗಗಳಾಗುವವು. ಬಹುತರ ಈ ಎಲ್ಲ ವಿಭಾಗಗಳನ್ನು ಕುರಿತು ಈ ಉಪನಿಷತ್ತಿನಲ್ಲಿ ಒಳ್ಳೆ ಸುಸಂಗತವಾದ ಹಾಗೂ ಸುರಮ್ಯವಾದ ವಿವೇಚನವು ಬಂದಿರುವದು. ಆತ್ಮಸ್ವರೂಪದ ವರ್ಣನೆಯಂತೂ ನಾನಾಬಗೆಯಿಂದ ನಾನಾರೂಪದಲ್ಲಿ ಅಲ್ಲಲ್ಲಿ ಕೊಡಲ್ಪಟ್ಟಿರುವದು. 'ಪ್ರಣವೋ ಧನುಃ' 'ದ್ವಾಸುಪರ್ಣಾ' 'ಯಥಾ ಸುದೀ-ಪ್ತಾತ್' 'ಯಥಾ ನದ್ಯಃ' ಮುಂತಾದ ರೂಪಕಗಳು ಎದೆಯಲ್ಲಿ ಅಚ್ಚೊತ್ತಿದಂತೆ ನಿಚ್ಚಳಾಗಿ ಮೂಡುವವು, ಎಂದೆಂದಿಗೂ ಮರೆಯದಂತೆ ಹೃತ್ಪಟಲದ ಮೇಲೆ ಸ್ಥಿರವಾಗಿ ಅಚ್ಚಾಗುವವು. ಕರ್ಮ ಹಾಗೂ ಜ್ಞಾನಸಾಧನದಿಂದ ಆಗುವ ಭಿನ್ನಭಿನ್ನ ಫಲಗಳು ಈ ಉಪನಿಷತ್ತಿನಲ್ಲಿ ಅತ್ಯಂತ ಸ್ಪಷ್ಟವಾಗಿ ವಿವೇಚಿಸಲ್ಪಟ್ಟಿವೆ.

ಕರ್ಮಮಾರ್ಗ ಹಾಗೂ ಜ್ಞಾನಮಾರ್ಗದ ಫಲಗಳು ಬೇರೆ ಬೇರೆ ಎಂದು ಹೇಳಿ ಅನಿತ್ಯವಾದ ಫಲವುಳ್ಳ ಕರ್ಮಮಾರ್ಗವು ಹೀನತರವೆಂದು ಈ ಉಪನಿಷತ್ತಿನಲ್ಲಿ ಉಲ್ಲೇಖವಿರುವದು. ಆದರೆ ಇದರ ಮೇಲಿಂದ ಕರ್ಮ ತ್ಯಾಗ ಮಾಡಬೇಕು ಅಥವಾ ಹಾಗೆ ತ್ಯಾಗಮಾಡುವದು ಶ್ರೇಯಸ್ಕರವು ಎಂದು ಯಾರೂ ಅನ್ನಲಾಗದು. ಯಾಕಂದರೆ ಜ್ಞಾನಿಗಳಾದ 'ಬ್ರಹ್ಮವಿದ' ರಲ್ಲಿ ಅತ್ಯಂತ ಶ್ರೇಷ್ಠರು ಯಾರು ಎಂಬ ಪ್ರಶ್ನೆಗೆ ಉಪನಿಷತ್ಕಾರರು ಕೊಟ್ಟ ಉತ್ತರವು ಒಳ್ಳೆ ಮನನೀಯವಿರುವದು.—'ಆತ್ಮಕ್ರೀಡಃ ಆತ್ಮರತಿಃ ಕ್ರಿಯಾವಾನ್ ಏಷ ಬ್ರಹ್ಮವಿದಾಂ ವರಿಷ್ಠಃ' ಎಂದು ಸ್ಪಷ್ಟವಾದ ವಾಕ್ಯವಿರುವದು. ಕರ್ಮವು ಹೇಯವು ಅಥವಾ ತ್ಯಾಜ್ಯವು ಎಂದು ಹೇಳದೆ ಅದನ್ನು ಯಾವ ಭಾವನೆಯಿಂದ ಮಾಡಬೇಕು ಇದನ್ನು ಕವಿಗಳು ಚನ್ನಾಗಿ ವಿವರಿಸಿರುವರು. ಕೇವಲ ಕರ್ಮದಲ್ಲಿ, ಕೇವಲ ಯಜ್ಞಯಾಗಾದಿ ಕರ್ಮಗಳಲ್ಲಿ ಮೈಮರೆತಿರುವವರು ಮೂಢರು. ಆದರೆ ಜ್ಞಾನಪೂರ್ಣರಾಗಿ ಕರ್ಮದಲ್ಲಿ ಪ್ರವೃತ್ತರಾಗುವದು ಶ್ರೇಷ್ಠವಾದದ್ದು. ಕೇವಲ ಆತ್ಮರತ ಅಥವಾ ಬ್ರಹ್ಮವಿತ್ ಇದ್ದಾಕ್ಷಣಕ್ಕೆ ಅವನು ಶ್ರೇಷ್ಠನಲ್ಲ. ಆತ್ಮರತನಿದ್ದು ಇದೆಲ್ಲ ಆತ್ಮಕ್ರೀಡೆಯೆಂಬ ಭಾವನೆಯಿಂದ ಯಾವನು ಕ್ರಿಯಾವಂತನಾಗುವನೊ ಅವನು ಬ್ರಹ್ಮವಿದರಲ್ಲಿ ವರಿಷ್ಠನು. ಕಠ ಕೇನಾದಿ ಉಪನಿಷತ್ತುಗಳಲ್ಲಿ ಹೇಳಿದಂತೆ ಜ್ಞಾನದ ಸಾಧನವು ತಪಸ್ಸು, ಶ್ರದ್ಧೆ, ಧ್ಯಾನ, ಇವೇ ಎಂದು ಇಲ್ಲಿಯಾದರೂ ಹೇಳಲ್ಪಟ್ಟಿವೆ ಬ್ರಹ್ಮಜ್ಞಾನವೆ ಎಲ್ಲಕ್ಕೂ ಹೆಚ್ಚಿನ ಜ್ಞಾನವು. ಯಾಕಂದರೆ ಅದನ್ನು ಅರಿತು-ಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದು. ಇಂತಹ ಬ್ರಹ್ಮಜ್ಞಾನವನ್ನು ಮಾಡಿಕೊಂಡು ಜೀವನ್ಮುಕ್ತರಾಗಿ ಕ್ರಿಯಾವಂತರಾಗಬೇಕು ಎಂಬುದೆ ಈ ಉಪನಿಷತ್ತಿನ ಸಾರವು.

ಈ ಉಪನಿಷತ್ತಿನಲ್ಲಿಯ 'ಆತ್ಮಕ್ರೀಡಃ ಆತ್ಮರತಿಃ ಕ್ರಿಯಾವಾನ್' ಎಂಬ ಮಂತ್ರವು ಜ್ಞಾನಕರ್ಮಸಮನ್ವಯವನ್ನು ಹೇಳುವದಲ್ಲದೆ ವೈದಿಕ ಆರ್ಯಧರ್ಮದ ಅತ್ಯುಚ್ಚ ಧ್ಯೇಯವನ್ನು ನಮ್ಮೆದುರಿಗೆ ಇಡುವದು. ಬ್ರಹ್ಮಜ್ಞಾನಿಗಳಲ್ಲಿ ಅತ್ಯಂತ ವರಿಷ್ಠರು ಯಾರು ಎಂಬ ಪ್ರಶ್ನೆಗೆ 'ಆತ್ಮರತ'ನು ಅಂದರೆ ಆತ್ಮನಲ್ಲೇ ಆನಂದದಿಂದ ರಮಮಾಣನಿರುವವನು, 'ಆತ್ಮಕ್ರೀಡ'ನು ಅಂದರೆ ಆತ್ಮನಲ್ಲಿಯೆ ಆಡುತ್ತಿರುವವನು, ಮತ್ತು 'ಕ್ರಿಯಾವಾನ'ನು

ಅಂದರೆ ಶ್ರೇಷ್ಠಕರ್ಮಗಳನ್ನು ಮಾಡುತ್ತಿರುವವನು ಶ್ರೇಷ್ಠನು ಎಂದು ಉಪನಿಷತ್ಕಾರರು ಉತ್ತರವನ್ನಿತ್ತಿರುವರು. ಬ್ರಹ್ಮಜ್ಞಾನ ಅಥವಾ ವೇದಾಂತವೆಂದರೆ ಆದಷ್ಟು ಬೇಗ ಈ ಕರ್ಮಭೂಮಿಯ ವ್ಯಾಪವನ್ನು ತಪ್ಪಿಸಿಕೊಂಡು ಓಡಿಹೋಗುವ ಮಾರ್ಗವೆಂದು ಅನೇಕರು ತಿಳಿದಿರುತ್ತಾರೆ. ಆದರೆ ಅದು ಅವರ ತಪ್ಪುತಿಳುವಳಿಕೆಯೆಂದು ಈ ಮಹಾಮಂತ್ರವು ಸ್ಪಷ್ಟವಾಗಿ ಹೇಳುತ್ತದೆ. ಆತ್ಮಜ್ಞಾನಮಾಡಿಕೊಳ್ಳುವದಕ್ಕಾಗಿ ಹಲಕೆಲವರು ಗವಿಗುಹೆಗಳನ್ನು ಸೇರುತ್ತಿರಬಹುದು, ಸಂಸಾರವನ್ನು ತ್ಯಜಿಸುತ್ತಿರಬಹುದು. ಜ್ಞಾನವಾದ ಮೇಲೆ ಸಹ ಅಂಥವರು ಕೆಲವರು ಅದೇ ಸ್ಥಿತಿಯಲ್ಲಿರುತ್ತಿರಬಹುದು. ಹಾಗೆ ಸನ್ಯಸ್ತವೃತ್ತಿಯಿಂದ ಇದ್ದ ಮಾತ್ರಕ್ಕೆ ಅವರು ಕೇವಲ ತುಚ್ಛರೆಂದು ವೇದಾಂತವು ಹೇಳುವದಿಲ್ಲ. ಮೋಕ್ಷ ಅಥವಾ ಜೀವನ್ಮುಕ್ತಿಯ ದೃಷ್ಟಿಯಿಂದ ಅವರೆಲ್ಲರೂ ಸಮಾನರೆ. ಆದರೆ ತಾರತಮ್ಯದಿಂದ ನೋಡಿ ಆತ್ಮಜ್ಞಾನಿಗಳಲ್ಲಿ ಹೆಚ್ಚಿನವರು ಯಾರು ಎಂದು ಕೇಳಿದರೆ, ಯಾವಾಗಲೂ ಆತ್ಮರತರಿದ್ದು ಆತ್ಮಾನಂದದಲ್ಲಿಯೆ ಲೋಲಾಡುತ್ತಿದ್ದು ಕರ್ಮದಲ್ಲಿಯೂ ಪ್ರಬಲರಿರುವರೂ ಅವರೇ ಶ್ರೇಷ್ಠರು, ವರಿಷ್ಠರು, ಹೆಚ್ಚಿನವರು ಎಂದು ಉಪನಿಷತ್ಕಾರರು ಹೇಳಿದ್ದಾರೆ. ಜ್ಞಾನಿಯು ಶ್ರೇಷ್ಠನೆನಿಸಿಕೊಳ್ಳಬೇಕಾದರೆ ಅವನು ಕರ್ಮಿಯೂ ಇರಬೇಕು. ಈ ರೀತಿಯಾಗಿ ವೈದಿಕ ಆರ್ಯಸಂಸ್ಕೃತಿಯು ತನ್ನ ಜ್ಞಾನಕರ್ಮಸಮುಚ್ಚಯರೂಪವಾದ ಉಚ್ಚಪದವಿಯನ್ನು ಈ ಮಂತ್ರದಲ್ಲಿ ವಿವರಿಸಿದೆ.

ಇನ್ನು ಈ ಉಪನಿಷತ್ತಿನ ಆರಂಭದಲ್ಲಿ ಯಾವದನ್ನರಿಯುವದರಿಂದ ಎಲ್ಲವನ್ನೂ ಅರಿತಂತಾಗುವದು, ಎಂಬ ಒಂದು ವಾಕ್ಯವಿದೆ. ಇಂಥ ವಸ್ತುವು ಯಾವದು ಎಂದು ಕೇಳಿದರೆ ಪರಾವಿದ್ಯೆ ಎಂಬುದೆ ಅದಕ್ಕೆ ಉತ್ತರವು. ಪರಾವಿದ್ಯೆ, ಅಂದರೆ ಬ್ರಹ್ಮವಿದ್ಯೆಯು; ಅಂದರೇನೆ ಆತ್ಮಜ್ಞಾನವು. ಆತ್ಮಜ್ಞಾನವೆಂದರೆ ಸರ್ವಜ್ಞಾನವೊ ಎಂದು ಯಾರಾದರೂ ಪ್ರಶ್ನೆಮಾಡಬಹುದು. ಅದಕ್ಕೆ ಉಪನಿಷತ್ಕಾರರು ಅಹುದು, ಎಂದು ಉತ್ತರಕೊಡುವರು. ಇಲ್ಲಿ ಸರ್ವಜ್ಞಾನವೆಂದರೆ, ಸರ್ವ ವಸ್ತುಗಳ ವಿಶಿಷ್ಟಜ್ಞಾನವಲ್ಲ, ಆದರೆ ಸಾಮಾನ್ಯಜ್ಞಾನವು. ಆತ್ಮಜ್ಞಾನವೆಂದರೆ ಸರ್ವಜ್ಞಾನಸಮುಚ್ಚಯವು. ಆತ್ಮಜ್ಞಾನವಾಯಿತೆಂದರೆ ಮಿಕ್ಕ ಜ್ಞಾನಪಿಪಾಸೆಯೆ ಅಡಗಿಹೋಗಿ ಮನಸ್ಸು ಶಾಂತವೂ

ಸ್ಥಿರವೂ ಪ್ರಸನ್ನವೂ ಆಗುವದು. ಆತ್ಮಜ್ಞಾನವಾದವನಿಗೆ ಆಕಾಶದಲ್ಲಿ ಚಿಕ್ಕೆಗಳೆಷ್ಟಿರುವವು, ಅಥವಾ ಧಾರವಾಡ ಊರಲ್ಲಿ ಬೀದಿಗಳೆಷ್ಟು ಇರುವವು ಇವರ ಜ್ಞಾನವಾಗುತ್ತದೆಂದು ಯಾರಾದರೂ ತಿಳಿದಿದ್ದರೆ ಅದು ತಪ್ಪು. ಈ ತರದ ವಿಶಿಷ್ಟಜ್ಞಾನವೂ ಆಗುವದುಂಟು. ಆದರೆ ಅದು ಒಂದು ಸಿಧ್ಧಿಯು, ಅದು ಆತ್ಮಜ್ಞಾನದ ಭಾಗವಲ್ಲ. ಆತ್ಮಜ್ಞಾನಿಗೆ ಆ ಸಿದ್ಧಿಯು ಇರಲೇಬೇಕೆಂಬ ನಿಯಮವಿಲ್ಲ. ಅದೇ ಪ್ರಕಾರ ಅಂಥ ಸಿದ್ಧರಿದ್ದವರು ಆತ್ಮಜ್ಞಾನಿಗಳಿದ್ದೇ ಇರುವರೆಂಬದೂ ನಿಶ್ಚಿತವಿಲ್ಲ.

ಆತ್ಮಜ್ಞಾನವು ಯಾರಿಗೆ ಸಿಗುವದು, ಯಾರಿಗೆ ಸಿಗಲಾರದು, ಎಂಬದನ್ನು ಈ ಉಪನಿಷತ್ಕಾರರು ವಿಶದವಾಗಿ ಹೇಳಿದ್ದಾರೆ. ಕೇವಲ ವ್ಯಾಖ್ಯಾನಗಳಿಂದ, ಬುದ್ಧಿಯಿಂದ, ಶ್ರವಣದಿಂದ ಈ ಜ್ಞಾನವು ಸಿಕ್ಕುವದಿಲ್ಲ. ಬಲಹೀನರಿಗೆ, ಅಳುಬುರುಕರಿಗೆ, ಇದು ಸಾಧ್ಯವಿಲ್ಲ. ಸತ್ಯ, ತಪಸ್ಸು, ಬ್ರಹ್ಮಚರ್ಯ ಮುಂತಾದವುಗಳಿಂದ ಈ ಜ್ಞಾನವು ದೊರೆಯುವದೆಂದು ಹೇಳುವದಲ್ಲದೆ ವಿಶುದ್ಧಸತ್ವನಿಗೆ ಅಂದರೆ ಶುದ್ಧಮನಸ್ಸಿನವನಿಗೆ ಆತ್ಮಪ್ರಸಾದದಿಂದ, ಆತ್ಮಾನುಗ್ರಹದಿಂದ ಈ ಜ್ಞಾನವು ಪ್ರಾಪ್ತವಾಗುವದೆಂದು ಹೇಳಿದ್ದಾರೆ. ಉಪನಿಷತ್ತುಗಳ ಜ್ಞಾನವೆಂಬ ಧನುಸ್ಸವನ್ನೆತ್ತಿ ಅದಕ್ಕೆ ಉಪಾಸನೆಯ ಬಾಣವನ್ನೇರಿಸಿ ಅಕ್ಷರಬ್ರಹ್ಮವೆ ಗುರಿಯೆಂದು ಅಲ್ಲಿಯೆ ತನ್ನ ಚಿತ್ತವನ್ನು ಯೋಜಿಸಿ ಬಾಣವನ್ನು ಬಿಡಬೇಕು ಎಂದು ಬ್ರಹ್ಮಜ್ಞಾನವನ್ನು ಗೆಲ್ಲಲಿಕ್ಕೆ ಹೊರಟ ವೀರವೃತ್ತಿಯ ಸಾಧಕನಿಗೆ ಉಪನಿಷತ್ಕಾರರು ಹೇಳುವರು 'ಹೀಗೆ ಮಾಡಿದರೆ ಎಲ್ಲ ಸಂಶಯಗಳ ಗಂಟು ಒಡೆದು ಹೃದಯದಲ್ಲಿರುವ ಆನಂದರೂಪ ಅಮೃತಮಯ ಆತ್ಮಜ್ಯೋತಿಯು ಬೆಳಗಲಾರಂಭಿಸುವದು. ಆ ಮೇಲೆ ನೀವು ಜ್ಞಾನತೃಪ್ತರೂ ಆಪ್ತಕಾಮರೂ ಕೃತಾತ್ಮರೂ ವೀತರಾಗರೂ ಪ್ರಶಾಂತರೂ ಆಗಿ ಅಕ್ಷಯ ಸುಖವನ್ನನುಭವಿಸಿರಿ' ಎಂದು ಉಪನಿಷತ್ಕಾರರು ಆಶ್ವಾಸನವನ್ನಿತ್ತಿರುವರು.

# ಐತರೇಯೋಪನಿಷತ್ತು

## ಐತರೇಯೋಪನಿಷತ್ತಿನ ಸಾರಾಂಶ

ನಾನು ಸತ್ಯಮಾತುಗಳನ್ನೆ ನುಡಿಯುವವನಾದುದರಿಂದ ನನ್ನಲ್ಲಿ ಆವಿರ್ಭವಿಸು, ಪ್ರಕಟನಾಗು, ಎಂದು ಋಷಿಗಳು ಪರಮಾತ್ಮನನ್ನು ಬೇಡಿಕೊಂಡು ಈ ಉಪನಿಷತ್ತನ್ನು ಆರಂಭಿಸುತ್ತಾರೆ; ತಮ್ಮನ್ನೂ ತಮ್ಮ ಗುರುಗಳನ್ನೂ ದೇವರು ಕಾಪಾಡಬೇಕು ಎಂದು ಪ್ರಾರ್ಥಿಸಿ ಶಾಂತಿಯನ್ನು ಮುಗಿಸುತ್ತಾರೆ.

ಈ ಉಪನಿಷತ್ತಿನಲ್ಲಿ ಮೂರು ಅಧ್ಯಾಯಗಳಿರುವವು. ೧ನೆ ಅಧ್ಯಾಯದಲ್ಲಿ ಮೂರು ಖಂಡಗಳಿರುವವು. ೨ನೆ ೩ನೆ ಅಧ್ಯಾಯಗಳಲ್ಲಿ ಒಂದೊಂದೆ ಖಂಡವಿರುವದು. ಆತ್ಮನ ವರ್ಣನೆ ಹಾಗೂ ಆತ್ಮನಿಂದ ಈ ವಿವಿಧ ಸೃಷ್ಟಿಯ ಉತ್ಪತ್ತಿ ಇದೇ ಈ ಉಪನಿಷತ್ತಿನ ವಿಷಯವಿರುವದು.

ಮೊಟ್ಟಮೊದಲು ಆತ್ಮನೊಬ್ಬನೆ ಇದ್ದನು. ಅವನು ತನ್ನ ಸಂಕಲ್ಪದಿಂದಲೆ ನಾನಾ ಲೋಕಗಳನ್ನು ಸೃಜಿಸಿದನು. ನಾಲ್ಕು ಲೋಕಗಳನ್ನು ಸೃಜಿಸಿ ಆಮೇಲೆ ಲೋಕಪಾಲರನ್ನು ಸೃಜಿಸುವದಕ್ಕಾಗಿ ವಿರಾಟಪುರುಷನನ್ನು ನಿರ್ಮಿಸಿದನು. ವಿರಾಟಪುರುಷನ ಶರೀರದಲ್ಲಿ ಇಂದ್ರಿಯಗಳೂ ತತ್ತದಭಿಮಾನಿ ದೇವತೆಗಳೂ ಹುಟ್ಟಿದರು.

ಆ ವಿರಾಟಪುರುಷನ ಅತಿ ವಿಶಾಲವಾದ ಶರೀರದಲ್ಲಿರುವ ದೇವತೆಗಳು ಹಸಿವೆ ನೀರಡಿಕೆಗಳಿಗೆ ಗುರಿಯಾದರು. ಆದುದರಿಂದ ಯಾವ ಸ್ಥಾನದಲ್ಲಿ ತಮ್ಮ ಹಸಿವೆನೀರಡಿಕೆಗಳು ಹಿಂಗಬಹುದೊ ಅಂತಹ ಸ್ಥಾನಗಳನ್ನು ಆ ದೇವತೆಗಳು ಹುಡುಕಲಾರಂಭಿಸಿದರು. ಆತ್ಮನು ಅವರಿಗೆ ಪುರುಷಶರೀರವನ್ನು ತಂದುಕೊಟ್ಟು ಅದರಲ್ಲಿ ಇರಹೇಳಿದನು. ಕೂಡಲೆ ಆಯಾ ದೇವತೆಗಳು ಆಯಾ ಇಂದ್ರಿಯಗಳ ಮುಖಾಂತರ ಶರೀರವನ್ನು ಹೊಕ್ಕರು. ಹಸಿವೆ ನೀರಡಿಕೆಗಳು ಸಹ ಆಯಾ ದೇವತೆಗಳ ಸಂಗಡವಿರುವದರಿಂದ ಶರೀರದಲ್ಲಿ

ಆಯಾ ದೇವತೆಗಳ ಜೊತೆಯಲ್ಲಿಯೆ ಅವು ಇರುವವು ಹಾಗೂ ಅವರವರ ಆಹಾರದಲ್ಲಿ ಪಾಲನ್ನು ಪಡೆಯುವವು.

ಲೋಕಗಳೂ ಲೋಕಪಾಲರೂ ಸೃಜಿಸಲ್ಪಟ್ಟರು. ಇನ್ನು ಅನ್ನವನ್ನು ಉತ್ಪನ್ನಮಾಡಬೇಕೆಂದು ಆತ್ಮನು ತಪಸ್ಸುಮಾಡಿ ಆಕೃತಿಯುಕ್ತ ಜಡ ಪದಾರ್ಥಗಳನ್ನು ಉತ್ಪನ್ನಮಾಡಿದನು. ಇದು ಪುರುಷನ, ಇಂದ್ರಿಯಗಳ, ಮತ್ತು ಇಂದ್ರಿಯವಿಷಯಗಳ ಸಂಗತಿಯು. ಇನ್ನು ಅನ್ನವನ್ನು ಭಕ್ಷಿಸಬೇಕೆಂದು ಪುರುಷನು ತನ್ನ ವಿವಿಧ ಇಂದ್ರಿಯಗಳನ್ನು ಉಪಯೋಗಿಸಲಾರಂಭಿಸಿದನು. ಆದರೆ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳನ್ನಷ್ಟೆ ಗ್ರಹಿಸಲು ಸಮರ್ಥವಾದವು. ಅಪಾನವಾಯುವು ಮಾತ್ರ ಅನ್ನವನ್ನು ಗ್ರಹಿಸಲು ಸಮರ್ಥವಾಯ್ತು. ಅನ್ನವೆ ಆಯುಷ್ಯವು. ಇದನ್ನೆಲ್ಲ ನೋಡಿ ಆತ್ಮನು ವಿಚಾರಮಾಡಿದ್ದೇನಂದರೆ, ನನ್ನ ಹೊರ್ತು ಈ ಪುರುಷನು ಇರುವಬಗೆ ಹೇಗೆ? ಹೀಗೆ ವಿಚಾರಮಾಡಿ ಅತ್ಮನು ನೆತ್ತಿಯಲ್ಲಿರುವ ಬ್ರಹ್ಮರಂಧ್ರ ದ್ವಾರದಿಂದ ಒಳಗೆ ಪ್ರವೇಶಮಾಡಿದನು. ಈ ದ್ವಾರಕ್ಕೆಯೆ ವಿದೃತಿಯೆನ್ನುವರು. ಇದು ಆನಂದ ಸ್ಥಾನವು. ಹೀಗೆ ಶರೀರದಲ್ಲಿ ಪ್ರವೇಶಮಾಡಿ ಆತ್ಮನು ಎಲ್ಲವನ್ನು ನೋಡಿ ಅರಿತುಕೊಳ್ಳುವನು. ಹೀಗೆ ಅರಿತುಕೊಳ್ಳುವವನು ಇಂದ್ರನೆಂದು ಕರೆಯಲ್ಪಡುವನು.

ಆತ್ಮನ ವಿಷಯಕ್ಕೂ ಶರೀರದ ವಿಷಯಕ್ಕೂ ಈ ಪ್ರಕಾರವಾಗಿ ಹೇಳಿ ಉಪನಿಷತ್ಕಾರರು ಗರ್ಭವನ್ನು ಕುರಿತು ಕೆಲವು ಸಂಗತಿಗಳನ್ನು ವಿವರಿಸುವರು. ಗರ್ಭವು ಮೊದಲು ಪುರುಷನ ಶರೀರದಲ್ಲಿಯೆ ಇರುತ್ತದೆ. ರೇತಸ್ಸೆಂಬದು ಪುರುಷನ ಅಂಗಾಂಗಗಳ ಶಕ್ತಿಯ ಸಾರವು. ಸ್ತ್ರೀ ಸಂಭೋಗ ಕಾಲದಲ್ಲಿ ಈ ರೇತಸ್ಸು ಸ್ತ್ರೀದೇಹವನ್ನು ಸೇರುವದು. ಇದು ಪುರುಷನ ಮೊದಲನೆಯ ಜನ್ಮವು. ಆ ಗರ್ಭವು ತನ್ನ ದೇಹಭಾಗವೆ ಎಂದು ಭಾವಿಸಿ ಸ್ತ್ರೀಯು ಅದನ್ನು ಜಾಗ್ರತೆಯಿಂದ ಕಾಪಾಡುವಳು. ಗರ್ಭವು ಬೆಳೆದ ಹಾಗೆ ಸ್ತ್ರೀಯು ಅದನ್ನು ಪ್ರೇಮದಿಂದ ಪೋಷಿಸುವ ಕಾರ್ಯದಲ್ಲಿ ತತ್ಪರಳಾಗುವಳು. ಇದು ಅವನ ಎರಡನೆಯ ಜನ್ಮವು. ಇನ್ನು ಮುಪ್ಪಾದ ಪುರುಷನಲ್ಲಿಯ ಆತ್ಮನು ಕೃತಕೃತ್ಯನಾದುದರಿಂದ ದೇಹವನ್ನು ಬಿಟ್ಟು ಪುನರ್ಜನ್ಮವನ್ನು ಹೊಂದುವನು. ಪುನರ್ಜನ್ಮ ಹೊಂದಬೇಕಾದಾಗ ಇಂತಹ ಗರ್ಭದಲ್ಲಿ ಪ್ರವೇಶಿಸುವನು.

ಇದು ಮೂರನೆಯ ಜನ್ಮವು. ಈ ಎಲ್ಲ ಸಂಗತಿಗಳು ಅದೃಶ್ಯವಿರುವ ಗರ್ಭದ ಸಂಬಂಧದಿಂದಿರುವ ಮೂಲಕ ಯಾರಾದರೂ ಇವುಗಳಿಗೆ ಅಸತ್ಯವೆಂದೆನ್ನ ಬಹುದು. ಆದರೆ ಗರ್ಭದಲ್ಲಿಯೆ ಇರುವಾಗ ಜ್ಞಾನಯುಕ್ತನಾದ ವಾಮದೇವನು ಸ್ವತಃ ಈ ಜ್ಞಾನವನ್ನು ಹೇಳಿರುವನು. ಈ ಜ್ಞಾನವನ್ನರಿತವನಾದುದರಿಂದ ಅವನು ಮೋಕ್ಷವನ್ನು ಪಡೆದನು.

ಆತ್ಮನು ಎಲ್ಲಕ್ಕೂ ಪೂರ್ವದಲ್ಲಿ ಒಬ್ಬನೆ ಇದ್ದನೆಂದು ಹೇಳಿದ್ದಾಯ್ತು. ಆದರೆ ಈ ಆತ್ಮನು ಯಾರು? ಈ ಇಂದ್ರಿಯಗಳು ಯಾರ ಬಲದಿಂದ ತಮ್ಮ ತಮ್ಮ ಕಾರ್ಯಗಳಲ್ಲಿ ತತ್ಪರವಾಗುವವು? ಆತ್ಮವೆಂದರೆ ಶುದ್ಧ ಚೈತನ್ಯವು. ಅದರ ಹೆಸರೆ ಪ್ರಜ್ಞಾನವು. ಮನಸ್ಸಿನಲ್ಲಿಯೂ ಚೇತನದಲ್ಲಿಯೂ ಆಗುವ ನಾನಾ ವ್ಯಾಪಾರಗಳು ಕೇವಲ ಆ ಶುದ್ಧ ಚೈತನ್ಯದ ನಾಮಧೇಯಗಳಷ್ಟೆ. ಈ ಬಾಹ್ಯವಸ್ತುಗಳಾದರೂ ಈ ಶುದ್ಧ ಚೈತನ್ಯದಲ್ಲಿಯೆ ನೆಲೆಯಾಗಿ ನಿಂತಿರುವವು. ಇದನ್ನುಳಿದು ಈ ವಿಶ್ವದಲ್ಲಿ ಇನ್ನಾವದೂ ಇರಲಾರದು. ಯಾವದಿದ್ದರೂ ಇದರ ಆಧಾರದಿಂದಲೆ ಇರಬೇಕು. ಕೊನೆಗೆ ಆ ಶುದ್ಧ ಚೈತನ್ಯ ಸ್ವರೂಪವೆ ಎಲ್ಲ ಪದಾರ್ಥಗಳ ಮೂಲವು, ಎಲ್ಲ ವಿಶ್ವದ ಮೂಲವು. ಅದರ ಸ್ವಯಂಸ್ಫೂರ್ತಿಯಿಂದಲೆ ಈ ವ್ಯಕ್ತ ವಿಶ್ವವು ವಿಸ್ತರಿಸಿರುವದು. ಇದುವೆ ಐತರೇಯದ ಸಾರಸರ್ವಸ್ವವು.

# ಐತರೇಯೋಪನಿಷತ್

## ಶಾಂತಿಮಂತ್ರ

**ವಾಙ್ ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತಮಾವಿರಾವೀರ್ಮ ಏಧಿ ॥ ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀರನೇನಾಧೀತೇ-ನಾಹೋರಾತ್ರಾನ್ಸಂದಧಾಮ್ಯೃತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ ॥ ತನ್ಮಾಮ-ವತು ತದ್ವಕ್ತಾರಮವತು ಅವತು ಮಾಮವತು ವಕ್ತಾರಮವತು ವಕ್ತಾರಂ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

---

ನನ್ನ ವಾಚಾಶಕ್ತಿಯು ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿರುವದು. ನನ್ನ ಮನಸ್ಸು ವಾಚೆಯಲ್ಲಿ ಸ್ಥಿರವಾಗಿರುವದು. ಸ್ವಯಂಪ್ರಕಟನೇ, ನನ್ನಲ್ಲಿ ಪ್ರಕಟನಾಗು. ನನ್ನನ್ನು ಸಂಪೂರ್ಣ ವೇದವಿದ್ಯೆಯುಳ್ಳವನನ್ನಾಗಿ ಮಾಡು.

## ಉಪನಿಷತ್

**ಆತ್ಮಾ ವಾ ಇದಮೇಕ ಏವಾಗ್ರ ಆಸೀನ್ನಾನ್ಯತ್ಕಿಂಚನ ಮಿಷತ್ ಸ ಈಕ್ಷತ ಲೋಕಾನ್ನು ಸೃಜಾ ಇತಿ ॥ ೧ ॥ ಸ ಇಮಾಲ್ಲೋಕಾನಸೃಜತ ಅಂಭೋ ಮರೀಚೀರ್ಮರ ಮಾಪೋಽದೋಽಂಭಃ ಪರೇಣ ದಿವಂ ದ್ಯೌಃ ಪ್ರತಿಷ್ಠಾಂಽತರಿಕ್ಷಂ ಮರೀ-ಚಯಃ ॥ ಪೃಥಿವೀ ಮರೋ ಯಾ ಅಧಸ್ತಾತ್ತಾ ಆಪಃ ॥ ೨ ॥ ಸ ಈಕ್ಷತೇಮೇನು ಲೋಕಪಾಲಾನ್ನು ಸೃಜಾ ಇತಿ ॥ ಸೋಽಭ್ದ್ಯ ಏವ ಪುರುಷಂ ಸಮುದ್ಧೃತ್ಯಾಮೂರ್ಚ್ಛಯತ್ ॥ ೩ ॥ ತಮಭ್ಯತಪತ್ತಸ್ಯಾಭಿತಪ್ತಸ್ಯ ಮುಖಂ ನಿರಭಿದ್ಯತ ಯ-ಥಾಂಡಂ ಮುಖಾದ್ವಾಗ್ವಾಚೋಽಗ್ನಿರ್ನಾಸಿಕೇ ನಿರಭಿದ್ಯೇತಾಂ ನಾಸಿಕಾಭ್ಯಾಂ ಪ್ರಾಣಃ।**

---

ನನ್ನ ವಿದ್ಯೆಯನ್ನು ಹೀಯಾಳಿಸಬೇಡ. ನಾನು ಯಥಾರ್ಥ ಮಾತಾಡುವೆನು. ನಾನು ಸತ್ಯವನ್ನು ನುಡಿಯುವೆನು. ಸತ್ಯವು ನನ್ನನ್ನು ರಕ್ಷಿಸಲಿ. ಸತ್ಯವು ಸತ್ಯಮಾತಾಡುವವರನ್ನು ಅಥವಾ ಗುರುಗಳನ್ನು ರಕ್ಷಿಸಲಿ, ಗುರುಗಳನ್ನು ರಕ್ಷಿಸಲಿ, ಗುರುಗಳನ್ನು ರಕ್ಷಿಸಲಿ. ಓಂ ಶಾಂತಿಃ ಶಾಂತಿಃ ಶಾಂತಿಃ.

೧ ಮೊಟ್ಟಮೊದಲು ಈ ಆತ್ಮವು ಒಂದೇ ಇತ್ತು. ಇನ್ನಾವದೂ ಇದರ ಸ್ಪರ್ಧೆ ಮಾಡುವಂತಹದಿರಲಿಲ್ಲ. ಲೋಕಗಳನ್ನು ಸೃಜಿಸಬೇಕೆಂದು ಆತ್ಮನು ವಿಚಾರ ಮಾಡಿದನು. (೨) ಅವನು ಈ ಲೋಕಗಳನ್ನು ಅಂದರೆ ಅಂಭಲೋಕ (ಆಕಾಶ), ಮರೀಚಿಲೋಕ (ಅಂತರಿಕ್ಷ), ಮೃತ್ಯುಲೋಕ, ಆಪಲೋಕ (ಪಾತಾಳ) ಎಂಬವುಗಳನ್ನು ಸೃಜಿಸಿದನು. ಆ ಲೋಕವು ಅಂದರೆ ಪರಲೋಕವು ಅಂಭಲೋಕವು. ಆಚೆಗಿರುವದರಿಂದ ಅದು ಸ್ವರ್ಗ ಲೋಕವು. ಅದು ಆಶ್ರಯಸ್ಥಾನವು. ಅಂತರಿಕ್ಷವು ಮರೀಚಿಲೋಕವು. ಪೃಥಿವಿಯು ಮೃತ್ಯುಲೋಕವು. ಕೆಳಗೆ ಆಪಲೋಕವು. (೩) ಇವು ಲೋಕಗಳಾದವು. ಇನ್ನು ಲೋಕಪಾಲರನ್ನು ಸೃಜಿಸಬೇಕೆಂದು ಅವನು ವಿಚಾರ ಮಾಡಿದನು. ಅವನು ನೀರಿನೊಳಗಿಂದಲೆ ಪುರುಷನನ್ನು ಬೇರೆ ತೆಗೆದು ಅವನಿಗೆ ಆಕೃತಿ-ಯನ್ನು ಕಲ್ಪಿಸಿದನು. (೪) ಅದಕ್ಕೆ ಕಾವು ಕೊಟ್ಟನು (ಅದರ ವಿಷಯಕ್ಕೆ ಧ್ಯಾನಮಾಡಿದನು). ಕಾಯ್ದುದರಿಂದ (ಧ್ಯಾನಿಸಲ್ಪಟ್ಟದ್ದರಿಂದ) ತತ್ತಿಯು ಒಡೆಯುವಂತೆ ಇದಕ್ಕೆ ಮುಖವು ಮೂಡಿತು. ಮುಖದಿಂದ ವಾಚೆಯು. ವಾಚೆಯಿಂದ ಅಗ್ನಿಯು. ಮೂಗಿನ ಸೊಳ್ಳೆಗಳು ಮೂಡಿದವು. ಅವುಗಳೊಳಗಿಂದ ಪ್ರಾಣವು, ಪ್ರಾಣದಿಂದ ವಾಯುವು. ಕಣ್ಣುಗಳು ಮೂಡಿದವು.

ಪ್ರಾಣಾದ್ವಾಯುರಕ್ಷಿಣೀ ನಿರಭಿದ್ಯೇತಾಮಕ್ಷೀಭ್ಯಾಂ ಚಕ್ಷುಶ್ಚಕ್ಷುಷ ಆದಿತ್ಯಃ ಕರ್ಣೌ ನಿರಭಿದ್ಯೇತಾಂ ಕರ್ಣಾಭ್ಯಾಂ ಶ್ರೋತ್ರಂ ಶ್ರೋತ್ರಾದ್ದಿಶಸ್ತ್ವಙ್ನಿರಭಿದ್ಯತ ತ್ವಚೋ ಲೋಮಾನಿ ಲೋಮಭ್ಯ ಓಷಧಿವನಸ್ಪತಯೋ ಹೃದಯಂ ನಿರಭಿದ್ಯತ ಹೃದಯಾನ್ಮನೋ ಮನಸಶ್ಚಂದ್ರಮಾ ನಾಭಿರ್ನಿರಭಿದ್ಯತ ನಾಭ್ಯಾ ಅಪಾನೋಽಪಾನಾನ್ಮೃತ್ಯುಃ ಶಿಶ್ನಂ ನಿರಭಿದ್ಯತ ಶಿಶ್ನಾದ್ರೇತೋ ರೇತಸ ಆಪಃ ॥ ೪ ॥ ಇತಿ ಪ್ರಥಮಃ ಖಂಡಃ ॥

ತಾ ಏತಾ ದೇವತಾಃ ಸೃಷ್ಟಾ ಅಸ್ಮಿನ್ ಮಹತ್ಯರ್ಣವೇ ಪ್ರಾಪತಂಸ್ತಮಶನಾಪಿಪಾಸಾಭ್ಯಾಮನ್ವವಾರ್ಜತ್ ॥ ತಾ ಏನಮಬ್ರುವನ್ನಾಯತನಂ ನಃ ಪ್ರಜಾನೀಹಿ ಯಸ್ಮಿನ್ ಪ್ರತಿಷ್ಠಿತಾ ಅನ್ನಮದಾಮೇತಿ ॥ ೧ ॥ ತಾಭ್ಯೋ ಗಾಮಾನಯತ್ತಾ ಅಬ್ರುವನ್ನ ವೈ ನೋಽಯ ಮಲಮಿತಿ ॥ ತಾಭ್ಯೋಽಶ್ವಮಾನಯತ್ತಾ ಅಬ್ರುವನ್ನ ವೈ ನೋಽಯ ಮಲಮಿತಿ ॥ ೨ ॥ ತಾಭ್ಯಃ ಪುರುಷಮಾನಯತ್ತಾ ಅಬ್ರುವನ್ ಸುಕೃತಂ ಬತೇತಿ ಪುರುಷೋ ವಾವ ಸುಕೃತಂ ॥ ತಾ ಅಬ್ರವೀದ್ಯಥಾಽಯತನಂ ಪ್ರವಿಶತೇತಿ ॥ ೩ ॥ ಅಗ್ನಿರ್ವಾಗ್ಭೂತ್ವಾ ಮುಖಂ ಪ್ರಾವಿಶದ್ವಾಯುಃ ಪ್ರಾಣೋ ಭೂತ್ವಾ ನಾಸಿಕೇ ಪ್ರಾವಿಶದಾದಿತ್ಯಶ್ಚಕ್ಷುರ್ಭೂತ್ವಾಽಕ್ಷಿಣೀ ಪ್ರಾವಿಶದ್ದಿಶಃ ಶ್ರೋತ್ರಂ ಭೂತ್ವಾ

---

ಕಣ್ಣಿನಿಂದ ಚಕ್ಷುರಿಂದ್ರಿಯಗಳು, ಚಕ್ಷುಗಳಿಂದ ಆದಿತ್ಯನು. ಕಿವಿಗಳು ತೋರಿದವು. ಕಿವಿಗಳಿಂದ ಶ್ರೋತ್ರೇಂದ್ರಿಯಗಳು, ಅವುಗಳಿಂದ ದಿಕ್ಕುಗಳು. ಚರ್ಮವು ತೋರಿತು. ಚರ್ಮದಿಂದ ಕೂದಲುಗಳು, ಅವುಗಳಿಂದ ಔಷಧಿ ವನಸ್ಪತಿಗಳು. ಹೃದಯವು ಹುಟ್ಟಿತು. ಹೃದಯದಿಂದ ಮನವು, ಮನದಿಂದ ಚಂದ್ರನು. ನಾಭಿಯು ಹುಟ್ಟಿತು. ನಾಭಿಯಿಂದ ಅಪಾನವು, ಅಪಾನದಿಂದ ಮರಣವು. ಶಿಶ್ನವು ತೋರಿತು. ಶಿಶ್ನದಿಂದ ರೇತಸ್ಸು, ರೇತಸ್ಸಿನಿಂದ ನೀರು.

(೧) ಸೃಜಿಸಲ್ಪಟ್ಟ ಆ ಎಲ್ಲ ದೇವತೆಗಳು ಈ ಮಹಾಸಮುದ್ರದಲ್ಲಿ (ವಿರಾಟಪುರುಷನ ಶರೀರದಲ್ಲಿ) ಸೇರಿದರು. ಅವರು ಹಸಿವು ನೀರಡಿಕೆಗಳಿಂದ ಯುಕ್ತರಾದರು. ಅವರು ಆತ್ಮನಿಗೆ ಅಂದದ್ದು, ' ನಮ್ಮ ಸಲುವಾಗಿ ಶರೀರವನ್ನು (ಆಶ್ರಯಸ್ಥಾನವನ್ನು) ನಿರ್ಮಿಸು. ಅದರಲ್ಲಿ ನಿಂತು ನಾವು ಅನ್ನವನ್ನು ಉಣ್ಣುವೆವು.'' (೨) ಆತ್ಮನು ಅವರೆಡೆಗೆ ಆಕಳನ್ನು ತಂದನು. ಇದು ನಮಗೆ ಯೋಗ್ಯವಾದದ್ದಲ್ಲವೆಂದು ಅವರು ಹೇಳಿದರು. ಆತ್ಮನು ಅವರೆಡೆಗೆ ಕುದುರೆಯನ್ನು ತಂದನು. ಇದೂ ನಮಗೆ ಯೋಗ್ಯವಾದದ್ದಲ್ಲವೆಂದು ಅವರು ಹೇಳಿದರು. (೩) ಆತ್ಮನು ಅವರೆಡೆಗೆ ಪುರುಷನನ್ನು ತಂದನು. " ಅಹಾ, ನೆಟ್ಟಗಾಯ್ತು. ಪುರುಷನೆಂದರೆ ಪುಣ್ಯವೆ (ಸುಕೃತವೆ) ಸರಿ " ಎಂದು ಅವರು

ಕರ್ಣೌ ಪ್ರಾವಿಶನ್ನೋಷಧಿವನಸ್ಪತಯೋ ಲೋಮಾನಿ ಭೂತ್ವಾ ತ್ವಚಂ ಪ್ರಾವಿಶಂ ಶ್ಚಂದ್ರಮಾ ಮನೋ ಭೂತ್ವಾ ಹೃದಯಂ ಪ್ರಾವಿಶನ್ಮೃತ್ಯುರಪಾನೋ ಭೂತ್ವಾ ನಾಭಿಂ ಪ್ರಾವಿಶದಾಪೋ ರೇತೋ ಭೂತ್ವಾ ಶಿಶ್ನಂ ಪ್ರಾವಿಶತ್ ॥ ೪ ॥ ತಮಶನಾ-ಪಿಪಾಸೇ ಅಬ್ರೂತಾಮಾವಾಭ್ಯಾಮಭಿಪ್ರಜಾನೀಹೀತಿ॥ ಸ ತೇ ಅಬ್ರವೀದೇತಾಸ್ವೇವ ವಾಂ ದೇವತಾಸ್ವಾಭಜಾಮ್ಯೇತಾಸು ಭಾಗಿನ್ಯೌ ಕರೋಮೀತಿ ॥ ತಸ್ಮಾದ್ಯಸ್ಯೈ ಕಸ್ಯೈಚ ದೇವತಾಯೈ ಹವಿರ್ಗೃಹ್ಯತೇ ಭಾಗಿನ್ಯಾವೇವಾಸ್ಯಾಮಶನಾಪಿಪಾಸೇ ಭವತಃ ॥ ೫ ॥ ಇತಿ ದ್ವಿತೀಯಃ ಖಂಡಃ ॥

ಸ ಈಕ್ಷತೇಮೇ ನು ಲೋಕಾಶ್ಚ ಲೋಕಪಾಲಾಶ್ಚಾನ್ನಮೇಭ್ಯಃ ಸೃಜಾ ಇತಿ ॥ ೧ ॥ ಸೋಽಪೋಽಭ್ಯತಪತ್ ತಾಭ್ಯೋಽಭಿತಪ್ತಾಭ್ಯೋ ಮೂರ್ತಿರಜಾಯತ ॥ ಯಾ ವೈ ಸಾ ಮೂರ್ತಿರಜಾಯತಾನ್ನಂ ವೈ ತತ್ ॥ ೨ ॥ ತದೇತತ್ಸೃಷ್ಟಂ ನದತ್ ಪರಾಜತ್ಯಜಿಘಾಂಸತ್ ತದ್ವಾಚಾ ಜಿಘೃಕ್ಷತ್ತನ್ನಾಶಕ್ನೋದ್ವಾಚಾ ಗ್ರಹೀತುಮ್ ॥

---

ನುಡಿದರು. ಈ ಪುರುಷ ಶರೀರದಲ್ಲಿ ಹೇಗೆ ಪ್ರವೇಶ ಮಾಡಬೇಕೆಂಬುದನ್ನು ಆತ್ಮನು ಅವರಿಗೆ ಹೇಳಿದನು. (೪) ಅಗ್ನಿಯು ವಾಣಿಯಾಗಿ ಮುಖದಲ್ಲಿ ಸೇರಿದನು. ವಾಯುವು ಪ್ರಾಣವಾಗಿ ಮೂಗಿನ ಸೊಳ್ಳೆಗಳಲ್ಲಿ ಹೊಕ್ಕನು. ಆದಿತ್ಯನು ದೃಷ್ಟಿಯಾಗಿ ಕಣ್ಣುಗಳಲ್ಲಿ ಪ್ರವೇಶಿಸಿದನು. ದಿಕ್ಕುಗಳು ಶ್ರೋತ್ರ ವಾಗಿ (ಕೇಳುವಶಕ್ತಿ) ಕಿವಿಗಳನ್ನು ಸೇರಿದವು. ಓಷಧಿವನಸ್ಪತಿಗಳು ಕೂದಲುಗಳಾಗಿ ಚರ್ಮವನ್ನು ಪ್ರವೇಶಿಸಿದವು. ಚಂದ್ರನು ಮನಸ್ಸಾಗಿ ಹೃದಯವನ್ನು ಸೇರಿದನು. ಮೃತ್ಯುವು ಅಪಾನವಾಯುವಾಗಿ ನಾಭಿಯಲ್ಲಿ ಪ್ರವೇಶ ಮಾಡಿದನು. ನೀರು ರೇತಸ್ಸಾಗಿ ಶಿಶ್ನದಲ್ಲಿ ಸೇರಿತು. (೫) ನಮಗೆ ಇರುವದಕ್ಕಾಗಿ ಸ್ಥಳವನ್ನು ನಿರ್ಮಿಸು ಎಂದು ಹಸಿವೆ ನೀರಡಿಕೆಗಳು ಆತ್ಮನಿಗೆ ಅಂದವು. ಈ ದೇವತೆಗಳೊಳಗೆಯೆ ನಿಮಗೆ ಹಂಚಿ ಸ್ಥಾನವನ್ನು ಕೊಡುವೆನು, ನಿಮ್ಮನ್ನು ಅವರ ಸಂಗಡ ಪಾಲುಗಾರರನ್ನಾಗಿ ಮಾಡುವೆನೆಂದು ಆತ್ಮನು ಅವುಗಳಿಗೆ ಹೇಳಿದನು. ಆದುದರಿಂದ ಯಾವ ದೇವತೆಗೆ ಹವಿಯು (ಆಹು-ತಿಯು) ಕೊಡಲ್ಪಟ್ಟರೂ ಆ ಹವಿಯಲ್ಲಿ ಹಸಿವು ನೀರಡಿಕೆಗಳು ಪಾಲುಪಡೆದೆ ಪಡೆಯುವವು. ಇದು ದ್ವಿತೀಯ ಖಂಡವು.

(೧) ಲೋಕಗಳೂ ಲೋಕಪಾಲರೂ ಆದರು. ಇನ್ನು ಅವರ ಸಲು ವಾಗಿ ಅನ್ನವನ್ನು ಉತ್ಪನ್ನಮಾಡಬೇಕೆಂದು ಆತ್ಮನು ವಿಚಾರಿಸಿದನು. (೨) ನೀರಿಗೆ ಕಾವು ಕೊಟ್ಟನು. (ನೀರನ್ನು ಕುರಿತು ಧ್ಯಾನಮಾಡಿದನು.)

ಸ ಯದ್ಧೈನದ್ವಾಚಾಽಗ್ರಹೈಷ್ಯದಭಿವ್ಯಾಹೃತ್ಯ ಹೈವಾನ್ನಮತ್ರಪ್ಸ್ಯತ್ ॥ ೩ ॥
ತತ್ಪ್ರಾಣೇನಾಜಿಘೃಕ್ಷತ್ ತನ್ನಾಶಕ್ನೋತ್ಪ್ರಾಣೇನ ಗ್ರಹೀತುಮ್ ॥ ಸ ಯದ್ಧೈನತ್ಪ್ರಾ-
ಣೇನಾಗ್ರಹೈಷ್ಯದಭಿಪ್ರಾಣ್ಯ ಹೈವಾನ್ನಮತ್ರಪ್ಸ್ಯತ್ ॥ ೪ ॥ ತಚ್ಚಕ್ಷುಷಾಽಜಿಘೃಕ್ಷತ್
ತನ್ನಾಶಕ್ನೋಚ್ಚಕ್ಷುಷಾ ಗ್ರಹೀತುಮ್ ॥ ಸ ಯದ್ಧೈನಚ್ಚಕ್ಷುಷಾಽಗ್ರಹೈಷ್ಯ
ದೃಷ್ಟ್ವಾ ಹೈವಾನ್ನಮತ್ರಪ್ಸ್ಯತ್ ॥ ೫ ॥ ತಚ್ಛ್ರೋತ್ರೇಣಾಜಿಘೃಕ್ಷತ್ ತನ್ನಾ-
ಶಕ್ನೋಚ್ಛ್ರೋತ್ರೇಣ ಗ್ರಹೀತುಮ್ ॥ ಸ ಯದ್ಧೈನಚ್ಛ್ರೋತ್ರೇಣಾಗ್ರಹೈಷ್ಯ-
ಚ್ಛ್ರುತ್ವಾ ಹೈವಾನ್ನಮತ್ರಪ್ಸ್ಯತ್ ॥ ೬ ॥ ತತ್ತ್ವಚಾಽಜಿಘೃಕ್ಷತ್ ತನ್ನಾಶಕ್ನೋ-
ತ್ತ್ವಚಾ ಗ್ರಹೀತುಮ್ ॥ ಸ ಯದ್ಧೈನತ್ತ್ವಚಾಽಗ್ರಹೈಷ್ಯತ್ಸ್ಪೃಷ್ಟ್ವಾ ಹೈವಾನ್ನ
ಮತ್ರಪ್ಸ್ಯತ್ ॥ ೭ ॥ ತನ್ಮನಸಾಽಜಿಘೃಕ್ಷತ್ ತನ್ನಾಶಕ್ನೋನ್ಮನಸಾ ಗ್ರಹೀತುಮ್॥
ಸ ಯದ್ಧೈನನ್ಮನಸಾಽಗ್ರಹೈಷ್ಯದ್ಧ್ಯಾತ್ವಾ ಹೈವಾನ್ನಮತ್ರಪ್ಸ್ಯತ್ ॥ ೮ ॥ ತಚ್ಛಿ-

ಕಾಯ್ದ ನೀರಿನಿಂದ, (ಯಾವ ನೀರಿನ ವಿಷಯಕ್ಕೆ ಧ್ಯಾನ ಮಾಡಿದ್ದನೊ ಆ ನೀರಿನಿಂದ), ಮೂರ್ತಿಯು (ಆಕಾರವಿದ್ದ ವಸ್ತುವು) ಉತ್ಪನ್ನವಾಯ್ತು. ಯಾವ ಮೂರ್ತಿಯು ಉತ್ಪನ್ನವಾಯಿತೊ ಅದೇ ಅನ್ನವು. (೩) ಆ ಅನ್ನವು ಈ ಪುರುಷನಿಂದ ದೂರ ಹೋಗಲಾರಂಭಿಸಿತು. ಪುರುಷನು ಅದನ್ನು ವಾಣಿಯಿಂದ ಹಿಡಿಯಲೆತ್ನಿಸಿದನು. ಆದರೆ ಅದನ್ನು ಗ್ರಹಿಸಲು ಸಮರ್ಥನಾಗಲಿಲ್ಲ. ವಾಣಿಯಿಂದ ಗ್ರಹಿಸಲು ಸಮರ್ಥನಾಗಿದ್ದರೆ ಅವನು ಅನ್ನದ ಬಗ್ಗೆ ಮಾತಾಡಿಯೆ ಸಂತುಷ್ಟನಾಗಬಹುದಾಗಿತ್ತು. (೪) ಅದನ್ನು ಪ್ರಾಣದಿಂದ ಗ್ರಹಿಸಲೆತ್ನಿಸಿದನು. ಪ್ರಾಣದಿಂದ ಗ್ರಹಿಸಲು ಸಮರ್ಥನಾಗಲಿಲ್ಲ. ಪ್ರಾಣದಿಂದ ಗ್ರಹಿಸಲು ಸಮರ್ಥನಾಗಿದ್ದರೆ ಅನ್ನವನ್ನು ಮೂಸಿಯೆ ಅವನು ತೃಪ್ತನಾಗಬಹುದಾಗಿತ್ತು. (೫) ಅದನ್ನು ದೃಷ್ಟಿಯಿಂದ ಗ್ರಹಿಸಲೆತ್ನಿಸಿದನು. ದೃಷ್ಟಿಯಿಂದ ಗ್ರಹಿಸಲು ಸಮರ್ಥನಾಗಲಿಲ್ಲ. ದೃಷ್ಟಿಯಿಂದ ಗ್ರಹಿಸಲು ಸಮರ್ಥನಾಗಿದ್ದರೆ ಅವನು ಅನ್ನವನ್ನು ನೋಡಿಯೆ ತೃಪ್ತನಾಗಬಹುದಾಗಿತ್ತು. (೬) ಕಿವಿಗಳಿಂದ ಅದನ್ನು ಗ್ರಹಿಸಲೆತ್ನಿಸಿದನು. ಕಿವಿಗಳಿಂದ ಗ್ರಹಿಸಲು ಶಕ್ತನಾಗಲಿಲ್ಲ. ಕಿವಿಗಳಿಂದ ಗ್ರಹಿಸಲು ಸಮರ್ಥನಾಗಿದ್ದರೆ ಅವನು ಅನ್ನದ ಮಾತು ಕೇಳಿಯೆ ತೃಪ್ತನಾಗಬಹುದಾಗಿತ್ತು. (೭) ತ್ವಚೆಯಿಂದ ಅದನ್ನು ಗ್ರಹಿಸಲೆತ್ನಿಸಿದನು. ತ್ವಚೆಯಿಂದ ಗ್ರಹಿಸಲು ಶಕ್ತನಾಗಲಿಲ್ಲ. ತ್ವಚೆಯಿಂದ ಗ್ರಹಿಸಲು ಸಮರ್ಥನಾಗಿದ್ದರೆ ಅವನು ಅನ್ನವನ್ನು ಮುಟ್ಟಿಯೆ ತೃಪ್ತನಾಗಬಹುದಾಗಿತ್ತು. (೮) ಅದನ್ನು ಮನಸಿನಿಂದ ಗ್ರಹಿಸಲೆತ್ನಿಸಿದನು.

ಶ್ನೇನಾಜಿಘೃಕ್ಷತ್ತನ್ನಾಶಕ್ನೋಚ್ಛಿಶ್ನೇನ ಗ್ರಹೀತುಮ್ ಸ ಯದ್ಧೈನಚ್ಛಿಶ್ನೇನಾ-
ಗ್ರಹೈಷ್ಯದ್ವಿಸೃಜ್ಯ ಹೈವಾನ್ನಮತ್ರಪ್ಸ್ಯತ್ ॥ ೯ ॥ ತದಪಾನೇನಾಜಿಘೃಕ್ಷತ್ ತದಾ-
ವಯತ್ ॥ ಸೈಷೋಽನ್ನಸ್ಯ ಗ್ರಹೋ ಯದ್ವಾಯುರನ್ನಾಯುರ್ವಾ ಏಷ
ಯದ್ವಾಯುಃ ॥ ೧೦ ॥ ಸ ಈಕ್ಷತ ಕಥಂ ನ್ವಿದಂ ಮದೃತೇ ಸ್ಯಾದಿತಿ ಸ ಈಕ್ಷತ
ಕತರೇಣ ಪ್ರಪದ್ಯಾ ಇತಿ ॥ ಸ ಈಕ್ಷತ ಯದಿ ವಾಚಾಽಭಿವ್ಯಾಹೃತಂ ಯದಿ ಪ್ರಾಣೇ
ನಾಽಭಿಪ್ರಾಣಿತಂ ಯದಿ ಚಕ್ಷುಷಾ ದೃಷ್ಟಂ ಯದಿ ಶ್ರೋತ್ರೇಣ ಶ್ರುತಂ ಯದಿ
ತ್ವಚಾ ಸ್ಪೃಷ್ಟಂ ಯದಿ ಮನಸಾ ಧ್ಯಾತಂ ಯದ್ಯಪಾನೇನಾಭ್ಯಪಾನಿತಂ ಯದಿ
ಶಿಶ್ನೇನ ವಿಸೃಷ್ಟಮಥ ಕೋಽಹಮಿತಿ ॥ ೧೧ ॥ ಸ ಏತಮೇವ ಸೀಮಾನಂ ವಿದಾ-
ರ್ಯೈತಯಾ ದ್ವಾರಾ ಪ್ರಪದ್ಯತ ॥ ಸೈಷಾ ವಿದೃತಿರ್ನಾಮ ದ್ವಾಸ್ತದೇತನ್ನಾಂದನಂ
ತಸ್ಯ ತ್ರಯ ಆವಸಥಾಸ್ತ್ರಯಃ ಸ್ವಪ್ನಾ ಅಯಮಾವಸಥೋಽಯಮಾವಸಥೋಽಯ
ಮಾವಸಥ ಇತಿ ॥ ೧೨ ॥ ಸ ಜಾತೋ ಭೂತಾನ್ಯಭಿವ್ಯೈಖ್ಯತ್ ಕಿಮಿಹಾನ್ಯಂ ವಾವ
ದಿಷದಿತಿ ॥ ಸ ಏತಮೇವ ಪುರುಷಂ ಬ್ರಹ್ಮ ತತಮಮಪಶ್ಯದಿದಮದರ್ಶಮಿತಿ

---

ಮನಸಿನಿಂದ ಗ್ರಹಿಸಲು ಸಮರ್ಥನಾಗಲಿಲ್ಲ. ಮನಸಿನಿಂದ ಗ್ರಹಿಸಲು ಸಮರ್ಥ
ನಾಗಿದ್ದರೆ ಅವನು ಅದನ್ನು ಧ್ಯಾನಿಸಿ ತೃಪ್ತನಾಗಬಹುದಾಗಿತ್ತು. (೯) ಅವನ್ನು
ಶಿಶ್ನದಿಂದ ಗ್ರಹಿಸಲೆತ್ನಿಸಿದನು. ಶಿಶ್ನದಿಂದ ಗ್ರಹಿಸಲು ಸಮರ್ಥನಾಗಲಿಲ್ಲ
ಶಿಶ್ನದಿಂದ ಗ್ರಹಿಸಲು ಸಮರ್ಥನಾಗಿದ್ದರೆ ಅವನು ಅನ್ನವನ್ನು ವಿಸರ್ಜಿಸಿ
ಸಂತುಷ್ಟನಾಗಬಹುದಾಗಿತ್ತು. (೧೦) ಅವನ್ನು ಅಪಾನದಿಂದ ಗ್ರಹಿಸಲೆತ್ನಿ
ಸಿದನು. ಅದು ಗ್ರಾಸಕ್ಕೆ ಬಂದಿತು (ನುಂಗಲಿಕ್ಕೆ ಬಂದಿತು). ಇದೇ ಅನ್ನದ
ಗ್ರಹಣವು. ಈ ವಾಯುವೆ ಅನ್ನವು ಅಥವಾ ಆಯುಷ್ಯವೆಂದು ಅನ್ನಬಹುದು.
(೧೧) ನನ್ನ ಹೊರತು ಈ ಶರೀರವು ಹೇಗೆ ಇರಬಹುದು ? ನಾನು ಯಾತರ
ಮುಖಾಂತರವಾಗಿ ಪ್ರವೇಶಮಾಡಬೇಕು ? ಎಂದು ಆತ್ಮನು ವಿಚಾರ ಮಾಡಿ
ದನು. ವಾಣಿಯು ನುಡಿದರೆ, ಪ್ರಾಣವು ಮೂಸಿದರೆ, ಕಣ್ಣುಗಳು ನೋಡಿ
ದರೆ, ಕಿವಿಗಳು ಕೇಳಿದರೆ, ತ್ವಚೆಯು ಸ್ಪರ್ಶಮಾಡಿದರೆ, ಮನವು ಧ್ಯಾನ
ಮಾಡಿದರೆ, ಅಪಾನವು ಕುಡಿದರೆ, ಶಿಶ್ನವು ವಿಸರ್ಜನ ಮಾಡಿದರೆ, ನಾನು
ಯಾರು, ಎಂದು ವಿಚಾರ ಮಾಡಿದನು. (೧೨) ಅವನು ಬ್ರೈತಲನ್ನು ಬಿರಿದು
ಆ ದ್ವಾರದಿಂದ ಒಳಗೆ ಪ್ರವೇಶಿಸಿದನು. ಈ ದ್ವಾರವೆ ವಿದೃತಿ ಎಂಬ
ಸ್ಥಾನವು. ಅದು ಆನಂದಸ್ಥಾನವು. ಅದರ ಸ್ಥಾನಗಳು ಮೂರು. ಅದರ
ಸ್ವಪ್ನಾವಸ್ಥೆಗಳು ಮೂರು. ಇದೊಂದು ಸ್ಥಾನವು, ಇದೊಂದು ಸ್ಥಾನವು,

॥ ೧೩ ॥ ತಸ್ಮಾದಿದಂದ್ರೋ ನಾಮೇದಂದ್ರೋ ಹ ವೈ ನಾಮ ತಮಿದಂದ್ರಂ ಸಂತ-ಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ ಪರೋಕ್ಷಪ್ರಿಯಾ ಇವ ಹಿ ದೇವಾಃ ಪರೋಕ್ಷಪ್ರಿಯಾ ಇವ ಹಿ ದೇವಾಃ ॥ ೧೪ ॥ ಇತಿ ತೃತೀಯಃ ಖಂಡಃ ॥

ಪುರುಷೇ ಹ ವಾ ಅಯಮಾದಿತೋ ಗರ್ಭೋ ಭವತಿ । ಯದೇತದ್ರೇತಸ್ತ-ದೇತತ್ಸರ್ವೇಭ್ಯೋಽಂಗೇಭ್ಯಸ್ತೇಜಃ ಸಂಭೂತಮಾತ್ಮನ್ಯೇವಾತ್ಮಾನಂ ಬಿಭರ್ತಿ ತದ್ಯದಾ ಸ್ತ್ರಿಯಾಂ ಸಿಂಚತ್ಯಥೈನಜ್ಜನಯತಿ ತದಸ್ಯ ಪ್ರಥಮಂ ಜನ್ಮ ॥ ೧ ॥ ತತ್-ಸ್ತ್ರಿಯಾ ಆತ್ಮಭೂಯಂ ಗಚ್ಛತಿ ಯಥಾ ಸ್ವಮಂಗಂ ತಥಾ ತಸ್ಮಾದೇನಾಂ ನ ಹಿನಸ್ತಿ ಸಾಽಸ್ಯೈತಮಾತ್ಮಾನಮತ್ರ ಗತಂ ಭಾವಯತಿ ॥ ೨ ॥ ಸಾ ಭಾವಯಿತ್ರೀ ಭಾವಯಿತವ್ಯಾ ಭವತಿ ತಂ ಸ್ತ್ರೀ ಗರ್ಭಂ ಬಿಭರ್ತಿ ಸೋಽಗ್ರ ಏವ ಕುಮಾರಂ ಜನ್ಮನೋಽಗ್ರೇಽಧಿಭಾವಯತಿ ಸ ಯತ್ಕುಮಾರಂ ಜನ್ಮನೋಽಗ್ರೇಽಧಿಭಾವಯ-ತ್ಯಾತ್ಮಾನಮೇವ ತದ್ಭಾವಯತ್ಯೇಷಾಂ ಲೋಕಾನಾಂ ಸಂತತ್ಯಾ ಏವಂ ಸಂತತಾ ಹೀಮೇ ಲೋಕಾಸ್ತದಸ್ಯ ದ್ವಿತೀಯಂ ಜನ್ಮ ॥ ೩ ॥ ಸೋಽಸ್ಯಾಯಮಾತ್ಮಾ

ಇದೊಂದು ಸ್ಥಾನವು ಹೀಗೆ ಮೂರು. (೧೩) ಅವನು ಹುಟ್ಟಿ (ದೇಹದಲ್ಲಿ ಸೇರಿ) ಭೂತಗಳನ್ನು ಅರಿತು, ಇನ್ನು ಇಲ್ಲಿ ಅನ್ಯರು ಯಾರಿರುವರು, ಎಂದನು. ಈ ಪುರುಷನನ್ನು ಬ್ರಹ್ಮನು ವ್ಯಾಪಿಸಿರುವದನ್ನು ನೋಡಿದನು. ಇದನ್ನು ನಾನು ನೋಡಿದೆನು ಅಂದನು. (೧೪) ಆದುದರಿಂದ ಇವನು (ಈ ಆತ್ಮನು) ನೋಡುವವನು. (ಇದಂದ್ರನು, ಸಾಕ್ಷಿಯು) ಇವನ ಹೆಸರು ಇದಂದ್ರನು, ಇದಂದ್ರನಿದ್ದವನನ್ನು ಇಂದ್ರನೆಂದು ಪರೋಕ್ಷವಾಗಿ ಕರೆಯುತ್ತಾರೆ. ದೇವತೆಗಳು ಪರೋಕ್ಷ (ಅತೀಂದ್ರಿಯ ಅಥವಾ ಗುಪ್ತ) ಪ್ರಿಯರು. ದೇವತೆಗಳು ಪರೋಕ್ಷ ಪ್ರಿಯರು.

ಇದು ಮೂರನೆಯ ಖಂಡವು. ಪ್ರಥಮ ಅಧ್ಯಾಯವು ಸಮಾಪ್ತವು.

(೧) ಈ ಗರ್ಭವು ಮೊದಲು ಪುರುಷನಲ್ಲಿ ಉದ್ಭವಿಸುತ್ತದೆ. ದೇಹದ ಎಲ್ಲ ಅವಯವಗಳಿಂದ ಉತ್ಪನ್ನವಾದ ಬಲವೆ ಈ ರೇತಸ್ಸೆನಿಸುವದು. ಪುರುಷನು ತನ್ನಲ್ಲಿಯೆ ತನ್ನನ್ನು ರೇತಸ್ಸಿನ ರೂಪದಿಂದ ಧರಿಸುತ್ತಾನೆ. ರೇತಸ್ಸನ್ನು ಸ್ತ್ರೀಯೋನಿಯಲ್ಲಿ ಹಸಿಸಿದನೆಂದರೆ ಗರ್ಭವು ಹುಟ್ಟುತ್ತದೆ. ಅದು ಪುರುಷನ ಮೊದಲನೆ ಜನ್ಮವು. (೨) ಆ ಗರ್ಭವು ಆ ಸ್ತ್ರೀಯ ಕೂಡ ಒಂದಾಗಿ ಹೋಗುತ್ತದೆ. ಆದುದರಿಂದ ಆಕೆಯು ಅದನ್ನು ಹಿಂಸಿಸುವದಿಲ್ಲ. ತಾನು ಸ್ವತಃ ಅದರಲ್ಲಿ ಸೇರಿರುವಳೆಂದು ಆ ಸ್ತ್ರೀಯು ಭಾವಿಸುವಳು. (೩)

ಪುಣ್ಯೇಭ್ಯಃಕರ್ಮಭ್ಯಃ ಪ್ರತಿಧೀಯತೇಽಥಾಸ್ಯಾಽಯಮಿತರ ಆತ್ಮಾ ಕೃತಕೃತ್ಯೋ ವಯೋಗತಃ ಪ್ರೈತಿ ಸ ಇತಃಪ್ರಯನ್ನೇವ ಪುನರ್ಜಾಯತೇ ತದಸ್ಯ ತೃತೀಯಂ ಜನ್ಮ ॥ ೪ ॥ ತದುಕ್ತಮೃಷಿಣಾ । ಗರ್ಭೇ ನು ಸನ್ನನ್ವೇಷಾಮವೇದಮಹಂ ದೇವಾನಾಂ ಜನಿಮಾನಿ ವಿಶ್ವಾ ॥ ಶತಂ ಮಾ ಪುರ ಆಯಸೀರರಕ್ಷನ್ನಧಃ ಶ್ಯೇನೋ ಜವಸಾ ನಿರದೀಯಮಿತಿಗರ್ಭ ಏವೈತಚ್ಛಯಾನೋ ವಾಮದೇವ ಏವಮುವಾಚ ॥ ೫ ॥ ಸ ಏವಂ ವಿದ್ವಾನಸ್ಮಾಚ್ಛರೀರಭೇದಾದೂರ್ಧ್ವ ಉತ್ಕ್ರಮ್ಯಾಮುಷ್ಮಿನ್ ಸ್ವರ್ಗೇ ಲೋಕೇ ಸರ್ವಾನ್ ಕಾಮಾನಾಪ್ತ್ವಾಽಮೃತಂ ಸಮಭವತ್ ಸಮ-ಭವತ್ ॥ ೬ ॥ ಇತಿ ಚತುರ್ಥಃ ಖಂಡಃ ॥ ದ್ವಿತೀಯಾಧ್ಯಾಯಃ ಸಮಾಪ್ತಃ

---

ಹೀಗೆ ಭಾವನೆಗಳುಳ್ಳ ಬಸುರಾದ ಸ್ತ್ರೀಯು ಪರಾಮರಿಕೆಗೆ ಯೋಗ್ಯಳು. ಆ ಗರ್ಭವನ್ನು ಸ್ತ್ರೀಯು ಧರಿಸುವಳು. ಹುಟ್ಟುವ ಪೂರ್ವದಲ್ಲಿಯೆ ಆಕೆಯು ಕುಮಾರನನ್ನು ಪೋಷಿಸುವಳು. ಅಂದರೆ ಈ ಜನರ ಪರಂಪರೆಗನುಸರಿಸಿ ತನ್ನನ್ನೇ ಪೋಷಿಸುವಳು. ಈ ವಿಶ್ವವು ಹೀಗೆ ವಿಸ್ತಾರ ಹೊಂದುವದು. ಇದು ಪುರುಷನ ಎರಡನೆ ಜನ್ಮವು. (೪) ಈ ಪುರುಷನ ಆತ್ಮವು ಪುಣ್ಯ-ಕರ್ಮಗಳಲ್ಲಿ (ಮುಪ್ಪಿನವನಾದುದರಿಂದ) ಪ್ರತಿರೋಧಿಸಲ್ಪಡುತ್ತದೆ. ಅಂದರೆ ಮುಪ್ಪಿನ ಮೂಲಕ ಇವನ ಕಡೆಯಿಂದ ಪುಣ್ಯಕರ್ಮಗಳು ಆಗದಂತಾಗುತ್ತವೆ. ಇನ್ನು ಈ ಆತ್ಮನು ಕೃತಕೃತ್ಯನೂ ಮುದುಕನೂ ಆದುದರಿಂದ ದೇಹಬಿಟ್ಟು ಹೋಗುತ್ತಾನೆ. ಈ ದೇಹದಿಂದ ಹೋದವನೆ ಪುನರ್ಜನ್ಮವನ್ನು ತಾಳುತ್ತಾನೆ. ಇದೇ ಪುರುಷನ ಮೂರನೆ ಜನ್ಮವು (೫) ಋಷಿಯು ಹೇಳಿರುವದೇನಂದರೆ,— ಗರ್ಭದಲ್ಲಿರುವಾಗ ನಾನು ದೇವತೆಗಳ ಎಲ್ಲ ಜನ್ಮಗಳನ್ನು (ಜ್ಞಾನವನ್ನು) ಶೋಧಿಸಿ ಅರಿತುಕೊಂಡೆನು. ಒಂದುನೂರು ಉಕ್ಕಿನ ಕವಚಗಳು ನನ್ನನ್ನು ಅಲ್ಲಿ ರಕ್ಷಿಸಿದವು. ಗಿಡಗ ಹಕ್ಕಿಯಂತೆ ನಾನು ವೇಗದಿಂದ ಕೆಳಗೆ ಬಂದೆನು. ಗರ್ಭದಲ್ಲಿಯೆ ಮಲಗಿಕೊಂಡು ವಾಮದೇವನು ಹೀಗೆ ಹೇಳಿದನು. (೬) ಇದನ್ನರಿತ ವಿದ್ವಾಂಸನು ಈ ಶರೀರದ ನಾಶವಾದನಂತರ ಮೇಲಕ್ಕೆ ಹೋಗಿ ಆ ಸ್ವರ್ಗಲೋಕದಲ್ಲಿ ಎಲ್ಲ ಇಚ್ಛಿತ ವಸ್ತುಗಳನ್ನು ಪಡೆದು ಅಮೃತವನ್ನನುಭವಿಸಿದನು, ಅನುಭವಿಸಿದನು.

ಇಲ್ಲಿಗೆ ನಾಲ್ಕನೇ ಖಂಡವು ಸಮಾಪ್ತವು.

ದ್ವಿತೀಯ ಅಧ್ಯಾಯವು ಸಮಾಪ್ತವು.

ಕೋಽಯಮಾತ್ಮೇತಿ ವಯಮುಪಾಸ್ಮಹೇ ಕತರಃ ಸ ಆತ್ಮಾ ಯೇನ ವಾ ಪಶ್ಯತಿ ಯೇನ ವಾ ಶೃಣೋತಿ ಯೇನ ವಾ ಗಂಧಾನಾಜಿಘ್ರತಿ ಯೇನ ವಾ ವಾಚಂ ವ್ಯಾಕರೋತಿ ಯೇನ ವಾ ಸ್ವಾದು ಚಾಸ್ವಾದು ಚ ವಿಜಾನಾತಿ ॥ ೧ ॥ ಯದೇತತ್ ಹೃದಯಂ ಮನಶ್ಚೈತತ್ ॥ ಸಂಜ್ಞಾನಮಾಜ್ಞಾನಂ ವಿಜ್ಞಾನಂ ಪ್ರಜ್ಞಾನಂ ಮೇಧಾ ದೃಷ್ಟಿರ್ಧೃತಿರ್ಮತಿರ್ಮನೀಷಾ ಜೂತಿಃಸ್ಮೃತಿಃ ಸಂಕಲ್ಪಃ ಕ್ರತುರಸುಃ ಕಾಮೋ ವಶ ಇತಿ ಸರ್ವಾಣ್ಯೇವೈತಾನಿ ಪ್ರಜ್ಞಾನಸ್ಯ ನಾಮಧೇಯಾನಿ ಭವಂತಿ ॥ ೨ ॥ ಏಷ ಬ್ರಹ್ಮೈಷ ಇಂದ್ರ ಏಷ ಪ್ರಜಾಪತಿರೇತೇ ಸರ್ವೇ ದೇವಾ ಇಮಾನಿ ಚ ಪಂಚ ಮಹಾಭೂತಾನಿ ಪೃಥಿವೀ ವಾಯುರಾಕಾಶ ಆಪೋ ಜ್ಯೋತೀಂಷೀತ್ಯೇತಾನೀ ಮಾನಿ ಚ ಕ್ಷುದ್ರಮಿಶ್ರಾಣೀವ ॥ ಬೀಜಾನೀತರಾಣಿ ಚೇತರಾಣಿ ಚಾಂಡಜಾನಿ ಚ ಜಾರುಜಾನಿ ಚ ಸ್ವೇದಜಾನಿ ಚೋದ್ಭಿಜ್ಜಾನಿ ಚಾಶ್ವಾ ಗಾವಃ ಪುರುಷಾ ಹಸ್ತಿನೋ ಯತ್ಕಿಂಚೇದಂ ಪ್ರಾಣಿ ಜಂಗಮಂ ಚ ಪತತ್ರಿ ಚ ಯಚ್ಚ ಸ್ಥಾವರಂ ಸರ್ವಂ ತತ್ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ ॥ ೩ ॥ ಸ ಏತೇನ ಪ್ರಾಜ್ಞೇನಾತ್ಮನಾಸ್ಮಾಲ್ಲೋಕಾದುತ್ಕ್ರಮ್ಯಾ

---

(೧) ಈ ಆತ್ಮನು ಯಾರು ಎಂದು ನಾವು ಅವನನ್ನು ಉಪಾಸಿಸುವೆವು? ಯಾವನ ಸಹಾಯದಿಂದ ಪುರುಷನು ರೂಪವನ್ನು ನೋಡುವನೊ, ಶಬ್ದವನ್ನು ಕೇಳುವನೊ, ಗಂಧವನ್ನು ಮೂಸುವನೊ, ನುಡಿಯನ್ನು ನುಡಿಯುವನೊ, ಇದು ರುಚಿಯುಳ್ಳದ್ದು, ಇದು ರುಚಿಯಿಲ್ಲದ್ದೆಂದು ತಿಳಿಯುವನೊ ಆ ಆತ್ಮನು ಯಾರು? (೨) ಈ ಹೃದಯವು, ಈ ಮನವು, ಚೇತನವು, ಆಜ್ಞಾನವು, ವಿಶೇಷ ಜ್ಞಾನವು, ಪ್ರಜ್ಞಾನವು, ಬುದ್ಧಿ, ದೃಷ್ಟಿ, ಧೃತಿ, ಮತಿ, ಇಚ್ಛೆ, ವ್ಯಗ್ರತೆ, ಸ್ಮೃತಿ, ಸಂಕಲ್ಪ, ನಿಶ್ಚಯ, ಪ್ರಾಣ, ಕಾಮ, ಆಕಾಂಕ್ಷೆ ಇವೆಲ್ಲವೂ ಪ್ರಜ್ಞಾನದ ಅಂದರೆ ಶುದ್ಧ ಚೈತನ್ಯದ ಭಿನ್ನಭಿನ್ನ ಹೆಸರುಗಳೆ. (೩) ಈ ಬ್ರಹ್ಮನು, ಈ ಇಂದ್ರನು, ಈ ಪ್ರಜಾಪತಿಯು, ಈ ಎಲ್ಲ ದೇವತೆಗಳು, ಪಂಚಮಹಾಭೂತಗಳು, ಪೃಥಿವಿ ವಾಯು ಆಕಾಶ ಆಪಗಳು, ಆಕಾಶದೊಳಗಣ ಎಲ್ಲ ಜ್ಯೋತಿಗಳು, ಈ ಶ್ರೇಷ್ಠ ಹಾಗೂ ಕ್ಷುದ್ರವಾದ ಎಲ್ಲ ವಸ್ತುಗಳು, ಎಲ್ಲ ಧಾನ್ಯಗಳು, ಭಿನ್ನಭಿನ್ನವಾದ ಅಂಡಜ ಜಾರುಜ ಸ್ವೇದಜ ಪ್ರಾಣಿಗಳು, ಗಿಡಗಂಟಿಗಳು, ಕುದುರೆಗಳು, ಹಸುಗಳು, ಪುರುಷರು, ಆನೆಗಳು, ಜೀವವುಳ್ಳ ಈ ಎಲ್ಲ ಪ್ರಾಣಿಗಳು, ಪಕ್ಷಿಗಳು, ಎಲ್ಲ ಸ್ಥಾವರವಸ್ತುಗಳು; ಇವೆಲ್ಲವುಗಳ ಪ್ರವರ್ತಕನು ಪ್ರಜ್ಞಾನವೆ. ಪ್ರಜ್ಞೆಯೆ

**ಮುಷ್ಮಿನ್ ಸ್ವರ್ಗೇ ಲೋಕೇ ಸರ್ವಾನ್ಕಾಮಾನಾಪ್ತ್ವಾಽಮೃತಃ ಸಮಭವತ್ಸಮ ಭವತ್ ॥ ಇತ್ಯೋಮ್ ॥ ೪ ॥ ಇತಿ ಪಂಚಮಃ ಖಂಡಃ ॥ ತೃತೀಯಾಧ್ಯಾಯಃ ಸಮಾಪ್ತಃ**

ಇವೆಲ್ಲವುಗಳ ಕಣ್ಣು. ಇದೆಲ್ಲ ಪ್ರಜ್ಞಾನದಲ್ಲಿಯೆ ಪ್ರತಿಷ್ಠಿತವಾಗಿರುವದು. ವಿಶ್ವವು ಪ್ರಜ್ಞಾನದಿಂದಲೆ ಹೊರಟಿರುವದು. ಪ್ರಜ್ಞೆಯೆ ಈ ಲೋಕದ ಕಣ್ಣು. ಪ್ರಜ್ಞೆಯೆ (ಜ್ಞಾನ, ಚೈತನ್ಯ) ನೆಲೆಯು. ಪ್ರಜ್ಞಾನವೆ ಬ್ರಹ್ಮವು. (೪) ಅವನು ಈ ಜ್ಞಾನಮಯ ಆತ್ಮನೊಂದಿಗೆ ಈ ಲೋಕದಿಂದ ಹೊರಟು ಆ ಸ್ವರ್ಗಲೋಕದಲ್ಲಿ ಎಲ್ಲ ಕಾಮಗಳನ್ನು ಸಂಪಾದಿಸಿ ಅಮೃತವನ್ನನುಭವಿಸಿದನು, ಅನುಭವಿಸಿದನು. ಓಂ.

ಇಲ್ಲಿಗೆ ಐದನೇ ಖಂಡವು ಸಮಾಪ್ತವು.

ಮೂರನೇ ಅಧ್ಯಾಯವು ಸಮಾಪ್ತವು.

## ಐತರೇಯದಲ್ಲಿಯ ಕೆಲವು ಶಬ್ದಾರ್ಥಗಳು

**ಋತಂ—** ಸತ್ಯಕ್ಕನುಸರಿಸಿರುವ ಕರ್ಮ. ಯಥಾಸತ್ಯ. ಧರ್ಮ.

**ಮರೀಚಿ—** ಕಿರಣ, ಪ್ರಕಾಶ.

**ತಪ—** ಶಬ್ದಾರ್ಥವು 'ಕಾವುಕೊಡು' ಎಂದು ಇರುವದು. ಲಕ್ಷಣೆಯಿಂದ 'ಧ್ಯಾನಮಾಡು' ಎಂಬರ್ಥವು, ಶಕ್ತಿಯನ್ನು ಕೇಂದ್ರೀಕರಿಸೋಣ

**ಅಕ್ಷಿ—** ಬಾಹ್ಯ ಇಂದ್ರಿಯಗಳಾದ ಕಣ್ಣುಗಳು.

**ಚಕ್ಷು—** ನೋಡುವ ಶಕ್ತಿ ಅಥವಾ ದೃಷ್ಟಿ.

**ಕರ್ಣ—** ಬಾಹ್ಯ ಇಂದ್ರಿಯಗಳಾದ ಕಿವಿಗಳು.

**ಶ್ರೋತ್ರ—** ಕೇಳುವಶಕ್ತಿ ಅಥವಾ ಶ್ರವಣಶಕ್ತಿ.

**ಔಷಧಿ—** ಹೂವಾಗಿ ಕಾಯಿಯಾಗುವ ಗಿಡಬಳ್ಳಿಗಳು.

**ವನಸ್ಪತಿ—** ಮಿಕ್ಕ ಗಿಡಗಂಟಿ ಹುಲ್ಲು ಮುಂತಾದವು.

**ಸೀಮಂತ—** ಬೈತಲು. **ಆಜ್ಞಾನ—** ಅವಲೋಕನಶಕ್ತಿ.

**ಧೃತಿ—**ದೃಢಮನಸ್ಸು. **ಮತಿ—**ವಿಚಾರವು. **ವ್ಯಗ್ರತಾ—**ಚಂಚಲತೆ

**ಜಾರುಜ—** ತೆಳುವಾದ ಚರ್ಮಚೀಲದ ವೇಷ್ಟನಸಹಿತ ಹುಟ್ಟುವ.

**ಅಂಡಜ—** ತತ್ತಿಯಿಂದ ಹುಟ್ಟುವ.

**ಸ್ವೇದಜ—** ಶರೀರದ ಬೆವರಿನಿಂದ ಹುಟ್ಟುವ.
**ಪ್ರಜ್ಞಾ—** ಸ್ವಸಂವಿತ್, ಬುದ್ಧಿ.

## ಐತರೇಯೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ಮೊಟ್ಟಮೊದಲು ವಿಶ್ವದಲ್ಲಿ ಆತ್ಮವು ಒಂದೇ ಇತ್ತು, ಇನ್ನೊಂದೇನೂ ಇರಲಿಲ್ಲ, ಎಂಬೀ ತಾತ್ವಿಕಜ್ಞಾನದಿಂದ ಪರಿಪೂರ್ಣವಾದ ವಾಕ್ಯವೆ ಐತ-ರೇಯದ ಆರಂಭವಾಕ್ಯವು. ಕೆಲವು ಉಪನಿಷತ್ತುಗಳಲ್ಲಿ ಇಂದ್ರಿಯಗೋಚರ ವಸ್ತುಗಳು ಹೇಗೆ ಹುಟ್ಟಿದವು ಎಂದು ಆರಂಭವಾಗಿ ಕೊನೆಗೆ ತತ್ವಜ್ಞಾನದ ಅಥವಾ ಆತ್ಮನ ನಿರೂಪಣೆ ಇರುತ್ತದೆ. ಇಲ್ಲಿ ಅದರ ವಿರುದ್ಧ ಕ್ರಮವು ಇದೆ. ಶ್ರೇಷ್ಠವಾದ ಆತ್ಮನ ಸಾಕ್ಷಾತ್ಕಾರವಾದ ಋಷಿಗಳು ಆರಂಭಕ್ಕೆಯೆ ತಾತ್ವಿಕ ಸಿದ್ಧಾಂತವನ್ನು ಮಂಡಿಸಿ ಮುಂದೆ ಆ ಆತ್ಮನಿಂದ ಈ ವಿಶ್ವವು ಹೇಗೆ ಉತ್ಪನ್ನ ವಾಯಿತೆಂಬುದನ್ನು ಕ್ರಮವಾಗಿ ಸ್ಪಷ್ಟೀಕರಿಸಿರುತ್ತಾರೆ. ಈ ವಿಷಯದಲ್ಲಿ ಪ್ರಶ್ನೋಪನಿಷತ್ತಿನ ಕ್ರಮವೂ ಈ ಉಪನಿಷತ್ತಿನ ಕ್ರಮವೂ ಒಂದಕ್ಕೊಂದು ತಿರುವುಮುರುವು ಇರುವವು. ಪ್ರಶ್ನೋಪನಿಷತ್ತಿನಲ್ಲಿ ವಿವಿಧ ಪ್ರಜೆಗಳ ಉತ್ಪತ್ತಿಯ ವಿಚಾರವು ಮೊದಲು ಮಾಡಲ್ಪಟ್ಟಿರುವದು ಹಾಗೂ ಏಕಮೇವಾ ದ್ವಿತೀಯವಾದ ಆತ್ಮನ ವಿಚಾರವು ಕ್ರಮವಾಗಿ ಕೊನೆಗೆ ಬಂದಿರುವದು. ಇಲ್ಲಿ 'ಏಕಾತ್ಮನ' ಪ್ರಮೇಯವು ಮೊದಲು ಬಂದಿರುವದು ಹಾಗೂ ನಾನಾ ವಿಧ ಅನ್ನದ ಅಂದರೆ ಜಡಸೃಷ್ಟಿಯ ಉತ್ಪತ್ತಿಯು ಈ ವಿವೇಚನದಲ್ಲಿ ಕೊನೆಯ ಮೆಟ್ಟಲಾಗಿರುವದು. ಹೇಗೆ ನಿರೂಪಿಸಿದರೂ ಎರಡೂ ಉಪ ನಿಷತ್ತುಗಳ ವಿಷಯವು ಒಂದೇ, ತತ್ವವೂ ಒಂದೇ, ಸಿದ್ಧಾಂತವೂ ಒಂದೇ.

ಏಕವಾದ ಹಾಗೂ ಏಕರೂಪವಾದ ಒಂದೇ ಆತ್ಮವಸ್ತುವಿನಿಂದ ಅನೇಕ ಹಾಗೂ ಅನೇಕರೂಪವಾದ ವಿಶ್ವವು ಹೇಗೆ ನಿರ್ಮಾಣವಾಯ್ತು, ಎಂಬದು ವೇದಾಂತದಲ್ಲಿ ಎಲ್ಲಕ್ಕೂ ಮಹತ್ವದ ಪ್ರಶ್ನೆಯಿರುವದು. ಬೇರೆ ಬೇರೆ ಉಪನಿಷತ್ತುಗಳಲ್ಲಿ ಈ ಪ್ರಶ್ನೆಗೆ ಉತ್ತರಗಳು ಕೊಡಲ್ಪಟ್ಟಿರುವವು. ಆ ಉತ್ತರಗಳು ಶಬ್ದದಲ್ಲಿ ಭಿನ್ನಭಿನ್ನವೆಂದು ಕಂಡರೂ ಅವುಗಳ ಸಾರವು ಒಂದೇ ಇರುವದು. ಬ್ರಹ್ಮನು ತಪಸ್ಸುಮಾಡಿ ಈ ವಿಶ್ವವನ್ನು ಸೃಜಿಸಿದನೆಂದು

ಒಮ್ಮೆ, ಬ್ರಹ್ಮನು ಜ್ಞಾನಮಯ ತಪಸ್ಸು ಮಾಡಿದನೆಂದು ಮತ್ತೊಮ್ಮೆ, ಬ್ರಹ್ಮನು ವಿಚಾರ ಮಾಡಿದನು ಅಥವಾ ಧ್ಯಾನಿಸಿದನೆಂದು ಇನ್ನೊಮ್ಮೆ, ನಾನು ಏಕನಿದ್ದವನು ಅನೇಕನಾಗಬೇಕು ಎಂದು ಬ್ರಹ್ಮನು ಸಂಕಲ್ಪಮಾಡಲಾಗಿ ವಿಶ್ವವು ಉತ್ಪನ್ನವಾಯಿತೆಂದು ಕೆಲವೆಡೆಗೆ, ಹೀಗೆ ವಿಶ್ವದ ಉತ್ಪತ್ತಿಯ ಮೂಲಕಾರಣಗಳು ನಿರೂಪಿಸಲ್ಪಟ್ಟಿರುವವು. ಆದರೆ ಈ ಎಲ್ಲ ನಿರೂಪಣೆಗಳ ಸಮನ್ವಯ ಮಾಡಲಾಗಿ ಪರಮಾತ್ಮನ ಸಂಕಲ್ಪಶಕ್ತಿಯಿಂದ ಈ ವಿವಿಧ ಸೃಷ್ಟಿಯು ಜನಿಸಿತೆಂಬ ಮಥಿತಾರ್ಥವು ಸ್ಪಷ್ಟವಾಗುತ್ತದೆ. ಅದಕ್ಕನುಸರಿಸಿ ಇಲ್ಲಿ 'ಸ ಈಕ್ಷತ ಲೋಕಾನ್ನು ಸೃಜ ಇತಿ' ಎಂಬ ಶಬ್ದಪ್ರಯೋಗವಿರುವದು.

ಈ ಉಪನಿಷತ್ತಿನಲ್ಲಿಯ ಇನ್ನೊಂದು ಮಹತ್ವದ ಸಂಗತಿಯೇನಂದರೆ ವಿಶ್ವಶಕ್ತಿಗಳು ದೇವತೆಗಳೆಂದು ಅಥವಾ ಲೋಕಪಾಲರೆಂದು ಸಂಬೋಧಿಸಲ್ಪಟ್ಟಿರುವರು. ಆ ದೇವತೆಗಳಿಗೂ ಪುರುಷನಲ್ಲಿರುವ ಇಂದ್ರಿಯ ಶಕ್ತಿಗಳಿಗೂ ಇದ್ದ ನಿಕಟಸಂಬಂಧವೂ ಈ ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ. ಅಥವಾ ಆ ದೇವತೆಗಳೆ ಮನುಷ್ಯನ ಇಂದ್ರಿಯಶಕ್ತಿಗಳಲ್ಲಿ ಅಧಿಷ್ಠಿತವಾಗಿರುವವೆಂದು ವರ್ಣಿಸಲ್ಪಟ್ಟಿರುವವೆಂದು ಹೇಳಿದರೂ ಸರಿ. ಯಾಕಂದರೆ ಆ ದೇವತೆಗಳೆ ಪುರುಷಶರೀರದಲ್ಲಿ ಭಿನ್ನಭಿನ್ನ ಇಂದ್ರಿಯಗಳ ದ್ವಾರಾ ಪ್ರವೇಶಮಾಡಿದರೆಂದು ಉಪನಿಷತ್ಕಾರರು ಬರೆದಿರುವರು. ಆಮೇಲೆ ಇಂದ್ರಿಯಶಕ್ತಿಗಳಲ್ಲಿ ಅಧಿಷ್ಠಿತವಾದ ದೇವತೆಗಳ ಪೋಷಣಕ್ಕಾಗಿ ಅನ್ನವು ಉತ್ಪನ್ನಮಾಡಲ್ಪಟ್ಟಿತು ಹಾಗೂ ಆಯಾ ಇಂದ್ರಿಯಗಳು ಆಯಾ ವಿಷಯಗಳನ್ನು ಸೇವಿಸಿ ಸಂತುಷ್ಟವಾದವು. ದೇಹದಲ್ಲಿ ಎಲ್ಲ ದೇವತೆಗಳ ಪ್ರವೇಶವಾಗಿ ಪುರುಷನು ಪರಿಪೂರ್ಣನಾದರೂ 'ನನ್ನಹೊರತು ಇವರು ಸ್ಥಿರವಿರುವ ಬಗೆ ಹೇಗೆ,' ಎಂದು ಆತ್ಮನು ವಿಚಾರಮಾಡಿ ಬ್ರಹ್ಮರಂಧ್ರದ್ವಾರಾ (ನಡುನೆತ್ತಿಯಲ್ಲಿರುವ ಸೂಕ್ಷ್ಮವಾದ ರಂಧ್ರವು) ಆತ್ಮನು ಪುರುಷಶರೀರವನ್ನು ಪ್ರವೇಶಿಸಿದನೆಂದು ಹೇಳಲ್ಪಟ್ಟಿರುವದು. ಎಲ್ಲ ಶಕ್ತಿಗಳ ಸುವ್ಯವಸ್ಥಿತ ವ್ಯಾಪಾರವು ನಡೆಯಬೇಕಾದರೆ ಎಲ್ಲವುಗಳ ಸಮನ್ವಯವೂ ಎಲ್ಲವುಗಳಿಗೆ ಕೇಂದ್ರವೂ ಆದ ಆತ್ಮನು ಈ ಪುರುಷಶರೀರದಲ್ಲಿ ಪ್ರಸ್ಥಾಪಿತನಾಗಿ ಇರಲಿಕ್ಕೆಬೇಕು ಎಂಬುದೆ ಇದರ ತಾತ್ಪರ್ಯವು.

ಉಪನಿಷತ್ಕಾರರ ಸಮುದ್ದೃಷ್ಟಿಗೆ ಯಾವ ವಿಷಯಗಳಾಗಲಿ ಸಂಗತಿಗಳಾಗಲಿ ಅಶ್ಲೀಲವಾಗಿ ತೋರುವದಿಲ್ಲ. ತತ್ವವಿವೇಚನಕ್ಕೆ ಅವಶ್ಯವಿದ್ದ ಎಲ್ಲ ವಿಷಯಗಳನ್ನು ಸ್ಪಷ್ಟವಾಗಿ ಸ್ಪಷ್ಟಶಬ್ದಗಳಿಂದ ಅವರು ವಿಶದಮಾಡಿ ಹೇಳುವರು. ಈ ಅವರ ಪ್ರವೃತ್ತಿಗನುಸರಿಸಿಯೆ ಮೈಥುನ, ಗರ್ಭ ಮುಂತಾದವುಗಳ ಬಗ್ಗೆ ಸಹ ಒಡನುಡಿದಿರುವರು.

ಎಲ್ಲಕ್ಕೂ ಮೊದಲು ಆತ್ಮವೆ ಇತ್ತು, ಆತ್ಮನಿಂದಲೆ ಎಲ್ಲವೂ ಹುಟ್ಟಿತು ಎಂದು ಹೇಳಿದೊಡನೆ ಆತ್ಮಸ್ವರೂಪವನ್ನು ಹೇಳಿದಂತಾಗಲಿಲ್ಲ. ಆದುದರಿಂದ ಉಪನಿಷತ್ಕಾರರು ಕೊನೆಗೆ ಆತ್ಮಸ್ವರೂಪವನ್ನು ವರ್ಣಿಸಿದ್ದಾರೆ. ಆತ್ಮನೆಂದರೆ ಯಾರು ಎಂದು ಒಂದು ಸಣ್ಣ ಪ್ರಶ್ನೆಯನ್ನು ಮಾಡಿ ಅದಕ್ಕೆ ಉತ್ತರರೂಪವಾಗಿ ಆತ್ಮಜ್ಞಾನವನ್ನು ಹೇಳಿದ್ದಾರೆ. ಚಿತ್ತದಲ್ಲಿ ಆಗುವ ನಾನಾ ವಿಕಾರಗಳೆಲ್ಲವೂ ಪ್ರಜ್ಞಾನದ ವಿಕಾರಗಳೆ ಹಾಗೂ ಈ ಪ್ರಜ್ಞಾನವೆ ಬ್ರಹ್ಮವು ಎಂದು ಋಷಿಗಳು ಉಪದೇಶಮಾಡಿದ್ದಾರೆ. ಈ ಪ್ರಕಾರ ಆತ್ಮವೆ ಎಲ್ಲಕ್ಕೂ ಮೊದಲು ಇದ್ದದ್ದು ಎಂದು ಆರಂಭಮಾಡಿ ಆತ್ಮವು ಜ್ಞಾನಮಯವೆಂದು ಹೇಳಿ ಉಪನಿಷತ್ಕಾರರು ತಮ್ಮ ಉಪನಿಷತ್ತಿನ ಉಪಸಂಹಾರವನ್ನು ಮಾಡಿರುತ್ತಾರೆ.

ಈ ಉಪನಿಷತ್ತಿನಲ್ಲಿ ಆಧುನಿಕ ಉತ್ಕ್ರಾಂತಿವಾದದ ಬೀಜಗಳು ಕಂಡು ಬರುವವು, ಎಂಬದು ಒಳ್ಳೆ ಮಹತ್ವದ ವಿಷಯವು. ಆತ್ಮನ ಸಂಕಲ್ಪದಿಂದ ಮೊದಲು ಪುರುಷನ ಅಥವಾ ವಿರಾಟಪುರುಷನ ಉತ್ಪತ್ತಿ, ಆಮೇಲೆ ಇಂದ್ರಿಯಗಳ ಆಯಾ ಕ್ರಿಯೆಗಳ ಸೂಕ್ಷ್ಮಸ್ವರೂಪ, ಆಮೇಲೆ ಬಾಹ್ಯ ಇಂದ್ರಿಯಗಳು, ಇಂತಿದು ಸೃಷ್ಟಿಕ್ರಮವು. ಇದಲ್ಲದೆ ಈ ಉಪನಿಷತ್ತಿನ ಕೊನೆಯ ಭಾಗದಲ್ಲಿದ್ದ ಪ್ರಜ್ಞಾನದ ಹಾಗೂ ಪ್ರಜ್ಞಾನದ ನಾನಾ ರೂಪಗಳಾದ ಮತಿ ಧೃತಿ ಮುಂತಾದವುಗಳ ವಿವರಣೆಯು ಮಾನಸಶಾಸ್ತ್ರದ ದೃಷ್ಟಿಯಿಂದ ಬಹಳ ಮಹತ್ವದ್ದಿರುವದು. ಚೈತನ್ಯವೆ ಎಲ್ಲ ಮನಃಶಕ್ತಿಗಳಿಗೆ ಆಧಾರವೆಂಬ ಪ್ರಮೇಯವನ್ನು ಮೊದಲು ಪ್ರತಿಪಾದಿಸಿ ಆಮೇಲೆ ಮನಸ್ಸಿನ ನಾನಾ ಕ್ರಿಯೆಗಳನ್ನೂ ಶಕ್ತಿಗಳನ್ನೂ ಹೇಳಿದ್ದಾರೆ.

ಅತ್ಯಂತ ಪ್ರಾಚೀನ ಕಾಲದ ಋಷಿಗಳ ಬುದ್ಧಿಶಕ್ತಿಯು ಎಷ್ಟು ಹದನವಿತ್ತು, ಹಾಗೂ ಅವರಲ್ಲಿ ಜ್ಞಾನಜಿಜ್ಞಾಸೆಯು ಎಷ್ಟು ಪ್ರಬಲ

ವಿತ್ತೆಂಬದು ಈ ಉಪನಿಷತ್ತಿನಲ್ಲಿ ಆಗಾಗ್ಗೆ ಕಂಡುಬರುವದು. ಈ ಆಧುನಿಕ ಶಾಸ್ತ್ರೀಯ ಕಾಲದಲ್ಲಿ ನಾನಾಬಗೆಯಿಂದ ನಾನಾ ಪ್ರಯೋಗಗಳಿಂದ ನಾನಾ ದೇಶದ ಪಂಡಿತಶ್ರೇಷ್ಠರು ಪರಿಶೋಧಿಸಿದ ಉತ್ಕ್ರಾಂತಿವಾದದ ಹಾಗೂ ಮಾನಸಶಾಸ್ತ್ರದ ಮೂಲದಲ್ಲಿ ಇರುವ ಕೆಲವು ಕಲ್ಪನೆಗಳನ್ನು ಈ ಋಷಿಗಳು ಈ ಗ್ರಂಥಗಳಲ್ಲಿ ಹೇಳಿದ್ದನ್ನು ನೋಡಿದರೆ ವೈದಿಕ ಆರ್ಯರಬಗ್ಗೆ ಆಶ್ಚರ್ಯ, ಆದರ, ಪೂಜ್ಯಭಾವ, ಮುಂತಾದವುಗಳು ಮನಸ್ಸಿನಲ್ಲಿ ಒಮ್ಮೆಲೆ ತಲೆದೋರುತ್ತವೆ.

---

# ತೈತ್ತಿರೀಯೋಪನಿಷತ್ತು

## ತೈತ್ತಿರೀಯೋಪನಿಷತ್ತಿನ ಸಾರಾಂಶ

**ಶಾಂತಿ**:— ಶಾಂತಿಯಲ್ಲಿ ಮಿತ್ರ ವರುಣ ವಿಷ್ಣು ಮುಂತಾದ ದೇವತೆಗಳನ್ನು ಪ್ರಾರ್ಥಿಸಿ, ಆಯಾ ದೇವತೆಗಳ ಕಡೆಯಿಂದ ಕಲ್ಯಾಣವನ್ನೂ ಮಾಂಗಲ್ಯವನ್ನೂ ಬೇಡಿಕೊಂಡು, ಋಷಿಗಳು ಉಪನಿಷತ್ತನ್ನು ಆರಂಭಿಸುವರು.

ಈ ಉಪನಿಷತ್ತಿನಲ್ಲಿ ಮೂರು ವಲ್ಲಿಗಳು ಅಥವಾ ಖಂಡಗಳಿರುವವು. ಮೊದಲನೆಯದು ಶೀಕ್ಷೋಪನಿಷತ್‌ವಲ್ಲಿ, ಎರಡನೆಯದು ಬ್ರಹ್ಮಾನಂದವಲ್ಲಿ, ಮೂರನೆಯದು ಭೃಗುವಲ್ಲಿ. ಮೊದಲನೆ ಖಂಡದಲ್ಲಿ ವರ್ಣೋಚ್ಚಾರ ವಿಷಯವು ನಿರೂಪಿಸಲ್ಪಟ್ಟದ್ದರಿಂದ ಅದಕ್ಕೆ ಶೀಕ್ಷೋಪನಿಷತ್‌ವಲ್ಲಿ ಎಂಬ ಹೆಸರು. ಎರಡನೆಯದರಲ್ಲಿ ಆನಂದದ ಮೀಮಾಂಸೆ ಇರುವದರಿಂದ ಅದು ಬ್ರಹ್ಮಾನಂದ ವಲ್ಲಿ ಎಂಬ ಹೆಸರುಳ್ಳದ್ದು. ವರುಣನ ಮಗನಾದ ಭೃಗುವು ಪ್ರಶ್ನೋತ್ತರಗಳಿಂದ ಹಾಗೂ ತನ್ನ ತಪಸ್ಸಿನಿಂದ ಬ್ರಹ್ಮಜ್ಞಾನವನ್ನು ಪಡಕೊಂಡದ್ದರಿಂದ ಮೂರನೆಯದು ಭೃಗುವಲ್ಲಿ ಎಂಬ ಹೆಸರಿನಿಂದ ಪ್ರಸಿದ್ಧವು.

ಮೊದಲನೆ ವಲ್ಲಿಯು ೧೨ ಅನುವಾಕಗಳಾಗಿ ವಿಭಾಗಿಸಲ್ಪಟ್ಟಿರುವದು. ಮೊದಲನೆಯ ಅನುವಾಕದಲ್ಲಿ ಶಾಂತಿಯು, ಎರಡನೆಯದರಲ್ಲಿ ವರ್ಣೋಚ್ಚಾರ ಶಾಸ್ತ್ರದ ಅಂಗಗಳಾದ ವರ್ಣ, ಸ್ವರ, ಮಾತ್ರೆ, ಬಲ, ಸಾಮ, ಸಂತಾನಗಳು ಕ್ರಮದಿಂದ ಉಲ್ಲೇಖಿಸಲ್ಪಟ್ಟಿವೆ. ಮೂರನೆಯದರಲ್ಲಿ ಈ ವಿಶ್ವ, ಜ್ಯೋತಿ, ವಿದ್ಯೆ, ಪ್ರಜೆಗಳು, ಈ ದೇಹ ಇವುಗಳಲ್ಲಿ ಯಾವ ತತ್ವಗಳ ಸಂಯೋಗವು ಯಾವ ರೀತಿಯಿಂದ ಆಗಿರುವದೆಂಬದು ವಿವರಿಸಲ್ಪಟ್ಟಿದೆ. ನಾಲ್ಕನೆಯದರಲ್ಲಿ ಇಂದ್ರದೇವತೆಯ - ಬುದ್ಧಿಬಲಗಳಿಗೆ ಅಧಿಷ್ಠಾತೃದೇವತೆ - ವರ್ಣನೆಯೂ ಪ್ರಾರ್ಥನೆಯೂ ಇರುವದು. ಇಲ್ಲಿ ಸಿರಿಸಂಪತ್ತು, ಯಶಸ್ಸು ಮುಂತಾದವು ಗಳನ್ನು ಪ್ರಾರ್ಥಿಸಿ ತನ್ನೆಡೆಗೆ ಬ್ರಹ್ಮಚಾರಿಗಳು ಕಲಿಯಲಿಕ್ಕೆ ಬರಬೇಕೆಂದು ದೇವರಿಗೆ ಋಷಿಗಳು ವರವನ್ನು ಬೇಡುವರು. ಐದನೇ ಅನುವಾಕದಲ್ಲಿ ಭೂ, ಭುವಃ, ಸ್ವಃ, ಮಹಃ, ಈ ಮಂತ್ರಗಳ ನಾಲ್ಮಡಿ ಅರ್ಥಗಳೂ ಆ ಮಂತ್ರಗಳ ಉಪಾಸನೆಯೂ ಉಪದೇಶಿಸಲ್ಪಟ್ಟಿವೆ. ಆರನೆಯದರಲ್ಲಿ ಅಂತರ್ಹೃದಯ ದಲ್ಲಿರುವ ಪುರುಷನ ಉಲ್ಲೇಖಮಾಡಿ, ಆನಂದವೆಂದರೇನು, ಅಮೃತವೆಂದ ರೇನು, ಇದನ್ನು ಸಂಕ್ಷೇಪದಲ್ಲಿ ಹೇಳಿರುವರು. ಏಳನೆಯದರಲ್ಲಿ ಭೂತಗಳಲ್ಲಿ ಐದು ಭಾಗಗಳೂ ದೇಹದ ತತ್ವಗಳಲ್ಲಿ ಐದೈದು ಭಾಗಗಳೂ ಇದ್ದುದನ್ನು ವರ್ಣಿಸಿ ಆ ಭೂತಗಳಿಂದಲೆ ಈ ದೇಹವು ಮಾಡಲ್ಪಟ್ಟಿದೆ, ಎಂದು ನಿರೂಪಣೆ ಇದೆ. ಎಂಟನೆಯದರಲ್ಲಿ ಓಂ ಇದರ ಭಿನ್ನಭಿನ್ನ ಸಂದರ್ಭದಲ್ಲಿ ಮಾಡಲ್ಪಡು ತ್ತಿರುವ ಹತ್ತು ಉಪಯೋಗಗಳನ್ನು ವರ್ಣಿಸಿರುವರು. ಒಂಭತ್ತನೆಯದರಲ್ಲಿ ಸ್ವಾಧ್ಯಾಯ ಪ್ರವಚನಗಳು ಅತ್ಯವಶ್ಯವಾದವುಗಳೆಂದೂ ಸತ್ಯ, ತಪ, ದಮ, ಶಮ ಮುಂತಾದವುಗಳ ಉಪಾಸನೆ ಮಾಡಿದರೂ ಸ್ವಾಧ್ಯಾಯ ಪ್ರವಚನ-ಗಳನ್ನು ಬಿಡತಕ್ಕದ್ದಲ್ಲವೆಂದೂ ಒತ್ತಿ ಒತ್ತಿ ಹೇಳಲ್ಪಟ್ಟಿದೆ. ಹತ್ತನೆ ಅನು ವಾಕದಲ್ಲಿ ತ್ರಿಶಂಕುವು ಮಾಡಿದ ಆತ್ಮಸ್ವರೂಪದ ಸುಂದರ ವರ್ಣನೆಯಿದೆ. ಹನ್ನೊಂದನೆಯದರಲ್ಲಿ ಅಧ್ಯಯನವನ್ನು ಮುಗಿಸಿ ತಿರುಗಿ ಮನೆಗೆ ಹೋಗ-ಲನುವಾದ ಶಿಷ್ಯನಿಗೆ ಗುರುಗಳ ಉಪದೇಶವು ನಿರೂಪಿಸಲ್ಪಟ್ಟಿದೆ. ಸತ್ಯ, ಧರ್ಮ, ಸ್ವಾಧ್ಯಾಯಗಳನ್ನು ಬಿಡಬಾರದೆಂದೂ ವಂಶವೃದ್ಧಿಯನ್ನು ಮಾಡ ಬೇಕೆಂದೂ ತಂದೆ-ತಾಯಿ ಅತಿಥಿ ಗುರುಗಳನ್ನು ಶಿಷ್ಯನು ದೇವತೆಗಳೆಂದು ಭಾವಿಸಬೇಕೆಂದೂ ಹಿರಿಯರ ಒಳ್ಳೇ ಕರ್ಮಗಳನ್ನಷ್ಟೆ ಅನುಸರಿಸಬೇಕೆಂದೂ

ಮುಕ್ತಹಸ್ತದಿಂದ, ಆದರದಿಂದ ದಾನಮಾಡಬೇಕೆಂದೂ ಶ್ರೇಷ್ಠಪುರುಷರ ಆಚರಣೆಯಂತೆ ತನ್ನ ಆಚರಣೆಯನ್ನಿಡಬೇಕೆಂದೂ ಇದರಲ್ಲಿ ಶಿಷ್ಯನಿಗೆ ಉಪದೇಶವಿರುವದು. ಹನ್ನೆರಡನೆಯದರಲ್ಲಿ ಮತ್ತೆ ಶಾಂತಿಮಂತ್ರವಿರುವದು.

'ಸಹ ನಾವವತು' ಎಂಬ ಶಾಂತಿಯಿಂದ ಬ್ರಹ್ಮಾನಂದವಲ್ಲಿಯು ಪ್ರಾರಂಭಿಸುತ್ತದೆ. ಈ ವಲ್ಲಿಯಲ್ಲಿ ಒಂಭತ್ತು ಅನುವಾಕಗಳಿರುವವು. ಮೊದಲನೆ ಅನುವಾಕದಲ್ಲಿ ಬ್ರಹ್ಮಜ್ಞಾನಿಯು ಬ್ರಹ್ಮರೂಪನಾಗಿ ಸರ್ವಕಾಮನೆಗಳನ್ನುಪಭೋಗಿಸುವವನಾಗುತ್ತಾನೆಂದೂ ಬ್ರಹ್ಮನಿಂದಲೆ ಈ ವಿಶ್ವದ ಉತ್ಪತ್ತಿಯೆಂದೂ ಹೇಳಲ್ಪಟ್ಟಿದೆ. ಎರಡನೆಯದರಲ್ಲಿ ಅನ್ನವು ಎಲ್ಲಕ್ಕೂ ಮೊದಲು ಸೃಜಿಸಲ್ಪಟ್ಟಿದ್ದು, ಅದರಿಂದಲೆ ಮುಂದೆ ಎಲ್ಲ ವಸ್ತುಗಳ ಉತ್ಪತ್ತಿಯು, ಈ ಅನ್ನರಸಮಯ ಪುರುಷನು ಪ್ರಾಣಮಯ ಆತ್ಮನಿಂದ ವ್ಯಾಪ್ತನು ಎಂದು ನಿರೂಪಣವಿದೆ. ಮೂರನೆಯದರಲ್ಲಿ ಪ್ರಾಣದಿಂದಲೆ ಎಲ್ಲರೂ ಜೀವಿಸುವರು, ದೇವತೆಗಳು ಪ್ರಾಣವನ್ನೆ ಉಪಾಸಿಸುವರು, ಈ ಪ್ರಾಣಮಯ ಪುರುಷನು ಮನೋಮಯ ಆತ್ಮನಿಂದ ವ್ಯಾಪ್ತನು ಎಂದು ಹೇಳಲ್ಪಟ್ಟಿದೆ. ನಾಲ್ಕನೆಯದರಲ್ಲಿ ಬ್ರಹ್ಮವು ಇಂದ್ರಿಯಾದಿಗಳಿಗೆ ಸಿಲುಕದ್ದು, ಈ ಮನೋಮಯ ಪುರುಷನು ವಿಜ್ಞಾನಮಯ ಆತ್ಮನಿಂದ ವ್ಯಾಪ್ತನು, ವಿಜ್ಞಾನಮಯ ಆತ್ಮನು ಸಹ ಪುರುಷನನ್ನು ಹೋಲುವನು, ಶ್ರದ್ಧೆ, ಋತ, ಸತ್ಯ, ಯೋಗ, ಬುದ್ಧಿ ಇವೇ ವಿಜ್ಞಾನಮಯ ಪುರುಷನ ಅವಯವಗಳು ಎಂದು ನಿರೂಪಿಸಲ್ಪಟ್ಟಿದೆ. ಐದನೆಯದರಲ್ಲಿ ವಿಜ್ಞಾನದಿಂದ ಯಜ್ಞಗಳ ಹಾಗೂ ಕರ್ಮಗಳ ವಿಸ್ತಾರವಾಗುವದು, ವಿಜ್ಞಾನವು ಬ್ರಹ್ಮವೆಂದು ತಿಳಿದರೆ ಮನುಷ್ಯನು ಶುದ್ಧನೂ ಪಾಪರಹಿತನೂ ಆಗುವನು, ಈ ವಿಜ್ಞಾನಮಯ ಪುರುಷನು ಆನಂದಮಯ ಆತ್ಮನಿಂದ ವ್ಯಾಪ್ತನಿರುವನು, ಪ್ರಿಯ, ಮೋದ, ಪ್ರಮೋದ, ಆನಂದ, ಬ್ರಹ್ಮ ಇವೇ ಈ ಆನಂದಮಯ ಆತ್ಮನ ಅವಯವಗಳು ಎಂದು ವಿವರಿಸಲ್ಪಟ್ಟಿದೆ. ಆರನೆಯದರಲ್ಲಿ ಅಸತ್ ಅಂದರೆ ಇಂದ್ರಿಯಾತೀತ ಸತ್ಯವು ಪೂರ್ವದಲ್ಲಿ ಒಂದೇ ಇತ್ತು, ಅದರಿಂದಲೆ ಈ ವಿಶ್ವದ ರಚನೆಯು, ಅದೇ ತನ್ನ ಸಂಕಲ್ಪದಿಂದ ಮೂರ್ತಾಮೂರ್ತ ವಸ್ತುಗಳಾಗಿ ಪರಿಣಮಿಸಿತು, ಎಂದು ವರ್ಣನೆಯಿದೆ. ಏಳನೆಯದರಲ್ಲಿ 'ಅಸತ್' ದಿಂದ ಸತ್ ಆಯಿತು, ವಸ್ತುಗಳಲ್ಲಿಯ ಆನಂದವನ್ನೀಯುವ ತತ್ವವು 'ಅಸತ್'ದ ರೂಪವು, ಈ ಆನಂದವು ವಿಶ್ವದಲ್ಲಿಲ್ಲ

ದಿದ್ದರೆ ಯಾರೂ ಜೀವಿಸುವದು ಶಕ್ಯವೆ ಇದ್ದಿಲ್ಲ, ಆ 'ಅಸತ್ತಿ'ನ ಸಾಕ್ಷಾ-ತ್ಕಾರವಾದ ಮೇಲೆ ಪುರುಷನು ನಿರ್ಭಯನಾಗುವನು, ಎಂದು ಹೇಳಲ್ಪಟ್ಟಿದೆ. ಎಂಟನೆಯದರಲ್ಲಿ ವಿಶ್ವದಲ್ಲಿಯ ಎಲ್ಲ ಶಕ್ತಿಗಳು ಬ್ರಹ್ಮನ ಭೀತಿಯಿಂದ ತಮ್ಮ ಕರ್ತವ್ಯಗಳನ್ನು ಮಾಡುತ್ತಿರುವವೆಂದು, ಮಾನುಷ ಆನಂದವನ್ನು ಅಳತೆಯನ್ನಾಗಿಟ್ಟುಕೊಂಡು (ಒಂದು ಮಾನವನ್ನಾಗಿಟ್ಟುಕೊಂಡು) ಬ್ರಹ್ಮಾನಂದವೆಂದರೆ ಯಾವ ತರದ ಆನಂದವೆಂದೂ ಈ ಆನಂದವು ನಿಷ್ಕಾಮಿ ವೇದಜ್ಞನಿಗೆ ಆಗುತ್ತದೆಂದೂ ಬ್ರಹ್ಮಜ್ಞಾನಿಯು ಈ ಪಂಚಕೋಶಗಳನ್ನು ದಾಟಿ ಹೋಗುತ್ತಾನೆಂದೂ ವರ್ಣನೆಯಿರುವದು. ಆತ್ಮಜ್ಞಾನವಾದವನು ಪಾಪ ಪುಣ್ಯಗಳನ್ನು ಮೀರುವನೆಂದು ಒಂಭತ್ತನೆಯದರಲ್ಲಿ ಹೇಳಲ್ಪಟ್ಟಿದೆ. ಆ ಮೇಲೆ ವಿಶಿಷ್ಟ ಪಾರಿಭಾಷಿಕ ರೀತಿಯಿಂದ ಅನುಕ್ರಮಣಿಕೆ ಹಾಗೂ ಪದ್ಯ ಸಂಖ್ಯೆಯು ವಿವರಿಸಲ್ಪಟ್ಟಿದೆ. ಕೊನೆಗೆ ಶಾಂತಿಯನ್ನು ಹೇಳಿ ಎರಡನೆಯ ವಲ್ಲಿಯು ಮುಗಿಸಲ್ಪಟ್ಟಿದೆ.

ಮೂರನೆಯ ವಲ್ಲಿಯು ಭೃಗುವಲ್ಲಿಯು. 'ಸಹ ನಾವವತು' ಇದರ ಶಾಂತಿಯು. ಇದರಲ್ಲಿ ಹತ್ತು ಅನುವಾಕಗಳಿರುವವು. ಭೃಗುವು ತನ್ನ ತಂದೆಯ ಬಳಿಗೆ ಹೋಗಿ ಬ್ರಹ್ಮಜ್ಞಾನವನ್ನು ಬೇಡಿಕೊಂಡನು. ಈ ಭೂತಗಳು ಎಲ್ಲಿಂದ ಉತ್ಪನ್ನವಾಗುವವೊ, ಯಾತರ ಆಧಾರದಿಂದ ಜೀವಿಸುವವೊ, ಯಾತರಲ್ಲಿ ಲಯವಾಗುವವೊ ಆ ಸತ್ತತ್ವವನ್ನು ತಪಸ್ಸಾಮರ್ಥ್ಯದಿಂದ ಅರಿತುಕೊ ಎಂದು ತಂದೆಯು ಉಪದೇಶ ಮಾಡಿದನು. ಇದು ಮೊದಲನೆಯ ಅನುವಾಕದ ಸಾರಾಂಶವು. ಎರಡನೆಯದರಲ್ಲಿ ಭೃಗುವು ಅನ್ನವೆ ಬ್ರಹ್ಮವೆಂದು ತಿಳಿದು ತಂದೆಗೆ ಹಾಗೆ ಹೇಳಿದನೆಂದೂ ತಂದೆಯು ಅವನನ್ನು ಪುನಃ ತಪಸ್ಸಿಗೆ ಕಳಿಸಿದನೆಂದೂ ಹೇಳಲ್ಪಟ್ಟಿರುವದು. ಇದೇ ರೀತಿಯಲ್ಲಿ ಮೂರು ನಾಲ್ಕು ಐದು ಹಾಗೂ ಆರನೆಯ ಅನುವಾಕಗಳಲ್ಲಿ ಅನುಕ್ರಮವಾಗಿ ಪ್ರಾಣವೆ ಬ್ರಹ್ಮವೆಂದು, ಮನವೆ ಬ್ರಹ್ಮವೆಂದು, ವಿಜ್ಞಾನವೆ ಬ್ರಹ್ಮವೆಂದು, ಆನಂದವೆ ಬ್ರಹ್ಮವೆಂದು ಭೃಗುವು ತಪಸ್ಸಾಮರ್ಥ್ಯದಿಂದ ತಿಳಿದುಕೊಂಡನೆಂದು ನಿರೂಪಿಸಲ್ಪಟ್ಟಿರುವದು. ಆನಂದವೆ ಬ್ರಹ್ಮ ಎಂಬುದೆ ಭಾರ್ಗವೀ ವಾರುಣೀ ವಿದ್ಯೆಯು, ಇದನ್ನರಿತವರು ಮಹಿಮೆಯನ್ನು ಪಡೆಯುತ್ತಾರೆಂದು ಆರನೆಯ ಅನುವಾಕಿನಲ್ಲಿ ಹೇಳಿದೆ. ಏಳನೆಯದರಲ್ಲಿ ಅನ್ನವನ್ನು ನಿಂದಿಸಬಾರದು,

ಅನ್ನಕ್ಕೂ ಪ್ರಾಣಕ್ಕೂ ಅತ್ಯಂತ ನಿಕಟ ಸಂಬಂಧವಿರುವದು, ಅವು ಅನ್ಯೋನ್ಯಾಶ್ರಯದಿಂದ ಇರುವವು. ಇದನ್ನರಿತವನು ಮಹಿಮೆಯುಳ್ಳವನಾಗುವನೆಂದು ವರ್ಣಿಸಲ್ಪಟ್ಟಿರುವದು. ಎಂಟನೆಯದರಲ್ಲಿ ಆಪ ಮತ್ತು ತೇಜಗಳು ಅನ್ಯೋನ್ಯಾಶ್ರಯದಿಂದಿರುವವು, ಎರಡೂ ಅನ್ನರೂಪಗಳೆ, ಇದನ್ನರಿತವನು ಶ್ರೇಷ್ಠನಾಗುವನು ಎಂದು ವರ್ಣನೆಯಿರುವದು. ಒಂಭತ್ತನೆಯದರಲ್ಲಿ ಪೃಥಿವಿ ಆಕಾಶಗಳ ಸಂಬಂಧವು ಇದೇ ತರಹದ್ದಿರುವದೆಂದು, ಇವೆರಡೂ ಅನ್ನರೂಪಗಳೆಂದು, ಇದನ್ನರಿತವನು ಮಹತ್ವವನ್ನು ಪಡೆಯುವನೆಂದು ವರ್ಣಿಸಲ್ಪಟ್ಟಿರುವದು. ಹತ್ತನೆಯದರಲ್ಲಿ ಅತಿಥಿಗಳನ್ನು ಮನೆಯಲ್ಲಿಳಿಸಿಕೊಂಡು ಆದರದಿಂದ ಅವರಿಗೆ ಅನ್ನವನ್ನು ಸಮರ್ಪಿಸಬೇಕೆಂದು, ಶರೀರಸ್ಥ ದೇವತೆಗಳನ್ನು ಕ್ಷೇಮ, ಯೋಗಕ್ಷೇಮ, ಮುಂತಾದವುಗಳ ಸಲುವಾಗಿ ಉಪಾಸಿಸಬೇಕೆಂದು, ತೃಪ್ತಿ, ಬಲ, ತೇಜ ಮುಂತಾದವುಗಳ ಸಲುವಾಗಿ ದೈವೀದೇವತೆಗಳ ಉಪಾಸನೆ ಮಾಡಬೇಕೆಂದು, ಪ್ರತಿಷ್ಠೆಯೆಂದು, ಮನವೆಂದು, ಮಹಾತತ್ವವೆಂದು (ಬುದ್ಧಿ) ಬ್ರಹ್ಮನ ಉಪಾಸನೆ ಮಾಡಿದಂತೆ ಭಿನ್ನ ಭಿನ್ನ ಫಲಗಳು ದೊರಕುವವೆಂದು, ಪೂರ್ಣ ಬ್ರಹ್ಮಜ್ಞಾನವಾದವನು ಎಲ್ಲ ಪಂಚಕೋಶಗಳನ್ನು ದಾಟಿ ಹೋಗಿ ಆನಂದ ಗಾಯನಮಾಡುತ್ತ ಎಲ್ಲ ಆನಂದವನ್ನೂ ಕಾಮನೆಗಳನ್ನೂ ಉಪಭೋಗಿಸುವನೆಂದು, ಆತ್ಮನು ದೇವತೆಗಳಿಗೂ ಮೊದಲು ಇದ್ದವನು, ಅಮೃತದ ನಾಭಿಯಲ್ಲಿ ಅವನ ಜನ್ಮವು, ಆತ್ಮನೆ ವಿಶ್ವದ ಉಪಸಂಹಾರಕನು ಎಂದು ನಿರೂಪಿಸಲ್ಪಟ್ಟಿರುವದು. ಆಮೇಲೆ ಅನುಕ್ರಮದಿಂದ ಪದ್ಯಸಂಖ್ಯೆಗಳು ಬ್ರಹ್ಮಾನಂದವಲ್ಲಿಯಲ್ಲಿಹೇಳಿದಂತೆ ಹೇಳಲ್ಪಟ್ಟಿವೆ. ಆಮೇಲೆ ಶಾಂತಿಯು ಇದೆ.

# ತೈತ್ತಿರೀಯೋಪನಿಷತ್

## ಶೀಕ್ಷೋಪನಿಷತ್ ವಲ್ಲಿ

### ಶಾಂತಿಮಂತ್ರ

**ಓಂ ಶಂ ನೋ ಮಿತ್ರಃ ಶಂ ವರುಣಃ ॥ ಶಂ ನೋ ಭವತ್ವರ್ಯಮಾ ॥ ಶಂ ನ ಇಂದ್ರೋ ಬೃಹಸ್ಪತಿಃ ॥ ಶಂ ನೋ ವಿಷ್ಣುರುರುಕ್ರಮಃ ॥ ನಮೋ ಬ್ರಹ್ಮಣೇ ॥**

---

**ಶಾಂತಿಮಂತ್ರ :—** ಮಿತ್ರನು ನಮಗೆ ಕಲ್ಯಾಣಕಾರಕನಾಗಲಿ, ವರುಣನು ನಮಗೆ ಸುಖವನ್ನು ಕೊಡಲಿ. ಅರ್ಯಮನು ಮಂಗಲಕರನಾಗಲಿ.

ನಮಸ್ತೇ ವಾಯೋ ॥ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ॥ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ॥ ಋತಂ ವದಿಷ್ಯಾಮಿ ॥ ಸತ್ಯಂ ವದಿಷ್ಯಾಮಿ ॥ ತನ್ಮಾಮವತು ॥ ತದ್ವಕ್ತಾರಮವತು ॥ ಅವತು ಮಾಮ್ ॥ ಅವತು ವಕ್ತಾರಮ್ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

## ಉಪನಿಷತ್

ಓಂ ಶಂ ನೋ ಮಿತ್ರಃ ಶಂ ವರುಣಃ ॥ ಶಂ ನೋ ಭವತ್ವರ್ಯಮಾ ॥ ಶಂ ನ ಇಂದ್ರೋ ಬೃಹಸ್ಪತಿಃ ॥ ಶಂ ನೋ ವಿಷ್ಣುರುರುಕ್ರಮಃ ॥ ನಮೋ ಬ್ರಹ್ಮಣೇ ॥ ನಮಸ್ತೇ ವಾಯೋ ॥ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ॥ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ॥ ಋತಂ ವದಿಷ್ಯಾಮಿ ॥ ಸತ್ಯಂ ವದಿಷ್ಯಾಮಿ ॥ ತನ್ಮಾಮವತು ॥ ತದ್ವಕ್ತಾರಮವತು ॥ ಅವತು ಮಾಮ್ ॥ ಅವತು ವಕ್ತಾರಮ್ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಓಂ ಶೀಕ್ಷಾಂ ವ್ಯಾಖ್ಯಾಸ್ಯಾಮಃ ॥ ವರ್ಣಃ ಸ್ವರಃ ॥ ಮಾತ್ರಾ ಬಲಮ್ ॥ ಸಾಮ ಸಂತಾನಃ ॥ ಇತ್ಯುಕ್ತಃ ಶೀಕ್ಷಾಧ್ಯಾಯಃ ॥ ೧ ॥ ( ಶೀಕ್ಷಾಂ ಪಂಚ )

---

ಇಂದ್ರನು ಮಂಗಲವನ್ನೀಯಲಿ. ಬೃಹಸ್ಪತಿಯು ನಮ್ಮ ಕಲ್ಯಾಣವನ್ನು ಮಾಡಲಿ. ವಿಶಾಲ ಗತಿಯುಳ್ಳ ವಿಷ್ಣುವು ನಮಗೆ ಕಲ್ಯಾಣದಾಯಿಯಾಗಲಿ. ಬ್ರಹ್ಮನಿಗೆ ನಮಸ್ಕಾರವು. ವಾಯು ದೇವರೇ ನಿನಗೆ ನಮಸ್ಕಾರವು. ನೀನೇ ಪ್ರತ್ಯಕ್ಷ ಬ್ರಹ್ಮನಿರುವಿ. ನಿನಗೆಯೆ ನಾನು ಪ್ರತ್ಯಕ್ಷ ಬ್ರಹ್ಮನೆನ್ನುವೆನು. ಯಥಾರ್ಥವನ್ನು ನುಡಿಯುವೆನು. ಅದು (ಸತ್ಯವು) ನನ್ನನ್ನು ಕಾಪಾಡಲಿ. ಗುರುಗಳನ್ನು ಕಾಪಾಡಲಿ. ನನ್ನನ್ನು ಕಾಪಾಡಲಿ. ಓಂ ಶಾಂತಿಃ ಶಾಂತಿಃ ಶಾಂತಿಃ.

ಮೇಲಿನ ಶಾಂತಿಮಂತ್ರದಂತೆಯೆ ಅರ್ಥ.

ಇಲ್ಲಿಗೆ ಪ್ರಥಮೋನುವಾಕವು (ಖಂಡವು) ಸಮಾಪ್ತ.

ಓಂ. ವರ್ಣೋಚ್ಚಾರ ವಿದ್ಯೆಯನ್ನು ಕುರಿತು ವ್ಯಾಖ್ಯಾನ ಮಾಡುವೆವು. ವರ್ಣವು ( ಅಕಾರಾದಿ ), ಸ್ವರವು ( ಉದಾತ್ತಾದಿ ), ಮಾತ್ರೆಯು ( ಹ್ರಸ್ವ ದೀರ್ಘಾದಿ), ಬಲವು (ವರ್ಣೋಚ್ಚಾರ ಪ್ರಯತ್ನವು), ಸಾಮವು (ಉಚ್ಚಾರ ಸಮತೆಯು), ಸಂತಾನವು ( ಸಂಹಿತೆಯು ಅಥವಾ ವರ್ಣಸಂಯೋಗವು ). ಈ ಪ್ರಕಾರವಾಗಿ ವರ್ಣೋಚ್ಚಾರ ವಿಷಯಕ ಅಧ್ಯಾಯವು ನಿರೂಪಿಸಲ್ಪಟ್ಟಿದೆ.

ಇಲ್ಲಿಗೆ ದ್ವಿತೀಯೋನುವಾಕವು ಸಮಾಪ್ತ.

# ಬ್ರಹ್ಮಾನಂದವಲ್ಲಿ

## ಶಾಂತಿಮಂತ್ರ

ಓಂ ಸಹ ನಾವವತು ॥ ಸಹ ನೌ ಭುನಕ್ತು ॥ ಸಹ ವೀರ್ಯಂ ಕರವಾವಹೈ ॥ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಓಂ ಬ್ರಹ್ಮವಿದಾಪ್ನೋತಿ ಪರಂ ॥ ತದೇಷಾಽಭ್ಯುಕ್ತಾ ॥ ಸತ್ಯಂ ಜ್ಞಾನಮನಂತಂ ಬ್ರಹ್ಮ ॥ ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ॥ ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತೇತಿ ॥ ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುಃ ॥ ವಾಯೋರಗ್ನಿಃ ॥ ಅಗ್ನೇರಾಪಃ ॥ ಅದ್ಭ್ಯಃ ಪೃಥಿವೀ ॥ ಪೃಥಿವ್ಯಾ ಓಷಧಯಃ ॥ ಓಷಧಿಭ್ಯೋಽನ್ನಂ ॥ ಅನ್ನಾತ್ಪುರುಷಃ ॥ ಸ ವಾ ಏಷ ಪುರುಷೋಽನ್ನ ರಸಮಯಃ ॥ ತಸ್ಯೇದಮೇವ ಶಿರಃ ॥ ಅಯಂ ದಕ್ಷಿಣಃ ಪಕ್ಷಃ ॥ ಅಯಮುತ್ತರಃ ಪಕ್ಷಃ ॥ ಅಯಮಾತ್ಮಾ ॥ ಇದಂ ಪುಚ್ಛಂ ಪ್ರತಿಷ್ಠಾ ॥ ತದಪ್ಯೇಷಃ ಶ್ಲೋಕೋ ಭವತಿ ॥

---

**ಶಾಂತಿಮಂತ್ರ :—** ಅವನು ನಮ್ಮಿಬ್ಬರನ್ನೂ ಕಾಪಾಡಲಿ. ನಮ್ಮಿಬ್ಬರಿಗೂ ಕೂಡಿ ಉಪಭೋಗ್ಯ ವಸ್ತುಗಳನ್ನೀಯಲಿ. ಇಬ್ಬರೂ ಕೂಡಿ ವೀರ್ಯವನ್ನು ದೊರಕಿಸುವಾ. ನಮ್ಮ ಅಧ್ಯಯನವು ತೇಜಸ್ವಿಯಾಗಲಿ. ನಮ್ಮೊಳಗೆ ಹಗೆತನವಿಲ್ಲದಿರಲಿ.

(೧) ಓಂ, ಬ್ರಹ್ಮಜ್ಞಾನಿಯು ಪರಮಪದವನ್ನು ಪಡೆಯುವನು. ಅದು ಈ (ಕೆಳಗಣ) ಮಂತ್ರದಿಂದ ಹೇಳಲ್ಪಟ್ಟಿದೆ. ಹೃದಯಗುಹೆಯಲ್ಲಿರುವ ಹೃದಯಾಕಾಶದಲ್ಲಿರುವ ಶ್ರೇಷ್ಠನಾದ ಸತ್ಯರೂಪ ಜ್ಞಾನಮಯ ಅನಂತ ಬ್ರಹ್ಮನನ್ನು ಅರಿತವನು ಆ ಜ್ಞಾನಿಯಾದ ಬ್ರಹ್ಮನ ಸಂಗಡ ಸರ್ವ ಕಾಮನೆಗಳನ್ನುಪಭೋಗಿಸುವವನಾಗುವನು. ಅವನಿಂದ ಅಥವಾ ಈ ಆತ್ಮನಿಂದ ಆಕಾಶವು ಉತ್ಪನ್ನವಾಗಿದೆ. ಆಕಾಶದಿಂದ ವಾಯುವು, ವಾಯುವಿನಿಂದ ಅಗ್ನಿಯು, ಅಗ್ನಿಯಿಂದ ಆಪವು, ಆಪದಿಂದ ಪೃಥಿವಿ, ಪೃಥಿವಿಯಿಂದ ಓಷಧಿಗಳು, ಓಷಧಿಗಳಿಂದ ಅನ್ನವು, ಅನ್ನದಿಂದ ಪುರುಷನು. ಆ ಪುರುಷನು ಅನ್ನರಸಮಯನು. ಅಂದರೆ ಅನ್ನದಿಂದ ಪರಿಪೂರ್ಣನು. ಇದೇ ಅವನ ತಲೆಯು. ಇದು ಅವನ ಬಲಭುಜವು. ಇದು ಎಡಭುಜವು, ಇದು ಆತ್ಮವು. ಈ ಆಧಾರವು. ಅದರ ವಿಷಯಕ್ಕೆ ಈ (ಮೇಲಿನ) ಶ್ಲೋಕವು.

ಇಲ್ಲಿಗೆ ಪ್ರಥಮೋನುವಾಕವು ಮುಗಿಯಿತು.

**ಅನ್ನಾದ್ವೈ ಪ್ರಜಾಃ ಪ್ರಜಾಯಂತೇ॥ ಯಾಃ ಕಾಶ್ಚ ಪೃಥಿವೀಂ ಶ್ರಿತಾಃ॥ ಅಥೋ ಅನ್ನೇನೈವ ಜೀವಂತಿ ॥ ಅಥೈನದಪಿ ಯಂತ್ಯಂತತಃ ॥ ಅನ್ನಂ ಹಿ ಭೂತಾನಾಂ ಜ್ಯೇಷ್ಠಂ ॥ ತಸ್ಮಾತ್ಸರ್ವೌಷಧಮುಚ್ಯತೇ ॥ ಸರ್ವಂ ವೈ ತೇಽನ್ನಮಾಪ್ನುವಂತಿ ॥ ಯೇಽನ್ನಂ ಬ್ರಹ್ಮೋಪಾಸತೇ ॥ ಅನ್ನಂ ಹಿ ಭೂತಾನಾಂ ಜ್ಯೇಷ್ಠಂ ॥ ತಸ್ಮಾತ್ಸರ್ವೌಷಧಮುಚ್ಯತೇ ॥ ಅನ್ನಾದ್ಭೂತಾನಿ ಜಾಯಂತೇ ॥ ಜಾತಾನ್ಯನ್ನೇನ ವರ್ಧಂತೇ ॥ ಅದ್ಯತೇಽತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತ ಇತಿ ॥ ತಸ್ಮಾದ್ವಾ ಏತಸ್ಮಾದನ್ನರಸಮಯಾತ್ ॥ ಅನ್ಯೋಽಂತರ ಆತ್ಮಾ ಪ್ರಾಣಮಯಃ ॥ ತೇನೈಷ ಪೂರ್ಣಃ ॥ ಸ ವಾ ಏಷ ಪುರುಷವಿಧ ಏವ ॥ ತಸ್ಯ ಪುರುಷವಿಧತಾಂ ॥ ಅನ್ವಯಂ ಪುರುಷವಿಧಃ ॥ ತಸ್ಯ ಪ್ರಾಣ ಏವ ಶಿರಃ ॥ ವ್ಯಾನೋ ದಕ್ಷಿಣಃ ಪಕ್ಷಃ ಅಪಾನ ಉತ್ತರಃ ಪಕ್ಷಃ ॥ ಆಕಾಶ ಆತ್ಮಾ ॥ ಪೃಥಿವೀ ಪುಚ್ಛಂ ಪ್ರತಿಷ್ಠಾ ॥ ತದಪ್ಯೇಷ ಶ್ಲೋಕೋ ಭವತಿ ॥**

(೧) ಪೃಥಿವಿಯನ್ನಾಶ್ರಯಿಸಿದ ಎಲ್ಲ ಪ್ರಜೆಗಳು ಅನ್ನದಿಂದಲೆ ಹುಟ್ಟುವರು, ಅನ್ನದಿಂದಲೆ ಜೀವಿಸುವರು, ಕೊನೆಗೆ ಅದರಲ್ಲಿಯೆ ಲಯ ಹೊಂದುವರು. ಭೂತಗಳಲ್ಲಿ (ಅಥವಾ ಪಂಚ ಮಹಾಭೂತಗಳಲ್ಲಿ, ಸೃಜಿಸಲ್ಪಟ್ಟ ವಸ್ತುಗಳಲ್ಲಿ) ಅನ್ನವೆ ಎಲ್ಲಕ್ಕೂ ಹಿರಿಯದು. ಆದುದರಿಂದ ಅದಕ್ಕೆ ಸರ್ವೌಷಧವೆನ್ನುವರು. ಅನ್ನರೂಪ ಬ್ರಹ್ಮದ ಉಪಾಸನೆ ಮಾಡುವವರು ಎಲ್ಲ ಅನ್ನವನ್ನು ಸಂಪಾದಿಸುವರು. ಅನ್ನವೆ ಎಲ್ಲ ಭೂತಗಳಲ್ಲಿ ಹಿರಿಯದು. ಆದುದರಿಂದ ಅದಕ್ಕೆ ಸರ್ವೌಷಧವೆನ್ನುವರು. ಅನ್ನದಿಂದ ಭೂತಗಳ ಉತ್ಪತ್ತಿಯು. ಹುಟ್ಟಿದ ಭೂತಗಳು ಅನ್ನದಿಂದ ಬೆಳೆಯುವವು. ಅದು ತಿನ್ನಲ್ಪಡುತ್ತದೆ ಹಾಗೂ ಭೂತಗಳನ್ನು ತಿನ್ನುತ್ತದೆ, ಆದುದರಿಂದ ಅದಕ್ಕೆ ಅನ್ನವೆನ್ನುವರು. ಅದರಿಂದ (ಅನ್ನದಿಂದ) ಅಥವಾ ಈ ಅನ್ನರಸಮಯದಿಂದ (ಪುರುಷನಿಂದ) ಪ್ರಾಣಮಯ ಅಂತರಾತ್ಮನು ಬೇರೊಬ್ಬನಿರುವನು. ಅವನಿಂದ (ಆ ಪ್ರಾಣಮಯ ಅಂತರಾತ್ಮನಿಂದ) ಇವನು (ಅನ್ನರಸಮಯ ಪುರುಷನು) ವ್ಯಾಪ್ತನು. ಅವನು (ಪ್ರಾಣಮಯ ಆತ್ಮನು) ಪುರುಷನಂತೆಯೆ (ಪುರುಷವಿಧ) ಇರುವನು. ಅವನು ಪುರುಷನಂತೆ ಇರುವದನ್ನು ವಿವರಿಸುವೆವು. ಅವನ (ಅವಯವಗಳ ವಿಂಗಡವು) ಅನ್ವಯವು ಪುರುಷನಂತೆಯೆ ಇರುವದು. ಪ್ರಾಣವೆ ಅವನ ತಲೆಯು. ವ್ಯಾನವು ಬಲಭುಜವು, ಅಪಾನವು ಎಡಭುಜವು, ಆಕಾಶವು ಆತ್ಮವು. ಪೃಥಿವೀ ಎಂಬ ಆಧಾರವು. ಅದರ ವಿಷಯಕ್ಕೆಯೆ ಈ ಶ್ಲೋಕವು. ಇಲ್ಲಿಗೆ ದ್ವಿತೀಯ ಅನುವಾಕವು ಸಮಾಪ್ತವು.

ಪ್ರಾಣಂ ದೇವಾ ಅನುಪ್ರಾಣಂತಿ ॥ ಮನುಷ್ಯಾಃ ಪಶವಶ್ಚ ಯೇ ॥ ಪ್ರಾಣೋ ಹಿ ಭೂತಾನಾಮಾಯುಃ॥ ತಸ್ಮಾತ್ಸರ್ವಾಯುಷಮುಚ್ಯತೇ॥ ಸರ್ವಮೇವ ತೇ ಆಯುರ್ಯಂತಿ। ಯೇ ಪ್ರಾಣಂ ಬ್ರಹ್ಮೋಪಾಸತೇ । ಪ್ರಾಣೋ ಹಿ ಭೂತಾನಾಮಾಯುಃ। ತಸ್ಮಾತ್ಸರ್ವಾಯುಷಮುಚ್ಯತ ಇತಿ ॥ ತಸ್ಯೈಷ ಏವ ಶಾರೀರ ಆತ್ಮಾ ॥ ಯಃ ಪೂರ್ವಸ್ಯ ॥ ತಸ್ಮಾದ್ವಾ ಏತಸ್ಮಾತ್ಪ್ರಾಣಮಯಾತ್ ॥ ಅನ್ಯೋಽಂತರ ಆತ್ಮಾ ಮನೋಮಯಃ ॥ ತೇನೈಷ ಪೂರ್ಣಃ ॥ ಸ ವಾ ಏಷ ಪುರುಷವಿಧ ಏವ ॥ ತಸ್ಯ ಪುರುಷವಿಧತಾಂ॥ ಅನ್ವಯಂ ಪುರುಷವಿಧಃ॥ ತಸ್ಯ ಯಜುರೇವ ಶಿರಃ॥ ಋಗ್ ದಕ್ಷಿಣಃ ಪಕ್ಷಃ॥ ಸಾಮೋತ್ತರಃ ಪಕ್ಷಃ ॥ ಆದೇಶ ಆತ್ಮಾ ॥ ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ ॥ ತದಪ್ಯೇಷ ಶ್ಲೋಕೋ ಭವತಿ ॥

ಯತೋ ವಾಚೋ ನಿವರ್ತಂತೇ ॥ ಅಪ್ರಾಪ್ಯ ಮನಸಾ ಸಹ ॥ ಆನಂದಂ

---

ದೇವತೆಗಳೂ ಮನುಷ್ಯರೂ ಪಶುಗಳೂ ಪ್ರಾಣದಿಂದ ಪೋಷಿಸಲ್ಪಡುವರು. ಪ್ರಾಣವು ಭೂತಮಾತ್ರಗಳ ಆಯುಷ್ಯವು. ಆದ್ದರಿಂದ ಅದಕ್ಕೆ ಎಲ್ಲರ ಆಯುಷ್ಯವೆಂದೆನ್ನುವರು. ಪ್ರಾಣಬ್ರಹ್ಮವನ್ನು ಉಪಾಸಿಸುವವರು ಪೂರ್ಣ ಆಯುಷ್ಯವುಳ್ಳವರಾಗುವರು. ಪ್ರಾಣವು ಭೂತಮಾತ್ರಗಳ ಆಯುಷ್ಯವು. ಆದ್ದರಿಂದ ಅದಕ್ಕೆ ಎಲ್ಲರ ಆಯುಷ್ಯವೆಂಬ ಹೆಸರು. ಮುಂಚಿನವನ (ಅನ್ನಮಯ ಪುರುಷನ) ಆತ್ಮನಾದ ಈ ಶರೀರದಲ್ಲಿರುವ ಆತ್ಮನೆ ಅವನ (ಪ್ರಾಣಮಯ ಪುರುಷನ) ಆತ್ಮನು. ಮನೋಮಯ ಅಂತರಾತ್ಮನು ಅವನಿಂದಲೂ ಈ ಪ್ರಾಣಮಯ ಆತ್ಮನಿಂದಲೂ ಬೇರೊಬ್ಬನಿರುವನು. ಅವನಿಂದ (ಮನೋಮಯ ಆತ್ಮನಿಂದ) ಇವನು (ಪ್ರಾಣಮಯ ಆತ್ಮನು) ವ್ಯಾಪ್ತನು. ಅವನು ( ಮನೋಮಯ ಆತ್ಮನು) ಪುರುಷನಂತೆಯೆ ( ಪುರುಷವಿಧ) ಇರುವನು. ಅವನು ಪುರುಷನಂತೆ ಇರುವದನ್ನು ಹೇಳುವೆವು, ಅವನ ಅನ್ವಯವು ( ಪರಸ್ಪರ ಅವಯವಗಳ ಸಂಬಂಧವು) ಪುರುಷನಂತೆಯೆ ಇರುವದು. ಯಜುರ್ವೇದವು ಅವನ ತಲೆಯು. ಋಗ್ವೇದವು ಬಲ ಭುಜವು. ಸಾಮವೇದವು ಎಡ ಭುಜವು. ಸಿದ್ಧಾಂತಗಳು ಆತ್ಮವು. ಅಥರ್ವಾಂಗಿರಸನು ಆಧಾರವು. ಅದರ ವಿಷಯಕ್ಕೆಯೆ ಈ ( ಮೇಲೆ ಹೇಳಿದ) ಶ್ಲೋಕವು.

ಇಲ್ಲಿಗೆ ಮೂರನೇ ಅನುವಾಕವು ಮುಗಿಯಿತು.

ಯಾವ ಬ್ರಹ್ಮನನ್ನರಿತುಕೊಳ್ಳಲಿಕ್ಕೆ ವಾಕ್ಯಕ್ತಿಯು ಮನದೊಡನೆ ಹೋಗಿ ತನಗೆ ನಿಲುಕದ್ದರಿಂದ ತಿಳಿಯದೆ ತಿರುಗಿ ಬರುವದೊ ಆ ಬ್ರಹ್ಮನ

**ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನೇತಿ ॥ ತಸ್ಯೈಷ ಏವ ಶಾರೀರ ಆತ್ಮಾ ॥ ಯಃ ಪೂರ್ವಸ್ಯ ॥ ತಸ್ಮಾದ್ವಾ ಏತಸ್ಮಾನ್ಮನೋಮಯಾತ್ ॥ ಅನ್ಯೋಽಂತರ ಆತ್ಮಾ ವಿಜ್ಞಾನಮಯಃ ॥ ತೇನೈಷ ಪೂರ್ಣಃ ॥ ಸ ವಾ ಏಷ ಪುರುಷವಿಧ ಏವ ॥ ತಸ್ಯ ಪುರುಷವಿಧತಾಂ॥ ಅನ್ವಯಂ ಪುರುಷವಿಧಃ॥ ತಸ್ಯ ಶ್ರದ್ಧೈವ ಶಿರಃ ಋತಂ ದಕ್ಷಿಣಃ ಪಕ್ಷಃ ॥ ಸತ್ಯಮುತ್ತರಃ ಪಕ್ಷಃ ॥ ಯೋಗ ಆತ್ಮಾ ॥ ಮಹಃ ಪುಚ್ಛಂ ಪ್ರತಿಷ್ಠಾ ॥ ತದಪ್ಯೇಷ ಶ್ಲೋಕೋ ಭವತಿ ॥**

**ವಿಜ್ಞಾನಂ ಯಜ್ಞಂ ತನುತೇ ॥ ಕರ್ಮಾಣಿ ತನುತೇಽಪಿಚ॥ ವಿಜ್ಞಾನಂ ದೇವಾಃ ಸರ್ವೇ ॥ ಬ್ರಹ್ಮ ಜ್ಯೇಷ್ಠಮುಪಾಸತೇ ॥ ವಿಜ್ಞಾನಂ ಬ್ರಹ್ಮ ಚೇದ್ವೇದ ತಸ್ಮಾಚ್ಚೇನ್ನ ಪ್ರಮಾದ್ಯತಿ ॥ ಶರೀರೇ ಪಾಪ್ಮನೋ ಹಿತ್ವಾ ॥ ಸರ್ವಾನ್ಕಾಮಾನ್ಸಮಶ್ನುತ ಇತಿ ॥ ತಸ್ಯೈಷ ಏವ ಶಾರೀರ ಆತ್ಮಾ ॥ ಯಃ ಪೂರ್ವಸ್ಯ ॥ ತಸ್ಮಾದ್ವಾ ಏತಸ್ಮಾದ್ವಿಜ್ಞಾನ**

ಆನಂದವನ್ನರಿತವನು ಎಂದಿಗೂ ಭಯಪಡಲಾರನು. ಮುಂಚಿನವನ (ಪ್ರಾಣಮಯ ಪುರುಷನ) ಆತ್ಮನಾದ ಈ ಶರೀರದಲ್ಲಿರುವ ಆತ್ಮನೆ ಅವನ (ಮನೋಮಯ ಪುರುಷನ) ಆತ್ಮನು. ಅವನಿಂದ (ಪ್ರಾಣಮಯ ಆತ್ಮನಿಂದ) ಅಥವಾ ಈ ಮನೋಮಯ ಆತ್ಮನಿಂದ ವಿಜ್ಞಾನಮಯ ಅಂತರಾತ್ಮನು ಬೇರೆಯವನಿರುವನು. ಅವನಿಂದ ( ವಿಜ್ಞಾನಮಯ ಆತ್ಮನಿಂದ) ಇವನು ( ಮನೋಮಯ ಆತ್ಮನು ) ವ್ಯಾಪ್ತನು. ಅವನು ಪುರುಷನಂತೆಯೆ ಇರುವನು. ಅವನು ಪುರುಷನಂತೆ ಇರುವದನ್ನು ಹೇಳುವೆವು. ಅವನ ಅನ್ವಯವು ( ಅವಯವಗಳ ಪರಸ್ಪರ ಸಂಬಂಧವು) ಪುರುಷನಂತೆಯೆ ಇರುವದು. ಶ್ರದ್ಧೆಯೆ ಅವನ ತಲೆಯು. ಯಥಾರ್ಥ ವಚನವೆ ಬಲಬದಿಯು. ಸತ್ಯವೆ ಎಡಬದಿಯು. ಯೋಗವೆ ಆತ್ಮವು. ಬುದ್ಧಿಯೇ ಆಧಾರವು. ಅದರ ವಿಷಯಕ್ಕೆಯೆ ಈ ( ಮೇಲಿನ ) ಶ್ಲೋಕವು.

ವಿಜ್ಞಾನವು ( ಶುದ್ಧಬುದ್ಧಿ ಶಕ್ತಿ ) ಯಜ್ಞಮಾಡುವದು. ಕರ್ಮಗಳನ್ನು ವಿಸ್ತರಿಸುವದು. ಎಲ್ಲ ದೇವತೆಗಳೂ ಶ್ರೇಷ್ಠನಾದ ಬ್ರಹ್ಮನೂ ವಿಜ್ಞಾನವನ್ನು-ಪಾಸಿಸುವರು. ವಿಜ್ಞಾನವೆ ಬ್ರಹ್ಮನೆಂದು ತಿಳಿ. ಇದನ್ನು ತಿಳಿದುಕೊಳ್ಳುವಲ್ಲಿ ಯಾವನು ತಪ್ಪುಮಾಡುವದಿಲ್ಲವೊ ಅವನೆ ಶರೀರಸ್ಥ ಎಲ್ಲ ಪಾಪಗಳನ್ನು ನಾಶಮಾಡಿ ಎಲ್ಲ ಕಾಮುಗಳನ್ನುಪಭೋಗಿಸುವನು. ಮುಂಚಿನವನ (ಮನೋಮಯ ಪುರುಷನ) ಆತ್ಮನಾದ ಈ ಶರೀರದಲ್ಲಿರುವ ಆತ್ಮನೇ ಅವನ ( ವಿಜ್ಞಾನಮಯ ಪುರುಷನ) ಆತ್ಮನು. ಅವನಿಂದ ( ಮನೋಮಯ ಆತ್ಮ

ನಂದಯತಿ ॥ ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯ-ನೇಽಭಯಂ ಪ್ರತಿಷ್ಠಾಂ ವಿಂದತೇ ॥ ಅಥ ಸೋಽಭಯಂ ಗತೋ ಭವತಿ ॥ ಯದಾ ಹ್ಯೇವೈಷ ಏತಸ್ಮಿನ್ನುದರಮಂತರಂ ಕುರುತೇ ॥ ಅಥ ತಸ್ಯ ಭಯಂ ಭವತಿ ॥ ತತ್ತ್ವೇವ ಭಯಂ ವಿದುಷೋಽಮನ್ವಾನಸ್ಯ ॥ ತದಪ್ಯೇಷ ಶ್ಲೋಕೋ ಭವತಿ ॥

ಭೀಷಾಽಸ್ಮಾದ್ವಾತಃ ಪವತೇ ॥ ಭೀಷೋದೇತಿ ಸೂರ್ಯಃ ॥ ಭೀಷಾಸ್ಮಾದಗ್ನಿ-ಶ್ಚಂದ್ರಶ್ಚ॥ ಮೃತ್ಯುರ್ಧಾವತಿ ಪಂಚಮ ಇತಿ॥ ಸೈಷಾಽನಂದಸ್ಯ ಮೀಮಾಂಸಾ ಭವತಿ॥ ಯುವಾಸ್ಯಾತ್ಸಾಧು ಯುವಾಧ್ಯಾಯಕಃ ॥ ಆಶಿಷ್ಠೋ ದ್ರಢಿಷ್ಠೋ ಬಲಿಷ್ಠಃ ॥ ತಸ್ಯೇಯಂ ಪೃಥಿವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್। ಸ ಏಕೋ ಮಾನುಷ ಆನಂದಃ॥ ತೇ ಯೇ ಶತಂ ಮಾನುಷಾ ಆನಂದಾಃ ॥ ಸ ಏಕೋ ಮನುಷ್ಯಗಂಧರ್ವಾಣಾಮಾ-ನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಂ ಮನುಷ್ಯಗಂಧರ್ವಾ-ಣಾಮಾನಂದಾಃ ॥ ಸ ಏಕೋ ದೇವಗಂಧರ್ವಾಣಾಮಾನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಂ ದೇವಗಂಧರ್ವಾಣಾಮಾನಂದಾಃ ॥ ಸ ಏಕ

---

ಅವನ ಅಂಜಿಕೆಯ ಮೂಲಕವೆ ವಾಯುವು ಬೀಸುತ್ತದೆ, ಸೂರ್ಯನು ಉದಯಿಸುತ್ತಾನೆ; ಅಗ್ನಿ ಇಂದ್ರ ಹಾಗೂ ಐದನೆಯವನಾದ ಮೃತ್ಯುವು ಕಾರ್ಯ ಮಾಡುತ್ತಾರೆ. ಇನ್ನು ಆನಂದದ ಮೀಮಾಂಸೆಯು (ವಿಚಾರದಿಂದ ತತ್ವನಿರ್ಣಯವು) ಆಗುವದು. ತರುಣನೂ ಒಳ್ಳೇ ಸದ್ಗುಣಿಯಾದ ಶಿಷ್ಯನೂ (ಜ್ಞಾನ ಸಂಪಾದನೆಗಾಗಿ) ಉತ್ಕಟ ಇಚ್ಛೆಯುಳ್ಳವನೂ ದೃಢ ಬುದ್ಧಿಯವನೂ ಬಲಿಷ್ಠನೂ ಇದ್ದರೆ, ಅವನ ಸಲುವಾಗಿ ಈ ಎಲ್ಲ ಪೃಥಿವಿಯು ಧನದಿಂದ ಸಂಪೂರ್ಣವಾಗುವದು. ಇದು ಒಂದು ಮಾನುಷ (ಮನುಷ್ಯನಿಗೆ ಆಗುವ) ಆನಂದವು. ಮಾನುಷ ಆನಂದದ ನೂರ್ಮಡಿ ಮನುಷ್ಯ ಗಂಧರ್ವರ ಒಂದು ಆನಂದವು. ಇದು ನಿಷ್ಕಾಮನಾದ ವೇದಜ್ಞನ ಆನಂದವು. ಮನುಷ್ಯ ಗಂಧರ್ವರ ಆನಂದದ ನೂರ್ಮಡಿ ದೇವಗಂಧರ್ವರ ಒಂದು ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ದೇವ ಗಂಧರ್ವರ ಆನಂದದ ನೂರ್ಮಡಿ ಶಾಶ್ವತ ಲೋಕಗಳಲ್ಲಿರುವ ಪಿತೃಗಳ ಒಂದು ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ಶಾಶ್ವತ ಲೋಕಗಳಲ್ಲಿರುವ ಪಿತೃಗಳ ಆನಂದದ ನೂರ್ಮಡಿ ಜನ್ಮತಃ ದೇವತೆಗಳಿದ್ದವರ ಒಮ್ಮಡಿ ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ಜನ್ಮತಃ ದೇವತೆಗಳಿದ್ದವರ ಆನಂದದ ನೂರ್ಮಡಿ ಕರ್ಮದೇವತೆಗಳ ಒಮ್ಮಡಿ ಆನಂದವು. ಇದು

ಪಿತೃಣಾಂ ಚಿರಲೋಕಲೋಕಾನಾಮಾನಂದಃ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ॥ ತೇ ಯೇ ಶತಂ ಪಿತೃಣಾಂ ಚಿರಲೋಕಲೋಕಾನಾಮಾನಂದಾಃ॥ ಸ ಏಕ ಆಜಾನಜಾನಾಂ ದೇವಾನಾಮಾನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಮಾಜಾನಜಾನಾಂ ದೇವಾನಾಮಾನಂದಾಃ ॥ ಸ ಏಕ ಕರ್ಮದೇವಾನಾಂ ದೇವಾನಾಮಾನಂದಃ ॥ ಯೇ ಕರ್ಮಣಾ ದೇವಾನಪಿಯಂತಿ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಂ ಕರ್ಮದೇವಾನಾಂ ದೇವಾನಾಮಾನಂದಾಃ ॥ ಸ ಏಕೋ ದೇವಾನಾಮಾನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಂ ದೇವಾನಾಮಾನಂದಾಃ ॥ ಸ ಏಕ ಇಂದ್ರಸ್ಯಾನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಮಿಂದ್ರಸ್ಯಾನಂದಾಃ ॥ ಸ ಏಕೋ ಬೃಹಸ್ಪತೇರಾನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಂ ಬೃಹಸ್ಪತೇರಾನಂದಾಃ ॥ ಸ ಏಕಃ ಪ್ರಜಾಪತೇರಾನಂದಃ ॥ ಶ್ರೋತ್ರಿಯಸ್ಯ ಚಾಕಾಮಹತಸ್ಯ ॥ ತೇ ಯೇ ಶತಂ ಪ್ರಜಾಪತೇರಾನಂದಾಃ ॥ ಸ ಏಕೋ ಬ್ರಹ್ಮಣ ಆನಂದಃ ॥ ಶ್ರೋತ್ರಿಯಸ್ಯ ಚಾಕಾಮಹತ್ಯ ॥ ಸ ಯಶ್ಚಾಯಂ ಪುರುಷೇ ॥ ಯಶ್ಚಾಸಾವಾದಿತ್ಯೇ ॥ ಸ ಏಕಃ ॥ ಸ ಯ ಏವಂವಿತ್ ॥ ಅಸ್ಮಾಲ್ಲೋಕಾತ್ಪ್ರೇತ್ಯ ॥ ಏತಮನ್ನಮಯಮಾತ್ಮಾನಮುಪಸಂಕ್ರಾಮತಿ ॥ ಏತಂ ಪ್ರಾಣಮಯಮಾತ್ಮಾನಮುಪಸಂಕ್ರಾಮತಿ ॥ ಏತಂ ಮನೋಮಯಮಾತ್ಮಾನಮುಪಸಂಕ್ರಾಮತಿ ॥ ಏತಂ ವಿಜ್ಞಾನಮಯಮಾತ್ಮಾನ

---

ನಿಷ್ಕಾಮ ವೇದಜ್ಞನ ಆನಂದವು. ಕರ್ಮದೇವತೆಗಳ ಆನಂದದ ನೂರ್ಮಡಿ ದೇವತೆಗಳ ಒಮ್ಮಡಿ ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ದೇವತೆಗಳ ಆನಂದದ ನೂರ್ಮಡಿ ಇಂದ್ರನ ಒಮ್ಮಡಿ ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ಇಂದ್ರನ ಆನಂದದ ನೂರ್ಮಡಿ ಬೃಹಸ್ಪತಿಯ ಒಮ್ಮಡಿ ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ಬೃಹಸ್ಪತಿಯ ಆನಂದದ ನೂರ್ಮಡಿ ಪ್ರಜಾಪತಿಯ ಒಮ್ಮಡಿ ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ಪ್ರಜಾಪತಿಯ ಆನಂದದ ನೂರ್ಮಡಿ ಬ್ರಹ್ಮನ ಒಮ್ಮಡಿ ಆನಂದವು. ಇದು ನಿಷ್ಕಾಮ ವೇದಜ್ಞನ ಆನಂದವು. ಈ ಪುರುಷನಲ್ಲಿರುವವನೂ ಆ ಸೂರ್ಯನಲ್ಲಿರುವವನೂ, ಒಬ್ಬನೆ. ಇದನ್ನು ತಿಳಿದವನು ಈ ಲೋಕದಿಂದ ಹೊರಟು ಅನ್ನಮಯ ಆತ್ಮನನ್ನು ದಾಟಿ ಹೋಗುತ್ತಾನೆ. ಈ ಪ್ರಾಣಮಯ ಆತ್ಮನನ್ನು ದಾಟಿ ಹೋಗುತ್ತಾನೆ. ಈ ವಿಜ್ಞಾನಮಯ ಆತ್ಮನನ್ನು ದಾಟಿ ಹೋಗುತ್ತಾನೆ. ಈ ಆನಂದಮಯ

**ಮುಪಸಂಕ್ರಾಮತಿ ॥ ಏತಮಾನಂದಮಯಮಾತ್ಮಾನಮುಪಸಂಕ್ರಾಮತಿ ॥ ತದಪ್ಯೇಷ ಶ್ಲೋಕೋ ಭವತಿ ॥**

**ಯತೋ ವಾಚೋ ನಿವರ್ತಂತೇ ॥ ಅಪ್ರಾಪ್ಯ ಮನಸಾ ಸಹ ॥ ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನೇತಿ ॥ ಏತಂ ಹ ವಾವ ನ ತಪತಿ ಕಿಮಹಂ ಸಾಧು ನಾಕರವಮ್ ॥ ಕಿಮಹಂ ಪಾಪಮಕರವಮಿತಿ ॥ ಸ ಯ ಏವಂ ವಿದ್ವಾನೇತೇ ಆತ್ಮಾನಂ ಸ್ಪೃಣುತೇ। ಉಭೇ ಹ್ಯೇವೈಷ ಏತೇ ಆತ್ಮಾನಂ ಸ್ಪೃಣುತೇ ಯ ಏವಂ ವೇದ ॥ ಇತ್ಯುಪನಿಷತ್ ॥**

**ಸಹ ನಾವವತು ॥ ಸಹ ನೌ ಭುನಕ್ತು ॥ ಸಹ ವೀರ್ಯಂ ಕರವಾವಹೈ ॥ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

---

ಆತ್ಮನನ್ನೂ ದಾಟಿ ಹೋಗುತ್ತಾನೆ. ಇದರ ವಿಷಯಕ್ಕೆ ಈ ಶ್ಲೋಕವು.

ಇಲ್ಲಿಗೆ ಎಂಟನೆ ಅನುವಾಕವು ಸಮಾಪ್ತ.

ತನಗೆ ನಿಲುಕದ್ದರಿಂದ ವಾಕ್ಶಕ್ತಿಯು ಎಲ್ಲಿಂದ ತಿರುಗಿ ಒರುವದೊ ಆ ಬ್ರಹ್ಮನ ಆನಂದವನ್ನರಿತ ವಿದ್ವಾಂಸನು ಯಾತರಿಂದಲೂ ಭಯಭೀತನಾಗುವದಿಲ್ಲ. ನಾನು ಒಳಿತನ್ನು ಮಾಡಲಿಲ್ಲ, ನಾನು ಪಾಪವನ್ನಾಚರಿಸಿದೆನು, ಎಂದು ಅವನು (ವಿದ್ವಾಂಸನು) ದುಃಖಪಡುವದಿಲ್ಲ. ಇದನ್ನರಿತ ವಿದ್ವಾಂಸನು ಇವುಗಳನ್ನು (ಪಾಪಪುಣ್ಯಗಳನ್ನು) ಆತ್ಮರೂಪ ಮಾಡಿ ಬಿಡುತ್ತಾನೆ ಇವೆರಡನ್ನೂ (ಪಾಪ ಪುಣ್ಯಗಳನ್ನು) ಅವನು ಆತ್ಮರೂಪ ಮಾಡಿ ಬಿಡುತ್ತಾನೆ. ಇದು ಉಪನಿಷತ್ತು (ಜ್ಞಾನವು).

(ಮುಂದೆ ಬ್ರಹ್ಮವಿದ್ ಮುಂತಾದ ಪಾರಿಭಾಷಿಕ ರೀತಿಯಿಂದ ಕೊಟ್ಟ ಮಂತ್ರಾನುಕ್ರಮವು ಹಾಗೂ ಮಂತ್ರ ಸಂಖ್ಯೆಯು)

ಇಲ್ಲಿಗೆ ಒಂಬತ್ತನೆ ಅನುವಾಕವು ಸಮಾಪ್ತ.

ಅವನು ನಮ್ಮಿಬ್ಬರನ್ನೂ ಕಾಪಾಡಲಿ. ನಮ್ಮಿಬ್ಬರಿಗೂ ಕೂಡಿ ಉಪಭೋಗಗಳನ್ನೀಯಲಿ. ಇಬ್ಬರೂ ಕೂಡಿ ವೀರ್ಯವನ್ನು ದೊರಕಿಸುವಾ. ನಮ್ಮ ಅಧ್ಯಯನವು ತೇಜಸ್ವಿಯಾದದ್ದಾಗಲಿ, ನಮ್ಮೊಳಗೆ ಹಗೆತನವಿಲ್ಲದಿರಲಿ. ಓಂ. ಶಾಂತಿಃ

ಇಲ್ಲಿಗೆ ಬ್ರಹ್ಮಾನಂದವಲ್ಲಿ ಎಂಬ ಎರಡನೇ ವಲ್ಲಿ ಸಮಾಪ್ತ.

# ಭೃಗುವಲ್ಲಿ

ಓಂ ॥ ಸಹ ನಾವವತು ॥ ಸಹ ನೌ ಭುನಕ್ತು ॥ ಸಹ ವೀರ್ಯಂ ಕರವಾ-ವಹೈ ॥ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಭೃಗುರ್ವೈ ವಾರುಣಿಃ ॥ ವರುಣಂ ಪಿತರಮುಪಸಸಾರ ॥ ಅಧೀಹಿ ಭಗವೋ ಬ್ರಹ್ಮೇತಿ ॥ ತಸ್ಮಾ ಏತತ್ಪ್ರೋವಾಚ ॥ ಅನ್ನಂ ಪ್ರಾಣಂ ಚಕ್ಷುಃ ಶ್ರೋತ್ರಂ ಮನೋ ವಾಚಮಿತಿ ॥ ತಂ ಹೋವಾಚ ॥ ಯತೋ ವಾ ಇಮಾನಿ ಭೂತಾನಿ ಜಾಯಂತೇ ॥ ಯೇನ ಜಾತಾನಿ ಜೀವಂತಿ ॥ ಯತ್ಪ್ರಯಂತ್ಯಭಿಸಂವಿಶಂತಿ ॥ ತದ್ವಿ-ಜಿಜ್ಞಾಸಸ್ವ ॥ ತದ್ಬ್ರಹ್ಮೇತಿ ॥ ಸ ತಪೋಽತಪ್ಯತ ॥ ಸ ತಪಸ್ತಪ್ತ್ವಾ ॥

ಅನ್ನಂ ಬ್ರಹ್ಮೇತಿ ವ್ಯಜಾನಾತ್ ॥ ಅನ್ನಾದ್ಧ್ಯೇವ ಖಲ್ವಿ ಮಾನಿ ಭೂತಾನಿ ಜಾಯಂತೇ ॥ ಅನ್ನೇನ ಜಾತಾನಿ ಜೀವಂತಿ ॥ ಅನ್ನಂ ಪ್ರಯಂತ್ಯಭಿಸಂವಿಶಂತೀತಿ ॥

**ಶಾಂತಿಮಂತ್ರ—** ಅವನು ನಮ್ಮಿಬ್ಬರನ್ನೂ ಕಾಪಾಡಲಿ. ನಮ್ಮಿಬ್ಬರಿಗೂ ಕೂಡಿ ಉಪಭೋಗಗಳನ್ನೀಯಲಿ. ಇಬ್ಬರೂ ಕೂಡಿ ವೀರ್ಯವನ್ನು ದೊರಕಿಸುವಾ. ನಮ್ಮ ಅಧ್ಯಯನವು ತೇಜಸ್ವಿಯಾಗದ್ದಾಗಲಿ, ನಮ್ಮೊಳಗೆ ಹಗೆತನವಿಲ್ಲದಿರಲಿ.

ವರುಣಪುತ್ರನಾದ ಭೃಗುವು ತನ್ನ ತಂದೆಯಾದ ವರುಣನ ಬಳಿಗೆ ಹೋದನು. 'ಪೂಜ್ಯರೇ, ನನಗೆ ಬ್ರಹ್ಮವನ್ನುಪದೇಶಿಸಿರಿ,' ಎಂದನು. ಅವನಿಗೆ ತಂದೆಯು ಅಂದದ್ದು, 'ಅನ್ನವು, ಪ್ರಾಣವು, ಚಕ್ಷು, ಶ್ರೋತ್ರವು, ಮನವು, ವಾಚೆಯು.' ಹೀಗೆ ಹೇಳಿ ಮತ್ತೆ ಅಂದದ್ದೇನಂದರೆ, 'ಎಲ್ಲಿಂದ ಈ ಭೂತಗಳು ಹುಟ್ಟುವವೊ, ಹುಟ್ಟಿದ ಭೂತಗಳು ಯಾತರ ಆಧಾರದಿಂದ ಜೀವಿಸುವವೊ ಯಾತರಲ್ಲಿ ಲಯವಾಗುವವೊ ಅದನ್ನು ಚನ್ನಾಗಿ ಅರಿತುಕೊ, ಅದೇ ಬ್ರಹ್ಮವು.' ಭೃಗುವು ತಪವನ್ನಾಚರಿಸಿದನು. ಅವನು ತಪವನ್ನಾ-ಚರಿಸಿ—

ಇಲ್ಲಿಗೆ ಪ್ರಥಮೋನುವಾಕವು ಸಮಾಪ್ತ.

(ಅವನು ತಪವನ್ನಾಚರಿಸಿ) ಅನ್ನವು ಬ್ರಹ್ಮವೆಂದು ನಿಶ್ಚಯಿಸಿರುವನು. ನಿಜವಾಗಿ ಅನ್ನದಿಂದಲೆ ಈ ಭೂತಗಳು ಉತ್ಪನ್ನವಾಗುತ್ತವೆ, ಹುಟ್ಟಿದ ಭೂತಗಳು ಅನ್ನದ ಆಧಾರದಿಂದ ಜೀವಿಸುತ್ತವೆ, ಅನ್ನವನ್ನು ಕುರಿತು

ತದ್ವಿಜ್ಞಾಯ ॥ ಪುನರೇವ ವರುಣಂ ಪಿತರಮುಪಸಸಾರ ॥ ಅಧೀಹಿ ಭಗವೋ ಬ್ರಹ್ಮೇತಿ ॥ ತಂ ಹೋವಾಚ ॥ ತಪಸಾ ಬ್ರಹ್ಮ ವಿಜಿಜ್ಞಾಸಸ್ವ ॥ ತಪೋ ಬ್ರಹ್ಮೇತಿ ಸ ತಪೋಽತಪ್ಯತ ॥ ಸ ತಪಸ್ತಪ್ತ್ವಾ ॥

ಪ್ರಾಣೋ ಬ್ರಹ್ಮೇತಿ ವ್ಯಜಾನಾತ್ ॥ ಪ್ರಾಣಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ॥ ಪ್ರಾಣೇನ ಜಾತಾನಿ ಜೀವಂತಿ ॥ ಪ್ರಾಣಂ ಪ್ರಯಂತ್ಯಭಿಸಂವಿಶಂತೀತಿ॥ ತದ್ವಿಜ್ಞಾಯ ॥ ಪುನರೇವ ವರುಣಂ ಪಿತರಮುಪಸಸಾರ ॥ ಅಧೀಹಿ ಭಗವೋ ಬ್ರಹ್ಮೇತಿ ॥ ತಂ ಹೋವಾಚ ॥ ತಪಸಾ ಬ್ರಹ್ಮ ವಿಜಿಜ್ಞಾಸಸ್ವ॥ ತಪೋ ಬ್ರಹ್ಮೇತಿ ॥ ಸ ತಪೋಽತಪ್ಯತ ॥ ಸ ತಪಸ್ತಪ್ತ್ವಾ ॥

ಮನೋ ಬ್ರಹ್ಮೇತಿ ವ್ಯಜಾನಾತ್ ॥ ಮನಸೋ ಹ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ॥ ಮನಸಾ ಜಾತಾನಿ ಜೀವಂತಿ ॥ ಮನಃ ಪ್ರಯಂತ್ಯಭಿಸಂವಿಶಂತೀತಿ ॥

---

ಗಮನ ಮಾಡುತ್ತವೆ, ಅನ್ನದಲ್ಲಿ ಲಯವಾಗುತ್ತವೆ. ಹೀಗೆ ತಿಳಿದುಕೊಂಡು ಅದರಿಂದ (ಸಂತುಷ್ಟನಾಗದೆ) ಭೃಗುವು ಪುನಃ ತಂದೆಯಾದ ವರುಣನ ಬಳಿಗೆ ಹೋದನು. 'ಪೂಜ್ಯರೇ, ನನಗೆ ಬ್ರಹ್ಮೋಪದೇಶವನ್ನು ಮಾಡಿರಿ,' ಎಂದನು. ಅವನಿಗೆ ವರುಣನು ಅಂದದ್ದು, 'ತಪಸ್ಸಿನಿಂದ ಚನ್ನಾಗಿ ಬ್ರಹ್ಮನನ್ನು ಅರಿತುಕೊ. ತಪಸ್ಸು ಬ್ರಹ್ಮವು.' ಭೃಗುವು ತಪಾಚರಣೆ ಮಾಡಿದನು. ತಪವನ್ನಾಚರಿಸಿ—

ಇಲ್ಲಿಗೆ ಎರಡನೇ ಅನುವಾಕವು ಸಮಾಪ್ತ.

(ತಪವನ್ನಾಚರಿಸಿ) ಪ್ರಾಣವು ಬ್ರಹ್ಮವೆಂದು ನಿಶ್ಚಯಿಸಿದನು. ಪ್ರಾಣದಿಂದಲೆ ಈ ಭೂತಗಳೆಲ್ಲವೂ ಉತ್ಪನ್ನವಾಗುತ್ತವೆ. ಹುಟ್ಟಿದ ಭೂತಗಳು ಪ್ರಾಣದ ಆಧಾರದಿಂದಲೆ ಬದುಕುತ್ತವೆ. ಪ್ರಾಣವನ್ನು ಕುರಿತು ಗಮನ ಮಾಡುತ್ತವೆ, ಪ್ರಾಣದಲ್ಲಿ ಲಯವಾಗುತ್ತವೆ. ಹೀಗೆ ತಿಳಿದುಕೊಂಡು ಭೃಗುವು ಪುನಃ ತಂದೆಯಾದ ವರುಣನೆಡೆಗೆ ಹೋದನು. 'ಪೂಜ್ಯರೇ, ನನಗೆ ಬ್ರಹ್ಮೋಪದೇಶವನ್ನು ಕೊಡಬೇಕು' ಎಂದನು. ಅವನಿಗೆ ವರುಣನು ಅಂದದ್ದು, 'ತಪಸ್ಸಿನಿಂದ ಬ್ರಹ್ಮನನ್ನು ಚನ್ನಾಗಿ ಅರಿತುಕೊ. ತಪವು ಬ್ರಹ್ಮವು.' ಅವನು (ಭೃಗುವು) ತಪಸ್ಸು ಮಾಡಿದನು. ತಪವನ್ನಾಚರಿಸಿ—

ಇಲ್ಲಿಗೆ ಮೂರನೇ ಅನುವಾಕವು ಸಮಾಪ್ತ.

(ತಪವನ್ನಾಚರಿಸಿ) ಮನವು ಬ್ರಹ್ಮವೆಂದು ನಿಶ್ಚಯಿಸಿದನು. ಮನಸ್ಸಿನಿಂದಲೆ ಈ ಎಲ್ಲ ಭೂತಗಳು ಹುಟ್ಟುತ್ತವೆ, ಹುಟ್ಟಿದ ಭೂತಗಳು ಮನಸ್ಸಿನ

ತದ್ವಿಜ್ಞಾಯ ಪುನರೇವ ವರುಣಂ ಪಿತರಮುಪಸಸಾರ ॥ ಅಧೀಹಿ ಭಗವೋ ಬ್ರಹ್ಮೇತಿ ತಂಹೋವಾಚ ॥ ತಪಸಾ ಬ್ರಹ್ಮ ವಿಜಿಜ್ಞಾಸಸ್ವ ತಪೋ ಬ್ರಹ್ಮೇತಿ ॥ ಸ ತಪೋಽತಪ್ಯತ ॥ ಸ ತಪಸ್ತಪ್ತ್ವಾ ॥

ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ ॥ ವಿಜ್ಞಾನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ॥ ವಿಜ್ಞಾನೇನ ಜಾತಾನಿ ಜೀವಂತಿ ॥ ವಿಜ್ಞಾನಂ ಪ್ರಯಂತ್ಯಭಿಸಂವಿಶಂತೀತಿ ॥ ತದ್ವಿಜ್ಞಾಯ ಪುನರೇವ ವರುಣಂ ಪಿತರಮುಪಸಸಾರ ॥ ಅಧೀಹಿ ಭಗವೋ ಬ್ರಹ್ಮೇತಿ ॥ ತಂ ಹೋವಾಚ ॥ ತಪಸಾ ಬ್ರಹ್ಮ ವಿಜಿಜ್ಞಾಸಸ್ವ ॥ ತಪೋ ಬ್ರಹ್ಮೇತಿ ॥ ಸ ತಪೋಽತಪ್ಯತ ॥ ಸ ತಪಸ್ತಪ್ತ್ವಾ ॥

ಆನಂದೋ ಬ್ರಹ್ಮೇತಿ ವ್ಯಜಾನಾತ್ ॥ ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ॥ ಆನಂದೇನ ಜಾತಾನಿ ಜೀವಂತಿ ॥ ಆನಂದಂ ಪ್ರಯಂತ್ಯಭಿಸಂವಿಶಂ-

---

ಆಧಾರದಿಂದಲೆ ಬಾಳುತ್ತವೆ, ಮನವನ್ನು ಕುರಿತು ಹೋಗುತ್ತವೆ, ಮನದಲ್ಲಿ ಲಯವಾಗುತ್ತವೆ. ಹೀಗೆ ತಿಳಿದುಕೊಂಡು ಭೃಗುವು ಪುನಃ ತನ್ನ ತಂದೆಯಾದ ವರುಣನ ಕಡೆಗೆ ಹೋದನು. 'ಪೂಜ್ಯರೇ, ನನಗೆ ಬ್ರಹ್ಮೋಪದೇಶವನ್ನು ಮಾಡಿರಿ' ಎಂದನು. ಅವನಿಗೆ ವರುಣನು ಅಂದದ್ದು, 'ತಪದಿಂದ ಬ್ರಹ್ಮನನ್ನರಿತುಕೊ. ತಪವು ಬ್ರಹ್ಮವು.' ಭೃಗುವು ತಪವನ್ನಾಚರಿಸಿದನು. ತಪವನ್ನಾಚರಿಸಿ—

ಇಲ್ಲಿಗೆ ನಾಲ್ಕನೇ ಅನುವಾಕವು ಸಮಾಪ್ತ.

(ತಪವನ್ನಾಚರಿಸಿ) ವಿಜ್ಞಾನವು ಬ್ರಹ್ಮವೆಂದು ನಿಶ್ಚಯಿಸಿದನು. ವಿಜ್ಞಾನದಿಂದಲೆ ಈ ಭೂತಗಳು ಹುಟ್ಟುತ್ತವೆ, ಹುಟ್ಟಿದ ಭೂತಗಳು ವಿಜ್ಞಾನದ ಆಧಾರದಿಂದ ಬಾಳುತ್ತವೆ, ವಿಜ್ಞಾನವನ್ನು ಕುರಿತು ಗಮನ ಮಾಡುತ್ತವೆ, ವಿಜ್ಞಾನದಲ್ಲಿ ಲಯವಾಗುತ್ತವೆ. ಹೀಗೆ ತಿಳಿದುಕೊಂಡು, ಭೃಗುವು ಪುನಃ ತಂದೆಯಾದ ವರುಣನ ಬಳಿಗೆ ಹೋದನು 'ಪೂಜ್ಯರೇ, ಬ್ರಹ್ಮೋಪದೇಶವನ್ನು ಕೊಡಿರಿ,' ಎಂದನು. ಅವನಿಗೆ ವರುಣನು ಅಂದದ್ದು, 'ತಪಸ್ಸಿನಿಂದ ಬ್ರಹ್ಮನನ್ನರಿತುಕೊ. ತಪವು ಬ್ರಹ್ಮವು.' ಅವನು (ಭೃಗುವು) ತಪವನ್ನಾಚರಿಸಿದನು. ತಪವನ್ನಾಚರಿಸಿ—

ಇಲ್ಲಿಗೆ ಐದನೇ ಅನುವಾಕವು ಸಮಾಪ್ತ.

(ತಪವನ್ನಾಚರಿಸಿ) ಆನಂದವು ಬ್ರಹ್ಮವೆಂದು ನಿಶ್ಚಯಿಸಿದನು. ಆನಂದದಿಂದಲೆ ಈ ಭೂತಗಳು ಹುಟ್ಟುತ್ತವೆ, ಹುಟ್ಟಿದ ಭೂತಗಳು ಆನಂದದ

ತೀತಿ ॥ ಸೈಷಾ ಭಾರ್ಗವೀ ವಾರುಣೀ ವಿದ್ಯಾ ॥ ಪರಮೇ ವ್ಯೋಮನ್ ಪ್ರತಿಷ್ಠಿತಾ ॥ ಯ ಏವಂ ವೇದ ಪ್ರತಿತಿಷ್ಠತಿ ॥ ಅನ್ನವಾನನ್ನಾದೋ ಭವತಿ ॥ ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ ॥ ಮಹಾನ್ ಕೀರ್ತ್ಯಾ ॥

ಅನ್ನಂ ನ ನಿಂದ್ಯಾತ್॥ ತದ್ವ್ರತಂ॥ ಪ್ರಾಣೋ ವಾ ಅನ್ನಂ॥ ಶರೀರಮನ್ನಾದಂ। ಪ್ರಾಣೇ ಶರೀರಂ ಪ್ರತಿಷ್ಠಿತಮ್ ॥ ಶರೀರೇ ಪ್ರಾಣಃ ಪ್ರತಿಷ್ಠಿತಃ ॥ ತದೇತದನ್ನಮನ್ನೇ ಪ್ರತಿಷ್ಠಿತಂ ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ॥ ಅನ್ನವಾನನ್ನಾದೋ ಭವತಿ ॥ ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ॥ ಮಹಾನ್ ಕೀರ್ತ್ಯಾ ॥

ಅನ್ನಂ ನ ಪರಿಚಕ್ಷೀತ॥ ತದ್ವ್ರತಂ॥ ಆಪೋ ವಾ ಅನ್ನಂ॥ ಜ್ಯೋತಿರನ್ನಾದಂ॥ ಅಪ್ಸು ಜ್ಯೋತಿಃ ಪ್ರತಿಷ್ಠಿತಂ ॥ ಜ್ಯೋತಿಷ್ಯಾಪಃ ಪ್ರತಿಷ್ಠಿತಾಃ ॥ ತದೇತದನ್ನಮನ್ನೇ

---

ಆಧಾರದಿಂದಲೆ ಬಾಳುತ್ತವೆ, ಆನಂದವನ್ನು ಕುರಿತು ಗಮನಮಾಡುತ್ತವೆ, ಆನಂದದಲ್ಲಿ ಲಯವಾಗುತ್ತವೆ. ಇದೇ ಭಾರ್ಗವೀ ವಾರುಣೀ ವಿದ್ಯೆಯು. ಇದು ಶ್ರೇಷ್ಠವಾದ (ಹೃದಯ) ಆಕಾಶದಲ್ಲಿ ಪ್ರತಿಷ್ಠಿತವು. ಇದನ್ನರಿತವನು ಪ್ರತಿಷ್ಠಿತನಾಗುತ್ತಾನೆ, ಅನ್ನದಿಂದ ಸಮೃದ್ಧನಾಗುತ್ತಾನೆ, ಅನ್ನವನ್ನುಪಭೋಗಿಸುವವನಾಗುತ್ತಾನೆ. ಪ್ರಜಾವಂತನೂ ಪಶುಗಳೊಡೆಯನೂ ಬ್ರಹ್ಮವರ್ಚಸ್ಸುಳ್ಳವನೂ ಕೀರ್ತಿವಂತನೂ ಆಗಿ ಅವನು ಶ್ರೇಷ್ಠನಾಗುತ್ತಾನೆ.

ಇಲ್ಲಿಗೆ ಆರನೇ ಅನುವಾಕವು ಸಮಾಪ್ತ.

ಅನ್ನವನ್ನು ನಿಂದಿಸಬಾರದು. ಅದು ಒಂದು ವ್ರತವು. ಪ್ರಾಣವು ಅನ್ನವು. ಶರೀರವು ಅನ್ನವನ್ನು ಭಕ್ಷಿಸುವದು. ಪ್ರಾಣದಲ್ಲಿ ಶರೀರವು ಪ್ರತಿಷ್ಠಿತವು. ಶರೀರದಲ್ಲಿ ಪ್ರಾಣವು ಪ್ರತಿಷ್ಠಿತವು. ಅನ್ನವು ಅನ್ನದಲ್ಲಿ ಪ್ರತಿಷ್ಠಿತವಿರುವದು. ಅನ್ನದಲ್ಲಿ ಅನ್ನವು ಪ್ರತಿಷ್ಠಿತವಿರುವದೆಂಬುದನ್ನು ಬಲ್ಲವನು ಪ್ರತಿಷ್ಠಿತನಾಗುತ್ತಾನೆ. ಅನ್ನದಿಂದ ಸಮೃದ್ಧನೂ ಅನ್ನವನ್ನುಪಭೋಗಿಸುವವನೂ ಆಗುತ್ತಾನೆ. ಪ್ರಜಾ ಪಶು ಬ್ರಹ್ಮವರ್ಚಸ್ಸು ಕೀರ್ತಿಗಳಿಂದ ಯುಕ್ತನಾಗಿ ಅವನು ಶ್ರೇಷ್ಠನಾಗುತ್ತಾನೆ.

ಇಲ್ಲಿಗೆ ಏಳನೇ ಅನುವಾಕವು ಸಮಾಪ್ತ.

ಅನ್ನವನ್ನು ಹೀಯಾಳಿಸಬೇಡಿರಿ. ಅದು ಒಂದು ವ್ರತವು. ಆಪವು ಅನ್ನವು. ಜ್ಯೋತಿಯು (ತೇಜವು) ಅನ್ನವನ್ನು ಭಕ್ಷಿಸುವದು. ಆಪದಲ್ಲಿ ಜ್ಯೋತಿಯು ಪ್ರತಿಷ್ಠಿತವು, ಜ್ಯೋತಿಯಲ್ಲಿ ಆಪವು ಪ್ರತಿಷ್ಠಿತವು. ಹೀಗೆ

ಪ್ರತಿಷ್ಠಿತಂ ॥ ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ ॥ ಅನ್ನವಾನನ್ನಾದೋ ಭವತಿ ॥ ಮಹಾನ್ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ ॥ ಮಹಾನ್ಕೀರ್ತ್ಯಾ ॥

ಅನ್ನಂ ಬಹು ಕುರ್ವೀತ ॥ ತದ್ವ್ರತಂ ॥ ಪೃಥಿವೀ ವಾ ಅನ್ನಂ ॥ ಆಕಾಶೋಽನ್ನಾದಃ ಪೃಥಿವ್ಯಾಮಾಕಾಶಃ ಪ್ರತಿಷ್ಠಿತಃ ॥ ಆಕಾಶೇ ಪೃಥಿವೀ ಪ್ರತಿಷ್ಠಿತಾ॥ ತದೇತದನ್ನಮನ್ನೇ ಪ್ರತಿಷ್ಠಿತಂ॥ ಸ ಯ ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ॥ ಅನ್ನವಾನನ್ನಾದೋ ಭವತಿ ॥ ಮಹಾನ್ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ ॥ ಮಹಾನ್ಕೀರ್ತ್ಯಾ ॥

ನ ಕಂಚನ ವಸತೌ ಪ್ರತ್ಯಾಚಕ್ಷೀತ ॥ ತದ್ವ್ರತಂ ॥ ತಸ್ಮಾದ್ಯಯಾ ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್ ॥ ಅರಾಧ್ಯಸ್ಮಾ ಅನ್ನಮಿತ್ಯಾಚಕ್ಷತೇ ॥ ಏತದ್ವೈ ಮುಖತೋಽನ್ನಂ ರಾದ್ಧಂ ॥ ಮುಖತೋಽಸ್ಮಾ ಅನ್ನಂ ರಾಧ್ಯತೇ॥ ಏತದ್ವೈ

ಅನ್ನದಲ್ಲಿ ಅನ್ನವು ಪ್ರತಿಷ್ಠಿತವಿರುವದು. ಅನ್ನವು ಅನ್ನದಲ್ಲಿ ಪ್ರತಿಷ್ಠಿತವಿರುವದನ್ನು ತಿಳಿದವನು ಪ್ರತಿಷ್ಠಿತನಾಗುತ್ತಾನೆ. ಅನ್ನದಿಂದ ಸಮೃದ್ಧನೂ ಅನ್ನವನ್ನುಪಭೋಗಿಸುವವನೂ ಆಗುತ್ತಾನೆ. ಪ್ರಜಾ ಪಶು ಬ್ರಹ್ಮವರ್ಚಸ್ಸು ಕೀರ್ತಿಗಳಿಂದ ಯುಕ್ತನಾಗಿ ಶ್ರೇಷ್ಠನಾಗುತ್ತಾನೆ.

ಇಲ್ಲಿಗೆ ಎಂಟನೇ ಅನುವಾಕವು ಸಮಾಪ್ತ.

ಅನ್ನವನ್ನು ಬೆಳಸಬೇಕು. ಅದು ಒಂದು ವ್ರತವು. ಪೃಥಿವಿಯು ಅನ್ನವು. ಆಕಾಶವು ಅನ್ನವನ್ನು ಭಕ್ಷಿಸುವದು. ಪೃಥಿವಿಯಲ್ಲಿ ಆಕಾಶವು ಪ್ರತಿಷ್ಠಿತವು ಆಕಾಶದಲ್ಲಿ ಪೃಥಿವಿಯು ಪ್ರತಿಷ್ಠಿತವು. ಅನ್ನವು ಅನ್ನದಲ್ಲಿ ಪ್ರತಿಷ್ಠಿತವು. ಅನ್ನದಲ್ಲಿ ಅನ್ನವು ಪ್ರತಿಷ್ಠಿತವಿದ್ದುದನ್ನು ಬಲ್ಲವನು ಪ್ರತಿಷ್ಠೆಯನ್ನು ಹೊಂದುತ್ತಾನೆ. ಅನ್ನದಿಂದ ಸಮೃದ್ಧನೂ ಅನ್ನವನ್ನುಪಭೋಗಿಸುವವನೂ ಆಗುತ್ತಾನೆ. ಪ್ರಜಾ ಪಶು ಬ್ರಹ್ಮವರ್ಚಸ್ಸು ಕೀರ್ತಿಗಳಿಂದ ಯುಕ್ತನಾಗಿ ಶ್ರೇಷ್ಠನಾಗುತ್ತಾನೆ. ಇಲ್ಲಿಗೆ ಒಂಭತ್ತನೇ ಅನುವಾಕವು ಸಮಾಪ್ತ.

(೧) ಮನೆಯಲ್ಲಿ ಸ್ಥಳವಿಲ್ಲೆಂದು ಯಾರಿಗೂ ಅಲ್ಲಗಳೆಯಬಾರದು. ಅದು ಒಂದು ವ್ರತವು. ಆದ್ದರಿಂದ ಯಾವದೆ ಒಂದು ವಿಧಿಯಿಂದ ಬಹಳ ಅನ್ನವನ್ನು ದೊರಕಿಸಬೇಕು. ಅವನ ಸಲುವಾಗಿ ಅನ್ನವನ್ನು ಸಿದ್ಧಮಾಡಿರೆಂದು ಅನ್ನುತ್ತಾರೆ. ಇದೇ ಅತ್ಯಾದರಪೂರ್ವಕ ಅನ್ನವನ್ನು ಸಿದ್ಧಮಾಡುವಿಕೆಯು. ಅವನ ಸಲುವಾಗಿ ಆದರದಿಂದ ಅನ್ನವು ಸಿದ್ಧಮಾಡಲ್ಪಡುತ್ತದೆ.

**ಮಧ್ಯತೋಽನ್ನಂ ರಾದ್ಧಂ ॥ ಮಧ್ಯತೋಽಸ್ಮಾ ಅನ್ನಂ ರಾಧ್ಯತೇ ॥ ಏತದ್ವಾ ಅಂತ-ತೋಽನ್ನಂ ರಾದ್ಧಂ॥ ಅಂತತೋಽಸ್ಮಾ ಅನ್ನಂ ರಾಧ್ಯತೇ ॥ ೧ ॥ ಯ ಏವಂ ವೇದ॥ ಕ್ಷೇಮ ಇತಿ ವಾಚಿ ॥ ಯೋಗಕ್ಷೇಮ ಇತಿ ಪ್ರಾಣಾಪಾನಯೋಃ ॥ ಕರ್ಮೇತಿ ಹಸ್ತಯೋಃ॥ ಗತಿರಿತಿ ಪಾದಯೋಃ ॥ ವಿಮುಕ್ತಿರಿತಿ ಪಾಯೌ॥ ಇತಿ ಮಾನುಷೀಃ ಸಮಾಜ್ಞಾಃ ॥ ಅಥ ದೈವೀಃ ॥ ತೃಪ್ತಿರಿತಿ ವೃಷ್ಟೌ ॥ ಬಲಮಿತಿ ವಿದ್ಯುತಿ ॥ ೨ ॥ ಯಶ ಇತಿ ಪಶುಷು ॥ ಜ್ಯೋತಿರಿತಿ ನಕ್ಷತ್ರೇಷು ॥ ಪ್ರಜಾಪತಿರಮೃತಮಾನಂದ ಇತ್ಯುಪಸ್ಥೇ ॥ ಸರ್ವಮಿತ್ಯಾಕಾಶೇ ॥ ತತ್ಪ್ರತಿಷ್ಠೇತ್ಯುಪಾಸೀತ ॥ ಪ್ರತಿಷ್ಠಾವಾನ್ ಭವತಿ ॥ ತನ್ಮಹ ಇತ್ಯುಪಾಸೀತ ॥ ಮಹಾನ್ ಭವತಿ ॥ ತನ್ಮನ ಇತ್ಯುಪಾಸೀತ ॥ ಮಾನವಾನ್ ಭವತಿ ॥ ೩ ॥ ತನ್ನಮ ಇತ್ಯುಪಾಸೀತ ॥ ನಮ್ಯಂತೇಽಸ್ಮೈ ಕಾಮಾಃ ॥ ತದ್ಬ್ರಹ್ಮೇತ್ಯುಪಾಸೀತ ॥ ಬ್ರಹ್ಮವಾನ್ ಭವತಿ ॥ ತದ್ಬ್ರಹ್ಮಣಃ ಪರಿಮರ ಇತ್ಯು-ಪಾಸೀತ ॥ ಪರ್ಯೇಣ ಮ್ರಿಯಂತೇ ದ್ವಿಷಂತಃ ಸಪತ್ನಾಃ ॥ ಪರಿ ಯೇಽಪ್ರಿಯಾ**

---

ಇದೇ ಸಾಮಾನ್ಯವಾಗಿ ಅನ್ನವನ್ನು ಸಿದ್ಧಮಾಡುವಿಕೆಯು. ಸಾಮಾನ್ಯರೀತಿ ಯಿಂದ ಅವನ ಸಲುವಾಗಿ ಅನ್ನವು ಸಿದ್ಧಮಾಡಲ್ಪಡುತ್ತದೆ. ಇವೇ ನಿಶ್ಚಯು ದಿಂದ ಅನ್ನವನ್ನು ಸಿದ್ಧಮಾಡುವಿಕೆಯು. ನಿಶ್ಚಯದಿಂದ ಅವನ ಸಲುವಾಗಿ ಅನ್ನವು ಸಿದ್ಧಮಾಡಲ್ಪಡುತ್ತದೆ. (೨) ಇದನ್ನರಿತವನು ಕ್ಷೇಮವಿರಲೆಂದು ವಾಚೆಯನ್ನು, ಯೋಗಕ್ಷೇಮವಿರಲೆಂದು ಪ್ರಾಣಾಪಾನಗಳನ್ನು, ಕರ್ಮವು ಕೈಗೂಡಲೆಂದು ಕೈಗಳನ್ನು, ಗತಿಯ ಸಲುವಾಗಿ ಕಾಲುಗಳನ್ನು, ವಿಸರ್ಗವು ಚನ್ನಾಗಿರಲೆಂದು ಗುದವನ್ನು ಉಪಾಸಿಸಬೇಕು. ಇದು ಮನುಷ್ಯಸಂಬಂಧದ ಉಪಾಸನೆಯು. ಇನ್ನು ದೈವೀ (ದೇವತೆಗಳನ್ನು ಕುರಿತು) ಉಪಾಸನೆಯು. ತೃಪ್ತಿಯಾಗಲೆಂದು ವೃಷ್ಟಿಯನ್ನು, ಬಲವು ಬೆಳೆಯಲೆಂದು ವಿದ್ಯುತನ್ನು, (೩) ಯಶಸ್ಸು ದೊರೆಯಲೆಂದು ಯಜನೀಯ ಪಶುಗಳನ್ನು, ಬೆಳಕಾಗಲೆಂದು ನಕ್ಷತ್ರಗಳನ್ನು, ನಾನು ಪ್ರಜಾಪತಿಯಾಗಬೇಕು, ಅಮೃತವಾದ ಆನಂದವು ನನಗೆ ದೊರೆಯಬೇಕೆಂದು ಉಪಸ್ಥದಲ್ಲಿರುವ (ಮಿತ್ರ) ದೇವತೆಯನ್ನು, ನನಗೆ ಸರ್ವವನ್ನು ಕೊಡಬೇಕೆಂದು ಆಕಾಶವನ್ನುಪಾಸಿಸಬೇಕು. ಅದನ್ನು (ಆಕಾಶವನ್ನು) ಪ್ರತಿಷ್ಠೆಯೆಂದು ಉಪಾಸಿಸು. ಹೀಗೆ ಉಪಾಸನೆ ಮಾಡು ವವನು ಪ್ರತಿಷ್ಠೆಯುಳ್ಳವನಾಗುತ್ತಾನೆ. ಅದನ್ನು ಮಹಃ (ತೇಜ) ಎಂದು ಉಪಾಸಿಸು. ಅವನು ಮಾನವುಳ್ಳವನಾಗುತ್ತಾನೆ (ಗೌರವವುಳ್ಳವನಾಗು

ಭ್ರಾತೃವ್ಯಾಃ ॥ ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ॥ ಸ ಏಕಃ ॥ ೪ ॥ ಸ ಯ ಏವಂವಿತ್ ॥ ಅಸ್ಮಾಲ್ಲೋಕಾತ್ಪ್ರೇತ್ಯ ॥ ಏತಮನ್ನಮಯಮಾತ್ಮಾನಮುಪಸಂಕ್ರಮ್ಯ ॥ ಏತಂ ಪ್ರಾಣಮಯಮಾತ್ಮಾನಮುಪಸಂಕ್ರಮ್ಯ ॥ ಏತಂ ಮನೋಮಯಮಾತ್ಮಾನಮುಪಸಂಕ್ರಮ್ಯ ॥ ಏತಂ ವಿಜ್ಞಾನಮಯಮಾತ್ಮಾನಮುಪಸಂಕ್ರಮ್ಯ ॥ ಏತಮಾನಂದಮಯಮಾತ್ಮಾನಮುಪಸಂಕ್ರಮ್ಯ ॥ ಇಮಾಲ್ಲೋಕಾನ್ಕಾಮಾನ್ನೀಕಾಮರೂಪ್ಯನುಸಂಚರನ್ ॥ ಏತತ್ಸಾಮಗಾಯನ್ನಾಸ್ತೇ ॥ ಹಾ೩ವು ಹಾ೩ವು ಹಾ೩ವು ॥ ೫ ॥ ಅಹಮನ್ನಮಹಮನ್ನಮಹಮನ್ನಂ ॥ ಅಹಮನ್ನಾದೋ೨ಽಹಮನ್ನಾದೋ೨ಽಹಮನ್ನಾದಃ ॥ ಅಹಂ ಶ್ಲೋಕಕೃದಹಂ ಶ್ಲೋಕಕೃದಹಂ ಶ್ಲೋಕಕೃತ್ ॥ ಅಹಮಸ್ಮಿ ಪ್ರಥಮಜಾ ಋತಾ೩ಸ್ಯ ಪೂರ್ವಂ ದೇವೇಭ್ಯೋ ಅಮೃತಸ್ಯ ನಾ೩ಭಾಯಿ ॥ ಯೋ ಮಾ ದದಾತಿ ಸ ಇದೇವ ಮಾ೩ವಾಃ ॥ ಅಹಮನ್ನ-

---

ತ್ಮಾನೆ) (೪) ಅದನ್ನು ನಮಃ (ನಮಸ್ಕಾರಯೋಗ್ಯ) ಎಂದು ಉಪಾಸನೆ ಮಾಡಬೇಕು. ಅವನಿಗೆ ಎಲ್ಲ ಕಾಮನೆಗಳು ನಮಸ್ಕಾರ ಮಾಡುತ್ತವೆ. ಅದನ್ನು ಬ್ರಹ್ಮವೆಂದು ಉಪಾಸಿಸಬೇಕು. ಉಪಾಸಕನು ಬ್ರಹ್ಮಜ್ಞನಾಗುವನು. ಅದನ್ನು ಬ್ರಹ್ಮನ ಲಯಸ್ಥಾನವೆಂದುಪಾಸಿಸಬೇಕು. ಎಲ್ಲ ಶತ್ರುಗಳೂ ದ್ವೇಷಿಗಳೂ ಅಪ್ರಿಯರಾದವರೂ ಸಂಪೂರ್ಣ ನಷ್ಟವಾಗುತ್ತಾರೆ. ಈ ಪುರುಷನಲ್ಲಿರುವವನೂ ಆ ಆದಿತ್ಯನಲ್ಲಿರುವವನೂ ಅವನೆ. (೫) ಈ ಜ್ಞಾನವುಳ್ಳವನು ಈ ಲೋಕದಿಂದ ತೆರಳಿ ಈ ಅನ್ನಮಯ ಆತ್ಮನಾಚೆಗೆ ಹೋಗಿ, ಈ ಪ್ರಾಣಮಯ ಆತ್ಮನಾಚೆಗೆ ಹೋಗಿ, ಈ ಮನೋಮಯ ಆತ್ಮನಾಚೆಗೆ ಹೋಗಿ, ಈ ವಿಜ್ಞಾನಮಯ ಆತ್ಮನಾಚೆಗೆ ಹೋಗಿ, ಈ ಆನಂದಮಯ ಆತ್ಮನಾಚೆಗೆ ಹೋಗಿ ವಿದ್ಯಾಧರನಾಗಿ (ದೇವತೆಯಾಗಿ) ಕಾಮನೆಗಳನ್ನುಪಭೋಗಿಸುತ್ತ ಈ ಕೆಳಗಣ ಸಾಮ (ಮಂತ್ರ) ಗಳನ್ನು ಹಾಡುತ್ತ ಅತ್ತಿತ್ತ ಸಂಚರಿಸುವನು. ಏನು ಚಮತ್ಕಾರವಿದು, ಏನು ಚಮತ್ಕಾರವಿದು, ಏನು ಚಮತ್ಕಾರವಿದು!!! (೬) ನಾನು ಅನ್ನವು, ನಾನು ಅನ್ನವು, ನಾನು ಅನ್ನವು. ನಾನು ಅನ್ನವನ್ನುಣ್ಣುವವನು, ನಾನು ಅನ್ನವನ್ನುಣ್ಣುವವನು, ನಾನು ಅನ್ನವನ್ನುಣ್ಣುವವನು. ನಾನು ಸ್ತೋತ್ರಮಾಡುವವನು, ನಾನು ಸ್ತೋತ್ರಮಾಡುವವನು, ನಾನು ಸ್ತೋತ್ರಮಾಡುವವನು. ನಾನು ಸತ್ಯದಕಿಂತಲೂ ಪೂರ್ವದಲ್ಲಿ ಹುಟ್ಟಿದವನು. ದೇವತೆಗಳಿಗೂ ಪೂರ್ವದಲ್ಲಿ ಅಮೃತದ ನಾಭಿಯಲ್ಲಿ (ಮಧ್ಯದಲ್ಲಿ) ನಾನು ಹುಟ್ಟಿದವನು. ಯಾವನು ನನಗೆ (ಅನ್ನವನ್ನು) ಅರ್ಪಿಸುವನೊ

ಮನ್ನಮದಂತಮಾ ೩ ದ್ಮಿ ॥ ಅಹಂ ವಿಶ್ವಂ ಭುವನಮಭ್ಯಭವಾಂ ೩ ॥ ಸುವರ್ಣ-ಜ್ಯೋತೀಃ ॥ ಯ ಏವಂ ವೇದ ॥ ಇತ್ಯುಪನಿಷತ್ ॥ ೬ ॥

ಶಂ ನೋ ಮಿತ್ರಃ ಶಂ ವರುಣಃ ॥ ಶಂ ನೋ ಭವತ್ವರ್ಯಮಾ ॥ ಶಂ ನ ಇಂದ್ರೋ ಬೃಹಸ್ಪತಿಃ ॥ ಶಂ ನೋ ವಿಷ್ಣುರುರುಕ್ರಮಃ ॥ ನಮೋ ಬ್ರಹ್ಮಣೇ ॥ ನಮಸ್ತೇ ವಾಯೋ ॥ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ॥ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ ॥ ಋತಂ ವದಿಷ್ಯಾಮಿ ॥ ಸತ್ಯಂ ವದಿಷ್ಯಾಮಿ ॥ ತನ್ಮಾಮವತು ॥ ತದ್ವಕ್ತಾರಮವತು ॥ ಅವತು ಮಾಂ ॥ ಅವತು ವಕ್ತಾರಂ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

---

ಅವನು ನನ್ನಂತೆಯೆ ಆಗುವನು. ನಾನು ಅನ್ನವು, ಅನ್ನವನ್ನು ತಿನ್ನುವವನನ್ನು ನಾನು ತಿನ್ನುವೆನು. ನಾನು ಈ ವಿಶ್ವವನ್ನೂ ಈ ಭುವನವನ್ನೂ ಸೋಲಿಸುವೆನು. ಇದನ್ನರಿತವನು ಸುವರ್ಣಜ್ಯೋತಿಯಂತೆ ಆಗುವನು.

( ರಾಧ್ಯತೇ ಇತ್ಯಾದಿ ಪಾರಿಭಾಷಿಕ ಮಂತ್ರಾನುಕ್ರಮವು ).

ಇಲ್ಲಿಗೆ ದಶಮೋನುವಾಕವು ಸಮಾಪ್ತ.

( ಭೃಗುಸ್ತಸ್ಮೈ....ಮುಂತಾದ ಪಾರಿಭಾಷಿಕ ಮಂತ್ರಾನುಕ್ರಮವು ಮತ್ತು ' ಸಹನಾವವತು ' ಎಂಬ ಶಾಂತಿಮಂತ್ರವು )

ಇದು ಭೃಗುವಲ್ಲಿ

**ಇಲ್ಲಿಗೆ ತೈತ್ತಿರೀಯೋಪನಿಷತ್ತು ಸಂಪೂರ್ಣ**

## ಕೆಲವು ಶಬ್ದಗಳ ಅರ್ಥವು

**ಮಿತ್ರ—** ಸೂರ್ಯದೇವತೆ.

**ಅರ್ಯಮಾ—** ದ್ವಾದಶಾದಿತ್ಯರಲ್ಲಿ ಒಬ್ಬನು.

**ಋತಂ—** ಯಥಾಸತ್ಯವಾದದ್ದು.

**ಬ್ರಹ್ಮವರ್ಚಸ್—** ಬ್ರಹ್ಮಜ್ಞಾನದಿಂದ ಉಂಟಾದ ತೇಜವು.

**ಉಪನಿಷತ್—** ಜ್ಞಾನ, ತತ್ವ, ರಹಸ್ಯ. **ಸಂಹಿತಾ—**ಸಂಯೋಗ

**ಸಂಧಿ—** ಕೂಡುವ ಅಥವಾ ಒಂದಾಗುವ ಸ್ಥಳ ಅಥವಾ ಕಾಲ.

**ಸಂಧಾನ—** ಜೋಡಿಸುವ ವಸ್ತು.

**ಪ್ರವಚನ—** ಅಧ್ಯಾಪನ, ವಿವೇಚನ, ವ್ಯಾಖ್ಯಾನ, ವಿವರಣೆ.
**ಕೋಶ—** ಇರುವ ಸ್ಥಳ, ಒರೆ, ಅವಸ್ಥೆ.
**ದಮ—** ಇಂದ್ರಿಯಸಂಯಮ. **ಶಮ—** ಮನಃಸಂಯಮ.
**ಜ್ಯೋತಿ—** ಪ್ರಕಾಶವುಳ್ಳ ವಸ್ತು.
**ಸ್ವಾರಾಜ್ಯ-** ಬ್ರಹ್ಮಪದವಿ, ಮೋಕ್ಷ. **ವಿಜ್ಞಾನ-** ಶುದ್ಧ ಬುದ್ಧಿಶಕ್ತಿ.
**ಓಷಧಿ-** ಹೂವಾಗಿ ಹಣ್ಣಾಗಿ ಬೀಜವಾದಮೇಲೆ ಸಾಯುವ ಗಿಡಗಳು.
**ವನಸ್ಪತಿ—** ಮಿಕ್ಕುಳಿದ ಗಿಡಗಂಟಿಗಳು.
**ಅಧಿಭೂತ—** ಭೂತಗಳನ್ನು ಕುರಿತು.
**ಅಧ್ಯಾತ್ಮ—** ದೇಹವನ್ನು ಕುರಿತು.
**ಋತ್ವಿಜ—** ಯಜ್ಞಮಾಡಿಸುವ ಪುರೋಹಿತ.
**ಅನ್ನರಸಮಯಃ—** ಅನ್ನದಿಂದ ಉತ್ಪನ್ನವಾಗುವ ತತ್ವದಿಂದ ಪರಿಪೂರ್ಣನು.
**ಸರ್ವೌಷಧ—** ಎಲ್ಲಕ್ಕೂ ಮೂಲ ದ್ರವ್ಯ.
**ಅನ್ವಯ—** ಅವಯವಗಳ ಪರಸ್ಪರ ಸಂಬಂಧವು.
**ಸತ್—** ಇಂದ್ರಿಯಗೋಚರ ಸೃಷ್ಟಿ.
**ಅಸತ್—** ಇಂದಿಯಮನಾದಿಗಳಿಗೆ ನಿಲುಕದ ಆತ್ಮದ ಸ್ಥಿತಿ.
**ಸುಕೃತ—** ಒಳ್ಳೇ ರೀತಿಯಿಂದ ಮಾಡಲ್ಪಟ್ಟದ್ದು.
**ರಸ—** ಸುಖವನ್ನೀಯುವ (ಪದಾರ್ಥಗಳಲ್ಲಿರುವ) ತತ್ವವು.
**ವಿದ್ಯಾಧರ—** ದೇವತಾ ವಿಶೇಷ.
**ಅನ್ನ—** ಇಂದ್ರಿಯಗೋಚರವಸ್ತು, ಪಂಚಭೂತಾತ್ಮಕಸೃಷ್ಟಿ.

## ತೈತ್ತಿರೀಯೋಪನಿಷತ್ತಿನ ಬಗ್ಗೆ ನಾಲ್ಕು ನುಡಿಗಳು

ಎಲ್ಲ ಉಪನಿಷತ್ತುಗಳಲ್ಲಿ ಸರ್ವಮೂಲ ಹಾಗೂ ಸರ್ವಗತ ಹಾಗೂ ಸರ್ವವ್ಯಾಪಕ ಬ್ರಹ್ಮನ ಜ್ಞಾನವೆ ಹಲವು ಬಗೆಯಿಂದ ಹಲವು ತೆರನಾಗಿ ವಿವರಿಸಲ್ಪಟ್ಟಿದ್ದರೂ ಪ್ರತಿಯೊಂದು ಉಪನಿಷತ್ತಿನಲ್ಲಿ ಬ್ರಹ್ಮಜ್ಞಾನದ ಕೆಲವೊಂದು ಭಾಗವು ವಿಶೇಷ ವಿಸ್ತೃತವಾಗಿ, ವಿಶೇಷ ಸುಂದರವಾಗಿ ಹೇಳಲ್ಪ

ಟ್ಟಿರುವದು. ಆ ವೈಶಿಷ್ಟ್ಯವನ್ನು ತೋರ್ಪಡಿಸುವದೆ ಈ ನಾಲ್ಕು ನುಡಿಗಳ ಮುಖ್ಯ ಉದ್ದೇಶವು. ದಶೋಪನಿಷತ್ತುಗಳಲ್ಲಿಯ ಛಾಂದೋಗ್ಯ ಬೃಹ-ದಾರಣ್ಯಕಗಳನ್ನು ಬಿಟ್ಟು ಉಳಿದ ಎಂಟು ಉಪನಿಷತ್ತುಗಳಲ್ಲಿ ಈ ಉಪ-ನಿಷತ್ತು ಎಲ್ಲಕ್ಕೂ ದೊಡ್ಡದು. ಈ ಉಪನಿಷತ್ತು ಅನೇಕ ರೀತಿಯಿಂದ ಬಹಳ ಮಹತ್ವದ್ದಿರುವದು. ಇದು ಪ್ರವೃತ್ತಿಪರವಿದ್ದು ಇದರಲ್ಲಿ ಸ್ವಾಧ್ಯಾಯ ಪ್ರವಚನಗಳನ್ನು ಯಾವಾಗಲೂ ನಡೆಸಿರಬೇಕೆಂದು ಆಗ್ರಹದ ಹೇಳಿಕೆ ಇದೆ. ಇದಲ್ಲದೆ ಜೀವಿತದಲ್ಲಿ ಯಾವ ನೀತಿತತ್ವಗಳನ್ನನುಸರಿಸಿ ನಡೆಯಬೇಕೆಂಬ ಬಗ್ಗೆ ಸ್ಪಷ್ಟವಾದ ಉಲ್ಲೇಖವಿರುವದು. ಇದರಲ್ಲಿ ಚರ್ಚಿಸಿದ ಪಂಚಕೋಶ ಗಳ ವಿಷಯವು ತತ್ವಜ್ಞಾನದ ದೃಷ್ಟಿಯಿಂದ ಬಹು ವ್ಯಾಪಕವೂ ಬೋಧ-ಪರವೂ ಇರುವದು. ಇದರಲ್ಲಿದ್ದ ಆನಂದಮೀಮಾಂಸೆಯು ವಿಶೇಷ ಮಹತ್ವದ್ದಿರುವದು. ಈ ಉಪನಿಷತ್ತಿನಲ್ಲಿ ಬ್ರಹ್ಮಜ್ಞಾನ ವಿಷಯದ ಬಹುಶಃ ಅಂಗೋಪಾಂಗಗಳೆಲ್ಲವೂ ಬಂದಿರುವದರಿಂದ ಇದು ಬಹಳ ವ್ಯಾಪಕವಿರುವದೆಂದು ಹೇಳಬಹುದು.

ಈ ಉಪನಿಷತ್ತಿನಲ್ಲಿಯ ಮೂರು ವಲ್ಲಿಗಳಲ್ಲಿ ಮೂರು ಬಗೆಯ ಮೀಮಾಂಸೆಯು ಮಾಡಲ್ಪಟ್ಟಿರುವದು. ಒಟ್ಟಿನ ಮೇಲೆ ನೋಡಲಾಗಿ ಮೊದಲನೆಯ ವಲ್ಲಿಯಲ್ಲಿ ಅಧ್ಯಯನ, ವಿದ್ಯಾರ್ಜನ, ಹಾಗು ನೈತಿಕ ಆಚರಣ ಈ ವಿಷಯಗಳು ಚನ್ನಾಗಿ ಬಂದಿವೆ. ಈ ವಲ್ಲಿಯ ಹೆಸರು ಶೀಕ್ಷಾವಲ್ಲಿ ಎಂದು ಇದ್ದದ್ದು ಎರಡು ರೀತಿಯಿಂದ ಸಾರ್ಥವಿದೆ. ಶೀಕ್ಷಾ ಅಂದರೆ ವರ್ಣೋಚ್ಚಾರ ವಿದ್ಯೆ. ಆ ಅರ್ಥದಲ್ಲಿಯೆ ಈ ವಲ್ಲಿಗೆ ಶೀಕ್ಷಾವಲ್ಲಿ ಎಂಬ ಹೆಸರು ಕೊಡಲ್ಪಟ್ಟಿರುವದು. ಆದರೆ ವರ್ಣೋಚ್ಚಾರ ವಿದ್ಯೆಯಾದರೂ ವಿಶೇಷವಾಗಿ ಬ್ರಹ್ಮಚರ್ಯಾವಸ್ಥೆಯಲ್ಲಿಯೆ ಕಲಿಯತಕ್ಕದ್ದಿರುವದು ಹಾಗೂ ಅದು ವೇದಾಧ್ಯಯನದಲ್ಲಿಯ ಒಂದು ಮುಖ್ಯವಾದ ಅಂಗವಿರುವದು. ಈ ವಲ್ಲಿಯಲ್ಲಿ ಇಂದ್ರನೆಂದರೆ ಬುದ್ಧಿಯ ಅಧಿಷ್ಠಾತ್ರಿ ದೇವತೆಯೆಂದು ಭಾವನೆ ಇರುವದು. ಹಾಗೂ ಆ ಇಂದ್ರನ ಆವ್ಹಾನ ಮಾಡಿ ಋಷಿಗಳು ತಮಗೆ ಉತ್ತಮ ಬುದ್ಧಿಯೂ ಉತ್ತಮವಾದ ಮಧುರವಾಣಿಯೂ ಪ್ರಾಪ್ತವಾಗಬೇಕೆಂದು ಪ್ರಾರ್ಥಿಸಿದ್ದಾರೆ. ಋಷಿಗಳು ಇಷ್ಟರಿಂದ ಸಂತುಷ್ಟರಾಗದೆ ತಮ್ಮ ಕಡೆಗೆ ವಿದ್ಯಾರ್ಜನೆಗೆ ಉತ್ತಮ ವಿದ್ಯಾರ್ಥಿಗಳು ಬರಬೇಕೆಂದೂ ಅವರು ಶಮದಮ

ಯುಕ್ತರಾಗಬೇಕೆಂದೂ ಬೇಡಿಕೊಂಡಿದ್ದಾರೆ. ಇದರ ಮೇಲಿಂದ ವಿದ್ಯಾದಾನಕ್ಕೆ ಈ ಋಷಿಗಳ ಮನಸ್ಸು ಎಷ್ಟು ಎಳಸುತ್ತಿರಬಹುದೆಂದು ವ್ಯಕ್ತವಾಗುತ್ತದೆ. ಇದಲ್ಲದ ಮುಂದೆ ಸ್ವಾಧ್ಯಾಯ ಅಂದರೆ ತನ್ನ ಕರ್ತವ್ಯವೆಂದು ವೇದಭಾಗದ ಅಧ್ಯಯನ ಹಾಗೂ ಪ್ರವಚನ ಅಂದರೆ ವೇದವನ್ನು ಇನ್ನೊಬ್ಬರಿಗೆ ಕಲಿಸೋಣ ಇವೆರಡೂ ಅತ್ಯಂತ ಆವಶ್ಯಕಗಳೆಂದೂ ಮುಕ್ತ ಎಲ್ಲ ಕರ್ತವ್ಯಗಳನ್ನು ಮಾಡುತ್ತಿದ್ದರೂ ಇವುಗಳನ್ನು ಎಂದೆಂದಿಗೂ ಮರೆಯತಕ್ಕದ್ದಲ್ಲವೆಂದೂ ಉಪನಿಷತ್ಕಾರರು ಒತ್ತಿ ಒತ್ತಿ ಹೇಳಿದ್ದಾರೆ. ಪ್ರತಿಯೊಂದು ಕರ್ತವ್ಯದ ನಿರ್ದೇಶ ಮಾಡಿ ಪುನಃ ಅದರ ಕೂಡ 'ಸ್ವಾಧ್ಯಾಯ ಪ್ರವಚನೇ ಚ' ಎಂದು ಪುನರುಕ್ತಿಯನ್ನು ಮಾಡಿದ್ದಾರೆ. ಇದರ ಮುಂದಿನ 'ಸತ್ಯಂ ವದ ಧರ್ಮಂ ಚರ' ಎಂಬ ವಚನವಂತೂ ಅತ್ಯಂತ ಪ್ರಸಿದ್ಧವು ಎಲ್ಲರೂ ಬಹುಶಃ ಒಮ್ಮೆಲ್ಲಿ ಒಮ್ಮೆ ಕೇಳಿರುವಂತಹದೂ ಇರುವದು. ಶಿಷ್ಯನು ಅಧ್ಯಯನವನ್ನು ಮುಗಿಸಿ ಮನೆಗೆ ಹೋಗುವ ಕಾಲಕ್ಕೆ ಗುರುಗಳು ಕೊಟ್ಟ ಉಪದೇಶವಿದು. ಇದರಲ್ಲಿಯ ಉಚ್ಚವಾದ ಭಾವನೆಗಳನ್ನೂ ಶ್ರೇಷ್ಠವಾದ ನೈತಿಕ ಆದರ್ಶಗಳನ್ನೂ ಅತ್ಯುತ್ತಮವಿದ್ದ ಅತಿಸುಲಭವಿದ್ದ ಉಪದೇಶವನ್ನೂ ಕಂಡರೆ ನಮ್ಮ ಪೂರ್ವ ಸಂಸ್ಕೃತಿಯ ಉಜ್ವಲವಾದ ಚಿತ್ರವು ನಮ್ಮ ಕಣ್ಣೆದುರಿಗೆ ನಿಲ್ಲದೆ ಇರದು. ವಿಶೇಷತಃ 'ನಮ್ಮಲ್ಲಿಯ ದುರ್ಗುಣಗಳನ್ನನುಕರಿಸದೆ ನಮ್ಮ ಪವಿತ್ರವಾದ ಗುಣಗಳನ್ನೇ ಅನುಸರಿಸಿರಿ' ಎಂದು ಹೇಳುವ ಗುರುವಿನ ವಿನಯಶೀಲತೆಯೂ ಮಾಧುರ್ಯವೂ ಅನುಪಮವಾದುದೆಂದು ಎಲ್ಲರೂ ಒಪ್ಪಬೇಕಾಗುವದು

ಯಾವ ಕಾಲಕ್ಕೆ ಎಲ್ಲ ವಿದ್ಯೆಯೂ ವಿಶೇಷತಃ ವೇದವಿದ್ಯೆಯು ಕಂಠಗತವಿರಬೇಕಾಗುತ್ತಿತ್ತೋ ಆ ಕಾಲಕ್ಕೆ 'ಶೀಕ್ಷೆಗೆ' ಅಂದರೆ ವರ್ಣೋಚ್ಚಾರ ವಿದ್ಯೆಗೆ ವೇದವಿದ್ಯೆಯ ಷಡಂಗಗಳಲ್ಲಿ ಅಂದರೆ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಇವುಗಳಲ್ಲಿ ಮೊದಲನೆ ಸ್ಥಾನವು ಕೊಡಲ್ಪಟ್ಟಿರುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಯಾಕಂದರೆ ಉಚ್ಚಾರಗಳು ಸ್ಪಷ್ಟವಾದರೆ ಮುಂದಿನ ಮಾತು. ಆ ಪುಸ್ತಕಗಳಲ್ಲಿ ಹಾಗೆ ಅದೆ, ಈ ಪುಸ್ತಕಗಳಲ್ಲಿ ಹೀಗೆ ಅದೆ ಎಂದು ಹಾರಾಗಲಿಕ್ಕೆ ಆಗ ಬರುತ್ತಿರಲಿಲ್ಲ. ಎಲ್ಲ ವಿದ್ಯೆಯು ಮುಖೋದ್ಗತವಿರಬೇಕಾಗುತ್ತಿತ್ತು. ಅದುದರಿಂದ ಸ್ಪಷ್ಟ ಶುದ್ಧ

ವಾಣಿಯ ಅವಶ್ಯಕತೆ ಇತ್ತು. ಆ ರೀತಿಯಿಂದ ನಮ್ಮ ವಾಣಿಯು ಪರಂ-ಪರಾಗತವಾಗಿ 'ಸಂಸ್ಕೃತ' ವಾಗುತ್ತ ಬಂದಿರುವದರಿಂದಲೆ ಸದ್ಯಕ್ಕೆ ಯಾವದೆ ಭಾಷೆಯ ಎಷ್ಟೆ ಕಠಿಣವಾದ ಉಚ್ಚಾರಗಳನ್ನೂ ಅತ್ಯಂತ ಸ್ಪಷ್ಟವಾಗಿ ಮಾಡಲಿಕ್ಕೆ ನಾವು ಹಿಂದುಗಳು ಸಮರ್ಥರಿರುವೆವು. ಆ 'ಶೀಕ್ಷಾ' ವಿದ್ಯೆಯ ವರ್ಣಸ್ವರಾದಿ ವಿಭಾಗಗಳು ಈ ಉಪನಿಷತ್ತಿನಲ್ಲಿ ನಾಮಮಾತ್ರದಿಂದ ನಿರ್ದೇಶಿಸಲ್ಪಟ್ಟಿವೆ.

ಎಲ್ಲ ಉಪನಿಷತ್ತುಗಳೂ ನಿವೃತ್ತಿಪರವೆ ಅಥವಾ ಪ್ರವೃತ್ತಿಪರವೆ ಇರುವವೆಂದು ಹಟ ಹಿಡಿಯುವದು ಸಮಂಜಸವಲ್ಲ. ಕೆಲವು ಉಪನಿಷತ್ತುಗಳು ಎಷ್ಟು ನಿವೃತ್ತಿಪರವಿರುವವೊ ಅಷ್ಟೇ ಇನ್ನೂ ಕೆಲವು ಪ್ರವೃತ್ತಿಪರವಿರುವವು. ಈ ಉಪನಿಷತ್ತಿನಲ್ಲಿ ಪ್ರವೃತ್ತಿಪರ ಉಲ್ಲೇಖಗಳು ಅನೇಕವಿರುವವು. ನನ್ನ ಅನ್ನವಸ್ತ್ರವು ಹೆಚ್ಚಾಗಬೇಕು, ಆಕಳು ಹೆಚ್ಚಾಗಬೇಕು, ಎಂದು ಋಷಿಗಳು ಬೇಡಿಕೊಳ್ಳುವರು. 'ಪ್ರಜಾತಂತುವನ್ನು ಅಳಿಯಗೊಡಬೇಡ' ಎಂದು ಗುರುಗಳು ಶಿಷ್ಯನಿಗೆ ಸ್ಪಷ್ಟವಾದ ಉಪದೇಶವನ್ನು ಮಾಡುವರು. ಈ ವಿದ್ಯೆಯನ್ನು ಬಲ್ಲವನು, 'ಮಹಾನ್ ಭವತಿ ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ' ಎಂದು ಋಷಿಗಳು ಆಶೀರ್ವದಿಸುವರು. ನಿಜವಾಗಿ ನೋಡಿದರೆ ಶಾಸ್ತ್ರೋಕ್ತ ಧರ್ಮಸಂಮತವಾದ ಪ್ರವೃತ್ತಿಮಾರ್ಗವು ಹೇಯವೆಂದು, ತುಚ್ಛವೆಂದು ಯಾರೂ ತಿಳಿದಿರಲಿಲ್ಲ. ಬ್ರಹ್ಮಜ್ಞಾನಕ್ಕೆ ಸನ್ಯಾಸವು ಅತ್ಯವಶ್ಯವೆಂದು ಕೆಲವರು ಉಪದೇಶಿಸಿದ್ದರೂ ವೇದೋಪನಿಷತ್ತುಗಳಲ್ಲಿಯ ಎಲ್ಲ ಋಷಿಗಳೂ ಹೀಗೆ ಉಪದೇಶ ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು.

'ಸತ್ಯ' ಹಾಗೂ 'ಋತ' ಈ ಶಬ್ದಗಳು ವೇದೋಪನಿಷತ್ತುಗಳಲ್ಲಿ ಮೇಲಿಂದ ಮೇಲೆ ಬರುವವು. ಅವುಗಳ ಅರ್ಥವನ್ನು ನಾವು ಚನ್ನಾಗಿ ತಿಳಿದುಕೊಳ್ಳಲಿಕ್ಕೆ ಬೇಕು. ಸತ್ಯವೆಂದರೆ ತತ್ವವು, ತತ್ವಜ್ಞಾನವು, ನಿಜವಸ್ತುವು. ಋತವೆಂದರೆ ಸತ್ಯಕ್ಕನುಸರಿಸಿರುವ ಧರ್ಮವು, ಯೋಗ್ಯ ಮಾರ್ಗವು. ಇಂಗ್ಲೀಷದಲ್ಲಿ ಇವುಗಳಿಗೆ ಸತ್ಯ (the truth), ಋತ (the right) ಎನ್ನಬಹುದು. ಕೇವಲ ಸತ್ಯವನ್ನರಿತುಕೊಂಡು ಕುಳಿತರೆ ಅದರಿಂದ ಫಲಿತಾರ್ಥವಾಗದು. ಅದರ ಜೊತೆಗೆ ಋತವೂ ಬೇಕು. ಧರ್ಮಾಚರಣೆಯೂ ಅವಶ್ಯವು.

ಸತ್ಯಜ್ಞಾನವಿಲ್ಲದೆ ಮನವರಿಕೆಯಾಗದು, ಧರ್ಮಾಚರಣೆ ಅಥವಾ ಅಧ್ಯಾತ್ಮ ಸಾಧನವಿಲ್ಲದೆ ಸಾಕ್ಷಾತ್ಕಾರವಾಗದು. ಆದುದರಿಂದ ಇವೆರಡೂ ಬೇಕು.

ಮಿಕ್ಕ ಉಪನಿಷತ್ತುಗಳಲ್ಲಿ ನೀತಿಯ ವಿಷಯವು ವಿಶೇಷವಾಗಿ ಬಂದಿಲ್ಲವೆಂದರೂ ಸಲ್ಲುವದು. ನೀತಿಯೆಂದರೆ ವ್ಯವಹಾರದ ನಡಾವಳಿಯ ನಿಯಮಗಳು. ಉಪನಿಷತ್ತುಗಳಲ್ಲಿ ನೀತಿನಿಯಮಗಳ ಉಗಮಸ್ಥಾನವಾದ ತತ್ತ್ವಜ್ಞಾನವೆ ಮುಖ್ಯವಾಗಿ ವಿವೇಚಿಸಲ್ಪಟ್ಟದ್ದರಿಂದ ವಿವರವಾಗಿ ಅಥವಾ ವಿಂಗಡಿಸಿ ನೀತಿನಿಯಮಗಳು ಎಲ್ಲಿಯೂ ಬಂದಿಲ್ಲ. ಆದರೆ ಈ ಉಪನಿಷತ್ತಿನಲ್ಲಿ ಅಧ್ಯಯನವನ್ನು ಮುಗಿಸಿ ಮನೆಗೆ ಹೋಗಲನುವಾದ ಶಿಷ್ಯನಿಗೆ ಗುರುಗಳು ಮಾಡಿದ ಉಪದೇಶವು ಬಂದಿದೆ. ಅದು ಬಹಳ ಸುಲಭ ಮತ್ತು ಸುಲಲಿತ ಭಾಷೆಯಲ್ಲಿ ಬಂದಿರುವದು. ಅದು ಯಾವ ಕಾಲದಲ್ಲಿಯೂ ಉಚಿತವಾದ ಉಪದೇಶವೆ ಇರುವದು. ಅದನ್ನು ಪಾಠಮಾಡಿ ಪ್ರೌಢ ವಿದ್ಯಾರ್ಥಿಗಳು ದಿನಾಲು ಪಠಿಸಿದರೆ ಅವರ ಮನಸ್ಸಿನ ಮೇಲೆ ಈಗ್ಯೂ ಒಳ್ಳೇ ಉತ್ತಮ ಸಂಸ್ಕಾರಗಳಾಗುವವೆಂಬಲ್ಲಿ ಸಂಶಯವಿಲ್ಲ.

ಎರಡನೇ ವಲ್ಲಿಯ ಹೆಸರು ಬ್ರಹ್ಮಾನಂದವಲ್ಲಿ. ಈ ಹೆಸರಾದರೂ ಸಾರ್ಥವೆ ಇರುವದು. ಯಾಕಂದರೆ ಇದರಲ್ಲಿ ಮುಖ್ಯವಾಗಿ ಬ್ರಹ್ಮಾನಂದದ ಮೀಮಾಂಸೆಯೆ ಇರುವದು. ಪರಬ್ರಹ್ಮವು ಅಂತರಾಕಾಶದಲ್ಲಿದ್ದು ಸರ್ವವ್ಯಾಪಕವಿರುವದು ಹಾಗೂ ಈ ಬ್ರಹ್ಮವನ್ನರಿತವರು ಬ್ರಹ್ಮನಲ್ಲಿ ಒಂದಾಗಿ ಅವನಷ್ಟೆ ವೈಭವವನ್ನು ಅನುಭವಿಸುವರು ಎಂದು ಋಷಿಗಳು ಮೊದಲು ಸಿದ್ಧಾಂತ ಮಾಡಿರುವರು. ಆಮೇಲೆ ಬ್ರಹ್ಮನಿಂದ ಈ ಸೃಷ್ಟಿಯ ಉತ್ಪತ್ತಿಕ್ರಮವನ್ನು ವರ್ಣಿಸಿ ಅನ್ನ, ಪ್ರಾಣ, ಮನ, ವಿಜ್ಞಾನ, ಆನಂದ ಈ ಐದು ಕೋಶಗಳನ್ನು ಅನುಕ್ರಮದಿಂದ ಹೇಳಿ ಇವೆಲ್ಲ ಅನ್ಯೋನ್ಯವ್ಯಾಪಕವಾಗಿರುವವೆಂದು ಹೇಳಿರುವರು. ಸೃಷ್ಟಿಯು ಬ್ರಹ್ಮನ ಸಂಕಲ್ಪಾತ್ಮಕ ಶಕ್ತಿಯಿಂದಾಯಿತೆಂದು ವರ್ಣನೆಯಿರುವದು. ಬ್ರಹ್ಮಾನಂದವನ್ನನುಭವಿಸುವವನು ಅಥವಾ ಬ್ರಹ್ಮಸಾಕ್ಷಾತ್ಕಾರವಾದವನು ಭಯಾತೀತನಾಗುತ್ತಾನೆಂದು ವರ್ಣಿಸಲ್ಪಟ್ಟದ್ದು ಆತ್ಮಿಕ ಅನುಭವದ ಪರಮಾವಧಿಯ ವರ್ಣನೆಯೆ ಸರಿ. ಇದಲ್ಲದೆ ಎಲ್ಲ ವಿಶ್ವವು ಆನಂದಮೂಲಕವಿರುವದೆಂದು ಹೇಳಿ ಈ ಋಷಿಗಳು ವಿಶ್ವವನ್ನುತ್ಪನ್ನಮಾಡುವ ಮೂಲ ಶಕ್ತಿಯ ಭಾವನೆಯನ್ನೆ ವರ್ಣಿಸುವಷ್ಟು ಧೈರ್ಯ

ವುಳ್ಳವರಾಗಿರುತ್ತಾರೆ. ಆಮೇಲೆ ಮಾಡಲ್ಪಟ್ಟ ಆನಂದದ ಮೀಮಾಂಸೆಯು ಮನೋರಂಜಕವಿರುವದು. ಯಾಕಂದರೆ ಅದರಲ್ಲಿ ಮಾನುಷ ಆನಂದವನ್ನು ಒಂದು ಪರಿಮಾಣವೆಂದು ಕಲ್ಪಿಸಿ ಮುಂದೆ ಬೆಳೆಸುತ್ತ ಬೆಳೆಸುತ್ತ ಬ್ರಹ್ಮಾ- ನಂದದವರೆಗೆ ಆನಂದದ ಶ್ರೇಷ್ಠವಾದ ಆತ್ಯಂತಿಕ ಮರ್ಯಾದೆಯನ್ನು ಈ ಋಷಿಗಳು ಹೇಳಿರುವರು. ಇಷ್ಟೇ ಅಲ್ಲ, ಬ್ರಹ್ಮಜ್ಞಾನಿಯಾದವನು ಆ ಬ್ರಹ್ಮನ ಆನಂದವನ್ನು ಪಡೆಯಲು ಸಮರ್ಥನಿರುವನೆಂದು ನಿರ್ಧಾರ ಮಾಡ ಲ್ಪಟ್ಟಿರುವದು. ಇದರ ಮೇಲಿಂದ ನೋಡಲಾಗಿ ಉಪನಿಷತ್ಕಾಲದ ಋಷಿ ಗಳ ಆದರ್ಶವು ಎಷ್ಟು ಉಚ್ಚವೂ ಶ್ರೇಷ್ಠವೂ ಇತ್ತೆಂಬದು ಒಮ್ಮೆಲೆ ಗೊತ್ತಾ ಗುತ್ತದೆ. ನಿಷ್ಕಾಮನಾದ ವೇದಜ್ಞನಿಗೆ ಈ ತರದ ಆನಂದವು ಸಾಧ್ಯವೆಂದೂ ಈ ತರದ ಆನಂದವನ್ನರಿತವನು ಸರ್ವಭೀತಿಭಯಗಳಿಂದಲೂ ಪಾಪ ಪುಣ್ಯಗಳ ಕಲ್ಪನೆಗಳಿಂದಲೂ ಮುಕ್ತನಿರುವನೆಂದೂ ಸ್ವತಃ ಅನುಭವಿಸಿ ಆ ಸ್ಥಿತಿಯ ವರ್ಣನೆಯನ್ನು ಕವಿಶ್ರೇಷ್ಠರು ಮಾಡಿರುವರು. ಮನುಷ್ಯನ ಮಹತ್ವಾಕಾಂಕ್ಷೆಯ ಮರ್ಯಾದೆಯು ಇದರಾಚೆಗೆ ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಹೋಗಿಲ್ಲವೆಂದು ಇತಿಹಾಸವು ಸಾಕ್ಷಿಯನ್ನು ಕೊಡು ತ್ತಿರುವದು.

ಈ ಉಪನಿಷತ್ತಿನಲ್ಲಿಯ ಪಂಚಕೋಶಗಳ ವಿವರಣೆಯನ್ನು ನೋಡುವ. ಈ ವಿವರಣೆಯಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನ- ಮಯ, ಆನಂದಮಯ ಕೋಶಗಳು ಬಂದಿವೆ. ಈ ಕೋಶಗಳು ಒಂದರ ಕಿಂತ ಒಂದು ಸೂಕ್ಷ್ಮತರವಿರುವವು. ಹಾಗೂ ಕೆಳಗಿನದು ಮೇಲಿನ ಕೋಶ ದಿಂದ ವ್ಯಾಪ್ತವಿರುವದು ಎಂದು ವರ್ಣನೆಯಿರುವದು. ಈ ಕೋಶಗಳೆಂದ ರೇನು? ಒಂದರಿಂದಲೊಂದು ಸೂಕ್ಷ್ಮವೆಂದರೇನು, ಒಂದರಿಂದ ಮತ್ತೊಂದು ವ್ಯಾಪ್ತವಿರುವದೆಂದರೇನು? ಕೋಶವೆಂದರೆ ಇಲ್ಲಿ ನಾವು ಅವಸ್ಥೆ ಎಂದು ಅರ್ಥ ಮಾಡಬಹುದು. ಮನುಷ್ಯನಲ್ಲಿ ಅನ್ನ ಅಂದರೆ ಜಡ, ಪ್ರಾಣ, ಮನಸು, ವಿಜ್ಞಾನ, ಆನಂದ ಎಂಬ ಪಂಚತತ್ವಗಳು ಕಂಡುಬರುವವು. ಋಷಿಗಳು ಪ್ರತಿತತ್ವದ್ದೊಂದೊಂದು ದೇಹವನ್ನು ಕಲ್ಪಿಸಿರುವರು. ಹಾಗೂ ಆನಂದಮಯ ದೇಹವೆ ಅಂತರತಮವಾದ ದೇಹವೆಂದು ಪ್ರತಿಪಾದಿಸಿರು ವರು. ತತ್ವತಃ ಕೋಶಗಳೆಂದರೆ ದೇಹಗಳಲ್ಲ. ಆದರೆ ನಮ್ಮ ಚೈತನ್ಯ

ಶಕ್ತಿಯು ಅನುಭವಕ್ಕಾಗಿ ಯಾವ ಐದು ಬೇರೆ ಬೇರೆ ಅವಸ್ಥೆಗಳಲ್ಲಿ (planes) ಸಂಚರಿಸುವಂತೆ ತೋರುವದೊ ಆ ಭೂಮಿಕೆಗಳೆ ಈ ಕೋಶಗಳು. ಜಡ, ನಿರ್ಜೀವ, ಚೇತನಾವಿರಹಿತವೆಂದು ಕಾಣುವದೆಲ್ಲ 'ಅನ್ನಕೋಶವೆನಿಸು ವದು.' ದೇಹವ್ಯಾಪಾರ, ಉಸುರಾಡಿಸುವದು, ರುಧಿರಾಭಿಸರಣ ಮುಂತಾದ ವ್ಯಾಪಾರಗಳು ನಡೆಯುವದೆ 'ಪ್ರಾಣಕೋಶ' ವೆನಿಸುವದು. ಸಂಕಲ್ಪ ವಿಕ ಲ್ಪಾದಿಗಳು ತೋರುವದೆ 'ಮನಃಕೋಶ' ವೆನಿಸುವದು. ಇದು ಇಂತಹದು ಇದು ಇಂತಹದು ಎಂದು ನಿಶ್ಚಿತಜ್ಞಾನವು ತೋರುವದೆ 'ವಿಜ್ಞಾನಕೋಶ' ವೆನಿಸುವದು. ಸುಖಾನುಭವವಾಗುವದೆ 'ಆನಂದಕೋಶ' ವೆನಿಸುವದು. ಇವೆಲ್ಲ ಚೈತನ್ಯದ ವ್ಯಾಪಾರ ನಡೆಯುವ ಭೂಮಿಕೆಗಳು, ಇವು ಒಂದಕ್ಕಿಂತ ಒಂದು ಸೂಕ್ಷ್ಮವಿರುವವೆಂದರೆ ಅವುಗಳಲ್ಲಿ ಚೈತನ್ಯಸ್ವರೂಪವು ಹೆಚ್ಚೆಚ್ಚು ಶುದ್ಧವಾಗಿ ಕಂಡುಬರುವದೆಂದು ಅರ್ಥವು. ಆನಂದ ಭೂಮಿಕೆಯೆ ಚೈತನ್ಯದ ಅತ್ಯಂತ ಅಂತರತಮವಾದ ಭೂಮಿಕೆಯು, ಅಂದರೆ ಅದೇ ಅದರ ಶುದ್ಧ ಸ್ವರೂಪವು. ಅಲ್ಲಿಂದ ಕೆಳಗಿಳಿಯುತ್ತ ಇಳಿಯುತ್ತ ಚೈತನ್ಯವು ಅನ್ನಮಯ ಭೂಮಿಕೆಯ ಮೇಲೆ ಬರುವದು. ಅಲ್ಲಿ ಗೂಢಸ್ಥಿತಿಯಲ್ಲಿ ಇರುವದು. ಇನ್ನು ಅನ್ನಮಯಕೋಶವು ಪ್ರಾಣಮಯಕೋಶದಿಂದ ವ್ಯಾಪ್ತವಿರುವದೆಂದರೆ ಅನ್ನಮಯಕೋಶದಲ್ಲಿ ಪ್ರಾಣಮಯ ಚೈತನ್ಯನು ರಹಸ್ಯದಲ್ಲಿರುವನೆಂದು ಅರ್ಥವು. ಮುಂದೆ ಪ್ರಾಣಮಯಕೋಶವು ಮನೋಮಯಕೋಶದಿಂದ ಪೂರ್ಣವು ಅಥವಾ ವ್ಯಾಪ್ತವು ಅಂದರೆ ಅದೇ ಪ್ರಕಾರ ಪ್ರಾಣಭೂಮಿಕೆ ಯಲ್ಲಿ ಮನೋಮಯ ಚೈತನ್ಯವು ಗುಪ್ತವಾಗಿರುವದೆಂದು ಅರ್ಥವು. ಹೀಗೆಯೆ ಮುಂದಿನ ವ್ಯಾಪ್ತಿಯ ಅರ್ಥವು. ಒಟ್ಟಿಗೆ ಆನಂದಮಯ ಚೈತನ್ಯವು ಎಲ್ಲ ಕೋಶಗಳಲ್ಲಿಯೂ ಎಲ್ಲ ಭೂಮಿಕೆಗಳಲ್ಲಿಯೂ ಹೆಚ್ಚು ಕಡಿಮೆ ಸ್ಫುಟ ವಾಗಿ ವಿಹರಿಸುತ್ತಿರುವದೆಂದು ಅರ್ಥವು.

ಮೂರನೆ ವಲ್ಲಿಯ ಹೆಸರು ಭೃಗುವಲ್ಲಿ ಎಂಬುದು. ವರುಣಪುತ್ರನಾದ ಭೃಗುವು ಈ ವಲ್ಲಿಯ ಮುಖ್ಯ ನಾಯಕನು. ಪ್ರಾಣಿಗಳು ಎಲ್ಲಿಂದ ಉತ್ಪನ್ನ ವಾಗುವವು, ಎಲ್ಲಿ ಇರುವವು, ಎಲ್ಲಿ ಪ್ರವೇಶಮಾಡುವವು ಎಂಬ ಮುಖ್ಯ ಪ್ರಶ್ನೆಯ ಉತ್ತರವನ್ನು ಪರಿಶೋಧಿಸುತ್ತಿರಲಾಗಿ ಭೃಗುವು ತಪೋಬಲದಿಂದ ಎಲ್ಲ ವಿಶ್ವವು ಆನಂದದಲ್ಲಿ ಉತ್ಪನ್ನವಾಗಿ, ಆನಂದದಲ್ಲಿ ಇದ್ದು, ಆನಂದದಲ್ಲಿ

ಲಯವಾಗುವದೆಂದು ನಿರ್ಣಯಿಸಿದನು. ಈ ಕೊನೆಯ ನಿರ್ಣಯವನ್ನು ಕಾಣುವದಕ್ಕೂ ಮೊದಲು ಅವನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಎಂಬ ನಾಲ್ಕು ಕೋಶಗಳನ್ನು ಕ್ರಮವಾಗಿ ಕಂಡು ಹಿಡಿದು ಕೊನೆಗೆ ಆನಂದಮಯ ಕೋಶವೆ ಇವೆಲ್ಲಕ್ಕೂ ಮೂಲಭೂತವಾದದ್ದೆಂದು ನಿಶ್ಚಯಿಸಿದನು. ಯಾವದೇ ರೀತಿಯಿಂದ ವಿಚಾರಿಸಿ ನೋಡಿದರೂ ಮನುಷ್ಯನ ಮನಸ್ಸು ಈ ಆನಂದಮಯ ಕೋಶದ ಆಚೆಗೆ ಸದ್ಯಕ್ಕಂತೂ ಹೋಗಲಾರದೆಂದು ಅನುಭವಕ್ಕೆ ಬರುತ್ತದ ಎಲ್ಲ ವಿಶ್ವವು ಸತ್ಯ ಚಿನ್ಮಯದಿಂದ ಹುಟ್ಟಿರುವದು. ಆದರೆ ಈ ಚಿತ್ತದಲ್ಲಿ ಈ ಕೋಶಗಳು ಸ್ಪಷ್ಟವಾಗಿ ಅನುಭವಕ್ಕೆ ಬರುವವಾದ್ದರಿಂದ ಋಷಿಗಳು ಆ ಅನುಭವದ ಅನುಕ್ರಮದಿಂದ ಅವುಗಳನ್ನು ವರ್ಣಿಸಿದ್ದಾರೆ. ಈ ಕೋಶಗಳೆಂದರೆ Planes of consciousness ಎಂದು ಇಂಗ್ಲೀಷದಲ್ಲಿ ಅನ್ನಬಹುದು. ಚಿತ್ ಎಂಬ ವಸ್ತುವು ಒಂದೇ. ಆದರೆ ಅದೇ ತನ್ನ ಸಂಕಲ್ಪಶಕ್ತಿಯಿಂದ ವಿಭಕ್ತವಾಗಿ ಈ ಐದು ಕೋಶಗಳಲ್ಲಿ ನಾನಾ ಅನುಭವಗಳನ್ನು ಕೊಳ್ಳುತ್ತಿರುವದು. ಅನ್ನಮಯಕೋಶವೆಂದರೆ ಕೇವಲ ಜಡಸೃಷ್ಟಿಯು. ಇದರಲ್ಲಿ ಚಿತ್‌ಶಕ್ತಿಯು ಸುಷುಪ್ತಾವಸ್ಥೆಯಲ್ಲಿರುವದೆನ್ನಬಹುದು. ಪ್ರಾಣಮಯ ಕೋಶವೆಂದರೆ ಜೀವಸೃಷ್ಟಿಯು. ಇದರಲ್ಲಿ ಚಿತ್ ಇದು ಪ್ರಾಣಶಕ್ತಿಯ ರೂಪದಿಂದ ಕರ್ಮಮಾಡುವದು. ಮನೋಮಯ ಕೋಶವೆಂದರೆ ಮನಃಸೃಷ್ಟಿಯು, ಇದರಲ್ಲಿ ಚಿತ್‌ಶಕ್ತಿಯು ಹೆಚ್ಚು ಸೂಕ್ಷ್ಮವಾಗಿ ಮನೋವ್ಯಾಪಾರಗಳನ್ನು ನಡೆಸುವದು ಹಾಗೂ ಅದರಲ್ಲಿ ಕೆಲವಂಶದಲ್ಲಿ ಸಾತ್ವಿಕಭಾವವು ಪ್ರಕಟವಾಗುವದು ವಿಜ್ಞಾನಮಯ ಕೋಶವೆಂದರೆ ಶುದ್ಧ ಬುದ್ಧಿಯ ಸೃಷ್ಟಿಯು. ಇದರಲ್ಲಿ ಚಿತ್‌ಶಕ್ತಿಯು ತನ್ನ ಶುದ್ಧ ಚೈತನ್ಯಶಕ್ತಿಯಿಂದ ವ್ಯಾಪಾರಗಳನ್ನು ಮಾಡುವದು. ಇಲ್ಲಿ ವಿಶ್ವೈಕ್ಯಭಾವನೆಯು ಹೆಚ್ಚಾಗಿ ಶುದ್ಧ ಸಾತ್ವಿಕ ಭಾವವಾದರೂ ಸ್ಪಷ್ಟವಾಗಿ ಕೆಲಸ ಮಾಡುವದು. ಆನಂದಮಯಕೋಶವೆಂದರೆ ಶುದ್ಧ ಚಿನ್ಮಯ ಸೃಷ್ಟಿಯು, ಇದರಲ್ಲಿ ಸಚ್ಚಿದಾನಂದವೆ ಸ್ವತಃ ತನ್ನಲ್ಲಿ ತಾನೇ ಲೀನವಾಗಿ ಆನಂದದಲ್ಲಿರುವದು, ಹೀಗೆ ಈ ಕೋಶಗಳ ಸಾಮಾನ್ಯರೂಪವಿರುವದು.

ಪಂಚಕೋಶಗಳ ಸಿದ್ಧಾಂತವನ್ನು ಭೃಗುವಲ್ಲಿಯ ಭಾರ್ಗವೀವಾರುಣೀವಿದ್ಯೆಯಲ್ಲಿ ಋಷಿಗಳು ಪುನಃ ಹೀಗೆ ಸ್ಪಷ್ಟೀಕರಿಸಿರುವರು. ಬ್ರಹ್ಮಜ್ಞಾನ

ವನ್ನರಿತುಕೊಳ್ಳಲಿಕ್ಕೆ ಆತ್ತರಸಾದ ಭೃಗುವು ಇಂದ್ರಿಯಗೋಚರವಾದ ಅನ್ನವೆ ಬ್ರಹ್ಮ ಅಂದರೆ ಆತ್ಯಂತಿಕ ಸತ್ಯವೆಂದು ಮೊದಲು ಭ್ರಮೆಗೊಂಡನು. ಅವನ ಚಿತ್ತವು ತಪಸ್ಸಾಧನಗಳಿಂದ ಸೂಕ್ಷ್ಮ ಹಾಗೂ ಶುದ್ಧವಾಗುತ್ತ ನಡೆದಂತೆ ಪ್ರಾಣವು ಬ್ರಹ್ಮವು, ಮನವು ಬ್ರಹ್ಮವು, ವಿಜ್ಞಾನವು ಬ್ರಹ್ಮವು, ಆನಂದವು ಬ್ರಹ್ಮವು ಎಂದು ಕ್ರಮವಾಗಿ ತಿಳಿದುಕೊಳ್ಳುತ್ತ ಹೋಯಿತು. ಆನಂದವೆ ಬ್ರಹ್ಮವು ಎಂಬ ಸತ್ಯದಲ್ಲಿ ಅವನ ಮನಸ್ಸು ಸ್ಥಿರವಾಯಿತು, ಆನಂದವೆ ಚೈತನ್ಯದ ಪರಮಸ್ಥಿತಿಯು, ಚರಮಸೀಮೆಯು ಅದೇ ಅದರ ನಿಜಸ್ವರೂಪವು ಎಂಬದನ್ನರಿತು ಅವನ ಮನಸ್ಸು ತಣಿಯಿತು. ಚರಾಚರ ವಸ್ತುಗಳ ಉತ್ಪತ್ತಿ ಸ್ಥಿತಿ ಲಯಗಳು ಆನಂದಸ್ವರೂಪವಾದ ಬ್ರಹ್ಮ ಚೈತನ್ಯದಲ್ಲಿಯೆ ಆಗುವವು ಎಂಬುದರ ಸಾಕ್ಷಾತ್ಕಾರವು ಭೃಗುವಿಗೆ ಆಗಿ ಅವನು ಧನ್ಯನಾದನು. ಹೀಗೆ ಅರಿತುಕೊಳ್ಳುವದೆ ಭಾರ್ಗವೀವಾರುಣೀ ವಿದ್ಯೆಯು. ಇದನ್ನರಿತವನು ಆನಂದಮಯ ಆತ್ಮನನ್ನು ಅಂದರೆ ಆನಂದಮಯ ಚೈತನ್ಯವನ್ನು ಸಹ ದಾಟಿಹೋಗಿ ಸಾಮಗಾಯನ ಮಾಡುತ್ತ ವಿಹರಿಸುವನೆಂದು ವರ್ಣನೆಯಿದೆ. ಹಾಗಾದರೇನು, ಆನಂದಮಯ ಚೈತನ್ಯದಾಚೆಗೇನಾದರೂ ಒಂದು ಸ್ಥಿತಿಯಿರುವದೊ ಎಂಬ ಪ್ರಶ್ನೆಯು ಇಲ್ಲಿ ಉದ್ಭವಿಸುವದು. ನಾನು ಆನಂದಿಯು, ನಾನು ಆನಂದಿಸುವೆನು, ನಾನು ಆನಂದಮಯನು, ನಾನು ಆನಂದರೂಪನು, ನಾನು ಆನಂದವೆ ಎಂಬುದೊಂದು ಸ್ಥಿತಿಯು. ಆದರೆ ಉಪನಿಷತ್ಕಾರರು ಅದರಾಚೆಗಿನ 'ನಂದಾಮಿ' ಎಂಬ ವಿಮರ್ಶರಹಿತ, 'ನಾನು ಆನಂದವೆ' ಎಂಬ ಸಂವಿತ್ತು ಸಹ ಇಲ್ಲದ ಒಂದು ಸ್ಥಿತಿಯನ್ನು ಇಲ್ಲಿ ವರ್ಣಿಸಿರುವರು! ಅದಕ್ಕೆ ಉನ್ಮನಿ ಅವಸ್ಥೆ (ecstatic), ಆನಂದ ಸಮಾಧಿ ಎಂದು ಹೇಳಬಹುದು.

ಜೀವನ್ಮುಕ್ತವ್ಯಕ್ತಿಯು ಈ ಒಂದು ಸ್ಥಿತಿಯನ್ನು 'ಆನಂದಾತೀತ'ವೆಂದು ಹೇಗೆ ವರ್ಣಿಸುವರೊ ಹಾಗೆ ಮೊದಲು 'ಅಸತ್' ಎಂಬುದೆ ಇತ್ತು ಎಂದು ಇದೇ ಉಪನಿಷತ್ತಿನಲ್ಲಿ ಬ್ರಹ್ಮವನ್ನು ವರ್ಣಿಸಿರುವರು. ಬ್ರಹ್ಮಾನಂದವಲ್ಲಿಯಲ್ಲಿ 'ಅಸದ್ವಾ ಇದಮಗ್ರ ಆಸೀತ್' ಮೊಟ್ಟಮೊದಲು ಇದ್ದುದು 'ಅಸತ್' ಅದರಿಂದಲೆ ಮುಂದೆ ಸತ್ ಎಂಬುದರ ಉತ್ಪತ್ತಿಯು ಎಂದು ಹೇಳಿದೆ. ಋಗ್ವೇದದ 'ನಾಸದೀಯ' ಸೂಕ್ತದಲ್ಲಿಯೂ ಇದೇ ತರದ ವಿಚಾರವು

ಪ್ರಕಟವಾಗಿದೆ. ಆದರೆ ' ಅಸತ್ ' [illegible] ಸತ್ ' ಇದರ ಅಭಾವ ವೆಂದಲ್ಲ. ಸತ್ ಇದು ಯಾವಾಗಲೂ ಇರತಕ್ಕ ವಸ್ತುವೆ, ಅದರ ಅಭಾವವು ಅಸಂಭವನೀಯವು. ಆದರೆ ' ಅಸತ್ ' ಅಂದರೆ ನಾವು ಸದ್ಯಕ್ಕೆ ಯಾವು ದಕ್ಕೆ ' ಸತ್ ' ಅನ್ನುವೆವೊ, ಯಾವದನ್ನು ಇಂದ್ರಿಯ ಮನ ವಿಜ್ಞಾನಾದಿ ಚೇತನ ಶಕ್ತಿಗಳಿಂದ ಅರಿತುಕೊಳ್ಳುವೆವೊ ಆ ' ಸತ್ ' ಎಂಬುದರಿಂದ ಭಿನ್ನ ವಾದದ್ದು. ಅಂದರೆ ಇಂದ್ರಿಯ ಮನ ವಿಜ್ಞಾನಾತೀತ ವಸ್ತುವು, ಎಂಬರ್ಥವು. ಮೊಟ್ಟಮೊದಲು ಅದೇ ಇತ್ತು. ಅದರಿಂದ ಮುಂದೆ ಇಂದ್ರಿಯಮನ-ವಿಜ್ಞಾನಾದಿಗಳಿಗೆ ತಿಳಿದುಕೊಳ್ಳಲಿಕ್ಕೆ ಶಕ್ಯವಿರುವ ವಸ್ತುಗಳು ಉತ್ಪನ್ನ-ವಾದವೆಂದು ಉಪನಿಷತ್ಕಾರರ ಅಭಿಪ್ರಾಯವಿರುವದು.

ಇನ್ನೊಂದು ಬಹಳ ಮಹತ್ವದ ವಿಷಯವು ಈ ಉಪನಿಷತ್ತಿನಲ್ಲಿ ಚರ್ಚಿಸಲ್ಪಟ್ಟಿರುವದು. ಅದಾವದೆಂದರೆ ಆನಂದದ ಮೀಮಾಂಸೆಯು. ಬ್ರಹ್ಮಾನಂದವಲ್ಲಿಯಲ್ಲಿ ಈ ಮೀಮಾಂಸೆಯು ಬಂದಿರುವದು. ವೇದಾ-ಧ್ಯಯನ ಮಾಡಿದ ದೃಢನಿಶ್ಚಯವುಳ್ಳ ಬಲಿಷ್ಠ ಸರ್ವವೈಭವಸಮೃದ್ಧನಾದ ತರುಣನಿಗೆ ಆಗುವ ಆನಂದವು ' ಒಂದು ಮಾನುಷ ಆನಂದವು, ' ಎಂದು ಹೇಳಿ ಉಪನಿಷತ್ಕಾರರು ಈ ಆನಂದವನ್ನು ಅಳತೆಯನ್ನಾಗಿಟ್ಟುಕೊಂಡು ಗಂಧರ್ವರ ಆನಂದ, ದೇವತೆಗಳ ಆನಂದ, ಇಂದ್ರನ ಆನಂದ, ಹೀಗೆ ಬ್ರಹ್ಮಾನಂದದವರೆಗೆ ಆನಂದದ ಅಳತೆಯನ್ನು ಮಾಡಿರುವರು. ಈ ಅಳತೆಯಂತೆ ನೋಡಿದರೆ ಬ್ರಹ್ಮನ ಆನಂದವು ಮಾನುಷ ಆನಂದದ ೧೦೦೦೦೦೦೦೦೦೦೦೦೦೦೦೦೦೦೦೦ ಮಡಿ ಇರುವದು! ಆದರೆ ಈ ಆನಂದವು ನಿಷ್ಕಾಮನಿರುವ ವೇದಜ್ಞನಿಗೆ ಆಗುವದೆಂದು ಈ ಮೀಮಾಂಸೆಯಲ್ಲಿ ಹೇಳಿದ್ದಾರೆ. ಇದರ ಮೇಲಿಂದ ನಿಷ್ಕಾಮ ವೇದಜ್ಞನ ಆನಂದದ ಕಲ್ಪನೆಯನ್ನು ನಾವು ಮಾಡಬಹುದು !

ಆನಂದವೆಂಬುದು ಎಲ್ಲಿ ಹೋದರೂ ಒಂದೇ. ಆದರೆ ಅದು ಎಷ್ಟು ಸ್ವತಂತ್ರವೂ ದುಃಖಪರಿಣಾಮಗಳಿಂದ ನಿರ್ದುಷ್ಟವೂ ಸ್ಥಿರವೂ ಶುದ್ಧವೂ ಪೂರ್ಣವೂ, ಇರುವದೊ ಅಷ್ಟು ಅದು ಬ್ರಹ್ಮಾನಂದವನ್ನು ಸಮೀಪಿಸುವದು. ಆನಂದದಲ್ಲಿ ವಿಷಯಾನಂದವು ಹಾಗೂ ಆತ್ಮಾನಂದವು, ಎಂದು ಎರಡು ಬಗೆಗಳನ್ನು ಮಾಡಿ ವಿಷಯಾನಂದವು ಪರತಂತ್ರವು, ದುಃಖಪರಿಣಾಮಿಯು,

[illegible] ತದ್ವ ಶುದ್ಧ ಆತ್ಮಾನಂದವು ಸ್ವತಂತ್ರವೂ ತನ್ನಲ್ಲಿ ತಾನೇ ಸ್ಫುರಿಸುವಂತಹದೂ, ನಿರ್ದುಷ್ಟವೂ, ಸ್ಥಿರವೂ, ಅನಂತವೂ, ಪವಿತ್ರವೂ ಪರಿಪೂರ್ಣವೂ ಇರುವದೆಂದು ಹೇಳಬಹುದು. ವಿಷಯಾನಂದವಾದರೂ ಚೈತನ್ಯದ ಆನಂದಸ್ವರೂಪದ ಪ್ರತಿಬಿಂಬವೆ. ಆದರೆ ಕಲಕುಮಲಕಾದ ರಾಡಿ ನೀರಲ್ಲಿ ಕಾಣುವ ಸೂರ್ಯಪ್ರತಿಬಿಂಬದಂತೆ ಅದು ಚಲವೂ, ಮಲಿನವೂ, ವಿಕೃತವೂ, ನಿಸ್ತೇಜವೂ ಇರುವದು. ಎಲ್ಲ ಜೀವಗಳೂ ಭೂತಗಳೂ ಬಗೆಬಗೆಯಾಗಿ ವಿಧವಿಧದ ಮಾರ್ಗಗಳಿಂದ ತಿಳಿದು ಅಥವಾ ತಿಳಿಯದೆ ಕಂಡು ಅಥವಾ ಕಾಣದೆ ಆತ್ಮಾನಂದವನ್ನೆ ಹುಡುಕುತ್ತಿರುವವು. ವಿಷಯಾನಂದವೆಂಬ ಖೊಟ್ಟಿ ನಾಣ್ಯವನ್ನು ನೋಡಿ ಮೃಗಜಲದಂತಿರುವ ಕ್ಷಣಿಕ ಸುಖಗಳನ್ನುಪಭೋಗಿಸಿ ತೀವ್ರವೆ ಹುರುಳುಗೆಟ್ಟು ದಣಿದು ಬೇಸತ್ತು ಮುಳ್ಳುಹಾಸಿಗೆಯಂತಿರುವ ಅಜ್ಞಾನಮಯ ಜೀವನದಲ್ಲಿ ಹೊರಳಾಡುವರು. ಆಗ ಜ್ಞಾನದ ಹಸಿವು ಹುಟ್ಟುವದು, ನಿಜಾನಂದದ ಅವಶ್ಯಕತೆಯು ಅನಿಸುವದು. ಅದೇ ಮುಮುಕ್ಷುತ್ವವು. ಅಲ್ಲಿಂದ ಮುಂದೆ ಆತ್ಮಾನಂದದ ಅರಿವು ಹುಟ್ಟಿ ಅನಾಸಕ್ತನಾಗಿ 'ನಿಷ್ಕಾಮ ವೇದಜ್ಞ' ನಾಗುವ ಹಾದಿಗೆ ಅವನು ಹತ್ತುವನು. ಅಂಥ ಜಿಜ್ಞಾಸೆಯು ನಮ್ಮೆಲ್ಲರಲ್ಲಿ ಹುಟ್ಟಿ ಆತ್ಮಾನಂದಸ್ಥಿತಿಯ ಕಡೆಗೆ ನಾವು ಹೋಗುವಂಥವರಾಗಲೆಂದು ಆ ಪರಮಾತ್ಮನನ್ನು ಬೇಡಿಕೊಂಡು ಈ ನಾಲ್ಕು ನುಡಿಗಳನ್ನು ಮುಗಿಸುವ.

ಶ್ರೀಕೃಷ್ಣಾರ್ಪಣಮಸ್ತು